[illegible]ಲಬರ್ಗಾ ಜಿಲ್ಲೆಯ [illegible]ಯ್ಯಗಳ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವ[illegible] ಪದವಿಗಾಗಿ [illegible]ತ್ತಿರುವ ಮಹಾಪ್ರಬಂಧ)

ಸಂಶೋಧಕರು

ಸಿದ್ಧಾ[illegible] ಭೀಮಣ್ಣಾ

ಮಾರ್ಗದರ್ಶಕರು

[illegible] ಶ್ರೀ[illegible]

ಎಂ.ಎ., ಎಂ.[illegible]

[illegible]ಕರು

[illegible]

[illegible]ಕೋತ್ತ[illegible] ಕೇಂದ್ರ [illegible]

ಚರಿತ್ರೆ ವಿಭಾಗ

ಸಮಾಜ ವಿಜ್ಞಾನ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

[illegible]

ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಸಿದ್ಧಾರಾಮ ಭೀಮಣ್ಣಾ

ಮಾರ್ಗದರ್ಶಕರು

ಡಾ. ಬಿರಾದಾರ ಶ್ರೀಶೈಲ

ಎಂ.ಎ., ಎಂ.ಫಿಲ್.,ಪಿಎಚ್.ಡಿ.

ಸಹ ಪ್ರಾಧ್ಯಾಪಕರು

ನೃಪತುಂಗ ಪ್ರಥಮ ದರ್ಜೆ ಮಹಾವಿದ್ಯಾಲಯ, ಸೇಡಂ

ಹೈ.ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನಾ ಕೇಂದ್ರ, ಬೀದರ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಿದ್ಧಾರಾಮ ಭೀಮಣ್ಣಾ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 6/6/2019

ಡಾ. ಬಿರಾದಾರ ಶ್ರೀಶೈಲ
ಮಾರ್ಗದರ್ಶಕರು
ಹೈ.ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಸಂಶೋಧನಾ ಕೇಂದ್ರ, ಬೀದರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

Dr. Biradar Shrishail
M.A., M.Phil., Ph.D.
Research Guide, GUG.
Nruptunga First Grade College
SEDAM Dist. Gulbarga (Karnataka)

ಸಂಶೋಧಕರ ಪ್ರಮಾಣ ಪತ್ರ

ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಡಾ. ಬಿರಾದಾರ ಶ್ರೀಶೈಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 6/6/2019

(ಸಿದ್ಧಾರಾಮ ಭೀಮಣ್ಣಾ)
ಸಂಶೋಧಕರು ಚರಿತ್ರೆ ವಿಭಾಗ
ಹೈ.ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಸಂಶೋಧನಾ ಕೇಂದ್ರ, ಬೀದರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಗುಲ್ಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಸಂಕ್ಷೇಪ ಸೂಚಿ ೩

ಅಧ್ಯಾಯ-೧ ಪ್ರಸ್ತಾವನೆ ೪-೧೨

೧.೧ ಪೀಠಿಕೆ

೧.೨ ಉದ್ದೇಶ ಹಾಗೂ ಮಹತ್ವ

೧.೩ ವ್ಯಾಪ್ತಿ

೧.೪ ಅಧ್ಯಯನ ಸಮೀಕ್ಷೆ

೧.೫ ವಿಧಿ-ವಿಧಾನ

೧.೬ ಸ್ವರೂಪ

ಅಧ್ಯಾಯ-೨ ಗುಲ್ಬರ್ಗಾ ಜಿಲ್ಲೆಯ ಐತಿಹ್ಯಗಳು : ಚಾರಿತ್ರಿಕ ಅವಲೋಕನ ೧೩-೪೨

೨.೧ ಐತಿಹ್ಯದ ಅರ್ಥ, ಪದ ನಿಷ್ಪತ್ತಿ-ಸ್ವರೂಪ

೨.೨ ಹುಟ್ಟು-ಬೆಳವಣಿಗೆ ಹಾಗೂ ಪ್ರಕಾರಗಳು

೨.೩ ಜಾಗತಿಕ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ

೨.೪ ಭಾರತೀಯ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ

೨.೫ ಇತರೆ ಶಾಸ್ತ್ರಗಳೊಂದಿಗೆ ಸಂಬಂಧ

೨.೬ ಐತಿಹ್ಯ ಇತಿಹಾಸದ ಮುಖ್ಯ ಆಕರ

ಅಧ್ಯಾಯ-೩ ಗುಲ್ಬರ್ಗಾ ಜಿಲ್ಲೆಯ ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು ೪೩-೭೬

೩.೧ ಭೌಗೋಳಿಕ ಹಿನ್ನೆಲೆ

೩.೨ ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು

೩.೩ ನೆಲ-ಜಲ ಸಂಬಂಧಿ ಐತಿಹ್ಯಗಳು

೩.೪ ಸಸ್ಯ ಸಂಬಂಧಿ ಐತಿಹ್ಯಗಳು

೩.೫ ಪ್ರಾಣಿಸಂಬಂಧಿ ಐತಿಹ್ಯಗಳು

೩.೬ ಗುಡ್ಡ-ಬೆಟ್ಟ ಸಂಬಂಧಿ ಐತಿಹ್ಯಗಳು

ಅಧ್ಯಾಯ-೪ ಗುಲ್ಬರ್ಗಾ ಜಿಲ್ಲೆಯ ಸ್ಥಳ ಪ್ರಧಾನ ಐತಿಹ್ಯಗಳು ೭೭-೨೩೬

೪.೧ ಪವಾಡಗಳು

೪.೨ ಸ್ಥಳನಾಮಗಳು

೪.೩ ನಂಬಿಕೆಗಳು

೪.೪ ಕೆರೆ-ಕುಂಟೆ, ಬಾವಿಗಳಿಗೆ ಸಂಬಂಧಿಸಿದ ಐತಿಹ್ಯಗಳು

೪.೫ ಐತಿಹ್ಯ-ಪುರಾಣ-ಚರಿತ್ರೆಗಳ ಅಂತರ ಸಂಬಂಧಗಳ ವಿಶ್ಲೇಷಣೆ

೪.೬ ಕಲಬುರಗಿ ಜಿಲ್ಲೆಯ ಶರಣಬಸವೇಶ್ವರರು ಮತ್ತು ಖಾಜಾ ಬಂದೇನವಾಜರು

ಅಧ್ಯಾಯ-೫ ಗುಲ್ಬರ್ಗಾ ಜಿಲ್ಲೆಯ ವ್ಯಕ್ತಿ ಪ್ರಧಾನ ಮತ್ತು ಘಟನಾ ಪ್ರಧಾನ ಐತಿಹ್ಯಗಳು ೨೩೭-೩೦೧

೫.೧ ಗ್ರಾಮ ದೇವತೆಗಳು

೫.೨ ವ್ಯಕ್ತಿ ಪ್ರಧಾನ ಐತಿಹ್ಯಗಳು

೫.೩ ಘಟನಾ ಪ್ರಧಾನ ಐತಿಹ್ಯಗಳು

೫.೪ ದೈವ ಸಂಬಂಧಿ ಐತಿಹ್ಯಗಳು

ಅಧ್ಯಾಯ- ೬ ಸಮಾರೋಪ ೩೦೨-೩೩೩

ಸಮಾರೋಪ ಮತ್ತು ಫಲಿತಗಳು

ಅನುಬಂಧಗಳು

೧. ವಕ್ತೃಗಳ ವಿವರ

೨. ಪರಮಾರ್ಶನ ಗ್ರಂಥ

೩. ಗ್ರಂಥ ಸೂಚಿ

೪. ಐತಿಹ್ಯಗಳ ವಿಷಯವಾರು ಪಟ್ಟಿ

೫. ಛಾಯಾಚಿತ್ರಗಳು

ಸಂಕ್ಷೇಪ ಸೂಚಿ

೧. ಗು. ಜಿ. ಇ. ಮತ್ತು ಪು	-	ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
೨. ಗು. ಜಿ. ಗ್ಯಾ	-	ಗುಲಬರ್ಗಾ ಜಿಲ್ಲೆಯ ಗ್ಯಾಜೆಟಿಯರ
೩. ಗು. ಜಿ. ದ	-	ಗುಲಬರ್ಗಾ ಜಿಲ್ಲಾ ದರ್ಶನ
೪. ಕ. ಜಿ. ಶಾ.	-	ಕಲ್ಬುರ್ಗಿ ಜಿಲ್ಲೆಯ ಶಾಸನಗಳು
೫. ಕ. ಸ. ಗೆ. ಕ. ಜಿ	-	ಕರ್ನಾಟಕ ಸರ್ಕಾರದ ರಾಜ್ಯ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ
೬. ಹೈ. ಕ. ಭಾ. ಕ. ಶಿ. ಶಾ	-	ಹೈದ್ರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು
೭. ಹೈ. ಕ. ಸಾ. ವಿ. ಕೋ	-	ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
೮. ಹೈ. ಕ. ಗ್ರಾ. ಜಾ. ಅ	-	ಹೈದ್ರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ
೯. ದ. ಭಾ. ಜಾ. ಕೋ. ಸ	-	ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ - ೧
೧೦. ದ. ಭಾ. ಜಾ. ಕೋ. ಸ	-	ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ - ೨
೧೧. ಶ. ಲಿ.	-	ಶರಣಬಸವೇಶ್ವರರ ಲೀಲಾಮೃತ
೧೨. ಕ. ದೇ. ಕೋ. ಕ. ಜಿ	-	ಕರ್ನಾಟಕ ದೇವಾಲಯ ಕೋಶ ಕಲಬುರಗಿ ಜಿಲ್ಲೆ

ಅಧ್ಯಾಯ-೧ ಪ್ರಸ್ತಾವನೆ

೧.೧ ಪೀಠಿಕೆ

೧.೨ ಉದ್ದೇಶ ಹಾಗೂ ಮಹತ್ವ

೧.೩ ವ್ಯಾಪ್ತಿ

೧.೪ ಅಧ್ಯಯನ ಸಮೀಕ್ಷೆ

೧.೫ ವಿಧಿ-ವಿಧಾನ

೧.೬ ಸ್ವರೂಪ

ಅಧ್ಯಾಯ-೧

ಪ್ರಸ್ತಾವನೆ

೧.೧ ಪೀಠಿಕೆ:-

ಚರಿತ್ರೆ ಅಥವಾ ಇತಿಹಾಸ ಎಂದು ಯಾವುದಕ್ಕೆ ಕರೆಯುತ್ತೇವೆಯೋ ಅದು ಪ್ರಭುತ್ವಕ್ಕೆ ಆದ್ಯತೆ ನೀಡಿ, ಜನತ್ವವನ್ನು ತಿರಸ್ಕರಿಸುವಂಥದ್ದು. ಚರಿತ್ರೆಯ ವ್ಯಾಪ್ತಿ ಪ್ರಭುತ್ವಕ್ಕೆ ಮಾತ್ರ ಸೀಮಿತವಾಗಿರದೆ, ಜನಸಾಮಾನ್ಯರಿಗೂ ಅನ್ವಯವಾಗುವಂಥದ್ದು. ಅವರಿಗೂ ಕೂಡ ಅವರದೇ ಆದ ಚರಿತ್ರೆಯೊಂದು ಅಸ್ತಿತ್ವದಲ್ಲಿರುತ್ತದೆ. ಹೀಗಾಗಿ ಸಾಂಪ್ರದಾಯಿಕ ಚರಿತ್ರೆಯ ವ್ಯಾಪ್ತಿ ಅಪೂರ್ಣವಾಗಿದೆ. ಈ ಕಾರಣದಿಂದಾಗಿ ಪ್ರಭುತ್ವ ಅಥವಾ ಸಾಂಪ್ರದಾಯಿಕ ಚರಿತ್ರೆಗೆ ಪರ್ಯಾಯ ಹುಟ್ಟು ಪಡೆದ ಚರಿತ್ರೆಯನ್ನು 'ಸಾಂಸ್ಕೃತಿಕ ಚರಿತ್ರೆ' ಎನ್ನುವ ತಳಹದಿಯ ಮೇಲೆ ಅಧ್ಯಯನ ವಿಧಾನ ಹುಟ್ಟಿಕೊಂಡಿತು. ಈ ನಿಟ್ಟಿನಲ್ಲಿ ಜನಸಾಮಾನ್ಯರ ಸಾಂಸ್ಕೃತಿಕ ಬದುಕು ಜನಪದ ಸಾಂಸ್ಕೃತಿಕ ಬದುಕು ಕಾಲಗರ್ಭದಲ್ಲಿ ಹೂದಗಿ ಹೋಗಿದೆ ಇಂತಹದನ್ನು ಪ್ರತಿಬಿಂಬಿಸುವಂಥದ್ದು ಐತಿಹ್ಯ. ವಾಸ್ತವವಾಗಿ ನಡೆದ ಘಟನೆಯೊಂದನ್ನು ಕಲಾತ್ಮಕವಾಗಿ ಪರಂಪರಾಗತ ಪರಿಕರಗಳೊಂದಿಗೆ ಕಟ್ಟಿಕೊಡುವಂಥದ್ದು. ಹೀಗಾಗಿ ಇದನ್ನು ಜನರ ಚರಿತ್ರೆ ಎಂದು ಕರೆಯುತ್ತಾರೆ. ಇದು ಸಾಂಸ್ಕೃತಿಕ ಅನನ್ಯತೆ, ಐತಿಹಾಸಿಕ ಸತ್ಯತೆ, ಹಾಗೂ ಪ್ರಾಕೃತಿಕ ಗುಣಲಕ್ಷಣಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿರುತ್ತದೆ.

ಮೌಖಿಕ ಪರಂಪರೆಯಲ್ಲಿ ಉಳಿದು, ಬೆಳೆದು ಬಂದ ಜನರ ಸಂಸ್ಕೃತಿಯ ಕುರುಹುಗಳಲ್ಲಿ ಐತಿಹ್ಯವೂ ಒಂದಾಗಿದೆ. ಕರ್ನಾಟಕದ ಅವಿಭಾಜ್ಯ ಅಂಗವಾದ ಗುಲಬರ್ಗಾ ಜಿಲ್ಲೆಯಲ್ಲಿ ಇಂತಹ ಐತಿಹ್ಯಗಳು ಅಪಾರ ಈ ಐತಿಹ್ಯಗಳ ಅಧ್ಯಯನದ ಮೂಲಕ ಜಿಲ್ಲೆಯ ಒಟ್ಟಿನ ಸಾಂಸ್ಕೃತಿಕ ಚರಿತ್ರೆಯನ್ನು ಸಾಧ್ಯವಾಗುವಷ್ಟರಮಟ್ಟಿಗೆ ಕಂಡುಕೊಳ್ಳಲು ಪ್ರಸ್ತುತ ಮಹಾಪ್ರಬಂಧವು ಪ್ರಯತ್ನಿಸಿದೆ.

೧.೨ ಉದ್ದೇಶ ಹಾಗೂ ಮಹತ್ವ:-

ಪ್ರತಿಯೊಂದು ಭೂಪ್ರದೇಶವು ತನ್ನ ಭೌಗೋಳಿಕ ಪರಿಸರ ಮತ್ತು ಸಾಂಸ್ಕೃತಿಕ ವಿಚಾರಧಾರೆಗಳಿಂದ ವಿಶಿಷ್ಟವೂ, ವೈವಿಧ್ಯಪೂರ್ಣವೂ ಆಗಿರುತ್ತದೆ. ಈ ಮಾತು ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಭೌಗೋಳಿಕ ಕ್ಷೇತ್ರ ವ್ಯಾಪ್ತಿಗೂ ಹೊರತಾದುದಲ್ಲ. ವಿಶಿಷ್ಟವೂ ವೈವಿಧ್ಯಮಯವಾದ ಸಂಸ್ಕೃತಿಯನ್ನು ಐತಿಹ್ಯಗಳ ಹಿನ್ನೆಲೆಯಿಂದ ತಿಳಿಯುವುದೇ ಈ ಅಧ್ಯಯನದ ಉದ್ದೇಶವಾಗಿದೆ. ಗುಲ್ಬರ್ಗಾ ಜಿಲ್ಲೆಯ ಹೆಸರು ಮರು ನಾಮಕರಣಗೊಂಡು ಪ್ರಸ್ತುತ ಕಲಬುರ್ಗಿಯಾಗಿದೆ. ಸಾಂಸ್ಕೃತಿಕ ಸಂಪತ್ತು ದಟ್ಟವಾಗಿ ಆವರಿಸಿಕೊಂಡಿರುವಾಗಲೂ ಗುರುತಿಸುವಂತಂಥ ಸಂಶೋಧನೆಗಳು ನಡೆದಿಲ್ಲ. ಈ ನಿಟ್ಟಿನಲ್ಲಿ ಸಂಶೋಧನೆ ನಡೆಸುವ ಪ್ರಯತ್ನ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಭಾರತದ ಇತಿಹಾಸವು ತನ್ನದೇ ಆದ ವೈಶಿಷ್ಟ್ಯತೆಯಿಂದ ಕೂಡಿದ್ದು, ಈ ವೈಶಿಷ್ಟತೆಯನ್ನು ವಸ್ತುನಿಷ್ಠವಾಗಿ ರೂಪಿಸುವಲ್ಲಿ ಕರ್ನಾಟಕದ ಕೊಡುಗೆ ಮಹತ್ತರವಾದದ್ದು. ಚರಿತ್ರೆಯ ಅಧ್ಯಯನದ ಶಾಖೆಯಾದ ಐತಿಹ್ಯವು ಕೂಡ ಪ್ರಮುಖ ಶಾಖೆಗಳಲ್ಲಿ ಇದೊಂದಾಗಿದೆ. ಪ್ರಸ್ತುತ ಈ ಅಧ್ಯಯನ ಗುಲಬರ್ಗಾ ಜಿಲ್ಲೆಗೆ ಸೀಮಿತವಾಗಿದೆ. ಅಧ್ಯಯನದ ವಿಷಯ "ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ"ಎಂಬ ವಿಷಯಕ್ಕೆ ಸಂಬಂಧಪಟ್ಟ ಆಕರಗಳನ್ನು ಒಂದೆಡೆ ಸಂಗ್ರಹಿಸಿ, ಅಧ್ಯಯನ ಮಾಡುವುದೇ ಈ ಮಹಾಪ್ರಬಂಧದ ಮುಖ್ಯ ಉದ್ದೇಶ.

ಐತಿಹ್ಯಗಳು ಕೇವಲ ಕಥೆ, ಪುರಾಣ, ದಂತಕಥೆ, ವದಂತಿಗಳಲ್ಲ. ನಮ್ಮ ಸಂಸ್ಕೃತಿಯ ಧಾತು, ಅಂತರಂಗದ ಮಾತು ಕೂಡ. ಈ ಸತ್ಯ ಐತಿಹ್ಯಗಳನ್ನು ಅನ್ಯಮೂಲಗಳಿಂದ ಪರೀಕ್ಷೆಗೊಳಪಡಿಸಿದಾಗ ಮನವರಿಕೆಯಾಗುತ್ತದೆ. ಒಂದು ನಿರ್ದಿಷ್ಟ ಉದ್ದೇಶ ಸಾಧನೆಗೆ ರಚನೆಯಾಗಿ, ನಿರ್ದಿಷ್ಟವಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿರುವ ಐತಿಹ್ಯಗಳ ಹಿಂದಿರುವ ಜನಪದರ ಮನಸ್ಥಿತಿಯ ಆಶಯವನ್ನು ಗುರುತಿಸುವುದು ಮುಖ್ಯವಾಗಿದೆ. ಐತಿಹ್ಯಗಳನ್ನು ಕೇವಲ ವಾಸ್ತವ ಚರಿತ್ರೆ ಹೌದೋ, ಅಲ್ಲವೋ ಎಂಬುದಕಷ್ಟೇ ಅಧ್ಯಯನ ಸೀಮಿತವಾಗದೆ, ಅವುಗಳಲ್ಲಿ ಅಭಿವ್ಯಕ್ತಿಗೊಂಡಿರುವ ಆಯಾ ಕಾಲದ ಜನರು ನಂಬಿದ ಜೀವನ ಮೌಲ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಸದುದ್ದೇಶವನ್ನು ಉಳ್ಳದ್ದಾಗಿದೆ. ಆ ಮೂಲಕ ಹಿಂದಿನ ಜನರ ಜೀವನ ವಿಧಾನದ ಮೌಲ್ಯಗಳೊಂದಿಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಮೌಲ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಸದುದ್ದೇಶವನ್ನು ಉಳ್ಳದ್ದಾಗಿದೆ. ಆ ಮೂಲಕ ಹಿಂದಿನ ಜನಪದರ ಜೀವನ ವಿಧಾನದ ಮೌಲ್ಯಗಳೊಂದಿಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಮೌಲ್ಯಗಳನ್ನು ತೌಲನಿಕವಾಗಿ ನೋಡುವ ಉದ್ದೇಶವಾಗಿದೆ.

ಐತಿಹ್ಯಗಳ ಹುಟ್ಟಿನ ಹಿಂದೆ ನಂಬಿಕೆಯೊಂದು ಪ್ರಬಲವಾಗಿರುತ್ತದೆ. ಈ ನಂಬಿಕೆಯಲ್ಲಿ ಕೆಲವೊಂದು ವೈಜ್ಞಾನಿಕ ಅಂಶಗಳು ಅಡಕವಾಗಿರುತ್ತವೆ. ಆ ನಂಬಿಕೆಗಳನ್ನೇ ಆಧಾರವಾಗಿಟ್ಟುಕೊಂಡು ಐತಿಹ್ಯಗಳು ರಚನೆಯಾಗುತ್ತವೆ. ಆದ್ದರಿಂದ ಇಂತಹ ಐತಿಹ್ಯಗಳಲ್ಲಿರುವ ವೈಜ್ಞಾನಿಕ ತಳಹದಿಯನ್ನು ತಿಳಿಸಿಕೊಡುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಅದೇ ರೀತಿ ಧಾರ್ಮಿಕ ನಂಬಿಕೆಗಳು ಕೂಡ ಐತಿಹ್ಯದ ಹುಟ್ಟಿಗೆ ಕಾರಣವಾಗಿ ಹೇಗೆ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕಾರಣವಾಗಿವೆ ಮತ್ತು ವ್ಯವಸ್ಥೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತವೆ ಹಾಗೂ ವ್ಯವಸ್ಥೆಯನ್ನು ಮೀರದಂತೆ ಹೇಗೆ ಎಚ್ಚರಿಸುತ್ತವೆ ಅದರಿಂದ ಯಾವ ರೀತಿಯ ಪರಿಣಾಮವು ಸಮಾಜದ ಮೇಲಾಗುತ್ತದೆ ಎನ್ನುವುದನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ.

ಇಂದಿನ ಜಾಗತೀಕರಣ ಗ್ರಾಮೀಣ ಜನರನ್ನು ತನ್ನತ್ತ ಆಕರ್ಷಿಸಿಕೊಳ್ಳುತ್ತಿದೆ. ಇದರಿಂದಾಗಿ ಜನಪದರ ಜೀವನ ವಿಧಾನವು ಕೂಡ ಬದಲಾಗುತ್ತಿದೆ. ಹೀಗಾಗಿ ಅವರ ಐತಿಹಾಸಿಕ ಪರಂಪರೆಯನ್ನು, ಸಾಂಸ್ಕೃತಿಕ ಅನನ್ಯತೆಯನ್ನು, ಬದುಕಿನ ತಲ್ಲಣಗಳನ್ನು ಗುರುತಿಸಿಕೊಳ್ಳಲು ಐತಿಹ್ಯಗಳು ಸಹಕಾರಿಯಾಗಿವೆ. ಜನಪದ ಬದುಕಿನ ಸಾಂಸ್ಕೃತಿಕ ಸ್ಥಿತ್ಯಂತರ, ಧಾರ್ಮಿಕ ಬದ್ಧತೆ, ಆರ್ಥಿಕ ಸ್ಥಿತಿಗತಿ, ಪೌರಾಣಿಕ ಕಲ್ಪನೆ, ವೈಜ್ಞಾನಿಕ ಚಿಂತನೆ ಮತ್ತು ಪ್ರಾಕೃತಿಕ ವೈಚಿತ್ರ್ಯ ಮುಂತಾದ ಅಂಶಗಳೆಡೆಗೆ ಗಮನಹರಿಸಿ ಜನಪದರ ಜೀವನ ವಿಧಾನವನ್ನು ಅರ್ಥೈಸಿಕೊಳ್ಳಲು ಐತಿಹ್ಯಗಳಂಥ ಮೌಖಿಕ ಆಕರಗಳು ಬಹುಮುಖ್ಯವಾದ ದಾಖಲೆಗಳಾಗಿವೆ. ಅಸ್ತಿತ್ವ ಕಳೆದುಕೊಳ್ಳುತ್ತಿರುವ ಬಹುಸಂಖ್ಯಾತ ಸಮುದಾಯದ ಸಂಸ್ಕೃತಿಯ ಮೌಲ್ಯಗಳನ್ನು ಅರಿತುಕೊಳ್ಳಲು, ಉಳಿಸಿಕೊಳ್ಳಲು ಐತಿಹ್ಯಗಳ ಅಧ್ಯಯನ ಅನಿವಾರ್ಯವಾಗಿದೆ.

ಲಿಖಿತ ಇತಿಹಾಸ ಯಾವುದನ್ನು ತಿರಸ್ಕರಿಸುತ್ತದೆಯೋ ಅದನ್ನು ಜನಪದ ಇತಿಹಾಸವಾದ ಐತಿಹ್ಯ ಕಟ್ಟಿಕೊಡಲು ಪ್ರಯತ್ನಿಸುತ್ತದೆಂಬುದನ್ನು ತಿಳಿಯುವ ಉದ್ದೇಶವನ್ನು ಹೊಂದಲಾಗಿದೆ. ಸಾಂಪ್ರದಾಯಿಕ ಚರಿತ್ರೆಯು ಕೇವಲ ರಾಜಕೀಯ ಚರಿತ್ರೆಯಾಗಿದ್ದು, ಜನಸಾಮಾನ್ಯರ ಚರಿತ್ರೆಯೊಂದಿಗೆ ಇತಿಹಾಸವನ್ನು ಮನರ್ ರಚಿಸುವ ಅಗತ್ಯತೆಯನ್ನು ಮನವರಿಕೆ ಮಾಡಿಕೊಡುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಅಲ್ಲದೇ ಕೆಲವು ಐತಿಹ್ಯಗಳು ಸಾಂಪ್ರದಾಯಿಕ ಇತಿಹಾಸದ ರಚನೆಗೆ ಪೂರಕ ಆಕರಗಳಾಗಬಲ್ಲವು ಎನ್ನುವ ಸಾಧ್ಯತೆಯನ್ನು ತೋರ್ಪಡಿಸುವುದಾಗಿದೆ. ಮತ್ತು ಸಾಂಸ್ಕೃತಿಕ ಬದುಕಿನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಲಿಖಿತ ದಾಖಲೆಗಿಂತ ಐತಿಹ್ಯವೇ ಪ್ರಧಾನ ಆಕರವಾಗಿ ನಿಲ್ಲುವ ಮಹತ್ವವನ್ನು ಅರಿಯುವುದಾಗಿದೆ. ಆ ಮೂಲಕ ಲಿಖಿತ ಇತಿಹಾಸಕ್ಕಿಂತ ಐತಿಹ್ಯಗಳು ಹೇಗೆ ಸಾಮ್ಯತೆಯನ್ನು ಮತ್ತು ಭಿನ್ನತೆಯನ್ನು ಹೊಂದಿವೆ ಎನ್ನುವುದನ್ನು

ಗಮನಿಸಲಾಗುವುದು. ಐತಿಹ್ಯದ ಘಟಿತ ಘಟನೆಗೆ ಪೌರಾಣಿಕ ಅಥವಾ ಕಾಲ್ಪನಿಕ ಅಂಶಗಳನ್ನು ಆರೋಪಿಸಿಕೊಳ್ಳುವುದರ ಹಿಂದಿರುವ ಮನೋಧರ್ಮವನ್ನು ತಿಳಿಯುವ ಉದ್ದೇಶವನ್ನು ಹೊಂದಲಾಗಿದೆ. ಈ ಎಲ್ಲಾ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಗುಲಬರ್ಗಾ ಜಿಲ್ಲೆಯಾದ್ಯಂತ ದೊರಕುವ ಹಲವು ಐತಿಹ್ಯಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ, ವಿವಿಧ ಆಯಾಮಗಳಲ್ಲಿ ವಿಂಗಡಿಸಿಕೊಂಡು, ವಿಶ್ಲೇಷಣೆಗೊಳಪಡಿಸಿ ಜಿಲ್ಲೆಯ ಚಾರಿತ್ರಿಕ, ಸಾಂಸ್ಕೃತಿಕ, ಪ್ರಾಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ವಾಗಿದೆ.

೧.೩ ವ್ಯಾಪ್ತಿ :-

ಪ್ರಸ್ತುತ ಅಧ್ಯಯನವು ಗುಲಬರ್ಗಾ ಜಿಲ್ಲೆಯ ಚಿತ್ತಾಪುರ, ಚಿಂಚೋಳಿ, ಆಳಂದ, ಅಫಜಲಪೂರ, ಜೇವರ್ಗಿ, ಸೇಡಂ ಗುಲಬರ್ಗಾ ತಾಲ್ಲೂಕುಗಳ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಈ ತಾಲ್ಲೂಕುಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಐತಿಹ್ಯಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಐತಿಹ್ಯದೊಂದಿಗೆ ಅಂತರ್ ಸಂಬಂಧ ಹೊಂದಿರುವ ಜನಪದ ಕಥೆ, ಪವಾಡ, ಚರಿತ್ರೆ, ಸ್ಥಳನಾಮ ಮುಂತಾದ ಕ್ಷೇತ್ರಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಐತಿಹ್ಯಗಳು ಬಹುಮುಖ ಆಯಾಮಗಳನ್ನು ಹೊಂದಿರುವುದರಿಂದ ಅವುಗಳನ್ನು ಭಾಷಿಕ, ಸಾಹಿತ್ಯಿಕ, ಸಮಾಜಶಾಸ್ತ್ರೀಯ, ಚಾರಿತ್ರಿಕ ಇನ್ನೂ ಮುಂತಾದ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನವು ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯ ಆದ್ಯತೆಯೊಂದಿಗೆ, ಪ್ರಾತಿನಿಧಿಕವಾಗಿ ಪ್ರಕೃತಿಕ ಪರಿಸರ ಹಾಗೂ ಐತಿಹಾಸಿಕ ಚರಿತ್ರೆಯನ್ನು ಕಟ್ಟಿಕೊಡುವುದಾಗಿದೆ. ಈ ಮಿತಿಯಲ್ಲಿಯೇ ಜಿಲ್ಲೆಯ ಐತಿಹ್ಯಗಳಲ್ಲಿ ವ್ಯಕ್ತವಾಗಿರುವ ನಂಬಿಕೆ, ಆಚರಣೆ, ಗ್ರಾಮದೇವತೆ ಅಧ್ಯಯನ ಮುಂತಾದವುಗಳ ಆಧಾರದಿಂದ ಜಿಲ್ಲೆಯ ಜನರ ಚಾರಿತ್ರಿಕ ಹಿನ್ನೆಲೆ, ಪೌರಾಣಿಕ ಕಲ್ಪನೆ ಹಾಗೂ ಪ್ರಾಕೃತಿಕ ಚಿಂತನೆಯ ಮೂಲಕ ಅವರ ಮನೋಧರ್ಮವನ್ನು ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ.

೧.೪ ಅಧ್ಯಯನ ಸಮೀಕ್ಷೆ:-

ಭಾರತೀಯ ಮಟ್ಟದಲ್ಲಿ ಐತಿಹ್ಯಗಳ ಕುರಿತು ಸಮಗ್ರ ಸಂಗ್ರಹ ಮತ್ತು ಅಧ್ಯಯನ ಕಡಿಮೆ ಎಂದೇ ಹೇಳಬಹುದು. ವ್ಯಾಪಕವಾಗಿ ಐತಿಹ್ಯಗಳು ಜನಪದರ ಅಂತರಾಳದಲ್ಲಿ ಅರಳಿ ನಿಂತಿವೆ. ಆದರೆ ಅವುಗಳನ್ನು ಹುಡುಕುವ ಕಾರ್ಯ ಕೆಲವೊಂದು ಕಾರಣದಿಂದ ಜನರಿಂದ ಕಣ್ಮರೆಯಾಗಿ ಹೋಗುತ್ತಿವೆ. ಒಂದೆರಡು ಉಲ್ಲೇಖಗಳನ್ನು ಹೊರತುಪಡಿಸಿದರೆ, ಐತಿಹ್ಯಗಳ ಬಗಗೆ ಇದುವರೆಗೂ ವ್ಯಾಪಕವಾದ ಸಂಗ್ರಹಕಾರ್ಯ ಮತ್ತು ಅಧ್ಯಯನ ವ್ಯವಸ್ಥಿತವಾಗಿ ನಡೆದಿಲ್ಲ. ಅಲ್ಲೊಂದು ಇಲ್ಲೊಂದು ಬಿಡಿ ಲೇಖನಗಳು ಮಾತ್ರ ಬೆಳಕು ಕಂಡಿವೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯಲ್ಲಿರುವ ಐತಿಹ್ಯಗಳನ್ನು ಸಂಗ್ರಹ ಮಾಡಿ, ಅಧ್ಯಯನಕ್ಕೆ ವಿನಿಯೋಗಿಸಿಕೊಂಡು ಪ್ರಸ್ತುತ ಸಂಶೋಧನ ಅಧ್ಯಯನ ಮಾಡಲಾಗಿದೆ.

ಐತಿಹ್ಯಗಳ ಸಂಗ್ರಹಕಾರ್ಯ ಮತ್ತು ಅಧ್ಯಯನ ನಡೆಯಬೇಕಾದದ್ದು ಅನಿವಾರ್ಯವಾಗಿದೆ. ಸಂಗ್ರಹ ಕಾರ್ಯ ಮಾಡದೆ ಹೋದಾಗ ಮೂಲ ಚರಿತ್ರೆಯನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಹಿರಿಯ ತಲೆಮಾರಿನ ಜನರು ನಶಿಸಿಹೋದರೆ, ನಮ್ಮ ಸಂಸ್ಕೃತಿ, ಕಲೆಗಳು ಕೂಡಾ ನಶಿಸಿಹೋಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಅವುಗಳನ್ನು ಉಳಿಸಿ ಬೆಳೆಸಿಕೊಂಡು ಬರುವದು ಅನಿವಾರ್ಯತೆ ಇದೆ.

೧೯೮೫ರಲ್ಲಿ ಮೊದಲಿಗೆ ಐತಿಹ್ಯಗಳನ್ನು ಕುರಿತು ಪ್ರಕಟಗೊಂಡ ಎ.ಕೆ. ಘೋಷರವರ "LEGENDS FROM INDIAN HISTROY" ಎಂಬ ಸಂಕಲನವು ಐತಿಹ್ಯಗಳ ಬಗೆಗೆ ಸ್ಪಷ್ಟವಾದ ಹೆಚ್ಚಿನ ಮಾಹಿತಿಯನ್ನು ಒದಗಿಸಿಕೊಡುವುದರ ಜೊತೆಗೆ ಗಟ್ಟಿಯಾದ ಕಲ್ಪನೆಮಾಡಿಕೊಡುತ್ತದೆ. ಐತಿಹ್ಯ ಮತ್ತು ಚರಿತ್ರೆ ಒಳಪ್ರಭೇದವನ್ನು ಸರಳವಾಗಿ ತಿಳಿಸುವ ಪ್ರತಯತ್ನ ಮಾಡುತ್ತದೆ. "Legends tell us not only what people did but they did it ? we see behind their actions" ಎಂದು ಹೇಳಲಾಗಿದೆ. ಐತಿಹ್ಯ ಮತ್ತು ಚರಿತ್ರೆ ಒಂದೇ ಎನ್ನುವಷ್ಟರಲ್ಲಿ ಐತಿಹ್ಯಗಳ ಹಿಂದೆ ಜನಪದ ಚಿಂತನೆ ಅಡಗಿರುವುದೆಂದು ಹೇಳಿದ್ದಾರೆ. ಒಟ್ಟಾರೆ ಈ ಕೃತಿಯು ಐತಿಹ್ಯ ಮತ್ತು ಇತಿಹಾಸ ಕುರಿತು ಹೆಚ್ಚಿನ ನೆರವನ್ನು ಒದಗಿಸಿಕೊಟ್ಟಿದೆ.

೧೯೭೭ರಲ್ಲಿ ದಾಸೇಗೌಡ ಜಿ.ವಿ. ಅವರು 'ಕನ್ನಡ ಐತಿಹ್ಯಗಳು' ಎಂಬ ಕೃತಿ ಪ್ರಕಟಿಸಿದ್ದಾರೆ. ಐತಿಹ್ಯಗಳ ಬಗೆಗೆ ಸ್ಪಷ್ಟವಾಗಿ ಗುರುತಿಸುವಿಕೆಗೆ ಹಾಗೂ ಮುಂದಿನ ಅಧ್ಯಯನಕಾರರಿಗೆ ಈ ಕೃತಿ ಉಪಯುಕ್ತ ಮಾರ್ಗದರ್ಶನ ಮಾಡಿಕೊಡುತ್ತದೆ. ಈ ಕೃತಿಯಲ್ಲಿ ಸಂಗ್ರಹಿಸಿರುವ ಐತಿಹ್ಯಗಳು ಸ್ಥಳ ಐತಿಹ್ಯ ಮತ್ತು ಸಂಚಾರಿ ಐತಿಹ್ಯವೆಂದು ವಿಭಜಿಸಿಕೊಂಡು ಈ ಕೃತಿಹೊರ ತಂದಿದ್ದಾರೆ. ಒಟ್ಟಾರೆ ಇದು ಒಂದು ಕಡೆ ವ್ಯವಸ್ಥಿತವಾಗಿ ಕೂಡಿ ಹಾಕುವ ಮಹತ್ತಕಾರ್ಯ ಮಾಡಿದ್ದಾರೆ. ದಾಸೇಗೌಡ ಅವರು ಮಂಡ್ಯ ಜಿಲ್ಲೆಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಹಬ್ಬಿಕೊಂಡಿರುವ ಐತಿಹ್ಯಗಳು ಈ ಪುಸ್ತಕದಲ್ಲಿ ಸಂಗ್ರಹಮಾಡಿ ಹಿಡಿದಿಡಲಾಗಿದೆ. ಈ ಕೃತಿಯು ಐತಿಹ್ಯಗಳ ಅಧ್ಯಯನಕ್ಕೆ ತುಂಬಾ ಉಪಯುಕ್ತವಾದುದು ಹಾಗೂ ಸರಳವಾಗಿ, ಸ್ಪಷ್ಟವಾಗಿ ಐತಿಹ್ಯಗಳ ಬಗೆಗೆ ಸಮಗ್ರವಾಗಿ ತಿಳಿಸಿದ್ದಾರೆ. ಈ ಕೃತಿ ಜನಪದ ಸಾಹಿತ್ಯ ಕ್ಷೇತ್ರಕ್ಕೆ ತುಂಬಾ ಅಮುಲ್ಯವಾದುದ್ದಾಗಿದೆ.

೧೯೯೧ರಲ್ಲಿ ಭದ್ರಾಪೂರ ಎಸ್.ಎಸ್. ಅವರು "ಉತ್ತರ ಕರ್ನಾಟಕ ಜನಪದ ಐತಿಹ್ಯಗಳು" ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ಸಿದ್ಧಪಡಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿ ಪಡೆದುಕೊಂಡಿದ್ದಾರೆ. ಈ ಸಂಶೋಧನೆ ಪ್ರಾತಿನಿಧಿಕವಾಗಿ ಅಧ್ಯಯನ ಕೈಗೊಂಡು, ಹೆಚ್ಚಿನ ಐತಿಹ್ಯಗಳು ಧಾರವಾಡ ಜಿಲ್ಲೆಯ ಸುತ್ತ-ಮುತ್ತಲಿನಿಂದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ. ಸಂಶೋಧನಾ ಅಧ್ಯಯನಕ್ಕೆ ಈ ಮಹಾಪ್ರಬಂಧವು ಉಪಯುಕ್ತವಾದ ದಾರಿಯನ್ನು ತೋರಿಸಬಲ್ಲದು.

೧೯೯೮ರಲ್ಲಿ ಶ್ರೀ ವೀರಣ್ಣ ಅವರು 'ಕೆಲವು ಕನ್ನಡ ಕವಿಗಳನ್ನು ಕುರಿತು ಐತಿಹ್ಯಗಳು' ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದು ಮಂಗಳೂರು ವಿಶ್ವವಿದ್ಯಾನಿಲಯದಿಂದ ಎಂ.ಫಿಲ್ ಪದವಿ ಪಡೆದುಕೊಂಡಿದ್ದಾರೆ. ಈ ಸಂಶೋಧನೆ ಐತಿಹ್ಯಗಳ ಮೂಲಕ ಕವಿ-ಕೃತಿಕಾರರ ಚರಿತ್ರಾತ್ಮಕ ಸಂಶೋಧನೆಯಾಗಿದೆ. ಕವಿಗಳ ಕೃತಿ ರಚನೆಗೆ ಸಂಬಂಧಿಸಿದಂತೆ ಪ್ರಮುಖ ಕವಿಗಳನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಐತಿಹ್ಯ ಮತ್ತು ಕವಿಗಳ ನಡುವಿನ ಸಂಬಂಧವನ್ನು ಐತಿಹ್ಯಗಳ ಮೂಲಕ ಬಳಸಿಕೊಂಡು ಮೌಲಿಕ ಕೃತಿ ಹಾಗೂ ಕವಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಶೋಧನೆ ಕೈಗೊಳ್ಳಲಾಗಿದೆ. ತುಂಬಾ ವ್ಯವಸ್ಥಿತ ಹಾಗೂ ಸರಳವಾಗಿ ತಿಳಿಸುವ ಕಾರ್ಯ ಮಾಡಿದ್ದಾರೆ. ಈ ಸಂಶೋಧನೆಯು ಹೊಸ ಮಾದರಿಯೊಲ್ಲಂದಾಗಿದೆ.

೧೯೯೨ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿ ಪಡೆದ ಎ. ಸುಬ್ಬಣ್ಣ ರೈ ಅವರು 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು' ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ಬರೆದು ಮುಂಬಯಿ ವಿಶ್ವವಿದ್ಯಾಲಕ್ಕೆ ಸಲ್ಲಿಸಿದರು. ಈ ಕೃತಿಯು ದಕ್ಷಿಣ ಕರ್ನಾಟಕ ಜಿಲ್ಲೆಯ ಸುತ್ತ-ಮುತ್ತಲಿನ ಐತಿಹ್ಯಗಳನ್ನು ವ್ಯವಸ್ಥಿತವಾಗಿ ಜನಪದರಿಂದ ಸಂಗ್ರಹಿಸಿ, ಈ ಮಹಾಪ್ರಬಂಧ ಸಿದ್ಧಪಡಿಸಿದ್ದಾರೆ. ಈ ಕೃತಿಯು ಐತಿಹ್ಯಗಳ ಬಗೆಗೆ ಸ್ಪಷ್ಟವಾದ ಚಿತ್ರಣ ಕಲ್ಪಿಸಿಕೊಡುತ್ತದೆ. ಐತಿಹ್ಯಗಳ ಬಗೆಗೆ ಅರ್ಥೈಯಿಸಿಕೊಳ್ಳಲು ಈ ಕೃತಿ ತುಂಬಾ ಮೌಲಿಕ ಹಾಗೂ ಉಪಯುಕ್ತವೆಂದು ಹೇಳಬಹುದು.

೧೯೯೬ರಲ್ಲಿ ಶ್ರೀ ಬೇಕಲ ರಾಮನಾಯಕ ಅವರು 'ತೆಂಕನಾಡ ಐತಿಹ್ಯಗಳು' ಎಂಬ ಕೃತಿಯು ಕಥೆಯ ರೂಪದಲ್ಲಿದ್ದು, ಬಹುಬೇಗ ಅವುಗಳು ಐತಿಹ್ಯಗಳೆಂದು ಒಪ್ಪಿಕೊಳ್ಳುವುದು ಆಗುವುದಿಲ್ಲ. ಒಟ್ಟಾರೆ ಬಹುವಿಧಗಳಿಂದ ಕೂಡಿದ ಆ ಪ್ರದೇಶದ ಐತಿಹ್ಯಗಳನ್ನು ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಅಯ್ಯಾಳಿ ಯರಿಸ್ವಾಮಿ ಅವರ "ಹೊಸಪೇಟೆ ತಾಲೂಕಿನ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಹೊಸಪೇಟೆ ತಾಲೂಕಿನ ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆತ ಐತಿಹ್ಯಗಳನ್ನು ಸಂಗ್ರಹಿಸಿ ತಮ್ಮ ಮಹಾಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ಈ ನಿಟ್ಟಿನಲ್ಲಿ ಶಂಕರ ಬಾಳಿಯವರು 'ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಬರೆದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಡಾಕ್ಟರೇಟ ಪದವಿಯನ್ನು ಪಡೆದರು. ಈ ಮಹಾಪ್ರಬಂಧವು ಜಾನಪದಿಯ ದೃಷ್ಟಿಕೋನವನ್ನು ಇರಿಸಿಕೊಂಡು ಅದರ ಹಿನ್ನೆಲೆಯಲ್ಲಿ ತಮ್ಮ ಮಹಾಪ್ರಬಂದವನ್ನು ಕಟ್ಟಿಕೊಟ್ಟಿದ್ದಾರೆ.

ಜಾನಪದ ಕೈಪಿಡಿ ಗ್ರಂಥದಲ್ಲಿ ಐತಿಹ್ಯ ಕುರಿತು ಡಾ.ಪುರುಷೋತ್ತಮ ಬೀಳಿಮಲೆ ಅವರ ಲೇಖನವಿದೆ. ಪಾಶ್ಚಾತ್ಯ ಮತ್ತು ಭಾರತೀಯ ಜಾನಪದ ವಿದ್ವಾಂಸರ ನೆಲೆಯಲ್ಲಿ ಐತಿಹ್ಯಗಳನ್ನು ಗ್ರಹಿಸಿಕೊಂಡು, ಐತಿಹ್ಯದ ಸ್ವರೂಪ, ವರ್ಗೀಕರಣ ಪ್ರಕಾರಗಳ ಕುರಿತು ಸ್ಥೂಲವಾಗಿ ಚರ್ಚಿಸಿದ್ದಾರೆ. ಈ ಲೇಖನ ಐತಿಹ್ಯಗಳ ಬಗೆಗೆ ಹೆಚ್ಚಿನ ನೆರವನ್ನು ಒದಗಿಸಿಕೊಡುತ್ತದೆ.

'ವಂದನೆ' ಎಂಬ ಬಿ.ಬಿ. ಹೆಂಡಿ ಅವರ ಅಭಿನಂದನ ಗ್ರಂಥದಲ್ಲಿ ಡಾ.ಬಸವರಾಜ ಪೋಲಿಸ ಪಾಟೀಲ ಅವರ 'ಸ್ಥಳೀಯ ಐತಿಹ್ಯಗಳು' ಒಂದು ವಿವೇಚನೆ ಎಂಬ ಲೇಖನವಿದೆ. ಈ ಕೃತಿಯಲ್ಲಿ ಸಂಕ್ಷೇಪ್ತವಾಗಿ ಐತಿಹ್ಯಗಳ ಬಗೆಗೆ ಸ್ಪಷ್ಟವಾದ ಬೆಳಕು ಚೆಲ್ಲಿದ್ದಾರೆ. ಸಂಕ್ಷೇಪ್ತವಾಗಿ ಐತಿಹ್ಯಗಳ ಬಗೆಗೆ ಈ ಪ್ರದೇಶದ ಸಮಗ್ರ ಚಿತ್ರಣವನ್ನು ಮಾಡಿಕೊಟ್ಟಿದ್ದಾರೆ.

ಈಗಾಗಲೇ 'ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ' ಸಂಶೋಧನೆ ನಡೆದರು ಕೂಡ ಅವರ ಅಧ್ಯಯನ ಜಾನಪದಿಯ ನೆಲೆಗಟ್ಟಿನಲ್ಲಿ ನಡೆದಿದೆ. ಇದನ್ನು ಹೊರತುಪಡಿಸಿ ಉಳಿದ ಆಯಾಮಗಳ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಲಾಗಿದೆ.ಪ್ರಸ್ತುತ ಅಧ್ಯಯನ ವಿಷಯವಾದ 'ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ' ಇದರಲ್ಲಿ ಜಿಲ್ಲೆಯ ಭೌಗೋಳಿಕ, ರಾಜಕೀಯ, ಧಾರ್ಮಿಕ, ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದೇನೆ.

ಒಟ್ಟಾರೆಯಾಗಿ ಹೇಳುವದಾದರೆ ಐತಿಹ್ಯಗಳ ಕುರಿತು ಈ ವರೆಗೆ ನಡೆದಿರುವ ಸಂಶೋಧನಾ ಕಾರ್ಯ ಸಮಗ್ರ ರೀತಿಯಿಂದ ಕೂಡಿಲ್ಲ. ಬಿಡಿ ಲೇಖನಗಳು ಮಾತ್ರ ಅಲ್ಲಲ್ಲಿ ಐತಿಹ್ಯಗಳ ಬಗೆಗೆ ಬೆಳಕು ಚೆಲ್ಲಿವೆ. ಹೀಗಾಗಿ ಗುಲಬರ್ಗಾ ಜಿಲ್ಲೆಯ

ಐತಿಹ್ಯಗಳ ಸಾಂಸ್ಕೃತಿಕ ವಿಷಯಕ್ಕೆ ಸಂಬಂಧ ಪಟ್ಟಹಾಗೆ ಐತಿಹ್ಯಗಳನ್ನು ಸಂಗ್ರಹಿಸಿ ಈ ಅಧ್ಯಯನದ ಮೂಲಕ ಇಲ್ಲಿಯ ಚರಿತ್ರೆಯನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

೧.೫ ವಿಧಿ-ವಿಧಾನ :-

ಪ್ರಸ್ತುತ ಅಧ್ಯಯನ ವಿಷಯ ವಿಶ್ಲೇಷಣೆಗೆ ಹಲವಾರು ವಿಧಿ-ವಿಧಾನಗಳನ್ನು ಅನುಸರಿಸಲಾಗಿದೆ. ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ಚಿಂತಕರು ಬರೆದ ಪುಸ್ತಕಗಳನ್ನು ಸಂಗ್ರಹಿಸಿ, ಅಧ್ಯಯನಕ್ಕೆ ಪೂರಕವಾಗಿ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸೂಚಿಪಟ್ಟಿ ಮಾಡಿಕೊಂಡು, ವಿಷಯ ಸಂಗ್ರಹಣೆ ಮಾಡಲಾಗಿದೆ. ಹಾಗೂ ಆಕರಗ್ರಂಥ ವಿಧಾನ, ತೌಲನಿಕ ಅಧ್ಯಯನ, ಕ್ಷೇತ್ರಕಾರ್ಯ ವನ್ನೊಳಗೊಂಡು ಎಲ್ಲಾ ವಿಧಾನಗಳನ್ನು ಅನುಸರಿಸುವುದರೊಂದಿಗೆ ಮಾಹಿತಿಯನ್ನು ಒಂದೆಡೆ ಸೆರೆಹಿಡಿದು ವಿಶ್ಲೇಷಿಸಿ ಬರೆಯಲಾಗಿದೆ. ಪ್ರಸಕ್ತ ಅಧ್ಯಯನವು ಈ ಕೆಳಗಿನಂತೆ ಹಂತ ಹಂತವಾಗಿ ಸಾಗಿದೆ.

೧.೫.೧ ವಿಷಯದ ಆಯ್ಕೆ ಮತ್ತು ಮಾರ್ಗದರ್ಶಕರ ಸಲಹೆ-ಸೂಚನೆ:-

ಸಂಶೋಧನ ಅಧ್ಯಯನದಲ್ಲಿ ವಿಷಯದ ಆಯ್ಕೆ ಅತ್ಯಂತ ಪ್ರಮುಖವೂ ಪ್ರಥಮವೂ ಆಗಿದೆ. ಇದು ಸಂಶೋಧಕನ ಆಸಕ್ತಿಯನ್ನು ಅವಲಂಬಿಸಿರುವಂಥದ್ದು. ಗುಲಬರ್ಗಾ ಜಿಲ್ಲೆಯ ಬಗೆಗೆ ಹೆಚ್ಚಿನ ಕ್ಷೇತ್ರಾಧ್ಯಯನಗಳು ನಡೆಯದೇ ಇರುವುದರಿಂದ 'ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಅಧ್ಯಯನ ಕೈಗೊಳ್ಳಲು ವಿಷಯದ ಆಯ್ಕೆ ಮಾಡಿಕೊಳ್ಳಲಾಯಿತು ನಂತರ ಮಾರ್ಗದರ್ಶಕರಿಂದ ಸಲಹೆ ಸೂಚನೆಯನ್ನು ಪಡೆದುಕೊಂಡಿದ್ದೇನೆ.

ಯಾವುದೇ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಾಗ ಅದರ ಪೂರ್ವ ಪರಿಚಯ ಮಾಹಿತಿಯನ್ನು ಮೊದಲು ಸಂಶೋಧಕ ಅರಿತುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾರ್ಗದರ್ಶಕರ ಸೂಚನೆಯ ಮೇರೆಗೆ ಕಾರ್ಯಪ್ರವೃತ್ತರಾಗುವುದರ ಜೊತೆಗೆ ಕ್ಷೇತ್ರ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳಲಾಯಿತು.

೧.೫.೨ ಸ್ಥಳ ಮತ್ತು ವಕ್ತಾರರ ಆಯ್ಕೆ:-

ವಕ್ತಾರರಿಲ್ಲದೆ ಕ್ಷೇತ್ರಾಧ್ಯಯನ ಪೂರ್ಣವಾಗಲಾರದು. ಪ್ರಾರಂಭದಲ್ಲಿ ಜಿಲ್ಲೆಯ ಪ್ರಾಚೀನ ಮತ್ತು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಪ್ರಸಿದ್ಧವಾದ ಪುರಾತತ್ವ ನೆಲೆಯ ಗ್ರಾಮಗಳನ್ನು ಆಕರ ಗ್ರಂಥಗಳಿಂದ ಗುರುತಿಸಿಕೊಳ್ಳಲಾಯಿತು. ನಂತರ ಜಿಲ್ಲೆಯ ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಅಧ್ಯಯನ ಕೈಗೊಂಡಿರುವ ಮತ್ತು ಕೈಗೊಳ್ಳುತ್ತಿರುವ ಸಂಶೋಧಕರನ್ನು ಹಾಗೂ ಮಾಹಿತಿ ಇರುವ ಆಸಕ್ತ ವಿದ್ವಾಂಸರನ್ನು ಸಂಪರ್ಕಿಸಲಾಯಿತು. ಇವರಿಂದ ಕೆಲವು ಐತಿಹ್ಯಗಳ ಸಂಗ್ರಹವಾದುದರ ಜೊತೆಗೆ ಯಾವ ಯಾವ ಗ್ರಾಮಗಳಲ್ಲಿ ಯಾರನ್ನು ಸಂಪರ್ಕಿಸಿದರೆ ಮಾಹಿತಿ ದೊರೆಯುತ್ತದೆಂಬುದನ್ನು ಟಿಪ್ಪಣೆ ಮಾಡಿಕೊಳ್ಳಲಾಯಿತು. ಈ ಮಾಹಿತಿ ಆಧರಿಸಿ ಗ್ರಾಮಕ್ಕೆ ಹೋಗಿ ಅವರನ್ನು ಭೇಟಿಯಾದಾಗ, ತಮಗಿಂತಲೂ ಸಮರ್ಥವಾಗಿ ಮಾಹಿತಿ ನೀಡುವವರ ಹೆಸರನ್ನು ಸೂಚಿಸುತ್ತಿದ್ದರು. ಈ ರೀತಿಯಾಗಿ ವಕ್ತಾರರನ್ನು ಆಯ್ಕೆ ಮಾಡಿಕೊಳ್ಳಲಾಯಿತು.

೧.೫.೩ ಸ್ಥಳಗಳ ವೀಕ್ಷಣೆ-ಸಂಗ್ರಹ:-

ಐತಿಹ್ಯಗಳ ವಸ್ತುನಿಷ್ಠ ಅಧ್ಯಯನ ಪೂರ್ಣತೆಯು ಸ್ಥಳಗಳ ಪರಿವೀಕ್ಷಣ ಕಾರ್ಯವನ್ನು ಅವಲಂಬಿಸಿರುತ್ತದೆ. ಐತಿಹ್ಯ ಕುರಿತ ಸ್ಥಳದ ಪರಿಜ್ಞಾನವಿಲ್ಲದೆ ಕೇವಲ ಊಹಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಅಧ್ಯಯನ ವಸ್ತುನಿಷ್ಠವಾಗಿರದೆ, ತೆಗೆದುಕೊಳ್ಳುವ ನಿರ್ಣಯಗಳು ಪ್ರಮಾದಕ್ಕೆ ಅವಕಾಶ ಮಾಡಿಕೊಡುತ್ತವೆ.ಆದ್ದರಿಂದ ಸ್ಥಳದ ವೀಕ್ಷಣೆ ಅತ್ಯಾವಶ್ಯಕವಾಗಿದೆ. ಅಷ್ಟೇ ಅಲ್ಲದೇ ಛಾಯಾ ಚಿತ್ರದಲ್ಲಿ ಭೌತಿಕ ಆಕರಗಳನ್ನು ಸೆರೆ ಹಿಡಿಯಲಾಗಿದೆ. ಜೊತೆಗೆ ಆಯ್ಕೆ ಮಾಡಿಕೊಂಡ ವಕ್ತಾರರನ್ನು ಸಂಪರ್ಕಿಸಿ, ಪ್ರಶ್ನೆಗಳನ್ನು ಕೇಳುವುದರ ಮೂಲಕ ಐತಿಹ್ಯದ ಮಾಹಿತಿಗಳ ಧ್ವನಿ ಮುದ್ರಿಸಿಕೊಂಡು ಸಂಗ್ರಹಿಸಲಾಗಿದೆ. ಜೊತೆಗೆ ವಕ್ತಾರನ ವೈಯುಕ್ತಿಕ ವಿವರಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ. ಅಲ್ಲದೆ ಪ್ರಕಟಿತ ಗ್ರಂಥಗಳಿಂದ, ವೃತ್ತಪತ್ರಿಕೆ, ನಿಯತಕಾಲಿಕೆಗಳಲ್ಲಿ ಮುದ್ರಿತವಾದ ಐತಿಹ್ಯಗಳನ್ನು ಕೂಡ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೫.೪ ಲಿಖಿತ ರೂಪ ನೀಡುವುದು:-

ಮೌಖಿಕ ಪರಂಪರೆಯಲ್ಲಿಯೇ ಪರಂಪರಾಗತವಾಗಿ ವಕ್ತಾರರಿಂದ ವರ್ಗಾವಣೆಗೊಳ್ಳುತ್ತಾ ಬಂದಿರುವ ಐತಿಹ್ಯಗಳನ್ನು ಅವರಿಂದ ಧ್ವನಿಮುದ್ರಿಸಿಕೊಂಡು ಜೊತೆಗೆ ಮಾಹಿತಿದಾರರೊಂದಿಗೆ ನಡೆಸಿದ ಚರ್ಚೆಯನ್ನು ಮೊಬೈಲ್ ಫೋನ್‌ನಲ್ಲಿ ಸೆರೆಹಿಡಿದುಕೊಳ್ಳಲಾಯಿತು. ಹೀಗೆ ಸೆರೆ ಹಿಡಿದ ಮಾಹಿತಿಯನ್ನುಧ್ವನಿವರ್ಧಕದ ಮೂಲಕ ಆಲಿಸಿ, ಯಥಾವತ್ತಾಗಿ ಲಿಖಿತ ರೂಪಕ್ಕೆ ತರಲಾಗಿದೆ.

೧.೫.೫ ವಿಂಗಡನೆ:-

ಕ್ಷೇತ್ರಾಧ್ಯಯನದ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದು ಎಷ್ಟು ಮಹತ್ವದಾಯಕವೋ, ಸಂಗ್ರಹಿತ ಮಾಹಿತಿಯನ್ನು ವಿಂಗಡಿಸಿಕೊಳ್ಳುವುದು ಕೂಡ ಅಷ್ಟೇ ಪ್ರಮುಖವಾದುದು. ಆದ್ದರಿಂದ ಈ ಮೊದಲಿನ ವರ್ಗೀಕರಣಗಳನ್ನು ಅವಲೋಕನ ಮಾಡಿ, ಹೊಸತೊಂದು ವಿಂಗಡನಾ ಕ್ರಮವನ್ನು ನಮ್ಮ ಅಧ್ಯಯನಕ್ಕೆ ಅನ್ವಯಿಸಬೇಕಾಗುತ್ತದೆ. ಪ್ರಸ್ತುತ ಸಂಗ್ರಹಿಸಿದ ಐತಿಹ್ಯಗಳನ್ನು ವಸ್ತು-ವಿಷಯ ನಿಷ್ಠವಾಗಿ, ವರ್ಗೀಕರಿಸಿ ಕೊಳ್ಳಲಾಗಿದೆ. ಜೊತೆಗೆ ಒಳಪ್ರಭೇದಗಳನ್ನು ಕೂಡ ಮಾಡಿಕೊಳ್ಳಲಾಗಿದೆ.

೧.೫.೬ ವಿಶ್ಲೇಷಣೆ :-

ವರ್ಗೀಕರಿಸಿಕೊಂಡ ಐತಿಹ್ಯಗಳು ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಎಷ್ಟರ ಮಟ್ಟಿಗೆ ನೆರವಾಗುತ್ತವೆ ಎಂಬುದನ್ನು ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಐತಿಹ್ಯದಲ್ಲಿರುವ ನೈಜವಾದ, ವಾಸ್ತವವಾದ ಘಟನೆಯೊಂದನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ವಿಶ್ಲೇಷಣೆಗೆ ಪ್ರಯತ್ನಿಸಲಾಗಿದೆ. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಐತಿಹ್ಯದ ಅಗತ್ಯತೆ ಕುರಿತು ಮುಕ್ತವಾಗಿ ಚರ್ಚಿಸುವುದಾಗಿದೆ. ಪ್ರತಿ ಹಂತದಲ್ಲಿಯೂ ಮಾರ್ಗದರ್ಶಕರ ಸಲಹೆ-ಸೂಚನೆಗಳನ್ನು ಅಧ್ಯಯನದಲ್ಲಿ ಸ್ವೀಕರಿಸಲಾಗಿದೆ.

೧.೬ ಮಹಾಪ್ರಬಂಧದ ಸ್ವರೂಪ :-

ಗುಲಬರ್ಗಾ ಜಿಲ್ಲೆಯನ್ನು ಕಲ್ಯಾಣದ ಹೆಬ್ಬಾಗಿಲು ಎಂದು ಕರೆಯಲಾಗುತ್ತದೆ. ಆರು ತಾಲ್ಲೂಕುಗಳಿಂದ ಕೂಡಿದ, ಈ ಜಿಲ್ಲೆ ಇಂದು ಈ ಭಾಗದ ಕೇಂದ್ರಸ್ಥಾನವು ಆಗಿದೆ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಹಿತ್ಯಿಕವಾಗಿ ತುಂಬಾ ಸಮೃದ್ಧ

ಹಾಗೂ ವೈಶಿಷ್ಟ್ಯ ಪೂರ್ಣವಾಗಿದೆ. ಇಲ್ಲಿ ಅಳಿದು ಹೋಗುತ್ತಿರುವ ಐತಿಹ್ಯಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಪುನರ್ ಪರಿಚಯಿಸುವುದು ಸಂಶೋಧನೆಯ ಮೊದಲ ಘಟ್ಟವಾಗಿ ಪರಿಣಮಿಸುತ್ತವೆ ಎಂದು ತಿಳಿದುಕೊಂಡಿದ್ದೇನೆ. ಐತಿಹ್ಯಗಳು ಪ್ರಕೃತಿಯ ಅದ್ಭುತ ಮೈಲುಗಲ್ಲುಗಳಾಗಿ ಕಂಗೊಳಿಸುತ್ತವೆ. ಜನರು ಇವುಗಳ ಕುರಿತು ಕತೆಗಳನ್ನು ಕಟ್ಟಿ ಹೇಳುವ ಕೌಶಲ್ಯವನ್ನು ಪಡೆದುಕೊಂಡಿದ್ದಾರೆ. ಪ್ರಕೃತಿಯ ಮಡಿಲಲ್ಲಿ ಹುದುಗಿರುವ ವಿವಿಧ ಬಗೆಯ ಜನಪದ ಇತಿಹಾಸವನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನಿಸಲಾಗಿದೆ. ರಾಮಾಯಣ, ಮಹಾಭಾರತದ ಮಹಾಕಾವ್ಯಗಳು ನಮ್ಮ ಜನರ ಅಂತರಾಳದ ಉಸಿರಾಗಿ ನಿಂತಿವೆ. ಬಹು ಪ್ರಮಾಣದಲ್ಲಿ ಬೆರೆತುಕೊಂಡು ಜನರನ್ನು ಸದಾ ಆಳುತ್ತಾ ನಡೆದಿವೆ. ಇತಿಹಾಸ ಪುರಾಣಗಳ ಮೂಲಕ ಐತಿಹ್ಯಗಳಾಗಿ ನಿರ್ಮಾಣಗೊಂಡು ಪ್ರಸಾರಗೊಂಡಿವೆ. ಪ್ರಸ್ತುತ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಒಂದನೆಯ ಅಧ್ಯಾಯನವು 'ಪ್ರವೇಶಿಕೆ'ಯಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಮಿತಿ, ಅಧ್ಯಯನದ ವಿಧಾನ ಮತ್ತು ಮಹಾಪ್ರಬಂಧದ ಸ್ವರೂಪ ಹಾಗೂ ಜಿಲ್ಲೆಯ ಸಂಕ್ಷಿಪ್ತ ಪರಿಚಯವನ್ನು ಈ ಅಧ್ಯಾಯದಲ್ಲಿ ಮಾಡಿಕೊಡಲಾಗಿದೆ.

ಎರಡನೆಯ ಅಧ್ಯಾಯವು 'ಐತಿಹ್ಯಗಳ : ಚಾರಿತ್ರಿಕ ಅವಲೋಕನ' ಆಗಿದ್ದು ಅರ್ಥ-ನಿಷ್ಪತ್ತಿ-ಸ್ವರೂಪ, ಹುಟ್ಟು-ಬೆಳವಣಿಗೆ ಹಾಗೂ ಪ್ರಕಾರಗಳು, ಜಾಗತಿಕ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ, ಭಾರತೀಯ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ, ಇತರೆ ಶಾಸ್ತ್ರಗಳೊಂದಿಗೆ ಸಂಬಂಧಗಳ, ಪಾತ್ರ ಕುರಿತು ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯವು 'ಸ್ಥಳ ಪ್ರಧಾನ ಐತಿಹ್ಯಗಳು' ಎಂಬ ಶೀರ್ಷಿಕೆಯಲ್ಲಿ ಪವಾಡಗಳು, ಸ್ಥಳನಾಮಗಳು, ನಂಬಿಕೆಗಳು, ಕೆರೆ-ಕುಂಟೆ, ಬಾವಿಗಳಿಗೆ ಸಂಬಂದಿಸಿದ ಐತಿಹ್ಯಗಳನ್ನು ವಿಶ್ಲೇಷಿಸಿ ಜಿಲ್ಲೆಯ ಐತಿಹಾಸಿಕ ಪ್ರಜ್ಞೆಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ನಾಲ್ಕನೆ ಅಧ್ಯಾಯವು 'ವ್ಯಕ್ತಿ ಪ್ರಧಾನ ಮತ್ತು ಘಟನಾ ಪ್ರಧಾನ ಐತಿಹ್ಯಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಗ್ರಾಮ ದೇವತೆಗಳು, ವ್ಯಕ್ತಿ ಪ್ರಧಾನ ಐತಿಹ್ಯಗಳು, ಘಟನಾ ಪ್ರಧಾನ ಐತಿಹ್ಯಗಳು, ದೈವ ಸಂಬಂಧಿ ಐತಿಹ್ಯಗಳು, ಕುಲಮೂಲ ಸಂಬಂಧಿ ಐತಿಹ್ಯಗಳು, ಬಲಿ-ಹಬ್ಬ ಆಚರಣೆಗಳು ಇತ್ಯಾದಿಗಳಿಂದ ಚರಿತ್ರೆ ಕಟ್ಟಿಕೊಡುವುದಾಗಿದೆ.

ಐದನೆಯ ಅಧ್ಯಾಯವು 'ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು' ಎಂಬ ಶೀರ್ಷಿಕೆಯಲ್ಲಿ ಭೌಗೋಳಿಕ, ಪ್ರಾಕೃತಿಕ, ನೆಲ-ಜಲ, ಸಸ್ಯ, ಪ್ರಾಣಿ, ಗುಡ್ಡ-ಬೆಟ್ಟ ಸಂಬಂದಿ ಐತಿಹ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ಅಧ್ಯಾಯದಲ್ಲಿ ನಿಬಂಧದ ವಿವಿಧ ಅಧ್ಯಾಯಗಳ ಸಾರವನ್ನು ಸಂಗ್ರಹಿಸಿಕೊಡಲಾಗಿದೆ. ಈ ಸಂಶೋಧನೆಯಿಂದ ಹೊರಬಂದ ವಿಚಾರಗಳನ್ನು ಸಂಗ್ರಹಿಸಿ, ಕನ್ನಡ ಮತ್ತು ಇಂಗ್ಲೀಷ್ ಪರಾಮರ್ಶನ ಗ್ರಂಥಗಳ ಅನುಬಂಧವನ್ನು ನೀಡಿ, ಈ ನಿಬಂಧವನ್ನು ಮುಕ್ತಾಯಗೊಳಿಸಲಾಗಿದೆ.

ಅಧ್ಯಾಯ-೨ ಗುಲ್ಬರ್ಗಾ ಜಿಲ್ಲೆಯ ಐತಿಹ್ಯಗಳು ಚಾರಿತ್ರಿಕ ಅವಲೋಕನ

೨.೧ ಐತಿಹ್ಯದ ಅರ್ಥ ಪದ ನಿಷ್ಪತ್ತಿ-ಸ್ವರೂಪ

೨.೨ ಹುಟ್ಟು-ಬೆಳವಣಿಗೆ ಹಾಗೂ ಪ್ರಕಾರಗಳು

೨.೩ ಜಾಗತಿಕ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ

೨.೪ ಭಾರತೀಯ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ

೨.೫ ಇತರ ಶಾಸ್ತ್ರಗಳೊಂದಿಗೆ ಸಂಬಂಧ

೨.೬ ಐತಿಹ್ಯ ಇತಿಹಾಸದ ಮುಖ್ಯ ಆಕರ

ಅಧ್ಯಾಯ-೨

ಗುಲ್ಬರ್ಗಾ ಜಿಲ್ಲೆಯ ಐತಿಹ್ಯಗಳ : ಚಾರಿತ್ರಿಕ ಅವಲೋಕನ

ಒಂದು ನಿರ್ದಿಷ್ಟ ವ್ಯಕ್ತಿ, ಸ್ಥಳ, ಘಟನೆ, ಚರಿತ್ರೆ, ಸಮಾಜ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿ ಕೊಳ್ಳುವ ಕಥೆಯೇ ಐತಿಹ್ಯ. ಐತಿಹ್ಯದಲ್ಲಿರುವ ಕಥೆಗಳನ್ನು ಜನ ನಿಜವಾಗಿ ನಡದುದೆಂದು ನಂಬುತ್ತಾರೆ. ಐತಿಹ್ಯಗಳಲ್ಲಿ ಕಥೆಗೆ ಕಾರಣವಾದ ವಸ್ತು ಮೊದಲೇ ವಾಸ್ತವ ಪ್ರಪಂಚದಲ್ಲಿ ನಡೆದಿರುತ್ತದೆ. ಅಥವಾ ಹಾಗೆಂದು ಜನ ಭಾವಿಸುತ್ತಾರೆ. ಯಾವುದೋ ಒಂದು ನಿರ್ದಿಷ್ಟತೆಗೆ ಇಡೀ ಕಥೆ ಬದ್ಧವಾಗಿರುತ್ತದೆ ಎನ್ನಬಹುದು. ಐತಿಹ್ಯಗಳು ಸ್ಥಳೀಯವಾಗಿ ಜನಮನದಲ್ಲಿ ಸ್ಥಾಯಿಯಾಗಿರುವ ಪವಾಡ ಪುರುಷರ, ಸಾಧು-ಸಂತರ, ಸಾಧಕರ, ಗ್ರಾಮ ದೇವತೆಗಳ ದೇವಾಲಯ, ಮಠ, ಊರು, ಕೋಟೆ, ಕೆರೆ, ಬಾವಿ, ಪ್ರಾಣಿ-ಪಕ್ಷಿ ಹಾಗೂ ಪ್ರಕೃತಿಯ ವಿಸ್ಮಯ ಗುಣವಿಶೇಷತೆಗಳ ಬಗೆಗೆ ಸೃಷ್ಟಿಯಾಗುತ್ತವೆ.

೨.೧ ಪದ ನಿಷ್ಪತ್ತಿ:-

'ಐತಿಹ್ಯ' ಎಂಬ ಪದವು ಇಂಗ್ಲೀಷಿನಲ್ಲಿ 'Legend' ಎಂಬುದರ ಸಂವಾದಿ ಪದವಾಗಿದೆ. "Legend" ಎಂಬ ಪದವು ಮಧ್ಯಕಾಲಿನ ಲ್ಯಾಟಿನ್ನಿನ 'Legenda' ದಿಂದ ನಿಷ್ಪನ್ನವಾದುದು. ಇದರ ಮೂಲ 'Legere' ಎಂಬುದಾಗಿದೆ". ಮೂಲತ: ಲ್ಯಾಟಿನ್ ಪದವಾದ Legend ಗೆ ಅಲ್ಲಿ 'Things to be read' ಎಂಬ ಅರ್ಥವಿದೆ[೧]. ಹೀಗಾಗಿ 'Legend' ಪ್ರಾರಂಭದಲ್ಲಿ'ಪಠಿಸು'ವಂಥ ಅರ್ಥವುಳ್ಳದಾಗಿದೆ. ಚರಿತ್ರೆಯ ದೃಷ್ಟಿಕೊನದಿಂದ ನೋಡುವುದಾದರೆ.ಇದು ಹೀಗೆ ಇತ್ತು, ಹೀಗೆ ಇತ್ತಂತೆ, ಹೀಗೆ ಇದ್ದದ್ದು ಎಂಬ ಅರ್ಥದೊಂದಿಗೆ, ಸಂಸ್ಕ್ರತದ ಇತಿ, ಹಾಸ (ಹೀಗೆ ಇತ್ತು ಎಂಬ ಮೂಲ ರೂಪದಿಂದ ನಿಷ್ಪನ್ನವಾಗಿದೆ).

ಸ್ವರೂಪ:-

ಮಧ್ಯಕಾಲಿನ ಪಾಶ್ಚಾತ್ಯ ರಾಷ್ಟ್ರಗಳ ಚರ್ಚುಗಳಲ್ಲಿ ಪಠಿಸಬಹುದಾದ ಸಾಧು-ಸಂತರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ 'Legend' ಪದವನ್ನು ಬಳಸಿದ್ದಾರೆ.ಕ್ರಿ.ಶ.೧೩ನೇ ಶತಮಾನದ್ದು ಎನ್ನಲಾದ'Legend'ನ್ನು ಅಂದಿನ ಸಂದರ್ಭಗಳಲ್ಲಿ ಧಾರ್ಮಿಕ ಕಥೆಗಳಿಗೆ ಮಾತ್ರ ಅನ್ವಯಿಸಿ ಹೇಳಲಾಗುತ್ತಿತ್ತೆನ್ನುವುದು ಈ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಮಧ್ಯಯುಗಿನ ಇಂಗ್ಲೀಷ ಬರಹಗಾರರು ಮತ್ತು ನಿಘಂಟುಕಾರರು 'Legend' ಪದದ ಅರ್ಥ ಮತ್ತು ಸ್ವರೂಪವನ್ನು ಪ್ರಾರ್ಥನಾ ಮಂದಿರಗಳಲ್ಲಿ ಪಠಿಸಲು ಯೋಗ್ಯವಾದಂಥ ಸಾಧು-ಸಂತರ ಚರಿತ್ರೆಗಳನ್ನೇ ಆಧಾರವಾಗಿಟ್ಟುಕೊಂಡು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಡೊಗ್ಲಾಸ್.ಜಿ.ಹಾರಿಂಗ್ ರವರು ಸೈರಕಾಸ್ ವಿಶ್ವವಿದ್ಯಾಲಯದ ಮಾನವ ಶಾಸ್ತ್ರದ ಪ್ರಾಧ್ಯಾಪಕರಾದ ಇವರು ಐತಿಹ್ಯ ಕುರಿತು ಹೀಗೆ ಹೇಳಿದ್ದಾರೆ. "Legend any non historical story supposedly transmitted by tradition from antiquity originally, the term donoted written story of the life of a saint or a collection of such stories[2]"

The term legend means literally "Something to be read" and originally corresponded largely to the term story. In medival times legend or Legend are donoted collections of extracts from the lives of saints and martyrs to read as lessons in divine service.

'Legend (Latin legere to read) term originally applied in the books of readings designed for use in divine service and afterwards extended to the stories of saints read at matin and at mealtiness in monasteries'.

"A story of a saints life, a collection of such stoties, A traditional story, a body of tradition, a nature or unhistorical story" (KIRKEPATRICK 1983:721) ODHAMS DICTIONARY ಯಲ್ಲಿ "Chronicle of the life of saint, a traditional story usually of oral origin with thematic material of a imaginatively fantastic and marvelous nature, a story based more on fancy than as fact".

The New popular Ecnyclopaediaದಲ್ಲಿ "ಐತಿಹ್ಯ ಎಂಬ ಪದವನ್ನು ಧಾರ್ಮಿಕ ಸ್ವಭಾವವುಳ್ಳದ್ದಕ್ಕೆ ಮೋಹಕವಾದದ್ದಕ್ಕೆ ಅಥವಾ ಚರ್ಚಿನ ಸಂಪ್ರದಾಯಕ್ಕೆ ಸಂಬಂಧಿಸಿದುದಕ್ಕೆ ಬಳಸುತ್ತಿದ್ದರೆಂದು ಹೇಳಲಾಗಿದೆ[೨].

Kenneth and Mary Clark ರವರ ಪ್ರಕಾರ ವ್ಯಕ್ತಿಗಳಿಗೆ, ಸ್ಥಳಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳು ಐತಿಹ್ಯಗಳು[೪].

Standard Dictionary of Folkalore mythology and legend ನಲ್ಲಿ "ಜನಪದ ಕಥೆಗಿಂತ ಚಿಕ್ಕದಾದ ಗದ್ಯಾತ್ಮಕವಾದ ಕೆಲವಾದರೂ ಒಂದು ನಿರ್ಧಿಷ್ಟ ಸ್ಥಳಕ್ಕೆ ಆರೋಪಿಸಲ್ಪಡುವ ವಿವರಣಾತ್ಮಕವಾದ, ಊರು ಅಥವಾ ವ್ಯಕ್ತಿಗಳ ಹೆಸರಿಗೆ ಸಂಬಂಧಿಸಿದಂತೆ ನಿಷ್ಪತ್ಯಾತ್ಮಕವಾದ ಕಥೆಗಳು ಐತಿಹ್ಯಗಳು[೫].

ಐತಿಹ್ಯಗಳ ಸೃಷ್ಟಿ, ಪ್ರಭಾವ ಕೇವಲ ಚರಿತ್ರೆಪೂರ್ವದ ಕಾಲಕ್ಕೇ ಸೀಮಿತವಾಗದೆ, ಚರಿತ್ರೆಯ ಜೊತೆ ಜೊತೆಯಲ್ಲೇ ಸೃಷ್ಟಿಯಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. 'ಐತಿಹ್ಯಗಳು ಜನಪದ ಕತೆಗಳಿಗಿಂತ ಚಿಕ್ಕದಾದ, ಗದ್ಯಾತ್ಮಕವಾದ, ಪರಿಮಿತ ಪಠ್ಯಂತರಗಳನ್ನೊಳಗೊಂಡ ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ, ವಿಶಿಷ್ಟ ಸ್ವರೂಪದ ಮನೋಜ್ಞ ಕಥಾನಕ. ಐತಿಹ್ಯವೆಂದರೆ ಕೇವಲ ಸ್ಥಳಕ್ಕಷ್ಟೇ ಅಲ್ಲ, ವ್ಯಕ್ತಿ ಅಥವಾ ಘಟನೆಯೊಂದನ್ನು ಕುರಿತಂತೆ ಸಾಂಪ್ರದಾಯಿಕ ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರವಾಗಿದೆಯೆಂದು ಭಾವಿಸುವ ಕಥೆಯೇ ಆಗಿದೆ'

ವ್ಯಾಖ್ಯೆಗಳು:-

ರೀನ್ ಹೋಲ್ಡ್ ಕೋಹ್ಲರ್ ಪ್ರಕಾರ:-

"ಐತಿಹ್ಯವು ಮನುಷ್ಯರ ಚರಿತ್ರೆ ಪೂರ್ವದ ಸಂಗ್ರಹಾಲಯವಾಗಿದೆ ಎನ್ನುತ್ತಾರೆ".

ಫ್ರೆಡ್ರಿಕ್ ರಾಂಕೆ ರವರ ಪ್ರಕಾರ:-

"ಐತಿಹ್ಯವು ತಾನು ಸತ್ಯವೆಂದು ಹೇಳಿಕೊಂಡರೂ ವಸ್ತುನಿಷ್ಠ ದೃಷ್ಟಿಯಿಂದ ಅದು ಅಸತ್ಯ"[೫].

ಐತಿಹ್ಯದ ಲಕ್ಷಣಗಳು

೧. ಐತಿಹ್ಯಗಳಿಗೆ ಆಕರ್ಷಕ ಕಥನಶೈಲಿ ಇದ್ದೇ ಇರಬೇಕೆಂಬ ಕಡ್ಡಾಯವಿಲ್ಲ. ಇದರ ನಿರೂಪಣಾ ಕ್ರಮ ಕೂಡಾ ಒಂದು ತರ್ಕಬದ್ಧವಾದ ಖಚಿತ ರಚನಾ ಕ್ರಮವನ್ನು ಹೊಂದಿರಬೇಕಾಗಿಲ್ಲ.

೨. ಐತಿಹ್ಯಗಳು-ಸ್ಥಳೀಯ ಅವಶ್ಯಕತೆಗಳಿಗುನುಣವಾಗಿ ಬಲಾವಣೆ ಹೊಂದುತ್ತವೆ. ಆಗ ಅವುಗಳ ವಿವರಗಳು ಹಾಗು ಸಂದೇಶ ಕೂಡ ಬದಲಾಗಬಹುದು.

೩. ಐತಿಹ್ಯಗಳಲ್ಲಿ ವಸ್ತುವಿನ ದೃಷ್ಟಿಯಿಂದ ಏಕತೆ ಇರುತ್ತದೆ. ಆದರೆ ನಿರ್ದಿಷ್ಟ ರಚನೆ ಇರುವುದಿಲ್ಲ.

೪. ಮನರಂಜನೆ ಇವುಗಳ ಗುರಿಯಲ್ಲ. ಒಂದು ಮುಖ್ಯ ಚಿಂತನೆಯ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವುದು ಹಾಗೂ ಬರಲಿರುವ ಅಪಾಯಗಳ ವಿರುದ್ಧ ಜಾಗ್ರತರಾಗಿರುವಂತೆ ಜನರನ್ನು ಎಚ್ಚರಿಸುವುದು ಇವುಗಳ ಗುರಿ.

೫. ಇವು-ವಲಸೆ ಹೋಗುವ ಹಾಗೂ ವಿಭಿನ್ನ ಸಂಸ್ಕೃತಿಗಳಿಗೆ ಹರಿಡಿಕೊಳ್ಳುವ ಗುಣವನ್ನು ಹೊಂದಿದ್ದೂ ಸಹ ಕತೆಗಿಂತ ಹೆಚ್ಚು ಸ್ಥಳೀಯವಾಗಿದ್ದ ಸ್ಥಳೀಯ ಮಾದರಿಗಳನ್ನು ಬೆಳೆಸಿಕೊಂಡಿರುತ್ತವೆ.

೬. ಇವು ನಿಜವೆಂದು ನಂಬಲಾದ ಘಟನೆಯೊಂದನ್ನು ಕುರಿತದ್ದು, ಸಾಮಾನ್ಯರ ತರ್ಕಶೂನ್ಯ ತಿಳುವಳಿಕೆಗೆ ಸಂಬಂಧಿಸಿರುತ್ತವೆ.

೭. ಐತಿಹ್ಯಗಳು ಸಾಮಾನ್ಯ ವರದಿಯಂತೆ ಹೇಳಲ್ಪಟ್ಟಿರುವ ನಿಜವಾದ ಘಟನೆಗಳೆಂಬಂತೆ ನಿರೂಪಿಸಲಾಗಿರುವ, ವಾಸ್ತವವಾಗಿ ಅಸತ್ಯವಾದ ಜನಪ್ರಿಯ ಕತೆಗಳು.

೮. ವಿವಾದ ಗ್ರಸ್ತವಾಗುವಿಕೆ ಇವುಗಳ ಲಕ್ಷಣವಷ್ಟೇ ಅಲ್ಲ.

೯. ಐತಿಹ್ಯಗಳನ್ನು ಹೇಳುವರು ಹಾಗೂ ಕೇಳುಗ – ಇಬ್ಬರೂ ನಂಬಿರುತ್ತಾರೆ. ಈ ನಂಬಿಕೆಯೇ ಅವುಗಳ ಪ್ರಸಾರಕ್ಕೆ ಮೂಲ.

೧೦. ಇವು ಗದ್ಯ ಅಥವಾ ಪದ್ಯರೂಪದಲ್ಲೂ ಇರಬಹುದು[೭].

೨.೨ ಹುಟ್ಟು - ಬೆಳವಣಿಗೆ :-

ಜನಪದ ಸಮುದಾಯಗಳ ಒಟ್ಟು ಜೀವನ ವಿಧಾನವೇ ಸಂಸ್ಕೃತಿಯೆನ್ನುವುದಾದರೆ; ಆ ಸಮುದಾಯಗಳ ಜೀವನದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಭಾಷಿಕ, ಸಾಹಿತ್ಯಿಕ, ಆಚಾರ-ವಿಚಾರ, ನಂಬಿಕೆ, ದೈವಿ ಆರಾಧನೆ, ಜಾತ್ರೆ–ಉತ್ಸವ, ಪುರಾಣ, ಐತಿಹ್ಯಗಳಿಗೆ ಸಂಬಂಧಿಸಿದವುಗಳೆಲ್ಲವೂ ಸಂಸ್ಕೃತಿಯ ಅನಂತ ಮುಖಗಳಾಗಿರುತ್ತವೆ. ಐತಿಹ್ಯವು ಮೌಖಿಕ

ಸಂಪ್ರದಾಯದ ಮೂಲಕ ಸಾಹಿತ್ಯ ಹಾಗೂ ಸಾಹಿತ್ಯೇತರಗಳಲ್ಲಿ ಅಭಿವ್ಯಕ್ತಿಗೊಳ್ಳುವುದು. ಜನರ ಜೀವನ ವಿಧಾನ ಮತ್ತು ಮನೋಧರ್ಮವನ್ನು ಸಮರ್ಥಿಸುವ ಇವು ಒಂದಕ್ಕೊಂದು ಪ್ರೇರಕ ಮತ್ತು ಪೂರಕಗಳಾಗಿವೆ. ಹೀಗಾಗಿ ಜೀವನ ಬಿಟ್ಟು ಸಂಸ್ಕೃತಿಯಿಲ್ಲ. ಸಂಸ್ಕೃತಿ ಹೊರತುಪಡಿಸಿ ಜೀವನ ರೂಪುಗೊಳ್ಳಲು ಸಾಧ್ಯವಿಲ್ಲ. ಹೀಗೆ ಜನರ ಜೀವನ ಚರಿತ್ರೆ ಮತ್ತು ಸಂಸ್ಕೃತಿಯನ್ನು ರೂಪಿಸುವಲ್ಲಿ ಐತಿಹ್ಯಗಳು ಪ್ರಮುಖ ಪಾತ್ರ ವಹಿಸುವು. ಜನರ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಾಣ ಮಾಡುವಲ್ಲಿ ಇಂಥ ಸಾಹಿತ್ಯ ಮತ್ತು ಸಾಹಿತ್ಯೇತರ ಸಾಮಗ್ರಿಗಳಲ್ಲಿ ಒಂದಾದ ಐತಿಹ್ಯಗಳ ಉಗಮ-ವಿಕಾಸ, ನಂಬಿಕೆ, ಆಚರಣೆಗಳ ಹಿಂದೆ ಹಲವಾರು ಕಾರಣಗಳು ಇದ್ದೇ ಇರುತ್ತವೆ. ಈ ಕಾರಣಗಳು "ಉದ್ದೇಶಪೂರ್ವಕವಾಗಿ ಸಿದ್ಧವಾದದಲ್ಲ. ಅನೈಚ್ಛಿಕವಾಗಿ ಲಹರಿ ಲಹರಿಯಾಗಿ ಹೊರಹೊಮ್ಮಿರುತ್ತವೆ[೮]" ಎನ್ನಲಾಗುತ್ತದೆ. ಹೀಗೆ ಜನರ ಜೀವನದಲ್ಲಿ ನಂಬಿಕೆಗೆ ಅರ್ಹವಾಗಿರುವ ಐತಿಹ್ಯಗಳು ಸಾಂಸ್ಕೃತಿಕ ಚರಿತ್ರೆ ಕಟ್ಟುವಲ್ಲಿ ತುಂಬಾ ಮಹತ್ವದ್ದಾಗಿವೆ.

ಐತಿಹ್ಯಗಳನ್ನು ಆರಂಭದಲ್ಲಿ ಮೂಲತಃ ಧಾರ್ಮಿಕ ಕಥೆ, ಪುರಾಣಗಳಿಗೆ ಆರೋಪಿಸಿ ನೋಡಲಾಗುತ್ತಿತ್ತು ಎಂಬುದನ್ನು ಈ ಹಿಂದೆ ಗಮನಿದ್ದೇವೆ. ಅಂದರೆ ಕ್ರೈಸ್ತ ಸಾಧುಗಳ ಜೀವನ ಕಥೆಗಳನ್ನು ಚರ್ಚ್‌ಗಳಲ್ಲಿ ಪಾದ್ರಿಗಳು ಪಠಿಸುತ್ತಿದ್ದರು. ಹೀಗಾಗಿ ಐತಿಹ್ಯಗಳ ಹುಟ್ಟಿನ ಮೂಲ ಉದ್ದೇಶ ಧರ್ಮಪ್ರಸಾರ ಅಥವಾ ಧರ್ಮಕ್ಕೆ ಮಾತ್ರ ಸೀಮಿತವಾಗಿತ್ತು. ಬದಲಾದ ಸಾಮಾಜಿಕ ವ್ಯವಸ್ಥೆಯಿಂದಾಗಿ ೧೯-೨೦ನೇ ಶತಮಾನದ ಹೊತ್ತಿಗೆ ಧಾರ್ಮಿಕ ಆವರಣ ಕಳಚಿ, ಸಾಂಸ್ಕೃತಿಕ ಆಯಾಮಗಳೊಂದಿಗೆ, 'ಪರಂಪರೆಯಿಂದ ಬಂದದ್ದು' ಎಂಬ ಅರ್ಥವನ್ನು ಐತಿಹ್ಯ ಪಡೆದುಕೊಂಡಿತು. ಐತಿಹ್ಯದ ಅರ್ಥ, ವ್ಯಾಪ್ತಿ ವಿಸ್ತಾರಗೊಂಡಂತೆ ಹುಟ್ಟಿನ ಹರಿವು ಕೂಡ ವಿಸ್ತಾರಗೊಂಡಿತು.

ಐತಿಹ್ಯಕ್ಕೆ ಭೌತಿಕ ಆಕರದ ಸಾಕ್ಷಿ ಹೃದಯವಿದ್ದಂತೆ. ವ್ಯಕ್ತಿಯೋರ್ವನ ಅಸಾಮಾನ್ಯತೆಗಳ ಮತ್ತು ಪ್ರಕೃತಿಯಲ್ಲಿಯ ಅದ್ಭುತ ವೈಚಿತ್ರ್ಯಗಳನ್ನು ಸಂರಕ್ಷಿಸುವ, ಇತರರಿಗೂ ಆ ವಿಸ್ಮಯ ತಿಳಿಸುವ ಹಾಗೂ ಪೌರಾಣಿಕ ವ್ಯಕ್ತಿಗಳನ್ನು ಅಥವಾ ಘಟನೆಗಳನ್ನು ತಮ್ಮ ಊರಿನ ಪರಿಸರ ಅಥವಾ ವ್ಯಕ್ತಿ ಮಹಿಮೆ ಅಥವಾ ಕುಲಕ್ಕೆ ಶ್ರೇಷ್ಠತ್ವವನ್ನು ಆರೋಪಿಸಿಕೊಳ್ಳುವ ನಿಟ್ಟಿನಲ್ಲಿ ಐತಿಹ್ಯಗಳು ಹುಟ್ಟು ಪಡೆಯುತ್ತವೆ. ಆಗ 'ಐತಿಹ್ಯಗಳು ಪುರಾಣಗಳಾಗುತ್ತವೆ' ಎಂಬ ಅಭಿಪ್ರಾಯದ ಬದಲು, ಐತಿಹ್ಯಗಳಲ್ಲಿ ಇತಿಹಾಸ, ಚರಿತ್ರೆ ಮುಂತಾದ ಅಂಶಗಳಿರುವಂತೆ, ಪೌರಾಣಿಕ ಅಂಶಗಳೂ ಇರುತ್ತವೆ ಎಂದು ಹೇಳಬೇಕಾಗುತ್ತದೆ[೯]. ಎನ್ನುವ ಮಾತು ಐತಿಹ್ಯದ ಪೌರಾಣಿಕ ಪ್ರಜ್ಞೆಯನ್ನು ಸೂಚಿಸುತ್ತದೆ. ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ನಿಜಾಂಶವೊಂದನ್ನು ಸಾಂಪ್ರದಾಯಿಕ ಮೂಲವಸ್ತುಗಳೊಡನೆ ಕಲಾತ್ಮಕವಾಗಿ ಹೆಣೆಯಲ್ಪಟ್ಟಿರುತ್ತದೆ. ಹೀಗಾಗಿ "ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿಕಲ್ಪಿತ ದಂತಕಥೆಯೂ ಅಲ್ಲ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿಬಿಡುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ಒಂದು ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ[೧೦]. ಇದರಿಂದಾಗಿ ಐತಿಹ್ಯದಲ್ಲಿನ ಚಾರಿತ್ರಿಕ ವಿಷಯಗಳು ಲಿಖಿತ ಮಾಧ್ಯಮಗಳಿಗಿಂತ ಭಿನ್ನ ಸ್ವರೂಪವನ್ನು ತಾಳುತ್ತವೆ. ಲಿಖಿತ ಮಾಧ್ಯಮಗಳು ಪ್ರತಿಪಾದಿಸುವ ವಿಷಯದ ವಸ್ತುನಿಷ್ಠತೆಗೂ ಮೌಖಿಕ ಪರಂಪರೆಯಲ್ಲಿ ದೊರೆಯುವ ಐತಿಹ್ಯದ ವಸ್ತುನಿಷ್ಠತೆಯ ವಿಷಯಗಳಿಗೂ ಕೆಲವೊಮ್ಮೆ ಹೊಂದಾಣಿಕೆ ಕಂಡು

ಬರುವುದಿಲ್ಲ. ಐತಿಹ್ಯ ಸಮಕಾಲೀನ ಸಾಂಸ್ಕೃತಿಕ ಆಯಾಮಗಳನ್ನು ಪುನರ್ ಸೃಷ್ಟಿಯ ಸಂದರ್ಭದಲ್ಲಿ ಪಡೆದುಕೊಂಡರೂ ಕೂಡ, ಅದರ ವಾಸ್ತವ ಘಟನೆಯೊಂದು ತಳಪ್ರಮಾಣದಲ್ಲಿ ರೂಪಾಂತರಗೊಳ್ಳದೇ ಮರೆಮಾಚಿಕೊಂಡು ಬೆಳೆದು ಬಂದಿರುತ್ತದೆ. ಹೀಗಾಗಿ "ಐತಿಹಾಸಿಕ ಘಟನೆಯೊಂದು ಕಂಠಸ್ಥ ಪರಂಪರೆಯೊಂದರಲ್ಲಿ ಮೊದಲು 'ಕಿವಿಮಾತು' ಆಗಿ, ಬಳಿಕ 'ವದಂತಿ'ಯಾಗಿ, ಅನಂತರ 'ಐತಿಹ್ಯ'ವಾಗಿ ಕೊನೆಯಲ್ಲಿ ಒಂದು 'ಪುರಾಣ'ವೇ ಆಗಿ ಪರಿವರ್ತನೆಗೊಳ್ಳುತ್ತದೆ[೧೧]. ಎಂಬುದನ್ನು ಗಮನಿಸಿದರೆ ಕಂಠಸ್ಥ ಪರಂಪರೆ ನೈಜ ಘಟನೆಯೊಂದು ಹಲವು ಹಂತಗಳಲ್ಲಿ ಬೆಳೆದು ಕೊನೆಗೆ ಪೌರಾಣಿಕ ಅಂಶಗಳಿಂದಾಗಿ ಪುರಾಣದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಜನಪದರಿಗೆ ಐತಿಹ್ಯವೇ ಚರಿತ್ರೆವಾಗುವುದು.

ಮೌಖಿಕ ಚರಿತ್ರೆಯು ಜನರ ದೃಷ್ಟಿಯಲ್ಲಿ ನೈಜ ಘಟನೆಗಳ ನಿರುಪಣೆಯಾದರೆ, ಪುರಾಣ ಪವಿತ್ರವೆಂದು ನಂಬಿದ ಸತ್ಯಕಥನವಾಗಿರುತ್ತದೆ. ಹೀಗಾಗಿ ಐತಿಹ್ಯ ಪುರಾಣವಾಗಿ ಪರಿವರ್ತನೆಗೊಳ್ಳುವುದಿಲ್ಲ. ನೈಜ ಘಟನೆಗಳಲ್ಲಿನ ಕಲಾತ್ಮಕ ಅಥವಾ ಕಾಲ್ಪನಿಕತೆಯ ಅಂಶಗಳು ಯಾವುದೋ ಒಂದು ಕಾಲದ ಮೌಲ್ಯಗಳನ್ನು ಸಮಕಾಲಿನ ಬದುಕಿಗೆ ಪ್ರಸ್ತುತಗೊಳಿಸುವ, ಸಾಕ್ಷಾತ್ಕರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹುಟ್ಟನ್ನು ಪಡೆದುಕೊಳ್ಳುತ್ತವೆ. ಇಂಥ ಸಂದರ್ಭದಲ್ಲಿ "ಚಾರಿತ್ರಿಕ ಸಂಗತಿಯೊಂದು ಕಲ್ಪನೆಯಲ್ಲಿ ಹೇಗೆ ಬೇಕೋ ಹಾಗೆ ರೂಪ ತಳೆಯುತ್ತದೆ. ನಿರೂಪಕನ ಅಥವಾ ನಿರೂಪಕನ ವರ್ಗವೊಂದು ನಿಜಜೀವನದಲ್ಲಿ ಅನುಭವಿಸದೇ ಇದ್ದ ಆಸೆಗಳ ಪೂರೈಕೆಯ ಪರಿಣಾಮಕಾರಿ ಅಬಿವ್ಯಕ್ತಿಯೇ ಐತಿಹ್ಯಗಳು[೧೨]" ಎನ್ನುವಲ್ಲಿ ಐತಿಹ್ಯದ ಹುಟ್ಟನ್ನು ಗ್ರಹಿಸಬಹುದಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿನ ನಂಬಿಕೆ-ಸಂಪ್ರದಾಯ-ಆಚರಣೆ ಮುಂತಾದವುಗಳಲ್ಲಿನ ಅಸಮಾನತೆಯನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಕೆಳಸ್ತರದ ಜನಸಮುದಾಯಗಳಿಂದ ಸಂಸ್ಕೃತಿಯ ಜಡತ್ವವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಐತಿಹ್ಯಗಳು ಹುಟ್ಟಿಕೊಂಡಿರಲು ಸಾಕು. ಇಲ್ಲವೆ ವ್ಯವಸ್ಥೆಯ ಯಥಾಸ್ಥಿಯನ್ನು ಸಮರ್ಥಿಸಲು ಮೇಲುಸ್ತರದ ಜನರಿಂದ ಸಂಸ್ಕೃತಿಯ ಸ್ಥಿರೀಕರಣ ಪ್ರಕ್ರಿಯೆಯಲ್ಲಿ ಐತಿಹ್ಯಗಳು ಹುಟ್ಟನ್ನು ಪಡೆದುಕೊಳ್ಳುತ್ತವೆ. ಹೀಗೆ "ಒಂದು ಕಾಲದ ವರ್ತಮಾನದ ಅವಶ್ಯಕತೆಗಳಿಗೆ ಅನುಗುಣವಾಗಿ ಹುಟ್ಟಿ ಬೆಳೆದ ಐತಿಹ್ಯವೊಂದು, ಅನಂತರ ತಾನು ಹುಟ್ಟಿ ಬೆಳೆದ ಪರಿಸರವನ್ನೇ ನಿಯಂತ್ರಿಸುವಷ್ಟು ಪ್ರಬಲವಾಗಿ ಬೆಳೆಯಬಹುದು. ಆ ಮೂಲಕ ಸಮಾಜದ ಆರ್ಥಿಕ ರಚನೆಯಲ್ಲಿ ಮಾರ್ಪಾಡುಗಳಾಗದಂತೆ ತಡೆಗೋಡೆಯಾಗಬಹುದು. ಚರಿತ್ರೆಯ ಕೊಡುಗೆಯಾದ ಐತಿಹ್ಯಗಳು ಮುಂದೆ ಚರಿತ್ರೆಯ ನೆಲೆಗಳೂ ಆಗಿಬಿಡಬಹುದು[೧೩]".

ಗ್ರಾಮೀಣ ಜಾನಪದವನ್ನು ಅರ್ಥಮಾಡಿಕೊಳ್ಳುವುದಕ್ಕೆ ಜನಪದ ಸಂಸ್ಕೃತಿಯ ಜ್ಞಾನ ಅಪೇಕ್ಷಣೀಯವಾಗಿದೆ. ನಮ್ಮ ದೇಶಕ್ಕೆ ತನ್ನದೇ ಆದ ಸಾವಿರಾರು ವರ್ಷಗಳ ಸುದೀರ್ಘವಾದ ಸಾಂಸ್ಕೃತಿಕ ಪರಂಪರೆಯಿದೆ. ಇಷ್ಟೊಂದು ಸುದೀರ್ಘ ಪರಂಪರೆಯಲ್ಲಿನ ಅನೇಕ ಸಂಗತಿ ಘಟನೆಗಳ ಕುರಿತು ಹೆಚ್ಚಿನ ಪ್ರಮಾಣದಲ್ಲಿ ಹಾಡು, ಕಥೆ, ಪುರಾಣಗಳಂತೆ ಐತಿಹ್ಯಗಳು ಹುಟ್ಟಿ ಬೆಳೆದು ಬಂದಿರುವದನ್ನು ನಿರಾಕರಿಸುವಂತಿಲ್ಲ. ಇವು ನಮ್ಮ ಪ್ರಾಚೀನ ಜ್ಞಾನಸಂಗ್ರಹ ಮತ್ತು ಜ್ಞಾನಪ್ರಸಾರದ ಮಾಧ್ಯಮಗಳಾಗಿದ್ದವು. ಇಂಥ ಪ್ರಾಚೀನ ಕಾಲದ ಶಿಕ್ಷಣ ಸಾಧನಗಳಲ್ಲಿ ಐತಿಹ್ಯಗಳ ಪಾತ್ರ ಗಮನಾರ್ಹವಾದುದು.

ನಮ್ಮ ಜನಪದರು ಪರಂಪರಾಗತ ವಸ್ತುಗಳನ್ನು ಅತ್ಯಂತ ಪವಿತ್ರವೆಂದು ಪೂಜ್ಯ ಭಾವನೆಯಿಂದ ಕಂಡರು. ಇಂಥ ವಸ್ತುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಮತ್ತು ಪಾರಂಪರಿಕ ಸಂಸ್ಕೃತಿಯಲ್ಲಿ ಹುದುಗಿರುವ ಲೋಕಜ್ಞಾನವನ್ನು ಸಂಸ್ಕೃತಿಯ

ಮೂಲಕ ಮುಂದಿನ ಪೀಳಿಗೆಗೆ ಕಟ್ಟಿಕೊಡುವ ಹಾಗೂ ಒಗ್ಗಿಸಿಕೊಳ್ಳುವ ಪ್ರಯತ್ನದಲ್ಲಿ ಐತಿಹ್ಯಗಳು ಬೆಳೆದು ಬಂದಿವೆ. ''ಪ್ರಾಚೀನರ ಗಮನಕ್ಕೆ ಬಾರದ ವಸ್ತುವೇ ಇಲ್ಲ. ಅವನ್ನು ನೋಡಿದಾಗ ಮೂಡಿದ ಭಾವನೆಗಳು ಅವನ ಶುದ್ಧ ಸ್ವಚ್ಛಂದ ಕಲ್ಪನಾ ಪ್ರತಿಭೆಯ ಮೂಲಕ ಹೊರಬರುವಾಗ ಐತಿಹ್ಯ ಅಥವಾ ಪುರಾಣಗಳ ರೂಪ ಪಡೆಯುತ್ತವೆ[೧೪]. ಇವು ಎಷ್ಟೇ ಕಾಲ್ಪನಿಕವೇ ಆದರೂ ಆಯಾ ಕಾಲದ ಜನರ ಜೀವನವನ್ನು ಪ್ರತಿಬಿಂಬಿಸುವುದಲ್ಲದೆ. ''ಕಾಲನ ದವಡೆಯಲ್ಲಿ ಸಹಸ್ರಾರು ಐತಿಹ್ಯಗಳು ಹುಟ್ಟಬಹುದು ಕಣ್ಮರೆಯಾಗಬಹುದು, ಆದರೆ ಕೆಲವು ಆಶಯಗಳು ಮಾತ್ರ ಒಂದಿಲ್ಲೊಂದು ಎಡೆಯಲ್ಲಿ ಮತ್ತೆ ತಲೆಯೆತ್ತಿಕೊಳ್ಳುತ್ತವೆ. ಎನ್ನುವುದು ಪುರಾತನ ಸಂಸ್ಕೃತಿಯ ಚಾರಿತ್ರಿಕ ಬೆಳವಣಿಗೆಯನ್ನು ಹೇಳುತ್ತದೆ.

ಐತಿಹ್ಯಗಳ ವರ್ಗೀಕರಣ/ಪ್ರಕಾರಗಳು :-

೧. ಪ್ರಸಾರ ಆಧಾರಿತ ವರ್ಗೀಕರಣ

ಒಂದು ಐತಿಹ್ಯದ ವಿತರಣೆ ಅಥವಾ ಪ್ರಸಾರದ ದೃಷ್ಟಿಯಿಂದ ಐತಿಹ್ಯಗಳನ್ನು ಎರಡು ಬಗೆಯಾಗಿ ವಿಂಗಡಿಸಲಾಗಿದೆ :

- ಸ್ಥಳೀಯ ಐತಿಹ್ಯಗಳು : ಇವು ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದವು ಅಂದರೆ 'ಸ್ಥಳ ನಿರ್ದಿಷ್ಟತೆ' ಹೊಂದಿರುವಂಥವು (Space Specific) ಚಾರಿತ್ರಿಕ ಐತಿಹ್ಯ ೧) ಜನಪದ ನಿರುಕ್ತಿಯ ಐತಿಹ್ಯ ೨) ವಿವರಣಾತ್ಮಕ ಐತಿಹ್ಯ

  ಚುಂಚನಗಿರಿ ಸಮೀಪದ 'ಮೇದರ ಕಲ್ಲ'ವಿಗೆ ಸಂಬಂಧಿಸಿದ ಐತಿಹ್ಯ ಇಂಥ ಸ್ಥಳೀಯ ಐತಿಹ್ಯವೆಂದು ಜೀ.ಶಂ.ಪರಮಶಿವಯ್ಯ ಗುರುತಿಸುತ್ತಾರೆ.

- ವಲಸೆ ಐತಿಹ್ಯಗಳು (Migratory Legends) : ಕೆಲವು ಐತಿಹ್ಯಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಸಾರಗೊಂಡು ಮತ್ತೊಂದು ವಸ್ತು/ವ್ಯಕ್ತಿಗೆ ಆರೋಪಿಸಲ್ಪಡುತ್ತವೆ. ಇದರಿಂದಾಗಿ ವಿವಿಧ ಊರುಗಳಲ್ಲಿ ಬೇರೆ ಬೇರೆ ಸ್ಥಳಗಳಿಗೆ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಒಂದೇ ಮಾದರಿಯ ಐತಿಹ್ಯಗಳನ್ನು ನಾವು ಕೇಳಲು ಸಾಧ್ಯವಾಗುತ್ತದೆ. ಇವೇ 'ವಲಸೆ ಐತಿಹ್ಯಗಳು'. ಉದಾಹರಣೆಗೆ - ಹಸುವೊಂದು ಹುತ್ತವೊಂದರ ಮೇಲೆ ಹಾಲು ಸುರಿಸುತ್ತಿತ್ತು. ಇದನ್ನು ಕಂಡವರು ಆ ಹುತ್ತವನ್ನು ಅಗೆದು ನೋಡಿದಾಗ ಅದರಲ್ಲಿ ಒಬ್ಬ ಯೋಗಿ ಇದ್ದ ಅಥವಾ ಒಂದು ದೇವತಾ ಮೂರ್ತಿ ಇತ್ತು – ಎಂಬುದು ಇಂಥ ಒಂದು ಐತಿಹ್ಯ. ಎಡೆಯೂರು ಸಿದ್ಧಲಿಂಗೇಶ್ವರರಿಂದ ಹಿಡಿದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೇರೂರು ಗ್ರಾಮದಲ್ಲಿನ ಜೈನ ಬಸದಿಯ ಮೂರ್ತಿಯವರೆಗೆ ನೂರಾರು ಸ್ಥಳಗಳಿಗೆ ಸಂಬಂಧಿಸಿದಂತೆ ಇದೇ ಐತಿಹ್ಯ ನಮಗೆ ಕೇಳಿ ಬರುತ್ತದೆ. ಕೆರೆಗೆ ಹಾರವೂ ಇಂಥ ಒಂದು ಸಂಚಾರಿ ಐತಿಹ್ಯ[೧೫]

೨. ವಸ್ತು ಆಧಾರಿತ ವರ್ಗೀಕರಣ

- ಸೃಷ್ಟಿ ಅಥವಾ ಜಗತ್ತಿನ ಮೂಲವನ್ನು ಕುರಿತ ಐತಿಹ್ಯಗಳು

  (Legends related to the Creation or origin of the world)

- ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು

  (Legend related to Super-Human characters)

- ಐತಿಹಾಸಿಕ ಸಂಗತಿಗಳನ್ನು ಕುರಿತ ಐತಿಹ್ಯಗಳು

  (Legend related to historical matter)

ಇಲ್ಲಿ – ಮೊದಲ ಗುಂಪಿನಲ್ಲಿ – ವಿಶ್ವದ ಹಾಗೂ ಅದರ ಈಗಿನ ಸ್ಥಿತಿ ಮನುಷ್ಯ ಹಾಗೂ ಪ್ರಾಣಿಗಳ ಸೃಷ್ಟಿ ಹಾಗೂ ಸ್ಥಿತಿ ಇತ್ಯಾದಿಗಳಿಗೆ ಸಂಬಂಧಿಸಿದ ಐತಿಹ್ಯಗಳು ಬರುತ್ತವೆ. ಎರಡನೆಯ ಗುಂಪಿನಲ್ಲಿ – ಕಿನ್ನರರು, ದೆವ್ವ, ಪಿಶಾಚಿಗಳು, ರಾಕ್ಷಸರು, ಇಂಥವರಿಗೆ ಸಂಬಂಧಿಸಿದ ಐತಿಹ್ಯಗಳು ಸೇರ್ಪಡೆಯಾದರೆ, ಮೂರನೆಯ ಗುಂಪಿನಲ್ಲಿ – ಮುಖ್ಯವಾದ ಐತಿಹಾಸಿಕ ವ್ಯಕ್ತಿಗಳು, ಅಥವಾ ಘಟನೆಗಳಿಗೆ ಸಂಬಂಧಿಸಿದ ಅರೆಕಾಲ್ಪನಿಕ ಕಥೆಗಳು ಸೇರಿಕೊಳ್ಳುತ್ತದೆ.

ತಾಳ್ತಜೆ ವಸಂತಕುಮಾರರು ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳನ್ನು – ೧) ವ್ಯಕ್ತಿ ಕೇಂದ್ರಿತ, ೨) ಸ್ಥಳ ಪ್ರಧಾನ ಹಾಗೂ ೩) ಘಟನಾ ಪ್ರಧಾನ ಐತಿಹ್ಯಗಳೆಂದು ಮೂರು ಬಗೆಯಾಗಿ ವರ್ಗೀಕರಿಸಿದ್ದಾರೆ. ಇದರಲ್ಲೇ ಸ್ಥಳೀಯ ಹಾಗೂ ವಲಸೆ ಐತಿಹ್ಯಗಳನ್ನು ಗುರುತಿಸಿದ್ದಾರೆ. ಇದು ರಿಚರ್ಡ್ ಡಾರ್ಸನ್ನರ ವರ್ಗೀಕರಣ ಕ್ರಮವೇ ಆಗಿದೆ. ಕನ್ನಡ ಜಾನಪದ ಕ್ಷೇತ್ರದಲ್ಲಿ ಒಬ್ಬರಾದ ದೇ. ಜವರೇಗೌಡರು ಐತಿಹ್ಯಗಳನ್ನು – ೧) ಸ್ಥಳೀಯ ಅಥವಾ ಪ್ರಾದೇಶಿಕ ಐತಿಹ್ಯ ಹಾಗೂ ೨) ಪ್ರವಾಸೀ ಐತಿಹ್ಯಗಳೆಂದು ಎರಡು ವರ್ಗಗಳಾಗಿ ವಿಂಗಡಿಸುತ್ತಾರೆ. ಇದು ಸ್ಥಳೀಯ ಹಾಗೂ ಸಂಚಾರಿ (ವಲಸೆ) ಐತಿಹ್ಯಗಳೆಂಬ ವರ್ಗೀಕರಣವಲ್ಲದೆ ಬೇರೇನಲ್ಲ. ಇದೇ ರೀತಿ, ಐತಿಹ್ಯಗಳನ್ನು ೧) ಸ್ಥಿರ ಮತ್ತು ೨) ಅಸ್ಥಿರ ಎಂದು ಎರಡು ಗುಂಪಾಗಿ ವರ್ಗೀಕರಿಸಿಕೊಳ್ಳಬಹುದೆಂದು ಎ.ಸುಬ್ಬಣ್ಣ ರೈ ಸೂಚಿಸಿದ್ದಾರೆ. ಬೆಟ್ಟ, ಗುಡ್ಡ, ಆಕಾಶ, ನದಿ-ಇತ್ಯಾದಿ ವಸ್ತುಗಳ ಮೇಲಿನ ಐತಿಹ್ಯ ಸ್ಥಿರ ಐತಿಹ್ಯಗಳೆಂದೂ, ಸ್ವಲ್ಪ ಕಾಲದಲ್ಲೇ ನಾಶವಾಗಿ ಹೋಗಬಹುದಾದ – ಮರ ಕಟ್ಟಡ, ಸೇತುವೆ – ಇತ್ಯಾದಿಗಳ ಮೇಲಿನ ಐತಿಹ್ಯಗಳೆಲ್ಲ 'ನಶ್ವರ' ಎಂದೂ ಇವರ ಚಿಂತನೆ. ವ್ಯಕ್ತಿ ಐತಿಹ್ಯಗಳೂ ಕ್ರಮೇಣ ನಶ್ವರವಾಗುವ ಸಾಧ್ಯತೆಯೂ ಉಂಟೆಂದೂ ಇವರು ಸೂಚಿಸುತ್ತಾರೆ. ಈ ಚಿಂತನೆಯಲ್ಲಿ ಹೊಸತನವಿದೆ. ಆದರೆ ಪ್ರಯೋಜನ ಅಷ್ಟಾಗಿಲ್ಲವಾದ್ದರಿಂದ ಈ ಸೂಚನೆಯ ಕಡೆ ವಿದ್ವಾಂಸರ ಗಮನ ಹೊರಳಿಲ್ಲವೆಂದು ಕಾಣುತ್ತದೆ. ಇದೇ ರೀತಿ ಇವರು ಐತಿಹ್ಯಗಳನ್ನು ಅವುಗಳಲ್ಲಿನ ಆಶಯಗಳಿಗೆ ಅನುಗುಣವಾಗಿ ವೀರತನದ ಐತಿಹ್ಯ, ಸಾಹಸಗುಣದ ಐತಿಹ್ಯ, ತ್ಯಾಗಗುಣದ ಐತಿಹ್ಯ, ಪ್ರಾಮಾಣಿಕತೆಯ ಐತಿಹ್ಯ – ಎಂಬಿತ್ಯಾದಿಯಾಗಿ ಹದಿನೆಂಟು ವರ್ಗಗಳಾಗಿ ವಿಭಾಗಿಸಬಹುದೆಂದು ಸೂಚಿಸುತ್ತಾರೆ.[೧೬].

ಹೀಗೆ ಎರಡು ಹೊಸಬಗೆಯ ವರ್ಗೀಕರಣವನ್ನು ಅವರು ಸಲಹೆ ಮಾಡಿದ್ದರೂ ಸಹ ಸ್ವತಃ ಅವರೇ ಅದನ್ನು ಅನುಸರಿಸಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳನ್ನು ವ್ಯಕ್ತಿ, ಘಟನಾ, ಸ್ಥಳ, ಪ್ರಾಣಿ-ಪಕ್ಷಿ, ಪ್ರಕೃತಿ ವೈಚಿತ್ರ್ಯ ಹಾಗೂ ಇತರ ವಸ್ತು ಐತಿಹ್ಯಗಳೆಂದು ಆರು ವರ್ಗಗಳಾಗಿ ವಿಭಾಗಿಸಿಕೊಂಡು ಅಭ್ಯಾಸಿಸಿದ್ದಾರೆ. ಹೀಗೆ ಹೇಳಿದ್ದರೂ ಘಟನಾ ಐತಿಹ್ಯಗಳೆಂಬ ವರ್ಗವೊಂದನ್ನು ಹೇಳಲಾಗಿದೆಯಾದರೂ ಘಟನೆಗಳು ಎಲ್ಲಾ ಐತಿಹ್ಯಗಳಲ್ಲೂ ಅನಿವಾರ್ಯವಾಗಿರುವುದರಿಂದ ಆ ವರ್ಗವನ್ನಿಲ್ಲಿ ಪ್ರತ್ಯೇಕವಾಗಿ ಪರಿಗಣಿಸಲಾಗುವುದಿಲ್ಲ' ಎಂದೂ ಅಲ್ಲಿಯೇ ಹೇಳಿದ್ದಾರೆ.

ಹೀಗೆ – ಐತಿಹ್ಯಗಳನ್ನು ಕುರಿತು ಅಧ್ಯಯನ ಮಾಡಿರುವ ವಿವಿಧ ವಿದ್ವಾಂಸರು ಹಲವು ಬಗೆಯಲ್ಲಿ ಅವನ್ನು ವರ್ಗೀಕರಿಸಲು ಸಲಹೆ ಮಾಡಿರುವುದನ್ನು ಕಾಣಬಹುದು. ಜಿ.ವಿ.ದಾಸೇಗೌಡರೂ ಸಹ ತಮ್ಮ 'ಕನ್ನಡ ಐತಿಹ್ಯಗಳು' ಗ್ರಂಥದಲ್ಲಿ ಇವನ್ನು –'ಸ್ಥಳೀಯ ಸಂಚಾರಿ' ಎಂದು ವಿಭಾಗ ಮಾಡಿ ಇವುಗಳಲ್ಲಿ ಪುನಃ ಬಲಿದಾನದ ಐತಿಹ್ಯಗಳು, ಯುದ್ಧ ಸಂಬಂಧಿ ಐತಿಹ್ಯಗಳು, ಜನಪ್ರಿಯ ನಂಬಿಕೆಗೆ ಸಂಬಂಧಿಸಿದ ಐತಿಹ್ಯಗಳು, ದೇವರುಗಳಿಗೆ, ಬೆಟ್ಟ-ಗುಡ್ಡ-ಕಲ್ಲುಗಳಿಗೆ, ಸ್ಥಳನಾಮಗಳಿಗೆ- ಇತ್ಯಾದಿ ಹಲವು ಬಗೆಗಳಿಗೆ ಸಂಬಂಧಿಸಿದ ಐತಿಹ್ಯಗಳೆಂದು ವಿಭಾಗಿಸಬಹುದೆಂದು ಸೂಚಿಸಿದ್ದಾರೆ[೧೨].

ಈ ಮೇಲಿನ ಅಧ್ಯಯನಗಳನ್ನು ಆಧಾರವಾಗಿಟ್ಟುಕೊಂಡು "ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನವನ್ನು" ವಿಷಯವನ್ನು ವರ್ಗಿಕರಿಸಿಕೊಂಡು ಸ್ಪಷ್ಟಪಡಿಸುವ ಪ್ರಯತ್ನ ಮಾಡಲಾಗಿದೆ. ಈ ದಿಸೆಯಲ್ಲಿ ನಾವು ಗಮನಿಸಬೇಕಾದ ಅಂಶಗಳು ಇವು

೧) ಈ ಪ್ರದೇಶಕ್ಕೆ ಸಂಬಂಧಿಸಿದ ಐತಿಹ್ಯಗಳನ್ನೆಲ್ಲ ಒಟ್ಟಾಗಿ ಅವಲೋಕಿಸಿದಾಗ ಅವು – ವ್ಯಕ್ತಿಗಳು (ರಾಜರು, ಪಾಳೆಗಾರರು ಇತ್ಯಾದಿ). ಸ್ಥಳಗಳು ಹಾಗೂ ಘಟನೆಗಳು (ಯುದ್ಧ ರಾಜ್ಯ ಸ್ಥಾಪನೆ – ಇತ್ಯಾದಿ) ಇವುಗಳನ್ನೇ ಪ್ರಧಾನವಾಗಿ ಹೊಂದಿರುವುದು ಕಂಡು ಬರುತ್ತದೆ. ಆದ್ದರಿಂದ ಇವನ್ನು ರಿಚರ್ಡ್ ಎಂ. ಡಾರ್ಸನ್ ಮಾದರಿಯಲ್ಲಿ ವ್ಯಕ್ತಿ ಐತಿಹ್ಯಗಳು, ಸ್ಥಳ ಐತಿಹ್ಯಗಳು ಮತ್ತು ಘಟನಾ ಐತಿಹ್ಯಗಳೆಂದು ಮೂರು ಪ್ರಧಾನ ವರ್ಗಗಳಾಗಿ ವಿಂಗಡಿಸಿಕೊಳ್ಳುವುದೇ ಅನುಕೂಲಕರ. ಆದ್ದರಿಂದ ಇಲ್ಲಿ ಆ ವರ್ಗೀಕರಣವನ್ನೇ ಅನುಸರಿಸಲಾಗಿದೆ.

೨) ಪ್ರತಿಯೊಂದು ಐತಿಹ್ಯದಲ್ಲೂ ಘಟನೆ ಎಂಬುದೊಂದಿರಲೇಬೇಕು ಹಾಗೂ ಪ್ರತಿಘಟನೆಯಲ್ಲೂ ವ್ಯಕ್ತಿಯೊಬ್ಬ ಪ್ರಮುಖವಾಗಿ ಇರಲೇಬೇಕು. ಅಲ್ಲದೆ ಪ್ರತಿಯೊಂದು ಐತಿಹ್ಯಕ್ಕೂ ಒಂದು ಸ್ಥಳದ ಸಂಬಂಧವೂ ಇದ್ದೇ ಇರುತ್ತದೆ. ಹೀಗೆಂದು ಹೇಳಿ ಈ ವರ್ಗೀಕರಣವನ್ನು ತಳ್ಳಿಹಾಕಲಾಗದು. ಐತಿಹ್ಯಗಳನ್ನು ಈ ಕ್ರಮದಲ್ಲಿ ವರ್ಗೀಕರಿಸಿಕೊಳ್ಳುವಾಗ, ನಿರೂಪಕನ ದೃಷ್ಟಿಯಲ್ಲಿ ವ್ಯಕ್ತಿ/ಸ್ಥಳ/ ಘಟನೆ – ಇವುಗಳಲ್ಲಿ ಯಾವುದು ಅತಿ ಮುಖ್ಯವೋ ಆ ನೆಲೆಯಲ್ಲಿ ಅದನ್ನು ಸ್ವೀಕರಿಸಿ ಆ ಗುಂಪಿಗೆ ಅದನ್ನು ಸೇರಿಸಲಾಗಿದೆ.

೩) ಈ ಪ್ರತಿಯೊಂದು ವರ್ಗದಲ್ಲೂ ಕೆಲವು ಉಪವರ್ಗಗಳನ್ನು ಮಾಡಿಕೊಳ್ಳಲು ಸಾಧ್ಯ. ಉದಾ.ಗೆ- ವ್ಯಕ್ತಿ ಐತಿಹ್ಯಗಳಲ್ಲಿ – ಗುಲಬರ್ಗಾ ಜಿಲ್ಲೆಯ ರಾಜರಿಗೆ ಸಂಬಂದಿಸಿದ ಐತಿಹ್ಯಗಳು, ಸನ್ಯಾಸಿ ಐತಿಹ್ಯಗಳು – ಇತ್ಯಾದಿ, ಮುಂದೆ ಪ್ರತಿವರ್ಗದ ಐತಿಹ್ಯಗಳ ವಿಶ್ಲೇಷಣೆ ನಡೆದಾಗ ಈ ಉಪವರ್ಗಗಳ ವಿಭಜನೆ ಸ್ಪಷ್ಟವಾಗುವುದು.

೩. ಕನ್ನಡ ವಿಶ್ವಕೋಶದಲ್ಲಿ ದೊರೆಯುವ ವರ್ಗೀಕರಣ :-

ಕನ್ನಡ ವಿಶ್ವಕೋಶದ ಸಂಪುಟ ಮೂರರಲ್ಲಿ ಐತಿಹ್ಯಗಳನ್ನು ವಸ್ತು ನಿಷ್ಠವಾಗಿ ಮೂರು ರೀತಿಯಲ್ಲಿ ವರ್ಗೀಕರಿಸಿ ಹೇಳಲಾಗಿದೆ.

೧. ಸೃಷ್ಟಿ ಅಥವಾ ಜಗತ್ತಿನ ಮೂಲವನ್ನು ಕುರಿತಾದ ವಿವರಣಾತ್ಮಕ ಐತಿಹ್ಯಗಳು

ಉದಾ: ಸೃಷ್ಟಿಯ ಉಗಮ, ಸೂರ್ಯ, ಭೂಮಿ, ಭೂಮಿ ರೂಪಿತವಾದ ಬಗೆ, ನಕ್ಷತ್ರ ಇತ್ಯಾದಿ

೨. ಅತಿಮಾನುಷ ವ್ಯಕ್ತಿಗಳ ಕುರಿತ ಐತಿಹ್ಯಗಳು

ಉಧಾ: ಜನನಂಬಿಕೊಂಡಿರುವ ಕಿನ್ನರ ಕತೆ, ದೆವ್ವ, ಪಿಶಾಚಿ, ರಾಕ್ಷಸ ಇತ್ಯಾದಿಗಳು.

೩. ಐತಿಹಾಸಿಕ ಅಥವಾ ಮಿಥ್ಯೆಹಾಸಿಕ ಐತಿಹ್ಯಗಳು

ಉದಾ: ಸಾಹಿತ್ಯ ರಚನೆಗೈದವರು, ಹುಸಿ ಚಾರಿತ್ರಿಕ ವ್ಯಕ್ತಿಗಳು.

ಈ ವಿಭಜನೆ ಸೃಷ್ಟಿಯ ಉಗಮದ ಕುರಿತು, ಅತಮಾನುಷ ವ್ಯಕ್ತಿಗಳ ಕುರಿತು, ಐತಿಹಾಸಿಕ ವ್ಯಕ್ತಿಗಳ ಬಗೆಗೆ ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಈ ಮಾದರಿಯಲ್ಲಿಯೇ ಐತಿಹ್ಯಗಳನ್ನು ಹಿಡಿದಿಡಲಾಗಿದೆ. ಈ ವಿಭಜನೆ ಪಾಶ್ಚಾತ್ಯ ಜಾನಪದದ ವಿದ್ವಾಂಸರ ಹೇಳಿಕೆಗಳಿಗೆ ತುಂಬಾ ಹತ್ತಿರವಾಗಿ ತೋಚುತ್ತದೆ. ಅವರ ವಿಚಾರ ವಸ್ತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಭಾರತೀಯ ನಿಘಂಟು ಕೂಡಾ ಅವರ ಹೇಳಿಕೆಗಳಿಗೆ ಒಳಗಾಗಿರುವುದನ್ನು ಇವುಗಳಿಂದ ತಿಳಿದುಕೊಳ್ಳಲು ಸಾಧ್ಯ. ಪರಿಪೂರ್ಣವಾಗಿ ಐತಿಹ್ಯಗಳ ಒಟ್ಟು ಚಿತ್ರಣ ಕಣ್ಣಮುಂದೆ ಬರುವುದಿಲ್ಲ. ಸೃಷ್ಟಿ ಒಳಗೊಂಡಿವೆ. ಇನ್ನೊಂದರಲ್ಲಿ ಅತಿಮಾನುಷ ಅಂದರೆ, ರಾಕ್ಷಸ, ಕಿನ್ನರಕತೆಗಳು, ದೆವ್ವ, ಪಿಶಾಚಿಗಳು ಎಂದು ಸೀಮಿತವಾಗಿಟ್ಟುಕೊಂಡು ಆಯ್ಕೆಮಾಡಿಕೊಳ್ಳಲಾಗಿದೆ. ಅದು ಕನ್ನಡ ವಿಶ್ವಕೋಶದಲ್ಲಿ ಐತಿಹ್ಯಗಳನ್ನು ವಿತರಣೆ ಮತ್ತು ಪ್ರಸಾರಣದ ದೃಷ್ಟಿಯಲ್ಲಿಕೊಂಡು ಎರಡು ರೀತಿಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ.

೧. ಸ್ಥಳೀಯ

೨. ವಲಸೆಯ ಐತಿಹ್ಯಗಳು

ಮತ್ತೆ ಸ್ಥಳೀಯ ಐತಿಹ್ಯಗಳಲ್ಲಿ ಆರು ಒಳಪ್ರಕಾರಗಳು ಕಂಡು ಬರುತ್ತವೆ.

೧. ಪ್ರವಾಹ ಐತಿಹ್ಯ

೨. ಬಲಿಗಳ ಐತಿಹ್ಯ

೩. ಕೌಟುಂಬಿಕ ಐತಿಹ್ಯ

೪. ಚಾರಿತ್ರಿಕ ಐತಿಹ್ಯ

೫. ಜನಪದ ನಿರುಕ್ತಿಯ ಐತಿಹ್ಯ

೬. ವಿವರಣಾತ್ಮಕ ಐತಿಹ್ಯ

ಈ ವಿಭಜನೆ ಪ್ರಸರಣಾ ದೃಷ್ಟಿಯಿಂದ ತುಂಬಾ ಉಪಯುಕ್ತವಾದದ್ದು. ಆದರೆ ಇವು ಐತಿಹ್ಯಗಳ ಆಗತ್ಯತೆಯನ್ನು ಸರಳವಾಗಿ ತಿಳಿಸುವಲ್ಲಿ ತುಂಬಾ ತೊಂದರೆಯುಂಟು ಮಾಡುತ್ತವೆ. ಪ್ರವಾಹಗಳಿಗೆ ಸಂಬಂಧಿಸಿದಂತೆ ಅತಿಯಾಗಿ ಐತಿಹ್ಯಗಳು ದೊರೆಯುತ್ತವೆ. ಅವುಗಳ ಹುಟ್ಟಿನ ಕುರಿತು ಋಷಿ-ಮುನಿಗಳಿಂದ ಅನೇಕ ತೀರ್ಥಗಳು, ಕೆರೆ, ಕೊಳ್ಳ ಪ್ರಸಿದ್ಧ ಹೊಂದಿವೆ. ಬಲಿಗಳಿಗೆ ಸಂಬಂಧಿಸಿದ ಐತಿಹ್ಯ ಸಾಕಷ್ಟು ದೊರೆತರು, ಕೆಲವೊಂದು ಜನಪ್ರಿಯ ಪಡೆದ ಕೆರೆಗೆ ಹಾರ ಕೊಟ್ಟ ಐತಿಹ್ಯಗಳು ಕೆರೆಗೆ ಬಲಿಕೊಟ್ಟ ನಂತರ ಆ ಕೆರೆಗೆ ನೀರು ಬಂದಿದ್ದು, ಹೀಗೆ ಐತಿಹ್ಯಗಳ ಮೂಲಕ ಸತ್ಯಾಂಶದಿಂದ ಪಡೆದುಕೊಳ್ಳಲು ಸಾಧ್ಯ. ಈ ವಿಭಜನೆಯಲ್ಲಿ ಮೂಡಿದ ಐತಿಹ್ಯಗಳು ತುಂಬಾ ಉಪಯುಕ್ತ ಹಾಗೂ ವ್ಯಾಪಕವಾಗಿ ಜನಪದರಿಂದ ಕಲ್ಪಿಸಿಕೊಡುತ್ತವೆ.

೨.೩ ಜಾಗತಿಕ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ :-

ಜನಪದ ಸಾಹಿತ್ಯದ ಹುಡುಕುವಿಕೆಗೆ ಅವಿರತ ಪ್ರಯತ್ನದಿಂದ ತಮ್ಮನ್ನು ತಾವು ಗಂಭೀರವಾಗಿ ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಅನುವುಮಾಡಿಕೊಟ್ಟವರು, ವಸಾಹತುಶಾಹಿ ಗುಂಪಿನಿಂದ ಸಾಧ್ಯವಾಯಿತು. ಪ್ರತಿಯೊಂದು ದೇಶವು ತಮ್ಮ ನೆಲವನ್ನು ಆಳುತ್ತಿದ್ದವರ ವಿರುದ್ಧ ಸೆಣಸಾಡಲು ತಮ್ಮಲ್ಲಿರುವ ಜನರ ನಾಯಕನನ್ನು ಎದುರಿಟ್ಟುಕೊಂಡು, ಕಳೆದುಕೊಂಡ ಹಾಗೂ ಸಾಂಸ್ಕೃತಿಕ ಅನೋನ್ಯತೆಯನ್ನು ಕಂಡುಕೊಳ್ಳಲು ಸ್ವಾತಂತ್ರ್ಯ ಪಡೆದುಕೊಳ್ಳಲು ಜನಸಾಮನ್ಯರನ್ನು ಒಂದುಗೂಡಿಸುವ ಕೆಲಸ ಮೊದಲು ಮಾಡಿದರು. ಇದರ ಪರಿಣಾಮದಿಂದ ಜರ್ಮನಿ, ಫಿನ್ಲೆಂಡ್, ಫ್ರಾನ್ಸ್, ಅಮೇರಿಕಾ ಮೊದಲಾದ ದೇಶಗಳಲ್ಲಿ ಜಾನಪದದ ಸಂಗ್ರಹ ಮತ್ತು ಸಂಪಾದನಾ ಕಾರ್ಯದಲ್ಲಿ ತಮ್ಮನ್ನು ತಾವು ಗಂಭೀರವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು.

ಇಂಗ್ಲೀಷರು ಪ್ರಪಂಚದ ಬಹುಪಾಲು ನಾಡುಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ವ್ಯವಸ್ಥಿತವಾಗಿ ಆಳ್ವಿಕೆ ಮಾಡತೊಡಗಿದರು. ಆಗ ಅವರಿಗೆ ಅಲ್ಲಿನ ನೆಲದ ಕೆಲವೊಂದು ಸಮಸ್ಯೆಗಳು ಕಂಡವು. ಅವುಗಳಲ್ಲಿ ಸ್ಥಳೀಯ ಮತ್ತು ಐತಿಹ್ಯ, ಪುರಾಣಗಳು ಪ್ರಮುಖವಾದವು. ಅನ್ಯ ಸಂಸ್ಕೃತಿಯ ಜನರನ್ನು ತಮ್ಮ ಆಡಳಿತಕ್ರಮಕ್ಕೆ ಒಳಪಡಿಸುವುದಕ್ಕೆ ಭಾಷೆಯ ಮುಖಾಂತರ ಐತಿಹ್ಯವನ್ನು ಅರಿತುಕೊಳ್ಳುವುದು ಸಾಧ್ಯವಾಯಿತು. ಅವರ ಬದುಕಿನ ಚಿತ್ರಣವನ್ನು ಇಂಥ ಐತಿಹ್ಯಗಳ ಮೂಲಕ ಪಡೆದುಕೊಳ್ಳಲು, ಅದರಲ್ಲಿ ಹುದುಗಿರುವ ಮೌಲಿಕ ವಿಚಾರವನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಲು ಐತಿಹ್ಯದ ಅಧ್ಯಯನ ಅನಿವಾರ್ಯವಾಯಿತು. ಐತಿಹ್ಯಗಳ ಕುರಿತು ಜಾನದ ವಿದ್ವಾಂಸ ಗಂಭೀರವಾಗಿ ಗ್ರಹಿಸಿಕೊಂಡ ಬಗೆಯನ್ನು ಸಂಕ್ಷೇಪ್ತವಾಗಿ ವಿವೇಚಿಸುವ ಕೆಲಸಮಾಡಲಾಗಿದೆ. ಜರ್ಮನ್ ಭಾಷೆಯಲ್ಲಿ 'ಸಾಗೆ' (SAGEN) ಎಂದೂ, ಆಂಗ್ಲ ಭಾಷೆಯಲ್ಲಿ 'ಲೆಜೆಂಡ್' (Legend) ಎಂದು ಬಳಕೆಗೊಳ್ಳುತ್ತಾ. ಅಲ್ಲಿನ ಜನಪದ ಅಂಶಗಳನ್ನು ಅರ್ಥೈಯಿಸಿಕೊಳ್ಳುವುದರ ಜೊತೆಗೆ ಸಾಂಸ್ಕೃತಿಕ ವೀರರನ್ನು ಪರಿಚಯಿಸುವ ಮಹತ್ತಕಾರ್ಯ ಮೊದಲು ಮಾಡಿದರು. ಇಡೀ ಜಗತ್ತಿನಲ್ಲಿ ಐತಿಹ್ಯಗಳ ಕುರಿತು ನಡೆದಿರುವ ಅಧ್ಯಯನದ ಮೂಲಕ ಬೆಳಕು ಹರಿಸಲಾಗಿದೆ.

ಸ್ಪ್ಯಾನಿಷ್ ಜಾನಪದ ವಿದ್ವಾಂಸರಾದ ಭಾಗ್ಸ್ ಅವರ ಪ್ರಕಾರ 'ಲೆಜೆಂಡ್' ಅಂದರೆ "ನಿರ್ದಿಷ್ಟ ವ್ಯಕ್ತಿ,, ಸ್ಥಳ, ವಸ್ತುಗಳಿಗೆ ಸಂಬಂಧಪಟ್ಟ ಕಥೆ" ಎಂದಿದ್ದಾರೆ. ಇನ್ನೊಂದೆಡೆ "ವ್ಯಕ್ತಿ, ಸ್ಥಳ ಘಟನೆಗಳಿಗೆ ಸಂಬಂಧಿಸಿದಂತೆ ನಡೆದವುಗಳೆಂದೇ ಹೇಳಲಾಗುವ, ಯಾವುದೇ ನಿರ್ದಿಷ್ಟ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ವಿಷಯಗಳೂ ಸೇರಿ ಹುಟ್ಟಿರುವ ನಿರೂಪಣೆ" ಎಂದಿದೆ. " ಲೆಜೆಂಡ್" ಮೂಲತಃ ಲ್ಯಾಟಿನ್ ಪದ, ಅಲ್ಲಿ ಅದಕ್ಕೆ "Things to be read" ಎಂಬ ಅರ್ಥವಿದೆ. ಫ್ರೆಂಚ್ ಭಾಷೆಯಲ್ಲಿಯೂ ಇದೇ ಅರ್ಥ ಉಳಿದು ಬೆಳೆದುಕೊಂಡು ಬಂದಿದೆ. ಇವು ಪ್ರಾರ್ಥನಾ ಮಂದಿಗಳಲ್ಲಿ ಪಠಣ ಮಾಡಬಹುದಾದ ವಿಷಯಗಳಾಗಿದ್ದವು. ಆ ಕಾರಣಕ್ಕೇನೆ ಪಠಣ ಮಾಡಬಹುದಾದ ವಿಚಾರಗಳಿಗೆ ಬೈಬಲನ್ನು ಅಥವಾ ಸಾಧುಸಂತರ ಜೀವನ ಚರಿತ್ರೆಯನ್ನು ಆಧಾರವಿಟ್ಟುಕೊಳ್ಳಲಾಗಿತ್ತು[೧೮].

"ಮಧ್ಯಯುಗೀನ ಇಂಗ್ಲಿಷ್ ಬರಹಗಾರರು 'ಲೆಜೆಂಡ್' ಎಂಬ ಪದವನ್ನು ಮೇಲಿನ ಅರ್ಥದಲ್ಲಿಯೇ ಬಳಸಿಕೊಂಡಿದ್ದನ್ನು ಗಮನಿಸಿ, ಆಂಗ್ಲ ಭಾಷೆಯ ನಿಘಂಟುಗಳಲ್ಲಿ ಅದೇ ಅರ್ಥವನ್ನು ಉಳಿಸಿಕೊಳ್ಳಲಾಯಿತು. ಕ್ರಿ.ಶ. ೧೩ನೇ

ಶತಮಾನದ್ದು ಎನ್ನಲಾದ Golden Legend ಸಂಪಾದಕ: ಜಾಕಬ್ಸ್ ಡೇ ವರ್ಗಿಸ್ ಎಂಬ ಸಂಕಲನವೊಂದರಲ್ಲಿ ಸಾಧುಗಳ ಕಥೆ ಮಾತ್ರ ಅಡಕವಾಗಿರುವುದು ಈ ನಿಟ್ಟಿನಿಂದ ಸಕಾರಣವಾಗಿದೆ. ಕ್ರೈಸ್ತ ಸಾಧುಗಳ ಜೀವನ ಕಥನವನ್ನು ಚರ್ಚ್‌ಗಳಲ್ಲಿ ಆಕರ್ಷಕವಾಗಿ ವಿವರಿಸುವಾಗ, ಅವು ಪ್ರಧಾನವಾಗಿ ನೀತಿಬೋಧಕ ಕತೆಗಳ ರೂಪವನ್ನು ತಾಳಿದವು''.

ಚಾರಿತ್ರಿಕವಾಗಿ ಲೆಜೆಂಡ್ ಪದದ ಅರ್ಥ ಒಂದೇ ರೀತಿಯಾಗಿ ಸ್ಥಿರವಾಗಿ ಉಳಿಯಲಿಲ್ಲ. ಅದು ವಿಭಿನ್ನ ರೂಪ ತಾಳುತ್ತ ಸಾಗತೊಡಗಿತು. ಪಾಶ್ಚಾತ್ಯ ದೇಶಗಳಲ್ಲಿ ಜಾನಪದ ಅಧ್ಯಯನ ಬೆಳೆದು ಬಂದಂತೆ ಆದರ ಅರ್ಥದಲ್ಲಿ ವ್ಯತ್ಯಾಸವಾಗುತ್ತ ಸಾಗಿತು. ಮೊದಲಿನ 'ಸಾಧುಸಂತರ ಜೀವನ ಕಥೆ' ಎಂಬ ಅರ್ಥವನ್ನು ಉಳಿಸಿಕೊಂಡು ಅದು ಇನ್ನಷ್ಟು ತನ್ನ ಪರಧಿಯನ್ನು ವಿಸ್ತರಿಸಿಕೊಂಡಿತು. ಈ ಮಾದರಿಯಲ್ಲಿ ಐತಿಹ್ಯಗಳು ಹೆಚ್ಚಾಗಿ ಅಧ್ಯಯನಕ್ಕೆ ಸೂಕ್ತ ದಾರಿಮಾಡಿಕೊಟ್ಟವೆ.

ಲಂಡನ್ನಿನ ಆಸ್ಪತ್ರೆಯೊಂದರಲ್ಲಿ ಗುಮಾಸ್ತನಾಗಿದ್ದ ಥಾಮ್ಸ್ ವಿಲಿಯಂ ಜಾನ್ ಈತ ಒಬ್ಬ ಬ್ರಿಟಿಷ್ ಪ್ರಾಚೀನಾನ್ವೇಷಕ, ಮೊಟ್ಟಮೊದಲ ಬಾರಿಗೆ ೧೮೪೬ರಲ್ಲಿ Folklore ಎಂಬ ಆಂಗ್ಲೋ ಸ್ಯಾಕ್ಸನ್ ಶಬ್ದವೊಂದನ್ನು ಟಂಕಿಸಿ ಹೊರ ತಂದನು. ೧೮೩೪ರಲ್ಲಿ Lays and Legends of France, Sain, Tartary and Ireland ಎಂಬ ಕೃತಿಯನ್ನು Lays and Legends of Germany ಎಂಬ ಗ್ರಂಥ ಕುರಿತು ಅಂಥದೇ ಇನ್ನೊಂದು ಕೃತಿಯನ್ನು ಪ್ರಕಟಿಸಿದ್ದು ಗಮನಾರ್ಹ ಸಂಗತಿ, ಐತಿಹ್ಯಗಳ ಅಧ್ಯಯನಕ್ಕೆ ಈ ಕೃತಿಗಳು ಹೆಚ್ಚಿನ ನೆರವನ್ನು ಒದಗಿಸಿಕೊಟ್ಟಿವೆ. ಜೊತೆಗೆ ಐತಿಹ್ಯಗಳ ಪರಿಕಲ್ಪನೆ ಕೂಡ ಹೆಚ್ಚಿಸುವ ಪ್ರಯತ್ನ ಎಲ್ಲಾ ದೇಶಗಳಲ್ಲಿ ವ್ಯಾಪಕವಾಗಿ ನಡೆದಿದೆ. ಆಧುನಿಕ ಜಾನಪದ ಅಧ್ಯಯನಕ್ಕೆ ಥಾಮ್ಸನ್ ನೀಡಿರುವ ಕೊಡುಗೆ ಅಪೂರ್ವವಾದುದು. ಅವರು ಲೆಜೆಂಡ್ ಕುರಿತು "Legend and Traditions (ಐತಿಹ್ಯ ಮತ್ತು ಸಂಪ್ರದಾಯಗಳು) ಎಂಬುದನ್ನು ಸರಳ ಕಥೆಗಳ ನಾಲ್ಕು ಪ್ರಭೇದಗಳಲ್ಲಿ ಒಂದಾಗಿ ಗುರುತಿಸುತ್ತಾರೆ''.

ಅಮೆರಿಕಯ ಮಾನವ ವಿಜ್ಞಾನಿ ಮರಿಯಾ ಲೀಚ್ ಅವರು ೧೯೪೯ ರಲ್ಲಿ ಹೊರತಂದ Standard dictionary of folklore, Mythology and Legend. ಗ್ರಂಥದ ಸಂಪಾದಕರಾಗಿದ್ದಾರೆ. ಈ ಕೋಶವು ಜಾನಪದಕ್ಕೆ ಸಂಬಂಧಿಸಿದ ಮೊದಲನೆಯ ಗ್ರಂಥವಾಗಿದೆ. ಇದರಲ್ಲಿ ಬಹುವಿಧದ ಜಾನಪದ ಪ್ರಕಾರಗಳನ್ನು ಸುವ್ಯವಸ್ಥಿತವಾಗಿ ತಿಳಿಸಿಕೊಡಲಾಗಿದೆ. 'Christiansen Readr' ಅವರು ೧೯೫೮ರಲ್ಲಿ 'The Migratory Legends' ಎಂಬ ಗ್ರಂಥದಲ್ಲಿ ಐತಿಹ್ಯಗಳ ಬಗೆಗೆ ಸ್ಪಷ್ಟವಾದ ಪರಿಕಲ್ಪನೆ ಮಾಡಿಕೊಡುತ್ತದೆ. ಜೊತೆಗೆ ಅಧ್ಯಯನವನ್ನು ಐತಿಹ್ಯದ ನೆಲೆಯಲ್ಲಿ ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ. ಬೇರೆ ದೇಶಗಳಲ್ಲಿರುವ ಐತಿಹ್ಯಗಳಿಗೆ ಈ ಗ್ರಂಥಗಳು ಮಾದರಿಯಾಗಿ ನಿಲ್ಲುತ್ತವೆ. ಗ್ರಿಮ್ ಸಹೋದರರು ಮತ್ತು ರಿಚರ್ಡ್‌ಡಾರ್ಸ್ಸನ್ ಇನ್ನೂ ಮುಂತಾದವರು ಐತಿಹ್ಯಗಳ ಬಗೆಗೆ ಗಂಭೀರವಾಗಿ ಚಿಂತನಗೈದು, ಆಯಾ ದೇಶಗಳಲ್ಲಿ ವ್ಯಾಪಿಸಿಕೊಂಡಿರುವ ಐತಿಹ್ಯಗಳ ಆಧಾರದ ಮೇಲೆ ವಿಭಜಿಸಿ ತಿಳಿಸಿದ್ದಾರೆ. ವ್ಯಕ್ತಿ, ಸ್ಥಳ, ಮತ್ತು ಘಟನಾ ಐತಿಹ್ಯಗಳೆಂದು ಡಾರ್ಸ್ಸನ್‌ರು ವಿಭಜಿಸಿದ್ದು, ಇದೇ ಮಾದರಿ ಎಲ್ಲರೂ ಬಳಸಿಕೊಂಡು ಅಧ್ಯಯನ ಕೈಗೊಂಡಿದ್ದಾರೆ. ಹೀಗೆ ಲೆಜೆಂಡ್ ಕುರಿತು ಅರ್ಥೈಯಿಸಿಕೊಂಡ ಬಗೆಯಲ್ಲಿ ಜಾನಪದ ವಿದ್ವಾಂಸರು ತಮ್ಮ ನಿಲುವನ್ನು ವ್ಯಕಪ್ತಡಿಸಿದ್ದಾರೆ. ಅಲ್ಲಿ ಬಳಕೆಯಾದದ್ದು ಸಾಧುಸಂತರ ಕಥೆ, ಜನಪ್ರಿಯ ಕಥೆ, ಅವಾಸ್ತಕಥೆ ಎಂದು ರೂಢಿಯಲ್ಲಿದೆ. ಜಾಗತಿಕ ನೆಲೆಯಲ್ಲಿ ಐತಿಹ್ಯಗಳ ನೋಟ ಸ್ಥೂಲವಾಗಿ ಪರಿಕಲ್ಪಸುವ ಕೆಲಸ ಮಾಡಿದ್ದಾರೆ. ಹಲವು ಅಧ್ಯಯನಗಳ ಮಾದರಿಯನ್ನು ಐತಿಹ್ಯವು ಅನುಸರಿಸಿಕೊಂಡು

ಬೆಳೆದು ಬಂದಿತು. ಸಾಹಿತ್ಯದ ದೃಷ್ಟಿಯಲ್ಲಿ 'ಐತಿಹ್ಯ' ದ ಬಳಕೆ ಮತ್ತು ಪ್ರಸಾರದೊಂದಿಗೆ ಸಾಹಿತ್ಯ ಜೀವಂತವಾಗಿ ಉಳಿಯಲು ಸಾಧ್ಯವಾಯಿತು[೧೯].

೨.೪ ಭಾರತೀಯ ನೆಲೆಯಲ್ಲಿ ಐತಿಹ್ಯಗಳ ಪರಿಕಲ್ಪನೆ:-

ಭಾರತೀಯರಲ್ಲಿ ಐತಿಹ್ಯಗಳ ಬಗೆಗೆ ಪಾಶ್ಚಾತ್ಯರ ಅಧ್ಯಯನಕ್ಕಿಂತ ಪೂರ್ವದಲ್ಲೇ ಈ ಪದ ಬಳಕೆಯಲ್ಲಿತ್ತು ಎಂಬುದು ಈ ಕೆಳಗಿನ ಹೇಳಿಕೆಯಿಂದ ಅರಿವಾಗುತ್ತದೆ. ನಾಚಿರಾಜನ ಪ್ರಕಾರ ಐತಿಹ್ಯಕ್ಕೆ ಪ್ರಮಾಣ ಬೇಡ, ನಿಜಗುಣ ಶಿವಯೋಗಿಯ ಪ್ರಕಾರ ಲೋಕವಾರ್ತೆಯೇ ಐತಿಹ್ಯಕ್ಕೆ ಪ್ರಮಾಣ ಸುಮಾರು ೧೪-೧೫ನೇಯ ಶತಮಾನದಲ್ಲಿ ಇಂಥಹ ಚರ್ಚೆ ನಡೆದಿರುವುದನ್ನು ಗಮನಿಸಿದರೆ, ಪಾಶ್ಚಾತ್ಯ ಜಾನಪದ, ವಿದ್ವಾಂಸರ ಅಧ್ಯಯನಕ್ಕಿಂತ ಸಾಕಷ್ಟು ಮುಂಚೆಯೇ 'ಐತಿಹ್ಯ'ದ ಬಗೆಗೆ ಪರಿಕಲ್ಪನೆ ಮೂಡಿರುವುದು ಖಚಿತವಾಗುತ್ತದೆ. ಐತಿಹ್ಯಗಳು ಅತ್ಯಂತ ಪ್ರಾಚೀನ ಹಾಗೂ ಮೌಲಿಕ ಸಾಹಿತ್ಯವಾಗಿ ರೂಪುಗೊಂಡಿದೆ. ಅದಕ್ಕೆ ಮೂಲ ಜನಪದರೇ ಸಾಕ್ಷಿಯಾಗಿ ನಿಂತಿದ್ದಾರೆ. ಒಂದು ಪ್ರದೇಶದ ಕುರುಹುಗಳ ಮೂಲಕ ಜನಪದ ಇತಿಹಾಸವನ್ನು ತಿಳಿಸುವ ಪ್ರಮಾಣ ಮಾಡುತ್ತದೆ. ಹಾಗೆ ಐತಿಹ್ಯ ಮತ್ತು ಇತಿಹಾಸ ಒಂದೇ ಮೂಲದ ಸಂಸ್ಕೃತ ಪದಗಳಾಗಿ ಮೂಡಿಬಂದಿವೆ. 'ಹೀಗೆ ಇತ್ತು' ಎಂಬುದು ಅದರ ಸಾಮಾನ್ಯ ಅರ್ಥ. ಇವು ಪೂರ್ಣವಾಗಿ ಭೂತಕಾಲಕ್ಕೆ ಸೇರಿದವುಗಳಾಗಿವೆ. ಈ ಬಗೆಗೆ ಎ.ಕೆ. ಘೋಷ್ ಅವರು ತಮ್ಮ ಕೃತಿಯಲ್ಲಿ ಇವುಗಳ ಬಗೆಗೆ ಸರಿಯಾಗಿ ಗ್ರಹಿಸಿಕೊಂಡು ತಿಳಿಸಿಕೊಟ್ಟಿದ್ದಾರೆ.

Legends from Indian History ಎಂಬ ಕೃತಿಯೊಂದರಲ್ಲಿ ಹೀಗೆ ಹೇಳಿದ್ದಾರೆ.

Legends tell us not only what people did, but why they did it ? see the ideas behind this action (GHOSH.1985: Introducation) ಮೇಲಿನ ಹೇಳಿಕೆಯಿಂದ ಐತಿಹ್ಯಗಳ ಹಿಂದೆ ಒಂದು ಚಿಂತನೆ ಗುಪ್ತವಾಗಿ ಬೆರೆತಿದೆ. ಅವರು ಕೈಗೊಂಡ ಮಹತ್ವದ ಕಾರ್ಯಗಳು ಹೇಳುವುದು ಅಷ್ಟೇ ಅಲ್ಲದೆ, ಅವುಗಳು ಹೇಗೆ, ಯಾತಕ್ಕಾಗಿ ? ಹುಟ್ಟಿಕೊಳ್ಳುತ್ತವೆ ಎನ್ನುವ ಕುರಿತು ತಿಳಿಸುತ್ತವೆ. ನಾವು ಅವುಗಳ ಹಿಂದಿನ ವಿಚಾರ ಮತ್ತು ಕಾರ್ಯಗಳನ್ನು ಕಂಡುಕೊಳ್ಳಬಹುದು.

ಭಾರತೀಯ ಚಿಂತನೆಯಲ್ಲಿ ಐತಿಹ್ಯವೇ ಚರಿತ್ರೆ ಅಥವಾ ಇತಿಹಾಸವೆಂದು ಬಳಕೆಯಾಗುತ್ತದೆ. "ಐತಿಹ್ಯವು ಇತಿಹಾಸಕ್ಕೆ ಸಮೀಪವರ್ತಿಯಾದುದು" (DEGH:1932:72) ಚರಿತ್ರೆಯ ನಿರ್ಮಿತಿಯಂತೆ ಇಲ್ಲಿ ಕೂಡಾ ಭೌತಿಕ ಆಧಾರವೊಂದನ್ನು ಅದರ ಮೂಲ ಸ್ವರೂದಲ್ಲಿಯೇ ಹಿಡಿದಿಟ್ಟುಕೊಳ್ಳಲಾಗುವುದು. ಕಿಟೆಲ್ ನಿಘಂಟುವಿನಲ್ಲಿ 'ಐತಿಹ್ಯ' ವು 'ಇತಿಹ' ದಿಂದ ಬಂದಿತೆಂಬುದನ್ನು ಹೇಳಿ ಅದಕ್ಕೆ Oral tradition, a legend, a tale ಎಂಬಿತ್ಯಾದಿ ಅರ್ಥಗಳನ್ನು ಕೊಡಲಾಗಿದೆ. ಒಂದು ಪ್ರದೇಶದ ಸರ್ವತೋಮುಖವಾದ ಅಭಿವೃದ್ಧಿ ಆ ಪ್ರದೇಶದ ಬದುಕಿನ ಮೇಲೆ ಹೆಚ್ಚು ಅವಲಂಬಿಸಿರುತ್ತದೆ. ಕರ್ನಾಟಕದಲ್ಲಿ ಇಂಥಹ ಅದ್ಭುತ ಜನಪದ ಖಣಿಯಿಂದ ಒಳಗೊಂಡ ಕಥೆ, ಐತಿಹ್ಯ, ಪುರಾಣ, ಒಗಟು ಮುಂತಾದ ಪ್ರಕಾರಗಳು ತುಂಬಾ ವ್ಯಾಪಕವಾಗಿ ಅಧ್ಯಯನ ನಡೆದಿವೆ. ಐತಿಹ್ಯ ಕುರಿತು ಜಾನಪದ ವಿದ್ವಾಂಸರು ತಮ್ಮದೆ ಆದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಶಿವರಾಮ ಕಾರಂತರು ಐತಿಹ್ಯವನ್ನು 'ಇತಿಹಾಸಕ್ಕೆ ಸಂಬಂಧಿಸಿದ ಚರಿತ್ರೆ' ಎಂದಿದ್ದಾರೆ. ದೇ. ಜವರೇಗೌಡರು

‘ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟು ಕಥೆಗಳೇ ಐತಿಹ್ಯಗಳಾಗುತ್ತವೆ’ ಎಂದಿದ್ದಾರೆ. ವಸಂತಕುಮಾರ ತಾಳ್ತಜೆ ಅವರು ಐತಿಹ್ಯ ಕುರಿತು ಹೀಗೆ ಹೇಳುತ್ತಾರೆ – ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿ ಕಲ್ಪಿತ ದಂತಕತೆಯೂ ಅಲ್ಲ, ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರುತ್ತದೆ. ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿ ಬಿಡುತ್ತಾನೆ. ಆ ಪರಿಷ್ಕøತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ಒಂದು ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ ಎಂದಿದ್ದಾರೆ. ಐತಿಹ್ಯಗಳ ಕುರಿತು ಭಾರತೀಯ ಜಾನಪದ ವಿದ್ವಾಂಸರು ತಮ್ಮ ವಿಚಾರವನ್ನು ಆದಷ್ಟು ವ್ಯವಸ್ಥಿತವಾಗಿ ನಿರೂಪಿಸುವ ಕೆಲಸ ಮಾಡಿದ್ದಾರೆ[೨೦].

೨.೫ ಇತರ ಶಾಸ್ತ್ರಗಳೊಂದಿಗೆ ಸಂಬಂಧ:-

ಐತಿಹ್ಯವು ಹಲವಾರು ಶಾಸ್ತ್ರ ಸಾಹಿತ್ಯಗಳೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಪ್ರಮುಖವಾಗಿ ಇತಿಹಾಸ, ಕಥೆ, ಪುರಾಣ ಹಾಗೂ ಪವಾಡಗಳೊಂದಿಗೆ ಹತ್ತಿರದ ಸಂಬಂಧ ಹೊಂದಿದೆ. ಐತಿಹ್ಯವು ಕೇವಲ ಅವಾಸ್ತವವೆಂದು ಸಾಹಿತ್ಯದ ಅಂಶಗಳನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಬೇಕಾದುದು ಅಗತ್ಯವಾದುದು. ಐತಿಹ್ಯವನ್ನು ಕೇವಲ ಯಾವುದೋ ಒಂದು ಶಾಸ್ತ್ರವೆಂದು, ಸಾಹಿತ್ಯವೆಂದು ಗುರುತಿಸುವುದು ಸಮಂಜಸವಲ್ಲ. ಅದು ಸಕಲ ಕಲಾವಲ್ಲಭನಿದ್ದಂತೆ. ಎಲ್ಲಾ ಅಂಶಗಳು ಅದರಲ್ಲಿ ಮಿಳಿತವಾಗಿರುತ್ತವೆ. ಈ ತೆರನಾಗಿ ಇದು ತನ್ನದೇಯಾದ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿದೆ.

೧. ಐತಿಹ್ಯ ಮತ್ತು ಜನಪದ ಕಥೆ :-

ಐತಿಹ್ಯಗಳ ವಸ್ತು ಮತ್ತು ನಿರೂಪಣಾ ವಿಧಾನಗಳು ಕಥಾ ಸಾಹಿತ್ಯಕ್ಕೆ ತುಂಬಾ ಹತ್ತಿರವೆಂದೆನಿಸಿದರೂ ಕೂಡ ವ್ಯಾಪ್ತಿಯಲ್ಲಿ ಅಂತರವಿದೆ. ಕಥೆಯಲ್ಲಿ ಕಥೆಗೆ ಉಪಕಥೆಗಳು ಸೇರಿಕೊಂಡು ವ್ಯಾಪ್ತಿ ವಿಶಾಲವಾಗಿರುತ್ತದೆ. ಆದರೆ ಐತಿಹ್ಯದ ವ್ಯಾಪ್ತಿ ಕೇವಲ ಒಂದು ಘಟನೆಗೆ ಮಾತ್ರ ಸೀಮಿತವಾಗಿ ಸಂಕ್ಷೇಪ್ತವಾಗಿರುತ್ತದೆ. ಅಷ್ಟೇ ಅಲ್ಲ ನಿರ್ದಿಷ್ಟ ವ್ಯಕ್ತಿಯ ಸಾಹಸ, ಕೀರ್ತಿ, ಘಟನೆಗಳಿಗೆ ಪ್ರಾಶಸ್ತ್ಯ ನೀಡುತ್ತದೆ. ಈ ದೃಷ್ಟಿಯಿಂದ ಐತಿಹ್ಯಗಳು, ಕಥೆಗಳಿಂದ ಭಿನ್ನವಾಗಿವೆ. ಜನಪದ ಕಥೆಗಳ ಹುಟ್ಟು ಶ್ರಮ ಮೂಲದಿಂದಲೇ ಬಂದಿರುವಂಥದ್ದು. ಜನಪದರು ತಮ್ಮ ಬಿಡುವಿನ ಕಾಲದಲ್ಲಿ ಕಥೆಗಳನ್ನು ಹೇಳುತ್ತಾ, ಕೇಳುತ್ತಾ ದುಡಿಮೆಯ ಶ್ರಮವನ್ನು ಮರೆಯುತ್ತಾರೆ. ಕಥೆಗಳನ್ನು ಹೇಳುವುದು ಮತ್ತು ಆಲಿಸುವುದು ಮಾನವನ ಸಹಜ ಗುಣ, ಮಾನವನ ಹುಟ್ಟಿನೊಂದಿಗೆ ಕಥೆಗಳು ಕೂಡಾ ಅವನ ಜೊತೆಯಲ್ಲಿಯೇ ಉದ್ಭವಿಸಿದವು. ತನ್ನ ಬದುಕಿಗೆ ಪ್ರಯೋಜನವಾಗುವ ರೀತಿಯಲ್ಲಿ ಇಂಥ ಕಥೆಗಳನ್ನು ಬಳಸಿಕೊಳ್ಳುತ್ತ ಮತ್ತು ಅವುಗಳನ್ನು ಹುಟ್ಟು ಹಾಕುತ್ತ ಹೊರಟನು. ಇವು ತುಂಬಾ ಸಹಜ ಮತ್ತು ಸರಳತೆಯಿಂದ ಕೂಡಿರುತ್ತವೆ. ಅಲ್ಲದೆ ತುಂಬಾ ಕುತೂಹಲವನ್ನು ಕೆರಳಿಸಿಕೊಂಡು ಹೋಗುವ ಗುಣ ಜನಪದ ಕಥೆಗಳಿಗಿದೆ. ಹೀಗಾಗಿಯೇ ಜನಪದ ಕಥೆಗಳು ತುಂಬಾ ಪ್ರಸಿದ್ಧಿಯನ್ನು ಪಡೆದುಕೊಂಡು ಬಂದಿವೆ ಮತ್ತು ಬರುತ್ತಿವೆ. ಕಥೆ ಹೇಳುವುದಕ್ಕೆ ಯಾವ ಆಧಾರವೂ ಇಲ್ಲಿ ಇರುವುದಿಲ್ಲ. ಕಥೆಗಳ ಘಟನೆಗಳಿಗೆ ಯಾವುದೇ ಒಂದು ನಿರ್ದಿಷ್ಟ ಕಾಲವಿಲ್ಲ[೨೧]. ನಿರ್ದಿಷ್ಟ ಸ್ಥಳವಿಲ್ಲ, ನಿರ್ದಿಷ್ಟ ವ್ಯಕ್ತಿಗಳೂ ಇಲ್ಲ. ಆದರೆ ಐತಿಹ್ಯವೊಂದರ ರೂಪದಲ್ಲಿ ಕಥೆಯನ್ನು ಹೋಲುತ್ತದಾದರೂ ನಿರ್ದಿಷ್ಟ ವ್ಯಕ್ತಿ, ಸ್ಥಳ, ಕಾಲಕ್ಕೆ

ಬದ್ಧವಾಗಿದ್ದು, ಭೌತಿಕ ಆಕರವೊಂದು ಅದಕ್ಕೆ ಸಾಕ್ಷಿ ನುಡಿಯುತ್ತಿರುತ್ತದೆ. ಕಥೆ ಎನ್ನವುದಕ್ಕೆ 'ಹೇಳಿದ್ದು' ಎನ್ನುವ ಅರ್ಥವಿದ್ದು. ಕಟ್ಟುಕಥೆ, ಕಲ್ಪಿತಕಥೆ, ದಂತಕಥೆ, ಅಜ್ಜಿ ಕಥೆ ಎಂಬ ಮನೋಭಾವ ಜನಪದರಲ್ಲಿದೆ. ಆದರೆ ಐತಿಹ್ಯ ಅವರ ದೃಷ್ಟಿಯಲ್ಲಿ ಯಾವುದೋ ಒಂದು ಕಾಲದಲ್ಲಿ ವಾಸ್ತವವಾಗಿ ನಡೆದದ್ದು ಎನ್ನುವ ಅರ್ಥದಲ್ಲಿ ಹೀಗೆ ಇತ್ತಂತೆ, ಹೀಗೆ ಇದ್ದದ್ದು ಎಂಬ ಮನೋಭಾವವಿದೆ. ಹೀಗಾಗಿ ಐತಿಹ್ಯದ ಮೂಲ ಉದ್ದೇಶ ಕಥೆಯಂತೆ ಮನರಂಜನೆಯಾಗಿರದೆ, ಘಟನೆಯೊಂದನ್ನು ವಂಶಪರಂಪರಾಗತವಾಗಿ ಉಳಿಸಿಕೊಂಡು ಬರುವುದಾಗಿದೆ. ರೂಪ ಮತ್ತು ನಿರೂಪಣೆಯಲ್ಲಿ ಕಥೆಯನ್ನು ಹೋಲುವ ಐತಿಹ್ಯ ಅರ್ಥ ಭಿನ್ನವಾಗಿ ನಿಲ್ಲುತ್ತದೆ.

೨. ಐತಿಹ್ಯ ಮತ್ತು ಪುರಾಣ:-

'ವಿಜ್ಞಾನ ಪೂರ್ವಯುಗದ ವಿಜ್ಞಾನ ಪುರಾಣ' ಎನ್ನುವ ಪರಿಕಲ್ಪನೆ ಪುರಾಣದ ಬಗೆಗೆ ಇದೆ. ಪುರಾಣ ಅತಿಪ್ರಾಚೀನವಾದುದನ್ನು ಹೇಳುವಂಥದ್ದು ಮತ್ತು ಸರ್ವಶ್ರೇಷ್ಠವೂ ಆಗಿರುವಂಥದ್ದು. ಹೀಗಾಗಿ ಜನಪದರು ತಮ್ಮ ಸುತ್ತ ಮುತ್ತಲಿನಲ್ಲಿ ನಡೆದ ಘಟನೆಗಳಿಗೆ ಪುರಾಣ ಪಾತ್ರಗಳನ್ನು ಆರೋಪಿಸಿ ಐತಿಹ್ಯಗಳನ್ನು ನಿರುಪಿಸುತ್ತಾರೆ. ಹೀಗೆ ಆರೋಪಿಸಿಕೊಳ್ಳುವುದರ ಹಿಂದೆ ನಾನಾ ಉದ್ದೇಶಗಳಿರುವುದನ್ನು ಕಾಣುತ್ತೇವೆ. ಈ ಹಿನ್ನಲೆಯಲ್ಲಿ ಐತಿಹ್ಯವು ಪುರಾಣದೊಂದಿಗೆ ಅಂತರ ಸಂಬಂಧದ ಎಳೆಗಳನ್ನು ಹೊಂದಿದೆ.

೩. ಐತಿಹ್ಯ ಮತ್ತು ಕಥನಗೀತೆ :-

ಐತಿಹ್ಯ ಮತ್ತು ಕಥನಗೀತೆಯ ನಡುವೆ ಅಂತರ್ ಸಂಬಂಧವಿರುವುದನ್ನು ಕಾಣುತ್ತೇವೆ. ಇವೆರಡು ನೈಜ ಘಟನೆಗಳನ್ನು ಆಧಾರವಾಗಿಟ್ಟುಕೊಂಡೆ ಹುಟ್ಟಿರುವಂಥವುಗಳು. ಮೌಖಿಕ ಪರಂಪರೆಯಲ್ಲಿ ಉಳಿದು, ಬೆಳೆದುಕೊಂಡು ಬರುವಾಗ ಒಂದು ಕಥಾತ್ಮಕವಾಗಿ ಗದ್ಯಸ್ವರೂಪವನ್ನು ಪಡೆದುಕೊಂಡರೆ, ಇನ್ನೊಂದು ಪದ್ಯ ಸ್ವರೂಪವನ್ನು ಪಡೆದುಕೊಂಡಿತು. ಐತಿಹ್ಯದ ಘಟನೆಯೊಂದು ನಿರೂಪಕನೊಬ್ಬನ ಪ್ರತಿಭೆಯಿಂದ ಗೀತೆ ಸ್ವರೂಪವನ್ನು ಪಡೆದುಕೊಂಡು 'ಕಥನಗೀತೆ'ಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ವಾಸ್ತವವಾಗಿ ನಡೆದಂತ ಇಂಥ ಘಟನೆಗಳಿಗೆ ದೈವಿಕ ಮತ್ತು ಕಾಲ್ಪನಿಕ ಅಂಶಗಳು ಮೂಡಿಬಂದಿರುವುದರಿಂದ ಕಥನಗೀತೆಯ ಸ್ವರೂಪವನ್ನು ಪಡೆದುಕೊಂಡು ಬರುತ್ತದೆ[೨೨]. ಇಂಥ ಕಥನಗೀತೆಗಳ ಮೂಲ ಉದ್ದೇಶ ನಾಡಿಗಾಗಿ ಮಡಿದ ವೀರರನ್ನು ಮತ್ತು ಮಹಾಸತಿಯರನ್ನು ಸ್ಮರಿಸುವುದರ ಜೊತೆಗೆ ಅಸ್ತಿತ್ವದಲ್ಲಿದ್ದ ಮೌಲ್ಯಗಳ ಪ್ರತಿಪಾದನೆದಯನ್ನು ನಿರೂಪಿಸುತ್ತದೆ.

೪. ಐತಿಹ್ಯ ಮತ್ತು ಚರಿತ್ರೆ:-

ಐತಿಹ್ಯ ಮತ್ತು ಚರಿತ್ರೆ ಇವೆರಡು ಹಿಂದೆ ಯಾವುದೋ ಒಂದು ಕಾಲದಲ್ಲಿ ಘಟಿಸಿರುವ ಘಟನೆಗಳನ್ನು ದಾಖಲಿಸಿಕೊಂಡಿರುವಂಥವುಗಳು. ಅಕ್ಷರ ಬಲ್ಲವರಿಂದ ನಡೆದ ಘಟನೆಗಳು ಲಿಖಿತ ರೂಪ ಪಡೆದುಕೊಂಡದ್ದು 'ಚರಿತ್ರೆ'ವೆಂದು ಕರೆಸಿಕೊಂಡರೆ, ಅಕ್ಷರ ಬಾರದವರು ನಡೆದ ಘಟನೆಯನ್ನು ಕಲಾತ್ಮಕವಾಗಿ ಮೌಖಿಕ ರೂಪದಲ್ಲಿಯೇ ಹಿಡಿದಿಟ್ಟುಕೊಂಡು

ಬಂದದ್ದು 'ಐತಿಹ್ಯ' ಎಂಬ ಅರ್ಥ ಪಡೆದುಕೊಂಡಿದೆ. ಇದು ತೋಂಡಿ ಸಂಪ್ರದಾಯದಲ್ಲಿ ಹರಿದು ಬಂದರೂ ಘಟನಾ ವಿಷಯಗಳೊಂದಿಗೆ ತಳಕುಹಾಕಿಕೊಂಡಿರುವುದರಿಂದ ಐತಿಹ್ಯದ ರೂಪ ಪಡೆದುಕೊಳ್ಳುತ್ತದೆ[೨೩]. ಚರಿತ್ರೆ ಲಿಖಿತ ಇತಿಹಾಸವಾದರೆ, ಐತಿಹ್ಯ ಮೌಖಿಕ ಇತಿಹಾಸವಾಗಿದೆ.

ಚರಿತ್ರೆ ಸೃಷ್ಟಿಸುವಲ್ಲಿ ಆಸಕ್ತವಾಗಿರುವ ಮನಸ್ಸೇ ಐತಿಹ್ಯಗಳ ಜನನಕ್ಕೆ ಮೂಲ. ಹಲವು ವೇಳೆ ನಿಜವಾದ ಐತಿಹಾಸಿಕ ಸಂಗತಿ ಇವುಗಳ ಜನನಕ್ಕೆ ಮೂಲ. ಹಲವು ವೇಳೆ ನಿಜವಾದ ಐತಿಹಾಸಿಕ ಸಂಗತಿ ಇವುಗಳ ಹಿಂದೆ ಇರುತ್ತದೆ ಎಂಬುದು ನಿಜ. ಅನ್ಯ ಆಧಾರಗಳಿಂದ ಅದು ದೃಢಪಡುತ್ತದೆ. ಆದರೆ ಹಾಗಿಲ್ಲದೆ, ಕೇವಲ ಕಲ್ಪನೆಯ ಅಥವಾ 'ಸತ್ಯಾಭ್ಯಾಸ'ದ ಮೂಲದಿಂದ ಒಂದು ಸ್ಥಳ ಅಥವಾ ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯದ ನಿಲ್ಲುವ ಪ್ರಮೇಯವನ್ನು ಅಲ್ಲಗಳೆಯಲಾಗುವುದಿಲ್ಲ. ಅಧ್ಯಯನಕಾರರು ಈ ಅಂಶಗಳನ್ನೆಲ್ಲ ಈಗಾಗಲೇ ಕಂಡುಕೊಂಡಿದ್ದಾರೆ. ಮಧ್ಯಯುಗದ ಐತಿಹ್ಯಗಳ ಬಗ್ಗೆಯೂ ಈ ಮಾತು ಹೆಚ್ಚು ನಿಜ.

'ಮಧ್ಯಯುಗದ ಐತಿಹ್ಯಗಳಲ್ಲಿ ಚರಿತ್ರೆ ಮತ್ತು ನೀತಿಕಥೆಗಳು ಬಿಡಿಸಲಾಗದ ರೀತಿಯಲ್ಲಿ ಸೇರಿಕೊಂಡಿರುವುದನ್ನು ಕಾಣಬಹುದು. ಇತಿಹಾಸದ ಬರವಣಿಗೆ ಹೆಚ್ಚು ವ್ಯವಸ್ಥಿತವಾಗಿ ಬಂದು ತನ್ನ ವಸ್ತುವಿನ ನಿಜತ್ವವನ್ನು ದೃಢಪಡಿಸಿಕೊಂಡ ಮೇಲೆ, ಉಳಿದ ನೀತಿಕತೆಗಳು ಮತ್ತು ನಂಬಲಾಗದ ಕತೆಗಳು ಐತಿಹ್ಯಗಳ ಕ್ಷೇತ್ರಕ್ಕೆ ಬಂದವೆಂದು ಕೆಲವರ ಅಭಿಪ್ರಾಯ'.

ಈ ಹೇಳಿಕೆಯಿಂದ ಹೊರಡುವ ಒಂದಂಶವೆಂದರೆ ಇತಿಹಾಸದ ಬರವಣಿಗೆ ಪ್ರಜ್ಞಾಪೂರ್ವಕವಾಗಿ ಆರಂಭವಾಗುವುದಕ್ಕಿಂತ ಮೊದಲು ಮನುಷ್ಯ ತತ್ಸಂಬಂಧೀ ನಿರೂಪಣೆಗಳನ್ನು (ಅಂದರೆ-ಇತಿಹಾಸವಾಗಿ ಮುಂದಿನ ಪೀಳಿಗೆಗೆಂದು ದಾಖಲಿಸಬೇಕೆಂದಿರುವ ಅಂಶಗಳನ್ನು) ಐತಿಹ್ಯಗಳ ಮಾದರಿಯಲ್ಲಿ ಕತೆಯಾಗಿಸಿ ಚಾಲ್ತಿಗೆ ಬಿಟ್ಟಿರಬೇಕು ಎಂಬುದು ತೀರ ಸಂಭಾವ್ಯದ ಸಂಗತಿ.

ಇದನ್ನೆ ಇನ್ನೊಂದು ಹೆಜ್ಜೆ ವಿಸ್ತರಿಸಿ ಹೇಳಲೂಬಹುದು, ಅಂದರೆ ಇತಿಹಾಸ ದೃಷ್ಟಿಯಿಂದ ದಾಖಲಿಸುವಿಕೆ ಆರಂಭವಾದ ಬಳಿಕವೂ ಐತಿಹ್ಯಗಳು ಸಾಮಾನ್ಯ ಜನರಿಂದ ಸಮಾಂತರವಾಗಿ ಸೃಷ್ಟಿಸಲ್ಪಡುತ್ತ, ಪ್ರಚುರಗೊಳಿಸಲ್ಪಡುತ್ತ ಬಂದುವೆಂಬುದು. "ಮುಂದಿನ ತಲೆಮಾರಿಗಾಗಿ ಒಂದು ನಿಜಸಂಗತಿಯನ್ನು ದಾಖಲಿಸಿ ಕಾದಿರಿಸಬೇಕು" ಎಂಬುದು ಚರಿತ್ರೆ ಪ್ರಜ್ಞೆಯುಳ್ಳವರ ದಿನಚರಿಗಳು, ರಾಜರ ಆಸ್ಥಾನದಲ್ಲಿದ್ದವರು ಬರೆದಂತಹ ದಾಖಲೆಗಳು ('ಅಕ್ಬರ್ ನಾಮಾದಂಥವು') ಕೈಫಿಯತ್ತುಗಳು, ವಂಶಾವಳಿಗಳು- ಇವೆಲ್ಲ ರಚನೆಗೊಳ್ಳುತ್ತವೆ. ಆದರೆ ತಮ್ಮ ಪರಿಸರದಲ್ಲಿ ಅಥವಾ ಬದುಕಿನಲ್ಲಿ ಯಾವುದೋ 'ಸತ್ಯ' ಸಂಗತಿಯನ್ನು ಕಂಡ ಅಥವಾ ಕೇಳಿದ ಜನಕ್ಕೆ ಅದರಲ್ಲಿನ ಔದಾರ್ಯ ಅಥವಾ ಶೌರ್ಯ ಅಥವಾ ತ್ಯಾಗ ಇಂಥ ಯಾವುದೋ ಅಂಶ ಥಟ್ಟನೆ ಅದು ಬಾಯಿಂದ ಬಾಯಿಗೆ ತಲಾಮಾರಿನಿಂದ ತಲೆಮಾರಿಗೆ ಹರಡುತ್ತಾ ಹೋಗುತ್ತದೆ. ಆದ್ದರಿಂದ ''ಇತಿಹಾಸ' ಆರಂಭವಾದ ಬಳಿಕವೂ ಐತಿಹ್ಯಗಳ ಸೃಷ್ಟಿ ಹಾಗೂ ಪ್ರಾಬಲ್ಯ ನಿಲ್ಲಲಿಲ್ಲ.

ಅಲಮೇಲಮ್ಮ ಕೊಟ್ಟ ಶಾಪದಿಂದಾಗಿ ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ ಮೈಸೂರು ಅರಸರಿಗೆ ಮಕ್ಕಳಾಗದೆ ದತ್ತು ತೆಗೆದುಕೊಳ್ಳುವ ಸ್ಥಿತಿ ಬಂತೆಂಬುದನ್ನು ಚರಿತ್ರೆಯೆಂದು ಒಪ್ಪುವುದಾದರೂ ಹೇಗೆ ? ಹಾಗೆ ಶಾಪಕೊಟ್ಟ ದಿನಾಂಕ ಹೋಗಲಿ, ವರ್ಷ ಕೂಡಾ ಲಭ್ಯವಿಲ್ಲ. ಆದರೆ ಈ ಸಂಗತಿ ಶಾಪವೃತ್ತಾಂತದಲ್ಲಿರುವಂತೆ ನಡೆದಿರುವುದಂತೂ ನಿಜ. ಹೀಗೆ ಶಪಿಸಿದ ಸಂಗತಿ ಜನಶ್ರುತಿಯಾಗಿ ಹರಡಿ ಅನಂತರ ದಾಖಲೆಗಳಲ್ಲಿ ಸೇರಿ ಈಗ ಎರಡೂ ಕಡೆ ಉಳಿದುಕೊಂಡು ಬಿಟ್ಟಿದೆ.

ಅಷ್ಟೇ ಅಲ್ಲ. ಈಗಲೂ ಸಹ ಮೈಸೂರಿನಲ್ಲಿ ಕೋಟೆಯ ಒಳಗೆ ಆಗ್ನೇಯ ಮೂಲೆಯ ಕೊಟ್ಟ ಕೊನೆಯಲ್ಲಿರುವ 'ಅಲಮೇಲಮ್ಮನ ನಿವಾಸ' ಎಂಬ ಕಟ್ಟಡದಿಂದ ಆ ಅಲಮೇಲಮ್ಮನ ಮುಕ್ಕಾಲು ಅಡಿ ಎತ್ತರದ ವಿಗ್ರಹವನ್ನು ಮಹಾನವಮಿಯ ದಿನ ತರಲಾಗುತ್ತದೆ. ಅದನ್ನು ಶಾರದೆಯಂತೆ ಅಲಂಕರಿಸಿ ಸಂಜೆಯವರೆಗೂ ಪೂಜಿಸಲಾಗುತ್ತದೆ. ರಾಜವಂಶಸ್ಥರು ಅದೊಂದು ದಿನ ಮಾತ್ರ ಇದರ ದರ್ಶನ ಮಾಡುತ್ತಾರೆ. ರಾಜಕಾಣಿಕೆಯನ್ನು ಅಂದು ನೀಡಲಾಗುತ್ತದೆ. ಅದನ್ನು ಪಡೆದು ಈ ವಿಗ್ರಹ ಪುನಃ ತನ್ನ ನಿವಾಸಕ್ಕೆ ಹಿಂದಿರುಗುತ್ತದೆ'' ಹೀಗೆ ಆಚರಣೆಗಳ ಮೂಲಕವಾಗಿಯು ಈ ಐತಿಹ್ಯದಲ್ಲಿನ ಸತ್ಯತೆಗೆ ಸಾಕ್ಷ್ಯ ದೊರೆಯುತ್ತದೆ[೨೪].

೫. ಭೌತಿಕ ಆಕರದ ಪಾತ್ರ :-

ಐತಿಹ್ಯವು ಅಕ್ಷರಬಾರದ ಜನಸಮುದಾಯದ ಚಿಂತನೆಗಳನ್ನು ಅನುಭವಗಳನ್ನು, ಘಟನೆಗಳನ್ನು ಚರಿತ್ರೆ ಉಳಿಸಿಕೊಳ್ಳುವ, ಅರಿತುಕೊಳ್ಳುವ ಮತ್ತು ಕಟ್ಟಿಕೊಡುವ ಪ್ರಯತ್ನದ ಫಲವಾಗಿ ಹುಟ್ಟು ಪಡೆದಿರುವಂಥದ್ದು. ಈ ಜನಪದ ಇತಿಹಾಸದ ಸಾಂಪ್ರದಾಯಿಕ ಇತಿಹಾಸಕ್ಕಿಂತ ಭಿನ್ನವಾದದ್ದು. ಸಾಂಪ್ರದಾಯಿಕ ಇತಿಹಾಸ ಲಿಖಿತ ಆಧಾರಗಳಿಂದ ಚಿರಸ್ಥಾಯಿಯಾಗಿ ಜನಮನದಲ್ಲಿ ಉಳಿದರೆ, ಜನಪದ ಇತಿಹಾಸ ಮೌಖಿಕ ಪರಂಪರೆಯಲ್ಲಿ ವಾಸ್ತವ, ನೈಜ ಎನ್ನುವಂಥ ಘಟನೆಗೆ ಪೂರಕವಾದಂಥ ಭೌತಿಕ ಆಕರವೊಂದನ್ನು ಸೃಷ್ಟಿಸಿಕೊಂಡು ಕಾಲ್ಪನಿಕ ಅಥವಾ ಪೌರಾಣಿಕ ಎನ್ನುವಂಥ ಅಂಶಗಳನ್ನು ಆರೋಪಿಸಿಕೊಂಡು ಚಿರಸ್ಥಾಯಿಯಾಗಿರುವಂಥದ್ದು. ಈ ಭೌತಿಕ ಆಕರ ನಿಸರ್ಗದತ್ತವಾಗಿರಬಹುದು ಅಥವಾ ಕೃತಕತೆಯಿಂದಲಾರದು ಕೂಡಿರಬಹುದು. ಭೌತಿಕ ಆಕರವಿಲ್ಲದೆ ಐತಿಹ್ಯ ಹುಟ್ಟು ಪಡೆಯಲಾರದು. ಅದೇ ಅದರ ಆಧಾರಸ್ತಂಭವಾಗಿದೆ. ಪರಂಪರಾಗತವಾಗಿ ಐತಿಹ್ಯವೊಂದು ಉಳಿದುಕೊಂಡು ಬರುವಲ್ಲಿ ಇದರ ಪಾತ್ರ ಅತಿ ಮಹತ್ತರವಾದುದು. ಭೌತಿಕ ಆಕರವೊಂದನ್ನು ನೋಡಿದ ವ್ಯಕ್ತಿ ಆ ಬಗೆಗೆ ತಿಳಿದುಕೊಳ್ಳಲು ಆಸಕ್ತನಾದಾಗ, ನಿರೂಪಕರಿಂದ ಐತಿಹ್ಯ ಹೇಳಲ್ಪಡುತ್ತದೆ. ಹೀಗೆ ನೋಡಿದ ವ್ಯಕ್ತಿ ಆ ಬಗೆಗೆ ತಿಳಿದುಕೊಳಲು ಆಸಕ್ತನಾದಾಗ, ನಿರೂಪಕರಿಂದ ಐತಿಹ್ಯ ಹೇಳಲ್ಪಡುತ್ತದೆ. ಹೀಗೆ ಬೇರೆ ಬೇರೆ ವ್ಯಕ್ತಿಗಳಿಂದ ಭೌತಿಕ ಆಕರದ ಬಗೆಗೆ ಕೇಳಲ್ಪಡುವುದರಿಂದ ಐತಿಹ್ಯವು ಮತ್ತೆ ಮತ್ತೆ ಹೇಳಲ್ಪಡುವ ಮೂಲಕ ಇತಿಹಾಸದ ಘಟನೆಯೊಂದು ಭೌತಿಕ ಆಕರದ ಕಾರಣದಿಂದಾಗಿ ಪಳಿಗೆಯಿಂದ ಪಳಿಗೆಗೆ ವರ್ಗಾಯಿಸಲ್ಪಡುತ್ತದೆ.

ಸಾಂಪ್ರದಾಯಿಕ ಇತಿಹಾಸಕ್ಕೆ ಶಾಸನ, ಹಸ್ತಪ್ರತಿ, ವೀರಗಲ್ಲು, ಮಾಸ್ತಿಗಲ್ಲು, ವಾಸ್ತುಶಿಲ್ಪ, ವಿದೇಶಿ ಪ್ರವಾಸಿಗರ ಬರಹ ಮುಂತಾದವುಗಳು ದಾಖಲೆಗಳಾದರೆ, ಜನಪದ ಇತಿಹಾಸ (ಐತಿಹ್ಯ) ಕ್ಕೆ ಭೌತಿಕ ಆಕರಗಳೇ ದಾಖಲೆಗಳಾಗಿವೆ. ಈ ಭೌತಿಕ ಆಕರಗಳು ಜನಪದರ ಪ್ರಜ್ಞಾಪೂರ್ವಕ ಸೃಷ್ಟಿಯಾಗಿರುವಂಥವುಗಳಾಗಿವೆ. ಏಕೆಂದರೆ ಭೌತಿಕ ಆಕರಗಳಿಲ್ಲದಿದ್ದರೆ ಅವರು ಕಟ್ಟಿಕೊಡುವ ಚರಿತ್ರೆ ಪರಂಪರಾಗತವಾಗಿ ವರ್ಗಾಯಿಸಲು ಸಾಧ್ಯವಾಗುತ್ತಿರಲಿಲ್ಲ ಎನ್ನುವ ಆಲೋಚನೆ ಇಂತಹ ಭೌತಿಕ ಆಕರದ ಹಿಂದೆ ಅಡಕವಾಗಿದೆ. ಐತಿಹ್ಯ ಮೌಖಿಕ ಪರಂಪರೆಯಲ್ಲಿ ನಿರೂಪಕರಿಂದ ಬದಲಾವಣೆಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಅದು ಬದಲಾಗುವುದು ಕೇವಲ ಕಲ್ಪಿತಾಂಶಗಳಲ್ಲಿಯೇ ಹೊರತು, ವಾಸ್ತವ ಘಟನೆಯಲ್ಲಿ ಅಲ್ಲ. ವಾಸ್ತವ ಘಟನೆಯೊಂದು ಬದಲಾವಣೆ ಹೊಂದುವುದಕ್ಕೆ ಭೌತಿಕ ಆಕರ ಆಸ್ಪದ ಕೊಡುವುದಿಲ್ಲ. ಏಕೆಂದರೆ ಈ ಹಿಂದೆ ಗಮನಿಸಿದಂತೆ ಅದು ಐತಿಹ್ಯಕ್ಕೆ ಲಿಖಿತ ದಾಖಲೆ ಇದ್ದಂತೆ[೨೨]. ಈ ತೆರನಾದ ಭೌತಿಕ ಆಕರಗಳು ಆಯಾ ಪ್ರದೇಶದ ಪ್ರಾಚೀನ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ,

ಅರಿತುಕೊಳ್ಳುವಲ್ಲಿ, ಸಹಕಾರಿಯಾಗಿವೆ. ಗ್ರಾಮದ ಅಗಸಿ ಬಾಗಿಲು, ದೇವಸ್ಥಾನ, ವಿಗ್ರಹ, ನಿಸರ್ಗದತ್ತ ದಿನ್ನೆ, ಗುಡ್ಡ, ಬೆಟ್ಟ, ಕೋಟೆ, ಕೆರೆ, ಬಾವಿ, ಕಟ್ಟೆ, ಬಂಡೆ, ಗಿಡ, ಹಳ್ಳ, ಹೊಳೆ ಮುಂತಾದವುಗಳು ಐತಿಹ್ಯಕ್ಕೆ ಆಕರಗಳಾಗಿವೆ. ಇವುಗಳೊಂದಿಗೆ ಜನಪದರು ಹೊಂದಿರುವ ಸಂಬಂಧವನ್ನು ಐತಿಹ್ಯಗಳು ತಿಳಿಯಪಡಿಸುತ್ತವೆ. ಹೀಗಾಗಿ ಭೌತಿಕ ಆಕರವು ಘಟನೆಯೊಂದರ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಅಲ್ಲದೆ ಸಾಹಿತ್ಯದ ಪ್ರಕಾರಗಳಾದ ಕಥೆ, ಕಥನಗೀತೆ, ದಂತಕಥೆ, ಪುರಾಣ ಮುಂತಾದವುಗಳಿಂದ ಐತಿಹ್ಯವನ್ನು ಬೇರ್ಪಡಿಸುವುದೇ ಅದರ ಭೌತಿಕ ಆಕರ, ಈ ಭೌತಿಕ ಆಕರ ಇಲ್ಲವಾದಾಗ ಐತಿಹ್ಯವು ಕೂಡ ಇಲ್ಲವಾಗುತ್ತದೆ. ಹೀಗಾಗಿ ಭೌತಿಕ ಆಕರ ಐತಿಹ್ಯಕ್ಕೆ ಆತ್ಮವಿದ್ದಂತೆ.

ಸೂರ್ಯನಾಥ ಕಾಮತರು ಸಂಪಾದಿಸಿದ –'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಪುಟಗಳನ್ನು ಇಂಥ ನಂಬಲರ್ಹ ಮೌಖಿಕ ಚರಿತ್ರೆಗೊಂದು ಉದಾಹರಣೆಯಾಗಿ ಉಲ್ಲೇಖಿಸಬಹುದು. ಇಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಅವರ ಸಮೀಪದ ಬಂಧುಮಿತ್ರರನ್ನು ಸಂದರ್ಶಿಸಿ, ವಿವರಗಳನ್ನು ಸಂಗ್ರಹಿಸಿ ಹಾಗೆಯೇ ವಸ್ತುನಿಷ್ಠವಾಗಿ ನಿರೂಪಿಸಲಾಗಿದೆ. ಸ್ವಾತಂತ್ರ್ಯ ಬಂದ ಹತ್ತಿಪ್ಪತ್ತು ವರ್ಷಗಳಲ್ಲಿಯೇ ಈ ನೆನಪಿನ ಸಂಗ್ರಹ ಆರಂಭವಾಗಿದೆ. ಆದ್ದರಿಂದ ಇಲ್ಲಿ ವಕ್ತೃಗಳು ನೀಡಿದ ಹೇಳಿಕೆಗಳು ಬಹುಮಟ್ಟಿಗೆ ವಸ್ತುನಿಷ್ಠತೆಯಿಂದ ಕೂಡಿವೆ. ಹಾಗೂ ಅವನ್ನು ತಾಳೆ ನೋಡಲೂ ಸಾಧ್ಯವಿದೆ. ಈ ಕೆಲಸವನ್ನು ಆಗ ಕಾಮತರು ಮಾಡದೆ ಇದ್ದಿದ್ದರೆ ಈ ವೀರರ ಚರಿತ್ರೆ ಸದಾಕಾಲಕ್ಕೂ ನಷ್ಟಗೊಳ್ಳುತ್ತಿದ್ದವು. ಈ ಸ್ಮೃತಿಗಳಲ್ಲಿ ಮೂಲದಿಂದ ಸಮಕಾಲೀನ ಚರಿತ್ರೆಯೊಂದನ್ನು ವಿವರಪೂರ್ಣವಾಗಿ ಸಂಗ್ರಹಿಸಿದ ಬಹು ದೊಡ್ಡ ಪ್ರಯತ್ನವಿದು[೨೫].

೬. ಐತಿಹ್ಯ ಮತ್ತು ಸ್ಥಳನಾಮಗಳು :-

ಸ್ಥಳನಾಮಗಳು ಅನೇಕ ವೇಳೆ ಅಲ್ಲೊಂದು ಐತಿಹ್ಯವಿರುವ ಸೂಚನೆ ಕೊಡುತ್ತವೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿರುವ 'ದಂಡಿನ ದಿಬ್ಬ' ಗ್ರಾಮ ಹಿಂದೆ ಜನವಸತಿ ಇರದ ಬರೀ ಒಂದು ದಿಬ್ಬವಾಗಿತ್ತು. ಹೈದರಾಲಿಯ ದಂಡು ಅಲ್ಲಿ ಕೆಲದಿನ ಬೀಡು ಬಿಟ್ಟ ನಂತರ ಅದು 'ದಂಡಿನ ದಿಬ್ಬ'ವಾಗಿ ಅನಂತರವೇ ಅದೊಂದು ಗ್ರಾಮವಾಗಿ ಬೆಳವಣಿಗೆ ಹೊಂದಿತು[೨೫]. ಇದೇ ರೀತಿ ನಂಜನಗೂಡು ನಂಜುಂಡನ ಗುರುತಿನಿಂದಾಗಿ ಬಂದ ಹೆಸರು. ಹೈದರಾಬಾದ್ ಕರ್ನಾಟಕದಲ್ಲಿಯ ಕಮಠಾಣ – ಮೂಲದಲ್ಲಿ "ಕಮಠಸ್ಥಾನ". ಪಾರ್ಶ್ವನಾಥ ತೀರ್ಥಂಕರನ ಪೂರ್ವಭವದ ಅಣ್ಣನಾದ ಕಮಠ ಇದ್ದ ಜಾಗವೆಂದು ಜೈನರಲ್ಲಿ ಪ್ರತೀತಿ. ಹೀಗೆ ಸಾವಿರಾರು ಸ್ಥಳಗಳ ಬಗ್ಗೆ ಮಾಹಿತಿ ದೊರೆತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳನಾಮಗಳ ಬಗ್ಗೆ ಇಂಥ ಅನೇಕ ಐತಿಹ್ಯಗಳಿರುವುದನ್ನು ಈಗಾಗಲೇ ಅಧ್ಯಯನಕಾರರು ಗುರುತಿಸಿದ್ದಾರೆ

ಸ್ಥಳನಾಮಗಳೆಲ್ಲವೂ ಐತಿಹ್ಯಗಳ ಸೂಚಕಗಳೇನಲ್ಲ. ಸ್ಥಳನಾಮಗಳ ಹಿಂದೆ ಐತಿಹ್ಯಗಳಿರುವಂತೆಯೇ ಭೌಗೋಳಿಕ ಲಕ್ಷಣಗಳು, ನಿರ್ದಿಷ್ಟ ವೃತ್ತಿಯವರಿರುವುದು ಇಂತಹ ಕಾರಣಗಳೂ ಇರುತ್ತವೆ. ವನವಾಸದಲ್ಲಿ ರಾಮಲಕ್ಷ್ಮಣ ಸೀತೆಯರಿದ್ದಾಗ ಇಲ್ಲಿ ದಶರಥನ ಹೆಸರಿನಲ್ಲಿ ಲಿಂಗವೊಂದನ್ನು ಸ್ಥಾಪಿಸಿದರಂತೆ, ಸನ್ಯಾಸಿ ವೇಷದಲ್ಲಿ ರಾವಣ ಬಂದು ಭಿಕ್ಷೆ ಕೇಳಿದಾಗ ಲಿಂಗರೂಪಿ ದಶರಥ ಆಕೆಯನ್ನು ಎಚ್ಚರಿಸಿದನಂತೆ. ಆದರೂ ಅದಕ್ಕೆ ಗಮನಕೊಡದೆ ಭಿಕ್ಷೆ ನೀಡಲು ಹೋಗಿ ಆಕೆ ಅಪಹರಣಕ್ಕೊಳಗಾದಳು. ಅಗಿನಿಂದ ದಶರಥ ಮೌನವಾಗಿ ಬರಿಯ ಕಲ್ಲಾಗಿ ಬಿಟ್ಟನಂತೆ, ಆಗ ಸೀತೆ 'ಮಾವ ಕಲ್ಲಾದೆಯಾ?' ಎಂದು ಕೂಗಿಕೊಂಡಳಂತೆ. ಅದೇ ನೆನಪಿನಲ್ಲೇ ಇದು "ಮಾಕಲ್ಲಯ್ಯನ ಗುಡ್ಡ" ಆಗಿದೆ ಎಂದು ಒಂದು ಐತಿಹ್ಯ. ಮಳವಳ್ಳಿ ಸಮೀಪದ 'ಕಿರುಗಾವಲು' ಟಿಪ್ಪು

ಅಭಿವೃದ್ಧಗೊಳಿಸಿದ, ಸೈನ್ಯದ ಒಂದು ಚಿಕ್ಕ ಕಾವಲು ಸ್ಥಳ ಎಂದು ಹೇಳಲಾಗುತ್ತದೆ[೨೧]. ಹಲವು ನದಿನಾಮಗಳ ಹಿಂದೆ ಐತಿಹ್ಯಗಳಿವೆ. ಆದ್ದರಿಂದ ಐತಿಹ್ಯಗಳ ಮೂಲಕವಾಗಿ ದೊರೆತ ಸ್ಥಳನಾಮಗಳೂ ಸಾಕಷ್ಟು ಇರುತ್ತವೆ ಎಂಬುದೇ ನಾವು ಗಮನಿಸಬೇಕಾದ ಅಂಶ[೨೨]. ಆದ್ದರಿಂದಲೇ ಅನೇಕ ಸಂದರ್ಭಗಳಲ್ಲಿ ಸ್ಥಳನಾಮಗಳೂ ಸಾಕಷ್ಟು ಇರುತ್ತವೆ ಎಂಬುದೇ ನಾವು ಗಮನಿಸಬೇಕಾದ ಅಂಶ. ಆದ್ದರಿಂದಲೇ ಅನೇಕ ಸಂರ್ಭಗಳಲ್ಲಿ - ಸ್ಥಳನಾಮಗಳ ಬೆನ್ನುಹತ್ತಿ ಐತಿಹ್ಯಗಳನ್ನು ಪತ್ತೆ ಹಚ್ಚುವುದು ಸಾಧ್ಯ. 'ದೇವರಾಯನ ದುರ್ಗ''ನಾಮದ ಚಿಲುಮೆ' (ತುಮಕೂರು ಜಿಲ್ಲೆ), 'ಬೆಂಗಳೂರು'– ಮೂದಲಾದ ಸ್ಥಳನಾಮಗಳಂತೂ ಇದಕ್ಕೆ ಸ್ಪಷ್ಟ ನಿದರ್ಶನ.

ಒಟ್ಟಿನಲ್ಲಿ ಹೇಳುವುದಾದರೆ ಪಾಶ್ಚಾತ್ಯರ ಲೆಜೆಂಡ್ ಎಂಬ ಪದಕ್ಕೆ ಸಂವಾದಿಯಾಗಿ ಐತಿಹ್ಯ ಎಂಬ ಪದ ಬಳಕೆಯಲ್ಲಿದೆ. ಐತಿಹ್ಯ ಎಂಬ ಪದ ಜನಪದರ ಬಳಕೆಯಲ್ಲಿ ಇಲ್ಲ. ಅವರ ದೃಷ್ಟಿಯಲ್ಲಿ ಅದು ವಾಸ್ತವವಾಗಿ ನಡೆದ ಘಟನೆಯನ್ನು ಸೂಚಿಸುವಂಥದ್ದು. ಈ ಮೌಖಿಕ ಚರಿತ್ರೆಗೆ ಯಾವುದೇ ರೀತಿಯ ಲಿಖಿತ ಆಧಾರಗಳಿರುವುದಿಲ್ಲ. ಆದರೆ ಭೌತಿಕ ಆಕರವೊಂದು ಇರುವುದರಿಂದ ದಂತಕಥೆ, ಕಥೆ, ಪುರಾಣ, ವದಂತಿಗಳಿಗಿಂತ ಭಿನ್ನವಾಗಿ ನಿಲ್ಲುವುದಾದರೂ ಅವುಗಳೊಂದಿಗೆ ಅಂತರ್‌ಸಂಬಂಧವನ್ನು ಹೊಂದಿದೆ ಎನ್ನುವುದನ್ನು ಗುರುತಿಸಬಹುದು.

೨.೬ ಐತಿಹ್ಯ ಇತಿಹಾಸದ ಆಕರವಾಗಿ ಮುಖ್ಯ

ಮಾನವ ಸಂಸ್ಕೃತಿಯನ್ನು ಅಕ್ಷರ ಬಲ್ಲವರನ್ನು ಮತ್ತು ಅಕ್ಷರ ಬಾರದವರನ್ನು ಆಧಾರವಾಗಿಟ್ಟುಕೊಂಡು ಶಿಷ್ಟ ಮತ್ತು ಜಾನಪದ ಎಂದು ಎರಡು ಬಗೆಯಲ್ಲಿ ಅರ್ಥೈಸಬಹುದು. ಇವೆರಡರ ನಡುವೆ ಅಂತಃಸಂಬಂಧವಿದ್ದರೂ ಕೂಡ ಪರಸ್ಪರ ಕಂದಕ ಸೃಷ್ಟಿಯಾಗಿದೆ. ಶಿಷ್ಟರು ಜಾನಪದವನ್ನು ಆಪೇಕ್ಷಿಸಿದರೆ, ಜನಪದರು ಶಿಷ್ಟವನ್ನು ವಿರೋಧಿಸುತ್ತಾ ಬಂದಿದ್ದಾರೆ. ಶಿಷ್ಟರು ಬಹುಬೇಗನೆ ತಮ್ಮ ಜೀವನ ಶೈಲಿ ಮತ್ತು ಮೌಲ್ಯಗಳಲ್ಲಿ ಬದಲಾವಣೆಯನ್ನು ತಂದುಕೊಂಡು ಆಧುನಿಕರಣಕ್ಕೆ ಒಳಗಾಗುವರು. ಆದರೆ ಜನಪದರು ಬೇಗನೆ ಬದಲಾವಣೆಯನ್ನು ಬಯಸುವುದಿಲ್ಲ. ಈ ಅಂಶವೇ ಇವೆರಡರ ನಡುವಿನ ಕಂದಕಕ್ಕೆ ಕಾರಣವಾಗಿರಬಹುದು. ಹೀಗಾಗಿ ಶಿಷ್ಟ ಮತ್ತು ಜನಪದ ಚರಿತ್ರೆಗಳು ಪ್ರತ್ಯೇಕವಾಗಿಯೇ ಹುಟ್ಟನ್ನು ಪಡೆದುಕೊಂಡವು. ಶಿಷ್ಟರು ಚರಿತ್ರೆಯನ್ನು ಸಮಾಜದ ಮೇಲುಸ್ತರದ ಆದ್ಯತೆಯೊಂದಿಗೆ ಲಿಖಿತವಾಗಿ ದಾಖಲಿಸಿದರೆ, ಜನಪದರು ತಮ್ಮ ಸರಳ ಬದುಕನ್ನು ಕೆಳಸ್ತರದ ಆಧ್ಯತೆಯೊಂದಿಗೆ ಮೌಖಿಕವಾಗಿಯೇ ತಮ್ಮ ಚರಿತ್ರೆಯನ್ನು ಕಟ್ಟಿಕೊಂಡರು. ಇವರಿಬ್ಬರೂ ಅನುಸರಿಸಿದ ಮಾರ್ಗ ಬಲಾದರೂ ಮೂಲ ತಳಹದಿಯಲ್ಲಿರುವ ಆಶಯ ಮಾತ್ರ ಒಂದೆ. ಅದು ಚರಿತ್ರೆಯನ್ನು ಕಟ್ಟಿಕೊಡುವುದೇ ಆಗಿದೆ.

ಲಿಖಿತ ಚರಿತ್ರೆಯು ಶಾಸನ, ತಾಳೆಗರಿ, ತಾಮ್ರಪಟ, ಪ್ರವಾಸಿಗರ ಬರಹ, ಲಿಖಿತ ಸಾಹಿತ್ಯ, ವೀರಗಲ್ಲು, ಮಾಸ್ತಿಗಲ್ಲು, ವಾಸ್ತುಶಿಲ್ಪ ಮುಂತಾದವುಗಳಲ್ಲಿ ದಾಖಲಾದರೆ ಮೌಖಿಕ ಇತಿಹಾಸವು ಜನಪದ ಹಾಡು, ಕಥೆ, ಬಯಲಾಟ, ಒಗಟು, ಒಡಪು, ಗಾದೆ, ಐತಿಹ್ಯ ಮುಂತಾದವುಗಳಲ್ಲಿ ದಾಖಲಾಗಿರುತ್ತದೆ. ಇಂಥ ಚರಿತ್ರೆಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಅಧ್ಯಯನ ಕ್ರಮಗಳು ನಮ್ಮಲ್ಲಿ ನಡೆದವು. ನಮ್ಮಲ್ಲಿನ ಚರಿತ್ರೆಯ ಬರವಣಿಗೆಗೆ ಪಾಶ್ಚಾತ್ಯ ಚರಿತ್ರರಚನಾ ಶಾಸ್ತ್ರವೆ ಮೂಲ ಆಧಾರವಾಗಿ ಪರಿಣಮಿಸಿತು. ಇದರಿಂದ ನಮ್ಮಲ್ಲಿನ ಅನೇಕ ಬಗೆಯ ಮೌಖಿಕ ಆಕರ ಪರಂಪರೆಗಳು ನಗಣ್ಯವಾದವು. ಕೇವಲ ಲಿಖಿತ ರೂಪದ ಪರಿಕರಗಳು ಮಾತ್ರ ಚರಿತ್ರೆಯ ಆಕರಗಳಾಗಿ

ಪರಿಗಣಿತವಾದವು. ಇದರಿಂದ ನಮ್ಮ ಚರಿತ್ರೆ ಬ್ರಿಟಿಷ್ ಮತ್ತು ಪಾಶ್ಚಾತ್ಯರ ಅಳಗೆತೆಗೋಲಿನಿಂದ ಮಾತ್ರ ಮೌಲ್ಯಮಾಪನ ಮಾಡಲು ಸಾಧ್ಯ ಆಯಿತು. ಅವರ ವಿಧಿ ವಿಧಾನದ ನೆಲೆಗಳು ನಮ್ಮನ್ನು ನಾವು ಅರಿತುಕೊಳ್ಳಲು ಮಿತಿಗಳನ್ನು ಒಡ್ಡಿದವು. ಈ ಮಿತಿಗಳಿಂದ ಇಂದಿಗೂ ನಮ್ಮಲ್ಲಿನ ವಿಭಿನ್ನ ಬಗೆಯ ಸಂಸ್ಕೃತಿ ಚರಿತ್ರೆಗಳು ಬೆಳಕಿಗೆ ಬರಲೇ ಇಲ್ಲ. ಅಂತೆಯೇ ಮೌಖಿಕ ಆಕರ ಸಾಮಗ್ರಿಗಳು ಚರಿತ್ರೆಯ ರಚನೆಗೆ ಮೂಲಾಧಾರಗಳೆಂದು ಪರಿಗಣಿಸಲು ಸಾಧ್ಯ ಆಗಿಲ್ಲ. ಈ ಮಾತು ಕರ್ನಾಟಕದ ಸಂಸ್ಕೃತಿ ಚರಿತ್ರೆಯ ಮಟ್ಟಿಗೂ ಅನ್ವಯಿಸುತ್ತದೆ[೨೮]. ಎನ್ನುವ ಈ ಮಾತು ಚರಿತ್ರೆಯನ್ನು ದರ್ಶಿಸುವ, ರಚಿಸುವ ವಾಸ್ತವವನ್ನು ಬಿಚ್ಚಿಡುತ್ತದೆ.

ಚರಿತ್ರೆಯನ್ನು ಕಟ್ಟಿಕೊಡಲು ಆಧಾರವಾದ ಆಕರಗಳ ತಾರತಮ್ಯತೆಯಿಂದಾಗಿ ಬಹುಸಂಖ್ಯಾತ ಸಮುದಾಯಗಳ ಜೀವಂತ ಸಂಸ್ಕೃತಿಯು ಚರಿತ್ರೆಯಲ್ಲಿ ದಾಖಲಾಗಲಿಲ್ಲ. ಮೌಖಿಕ ಚರಿತ್ರೆ ಪುನರ್ ಸೃಷ್ಟಿಯ ಸಾಧ್ಯತೆಯಿಂದಾಗಿ ಮೂಲ ಘಟನೆಗೆ ಸಮಕಾಲೀನ ಅಂಶಗಳು ಸೇರಿಕೊಳ್ಳುತ್ತವೆ. ಇದರಿಂದಾಗಿ ಘಟನೆ ಕಾಲಾತೀತತೆಯನ್ನು, ಕಾಲ್ಪನಿಕತೆಯನ್ನು ಒಳಗೊಂಡು ನಿರ್ದಿಷ್ಟ ಸ್ಥಳ, ವ್ಯಕ್ತಿಯ ಹೆಸರುಗಳು ಮರೆಮಾಚುತ್ತವೆ. ಹೀಗಾಗಿ ವಸ್ತುನಿಷ್ಠತೆ ಮತ್ತು ನೈಜತೆಯನ್ನು ಪ್ರತಿಪಾದಿಸುವುದಿಲ್ಲ ಎನ್ನುವುದು ಇತಿಹಾಸಕಾರರ ತಾರತಮ್ಯತೆಗೆ ಕಾರಣ. ಅಲ್ಲದೇ ಪ್ರಭುತ್ವ ವ್ಯವಸ್ಥೆ ಮಾತ್ರ ಚರಿತ್ರಾರ್ಹವಾದುದು ಎಂಬ ಏಕಮುಖಿ ಚಿಂತನೆಯೂ ಕಾರಣವಾಗಿದೆ. ಹೀಗಾಗಿ ಚರಿತ್ರೆ ತಜ್ಞರು ಮೌಖಿಕ ಪರಂಪರೆಯಲ್ಲಿ ಉಳಿದು, ಬೆಳೆದುಕೊಂಡು ಬರುವಂಥದ್ದನ್ನು ಚರಿತ್ರೆ ಅಥವಾ ಇತಿಹಾಸ ಎಂದು ಸ್ವೀಕರಿಸಲು ತಯಾರಿಲ್ಲ. 'ಚರಿತ್ರೆ ಎಂಬ ಪದ ಇಂದು ಕೇವಲ ಪ್ರಭುತ್ವ ವ್ಯವಸ್ಥೆಯನ್ನು ಹೇಳುವ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತದೆ3. ಚರಿತ್ರೆ ಎನ್ನುವಂಥದ್ದು ಜನಸಾಮಾನ್ಯನಿಗೂ ಇರುತ್ತದೆ. ಸಾಂಪ್ರದಾಯಿಕ ಚರಿತ್ರೆ ಕೇವಲ ಒಂದು ಸೀಮಿತ ವರ್ಗದ ಬದುಕನ್ನು ಕಟ್ಟಿಕೊಡುತ್ತದೆಯೇ ಹೊರತು, ಒಂದು ಪ್ರದೇಶದ ಎಲ್ಲ ವರ್ಗಗಳ ಬದುಕಿನ ಚರಿತ್ರೆ ಕಟ್ಟಿಕೊಡುವಲ್ಲಿ, ವಿಫಲವಾಗಿದೆ. ಇದಕ್ಕೆ ಕಾರಣ ಇತಿಹಾಸ ತಜ್ಞರು ಇತಿಹಾಸ ಎಂಬ ಪದನ್ನು ಅರ್ಥೈಸಿಕೊಂಡಿರುವ ಪರಿಕಲ್ಪನೆ. ಇಂತಹ ಇತಿಹಾಸವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡಿದರೆ ಅಪೂರ್ಣವೆಂದೆನಿಸುತ್ತದೆ. ಸಂಸ್ಕೃತಿ ಎನ್ನುವುದು ಬಹುಮುಖಿ ಆಯಾಮಗಳಿಂದ ಕೂಡಿರುವಂಥದ್ದು. ಸಾಂಪ್ರದಾಯಿಕ ಇತಿಹಾಸವನ್ನು ಸಂಸ್ಕೃತಿಯ ಒಂದು ಅಂಗವೆಂದು ಪರಿಗಣಿಸಬೇಕಾಗುತ್ತದೆ. ಕಾರಣ, ಇಂತಹ ಹಲವಾರು ಚರಿತ್ರೆಗಳು ಅದರಲ್ಲಿ ವಿಲೀನವಾಗಿರುತ್ತವೆ. ಇಂಥ ಸಾಂಸ್ಕೃತಿಕ ಚರಿತ್ರೆಯು ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿದೆ.

ಅಕ್ಷರ ಸಂಸ್ಕೃತಿ ಕಡಿಮೆ ಪ್ರಮಾಣದಲ್ಲಿರುವ ಕೆಲವು ದೇಶಗಲ್ಲಿ ಕಂಠಸ್ಥ ಹಾಗೂ ಪರಂಪರಾಗತ ಮೂಲಗಳೀಂದ ಸಾಮಗ್ರಿಗಳನ್ನು ಬಳಸಿಕೊಂಡು ತಮ್ಮ ದೇಶಗಳ ಇತಿಹಾಸವನ್ನು ಬರೆಯುತ್ತಿದ್ದಾರೆ. ನಮ್ಮಲ್ಲಿಯೂ ಕೂಡ ಇತಿಹಾಸದ ರಚನೆಗೆ ವಸ್ತುನಿಷ್ಠ ಆಕರಗಳು ದೊರೆಯದೆ ಇದ್ದಾಗ ಲಭ್ಯವಿರುವ ಮೌಖಿಕ ಆಕರಗಳ ಮೊರೆ ಗೋಗಬೇಕಾಗುತ್ತದೆ. ಆಧುನಿಕ ಆಫ್ರಿಕಾ, ಪ್ರಾಚೀನ ಗ್ರೀಸ್, ಮಧ್ಯಕಾಲೀನ ಐಸ್‌ಲ್ಯಾಂಡ್, ಆರಂಭದ ರಾಷ್ಟ್ರೀಯ ಸ್ವಿಡನ್, ಸ್ಕಾಟ್ಲೆಂಡಿನ ಊಳಿಗಮಾನ್ಯ ಹೈಲೇಂಡ್ಸ್ ಇವು ಕಂಟಸ್ಥ ಇತಿಹಾಸದ ಸತ್ಯತೆಯ ಶೋಧಕ್ಕೆ ಸಾಮಗ್ರಿಗಳನ್ನು ಒದಗಿಸುತ್ತವೆ[೨೯]. ಎಂಬ ಅಭಿಪ್ರಾಯವನ್ನು ರಿಚರ್ಡ್ ಡಾರ್ಸ್‌ನ್ ವ್ಯಕ್ತಪಡಿಸುತ್ತಾರೆ. ಹೀಗಾಗಿ ಭಾರತದ ನೈಜವಾದ, ಸಮಗ್ರವಾದ ಇತಿಹಾಸ ರಚನೆಗೆ ಇಂತಹ ಮೌಖಿಕ ಇತಿಹಾಸವನ್ನು ಆಕರವನ್ನಾಗಿ ಪರಿಗಣಿಸಿಕೊಳ್ಳಬೇಕಾದ ಅಗತ್ಯತೆಯನ್ನು ಗ್ರಹಿಸಿಕೊಳ್ಳಬಹುದಾಗಿದೆ.

ಮೌಖಿಕ ಆಕರಗಳು ಇತಿಹಾಸದ ರಚನೆಗೆ ಹೇಗೆ ಆಕರಗಳಾಗಬಲ್ಲವು ಎಂಬುದನ್ನು ಆಫ್ರಿಕಾ ಖಂಡದ ಚರಿತ್ರೆಯನ್ನು ಬರೆದ ಜಾನ್ ವ್ಯಾನ್‌ಸಿನನ ಹೇಳಿಕೆಯನ್ನು ಉಲ್ಲೇಖಿಸಿ ಡಾ. ವಿವೇಕ ರೈ ಹೀಗೆ ಹೇಳುತ್ತಾರೆ. ಮೌಖಿಕ ಆಧಾರವೆಂದರೆ ಬದುಕಿರುವ ಮಾನವರಿಂದ ಸಂಗ್ರಹಿಸಿರುವ ಆಧಾರ. ಹಾಗಾಗಿ ಚರಿತ್ರೆ ರಚನೆಗೆ ಇದು ನಿರ್ಜೀವ ಆಕರಗಳೆಂದು ವಾದಿಸುವುದು ಸರಿಯಲ್ಲ ಎಂದು ಪ್ರತಿಪಾದಿಸುತ್ತಾನೆ. ಆತ ಮೌಖಿಕ ಪರಂಪರೆ ಮತ್ತು ವ್ಯಕ್ತಿಯ ಸ್ಮತಿಕೋಶದ ನೆನಪುಗಳನ್ನು ಮೌಖೀಕ ಸಾಕ್ಷ್ಯ ಎಂಬುದಾಗಿ ಪರಿಗಣಿಸುತ್ತಾನೆ. ಮೌಖಿಕ ಸಾಕ್ಷ್ಯವೆಂದರೆ ಅದು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆ ಹೊಂದಿರುವಂಥದ್ದು[೨೦] ಎಂದಿದ್ದಾರೆ. ಇಂಥ ಮೌಖಿಕ ಆಕರಗಳು ಕಾಲಾತೀತವಾಗಿದ್ದರೂ ವಾಸ್ತವಾಂಶಗಳಿಂದ ಕೂಡಿರುತ್ತವೆ. ಮೌಖಿಕ ಚರಿತ್ರೆಯಲ್ಲಿ ಪ್ರಭುತ್ವ ವ್ಯವಸ್ಥೆ ಹಾಗೂ ಅಧಿಕಾರ ವರ್ಗದ ಚರಿತ್ರೆ ಲಿಖಿತ ಚರಿತ್ರೆಗಿಂತ ಭಿನ್ನವಾಗಿ ಚಿತ್ರಣಗೊಂಡಿರುತ್ತದೆ. ಇಲ್ಲಿ ಪ್ರಭುತ್ವ ಮತ್ತು ಅಧಿಕಾರಿ ವ್ಯವಸ್ಥೆಯ ವಿರೋಧಿಯಾಗಿ ಜನಪದರ ಧೋರಣೆಗಳು ದಟ್ಟವಾಗಿ ಕಾಣಿಸಿಕೊಂಡಿರುತ್ತವೆ. ಇಂಥ ಘಟನೆಗಳು ವಾಸ್ತವದಲ್ಲಿ ನಡೆದಿದ್ದರೂ ಲಿಖಿತ ಇತಿಹಾಸದಲ್ಲಿ ದಾಖಲಾಗದಿರುವು ವಿಪರ್ಯಾಸವೇ ಸರಿ.

ಸಾಂಪ್ರದಾಯಿಕ ಅರ್ಥದ ಚರಿತ್ರೆ ರಚನೆಯ ಶಾಸನಗಳು, ಪ್ರವಾಸಿಗರ ಬರಹಗಳು, ಲಿಖಿತ ಸಾಹಿತ್ಯ ಕೃತಿಗಳು, ಇತರೆ ಬರವಣಿಗೆಯ ರೂಪದ ಕಡತಗಳು ಹಾಗೂ ದಾಖಲೆಗಳು ಇಂತಹ ಬರೆಹದ ರೂಪಗಳ ಸಾಮಗ್ರಿಗಳ ಮೇಲೆಯೇ ಅವಲಂಬಿತವಾಗಿದುದ್ದರಿಂದ ಈ ರೀತಿಯ ಇತಿಹಾಸ ಗ್ರಂಥಗಳಲ್ಲಿ ಸಾಮಾನ್ಯವಾಗಿ ನಮಗೆ ದೊರೆಯುವುದು ಬರೆಹಬಲ್ಲವರ ಜೀವನ ವೃತ್ತಾಂತ ವೃತ್ತಾಂತ ಮಾತ್ರ, ಶಾನಗಳ ರಚನೆಗಳಂತೂ ಬಹುಪಾಲು ಆಳುವವರ ಅಧಿಕಾರಸ್ಥರ ನಿರ್ದೇಶನದಲ್ಲಿ ನಿರ್ಮಿತವಾದವುಗಳಾದ್ದರಿಂದ ಅವುಗಳಲ್ಲಿ ನಮಗೆ ಸಿಗುವುದು ರಾಜರುಗಳ ವೈಭವ, ಅವರು ನಡೆಸಿದ ಯುದ್ಧಗಳು, ಅವರ ನಡುವಿನ ಪರಸ್ಪರ ಒಪ್ಪಂದಗಳು, ಅವರು ಕೊಟ್ಟ ದಾನಗಳ ಪ್ರಶಂಸೆ, ಅವರಿಗಾಗಿ ಹೋರಾಡಿ ತಮ್ಮ ಪ್ರಣವನ್ನರ್ಪಿಸಿದ ವೀರಯೋಧರ ಉಲ್ಲೇಖ, ಅವರ ವೈಭವದ ಪ್ರತೀಕಗಳಾದ ದೇವಾಲಯ ಮತ್ತು ಮಠಗಳು ಹಾಗೂ ಆಳುವವರ ಸಂಸ್ಕೃತಿಯುಳ್ಳ ಆರ್ಥಿಕ ವ್ಯವಸ್ಥೆಯ ಚಿತ್ರಣ,[೨೧] ಇಂಥ ಪ್ರಭುತ್ವ ಎಳೆಗಳುಳ್ಳ ಚರಿತ್ರೆಯನ್ನು ಅಕ್ಷರ ಬಾರದ ಜನಸಾಮಾನ್ಯರು ತಮ್ಮ ಚರಿತ್ರೆಯೊಂದಿಗೆ ಕಟ್ಟಿಕೊಟ್ಟಿದ್ದಾರೆ. ಅರಸರ ನಾನಾ ಮುಖಗಳನ್ನು ಅರಿತುಕೊಳ್ಳಲು ಮೌಖೀಕ ಚರಿತ್ರೆ ಮುಖ್ಯವೆನಿಸುತ್ತದೆ. ಅಲ್ಲದೆ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವಾಗ ಸ್ಥಳೀಯವಾಗಿ ದೊರೆಯುವ ಮೌಖಿಕ ಆಕರಗಳು ಪ್ರಮುಖವೆನಿಸುತ್ತವೆ.

ಇತಿಹಾಸ ತಜ್ಞರು, ಜಾನಪದ ವಿದ್ವಾಂಸರು ಇತಿಹಾಸ ರಚನೆಗೆ ಕಂಠಸ್ಥ ಪರಂಪರೆಯ ಆಕರಗಳನ್ನು ಬಳಸಿಕೊಳ್ಳಬೇಕಾದ ಸತ್ಯಾಸತ್ಯತೆಗಳನ್ನು ವಿವೇಚಿಸಿ, ವಿಧಿ-ವಿಧಾನಗಳನ್ನು ರೂಪಿಸಿಕೊಳ್ಳುವ ಅಗತ್ಯತೆ ಇದೆ. ಇತ್ತೀಚೆಗೆ ಈ ಕೆಲಸದಲ್ಲಿ ಇತಿಹಾಸ ತಜ್ಞರು, ಜಾನಪದ ವಿದ್ವಾಂಸರು ಕಾರ್ಯಪ್ರವೃತ್ತರಾಗಿ ಕಂಠಸ್ಥ ಪರಂಪರೆಯನ್ನು ಇತಿಹಾಸ ರಚನೆಗೆ ಬಳಸಿಕೊಳ್ಳಬಹುದಾದ ಹೊಸ ಸಾಧ್ಯತೆಗಳತ್ತ ಮುಖ ಮಾಡಿರುವುದನ್ನು ಕಾಣುವೆವು. ಅಲ್ಲದೇ ಸಾಂಪ್ರದಾಯಿಕ ಇತಿಹಾಸದ ವ್ಯಾಪ್ತಿಯನ್ನು ಪುನರ್ ರಚಿಸುವ ಕಡೆಗೆ ತಮ್ಮ ಒಲವು ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಮೌಖಿಕ ಆಕರಗಳಲ್ಲಿಯ ಐತಿಹಾಸಿಕ ಸಂಗತಿಗಳನ್ನು, ಸತ್ಯತೆಯನ್ನು ಗುರುತಿಸಲು ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಮತ್ತು ಅದರ ಅಗತ್ಯತೆಯನ್ನು ವಿವಿಧ ವಿದ್ವಾಂಸರು ಸೂಚಿಸಿದ್ದಾರೆ.

ಮೌಖಿಕ ಆಕರಗಳಲ್ಲಿಯ ಐತಿಹಾಸಿಕ ಸಮಂಜಸತೆಯನ್ನು ಮೌಲ್ಯಮಾಪನ ಮಾಡಲು ರಿಚರ್ಡ್ ಡಾರ್ಸ್‌ನ್ ಅವರು ತಮ್ಮ **"Folklore and Traditional History"** ಕೃತಿಯಲ್ಲಿ ಪ್ರತಿಪಾದಿಸಿದ ಕೆಲವು ಅಂಶಗಳನ್ನು ಆಧರಿಸಿ ಬಿ.ಎ. ವಿವೇಕ ರೈಯವರು ಈ ಕೆಳಗಿನಂತೆ ವಿವರ ನೀಡಿರುವರು:

೧. ಐತಿಹಾಸಿಕ ಆವರಣಕ್ಕೆ ಕಸಿಮಾಡಿದ ಜನಪದ ಅಂಶಗಳನ್ನು ಗುರುತಿಸುವುದು.

೨. ವೈಯುಕ್ತಿಕ ಮತ್ತು ಭಾವನಾತ್ಮಕ ಒಲವುಗಳು ಒಂದು ಪರಂಪರೆಯನ್ನು ತಿರುಚಲು ಅವಕಾಶ ಕಲ್ಪಿಸಿದ್ದನ್ನು ಕಂಡುಹಿಡಿಯುವುದು.

೩. ಬಹುಮುಖ ಪರಂಪರೆಗಳನ್ನು ಪರಸ್ಪರ ಹೋಲಿಸಿ ಸಾದೃಶ್ಯ ವೈದೃಶ್ಯಗಳನ್ನು ಪತ್ತೆ ಹಚ್ಚುವುದು.

೪. ಒಂದು ಪರಂಪರೆಯನ್ನು ಮುದ್ರಿತ ದಾಖಲೆಗಳೊಂದಿಗೆ ಹೋಲಿಸಿ ದೃಢೀಕರಿಸುವುದು.

೫. ಭೌಗೋಳಿಕ ವೈಶಿಷ್ಟ್ಯಗಳನ್ನು ಗಮನಿಸಿಕೊಂಡು ಒಂದು ಪರಂಪರೆಯನ್ನು ದೃಢೀಕರಿಸುವುದು.

೬. ವಸ್ತುರೂಪದ ಸಂಸ್ಕೃತಿಯ ಪರಂಪರೆಯನ್ನು ದೃಢೀಕರಿಸುವುದು. ಅಮದರೆ ಪರಂಪರಾಗತ ಇತಿಹಾಸದಲ್ಲಿ ಬರುವ ಉಪಖ್ಯಾನವನ್ನು ಸ್ಥಿರೀಕರಿಸಲು ಪ್ರಾಚೀನ ಕಾಸದ ಜನರು ದೈನಂದಿನ ಬದುಕಿನಲ್ಲಿ ಬಳಸುತ್ತಿದ್ದ ವಸ್ತುರೂಪದ ಸಾಮಗ್ರಿಗಳ ಸಹಾಯವನ್ನು ಪಡೆಯುವುದು.

೭. ನಿರೂಪಕನೊಬ್ಬನ ನಡವಳಿಕೆಗಳ ಬಗೆಗಿನ ತಿಳುವಳಿಕೆ, ಆಧುನಿಕ ಸಂಗ್ರಾಹಕರು ಈಗ ಅನಾಮಧೇಯ

ಪಠ್ಯಗಳನ್ನು ಪ್ರಸ್ತುತ ಪಡಿಸುವ ಕ್ರಮವನ್ನು ಕೈಬಿಟ್ಟು, ನಿರೂಪಕರ ವ್ಯಕ್ತಿತ್ವ ಹಾಗೂ ಜೀವನ ವಿಧಾನದ ಸಂಪೂರ್ಣ ವರದಿಯನ್ನು ಸಿದ್ದಗೊಳಿಸುತ್ತಾರೆ. ಈ ನಿರೂಪಕರು ಪರಂಪರಾಗತ ಸಾಮಗ್ರಿಯನ್ನು ನಮ್ಮವರೆಗೆ ತಂದು ಮುಟ್ಟಿಸಿದ್ದಾರೆ. ಆದ್ದರಿಂದ ಇಂತಹ ನಿರೂಪಕರ ಬಗೆಗಿನ ವಿವರವಾದ ಮಾಹಿತಿಯು ಇಲ್ಲಿ ಬಹಳ ಅವಶ್ಯಕವಾಗುತ್ತದೆ.

ಈ ಮೇಲಿನ ಮಾರ್ಗದರ್ಶಕ ಸೂತ್ರಗಳ ಆಧಾರದಿಂದ ಇತಿಹಾಸಕಾರರು ಕಂಠಸ್ಥ ಐತಿಹಾಸಿಕ ಪರಂಪರೆಯ ಸಾಮಗ್ರಿಗಳನ್ನು ಹೆಚ್ಚಿನ ಭರವಸೆಯಿಂದ ಬಳಸಿಕೊಳ್ಳಬಹುದು.[೩೨]

ಕಂಠಸ್ಥ ಪರಂಪರೆಯ ವಿವರಗಳನ್ನು ನಿಜವಾದ ಇತಿಹಾಸ ರಚನೆಗೆ ಸಾಕ್ಷ್ಯಗಳೆಂದು ಪರಿಗಣಿಸುವುದು ಹೇಗೆ ಎಂಬ ಪ್ರಶ್ನೆಯನ್ನು ವಿವೇಕ ರೈ ಅವರು ಎತ್ತಿಕೊಂಡು ಹೀಗೆ ಹೇಳುತ್ತಾರೆ: ಒಂದು ಘಟನೆಯನ್ನು ಕಣ್ಣಾರೆ ನೋಡಿದ ನಂಬಲರ್ಹ ವ್ಯಕ್ತಿಗಳ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮೌಖಿಕ ವಿವರಗಳು ಸಮಾನವಾಗಿದ್ದಾಗ, ಅದು ಲಿಖಿತ ಮೂಲಗಳಿಂದ ದೊರೆಯುವ ವಸ್ತುನಿಷ್ಠತೆ ಮತ್ತು ನೈಜತೆಯನ್ನು ಕೊಡಬಲ್ಲದು. ಬಹಳ ಬಾರಿ ನಾವು ಲಿಖಿತ ಆಧಾರಗಳೆಂದು ಕರೆಯುವವುಗಳು ಇಂತಹ ಮೌಖಿಕ ವಿವರಣೆಯನ್ನೇ ಅವಲಂಬಿಸಿದವುಗಳಾಗಿರುತ್ತವೆ. ಆಧಾರ ಸಾಮಗ್ರಿಗಳು ಲಿಖಿತ ಅಥವಾ ಕಂಠಸ್ಥ ಈ ರೀತಿ ಯಾವುದೇ ಆಗಿದ್ದರೂ ಇತಿಹಾಸಕಾರನೊಬ್ಬನು ಎರಡು ಸಂದರ್ಭಗಳಲ್ಲೂ ಇಂತಹ ಆಧಾರ ಮತ್ತು ಉದ್ದೇಶಗಳ ಬಗ್ಗೆ ಎಚ್ಚರವನ್ನು ಹೊಂದಿರಬೇಕಾಗುತ್ತದೆ. ಒಬ್ಬನ ಸಾಕ್ಷ್ಯವು ಇನ್ನೊಬ್ಬನ ಸಾಕ್ಷ್ಯಕ್ಕಿಂತ ಭಿನ್ನವಾಗಿರುವ ಗ್ರಹಿಕೆಯನ್ನು ಮತ್ತು ದೃಷ್ಟಿಕೋನವನ್ನು ಇತಿಹಾಸಕಾರನು ಪಡೆದಿರಬೇಕಾಗುತ್ತದೆ.[೩೩] ಪಿ.ಗುರುರಾಜ ಭಟ್ಟರು ಚರಿತ್ರೆಯ ರಚನೆಯ ಸಂದರ್ಭದಲ್ಲಿ ಐತಿಹ್ಯ ಪುರಾಣಗಳು

ವಿಮರ್ಶೆಗೆ ಒಳಗಾಗಬೇಕಾದ ಅವಶ್ಯಕತೆಯಿದೆಯೆಂದರೂ ನಂಬಿಕೆ, ಸಂಪ್ರದಾಯ ಮೊದಲಾದವನ್ನು ಚರಿತ್ರೆ ರಚನೆಯ ಪ್ರಾಥಮಿಕ ಆಕರಗಳಡಿಯಲ್ಲಿ ಸೇರಿಸುತ್ತಾರೆ[೩೪]

ಅದೇ ರೀತಿ ಅಶೋಕ ಶೆಟ್ಟರ ಅವರು ಸಹ ಇತಿಹಾಸದ ಪುನರ್ರಚನೆಯ ಸಮಗ್ರತೆಗೆ ಸ್ಥಳೀಯತೆಯ ಆಯಾಮಗಳ ಅಗತ್ಯತೆಯನ್ನು ಹೀಗೆ ಹೇಳುವರು; ಸಮಕಾಲೀನ ಸಾಂಸ್ಕೃತಿಕ ಮೌಲ್ಯ ಹಾಗೂ ಗ್ರಹಿಕೆಗಳ ಪುನರ್ ಮೌಲ್ಯೀಕರಣದ ಆಯಾಮಗಳೂ ಚರಿತ್ರೆಯ ಅಧ್ಯಯನಕ್ಕೆ ಈಗ ಸೇರ್ಪಡೆಯಾಗುತ್ತಿವೆ. ಚರಿತ್ರೆಯ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ತಮ್ಮದೇ ಆದ ಕೊಡುಗೆಗಳನ್ನು ಕೊಟ್ಟು ಚರಿತ್ರೆಯಲ್ಲಿ ತಮಗೆ ನ್ಯಾಯವಾಗಿ ಲಭ್ಯವಾಗಬೇಕಾದ ಗಮನದಿಂದ ವಂಚಿತರಾಗಿ, ನಿರ್ಲಕ್ಷಿತರಾಗಿ ಉಳಿದ ಜನವರ್ಗಗಳೀಗೂ ಇವೆ. ಇತಿಹಾಸದ ವಾಸ್ತವಿಕ ನೆಲೆಗಳನ್ನು ಹುಡುಕುವ ಕೆಲಸ ಅಕ್ಷರ ಸಂಸ್ಕೃತಿಯ ಆಚೆಗೇ ಉಳಿದಿರುವ ಜನಸಮುದಾಯಗಳ ಕಲಾತ್ಮಕ ಅಭಿವ್ಯಕ್ತಿಯಾದ ಮೌಖಿಕ ಆಕರಗಳ ನೆಲೆಯಲ್ಲಿಯೂ ನಡೆಯಬೇಕಾಗಿದೆ.[೩೫] ಅನಿವಾರ್ಯತೆ ಹಾಗೂ ಅವಶ್ಯಕತೆಯನ್ನು ಎತ್ತಿತೋರಿಸಿರುವರು.

ಜಾನಪದದ ಮೌಖಿಕ ಆಕರಗಳನ್ನು ಇತಿಹಾಸದ ರಚನೆಯ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಬೇಕೆನ್ನುವ ವಿದ್ವಾಂಸರ ಅಭಿಪ್ರಾಯಗಳು ಇತಿಹಾಸದ ಪರಿಕಲ್ಪನೆಯ ಗ್ರಹಿಕೆ ಮತ್ತು ನಿಲುವುಗಳಲ್ಲಿ ಬದಲಾವಣೆಯನ್ನು ಬಯಸುತ್ತದೆ. ಕೇವಲ ನಿರ್ದಿಷ್ಟ ಹೆಸರು, ಕಾಲ, ಸ್ಥಳಗಳನ್ನು ನಿರ್ದಿಷ್ಟ ಕ್ರಮದಲ್ಲಿ ಹೇಳಿದರೆ ಅದು ಪೂರ್ಣ ಪ್ರಮಾಣದ ಇತಿಹಾಸವಾಗಲಾರದು. ಇವುಗಳಿಂದ ಹೊರತಾದ ಜನಸಮುದಾಯದ ಜೀವನಾವರ್ತನದ ಮೌಲ್ಯಗಳು, ನೋವು-ನಲಿವು, ಆಸೆ-ಆಕಾಂಕ್ಷೆ, ವಿಧಿ-ನಿಷೇಧ, ರೀತಿ-ನೀತಿ ಮುಂತಾದ ವಿಕಾಸದ ವಿವಿಧ ಆಯಾಮಗಳನ್ನು ಇತಿಹಾಸ ರಚನೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ನಿಲುವುಗಳನ್ನು ವಿದ್ವಾಂಸರ ಅಭಿಪ್ರಾಯಗಳು ಬಿಂಬಿಸುವುವು.

ಜನಪದ ಸಾಹಿತ್ಯ ಬಹುತೇಕ ಶಿಷ್ಟ ಸಾಹಿತ್ಯ ರೂಪಕಗಳ ಜನನಿ. ಅನಕ್ಷರಸ್ಥ ಜನಸಮುದಾಯಗಳಿಂದ ಹುಟ್ಟು ಪಡೆದ ಈ ಸಾಹಿತ್ಯ ಇಡೀ ಜನಾಂಗವನ್ನು ಪ್ರತಿನಿಧಿಸುವಂಥದ್ದು. ಜೊತೆಗೆ ದೇಸಿ ಸಂಸ್ಕೃತಿಯ ಸಮಸ್ತ ಮುಖಗಳನ್ನು ಒಳಗೊಂಡಿರುವಂಥದ್ದು. ಹೀಗಾಗಿ ಪ್ರಾಚೀನ ಸಂಸ್ಕೃತಿಯ ಆಯಾಮಗಳನ್ನು ಅರ್ಥೈಸಿಕೊಳ್ಳು ಜನಪದ ಸಾಹಿತ್ಯದ ಅಧ್ಯಯನ ಅಗತ್ಯ, ಅಜ್ಞಾತ ಕರ್ತೃತ್ವದಿಂದಾಗಿ ಸಮಷ್ಟಿ ಸೃಷ್ಟಿಯಾಗಿ ವಾಕ್ ಸಂಪ್ರದಾಯದಲ್ಲಿ ಕಥೆ, ಗೀತೆ, ಕಥನಗೀತೆ, ದಂತಕಥೆ, ಗಾದೆ, ಒಗಟು, ಐತಿಹ್ಯಗಳಂಥ ರೂಪಗಳನ್ನು ಪಡೆದುಕೊಳ್ಳುತ್ತದೆ. ಈ ಸಾಹಿತ್ಯ ಪ್ರಕಾರಗಳು ಆಯಾ ಕಾಲದ ವಾಸ್ತವ ಸಂಗತಿಗಳನ್ನು ಆಧರಿಸಿಯೇ ನಿರೂಪಿತೊಂಡಿರುತ್ತವೆ. ಹೀಗಾಗಿ ಜನಪದ ಸಾಹಿತ್ಯವು ಸಂಸ್ಕೃತಿ ಪರಂಪರೆಗಳನ್ನು ಜನಾಂಗದಿಂದ ಜನಾಂಗಕ್ಕೆ ಹಬ್ಬಿರುವ, ಕಾಲಮಾನಕ್ಕೆ ತಕ್ಕಂತೆ ಪ್ರತಿಸ್ಪಂದಿಸುವ, ಪರಿವರ್ತನೆಗೊಳ್ಳುವ, ಪರಂಪರೆ ಪ್ರಗತಿಗಳಿಗೆ ಸೇತುವೆಯಾಗಿರುವ, ಜೀವನದ ಸಮಗ್ರ ಕ್ಷೇತ್ರವನ್ನು ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳುವ ಭೂಮಿ ಆಕಾಶಗಳನ್ನು ಒಂದುಗೂಡಿಸುವ, ಕಲೆ ವಿಜ್ಞಾನಗಳೆರಡನ್ನೂ ತನ್ನ ಪರಿಮಿತಿಯಲ್ಲಿ ಮೈಗೂಡಿಸಿಕೊಳ್ಳುವ ಈ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಬೇಕಾದದ್ದು ಸಂಶೋಧನೆ ನಡೆಸಬೇಕಾದದ್ದು, ವಿಶ್ಲೇಷಣೆ ತೊಡಗಿಸಬೇಕಾದದ್ದು ಬೇಕಾದಷ್ಟಿದೆ[೩೬] ಎಂಬುದು ಡಾ.ಗುರುಲಿಂಗ ಕಾಪಸೆಯವರ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಐತಿಹ್ಯ ವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ಅಧ್ಯಾಯದಲ್ಲಿ ಐತಿಹ್ಯಗಳಲ್ಲಿಯ ಚಾರಿತ್ರಿಕ ಅಂಶಗಳು ಇತಿಹಾಸಕ್ಕೆ ಆಕರಗಳಾಗ ಬಲ್ಲವೆಂಬುದನ್ನು ಸಮರ್ಥಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಲಿಖಿತ ದಾಖಲೆಗಿಂತ ಐತಿಹ್ಯಗಳು ಹೇಗೆ ಭಿನ್ನವಾಗಿ ಚರಿತ್ರೆಯನ್ನು ಕಟ್ಟಿಕೊಡುತ್ತವೆನ್ನುವುದು ಕೂಡ ಚರ್ಚೆಗೊಳಪಡಿಸಲಾಗಿದೆ. ಈ ಎರಡು ನೆಲೆಗಳಿಂದ ರಾಯಚೂರು ಜಿಲ್ಲೆಯ ಐತಿಹಾಸಿಕ ಚರಿತ್ರೆಯನ್ನು ಐತಿಹ್ಯಗಳ ಮೂಲದಿಂದ ಅರಿಯುವ ಪ್ರಯತ್ನ ಮಾಡಲಾಗಿದೆ. ಐತಿಹ್ಯ ವಾಸ್ತವ ಘಟನೆಯೊಂದನ್ನು ಕಲಾತ್ಮಕವಾಗಿ ಕಟ್ಟಿಕೊಡುವುದರಿಂದ ಇದು ಸಹಜವಾಗಿಯೇ ಸಾಹಿತ್ಯಿಕ ಮತ್ತು ಚಾರಿತ್ರಿಕ ಎಳೆಗಳನ್ನು ಗರ್ಭಿಕರಿಸಿಕೊಂಡಿರುತ್ತದೆ. ಹೀಗಾಗಿ ಚರಿತ್ರಕಾರನೊಬ್ಬ ಸಾಹಿತ್ಯದೊಂದಿಗೆ ಅನುಸಂಧಾನ ನಡೆಸುವುದು ಅಗತ್ಯ ಮತ್ತು ಅನಿವಾರ್ಯ. ಎಲ್ಲ ಜ್ಞಾನ ಶಾಖೆಗಳು ಮಿಳಿತವಾಗಿ ಮೈದಾಳುವ ಇರಲಿ, ಚರಿತ್ರೆಯೇ ಇರಲಿ ಎರಡೂ ಶಿಸ್ತುಗಳನ್ನು ಅನ್ವೇಷಿಸುವುದು-ಬೇರೆ ಬೇರೆ ಮಾರ್ಗಗಳ ಮೂಲಕವಾದರೂ ಸತ್ಯವನ್ನೇ[೩೭] ಎನ್ನುವ ಚಂದ್ರಶೇಖರ ಎಸ್. ಅವರ ಮಾತು ಇಲ್ಲಿ ಮನನೀಯವಾದುದು. ಇಂಥ ಎರಡು ಶಿಸ್ತುಗಳಿಂದ ಮೈದಾಳಿರುವ ಐತಿಹ್ಯಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ವಿಶಿಷ್ಟ್ಯಪೂರ್ಣವು, ಅಗತ್ಯವು ಎಂದು ಹೇಳಬೇಕು.

ಚರಿತ್ರೆ ಮತ್ತು ಐತಿಹ್ಯಗಳು ಒಂದೇ ಘಟನೆಯನ್ನು ಆಧರಿಸಿ ಹುಟ್ಟು ಪಡೆದಿದ್ದರೂ ಕೂಡ, ಕಾಲಾಂತರದಲ್ಲಿ ಇವು ಭಿನ್ನಭಿನ್ನ ಸ್ವರೂಪವನ್ನು ತಾಳಿರುವವು. ಇದಕ್ಕೆ ಕಾರಣ, ಅವುಗಳ ಸಂವಹನ ಮಾರ್ಗ. ಇತಿಹಾಸ ಲಿಖಿತ ಪರಂಪರೆಯಲ್ಲಿ ದಾಖಲಾದರೆ, ಐತಿಹ್ಯ ಸಂಸ್ಮೃತಿಯ ರೂಪದಲ್ಲಿ ಮೌಖಿಕ ಪರಂಪರೆಯಲ್ಲಿ ಉಳೀಯುತ್ತದೆ. ಲಿಖಿತ ದಾಖಲೆಗಳು ನಿರ್ದಿಷ್ಟತೆಯನ್ನು ಕಾಯ್ದುಯಕೊಂಡರೆ, ಸ್ಮೃತಿಗಳು ಕಾಲ ಸಂರ್ಭ ಅಂಶಗಳನ್ನು ಸ್ವೀಕರಿಸುತ್ತದೆ. ಚರಿತ್ರೆ ಎಂಬುದು ಕಾಲದ ಅಂರತದಲ್ಲಿ ಘಟನೆಗಳನ್ನು ಕಟ್ಟುವ ಮತ್ತು ವ್ಯಾಖ್ಯಾನಿಸುವ ಕ್ರಿಯೆಯಾಗಿರುವುದರಿಂದ ಲಿಖಿತ ಆಧಾರಗಳನ್ನು ಬಳಸಿ ಕಟ್ಟುವ ಚರಿತ್ರೆಯಲ್ಲಿ ಬಹಳ ಬಾರಿ ಕಟ್ಟಿದ ಚರಿತ್ರೆಯನ್ನು ಮತ್ತೆ ಒಡೆದು ಕಟ್ಟುವುದಕ್ಕೆ ವಿರೋಧವಿರುತ್ತದೆ. ಜಾನಪದವು ಚರಿತ್ರೆಯನ್ನು ಒಡೆದು ಕಟ್ಟುವ, ಕಟ್ಟಿ ಕೊಡೆಯುವ ಹಾಗೂ ಚರಿತ್ರೆಯಲ್ಲಿ ಅಡಗಿರುವ ಹಲವು ಸತ್ಯಗಳನ್ನು ಸಮಾನವಾಗಿ ತೆರೆದಿಡುವ ಕೆಲಸವನ್ನು ನಿರ್ಲಿಪ್ತವಾಗಿ ಮಾಡುತ್ತವೆ.[೩೮] ಈ ತೆರನಾದ ಸ್ವೀಕರಣದಿಂದ ಮೂಲ ಅಂಶಗಳು ಮರೆಮಾಚುವ ಸಂಭವವಿರುತ್ತದೆ. ಇದರಿಂದಾಗಿ ಐತಿಹ್ಯಗಳು ಕಾಲಾತೀತತೆಯ ಸ್ವರೂಪವನ್ನು ಪಡೆದುಕೊಳ್ಳುತ್ತವೆ. ಹೀಗಿದ್ದು, ಐತಿಹ್ಯದ ಘಟನೆಯೊಂದರಲ್ಲಿ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ಸಂಭವಿಸಿದ ಜೀವನ ಸಂಗತಿ, ಜೀವನ ವಿಧಾನ ಬಳಕೆಯಲ್ಲಿದ್ದ ಸ್ವರೂಪ ಅಡಕವಾಗಿರುತ್ತದೆ. ಅವುಗಳ ರೀತಿ-ನೀತಿ, ಸಂಪ್ರದಾಯ-ಆಚರಣೆ, ಮತ-ಧರ್ಮ- ಹಾಗೂ ಭೌತಿಕ ಆಕರಗಳಾಗಿ ಬಳಕೆಯಾಗುವ ಮರ, ಗುಡ್ಡ, ದೇವಸ್ಥಾನ, ಕೆರೆ, ಬಾವಿ, ಆಯುಧ ಶಿಲ್ಪಕಲೆ ಮುಂತಾದವುಗಳು ಅನಾವರಣಗೊಂಡಿರುತ್ತವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಐತಿಹ್ಯ ದೊರೆಯುವ ಪ್ರದೇಶದ ಚಾರಿತ್ರಿಕ ಹಿನ್ನಲೆಯನ್ನು ಗಮನಿಸಿ, ಮರೆಮಾಚಿರುವ ವಾಸ್ತವ ಸತ್ಯ ಕಾಲನಿರ್ಣಯವನ್ನು ಗುರುತಿಸುವುದು, ಪರಿಶ್ರಮದಾಯಕವಾಗಿದೆ. ಹಾಗಾದಲ್ಲಿ ಮಾತ್ರ ಐತಿಹ್ಯಗಳು ಚರಿತ್ರೆಗೆ ಮೂಲ ಆಕರಗಳಾಗಿ ಉಪಯುಕ್ತ ನೆರವನ್ನು ನೀಡಬಲ್ಲವು. ಇಂಥ ಐತಿಹಾಸಿಕ ಮಾಹಿತಿಯಲ್ಲಿ ಇತಿಹಾಸದೊಂದಿಗೆ ಸಾಮ್ಯತೆ ಇರುವಂತೆ, ವಿಭಿನ್ನತೆಯೂ ಇರುವುದನ್ನು ಮನಗಾಣಬಹುದಾಗಿದೆ.

ಸಾಂಪ್ರದಾಯಿಕ ಇತಿಹಾಸದಲ್ಲಿ ವ್ಯಕ್ತವಾಗುವ ಘಟನೆಗಳು ಅರಸರ ಜಯ-ಅಪಜಯ, ಕೆರೆ-ಬಾವಿ, ದೇಸ್ಥಾನ ಕಟ್ಟಿಸಿದ, ದಾನ-ದತ್ತಿ ಬಿಟ್ಟ, ಮೂರ್ತಿ-ಶಾಸನ ವೀರಗಲ್ಲು-ಮಾಸ್ತಿಗಲ್ಲು ಕೆತ್ತಿಸಿದ ವಿವರಗಳನ್ನು ಒಳಗೊಂಡಿರುತ್ತದೆ.

ಐತಿಹ್ಯ ಇದಕ್ಕೂ ಮಿಗಿಲಾಗಿ ಇಂತಹ ಘಟನೆಗಳ ಕಾರ್ಯಕಾರಣ ಸಂಬಂಧವನ್ನು ಮತ್ತು ಜನಸಾಮಾನ್ಯರ ಜೀವನ ವಿಧಾನವನ್ನು ಹೇಳುತ್ತದೆ. ಇಚಿಥ ಅಲಿಖಿತ ಬಹುಸಂಖ್ಯಾತ ಸಮುದಾಯದ ಮೌಲ್ಯಯುತ ಬದುಕನ್ನು ಇತಿಹಾಸ ರಚನೆಯಲ್ಲಿ ಕಡೆಗಣಿಸಲಾಯಿತು. ಇತಿಹಾಸ ಬರೆಯುವ ಪ್ರಸಂಗದಲ್ಲಿ ಲಿಖಿತ ಸಾಮಾಗ್ರಿಗಳಾದ ಶಾಸನಾದಿಗಳಿಗೆ ಪ್ರಧಾನ ಸ್ಥಾನವನ್ನು, ಕಾವ್ಯಾಧಿಗಳಿಗೆ ಗ್ಣಿಣಸ್ಥಾನವನ್ನು ಕೊಡುತ್ತಿರುವ ಸಚಿತಾನವಾದ ಭಾರತದಲ್ಲಿ ಲಿಖಿತ ರೂಪದಲ್ಲಿ ಉಳಿದು ಬಂದಿರುವ ಆಧಾರವಾದ ಅನೇಕ ಸಾಮಗ್ರಿಗಳು ನೂರಕ್ಕೆ ಐದರಷ್ಟು. ಅಲಿಖಿತ ರೂಪದಲ್ಲಿ ತೊಂಬತ್ತೈದರಷ್ಟು ಇದೆ. ಹೀಗಿರುವಾಗ ಇತಿಹಾಸ ರಚನಾ ಕಾರ್ಯದಲ್ಲಿ ಅಲಿಖಿತ ಸಾಮಗ್ರಿಯಾದ ಜಾನಪದವನ್ನು ಅಲಕ್ಷಿಸುವುದು ಪ್ರಮಾದವಾಗುತ್ತದೆ. ಇದನ್ನು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲಿರುವುದು ಸರಿಯಾದ ಕ್ರಮವೆಚಿದು ಹೆಳಬೇಕು. ಎಂದು ಎಂ. ಎಂ. ಕಲಬುರ್ತಿಯವರು ಅಭಿಪ್ರಾಯ ತಾಳುತ್ತಾರೆ. ಹೀಗಾಗಿ ಮೌಖೀಕ ಪರಂಪರೆಯ ಐತಿಹ್ಯಗಳು ಲಿಖಿತ ಪರಂಪರೆಯಲ್ಲಿ ದಾಖಲಾಗದ ಎಷ್ಟೋ ನವೀನ ವಿಷಯಗಳನ್ನು ಅನಾವರಣಗೊಳಿಸುತ್ತವೆ. ಕಾರಣ, ಇತಿಹಾಸ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಇತಿಹಾಸಕ್ಕೆ ಆಕರವಾಗಿದೆ ಎಂದು ಹೇಳಬಹುದು.

ಚರಿತ್ರೆಯನ್ನು ನಾವು ಸಾಂಸ್ಕೃತಿಕ ಚರಿತ್ರೆ, ಧಾರ್ಮಿಕ ಚರಿತ್ರೆ, ಸಾಮಾಜಿಕ ಚರಿತ್ರೆ, ರಾಜಕೀಯ ಚರಿತ್ರೆ, ಮತ್ತು ಆರ್ಥಿಕ ಇತಿಹಾಸ ಎಂಬುದಾಗಿ ವಿಂಗಡಿಸಿಕೊಳ್ಳಬಹುದು. ಅಂದರೆ ನಾವಿಂದು ಕಾಣುವ ಚರಿತ್ರೆಯಲ್ಲಿ ಆರ್ಥಿಕ ವ್ಯವಸ್ಥೆಗಳು ಅಡಕವಗಿರುತ್ತವೆ. ಧರ್ಮ ಎಂಬುದು ಸಂಸ್ಕೃತಿಯಲ್ಲಿ ಸಮಾವೇಶಗೊಳ್ಳುವ್ಯದರಿಂದ ಧಾರ್ಮಿಕ ವ್ಯವಸ್ಥೆಯನ್ನು ಸಾಂಸ್ಕೃತಿಕ ವ್ಯವಸ್ಥೆ ಯೊಳಗೇ ಅಧ್ಯಯನ ಮಾಡಬಹುದಾಗಿದೆ. ಜಾನಪದ ಅಧ್ಯಯನದಿಂದ ಕೇವಲ ಮೇಲುನೋಟಕ್ಕೆ ಕಂಡುಬಂದರೂ ಉಳಿದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳೂ ಕೆಲಮಟ್ಟಿಗೆ ಇದರಿಂದ ವ್ಯಕ್ತವಾಗುವುದುಂಟು. ನಮಗಿಲ್ಲಿ ಜಾನಪದದ ಒಂದು ಅಂಗವಾದ ಜನಪದ ಸಾಹಿತ್ಯ ಮುಖ್ಯ. ಅದರಲ್ಲೂ ಒಂದು ಪ್ರಕಾರವಾದ ಐತಿಹ್ಯ ಪ್ರಸ್ತುತ. ದಕ್ಷಿಣ ಕನ್ನಡ ಜಿಲ್ಲೆಯ ಈ ಬಗೆಯ ಐತಿಹ್ಯಗಳು ಅಲ್ಲಿನ ಇತಿಹಾಸ ರಚನೆಯಲ್ಲಿ ಯಾವ ರೀತಿಯ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯುವುದು ಅವಶ್ಯ. ಮನುಷ್ಯನ ಜೀವನದ ಆಚಿತರಿಕ ವ್ಯವಸ್ಥೆಯ ಕುರುಹನ್ನು ಸಂಸ್ಕೃತಿಯನ್ನುತ್ತಾರೆ. ಅಚಿದರೆ ಮಾನವ ಜೀವನದ ಅಂತರಂಗದ ಪಕ್ವತೆಯೇ ಸಂಸ್ಕೃತಿಯೆನಿಸುತ್ತದೆ. ಈ ಸಂಸ್ಕೃತಿಗೂ (ಅಂತರಂಗದ ಪಕ್ವತೆಗೂ) ಕೆಲವೊಂದು ಕುರುಹುಗಳಿರುತ್ತವೆ. ಭಾಷೆ, ಸಾಹಿತ್ಯ, ಕಲೆ, ಕ್ರೀಡೆ, ವಿನೋದ, ಸಂಪ್ರದಾಯ, ನಂಬಿಕೆ, ನಡವಳಿಕೆ, ಆಚರಣೆ ಮೊದಲಾದವುಗಳೆಲ್ಲ ಅಂತಹ ಕುರುಹುಗಳು. ಅಂದರೆ ಇವೆಲ್ಲಾ ಮಾನವನ ಅಂತರಂಗ ಪಕ್ವತೆಯ ಸೃಷ್ಟಿ ಫಲಗಳು. ಇವು ಅಂದಿನ ಸಂಸ್ಕೃತಿಯ ಸ್ವರೂಪವನ್ನು ವ್ಯಕ್ತಪಡಿಸುತ್ತವೆ.[೩೯] ಈ ಎಲ್ಲಾ ಅಂಶಗಳ ಕ್ರಮಪ್ರಕಾರವಾದ ಅಧ್ಯಯನವು ಸಾಂಸ್ಕೃತಿಕ ಅಧ್ಯಯನವೆನಿಸುತ್ತದೆ. ಇದರಂತೆ ಮೇಲೆ ನೋಡಿದ ಧಾರ್ಮಿಕ ವ್ಯವಸ್ಥೆ ಮಾತ್ರವಲ್ಲದೆ ಸಾಮಾಜಿಕ ವ್ಯವಸ್ಥೆಯೂ ಸಾಂಸ್ಕೃತಿಕ ಅಧ್ಯಯನದಲ್ಲೇ ಸಮಾವೇಶಗೊಳ್ಳುತ್ತದೆ. ಯಾಕೆಂದರೆ ಸಾಮಾಜಿಕ ರೀತಿ-ನೀರಿಗಳೂ ಸಂಸ್ಕೃತಿಯ ಫಲಗಳೇ ಆಗಿರುತ್ತವೆ.

ಇತಿಹಾಸ ರಚನೆಯಲ್ಲಿ ಐತಿಹ್ಯದ ಪಾತ್ರದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಮತ್ತೊಮ್ಮೆ ಇತಿಹಾಸ ಪದದ ಅರ್ಥ ವ್ಯಪ್ತಿಯನ್ನು ತಿಳಿದಿಕೊಳ್ಳುವುದು ಅನಿವಾರ್ಯ. ಹಿಂದೆ ನಡೆದಿರಬಹುದಾದ ಘಟನೆ. ಆ ಘಟನೆಗಳ ದಾಖಲಾತಿ ನಡೆದಿರಬಹುದು; ಇಂದೂ ನಡೆಯುತ್ತಿವೆ. ಆದರೆ ನಡೆದಿರಬಹುದಾದ ಎಲ್ಲಾ ಘಟನೆಗಳನ್ನೂ ನಾವಿಂದು ಇತಿಹಾಸವೆಂದು ಕರೆಯಲು ಸಿದ್ಧರಿಲ್ಲ. ಅಂದಿನ ಜನಜೀವನದಲ್ಲಿ ಮಹತ್ತವಾದ ಸ್ಥಾನವನ್ನು ಪಡೆದುಕೊಂಡ, ಜನಜೀವನದ ಮಹತ್ತರ ಪ್ರೇರಕವಾಗಬಲ್ಲ ಘಟನೆಗಳನ್ನಷ್ಟೆ ನಾವು ಇತಿಹಾಸವೆಂದು ಪರಿಗಣಿಸುತ್ತಿದ್ದೆನೆ. ಆದರೆ ಹಿಂದೆ ಘಟಿಸಿದ ರಚನಾತ್ಮಕವೆನಿಸಬಲ್ಲ, ಅಂದಿನ ಕಾಲದ ಉದಾತ್ತ ಜನಜೀವನವನ್ನು, ಸಂಸ್ಕೃತಿಯನ್ನು ಎತ್ತಿ ತೋರಿಸಬಲ್ಲ, ಇಂದಿನ ಸತ್ಸಮಾನದ ರಚನೆಗೆ ಪ್ರೇರಕವಾಗಲ್ಲ ಎಷ್ಟೋ ಘಟನೆ ಸಂಗತಿಗಳು ಚರಿತ್ರೆಯಲ್ಲಿ ದಾಖಲಾಗದೇ ಹೋದುದುಂಟು. ಕೇವಲ ರಾಜಕೀಯ ಚರತ್ರೆಯ ಭಾಗವಾಗಿಯಷ್ಟೆ ನಮ್ಮಲ್ಲಿ ಹಿಂದಿನ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಇತ್ರಯದಿ ವ್ಯವಸ್ಥೆಗಳು ಚಿತ್ರಿತವಾಗಿರುವುದು ಶೋಚನೀಯ ಸಂಗತಿಯಾಗಿದೆ. ರಾಜ ಮಹಾರಾಜರುಗಳ, ಅಧಿಕಾರಿಗಳ ರಾಜಕೀಯ ಜೀವನಕ್ಕಿಂತ ಹೊರಗೂ ಬೃಹತ್ತಾದ ಜೀವನ ಪ್ರವಾಹವೊಂದಿತ್ತು. ಅದುವೇ ಜನಪದ ಜೀವನ; ಅದಕ್ಕೂ ಅದರದ್ದೇ ಆದ ಇತಿಹಾಸವೊಂದಿತ್ತು ಎಂಬುದನ್ನು ಈ ರಾಜಕೀಯ ಚರಿತ್ರೆಯಿಂದ ತಿಳಿಯಲು ಸಾಧ್ಯವಿಲ್ಲ. ಅದನ್ನು ತಿಳಿಯದೆ ಚರಿತ್ರೆಯ ಅಧ್ಯಯನ ಪರಿಪೂರ್ಣವೆನಿಸುವುದಿಲ್ಲ.[೬೦] ಅದರ ಬಗೆಗೆ ಲಿಖಿತ ದಾಖಲೆಗಳಿಲ್ಲದಿರುವುದೇ ಆ ಕುರಿತ ಗ್ರಂಥಸ್ಥವೂ, ಅಧಿಕೃತವೂ ಆದ ಚರಿತ್ರೆ ರಚನೆಯಾಗದಿರುವುದಕ್ಕೆ ಕಾರಣವೆನ್ನಬಹುದು.

ಇತಿಹಾಸ ಚರಿತ್ರೆಯೆಂದರೆ ಕೇವಲ ಹಿಂದಣ ರಾಜಕೀಯ ವ್ಯವಸ್ಥೆ ಅಥವಾ ರಾಜ ಮಹಾರಾಜ ಅಧಿಕಾರಿಗಳ ಆಡಳೀತ ವ್ಯವಸ್ಥೆ ಮತ್ತು ಜೀವನ ಘಟನೆಗಳಿಗೆ ಸಂಬಧಪಟ್ಟ ದಾಖಲಾತಿ ಮಾತ್ರವಲ್ಲ ಹಿಂದಿನ ಒಟ್ಟು ಸಮಾಜದಲ್ಲಿ ನಡೆದ ಗಮನಾರ್ಹವಾದ, ರಚನಾತ್ಮಕವಾದ, ಇಂದಿನ ಸತ್ಸಸಮಾಜದ ರೂಪೀಕರಣಕ್ಕೆ ಪ್ರೇರಕವಾಗಬಲ್ಲ ಘಟನೆಗಳ ದಾಖಲಾತಿ ಎಂದು ತಿಳಿಯಬೇಕಾಗುತ್ತದೆ.ಇಲ್ಲಿ ನಾವು ಎದುರಿಸಬೇಕಾಗುವ ಸಮಸ್ಯೆಯು ಈ ದಾಖಲಾತಿ ಎನ್ನುವ ಪದದಲ್ಲಿದೆ. ಇಂದು ನೈಜವೂ, ಅಧಿಕೃತವೂ ಆದ ಇತಿಹಾಸ ರಚನೆಗೆ ನಮಗೆ ಲಿಖಿತ ದಾಖಲೆಗಳು ಬೇಕು. ಮೌಖಿಕ ದಾಖಲಾತಿಗಳು ದಾಖಲೆಗಳೇ ಅಲ್ಲ ಎನ್ನುವವರುಂಟು. ಆದರೆ ದಾಖಲಾತಿ ಅದು ಮೌಖಿಕವಾಗಿರಲಿ, ಲಿಖಿತ ರೂಪದಲ್ಲಿರಲಿ ಹೇಗಿದ್ದರೂ ದಾಖಲೆ ದಾಖಲೆಯೇ ಎನ್ನುವುದನ್ನು ನಾವು ತಿಳಿದಿರಬೇಕು. ಅಷ್ಟು ಮಾತ್ರವಲ್ಲದೆ ಇತ್ತೀಚಿನ ದಿನಗಳಲ್ಲಿ ಪ್ರಮುಖ ಇತಿಹಾಸಜ್ಞರೂ ಇತಿಹಾಸ ರಚನೆಗೆ ಆಕರಗಳಾಗಿ ಮೌಖಿಕ ಸಂಪ್ರದಾಯದ ದಾಖಲಾತಿಗಳಾದ ಐತಿಹ್ಯ ಸ್ಥಳ ಪುರಾಣ ಸ್ಥಳನಾಮಗಳನ್ನು ಬಳಸತೊಡಗಿದ್ದಾರೆ ಎಂಬದನ್ನೂ ನಾವು ಗಮನಿಸಿದ್ದೇವೆ. ಗುಲಬರ್ಗಾ ಜಿಲ್ಲೆಯಲ್ಲಿಂತೂ ಈ ಕಾರ್ಯ ಅನಿವಾರ್ಯವೂ ಅವಶ್ಯಕವೂ ಅದುದೆಂಬ ಅಂಶವೂ ನಮ್ಮ ಗಮನದಲ್ಲಿದೆ.[೬೧] ಅವುಗಳನ್ನು ಈ ನಾಡಿನ ಇತಿಹಾಸ ರಚನೆಯಲ್ಲಿ ಹೇಗೆ ಬಳಸಿಕಿಳ್ಳಬಹುದು? ಅವುಗಳನ್ನು ಬಳಸಿಕಳ್ಳುವ ಮೂಲಕ ಈ ನಾಡಿನ ಪೂರ್ವೇತಿಹಾಸದ ಕುರಿತು ಹೊಸತಾದ ಯಾವ ಅಂಶವನ್ನು ಕಂಡುಕೊಳ್ಳಬಹುದು? ಎಂಬುದನ್ನು ತಿಳಿದುಕೊಳ್ಳುವುದೂ ಇಲ್ಲಿ ಅಗತ್ಯವಾಗಿದೆ.

ಇತಿಹಾಸ ಗತಕಾಲದ ರಾಜ ಮನೇತನಗಳ ಬಗ್ಗೆ ವಿವರಣೆ ನೀಡಿದರೆ. ಐತಿಹ್ಯವು ಜನರ, ಆಚರಣೆ, ನಂಬಿಕೆ, ಸಂಸ್ಕೃತಿ, ಮೌಲ್ಯಗಳು, ಹಬ್ಬ, ಹರಿದಿನಗಳ ಬಗ್ಗೆ ತಿಳಿಸಿಕೊಡುವ ಪ್ರಯತ್ನ ಮಾಡುತ್ತದೆ. ಐತಿಹ್ಯವು

ಮೌಖಿಕತೆಗೆ ಹೆಚ್ಚಿನ ಆದ್ಯತೆ ನಿಡುವುದು. ಹೇಗೆಂದರೆ ಒಬ್ಬ ವೀರ ಸೈನಿಕ ತನ್ನ ರಾಜಮನೆತನಕ್ಕೆ ಹೊರಾಡಿ ತನ್ನ ಪ್ರಾಣ ತ್ಯಾಗ ಮಾಡಿದರೆ ಇಂತಹ ಸೈನಿಕರ ಬಗ್ಗೆ ಜನರು ಹಾಡನನ್ನು ಕಟ್ಟುವುದರ ಮುಖಾಂತರ ಆ ವೀರ ಸೈನಿಕನ ಸಾಧನೆಯನ್ನು ಕೊಂಡಾಡುವರು. ಈ ಸೈನಿಕನ ತ್ಯಾಗದ ಬಗ್ಗೆ ಯಾವ ಚರಿತ್ರೆಯಲ್ಲಿಯು ಉಲ್ಲೇಖಿಸುವುದಿಲ್ಲ. ಅವುಗಳನ್ನು ಈ ಐತಿಹ್ಯಗಳು ಎತ್ತಿಹಿಡಿಯುತ್ತವೆ.

ಐತಿಹ್ಯಗಳಿಂದ ನಮ್ಮ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ನಂಬಿಕೆಗೆ ಸಂಬಂಧಿಸಿದ ಐತಿಹ್ಯ ಹೀಗಿದೆ ಜನರು ಸಾಮಾನ್ಯವಾಗಿ ಹೆಳುತ್ತಿರುತ್ತಾರೆ. ಹುಣಸೆ ಮರದಲ್ಲಿ ದೆವ್ವವಿದೆಯೆಂದು ಯಾಕೆ ಹೀಗೆ ಹೆಳುತ್ತಿರುತ್ತಾರೆ. ಎಂದರೆ ಅದು ರಾತ್ರಿಹೊತ್ತಿನಲ್ಲಿ ಕಾರ್ಬನ್‌ಡೈಕ್ಸೈಡನ್ನು ಬಿಡುಗಡೆ ಮಾಡುತ್ತದೆ ಅದು ಮಾನವನ ಆರೋಗ್ಯಕ್ಕೆ ಹಾನಿಕಾರಕ ಅದನ್ನು ತಡೆಯಲು ಜನ ಈ ರೀತಿಯಾದ ಐತಿಹ್ಯವನ್ನು ಹುಟ್ಟಿಸುತ್ತಾರೆ. ಇದರ ತಾತ್ಪರ್ಯ ಮಾನವ ಹೆದರುವುದು ಒಂದು ದೇವರಿಗೆ ಮತ್ತೊಂದು ದೆವ್ವಕ್ಕೆ ಆದರಿಂದ ಕೆಲವೊಂದು ಒಳ್ಳೆಯ ಕಾರ್ಯಕ್ಕೆ ಸಮಾಜ ಒಂದೊಂದು ಸ್ವರೂಪವನ್ನು ನೀಡಿ ಜಗಜಾಹಿರಾತುಗೊಳಿಸಿದ್ದಾರೆ. ಇದರ ಉದ್ದೇಶ ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ಮುನ್ನನಡೆಸುವುದು.

ಪ್ರಪಂಚದಲ್ಲಿ ಮೊಟ್ಟ ಮೊದಲಿಗೆ ಚರಿತ್ರೆ ರಚನೆ ಪ್ರಾರಂಭವಾದದ್ದು. ಚರಿತ್ರೆಯ ಪಿತಾಮಹಾರೆನಿಸಿಕೊಂಡಿರುವ ಹೆರೊಡೋಟಸ್‌ರಿಂದ ಗ್ರೀಕ್ ದೇಶದ ಸ್ಪಾರಟಾ ಮತ್ತು ಅಥೆನ್ಸ ನಗರಗಳ ಯುದ್ಧಗಳನ್ನು ಹೆರೊಡೋಟಸ್‌ರು ಕ್ಷೇತ್ರ ಕಾರ್ಯಕೈಗೊಳ್ಳುವುದರ ಮೂಲಕ ಜನರಿಂದ ಮಾಹಿತಿಯನ್ನು ಪಡೆದು ಲಿಖಿತ ರೂಪಕ್ಕೆ ತಂದರು. ಹೀಗೆ ಜನರ ಬಾಯಿಯ ಮುಖಾಂತರ ಆ ಸಮಯದಲ್ಲಿ ನಡೆದ ಸಾವು, ನೊವುಗಳಲ್ಲಿ ಜನರು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಂಡರು ಮತ್ತು ಕಷ್ಟಕರ ಜೀವನವನ್ನು ಹೇಗೆ ಕಳೆದರು ಎಂಬ ಎಲ್ಲ ಅಂಶ ಹೆರೊಡೋಟಸರು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಇದರಿಂದ ತಿಳಿದು ಬರುವ ಅಂಶವೆಂದರೆ ಚರಿತ್ರೆ ರಚನೆಗೆ ಐತಿಹ್ಯಗಳು ಮಹತ್ವದ ಸ್ಥಾನ.

ಐತಿಹ್ಯಗಳು ಒಂದು ಕಾಲ ಘಟ್ಟದಲ್ಲಿ ನಡೆದ ಘಟನೆಯ ಬಗ್ಗೆ ಜನರಿಂದ ಜನರಿಗೆ ಪ್ರಸಾರಗೊಳ್ಳುತ್ತಾ ಮತ್ತೊಂದು ಕಾಲ ಘಟ್ಟಕ್ಕೆ ಯಥಾವತ್ತಾಗ ಜನರ ಬಾಯಿಂದ ಬಾಯಿಗೆ ಪ್ರಚಾರಗೊಳ್ಳುತ್ತಾ ಸಾಗುತ್ತದೆ. ಇದು ಆ ಕಾಲ ಘಟ್ಟದ ಬಗ್ಗೆ ತಿಳಿಕೊಳ್ಳಲು ಸಹಾಯಕವಾಗುತ್ತದೆ. ಚರಿತ್ರೆಗೆ ಮೂಲ ಆಧಾರಗಳಾಗಿ ಶಾಸನಗಳು, ನಾಣ್ಯಗಳು, ಕೃತಿಗಳಾದರೆ ಐತಿಹ್ಯಕ್ಕೆ ಜನರ ಒಟ್ಟು ಸಾಂಸ್ಕೃತಿಕ ಜೀವನವೆ ಮೂಲ ಆಧಾರಗಳಾಗಿ ನಿಲ್ಲುತ್ತವೆ.[೪೨]

ಐತಿಹ್ಯಗಳಲ್ಲಿ ಒಂದಾದ ಸ್ಥಳ ಪ್ರಧಾನ ಐತಿಹ್ಯವು ಆ ಸ್ಥಳ ಅಥವಾ ಊರಿನ ಹೀನ್ನೆಲೆಯಲ್ಲಿ ಆ ಊರಿನ ಹೆಸರು ಬಂದಿರುತ್ತದೆ. ಆದರಿಂದ ಅದನ್ನು ಸ್ಥಳ ಪ್ರಧಾನ ಐತಿಹ್ಯವೆಂದು ಕರೆಯುತ್ತಾರೆ. ಅಫಜಲಪೂರ ಇದಕ್ಕೆ ಸರಿಯಾದ ಸಾಕ್ಷಿಯೆಂದು ಹೇಳಬಹುದು. ಹೇಗೆಂದರೆ ಬಿಜಾಪುರದ ಆದಿಲ್ ಶಾಹನ ಕಾಲದ ದಂಡನಾಯಕನಾದ ಅಫಜಲ ಖಾನನು ಇಗಿರುವ ಸ್ಥಳದಲ್ಲಿ ಬಂದು ಆಳ್ವಿಕೆ ಪ್ರಾರಂಭಿಸಿದನು ಮುಂದೆ ಅವನ ಕಾಲ ಮುಗಿದ ನಂತರ ಅವನ ಹೆಸರೆ ಮುಂದೆ ಅಫಜಲ ಖಾನ್ ಇದ್ದದು ಬದಲಾಗಿ ಅಫಜಲಪೂರವಾಯಿತು.

ಐತಿಹ್ಯವು ಜನರಿಂದ ಹುಟ್ಟು ಪಡೆದು ಅವರ ಬಗ್ಗೆ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯನ್ನು ಪಡೆದುಕೊಂಡಿದೆ. ಚರಿತ್ರೆ ಒಂದು ಮನೆತನದ ಬಗ್ಗೆ ತಿಳಿಸಿಕೊಟ್ಟರೆ ಐತಿಹ್ಯವು ಒಂದು ಕಾಲಘಟ್ಟದ ಮಹತ್ವವನ್ನು

ತಿಳಿಸಿಕೊಡುವುದು. ಜನರ ಸಾಂಸ್ಕೃತಿ ಜೀವನ ಅದರ ಮಹತ್ವದ ಬಗ್ಗೆ ತಿಳಿಸಿಕೊಡುವಲ್ಲಿ ಐತಿಹ್ಯಗಳು ಬಹಳ ಮುಖ್ಯವಾದವುಗಳು. ಒಂದು ದೇಶದ ಚರಿತ್ರೆ ಹೇಗೆ ಹೊಂದಿರುತ್ತದೊ ಹಾಗೆ ಐತಿಹ್ಯಗಳು ಕೂಡ ಅಷ್ಟೆ ಪ್ರಧಾನ್ಯತೆಯನ್ನು ಹೊಂದಿರುತ್ತವೆ. ನೆಲ, ಜಲ, ಸಂಬಂಧಿ ಐತಿಹ್ಯಗಳು ಒಂದು ಪ್ರದೇಶದ ಪ್ರಾಕೃತಿಕ ಸಂಪತ್ತನ್ನು ಮತ್ತು ಅದರ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಐತಿಹ್ಯಗಳನ್ನು ತಿಳಿಸಿಕೊಡುವ ಪ್ರಯತ್ನ ಮಾಡಿಕೊಡುತ್ತದೆ.

ಡಾ. ಸೂರ್ಯನಾಥ ಕಾಮತರು ಸಂಪಾದಿಸಿದ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟಗಳನ್ನು ಇಂಥ ನಂಬಲರ್ಹ ಮೌಖಿಕ ಚರಿತ್ರೆಗೊಂದು ಉದಾಹರಣೆಯಾಗಿ ಉಲ್ಲೇಖಿಸಬಹುದು. ಇಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಅವರ ಸಮೀಪದ ಬಂಧುಮಿತ್ರರನ್ನು ಸಂದರ್ಶಿಸಿ, ವಿವರಗಳನ್ನು ಸಂಗ್ರಹಿಸಿ ಹಾಗೆಯೇ ವಸ್ತುನಿಷ್ಠವಾಗಿ ನಿರೂಪಿಸಲಾಗಿದೆ. ಸ್ವಾತಂತ್ರ್ಯ ಬಂದ ಹತ್ತಿಪ್ಪತ್ತು ವರ್ಷಗಳಲ್ಲಿಯೇ ಈ ನೆನಪಿನ ಸಂಗ್ರಹ ಆರಂಭವಾಗಿದೆ. ಆದ್ದರಿಂದ ಇಲ್ಲಿ ವಕ್ತೃಗಳು ನೀಡಿದ ಹೇಳಿಕೆಗಳು ಬಹುಮಟ್ಟಿಗೆ ವಸ್ತುನಿಷ್ಠತೆಯಿಂದ ಕೂಡಿವೆ. ಹಾಗೂ ಅವನ್ನು ತಾಳೆ ನೋಡಲೂ ಸಾಧ್ಯವಿದೆ. ಈ ಕೆಲಸವನ್ನು ಆಗ ಕಾಮತರು ಮಾಡದೆ ಇದ್ದಿದ್ದರೆ ಈ ವಿವರಗಳು ಸದಾಕಾಲಕ್ಕೂ ನಷ್ಟಗೊಳ್ಳುತ್ತಿದ್ದವು. ಈ ಸ್ಮೃತಿಗಳಲ್ಲಿ ವಿವಿಧ ಸ್ಥಳಗಳಲ್ಲಿ ನಡೆದ ಅನೇಕ ಘಟನೆಗಳ ಬಗ್ಗೆ ಉಲ್ಲೇಖಗಳಿವೆ. ಮೌಖಿಕ ಮೂಲದಿಂದ ಸಮಕಾಲೀನ ಚರತ್ರೆಯೊಂದನ್ನು ವಿವರಪೂರ್ಣವಾಗಿ ಸಂಗ್ರಹಿಸಿದ ಬಹು ದೊಡ್ಡ ಪ್ರಯತ್ನವಿದು.

ಐತಿಹ್ಯವು ಇತಿ ಇತಿಹ ಎಂಬ ಸಂಸ್ಕೃತ ರೂಪದಿಂದ ನಿಷ್ಪನ್ನಗೊಂಡುದೆಂದು ಹೇಳುತ್ತಾರೆ. ಇತಿ ಎಂದರೆ ಹೀಗೆ ಇತಿಹ ಎಂದರೆ ಹೀಗಿತ್ತು. ಹೀಗೆ ನಡೆದದ್ದು ಎಂಬ ಅರ್ಥಗಳಳಿಗೆ ಅನ್ವಯವಾಗುತ್ತದೆ. ಹಿಂದೆ ವಾಸ್ತವವಾಗಿ ನಡೆದದ್ದು ಎಂದು ಹೇಳುವ ಮೌಖಿಕ ಪರಂಪರೆಯ ಗದ್ಯ ನಿರೂಪಣೆ ಐತಿಹ್ಯವೆನಿಸುತ್ತದೆ[೪೩]. ಈ ನಿರೂಪಣೆಯಲ್ಲಿ ಬರುವ ಘಟನೆಗಳು ವ್ಯಕ್ತಿಗಳು ಸ್ಥಳಾಧಾರಗಳು ಎಲ್ಲವೂ ಸತ್ಯವೆಂದು ನಂಬಿಕೆ ಏರ್ಪಟ್ಟಿರುತ್ತದೆ. ಇಲ್ಲಿ ನಿರೂಪಣೆಯ ಬಗ್ಗೆ ಹೇಳುಗ-ಕೇಳುಗರಿಬ್ಬರೂ ಅದು ಸತ್ಯವೆಂದು ನಂಬಿಕೆ ಏರ್ಪಟ್ಟಿರುತ್ತದೆ. ಇಲ್ಲಿ ನಿರೂಪಣೆಯ ಬಗ್ಗೆ ಹೇಳುಗ-ಕೇಳುಗರಿಬ್ಬರೂ ಅದು ಸತ್ಯವೆಂದು ಭರವಸೆ ಹೊಂದುವುದಲ್ಲದೆ ಪ್ರಸಾರಕರಾಗಿ ನಿರ್ವಾಹಕರಾಗಿ ಮುಂದುವರಿಯುತ್ತಾರ. ಆದ್ದರಿಂದ ಇದು ಜನಪದರು ಕಟ್ಟಿಕೊಡುವ ಇತಿಹಾಸ ಕೆಲವೊಮ್ಮೆ ಚರಿತ್ರೆಯಾಗಿಯೂ ಬೆಳವಣಿಗೆಯನ್ನು ಪಡೆಯುತ್ತದೆ. ಹೇಗೆಂದರೆ ಗತಕಾಲದಲ್ಲಿ ನಡೆದಿದೆಯೆಂದು ನಂಬುವ ಸಂಗತಿಯನ್ನು ಪರಂಪರೆಯು ತನ್ನೊಂದಿಗೆ ಉಳಿಸಿಕೊಳ್ಳುತ್ತಾ ಮುಂದಿನ ತಲಾಮಾರಿಗೂ ಹೊತ್ತೊಯ್ಯು-ತ್ತದೆಯೆನ್ನುವಾಗ ಐತಿಹ್ಯವು ಸಂಪ್ರದಾಯ ಆಚರಣೆಗಳ ಮೂಲಕ ಪುನರ್ ಸೃಷ್ಟಿಯನ್ನು ಪಡೆಯುತ್ತಿರುತ್ತದೆ. ಐತಿಹ್ಯಗಳು ಇತಿಹಾಸದ ಆಕರವಾಗಿ ಹೀಗೆ ಮುಖ್ಯ ಎಂಬುದನ್ನು ವಿವರಿಸಲಾಗಿದೆ[೪೪].

ಅಡಿಟಿಪ್ಪಣಿ.

೧. ಜಾನಪದ ಕೈಪಿಡಿ-ಪ್ರ.ಸಂ.ಎಚ್.ಜೆ.ಲಕ್ಕಪ್ಪಗೌಡ.ಪುಟ-೨೬

೨. Encyclopedia of Americana, Volume 17, P-214

೩. ಕನ್ನಡ ಐತಿಹ್ಯಗಳು-ದಾಸೇಗೌಡ.ಜಿ.ವಿ ಪುಟ-೨

೪. ಕನ್ನಡ ಜನಪದ ಕಥೆಗಳು-ಪರಮಶಿವಯ್ಯ.ಜಿ.ಶಂ.ಪುಟ– xxxi

೫. ಕನ್ನಡ ಜನಪದ ಕಥೆಗಳು-ಪರಮಶಿವಯ್ಯ.ಜಿ.ಶಂ.ಪುಟ– xxxiii

೬. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್.ಪುಟ-೨೩

೭. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್.ಪುಟ-೨೫

೮. ಜಾನಪದ ಅಧ್ಯಯನ-ಜವರೇಗೌಡ ದೇ.ಪುಟ-೧೮೧

೯. ಕನ್ನಡ ಜಾನಪದ ಪ್ರಜ್ಞೆ-ವೀರಣ್ಣ ದಂಡೆ.ಪುಟ-೧೬೦

೧೦. ಸಾರಸ-ವಸಂತಕುಮಾರ ತಾಳ್ತಜೆ.ಪುಟ-೧೨೧

೧೧. ಅನ್ವಯಿಕ ಜಾನಪದ-ವಿವೇಕ ರೈ.ಬಿ.ಎ. ಪುಟ-೯೧,೯೨

೧೨. ಕರಾವಳಿ ಜಾನಪದ-ಪುರುಷೋತ್ತಮ ಬಿಳಿಮಲೆ.ಪುಟ-೭೬

೧೩. ಕರಾವಳಿ ಜಾನಪದ-ಪುರುಷೋತ್ತಮ ಬಿಳಿಮಲೆ.ಪುಟ-೭೯,೮೦

೧೪. ಜಾನಪದ ಅಧ್ಯಯನ-ಜವರೇಗೌಡ. ದೇ.ಪುಟ-೧೮೦

೧೫. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್.ಪುಟ-೩೯

೧೬. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್.ಪುಟ-೪೦

೧೭. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್.ಪುಟ-೪೧

೧೮. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ- ಶಂಕರ ಬಾಳಿ ಪುಟ-೯

೧೯. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ- ಶಂಕರ ಬಾಳಿ ಪುಟ-೧೦

೨೦. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ- ಶಂಕರ ಬಾಳಿ ಪುಟ-೧೨

೨೧. ಅಪ್ರಕಟಿತ.ಪಿಎಚ್.ಡಿ ಮಹಾಪ್ರಬಂದ ರಾಯಚೂರು ಜಿಲ್ಲೆಯ ಐತಿಹ್ಯಗಳು-ಅರಳಿಹಳ್ಳಿ ಗಿರೇಗೌಡ ಪುಟ-೩೦

೨೨. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್ ಪುಟ-೩೨

೨೩. ಅಪ್ರಕಟಿತ.ಪಿಎಚ್.ಡಿ ಮಹಾಪ್ರಬಂದ ರಾಯಚೂರು ಜಿಲ್ಲೆಯ ಐತಿಹ್ಯಗಳು-ಅರಳಿಹಳ್ಳಿ ಗಿರೇಗೌಡ ಪುಟ-೩೧

೨೪. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್ ಪುಟ-೨೯

೨೫. ಜಾನಪದ ಕರ್ನಾಟಕ (ಸಂಪುಟ-೧)-ಸಂ. ಮಂಜುನಾಥ ಬೇವಿನಕಟ್ಟಿ, ಲೇ.ಸಿ.ಆರ್. ಗೋವಿಂದರಾಜು, ಪು.೪೬

೨೬. ಆನ್ವಯಿಕ ಜಾನಪದ-ಬಿ.ಎ. ವಿವೇಕ ರೈ, ಪು.೯೦.

೨೭. ಆನ್ವಯಿಕ ಜಾನಪದ-ಬಿ.ಎ. ವವೇಕ ರೈ, ಪು.೯೧.

೨೮. ಸ್ಥಳೀಯ ಚರಿತ್ರೆ-ಸಂ. ಲಕ್ಷ್ಮಣ್ ತೆಲಗಾವಿ. ಲೇ. ಬಿ.ಶಿವರಾಮ ಶೆಟ್ಟಿ, ಪು.೪೭.

೨೯. ಆನ್ವಯಿಕ ಜಾನಪದ-ಬಿ.ಎ. ವಿವೇಕ ರೈ ಪು.೮೮.

೩೦. ಆನ್ವಯಿಕ ಜಾನಪದ-ಬಿ.ಎ. ವಿವೇಕ ರೈ ಪು.೯೪,೯೫.

೩೧. ಆನ್ವಯಿಕ ಜಾನಪದ-ಬಿ.ಎ. ವಿವೇಕ ರೈ ಪು.೯೧,೯೨.

೩೨. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು-ಸುಬ್ಬಣ್ಣ ರೈ, ಪು.೮೫,೮೬.

೩೩. ಸ್ಥಳೀಯ ಚರಿತ್ರೆ-ಸಂ. ಲಕ್ಷ್ಮಣ ತೆಲಗಾವಿ, ಲೇ. ಅಶೋಕ ಶೆಟ್ಟರ, ಪು.೫೧, ೫೨.

೩೪. ಜಾನಪದ ಸಾಹಿತ್ಯ ದರ್ಶನ, ಭಾಗ-೧೨ (ಆಕಾಶ ಜಾನಪದ)-ಸಂ. ಎಂ.ಎಂ.ಕಲಬುರ್ಗಿ, ಪು.೫.

೩೫. ಚರಿತ್ರೆ-ಸಮಾಜ-ಸಂಸ್ಕೃತಿ-ಅಶೋಕ ಶೆಟ್ಟರು, ಪು.೧೧

೩೬. ಸಸ್ಕೃತಿ ಸಿರಿ-ಕೆ. ಚಿನ್ನಪ್ಪಗೌಡ, ಪು.೨೯೪,೯೫.

೩೭. ಮಾರ್ಗ-2,-ಎಂ.ಎಂ. ಕಲಬುರ್ಗಿ, ಪು.೩೨೯.

೩೮. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು-ಸುಬ್ಬಣ್ಣ ರೈ, ಪು.೮೩.

೩೯. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು-ಸುಬ್ಬಣ್ಣ ರೈ, ಪು.೮೭

೪೦. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು-ಸುಬ್ಬಣ್ಣ ರೈ, ಪು.೮೮.

೪೧. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್. ಪು.೩೦.

೪೨. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್. ಪು.೩೧

೪೩. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ-ವೃಷಭಕುಮಾರ್. ಪು.೩೩

೪೪. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು-ಲಕ್ಷ್ಮೀದೇವಿ ಎಲ್. ಪು.೬೯,೭೦

ಅಧ್ಯಾಯ-೩ ಗುಲ್ಬರ್ಗಾ ಜಿಲ್ಲೆಯ ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು

೩.೧ ಭೌಗೋಳಿಕ ಹಿನ್ನೆಲೆ

೩.೨ ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು

೩.೩ ನೆಲ-ಜಲ ಸಂಬಂಧಿ ಐತಿಹ್ಯಗಳು

೩.೪ ಸಸ್ಯ ಸಂಬಂಧಿ ಐತಿಹ್ಯಗಳು

೩.೫ ಪ್ರಾಣಿ-ಪಕ್ಷಿ-ಸಸ್ತನಿ ಸಂಬಂಧಿ ಐತಿಹ್ಯಗಳು

೩.೬ ಗುಡ್ಡ-ಬೆಟ್ಟ ಸಂಬಂಧಿ ಐತಿಹ್ಯಗಳು

ಅಧ್ಯಾಯ-೩

ಗುಲ್ಬರ್ಗಾ ಜಿಲ್ಲೆಯ ಭೌಗೋಳಿಕ ಹಿನ್ನಲೆ ಮತ್ತು ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು

೩.೧ ಭೌಗೋಳಿಕ ಹಿನ್ನಲೆ:-

ಗುಲಬರ್ಗಾ ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದ್ದು, ೧೯೫೬ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಒಂದಾಗಿದೆ (ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು), ಜಿಲ್ಲೆಯ ವಿಶಾಲ ಸಮತಟ್ಟಾದ ಪ್ರದೇಶವು ೭೬°೦೪' ಮತ್ತು ೭೭°೪೨' ಪೂರ್ವ ರೇಖಾಂಶ ಹಾಗೂ ೧೬°೧೨' ಮತ್ತು ೧೭°೪೬' ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ. ಎಲ್ಲೆಯು ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಉಸ್ಮಾನಾಬಾದ್ ಜಿಲ್ಲೆಗಳ ಎಲ್ಲೆಯನ್ನು ಮತ್ತು ಪೂರ್ವ ಭಾಗದಲ್ಲಿ ಆಂಧ್ರಪ್ರದೇಶದ ಮೇಡಕ್ ಮತ್ತು ಮೆಹಬೂಬ್ ನಗರ ಜಿಲ್ಲೆಗಳ ಗಡಿಯನ್ನು ಪಡೆದಿದೆ. ಇನ್ನುಳಿದ ಗಡಿ ಪ್ರದೇಶವು ಉತ್ತರದಲ್ಲಿ ಬೀದರ್ ಜಿಲ್ಲೆಯಿಂದ, ದಕ್ಷಿಣದಲ್ಲಿ ರಾಯಚೂರು ಜಿಲ್ಲೆಯವರೆಗೆ ಮತ್ತು ಪಶ್ಚಿಮದಲ್ಲಿ ವಿಜಾಪುರ ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟಿದೆ. ದಕ್ಷಿಣ ಭಾಗದಲ್ಲಿ ಕೃಷ್ಣಾ ನದಿಯು ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಎಲ್ಲೆಯಾಗಿ ಪ್ರವಹಿಸುತ್ತದೆ. ಪಶ್ಚಿಮ ಭಾಗದಲ್ಲಿ ಭೀಮಾ ನದಿಯು ಸ್ವಲ್ಪ ದೂರ ಗುಲಬರ್ಗಾ ಹಾಗೂ ವಿಜಾಪುರ ಜಿಲ್ಲೆಗಳ ನೈಸರ್ಗಿಕ ಎಲ್ಲೆಯಾಗಿ ಹರಿಯುತ್ತದೆ.[೧]

ಭೌಗೋಳಿಕವಾಗಿ ದಖನ್ ಪ್ರಸ್ತಭೂಮಿಯಲ್ಲಿರುವ ಕರ್ನಾಟಕದ ಉತ್ತರ ಭಾಗದ ಗುಲಬರ್ಗಾ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳ ಗಡಿಯಂಚಿಗೆ ಹೊಂದಿಕೊಂಡಿದೆ. ಬೀದರ್, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ವಿಭಾಗೀಯ ಕೇಂದ್ರಸ್ಥಾನವಾಗಿರುವ ಗುಲಬರ್ಗಾ ಜಿಲ್ಲೆಯು ಸುದೀರ್ಘವಾದ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಪರಂಪರೆಯನ್ನು ಹೊಂದಿದೆ. ಕರ್ನಾಟಕದ ಇತಿಹಾಸದುದ್ದಕ್ಕೂ ಪ್ರಮುಖ ಪಾತ್ರವಹಿಸಿರುವ ಈ ಜಿಲ್ಲೆಯನ್ನು ಶಾತವಾಹನರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಳಚೂರ್ಯರು, ಬಹಮನ್ ಷಾಹಿಗಳು ಹಾಗೂ ಬಿಜಾಪುರದ ಆದಿಲ್ ಷಾಹಿಗಳು ಸತತವಾಗಿ ಆಳ್ವಿಕೆ ಮಾಡಿರುವರು. ರಾಷ್ಟ್ರಕೂಟರು ಗುಲಬರ್ಗಾ ಸಮೀಪದಲ್ಲಿರುವ ಮಳಖೇಡವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ಅಭಿಪ್ರಾಯವಿದೆ. ಆನಂತರ ಕರ್ನಾಟಕವನ್ನು ಆಳಿದ ಚಾಳುಕ್ಯ ಸೋಮೇಶ್ವರನು ಆಗ ಇದೇ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಬಹಮನ್ ಷಾಹಿಗಳ ಆಳ್ವಿಕೆಯ ಸಂಸ್ಥಾಪಕನಾದ ಅಲ್ಲಾವುದೀನ್ ಬಹಮನ್ ಷಾ ಗುಲಬರ್ಗಾ ನಗರವನ್ನೇ ತನ್ನ ರಾಜಧಾನಿಯನ್ನಾಗಿ ಅಳವಡಿಸಿಕೊಂಡನು. ಬಹುಮನ್‌ಷಾಹಿಗಳು ಗುಲಬರ್ಗಾದಿಂದ ೧೩೪೭ ರಿಂದ ೧೪೨೪ರ ವರೆಗೆ ಪ್ರಬಲವಾಗಿ ಆಳ್ವಿಕೆ ಮಾಡಿದರು. ನಂತರ ಅಹಮದ್ ಷಾವಲಿ (೧೪೨೨-೧೪೩೬)ಯ ಆಡಳಿತಾವಧಿಯಲ್ಲಿ ಬಹಮನ್ ಷಾಹಿಗಳು ತಮ್ಮ ರಾಧಾನಿಯನ್ನು ಗುಲಬರ್ಗಾದಿಂದ ಬೀದರ್‌ಗೆ ವರ್ಗಾಯಿಸಿದರು.

ಈ ಸಾಮ್ರಾಜ್ಯವು ದಖನ್ ಪ್ರಸ್ಥಭೂಮಿಯ ಕೃಷ್ಣಾನದಿಯಿಂದ ತಪತಿ ನದಿಯವರೆಗೂ ಹಾಗೂ ಪಶ್ಚಿಮ ಘಟ್ಟಗಳಿಂದ ತೆಲಂಗಾಣ ಪ್ರದೇಶಗಳಲ್ಲಿ ಆವೃತವಾಗಿರುವ ಪ್ರಾಂತ್ಯಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಈ ವಂಶದ ಧೀರ್ಘ ಆಳ್ವಿಕೆಯ ಅವಧಿಯಲ್ಲಿ ಅವರು ಮಾಡಿರುವ ಸಾಂಸ್ಕೃತಿಕ ಸಾಧನೆಗಳು ಇತಿಹಾಸದಲ್ಲಿ ಅವಿಸ್ಮರಣೀಯವಾಗಿವೆ.[೨] ಬಹಮನ್ ಷಾಹಿಗಳ ಆಳ್ವಿಕೆ ಅವನತಿಗೊಂಡ ಮೇಲೆ ಈ ಭಾಗವು ಹೈದರಾಬಾದ್ ನಿಜಾಮರ ಸಂಸ್ಥಾನವಾಗಿ ಮುಂದುವರೆದು ನಂತರ ಅಪರೋಕ್ಷವಾಗಿ ಬ್ರಿಟಿಷರ ಹತೋಟಿಯಲ್ಲಿ ಮುಂದುವರೆಯಿತು.

ವಿಸ್ತಾರವಾದ ಕಲಬುರ್ಗಿ ಜಿಲ್ಲೆಯನ್ನು ಇತ್ತೀಚೆಗೆ ವಿಭಜಿಸಿ ಯಾದಗಿರಿ ಜಿಲ್ಲೆಯನ್ನು ರಚಿಸಲಾಗಿದೆ. ಸದ್ಯ ಕಲಬುರ್ಗಿ ಜಿಲ್ಲೆಯಲ್ಲಿ ಏಳು ತಾಲೂಕುಗಳಿವೆ. ಅವುಗಳೆಂದರೆ ಕಲಬುರಗಿ, ಅಫಜಲಪುರ, ಆಳಂದ, ಚಿಂಚೋಳಿ, ಚಿತ್ತಾಪುರ, ಜೇವರ್ಗಿ, ಸೇಡಂ, ತಾಲೂಕುಗಳು. ಸದ್ಯ ಜಿಲ್ಲೆ ೧೦,೯೫೧ ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ. ನೆಲ ಜಲಗಳಿಂದ ಸಮೃದ್ಧವಾಗಿರುವ ಜಿಲ್ಲೆಯು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಯ ನೆಲೆಯಾಗಿದೆ. ಇತಿಹಾಸ ಇನ್ನು ಚಾರಿತ್ರಿಕ ಕಾಲದಲ್ಲಿ ಮಗಧ ಸಾಮ್ರಾಜ್ಯದ ಭಾಗವಾಗಿತ್ತು. ಅಶೋಕನ ಶಾಸನಗಳು ಜಿಲ್ಲೆಯ ಸನ್ನತಿಯಲ್ಲಿ ಕಂಡುಬಂದಿವೆ. ಸನ್ನತಿಯಲ್ಲಿ ಔತ್ತರೇಯ ಸಂಸ್ಕೃತಿಯ ಅವಶೇಷಗಳು ಲಭ್ಯವಾಗಿವೆ. ಈ ಹಿನ್ನೆಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಕರ್ನಾಟಕದ ಉಳಿದ ಭಾಗಗಳಿಗಿಂತ, ಸಾಂಸ್ಕೃತಿಕವಾಗಿ ಮುಂದುವರೆದ ಭಾಗವಾಗಿತ್ತು. ಸನ್ನತಿ ಮತ್ತಿತರ ನೆಲೆಗಳು ಬೌದ್ಧಧರ್ಮದ ಕೇಂದ್ರಗಳಾಗಿದ್ದರ ಬಗ್ಗೆ ಪುರಾವೆಗಳು ಸಾಕಷ್ಟು ಸಂಖ್ಯೆಯಲ್ಲಿ ಬೆಳಕಿಗೆ ಬಂದಿವೆ. ಅದೇ ರೀತಿ ಜೈನಧರ್ಮದ ಅವಶೇಷಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ.[೩] ಪ್ರಮುಖ ಅರಸು ಮನೆತನಗಳಾದ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯ, ದೇವಗಿರಿ ಯಾದವರು, ಬಹುಮನಿ ಅರಸರು ಮತ್ತು ಪಾಳೆಯಗಾರರ ಕಾಲದ ಆಡಳಿತ ಮತ್ತು ಸಾಂಸ್ಕೃತಿಕ ಕುರುಹುಗಳು ವ್ಯಾಪಕವಾಗಿ ದೊರೆಯುತ್ತವೆ.

ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಗುಲಬರ್ಗಾ ಪದದ ನಿಷ್ಪತ್ತಿ:-

'ಗುಲಬರ್ಗಾ'ವನ್ನು ಕಲಬುರ್ಗಿ, ಕಲ್ಬುರ್ಗಿ ಮತ್ತು ಗುಲ್ಬರ್ಗ ಎಂಬ ಪರ್ಯಾಯ ಹೆಸರುಗಳನ್ನು ಈ ಮುಂದಿನ ಶಾಸನಗಳ ಆಧಾರದ ಮೇಲೆ ಉಲ್ಲೇಖಿಸಲಾಗಿದೆ.

ಕ್ರಿ.ಶ.೧೦೯೯ ಹುಣಸಿಹಡಗಿಲದ ಶಾಸನದಲ್ಲಿ 'ಹಡಂಗಿಲೆಯ ವಾಯುವ್ಯದ ಹೊದಲ್ನಲುಂಬರಗೆಯಲ್ಲುಡಿದಂತೆ ಗಂಡನ ಗಡಿಂಬಲು ಬಿಟ್ಟಕರಿಯ ನೆಲಂ ಮತ್ತರು ಹನ್ನೆರಡು' ಉಲ್ಲೇಖಿಸಿದೆ. ಕ್ರಿ.ಶ.೧೧೧೦ ಸರಡಗಿಯ ಶಾಸನ--------ಸೀಸ್ವರ ದೇವರ್ಗ್ಗೆ ಬಿಟುಕ್ಷೇತ್ರ ಕಲುಂಬರಗೆಯ x ಶಂಹಡುವಲಂ ಕೋಲಮತ್ತರ೬ ಎಂದು ದಾಖಲಿಸಿದೆ. ಕ್ರಿ.ಶ.೧೧೪೨ರ ಬಸವಕಲ್ಯಾಣದ ಶಾಸನ 'ಪ್ರಮುಖವಾಗಿ ಸಾವಾಸಿ ಬ್ರಮಾಂನುಕ್ತರು ಕಲುಂಬರಗೆಯ ಬ್ರಮಾಂನ್ತು ಕಸಾಯಿ ಪಯ್ಯ ನಾಯಕರುಂ'.

ಕ್ರಿ.ಶ.೧೧೭೦ ಗೊಬ್ಬೂರು ಶಾಸನ-'ಮೇಲಮ ಸೀಮೆಯ ತೆಂಕಲು' ಕಲಂಬರಿಗೆಯ ಬಟ್ಟೆ ಸೀಮೆಯ ಪಣ ಕೋಲಲು ಗೊಬ್ಬೂರದ ಎಂದಿದೆ. ಕ್ರಿ.ಶ. ಸು. ೧೨ನೇ ಶತಮಾನದ ಕುಳಗೇರಿ ಶಾಸನ- x x x ನೆರೆದೇಕಸ್ತರಾಗಿ ಕಲುಂಬರಗೆಯ ಕಲ್ಲೆ ಸೆಟ್ಟೆ x x x ಎಂದು ಉಲ್ಲೇಖಿಸಿದೆ. ಕ್ರಿ.ಶ.೧೨-೧೩ನೇ ಶತಮಾನದ ಚಿನಮಳ್ಳಿ ಶಾಸನ x x x ಕವಿಲಿಗೆಯ ಸೆಟ್ಟಿಕಲಂ

ಬರೆಗೆಯ ನೃಪಚಿಲ್ಲಸೆಟ್ಟಿ' ಎಂದು ದಾಖಲಿಸಿದೆ. ಕ್ರಿ.ಶ.೧೫೩೭ರ ಸಿರವಾಳದ ಶಾಸನದಲ್ಲಿ 'ಶ್ರೀ ಮತು ಕಲುಬರಿಗಿಯ ನಾಡೊಳಗೆ ಮಾಗುಡಿಯ ಮಲ್ಲೋಜನ ಪುತ್ರದೇವರ್ನಾರು ಸಗರ ನಾಡೊಳಗೆ ಸಿರವಳ ಗ್ರಾಮದಲ್ಲಿ ......' ಎಂದಿದೆ.

ಶ್ರೀ ಕೃಷ್ಣದೇವರಾಯನ 'ಅಮುಕ್ತಮೌಲ್ಯದ' ಗ್ರಂಥದಲ್ಲಿ 'ಕಲ್ಪರಿಗ' ಎಂಬುದಾಗಿ ಇದೆ. ಶ್ರೀ ಕೃಷ್ಣದೇವರಾಯನ ಬಿರುದುಗಳನ್ನು ವರ್ಣಿಸುತ್ತಾ ಅವನ ಅಸ್ಥಾನದ ತೆಲಗು ಕವಿ ಅಲ್ಲಸಾನಿ ಪೆದ್ದಣ್ಣನು ತನ್ನ 'ಮನುಚರಿತಮು'ಕೃತಿಯಲ್ಲಿ 'ಕಲಬುರಗಿ' ಕಟಕ ಕ್ಷೀತಿಪಾಲಕ ಎಂದಿದ್ದಾನೆ (೩-೧೪೨). ವಿಜಯನಗರಕ್ಕೆ ಬಂದಿದ್ದ ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕನು ವಿಜಯನಗರ ಸಾಮ್ರಾಜ್ಯದ ಮೇರೆಗಳನ್ನು ಹೇಳುವಾಗ 'ಕಲಬರ್ಗ' ಎಂದೇ ಉಲ್ಲೇಖಿಸಿದ್ದಾನೆ. ಪಾಶ್ಚಾತ್ಯ ಪ್ರವಾಸಿ ನ್ಯೂನಿಜನು ತನ್ನ ಬರವಣಿಗೆಯಲ್ಲಿ 'ಕಲ್ಬರ್ಗೂರ' ಎಂಬೂದಾಗಿ ದಾಖಲಿಸಿದ್ದಾನೆ.[೪]

ಪ್ರಸ್ತುತ ಗುಲಬರ್ಗಾ ಒಂದು ಜಿಲ್ಲಾ ಕೇಂದ್ರವಾಗಿದ್ದು ಇದರ ಮೂಲ ಹೆಸರು 'ಕಲಬುರ್ಗಿ' ಎಂದಿದ್ದು ಕ್ರಮೇಣ ಅದು ಗುಲಬರ್ಗಾ, ಗುಲ್ಬರ್ಗ ಎಂದಾಗಿದೆ. ಗುಲಬರ್ಗ ಎಂಬುದು ಹೆಚ್ಚು ಕಡಿಮೆ 'ಕಲಬುರಗಿ' ಪದದ ಫಾರಸಿಕರಣ. ಫಾರಸಿಯಲ್ಲಿ 'ಗುಲ್' ಎಂದರೆ ಹೂವು 'ಬರ್ಗ್' ಎಂದರೆ ಎಲೆ ಎಂಬ ಅರ್ಥವಿದೆ. 'ಕಲಬುರಗಿ' ಎಂಬ ಅಚ್ಚ ಕನ್ನಡ ರೂಪವೇ ಮಹಮದಿಯರಿಗೆ ಮೊದ ಮೊದಲು 'ಕಲಬುರ್ಗ್' ಎಂದೆನಿಸಿ ನಿಧಾನವಾಗಿ ಅದೇ 'ಗುಲ್ಬರ್ಗ' ಎಂದಾಗಿರಬೇಕು. ಒಟ್ಟಿನಲ್ಲಿ 'ಕಲಬುರಗಿ' ಎಂಬ ಹೆಸರು ಕ್ರಿ.ಶ.೧೬ನೇ ಶತಮಾನದವರೆಗೂ ರೂಢಿಯಲ್ಲಿದ್ದು ಮುಸ್ಲಿಮರ ಆಡಳಿತ ಪ್ರಭಾವದಿಂದಾಗಿ 'ಗುಲಬರ್ಗಾ' ಎಂಬ ರೂಪವನ್ನು ಪಡೆದಿದೆ.[೫] ಹಾಗೆಯೇ ಗುಲಬರ್ಗಾ ಕೋಟೆ ರಾಜಾಗುಲಚಂದನಿಂದ ಕಟ್ಟಿಲ್ಪಟ್ಟಿದ್ದು. ಅದಕ್ಕಾಗಿ ಈ ಹೆಸರು ಬಂದಿರುವ ಸಾಧ್ಯತೆ ಇದೆ.[೬]

ನದಿಗಳು:-

ಬೆಣ್ಣೆ ತೊರೆ ನದಿ ಮತ್ತು ಭೀಮಾನದಿಗಳು ಗುಲಬರ್ಗಾದ ಜನತೆಗೆ ವರಪ್ರಸಾದವಾಗಿವೆ. ಏಕೆಂದರೆ ಈ ನದಿಗಳಿಂದ ರೈತರು ತಮ್ಮ ಬವಣೆಯನ್ನು ಸ್ವಲ್ಪಮಟ್ಟಿಗೆ ಈಡೇರಿಸಿಕೊಂಡಿದ್ದಾರೆ. ಬೆಣ್ಣೆತೊರೆ ನದಿ ಮಹಾರಾಷ್ಟ್ರದ ಮಲೆಗಾಂವ್ ಗ್ರಾಮದ ಬಳಿ ಹುಟ್ಟಿ ಆಳಂದ ತಾಲೂಕಿನ ಮೂಲಕ ಗುಲಬರ್ಗಾ ಪ್ರವೇಶದಿಸುವ ಇದು ಆಳಂದ, ಗುಲಬರ್ಗಾ ಮತ್ತು ಚಿತ್ತಾಪುರ ತಾಲೂಕುಗಳಲ್ಲಿ ಸುಮಾರು ೧೦೦ ಕಿ.ಮೀ, ದೂರ ಹರಿಯುತ್ತದೆ. ಭೀಮಾನದಿಯು ಮಹಾರಾಷ್ಟ್ರದ ಪಶ್ಚಿಮಘಟ್ಟಗಳ ಭೀಮಾಶಂಕರದಲ್ಲಿ ಉಗಮಿಸುತ್ತದೆ. ಬಿಜಾಪುರದಿಂದ ಹರಿದು ಬಂದು ಸಿಂದಗಿ ಮೂಲಕ ಗುಲಬರ್ಗಾವನ್ನು ಪ್ರವೇಶಿಸುತ್ತದೆ.[೭]

ಬೆಳೆಗಳು:-

'ತೊಗರಿಬೆಳೆಯ ಕಣಜ' ಎಂದೇ ಪ್ರಸಿದ್ಧವಾಗಿರುವ ಗುಲಬರ್ಗಾ ಜಿಲ್ಲೆಯು ತೊಗರಿಬೆಳೆಯಲ್ಲಿ ಇಡೀ ರಾಜ್ಯದಲ್ಲಿ ಅಷ್ಟೇ ಅಲ್ಲದೆ ದೇಶ ಮತ್ತು ಏಷ್ಯಾಖಂಡದಲ್ಲಿ ತನ್ನ ಸ್ಥಾನವನ್ನು ಗುರುತಿಸಿಕೊಂಡಿದೆ. ಗುಲಬರ್ಗಾ ಜಿಲ್ಲೆಯ ಆಳಂದ, ಚಿತ್ತಾಪುರ, ಸೇಡಂ, ಗುಲಬರ್ಗಾ, ಚಿಂಚೋಳಿ, ಜೇವರ್ಗಿ, ಅಫಜಲಪುರ ತಾಲೂಕುಗಳಲ್ಲಿ ಅಧಿಕ ಕ್ಷೇತ್ರದಲ್ಲಿ ತೊಗರಿ ಬೆಳೆಯಲಾಗುತ್ತದೆ. ಇದಷ್ಟೇ ಅಲ್ಲದೆ ಸಜ್ಜೆ ಬೆಳೆಯಲ್ಲಿ ಗುಲಬರ್ಗಾ ಜಿಲ್ಲೆಯು ರಾಜ್ಯದಲ್ಲಿ ೨ನೇ ದೊಡ್ಡ ಜಿಲ್ಲೆಯಾಗಿದೆ. ಸು. ೫೬೦೦೦ ಹೆಕ್ಟೇರ್ ಭೂಮಿಯಲ್ಲಿ ಸಾಗುವಳಿ ಮಾಡಲಾಗುತ್ತಿದೆ. ಜೋಳವನ್ನು ಬಿಜಾಪುರ ಬಿಟ್ಟರೆ ಗುಲಬರ್ಗಾದ ಪರಿಸರದಲ್ಲಿ ಅತಿ ಹೆಚ್ಚು

ಬೆಳೆಯಲಾಗುತ್ತದೆ. ಈ ಜಿಲ್ಲೆಯ ಆಳಂದ, ಜೇವರ್ಗಿ, ಗುಲಬರ್ಗಾ ತಾಲೂಕುಗಳಲ್ಲಿ ಹೆಚ್ಚಿನ ಪ್ರದೇಶದಲ್ಲಿ ಜೋಳವನ್ನು ಬೆಳೆಯಲಾಗುತ್ತದೆ. ಇವುಗಳಷ್ಟೇ ಅಲ್ಲದೆ ಗೋಧಿ, ಕಡಲೆ, ಮೆಣಸಿನಕಾಯಿ, ಶೇಂಗಾ, ಸೂರ್ಯಕಾಂತಿ ಬೆಳೆಗಳನ್ನು ಬೆಳೆಯಾಗುತ್ತದೆ.

ಗುಲಬರ್ಗಾ ತಾಲೂಕಿನಲ್ಲಿ ವ್ಯವಸಾಯದ ಜೊತೆಗೆ ಮೀನುಗಾರಿಕೆ, ಪಶುಪಾಲನೆ, ಕೋಳಿಸಾಕಾಣಿಕೆ, ಗುಡಿಕೈಗಾರಿಕೆಗಳು ಕೂಡ ಹೇರಳವಾಗಿ ಕಂಡುಬರುತ್ತವೆ. ಈ ಪರಿಸರದಲ್ಲಿ ಶರಣಬಸವೇಶ್ವರ ಕೆರೆಯಲ್ಲಿ ಮೀನುಗಾರಿಕೆಯು ಬಹಳ ಹೇರಳವಾಗಿ ಕಂಡುಬರುತ್ತದೆ. ಅಂದರೆ ಮೀನುಗಾರರು ಇಲ್ಲಿನ ಮೀನನ್ನು ಹಿಡಿದು ಅದನ್ನು ಮಾರಾಟ ಮಾಡುವ ಮೂಲಕ ತಮ್ಮ ಜೀವನವನ್ನು ಸಾಗಿಸುತ್ತಾರೆ.[೮]

ಖನಿಜ ಸಂಪತ್ತು:-

ಗುಲಬರ್ಗಾವು ಸುಣ್ಣಶಿಲೆಯಲ್ಲಿ ಕರ್ನಾಟಕದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಈ ಶಿಲೆಯಿಂದ ಸಿಮೆಂಟನ್ನು ತಯಾರಿಸುತ್ತಾರೆ. ಸಿಮೆಂಟ್ ತಯಾರಿಕೆಗೆ ಅಗತ್ಯವಾದ ಮೂಲವಸ್ತುಗಳು ಸುಣ್ಣಶಿಲೆ ಮತ್ತು ಜೇಡು. ಸುಣ್ಣ ಸಿಮೆಂಟ್, ಕ್ಯಾಲ್ಸಿಯಂ, ಕಾರ್ಬೈಟಗಳ ಉತ್ಪಾದನೆಯಲ್ಲಿ ಸುಣ್ಣದ ಕಲ್ಲನ್ನು ಪ್ರಮುಖವಾಗಿ ಉಪಯೋಗಿಸಲಾಗುತ್ತದೆ. ಗುಲಬರ್ಗಾ ಪರಿಸರದಲ್ಲಿ ಭೀಮಾ ಶಿಲಾಸರಣಿಯಲ್ಲಿ ಅಧಿಕ ಪ್ರಮಾಣದ ಸುಣ್ಣದ ಕಲ್ಲು ನಿಕ್ಷೇಪಗಳು ಪತ್ತೆಯಾಗಿವೆ.

ಜಿಲ್ಲೆಯ ಜೇವರ್ಗಿ, ಚಿತ್ತಾಪುರ, ಚಿಂಚೋಳಿ, ಸೇಡಂ, ಗುಲಬರ್ಗಾ, ಸುರಪುರ ಮತ್ತು ಶಹಾಪುರ ಪರಿಸರದಲ್ಲಿ ಸುಮಾರು ೧,೫೦೦ ಚ.ಮೈ. ದಪ್ಪದ ನಿಕ್ಷೇಪಗಳಾಗಿದ್ದು ಇವುಗಳಲ್ಲಿ ೧,೨೮,೭೦೦ ಮಿಲಿಯನ್ ಟನ್ ಸುಣ್ಣದ ಕಲ್ಲಿನ ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಇದಷ್ಟೇ ಅಲ್ಲದೆ ಜಿಪ್ಸಮ್ ರಾಸಾಯನಿಕ ಗೊಬ್ಬರ, ಸಿಮೆಂಟ್ ತಯಾರಿಕೆ ಮತ್ತು ಪ್ಲಾಸ್ಟರ್ ಕೈಗಾರಿಕೆಯಲ್ಲಿ ಜಿಪ್ಸಮ್ ಮುಖ್ಯವಾಗಿ ಉಪಯೋಗಿಸುತ್ತಾರೆ. ಜಿಪ್ಸಂ ಗುಲಬರ್ಗಾ ಜಿಲ್ಲೆಯ ಗುಂಡಗುರ್ತಿ, ಪೇಠ ಶಿರೂರು ಮತ್ತು ಮರತೂರಗಳಲ್ಲಿ ದೊರೆಯುತ್ತದೆ. ಹೀಗೆ ಗುಲಬರ್ಗಾ ತಾಲೂಕು ಖನಿಜ ಸಂಪತ್ತಿನಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.[೯]

ಇತಿಹಾಸ ಪೂರ್ವಕಾಲ:-

೧೯ನೇ ಶತಮಾನದ ಉತ್ತರಾರ್ಧದ ದಶಕಗಳಲ್ಲಿ ರಾಬರ್ಟ್ ಬ್ರೂಸ್ ಫೂಟ್ ಎಂಬ ಭೂ ವಿಜ್ಞಾನಿಯು ಸುರಪುರ ತಾಲೂಕಿನ ಕೃಷ್ಣಾ ನದಿಯ ದಂಡೆಯ ಮೇಲೆ ಇರುವ ಎಡೆಹಳ್ಳಿಯಲ್ಲಿ ಆದಿ ಹಳೇ ಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಿದ್ದು ಇವುಗಳು ಭೀಮಾ ಸ್ಥಳದ ಕಲ್ಲುಗಳ ಪ್ರಕಾರಗಳಲ್ಲೊಂದಾದ ಶೇರಿ ಕಲ್ಲು ಅಥವಾ ಶಹಾಬಾದ್ ಕಲ್ಲಿನವು. ಆದರೆ, ಪುರಾತತ್ವ ಶಾಸ್ತ್ರಜ್ಞರು ಆದಿ ಹಳೇ ಶಿಲಾಯುಗದ ಮಾನವರಿಗೆ ತನ್ನ ಉಪಕರಣಗಳನ್ನು ಮಾಡಿಕೊಳ್ಳಲು ಈ ಕಲ್ಲು ಅಷ್ಟು ಯೋಗ್ಯವಲ್ಲದ್ದರಿಂದ ಎಡೆಹಳ್ಳಿಯಲ್ಲಿ ದೊರೆತ ಉಪಕರಣಗಳ ಬಗೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ೧೯೭೦ರ ದಶಕದ ಆದಿ ಭಾಗದಲ್ಲಿ ದಖನ್ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ಕೆ. ಪದ್ದಯ್ಯನವರು ಬ್ರೂಸ್ ಫೂಟ್ ರವರ ಶೋಧನೆಯನ್ನು ಗಂಭೀರವಾಗಿ ಗಮನಿಸಿ ಮತ್ತೆ ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಗೊಂಡರು.

೧೯೨೦ರ ದಶಕದಲ್ಲಿ ಈ ವಿದ್ವಾಂಸರು 'ಶೋರಾಪುರ ಸಂಗಮ ಪ್ರದೇಶದ ಪ್ರಾಗ್ ಇತಿಹಾಸ ಮತ್ತು ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳು' ಎಂಬ ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಂಡಿದ್ದರು. ಏಕೆಂದರೆ ಹಿಂದೆ ೧೯ನೇ ಶತಮಾನದ ಮಧ್ಯಭಾಗದಲ್ಲಿ ಕರ್ನಲ್ ಮೆಡೋಸ್ ಟೈಲರ್ ಅವರು ಅನಂತರ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳಿಂದು ಗುರುತಿಸಲಾದ ಕೆಲವು ಮಹತ್ವದ ಕಲ್ಲುವೃತ್ತಗಳು ಮತ್ತು ಕಲ್ಮನೆಗಳಿರುವ ನಿವೇಶಗಳನ್ನು ಜೇವರ್ಗಿ, ಆಂದೋಲ, ಚಿಕ್ಕನಹಳ್ಳಿ, ರಾಜನ ಕೋಳ್ಳೂರು ಹಗರಟಗಿಯಲ್ಲಿ ಪತ್ತೆಮಾಡಿ ಅಧ್ಯಯನ ಮಾಡಿದ್ದರು. ಇವು ಇಂಗ್ಲೇಂಡ್ ಮೊದಲಾದ ಪಶ್ಚಿಮ ಯೂರೋಪಿನಲ್ಲಿಯ ಗ್ರಾಮ್ ಲೆಕ್ಸ್ ಕಿಸ್ತರೀನ್ಸ್‌ಗಳಂತಿದೆ ಎಂದು ಅಭಿಪ್ರಾಯಪಟ್ಟಿದ್ದರು. ಅನಂತರ ಮಳಖೇಡ ಹಾಗೂ ಭೀಮಾ ನದಿ ದಂಡೆ ಪ್ರದೇಶದಲ್ಲಿ ಅ.ಸುಂದರ, ಎಸ್, ನಾಗರಾಜು ಅವರು ಮಧ್ಯಹಳೇ ಶಿಲಾಯುಗದ ಕಲ್ಲಿನ ಉಪಕರಣಗಳನ್ನು ಶೋಧಿಸಿದರು. ಸುಂದರ ಅವರು ಉಡಚಣ (ಅಫಜಲಪೂರ ತಾಲೂಕು) ಉಡಸಗಿ (ಸುರಪುರ ತಾಲೂಕು) ಕ್ರಮವಾಗಿ ಶಿಲಾ ತಾಮ್ರ ಯುಗದ ಹಂತದಲ್ಲಿಯ ನೂತನ ಶಿಲಾಯುಗದ ಜನವಾಸ್ತವ್ಯ ನೆಲೆಗಳನ್ನು ಗುರುತಿಸಿದ್ದರು. ಹಾಗೂ ಬೂದಿಹಾಳದಲ್ಲಿ ಎರಡು ಬೃಹತ್ ಬೂದಿಗುಡ್ಡಗಳು ಇರುವುದನ್ನು (೧೯೬೪)ವರದಿ ಮಾಡಿದರು. ಇವರು ಅಷ್ಟೇ ಅಲ್ಲದೇ ಎಸ್. ಶೇಷಾದ್ರಿ, ಪಿ.ಬಿ.ದೇಸಾಯಿ ಮತ್ತು ಎಂ.ಎಸ್. ನಾಗರಾಜರಾವ್ ಪದೇ ಪದೇ ಈ ನೆಲೆಯನ್ನು ಪರಿಶೀಲಿಸಿ ತಮ್ಮ ತಮ್ಮ, ವರದಿಗಳನ್ನು ಪ್ರಕಟಿಸಿದರು.[೧೦]

ಐತಿಹಾಸಿಕ ಹಿನ್ನೆಲೆ:-

ಗುಲಬರ್ಗ ಜಿಲ್ಲೆಯ ಸನ್ನತಿ, ಶಿರವಾಳ, ಜೇವರ್ಗಿ ಕಡೆಗಳಲ್ಲಿ ಶಾತವಾಹನರು ಬೌದ್ಧ ಧರ್ಮಕ್ಕಾಗಿ ಮಾಡಿದ ಪ್ರಚಾರ ಕುರಿತು ಅವಶೇಷಗಳು ಸಿಗುವುದರಿಂದ ಈ ಪ್ರದೇಶ ಕ್ರಿ.ಶ.೧ ರಿಂದ ೩ನೇ ಶತಮಾನದವರೆಗೆ ಶಾತವಾಹನ ಆಡಳಿತಕ್ಕೆ ಒಳಪಟ್ಟದ್ದು ಗೊತ್ತಾಗುವುದು. ಜೊತೆಗೆ ಮಸ್ಕಿ ಮತ್ತು ಕೊಪ್ಪಳದಲ್ಲಿ ಸಿಗುವ ಅಶೋಕನ ಶಾಸನಗಳಿಂದ, ರಾಯಚೂರು ಜಿಲ್ಲೆ ಮತ್ತು ಅದಕ್ಕೆ ಹತ್ತಿಕೊಂಡಿರುವ ಗುಲಬರ್ಗ, ಬೀದರ ಜಿಲ್ಲೆಗಳು ಮೌರ್ಯರ ಆಡಳಿತಕ್ಕೆ ಒಳಪಟ್ಟಿದ್ದವು.[೧೧] ಕರ್ನಾಟಕ ಚರಿತ್ರೆಯುದ್ದಕ್ಕೂ ಪ್ರಮುಖ ಪಾತ್ರ ವಹಿಸಿರುವ ಗುಲಬರ್ಗಾ ಜಿಲ್ಲೆಯು ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಬಹಮನಿ ಮತ್ತು ಬಿಜಾಪುರದ ಆದಿಲ್‌ಶಾಹಿಗಳು ಸತತವಾಗಿ ಆಳ್ವಿಕೆ ಮಾಡಿದ್ದಾರೆ. ರಾಷ್ಟ್ರಕೂಟರು ಗುಲಬರ್ಗಾ ಸಮೀಪದಲ್ಲಿರುವ ಮಳಖೇಡವನ್ನು ತಮ್ಮ ರಾಧಾನಿಯಾಗಿ ಮಾಡಿಕೊಂಡಿದ್ದರು. ಅನಂತರ ಕರ್ನಾಟಕವನ್ನು ಆಳಿದ ಚಾಲುಕ್ಯ ಮೂರನೇ ಸೋಮೇಶ್ವರನು ಆಗ ಇದೇ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಬಹಮನಿಗಳ ಆಳ್ವಿಕೆಯ ಸಂಸ್ಥಾಪಕನಾದ ಅಲ್ಲಾವುದ್ದೀನ್ ಬಹಮನ್ ಷಾ ಗುಲಬರ್ಗಾ ನಗರವನ್ನೇ ತನ್ನ ರಾಧಾನಿಯನ್ನಾಗಿ ಮಾಡಿಕೊಂಡಿದ್ದನು. ಈ ಸಾಮ್ರಾಜ್ಯವು ದಖ್ಖನ್ ಪ್ರಸ್ಥಭೂಮಿಯ ಕೃಷ್ಣಾನದಿಯಿಂದ ತಪತಿ ನದಿಯವರೆಗೂ ವ್ಯಾಪಿಸಿತ್ತು. ಸಾಮ್ರಾಜ್ಯ ದೀರ್ಘ ಆಳ್ವಿಕೆಯ ಅವಧಿಯಲ್ಲಿ ಅವರು ಮಾಡಿದ ಸಾಂಸ್ಕೃತಿಕ ಸಾಧನೆಗಳು ಚರಿತ್ರೆಯಲ್ಲಿ ಅವಿಸ್ಮರಣೀಯವಾಗಿದೆ. ಬಹಮನಿ ಷಾಹಿಗಳ ಆಳ್ವಿಕೆ ಅವನತಿಗೊಂಡ ಮೇಲೆ ಈ ಭಾಗವು ಹೈದರಾಬಾದ್ ನಿಜಾಮರ ಸಂಸ್ಥಾನವಾಗಿ ಮುಂದುವರಿದು, ನಂತರ ಅಪರೋಕ್ಷವಾಗಿ ಬ್ರಿಟಿಷರ ಹತೋಟಿಯಲ್ಲಿ ಮುಂದುವರೆಯಿತು, ಪ್ರಾದೇಶಿಕವಾಗಿ ಇದರ ಚರಿತ್ರೆಯು ಬಹಳಷ್ಟು ಮಹತ್ವದಿಂದ ಕೂಡಿದೆ.

ಮೌರ್ಯರು ಮತ್ತು ಶಾತವಾಹನರ ಕಾಲದ ಇತಿಹಾಸ:-

ಮೌರ್ಯರು ಗುಲಬರ್ಗಾದಲ್ಲಿ ಆಳ್ವಿಕೆ ಮಾಡಿದ್ದು, ಸನ್ನತಿಯಲ್ಲಿ ಅಶೋಕನ ಸಾಮ್ರಾಜ್ಯದ ಕುರುಹುಗಳಿವೆ. ಇದು ದಕ್ಷಿಣ ಭಾಗದಲ್ಲಿ ಒಂದು ಪ್ರಮುಖ ಪಟ್ಟಣವಾಗಿದ್ದಿತ್ತೆಂಬುದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ ಪ್ರಮುಖ ಆಡಳಿತ ಕೇಂದ್ರವೂ ಆಗಿದ್ದಿರಬೇಕು. ಉತ್ತರ ಕರ್ನಾಟಕವೂ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದರೂ ಕೂಡ ಇದೆ ಕಾಲದ್ದೆಂದ್ದು ಖಚಿತವಾಗಿ ಹೇಳಬಹುದು. ಯಾವುದೇ ಪ್ರಕಾರದ ಶಾಸನಗಳು ಹೊರತಾಗಿ, ವಸ್ತು ಅವಶೇಷಗಳು ದೊರೆತಿರಲಿಲ್ಲ. ಆದ್ದರಿಂದ ಸನ್ನತಿಯಲ್ಲಿ ದೊರೆತ ಮೌರ್ಯಕಾಲದ ಶಾಸನಗಳು ಅತ್ಯಂತ ಮಹತ್ವದ್ದು, ಪ್ರಾಯಶಃ ಸನ್ನತಿಯಲ್ಲಿ ಮೌರ್ಯ ಸಾಮ್ರಾಜ್ಯದ ಒಬ್ಬ ಉನ್ನತ ಆಡಳಿತಾಧಿಕಾರಿ ಇದ್ದಿರಬೇಕೆಂದು ಕಾಣುತ್ತದೆ ಮತ್ತು ಆ ಕಾಲದಿಂದ ಈ ಪ್ರದೇಶದಲ್ಲಿ ಬೌದ್ಧ ಧರ್ಮ ಪ್ರಚಾರವಾಗಿದ್ದಿರಬಹುದು. ಇಂಥ ಅಂಶಗಳನ್ನು ನೋಡಿದಾಗ ಇಲ್ಲಿ ಮೌರ್ಯರ ಆಳ್ವಿಕೆಗೆ ಗುಲಬರ್ಗಾದ ಪ್ರದೇಶಗಳು ಒಳಗೊಂಡಿದ್ದವು ಎಂದು ಹೇಳಬಹುದು.

ಶುಂಗರ ಮತ್ತು ಕಣ್ವರ ರಾಜ್ಯ ಭಾರವನ್ನು ಮುಕ್ತಾಯಗೊಳಿಸಿದವನು ದಕ್ಷಿಣ ಆಂಧ್ರ ಅರಸನೊಬ್ಬನೆಂದು ಪುರಾಣಗಳು ಹೇಳುತ್ತವೆ. ಗೋದಾವರಿ ಮತ್ತು ಕೃಷ್ಣಾ ನದಿಗಳ ಮುಖಜ ಭೂಮಿಯ ಪ್ರದೇಶದಲ್ಲಿರುವ ತೆಲುಗು ಭಾಷೆಯನ್ನಾಡುವ ಜನರಿಗೆ ಆಂಧ್ರರು ಎಂಬ ಹೆಸರು ರೂಢಿಯಲ್ಲಿದೆ. ಸಮಕಾಲದ ಶಾಸನಗಳಲ್ಲಿ ಈ ಅರಸನ ಸಂತತಿಯವರನ್ನು ಶಾತವಾಹನರೆಂದು ಕರೆಯಲಾಗಿದೆ. ಹಾಗೂ ಶಾತವಾಹನ ಜಿಲ್ಲೆಯೊಂದು ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲೆಯ ನೆರೆಯಲ್ಲಿದ್ದಿತೆಂದು ದೃಢಪಡಿಸಲಾಗಿದೆ. ಭಾರತೀಯ ಐತಿಹ್ಯದಲ್ಲಿ ಪ್ರಸಿದ್ಧನಾದ ಶಾಲಿವಾಹನ ಖ್ಯಾತಿವೆತ್ತ ಸಾಹಸಗಳಿಂದ ಈ ಸಂತತಿಯ ಹೆಸರು ಚಿರಸ್ಮರಣೀಯವಾಗಿದೆ.[೧೨]

ಗುಲಬರ್ಗಾದ ಸನ್ನತಿಯಲ್ಲಿ ಶಾತವಾಹನರ ಕಾಲದ ಅವಶೇಷಗಳು ತುಂಬಾ ಇವೆ. ಇಟ್ಟಿಗೆ ರಕ್ಷಣಾಗೋಡೆ ಇದೆ. ಮೌರ್ಯರ ಕಾಲದಲ್ಲಿ ಆರಂಭವಾಗಿ ಶಾತವಾಹನ ಕಾಲದಲ್ಲಿ ವಿಸ್ತಾರವಾಯಿತೆಂದು ಕಾಣುತ್ತದೆ. ಇಲ್ಲಿನ ಶಾಸನಗಳಲ್ಲಿ ನಾಲ್ಕು ನೇರವಾಗಿ ಶಾತವಾಹನ ಅರಸರಿಗೆ ಸಂಬಂಧಪಟ್ಟವು. ಈ ಅರಸು ಮನೆತನದಲ್ಲಿ ಪ್ರಸಿದ್ಧರಾದ ಗೌತಮಿಪುತ್ರ ಶಾತಕರ್ಣಿ ಮತ್ತು ವಶಿಷ್ಠ ಪುತ್ರ ಪುಳಮಾಯಿ ಇವರನ್ನು ಉಲ್ಲೇಖಿಸುತ್ತವೆ. ಬಹುಶಃ ಈ ಪ್ರದೇಶವು ನೇರವಾಗಿ ಅವರ ಆಡಳಿತಕ್ಕೆ ಒಳಪಟ್ಟಿತೆಂದು ಕಾಣುತ್ತದೆ. ಇಡೀ ಕರ್ನಾಟಕದಲ್ಲಿಯೇ ಶಾತವಾಹನ ಕಲೆ ಅದರಲ್ಲೂ ವಿಶೇಷವಾಗಿ ಬೌದ್ಧ ಪಂಥ ಕಲೆಗೆ ಅತೀ ಮಹತ್ವದ ಏಕೈಕ ಸ್ಥಳವೆಂದರೆ ಗುಲಬರ್ಗಾ ಪ್ರದೇಶ 'ಸನ್ನತಿ' ಹೀಗೆ ಹಲವಾರು ಅವಶೇಷಗಳು ಶಾತವಾನರ ಕಾಲಕ್ಕೆ ಸಂಬಂಧಪಟ್ಟ ವಸ್ತುಗಳಲ್ಲಿ ಇಲ್ಲಿ ದೊರೆತಿರುವುದರಿಂದ ಈ ಪ್ರದೇಶವು ಶಾತವಾಹನರ ಆಡಳಿತಕ್ಕೆ ಒಳಪಟ್ಟಿದೆ ಎಂದು ಹೇಳಬಹುದು.

ಬಾದಾಮಿ ಚಾಲುಕ್ಯರ ಇತಿಹಾಸ:-

ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನಗಳಲ್ಲಿ ಬಾದಾಮಿ ಚಾಲುಕ್ಯರ ಮನೆತನವು ಸಹ ಪ್ರಮುಖವಾಗಿದೆ. ಪ್ರಸಿದ್ಧವಾದ ಚಾಲುಕ್ಯರ ಮನೆತನವು ಕದಂಬರ ಪತನವಾದ ಮೇಲೆ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರು ಕ್ರಿ.ಶ. ೫೪೦ರಿಂದ ೭೫೭ರವರೆಗೆ ಸುಮಾರ ೨೫೦ ವರ್ಷಗಳವರೆಗೆ ಕರ್ನಾಟಕವನ್ನು ಆಳ್ವಿಕೆ ಮಾಡಿದರು. ಈ ಸಾಮ್ರಾಜ್ಯವು ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶೇಷ ಮಹತ್ವದಿಂದ ಕೂಡಿದೆ. ಬಾದಾಮಿ ಚಾಲಕ್ಯರ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ ನದಿಯ ತೀರದಿಂದ ದಕ್ಷಿಣದಲ್ಲಿ ತುಂಗಭದ್ರ ನದಿಯವರೆಗೂ ಹರಡಿತು.[೧೩]

ವಾತಾಪಿ ಅಥವಾ ಬಾದಾಮಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದ ಚಾಲುಕ್ಯರ ಮೂಲದ ಬಗ್ಗೆ ಶಾಸನಗಳು ದೊರೆತಿಲ್ಲ. ಆದರೆ ವೆಂಗಿಯ ಪೂರ್ವ ಚಾಲುಕ್ಯರು ಹಾಗೂ ಕಲ್ಯಾಣದ ಪಶ್ಚಿಮ ಚಾಲುಕ್ಯರ ೧೧-೧೨ನೇ ಶತಮಾನದ ಶಾಸನಗಳಲ್ಲಿ ಈ ಮನೆತನದ ಮೂಲದ ವಿಷಯವಾಗಿ ಕೆಲವು ಕತೆಗಳು ಕಂಡು ಬರುತ್ತವೆ. ಕಲ್ಯಾಣದ ಚಾಲುಕ್ಯರ ಶಾಸನಗಳಲ್ಲಿ ಈ ಹೆಸರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಚಾಲುಕ್ಯ, ಚಲಿಕ, ಚಾಲಿಕ್ಯ, ಚಲಕ್ಯ ಮೊದಲಾದ ಪದಗಳು ಕಂಡುಬರುತ್ತವೆ, ಹಾಗೆ ಬಿಲ್ಹಣನ ವಿಕ್ರಮಾಂಕದೇವ ಚರಿತಂ ಎಂಬ ಕೃತಿಯ ತಿಳಿಯುವಂತೆ, "ಚಾಲುಕ್ಯ" ಎಂಬ ಹೆಸರು ಬಂದದ್ದು "ಚುಲುಕ" ಎಂಬುದರಿಂದ ಅದಕ್ಕೆ ಅಂಗೈಯ ಹಳ್ಳಿಎಂದು ಅರ್ಥ. ಸಂಧ್ಯೋಪಾಸನೆ ಮಾಡುತ್ತಿದ್ದಾಗ, ಭೂಮಿಯಲ್ಲಿ ಒಂದೇ ಸಮನೆ ಕೆಡಕು ಹೆಚ್ಚುತ್ತಿರುವುದರಿಂದ ಅದನ್ನು ಕೊನೆಗೊಳಿಸಲು ಒಬ್ಬ ವೀರನನ್ನು ಅನುಗ್ರಹಿಸಬೇಕೆಂದು ಇಂದ್ರ, ಬ್ರಹ್ಮನನ್ನು ಕೋರಿದನು. ಬ್ರಹ್ಮನು ತನ್ನ "ಚುಲುಕ" ಅಂದರೆ ಅಂಗೈಯನ್ನು ನೋಡಿದನು. ಅಲ್ಲಿಂದ ಒಬ್ಬ ಮಹಾಪರಾಕ್ರಮಿ ಚಾಲಯಕ್ಯನು ಹುಟ್ಟಿ ಬಂದನು. ಅವನೆ ಚಾಲುಕ್ಯರ ಮೂಲಪುರುಷ.[೧೪]

ಬಾದಾಮಿ ಚಾಲುಕ್ಯರ ಆಳ್ವಿಕೆಯಲ್ಲಿ ಗುಲಬರ್ಗಾವು ಅಪರೋಕ್ಷವಾಗಿ ಆಳ್ವಿಕೆಗೆ ಒಳಪಟ್ಟಿತು. ಇವರ ಕಾಲದ ಈ ಶಾಸನಗಳಾಗಲ್ಲಿ ಅಥವಾ ಅವಶೇಷಗಳಾಗಲಿ ಲಭ್ಯವಾಗಿಲ್ಲ. ಗುಲಬರ್ಗಾದಿಂದ ವರದಿಯಾಗಿರುವ ಚಾಲುಕ್ಯ ವಿನಯಾದಿತ್ಯನ ಕಾಲದ ತಾಮ್ರ ಶಾಸನವು ಕೂಟ ಶಾಸನವಾಗಿರುವುದರಿಂದ ಅಗ್ರಗಣ್ಯವೆನಿಸುತ್ತದೆ. ನಿಂಬರಗಿಯ ೧೧೩೪ರ ಶಾಸನವು ಕಲ್ಯಾಣದ ಚಾಲುಕ್ಯ ಅರಸ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಬಾದಾಮಿ ಚಾಲುಕ್ಯ ಅರಸನಾದ ವಿನಯಾದಿತ್ಯನಿಂದ ನಿಂಬರಗಿ ಗ್ರಾಮವನ್ನು ಊರೊಡೆಯ ಕಲಿದೇವನ ಪೂರ್ವಜನಾದ ನಾರಾಯಣಚಾರ್ಯನು ದತ್ತಿಯಾಗಿ ಪಡೆದಿದರ್ದ ಬಗ್ಗೆ ತಿಳಿಸುತ್ತದೆ. ಬಾದಾಮಿ ಚಾಲಕ್ಯರು ಭವ್ಯವಾದ ಸಾಮ್ರಾಜ್ಯವನ್ನು ನಿರ್ಮಿಸಿ ಸುಮಾರು ೯೦,೦೦೦ ಗ್ರಾಮಗಳುಳ್ಳ ಮೂರು ಮಹಾರಾಷ್ಟ್ರಗಳಿದ್ದುವೆಂದು ಐಹೊಳೆ ಶಾಸನ ತಿಳಿಸುತ್ತದೆ. ಗಂಗ, ಸೇಂದ್ರಕ, ಆಳುಪ, ಗುಜರಾತಿನ, ಬೋಧನದ ಮತ್ತು ವೆಂಗಿಯ ಚಾಲಕ್ಯರು ಕೊನೆಯವರು ಮುಂದೆ ಸ್ವತಂತ್ರವಾದರು ವಿಷಯ, ಭೋಗ, ಗ್ರಾಮ ಮುಂತಾದ ಆಡಳಿತ ಘಟಕಗಳ ಉಲ್ಲೇಖಗಳು ಚಾಲುಕ್ಯರ ಶಾಸನಗಳಲ್ಲಿ ಕಂಡು ಬರುತ್ತವೆ.[೧೫] ದಕ್ಷಿಣ ಭಾರತ ವಾಸ್ತು ಶೈಲಿಯಲ್ಲಿ ಬಾದಾಮಿ ಚಾಲುಕ್ಯರ ಶೈಲಿಗೆ ಪ್ರತ್ಯೇಕ ಸ್ಥಾನವನ್ನು ನೀಡಲಾಗಿದೆ. ಇವರು ಮೂಲತಃ ವೈದಿಕ ಧರ್ಮವನ್ನು ಅವಲಂಬಿಸಿದ್ದರೂ ಜೈನ, ಬೌದ್ಧ, ಶೈವ ಹಾಗೂ ವೈಷ್ಣವ ಪಂಥಗಳಿಗೆ ಪ್ರತ್ಯೇಕ ಗುಹಾಲಯಗಳನ್ನು ಬಾದಾಮಿಯಲ್ಲಿ ನಿರ್ಮಿಸಿರುವುದು ಇವರ ಧಾರ್ಮಿಕ ಸಹಿಷ್ಣುತೆಗೆ ಉತ್ತಮ ನಿದರ್ಶನವಾಗಿದೆ.

ಮಳಖೇಡದ ರಾಷ್ಟ್ರಕೂಟರ ಇತಿಹಾಸ:-

ಚಾಲುಕ್ಯರ ಪತನದ ನಂತರ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೭೫೭ರಿಂದ ೯೭೩ರ ವರೆಗೆ ೨೧೬ ವರ್ಷಗಳ ಕಾಲ ರಾಜ್ಯಭಾರ ಮಾಡಿದ ರಾಷ್ಟ್ರಕೂಟರ ಕರ್ನಾಟಕದ ಕೀರ್ತಿಯನ್ನು ಉತ್ತರ ಭಾರತದಲ್ಲಿಯೂ ಸ್ಥಾಪಿಸಿದರು. ರಾಷ್ಟ್ರಕೂಟ ಎಂದರೆ ರಾಷ್ಟ್ರ ಎಂಬ ಆಡಳಿತ ವಿಭಾಗದ ಮುಖ್ಯಸ್ಥ ಪ್ರಾಚೀನ ಕರ್ನಾಟಕದಲ್ಲಿ ದೇಶಮುಖ, ದೇಸಾಯಿ, ಗ್ರಾಮಕೂಟ ಎಂಬ ಪದಗಳು ಅಸ್ತಿತ್ವದಲ್ಲಿದ್ದವು. ರಾಷ್ಟ್ರ ಎಂಬ ಪದವನ್ನು ಸಂಸ್ಕೃತದಲ್ಲಿ ರಾಷ್ಟ್ರೀಯ ಮತ್ತು ಪ್ರಾಕೃತದಲ್ಲಿ ರಧಿಕಾ ಎಂದು ಉಪಯೋಗಿಸುತ್ತಿದ್ದರು. ಮೌರ್ಯರ ಮತ್ತು ಶಾತವಾಹನರ

ಶಾಸನಗಳಲ್ಲಿ ಈ ಪದಗಳ ಉಲ್ಲೇಖ ಕಂಡುಬರುತ್ತವೆ. 'ಗರುಡ ಪಕ್ಷಿ' ಇವರ ಲಾಂಛನವಾಗಿತ್ತು. ಹೀಗೆ ಮಳಖೇಡವನ್ನು ಕೇಂದ್ರ ಮಾಡಿಕೊಂಡು ಆಡಳಿತವನ್ನಾಗಿ ಸುಮಾರು ೧೩ ಅರಸರು ಆಳ್ವಿಕೆ ಮಾಡಿದರು.[೧೬]

ಈ ವಂಶದ ಮೊದಲ ಅರಸನು ದಂತಿದುರ್ಗ (ಕ್ರಿ.ಶ.೭೩೫-೫೬) ಇವನು ಎರಡನೇಇಂದ್ರನ ಮಗನಾದ? ದಂತಿದುರ್ಗನ ರಾಷ್ಟ್ರಕೂಟ ವಂಶದ ಸಂಸ್ಥಾಪಕನಾಗಿ ಆಳ್ವಿಕೆ ಮಾಡಿದನು ಇವನ ನಂತರ ಒಂದನೇ ಕೃಷ್ಣ (ಕ್ರಿ.ಶ.೭೫೬-೭೭೪)ಈ ದಂತಿದುರ್ಗನಿಗೆ ಸಾಮ್ರಾಜ್ಯವನ್ನು ಸ್ಥಾಪಿಸಲು ಸಹಕಾರ ನೀಡಿದ್ದಕ್ಕಾಗಿ ತನ್ನ ಉತ್ತರಧಿಕಾರಿಯಾಗಲು ಅನುಮತಿ ನೀಡಿದನು. ಇತನು ಹಲವಾರು ಬಿರುದುಗಳನ್ನು ಹೊಂದಿದ್ದನು. ಇತನ ನಂತರ ಎರಡನೇ ಗೋವಿಂದ (ಕ್ರಿ.ಶ.೭೭೪-೭೮೦ರವರೆಗೆ) ಆಳ್ವಿಕೆ ಮಾಡಿದನು. ನಂತರ ಧ್ರುವ (ಕ್ರಿ.ಶ.೭೮೦-೭೯೩) ಅಧಿಕಾರ ವಹಿಸಿಕೊಂಡ ಕೂಡಲೇ ಗಂಗರ ಶಿವಮಾರನನ್ನು ಸೋಲಿಸಿ ಮಾಳಖೇಡದಲ್ಲಿ ಬಂಧನದಲ್ಲಿಟ್ಟನು. ಮಗನಾದ ಸ್ಥಂಭನನ್ನು ಈ ಪ್ರದೇಶದ ಪ್ರಾಂತಾಧಿಕಾರಿಯಾಗಿ ನೇಮಕ ಮಾಡಿದನು. ಹೀಗೆ ಆಳ್ವಿಕೆ ಮಾಡಿದ ಈತನ ತರುವಾಯ ಮೂರನೇ ಗೋವಿಂದ(ಕ್ರಿ.ಶ.೭೯೩-೮೧೪ರವರೆಗೆ) ಆಡಳಿತ ನಡೆಸಿದನು. ಈತನ ನಂತರ ಮಳಖೇಡದ ಅರಸರಲ್ಲಿ ಅತ್ಯಂತ ಸುಪ್ರಸಿದ್ಧ ಹಾಗೂ ದಕ್ಷತೆಯಿಂದ ಆಳ್ವಿಕೆ ಮಾಡಿದವನು ಒಂದನೇ ಅಮೋಘವರ್ಷ (ನೃಪತುಂಗ) (ಕ್ರಿ.ಶ.೮೧೪ರವರೆಗೆ) ಆಳ್ವಿಕೆ ಮಾಡಿದನು.

ಅಮೋಘವರ್ಷ ಕ್ರಿ.ಶ.೮೧೪-೮೭೮:-

ಅಮೋಘವರ್ಷ ನೃಪತುಂಗನು ತನ್ನ ಆಸ್ಥಾನಕ್ಕೆ ವಿವಿಧ ಮತಗಳ ಪಂಡಿತರನ್ನು, ಕವಿಗಳನ್ನು, ಬರಮಾಡಿಕೊಂಡನು. ಈತನು ವಿದ್ಯಾ ಪಕ್ಷಪಾತಿಯೂ ಧಾರ್ಮಿಕ ಸಹಿಷ್ಣುವು ಆಗಿದ್ದನು. ಅರಬ್ ಪ್ರವಾಸಿ ಸುಲೇಮಾನನು ಅಮೋಘವರ್ಷನನ್ನು ಪ್ರಪಂಚದ ದೊಡ್ಡ ಸಾಮ್ರಾಟರೊಂದಿಗೆ, ಅಂದರೆ ಚೀನಾ, ಬಾಗ್ದಾದ್ ಮತ್ತು ಕಾನ್‌ಸ್ಟಾಂಟಿನೋಪಲ್ ರಾಜರುಗಳ ಸಹಪಂಕ್ತಿಯಲ್ಲಿ ಈತನನ್ನು ಹೋಲಿಸಿದ್ದಾನೆ. ಅಮೋಘವರ್ಷನು ತನ್ನ ರಾಜ್ಯಕ್ಕೆ ಧಾರುಣ ಸಾಂಕ್ರಾಮಿಕ ರೋಗ ಹರಡಿದಾಗ ಅದರ ಪರಿಹಾರ್ಥ ದೇವರಲ್ಲಿ ಮೊರೆಯಿಟ್ಟು ಕೊಲ್ಲಾಪುರದ ಮಹಾಲಕ್ಷ್ಮಿಗೆ ತನ್ನ ಬೆರಳನ್ನು ಮುಡುಪಾಗಿ ಅರ್ಪಿಸಿದನೆಂದು ಪ್ರತೀತಿಯಿದೆ. ಈತನೊಬ್ಬ ತತ್ವಜ್ಞಾನಿ ರಾಜನಾಗಿದ್ದನು. ಅಮೋಘವರ್ಷನು ಕ್ರಿ.ಶ.೮೭೮ರಲ್ಲಿ ನಿಧನವಾದಾಗ ಅವನ ಮಗ ಇಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು.

ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟ ವಂಶದ ಮುಮ್ಮಡಿ ಕೃಷ್ಣನ ಕಾಲದ ಮೂರು ಶಾಸನಗಳು ಮಾತ್ರ ಕಾಣಸಿಗುತ್ತವೆ. ಶಹಾಪುರ ತಾಲೂಕಿನ ಸಿರಿವಾಳದಲ್ಲಿ ದೊರೆತಿರುವ ಕ್ರಿ.ಶ.೯೩೯ರ ಅಕಾಲವರ್ಷ ಮುಮ್ಮಡಿ ಕೃಷ್ಣನ ಶಾಸನದಲ್ಲಿ ಸಗರನಾಡಿನ ಉಲ್ಲೇಖವಿದೆ. ಜೇವರ್ಗಿ ತಾಲೂಕಿನ ಆಂದೋಲಾದಿಂದ ಆಳುತ್ತಿದ್ದನೆಂಬ ಉಲ್ಲೇಖವಿದೆ. ಮುಮ್ಮಡಿ ಕೃಷ್ಣನ ಕ್ರಿ.ಶ.೯೫೮ರ ಶಾಸನದಲ್ಲಿ ಕನ್ನರ ದೇವ ಅಕಾಲವರ್ಷನು ಕೃಷ್ಣನು ನವಖಂಡ ಪೃಥ್ವಿಯನ್ನು ಆಳುತ್ತಿದ್ದನೆಂಬ ಉಲ್ಲೇಖವಿದೆ. ಮುಮ್ಮಡಿ ಕೃಷ್ಣನ ಕ್ರಿ.ಶ೯೫೮ ಮೂರನೆಯ ಶಾಸನವು ಚಿಂಚೋಳಿ ತಾಲೂಕಿನ ನಿಡುಗುಂದದಲ್ಲಿ ದೊರೆತಿದ್ದು ಅಸ್ಪಷ್ಟವಾಗಿದೆ.[೧೭] ರಾಷ್ಟ್ರಕೂಟರ ಆಡಳಿತದ ಬಗೆಗೆ ಬೇರೆಯಾವುದೇ ಶಾಸನಾಧಾರಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲವಾಗಿದೆ.

ಕಲ್ಯಾಣದ ಚಾಲುಕ್ಯರ ಇತಿಹಾಸ:-

ಗುಲಬರ್ಗಾದಲ್ಲಿ ಕಲ್ಯಾಣದ ಚಾಲುಕ್ಯರ ಆಳ್ವಿಕೆ ಮಾಡಿರುವುದಕ್ಕೆ ಶಾಸನಗಳು ದೊರೆತಿವೆ. ಕಲ್ಯಾಣದ ಚಾಲುಕ್ಯರ ನೂರಾರು ಶಾಸನಗಳು ಗುಲಬರ್ಗಾ ಜಿಲ್ಲೆಯಲ್ಲಿ ದೊರೆತಿದ್ದು ಅವರ ಆಡಳಿತ ಪ್ರಭಾವವು ಜಿಲ್ಲೆಯಾದ್ಯಂತ ಕಂಡು ಬರುವುದು.

ಚಾಳುಕ್ಯರ ಶಾಖೆಯ ಇಮ್ಮಡಿ ತೈಲನಿಂದ ರಾಷ್ಟ್ರಕೂಟರ ಇಮ್ಮಡಿ ಕರ್ಕನು ಸುಮಾರು ಕ್ರಿ.ಶ.೯೭೩ರಲ್ಲಿ ಮಾನ್ಯಖೇಡದಲ್ಲಿ ಅಧಿಕಾರ ಗ್ರಹಣ ಮಾಡಿದನು. ಇಮ್ಮಡಿ ಸೋಮೇಶ್ವರನ ತರುವಾಯ ಕ್ರಿ.ಶ. ೧೦೭೬ರಲ್ಲಿ ತನ್ನದೇ ಶಕೆಯನ್ನೇ ಪ್ರಾರಂಭಿಸಿದನು. ಈತನ ಆಸ್ಥಾನ ಕವಿ ಬಿಲ್ಹಣನು ವಿಕ್ರಮನ ವೈಭವೋಪೇರಿತ ಆಳ್ವಿಕೆಯನ್ನು ಬಣ್ಣಿಸಿದ್ದಾನೆ. ಮೂಲತಃ ಕಾಶ್ಮೀರದವನಾಗಿದ್ದ ಬಿಲ್ಹಣನು ರಚಿಸಿರುವ "ವಿಕ್ರಮಾಂಕ ದೇವಚರಿತ"ದ ನಾಯಕನೇ ವಿಕ್ರಮಾದಿತ್ಯನೆಂಬುದು ಶಾಸನಾಧಾರಗಳಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹಿಂದೂ ಕಾನೂನಿಗೆ ಆಧಾರಭೂತ ಕೃತಿಯಾದ 'ಮಿತಾಕ್ಷರ'ವನ್ನು ಈತನ ಆಸ್ಥಾನದಲ್ಲಿದ್ದ ಹಾಗೂ ಇದೇ ಜಿಲ್ಲೆಯ ಚಿತ್ತಾಪುರ ತಾಲೂಕಿನ ಮರ್ತೂರಿಗೆ ಸೇರಿದ ವಿಜ್ಞಾನೇಶ್ವರನು ರಚಿಸಿದನು. ಈತನ, ಪ್ರಕಾರ "ಕಲ್ಯಾಣದಂತಾ ನಗರ ಹಿಂದಿರಲಿಲ್ಲ ಮುಂದಿರಲಾರದು. ವಿಕ್ರಮಾದಿತ್ಯನಂತ ಪ್ರಭು ಹಿಂದಿರಲಿಲ್ಲ ಹಾಗೂ ಮುಂದೆ ಬರಲಾರನೆಂದು" ಪ್ರತ್ಯಕ್ಷವಾಗಿ ಕಂಡು ವರ್ಣಿಸಿರುವನು.

ಗುಲಬರ್ಗಾ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ನೂರಾರು ಶಿಲಾಶಾಸನಗಳು ಲಭ್ಯವಿದ್ದು ಅವುಗಳಲ್ಲಿ ಉಲ್ಲೇಖಿತ ಅಂಶಗಳನ್ನು ಇಲ್ಲಿ ಸ್ಥೂಲವಾಗಿ ಪರಿಚಯ ಮಾಡಿಕೊಡಲಾಗಿದೆ. ಚಾಳುಕ್ಯ ಪ್ರಾರಂಭ ಕಾಲದ ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲ. ಆದರೆ ಈ ಕಾಲದ ಕೆಲವು ಮುಖ್ಯವಾದ ಆಡಳಿತ ವಿಭಾಗಗಳೆಂದರೆ ಸಗರ ೫೦೦ ಪೂರ್ವ ಪಶ್ಚಿಮಗಳಲ್ಲಿ ಅರಲು ೩೦೦ ಹಾಗೂ ವಿಜಾಪುರ ಜಿಲ್ಲೆ ಉತ್ತರ ದಕ್ಷಿಣದಲ್ಲಿ ಕೃಷ್ಣಭೀಮೆಯಲ್ಲಿ ಸಗರ ನಾಡು ವ್ಯಾಪಿಸಿತ್ತು. ಇದರಲ್ಲಿ ಕೆಂಭಾವಿ ವಿಳ ನೆರೆಯಂಬೊಳ ೨೦ ಮುಂತಾದ ಆಡಳಿತ ಘಟಕಗಳಲ್ಲದೆ ಏವೂರು, ಮುದನೂರ, ಎಳೆವಾರ, ಕುಳಫೇರಿ, ಅಂದೇಲಿ, ಕೊಂಡಗುಳಿ, ಸಗರ, ಸಿರವಾಳ ಇವು ಪ್ರಸಿದ್ಧ ಅಗ್ರಹಾರ ಮತ್ತು ನಗರ ಪಟ್ಟಣಗಳಾಗಿದ್ದವು. ಗುಲಬರ್ಗಾ ಜಿಲ್ಲೆಯ ಅರಲು ೩೦೦ ಇಂದಿನ ಚಿತ್ತಾಪುರ ಹಾಗೂ ಸೇಡಂ ತಾಲ್ಲೂಕುಗಳ ಪ್ರದೇಶವಾಗಿತ್ತು. ಅಲ್ಲೂರ ಎಂಬ ಈಗಿನ ಗ್ರಾಮವೇ ಅರಲು ಎಂದು ಗುರುತಿಸಲಾಗಿದೆ. ಜೇವರ್ಗಿ ತಾಲ್ಲೂಕಿನ ಅಂದೇಲಿಯಲ್ಲಿ ದೊರೆತಿರುವ ಶಾಸನವು ಅಹವಮಲ್ಲ ಮೊದಲನೇ ಸೋಮೇಶ್ವರ ಕಾಲಕ್ಕೆ (೧೦೫೦) ಸೇರಿದ್ದು ಚೆನ್ನ ಮಾಧವ ದೇವಾಲಯಕ್ಕೆ ಆತನು ನೀಡಿದ ದತ್ತಿಯನ್ನು ದಾಖಲಿಸುತ್ತದೆ.[೧೮]

ಒಂದನೇ ಸೋಮೇಶ್ವರನ (ಚಿತ್ತಾಪುರ ತಾಲೂಕು) ನಾಗಾಯಿ ಶಾಸನವು (೧೦೫೮) ಸ್ಥಳೀಯ ೬೦ ಕಂಬದ ದೇವಾಲಯದ ಮುಂಭಾಗದಲ್ಲಿ ಸುದೀರ್ಘವಾದ ಈ ಶಾಸನದಲ್ಲಿ ನಾಗಾವಿಯ ಅಗ್ರಹಾರದ ಘಟಿಕಾಸ್ಥಾನಕ್ಕೆ ಮಧುವ ಅರಸ ದಣ್ಣಾಯಕ ದತ್ತಿಬಿಟ್ಟ ವಿಚಾರವಿದೆ. ಆರನೇ ವಿಕ್ರಮಾದಿತ್ಯ (೧೧೧೧)ನ ಆಡಳಿತಾವಧಿಯಲ್ಲಿ ಮಧುವಣಭಟ್ಟನ ಮಗ ಆದಿತ್ಯ ಭಟ್ಟನು ದಂಡಾಧೀಶನಾಗಿದ್ದನೆಂದು ಹಾಗೂ ಈತನು ಆದಿತ್ಯೇಶ್ವರ ದೇವಾಲಯವನ್ನು ಕಟ್ಟಿಸಿ ಹಲವು ದತ್ತಿಗಳನ್ನು ನೀಡಿದ ವಿವರಗಳನ್ನು ಯಡ್ರಾಮಿಯ ಶಾಸನ ಒಂದರಲ್ಲಿ ದಾಖಲಿಸಲಾಗಿದೆ.

ವಿಕ್ರಮಾದಿತ್ಯನ ಕಾಲದ ಯಡ್ರಾಮಿಯ ಬಸವಣ್ಣನ ಗುಡಿಯ ಮುಂದಿರುವ ಶಾಸನವು ಸಗರನಾಡಿನ ಮಹಾಮಂಡಲೀಶ್ವರರಾದ ಹೈಹಯವಂಶದವರ ವಂಶಾವಳಿಯನ್ನು ವಿವರವಾಗಿ ನೀಡುತ್ತದೆ. ಗುಲಬರ್ಗಾ ತಾಲೂಕಿನ ಮರ್ತೂರಿನ ಕ್ರಿ.ಶ. ೧೧೨೩ರ ತ್ರಿಭುವನಮಲ್ಲನ ಶಾಸನವು 'ಮಿತಾಕ್ಷರ'ವನ್ನು ಬರೆದ ವಿಜ್ಞಾನೇಶ್ವರ ಭಟ್ಟಾರಕನ ಮಗ ಪೆರ್ಗಡೆ ಬೀಚರಾಜನ ಮರಿತೂರಲು(ಮರ್ತೂರು) ಕೇಶವ ದೇವರನ್ನು ಪ್ರತಿಷ್ಠಾಪಿಸಿದ ಬಗೆಗೆ ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ವಿಜ್ಞಾನೇಶ್ವರ ಉಲ್ಲೇಖವಿರುವುದರಿಂದ ಇದೊಂದು ಪ್ರಮುಖವಾದ ದಾಖಲೆಯಾಗಿದೆ ಎಂದು ತಿಳಿದುಬರುತ್ತದೆ.

ಕಲ್ಯಾಣದ ಕಲಚೂರಿಗಳು:-

ಈ ವಂಶದವರನ್ನು ಕಲಚೂರಿ ಎಂದು ಕರೆದರೂ ಕೂಡ 'ಕೇದಚೂರಿ', 'ಕಲಿಚೂರಿ' ಎಂಬ ಪದಗಳೂ ಶಾಸನಗಳಲ್ಲಿ ಕಂಡು ಬರುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಕಲಚೂರಿಗಳ ಕಾಲದ ಸುಮಾರು ೫೦ ಶಾಸನಗಳು ಇಲ್ಲಿಯವರೆಗೂ ಲಭ್ಯವಿದ್ದು. ಸೇಡಂ ತಾಲೂಕಿನ ಅಡಕಿ ಗ್ರಾಮದ ರಾಯಮುರಾರಿ ಸೋಮದೇವನ ಕ್ರಿ.ಶ.೧೧೬೫ರ ಶಾಸನವು ಮಹಾಪ್ರಧಾನ ದಂಡನಾಯಕ ಏಚರಸನು ಹಾಗೂ ಬಾಚಿದೇವರಸೂ ಅಡಕಿಯ ಚನ್ನ ಪಾರ್ಶ್ವನಾಥ ಜಿನಾಲಯಕ್ಕೆ ನೀಡಿದ ಹಲವು ದತ್ತಿಗಳನ್ನು ಉಲ್ಲೇಖಿಸುತ್ತದೆ. ಅಫಜ್ಜಲಪೂರ್ ತಾಲೂಕಿನ ಚಿನಮಳ್ಳಿಯಲ್ಲಿ ದೊರೆತಿರುವ ಕ್ರಿ.ಶ. ೧೧೬೭ರ ಶಾಸನವು ಕಲಚೂರಿ ರಾಯಮುರಾರಿ ಬಗ್ಗೆ ತಿಳಿಸುತ್ತದೆ. ಚಿತ್ತಾಪುರ ತಾಲೂಕಿನ ಕಾಳಿಗೆಯ ಕ್ರಿ.ಶ. ೧೧೭೩ರ ಶಾಸನವು ರಾಯಮುರಾರಿ ಸೋವಿದೇವನು ಮಾದಿಗನೂರ ನೆಲೆವೀಡಿನಲ್ಲಿರುವಾಗ ದಂಡನಾಯಕ ಮಾಧವಯ್ಯನ ಆಡಳಿತ ಬಗ್ಗೆ ಪ್ರಸ್ತಾಪಿಸುತ್ತದೆ. ಕಾಳಿಗೆಯನ್ನು ರಾಜಧಾನಿ ಕಾಳುಗೆ ಎಂದು ಉಲ್ಲೇಖಿಸುತ್ತದೆ[೧೯]. ಈ ಶಾಸನಗಳಿಂದ ಕಲ್ಯಾಣದ ಕಲಚೂರಿಗಳು ಗುಲಬರ್ಗಾದಲ್ಲಿ ಆಳ್ವಿಕೆ ಮಾಡಿದ್ದರು ಎಂದು ಹೇಳಬಹುದು.

ದೇವಗಿರಿಯ ಸೇವುಣರು:-

ದೇವಗಿರಿಯ ಯಾದವರ ಇತಿಹಾಸವು ಕಲ್ಯಾಣದ ಚಾಳುಕ್ಯರು ಮತ್ತು ಕಲಚೂರಿಗಳ ಅಧಿಪತ್ಯವು ಕೊನೆಗೊಂಡ ನಂತರ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಐದನೇ ಬಿಲ್ಲಮನು(೧೧೮೫-೧೧೯೩) ಕಲ ಚೂರಿಯರನ್ನು ಮತ್ತು ಕಲ್ಯಾಣಿ ಚಾಳುಕ್ಯರನ್ನು ಸೋಲಿಸಿದ ನಂತರ ಅಲ್ಲಿಂದ ಮುಂದಕ್ಕೆ ಈ ವಂಶದ ಹೆಸರು ದೇವಗಿರಿಯ ಯಾದವರು ಅಥವಾ ಸೇವುಣರೆಂದೇ ಬಳಕೆಗೆ ಬಂದಿತು. ಗುಲಬರ್ಗಾ ಜಿಲ್ಲೆಯಲ್ಲಿ ಸೇವುಣರ ಕಾಲದ ಹಲವಾರು ಶಾಸನಗಳು ಲಭ್ಯವಿದ್ದು, ಶಹಾಪುರ ತಾಲೂಕಿನ ಶಿರವಾಳದ ಭಿಲ್ಲಮನ ಕ್ರಿ.ಶ.೧೧೮೯ ಶಾಸನವು ಅವನಿಗೆ ಅಧೀನರಾದ ಶಾಖೆಯ ಶಿಲಾಹರ ವಂಶದ ಎಳ ಮೇಲೆ ಸಿಂಗಿ ದೇವರಸನ ತಾಯಿ ನಾಗಲದೇವಿ ಮುಂತಾದವರು ಚಿತ್ತಾಪೂರ ತಾಲೂಕಿನ ಇಂಗಳಿಗೆಯ ಯಾದವ ಸಿಂಘಣನ ೧೨೧೯ರ ಶಾಸನವು ಮಹಾಮಂಡಳೇಶ್ವರ ಬಿಜ್ಜರಸ, ಇಂಗಳಿಗೆ ಪ್ರಭು ನಾಗರಸ, ಪಂಚಮಠದವರು ಮೂಲಸ್ಥಾನದೇವರಿಗೆ ಬಿಟ್ಟು ಭೂ ದತ್ತಿಯ ಬಗೆಗೆ ಉಲ್ಲೇಖಿಸುತ್ತದೆ. ಹೀಗೆ ಹಲವಾರು ಶಾಸನಗಳಿಂದ ಇವರ ಆಡಳಿತಕ್ಕೆ ಒಳಪಟ್ಟಿತು ಎಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯ:-

ವಿಜಯನಗರ ಸಾಮ್ರಾಜ್ಯವು ಕ್ರಿ.ಶ೧೩೩೬ರಲ್ಲಿ ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರಾಯರು ಹಂಪಿಯಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯ ಸ್ಥಾಪನೆಯ ಮುಖ್ಯ ಉದ್ದೇಶ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಪೋಷಿಸುವುದಾಗಿತ್ತು. ಈ ಸಾಮ್ರಾಜ್ಯ ಸ್ಥಾಪನೆಗೆ ವಿದ್ವಾಂಸರು ಪ್ರೇರಕರಾಗಿದ್ದರು. ಕೃಷ್ಣದೇವರಾಯನು ಪಟ್ಟಕ್ಕೆ ಬಂದ ಕೂಡಲೇ ಉಮ್ಮತ್ತೂರಿನ ಗಜಪತಿಯನ್ನು ಸೋಲಿಸಿ ಆದಿಲ್ ಖಾನನ್ನು ಡೋಣಿ, ಕೋವಿಲಕೊಂಡ ಯುದ್ಧಗಳಲ್ಲಿ ಪರಾಭವಗೊಳಿಸಿ, ಕ್ರಿ.ಶ.೧೫೦೯ರಲ್ಲಿ ಪಟ್ಟಾಭಿಷಿಕ್ತನಾದನು. ಅನಂತರ ಶಿವನಸಮುದ್ರ, ಉಮ್ಮತ್ತೂರು, ಮಂಗಳೂರುಗಳಲ್ಲಿ ಕಾಣಿಸಿದ್ದ ಬಂಡಾಯಗಳನ್ನು ಹತ್ತಿಕ್ಕಿದನು. ವಿಜಾಪುರದ ವಶದಲ್ಲಿದ್ದ ಗೋವೆಯನ್ನು ಗೆಲ್ಲಲು ಪೋರ್ಚುಗೀಸರಿಗೆ ನೆರವಾದನು. ಈತನು ಗಜಪತಿಯನ್ನು ಸೋಲಿಸಿದ ನಂತರ ಅವನ ರಾಜಧಾನಿಯಾಗಿದ್ದ ಕಟಕವರೆಗೂ ವಿಜಯಶಾಲಿಯಾಗಿ ಸಾಗಿದ. ಅದೇ ರೀತಿ ವಿಜಾಪುರದ ಅರಸರನ್ನು ಸೋಲಿಸಿ. ಕ್ರಿ.ಶ.೧೫೨೦ರಲ್ಲಿ ನಾಲ್ಕು ದಿನ ವಿಜಾಪುರದ ರಾಜಧಾನಿಯಲ್ಲೇ ತಳವೂರಿದನು.[೨೦]

ರಾಯಚೂರು ದೋ-ಅಬ್‌ನ್ನು ತನ್ನ ವಶಕ್ಕೆ ತೆಗೆದುಕೊಂಡನು. ಗುಲಬರ್ಗಾ, ಬೀದರ್ (ಆಗ ಬಹಮನಿಗಳ ರಾಜಧಾನಿಯಾಗಿದ್ದರೂ ಬರೀದ್ ಷಾಹಿಗಳ ವಶವಾಗಿತ್ತು)ಗಳನ್ನು ವಿಜಯಶಾಲಿಯಾಗಿ ಪ್ರವೇಶಿಸಿದನು. ಕೃಷ್ಣದೇವರಾಯನು ಕ್ರಿ.ಶ. ೧೫೨೩ರಲ್ಲಿ ಗುಲಬರ್ಗಾವನ್ನು ತನ್ನ ಸೈನ್ಯದೊಡನೆ ಪ್ರವೇಶಿಸಿದ ಮೇಲೆ, ಮೂರನೇ ಮಹಮ್ಮದನ ಮೊಮ್ಮಕ್ಕಳಾದ ೩ನೇ ಅಲ್ಲಉದ್ದೀನ್‌ವಲಿಉಲ್ಲಾ ಮತ್ತು ಕಲೀಮುಲ್ಲರನ್ನು (ಅಮೀರರುಗಳು ಬಂಧಸಿದ್ದರು) ಬಿಡುಗಡೆ ಮಾಡಿ ಅನಂತರ ಹಿರಿಯ ಮಗನಾದ ಮೂರನೇ ಅಲ್ಲಾಉದ್‌ದೀನನನ್ನು ಗುಲಬರ್ಗಾದ ಸುಲ್ತಾನನ್ನಾಗಿ ನೇಮಿಸಿ ವಲಿಉಲ್ಲಾ ಮತ್ತು ಕಲೀಮುಲ್ಲಾರನ್ನು ತನ್ನೊಡನೆ ವಿಜಯನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸುರಕ್ಷಿತವಾಗಿಟ್ಟನು. ಈ ರಾಜಕೀಯ ಸಾಧನೆಯಿಂದಾಗಿ ಕೃಷ್ಣದೇವರಾಯನಿಗೆ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದು ಇತ್ತು.

ಈತನ ತರುವಾಯ ಅಚ್ಯುತರಾಯನು (ಕ್ರಿ.ಶ.೧೫೨೯-೪೨) ಅಧಿಕಾರಕ್ಕೆ ಬಂದನು. ಇವನ ನಂತರ ಇವನ ಸೋದರ ಪುತ್ರ ಸದಾಶಿವರಾಯನು ಅಧಿಕಾರಕ್ಕೆ ಬಂದನು. ಆದರೆ ನಾಮಮಾತ್ರ ಅರಸನಾಗಿದ್ದು, ಆಡಳಿತವನ್ನೆಲ್ಲಾ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಯಲ್ಲಿ ಇತ್ತನು. ರಾಮರಾಯ ಒಡೆದು ಹೋದ ಐದು ಶಾಹಿ ಮನೆತನಗಳ ಲಾಭ ಪಡೆದು ಸಾಮ್ರಾಜ್ಯವನ್ನು ಕೃಷ್ಣಾನದಿವರೆಗೆ ವಿಸ್ತರಿಸಿದನು. ಆದರೆ ಕ್ರಿ.ಶ ೧೫೬೫ರಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರಕ್ಕೆ ಸೋಲುಂಟಾಯಿತು. ಅಳಿಯ ರಾಮರಾಯನನ್ನು ಸೆರೆ ಹಿಡಿದರು. ವಿಜಯನಗರದ ಸಾಮ್ರಾಜ್ಯವು ಮತ್ತೆ ಹಲವು ದಶಕಗಳ ಕಾಲ ಮುಂದುವರಿದರೂ ಗುಲಬರ್ಗಾ ಜಿಲ್ಲೆಯ ಮೇಲೆ ಅವರ ಪ್ರಭಾವವು ಯಾವುದೇ ರೀತಿಯಲ್ಲೂ ಉಂಟಾಗಲಿಲ್ಲ. ವಿಜಯಪುರದ ಆದಿಲ್ ಷಾಹಿಗಳು ಈ ಭಾಗವನ್ನು ತಮ್ಮ ವಶಕ್ಕೆ ಪೂರ್ಣವಾಗಿ ತೆಗೆದುಕೊಂಡರು.[೨೧] ನಂತರ ಬಂದ ಬಹುಮನಿ ಸುಲ್ತಾನರು, ವಿಜಾಪುರದ ಆದಿಲ್ ಶಾಹಿಗಳು ಈ ಭಾಗವನ್ನು ಆಡಳಿತಕ್ಕೆ ಒಳಪಡಿಸಿದರು. ಪ್ರಸ್ತುತ ಅಧ್ಯಯನ ಈ ಪರಿಸರದ ಶಾಸನಗಳಿಗೆ ಮತ್ತು ಸ್ಮಾರಕಗಳಿಗೆ ಸೀಮಿತವಾಗಿರಿಸಲಾಗಿದೆ.

ಬಹಮನಿಯ ಸಾಮ್ರಾಜ್ಯ (ಕ್ರಿ.ಶ. ೧೩೪೭-೧೫೨೮):-

ಮಹಮ್ಮದ್ ಬಿನ್ ತುಘಲಕ್ ವಿರುದ್ಧ ಸ್ಫೋಟಗೊಂಡ ವಿವಿಧ ಪ್ರಾಂತ್ಯಗಳ ಬಂಡಾಯದ ಪ್ರಮುಖ ಪರಿಣಾಮವೆಂದರೆ. ಗುಲಬರ್ಗಾದಲ್ಲಿ ಬಹಮನಿ ಸಾಮ್ರಾಜ್ಯದ ಸ್ಥಾಪನೆಯೆಂದು ಹೇಳಲಾಗುತ್ತದೆ. ಕ್ರಿ.ಶ.೧೩೪೭ ರಲ್ಲಿ ಹಸನ್‌ನನ್ನು ರಾಜನನ್ನಾಗಿ ಮಾಡಿದರು. ಇವನ ಪೂರ್ಣ ಹೆಸರು "ಅಲ್ಲಾವುದ್ದೀನ್ ಹಸ ಬಹಮನ್ ಷಾ" ನಂತರ ಇವನು ಗುಲಬರ್ಗಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಗುಲಬರ್ಗಾದ ಮಸೀದಿಯೊಂದರಲ್ಲಿರುವ ಪರ್ಷಿಯನ್ ಶಾಸನವು ಈತನಿಗೆ "ಸಿಖಂದರ್-ಇ-ಸಾನಿ ಅಲ್ಲಾ-ಉದ್-ದೀನ್ ಹಸನ್ ಬಹಮನ್ ಷಾ-ಅಲ್-ವಲಿ" ಎಂಬ ಬಿರುದು ಇತ್ತೆಂದು ಉಲ್ಲೇಖಿಸುತ್ತದೆ. ಬಹಮನ್ ಷಾ ಎಂಬುದು ಈತನ ವಂಶದ ಮೂಲನೆಂದು ಅಭಿಪ್ರಾಯವಿದೆ. ಆದರೆ ಪೆರಿಸ್ತಾ ಹೇಳಿಕೆಯ ಪ್ರಕಾರ ಬ್ರಾಹ್ಮಣನೊಬ್ಬನಲ್ಲಿ ಅಲ್ಲಾ-ಉದ್-ದೀನ್ ಸೇವಕನಾಗಿದ್ದುದರಿಂದ ಮಾಲೀಕನ ಸ್ಮರಣೆಗಾಗಿ ತನ್ನನ್ನು ತಾನು "ಗಂಗೂ ಬಹಮನಿ" ಎಂದು ಕರೆದುಕೊಂಡನೆಂದು ವ್ಯಕ್ತವಾಗುತ್ತದೆ.[೨೨] ಅಲ್ಲಾಉದ್ದೀನ್ ಬಹಮನ್ ಷಾ ತನ್ನ ರಾಜ್ಯವನ್ನು ನಾಲ್ಕು ತರಫ್ ಅಥವಾ ವಿಭಾಗಗಳನ್ನಾಗಿ ವಿಂಗಡಿಸಿದ್ದನು. ಅವುಗಳೆಂದರೆ ದಾಬೋಳವರೆಗಿನ ಮತ್ತು ಕೃಷ್ಣಾ,ತುಂಗಭದ್ರಾ ಪ್ರದೇಶಗಳನ್ನೊಳಗೊಂಡ ಅಸನಬಾದ್-ಗುಲಬರ್ಗ, ದೌಲತಬಾದ್, ಬೀದರ್, ಮತ್ತು ಕಾಂದಹಾರ್ (ಇಂದೂರ್ ಮತ್ತು ತೆಲಂಗಾಣದ ಕೆಲವು ಪ್ರದೇಶಗಳನ್ನೊಳಗೊಂಡ ಬೀದರ್) ಇವುಗಳಲ್ಲಿ ಗುಲಬರ್ಗಾ ಪ್ರಾಂತ್ಯವೇ ಬಹಳ ಮುಖ್ಯವಾದ ಆಡಳಿತ

ಘಟಕವಾಗಿತ್ತು. ಅಲ್ಲಾ-ಉದ್-ದಿನ್ ಬಹಮನ್ ಷಾ ಕ್ರಿ.ಶ. ೧೩೫೮ ರಲ್ಲಿ ನಿಧನನಾದಾಗ ಆತನ ಮಗನಾದ ಮೊದಲನೆ ಮಹಮ್ಮದ್ ಷಾ (೧೩೫೮-೭೭) ಪಟ್ಟಕ್ಕೆ ಬಂದನು. ಬಹಮನ್ ಷಾನ ಆಳ್ವಿಕೆಯ ಅವಧಿಯಲ್ಲಿ ತನ್ನ ರಾಜಧಾನಿ ನಗರವಾದ ಗುಲಬರ್ಗಾವನ್ನು ಬೃಹತ್ ಕಟ್ಟಡಗಳಿಂದ ಹಾಗೂ ಉತ್ತಮ ನಗರ ವ್ಯವಸ್ಥೆಗಳಿಂದ ಆಧುನಿಕಗೊಳಿಸಿದನು. ಈ ಕಾಲದ ಪ್ರಸಿದ್ಧ ಸೂಫಿ ಸಂತರಾಗಿದ್ದ ಶೇಕ್ ಫಾರಿಬ್, ಶೇಕ್ ಬಿಜಾಪುರಿ ಮತ್ತು ಶೇಕ್ ಜುನಾದಿಗಳಿಗೆ ಆಶ್ರಯ ನೀಡಿದ್ದನಲ್ಲದೆ ಸ್ವತಃ ಈ ಸೂಫಿ ಸಂತರುಗಳ ನಿಷ್ಠಾವಂತ ಭಕ್ತನಾಗಿದ್ದನು.

ಹಿಂದೂ ಪ್ರತಿಭಟನೆ ವಿಜಯನಗರದ ಸ್ಥಾಪನೆಯಿಂದ ಫಲಿತವಾಯಿತು. ಮುಸ್ಲಿಂ ಪ್ರತಿರೋಧವು ಬಹಮನಿ ರಾಜ್ಯದ ಸ್ಥಾಪನೆಯಲ್ಲಿ ಈ ಸರಳವಾದ ವಿಶ್ಲೇಷಣೆಯು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದಿಲ್ಲ. ವಿಜಯನಗರ ರಾಜ್ಯವನ್ನು ಮುಸ್ಲಿಂ ಸವಾಲಿಗೆ ಒಡ್ಡಿದ ಪ್ರತಿಕ್ರಿಯೆ ಎಂದು ಚಿತ್ರಿಸಲಾಗಿದೆ. ಸ್ವತಃ ಮುಸ್ಲಿಂ ಆದ ಬಹಮನಿ ರಾಜ್ಯವು ಮುಸ್ಲಿಂ ಸವಾಲಿಗೆ ಒಡ್ಡಿದ ಪ್ರತಿಕ್ರಿಯೆ ಎಂದೇಕೆ ಆಗಬೇಕು? ಮತವು ರಾಜ್ಯದ ಉದಯಕ್ಕೆ ಪ್ರೇರಕ ಅಂಶವಾಗುದಾದರೆ ಅದೇ ಮತವು ಪರಸ್ಪರ ಘರ್ಷಣೆಗೆ ಏಕೆ ಎಡೆಗೊಡಬೇಕು? ಅದು ಆತ್ಮ ಪರಾಭವಲ್ಲವೆ ? ಇದೇ ಹಿಂದೂ ಮುಸ್ಲಿಂ ಘರ್ಷಣೆಯ ಸತ್ವವು ಇದರ ಅನೇಕ ರಾಜವಂಶಗಳ ಉದಯವನ್ನು ವಿವರಿಸುತ್ತದೆ.[೨೩]

ಮೊದಲನೆ ಮಹಮ್ಮದನು ನಿಧನವಾದ ಮೇಲೆ ಕ್ರಿ.ಶ. ೧೩೭೫ರಲ್ಲಿ ಅವನ ಮಗ ಅಲ್ಲಾವುದ್ದೀನ್ ಮುಜಾಹಿದನು ಪಟ್ಟಕ್ಕ ಬಂದನು. ಇತನು ಸಹ ವಿಜಯನಗರದೊಡನೆ ಸೆಣಸಾಟವನ್ನು ಮುಂದುವರಿಸಿದನು. ಬಹಮನಿಯ ಸಿಂಹಾಸನವ್ನೇರಿದ ಎರಡನೇ ಮಹಮ್ಮದ್ (ಕ್ರಿ.ಶ೧೩೭೮-೯೭) ಒಬ್ಬ ಪರಿಜ್ಞಾವಂತ ಆಡಳಿತಗಾರ ಹಾಗೂ ಸ್ವತಃ ಪಂಡಿತನೂ ಆಗಿದ್ದನು. ಇತನು ತನ್ನ ಅಧಿಕಾರಿ ಫಬ್ರಿ ಇ ದವಲಾ ಮತ್ತು ಮುಲಾರ ಷಾ ಸುಲ್ತಾನೆ ಎಂಬ ಆತನ ಇಬ್ಬರ ಹೆಂಡತಿಯರ ನೇತೃತ್ವದಲ್ಲಿ ಗುಲಬರ್ಗಾದಲ್ಲಿ ಮಸೀದಿ ಕಟ್ಟಿಸಿದ ಬಗ್ಗೆ ಈತನ ಕ್ರಿ.ಶ. ೧೩೯೪-೯೫ರ ಪರ್ಷಿಯನ್ ಶಾಸನ ಉಲ್ಲೇಖಿಸುತ್ತದೆ. ಹಸನ್ ಬಹಮನ್ ಷಾನ ಮೊಮ್ಮಗನಾಗಿದ್ದ ತಾಜುದ್ದೀನ್ ಫಿರೋಜನು (ಕ್ರಿ.ಶ.೧೩೯೭-೧೪೨೨) ತನ್ನ ಆಡಳಿತವನ್ನು ಪವಿತ್ರ ಕುರಾನ್ ಗ್ರಂಥದ ತತ್ವಗಳ ಆಧಾರದ ಮೇಲೆ ನಿಯಂತ್ರಿಸದ ಸಮಾಜದಲ್ಲಿ ಸ್ತ್ರೀಯರಿಗೆ ವಿಶೇಷ ಸ್ಥಾನಮಾನ ನೀಡಿದನು.[೨೪]

ಗುಲಬರ್ಗಾ ಹಾಗೂ ಫಿರೋಜಾಬಾದ್‌ಗಳಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಸ್ಪೇನಿನ ಕೊರ್ಡೋಲಾ ಎಂಬಲ್ಲಿರುವ ಸುಂದರವಾದ ಮಸೀದಿಯ ಮಾದರಿಯಲ್ಲೇ ಗುಲಬರ್ಗಾದಲ್ಲಿ ಜುಮ್ಮಾ ಮಸೀದಿಯನ್ನು ನಿರ್ಮಿಸಿದನು. ಈತನ ತಮ್ಮನಾದ ಅಹಮ್ಮದ್ನ ಸುಮಾರು ೨೦,೦೦೦ ಸೇನೆಯ ಬಲದೊಂದಿಗೆ ೨೨ನೇ ಸೆಪ್ಟಂಬರ್ ೧೪೨೨ರಂದು ಗುಲಬರ್ಗಾದ ಮೇಲೆ ಧಾಳಿ ಮಾಡಿ ಸಾಮ್ರಾಜ್ಯದ ಸುಲ್ತಾನನೆಂದು ಪಟ್ಟಾಭಿಷಕ್ತನಾದನು. ಇದಾದ ಕೆಲವೇ ದಿನಗಳಲ್ಲಿ ಫಿರೋಜನು ನಿಧನನಾದನು. ಅಹಮ್ಮದ್‌ನ ದಾಳಿಯೊಂದಿಗೆ ಗುಲಬರ್ಗಾದಲ್ಲಿ ಬಹಮನಿಯ ಸಾಮ್ರಾಜ್ಯದ ಅಂತ್ಯವೂ ಆಯಿತು. ಏಕೆಂದರೆ ಆತನು ರಾಜಧಾನಿಯನ್ನು ಬೀದರ್‌ಗೆ ಸ್ಥಳಾಂತರಿಸಿದನು.

ಬಿಜಾಪುರದ ಆದಿಲ್ ಷಾಹಿಗಳು (ಕ್ರಿ.ಶ.೧೪೮೯-೧೬೮೬)

ಬಹಮನಿ ಸಾಮ್ರಾಜ್ಯವು ಪತನಗೊಂಡ ನಂತರ ಅಸ್ತಿತ್ವಕ್ಕೆ ಬಂದ ಐದು ಪ್ರಮುಖ ಷಾಹಿ ರಾಜ್ಯಗಳಲ್ಲಿ ಬಿಜಾಪುರದ ಈ ಆದಿಲ್ ಷಾಹಿಗಳ ಸಾಮ್ರಾಜ್ಯವು (೧೪೯೦) ಪ್ರಮುಖವಾದದು. ಯೂಸುಫ್ ಆದಿಲ್‌ಖಾನನು ಕ್ರಿ.ಶ.೧೪೯೦ರಲ್ಲಿ ಸ್ವತಂತ್ರವಾಗಿ ಹೊಸದೊಂದು ರಾಜ್ಯವನ್ನು ಸ್ಥಾಪಿಸಿಕೊಂಡನೆಂದು ತಿಳಿದು ಬರುತ್ತದೆ. ಕ್ರಿ.ಶ.೧೫೧೦ರಲ್ಲಿ ಗೋವೆಯನ್ನು ಪೋರ್ಚುಗೀಸರಿಂದ

ಕಿತ್ತುಕೊಂಡದ್ದು, ಇದರ ತರುವಾಯ ಅದೇ ವರ್ಷ ಸಂಭವಿಸಿದ ವಿಜಯನಗರ ವಿರುದ್ಧದ ಯುದ್ಧದಲ್ಲಿ ಯೂಸುಫ್ ಆದಿಲಾ ಷಾ ನಿಧನನಾದನು. ಈತನ ಸಮಾಧಿಯು ಇವನ ಪೂಜಿಸುತ್ತಿದ್ದ ಶಹಾ ಹಬೀಬುಲ್ಲಾ ಸಂತನ ಸಮಾಧಿಯ ಬಳಿಯಲ್ಲಿ ಗುಲಬರ್ಗಾ ಗೋರಿಯಲ್ಲಿದೆ ಆದಿಲ್ ಷಾನ ತರುವಾಯ ಅವನ ಮಗನಾದ ಇಸ್ಮಾಯಿಲ್ ಕ್ರಿ.ಶ. ೧೫೧೦ರಲ್ಲಿ ಪಟ್ಟಕ್ಕೆ ಬಂದನು. ಈತನ ದುರ್ಬಲತೆಯನ್ನು ಉಪಯೋಗಿಸಿಕೊಂಡು ಕೃಷ್ಣದೇವರಾಯನು ಕ್ರಿ.ಶ.೧೫೨೦ರಲ್ಲಿ ರಾಯಚೂರನ್ನು ಬಿಜಾಪುರದಿಂದ ಗೆದ್ದುಕೊಂಡನು. ನಂತರ ಕೆಲವೇ ವರ್ಷಗಳ ತರುವಾಯ ರಾಯಚೂರನ್ನು ಬಿಜಾಪುರದ ಸುಲ್ತಾನನು ಗೆದ್ದುಕೊಂಡನು. ಇದಕ್ಕೆ ಉತ್ತರವಾಗಿ ಕೃಷ್ಣದೇವರಾಯನು ಕ್ರಿ.ಶ.೧೫೨೦ರಲ್ಲಿ ಅದನ್ನು ಮರಳಿ ಗೆದ್ದುಕೊಂಡನು. ಇಸ್ಮಾಯಿಲ್ ಅಹಮದ್ ನಗರ ನಿಜಾಂ ಷಾನೊಡನೆ ವೈವಾಹಿಕ ಸಂಬಂಧ ಬೆಳೆಸಿ ಆತನ ಸ್ನೇಹವನ್ನು ಸಂಪಾದಿಸಿದನು. ಇದೇ ರೀತಿ ಬಿರಾರಿನ ಅಲ್ಲಾವುದ್ದೀನನ ಸ್ನೇಹವನ್ನು ಗಳಿಸಿ ಕ್ರಿ.ಶ. ೧೫೨೯ರಲ್ಲಿ ಬೀದರನ್ನು ಮುತ್ತಿಗೆ ಹಾಕಿ ಅಮೀರ್ ಖರೀದ್‌ನನ್ನು ಸೆರೆಹಿಡಿದು ತನ್ನ ಆಸ್ಥಾನಕ್ಕೆ ತಂದನು. ಕ್ರಿ.ಶ.೧೫೨೯ರಲ್ಲಿ ಕೃಷ್ಣದೇವರಾಯನು ನಿಧನನಾದ ಮೇಲೆ ರಾಯಚೂರು, ಮುದಗಲ್ ಹಾಗೂ ಬೆಳಗಾವಿಯನ್ನು ಪುನಃ ಗೆದ್ದುಕೊಂಡನು. ಮುಂದೆ ಗುಲಬರ್ಗಾ ಜಿಲ್ಲೆಯು ವಿಜಾಪುರದ ಜೊತೆಗೆ ಔರಂಗಜೇಬನ ನೇತೃತ್ವದ ಮೊಗಲರ ಆಳ್ವಿಕೆಗೆ ಒಳಪಟ್ಟಿತು.

ಹೈದರಾಬಾದ ನಿಜಾಮ ವಂಶದ ಉದಯ (ಕ್ರಿ.ಶ. ೧೭೨೪-೧೯೪೮):-

ಔರಂಗಜೇಬನ ನೆಚ್ಚಿನ ದಂಡನಾಯಕನಾಗಿ ಸೇವೆ ಸಲ್ಲಿಸಿದ್ದ ನಿಜಾಮ ಉಲ್ ಮುಲ್ಕ್ ಆಸಫ್ ಜಾ ಕ್ರಿ.ಶ.೧೭೧೩ರಲ್ಲಿ ನಿಜಾಮ ಅಥವಾ ಅಸಫಜಾಹಿ ವಂಶದ ಸ್ಥಾಪನೆಯನ್ನು ಮಾಡಿದನೆಂದು ಹೇಳಲಾಗುತ್ತದೆ. ಆಸಫ್ ಜಾಹಿ ಔರಂಗಜೇಬನ ನಿಧನದ ತರುವಾಯ ಕ್ರಿ.ಶ.೧೭೧೩ರಲ್ಲಿ ದಖನ್ನಿನ ಸುಬೇದಾರನಾಗಿ ನೇಮಕಗೊಂಡ ಮೇಲೆ ದಕ್ಷಿಣ ಭಾಗದ ಆಡಳಿತ ಹತೋಟಿಯಲ್ಲಿ ಹಲವು ಪರಿವರ್ತನೆಗ ಗೋಚರವಾದವು. ಈತನು ಕ್ರಿ.ಶ.೧೭೧೯ರಲ್ಲಿ ಮಾಳ್ವದ ಸುಬೇದಾರನಾಗಿ ನೇಮಕ ಮಾಡಲಾಯಿತು.[೨೫] ಈ ತಂತ್ರದ ದುರಾಲೋಚನೆಯನ್ನು ಅರಿತುಕೊಂಡ ನಿಜಾಮನು ಕ್ರಿ.ಶ.೧೭೨೦ರಲ್ಲಿ ದಿಲ್‌ವರ್‌ನನ್ನು ರತನ್ನಪುರ ಯುದ್ಧದಲ್ಲಿ ಪರಾಭವಗೊಳಿಸಿದನು. ನಿಜಾಮ ಉಲ್ ಮುಲ್ಕ್‌ನನ್ನು ದೆಹಲಿಯಲ್ಲಿ ವಜೀರ್ ಆಗಿ ನೇಮಕ ಮಾಡಲಾಯಿತು. ಆದರೆ ಆತನಿಗೆ ಈ ಹುದ್ದೆಯಲ್ಲಿ ಆಸಕ್ತಿ ಇಲ್ಲದಿದ್ದ ಕಾರಣ ಅದಕ್ಕೆ ರಾಜೀನಾಮೆ ನೀಡಿ ಸ್ವತಂತ್ರನಾಗಿ ದಖನ್ನಿಗೆ ಕ್ರಿ.ಶ.೧೭೨೪ರಲ್ಲಿ ಹಿಂದಿರುಗಿದನು. ವಾಪಸ್ ಬಂದಕೆಲವೇ ಸಮಯದಲ್ಲಿ ಮುಂಬಾರಿಜ್‌ಖಾನನ್ನು ದಖನ್ನಿನಲ್ಲಿ ಸುಬೇದಾರನಾಗಿ ನೇಮಿಸಿ ದಕ್ಷಿಣದ ಮೊಗಲ್ ಪ್ರಾಂತ್ಯಗಳನ್ನು ಆತನ ಹತೋಟಿಗೆ ನೀಡಿದನು. ನಿಜಾಮನು ಕ್ರಮವಾಗಿ ಮುಂದುವರೆದು ಕ್ರಿ.ಶ. ೧೭೨೪ರಲ್ಲಿ ಹೈದರಾಬಾದ್‌ನ್ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿಯೇ ನೆಲೆಸಿದನು. ಇತನಿಗೆ 'ಅಸಫಜಾಹ' ಎಂಬ ಬಿರುದು ನಂತರ ನೀಡಲಾಯಿತು. ಅಸಫಜಾಹ ಕ್ರಿ.ಶ. ೧೭೪೮ರಲ್ಲಿ ಮರಣ ಹೊಂದುವ ವೇಳೆಗೆ ದಖನ್ನಿಯಲ್ಲಿ ತನ್ನ ಸಾಮ್ರಾಜ್ಯದ ಆಳ್ವಿಕೆಯನ್ನು ಸುಭದ್ರಗೊಳಿಸಿಕೊಂಡಿದ್ದನು. ಗುಲಬರ್ಗಾ ಜಿಲ್ಲೆಯಲ್ಲಿ ಈ ವೇಳೆಗಾಗಲೇ ಮೂರು ರಾಜಕೀಯ ಶಕ್ತಿಗಳ ಹತೋಟಿಗಳಾದ ನಿಜಾಮನ ಹಿಡಿತದಲ್ಲಿ ಜಿಲ್ಲೆಯ ಅನೇಕ ಭಾಗಗದ್ದವು. ಅಪರೋಕ್ಷವಾಗಿ ಮರಾಠರಿಗೆ "ಚೌತ್" ಸಲ್ಲಿಸುತ್ತಿದ್ದುದರಿಂದ ನಿಜಾಮನ ಹಿಡಿತದಲ್ಲಿದ್ದ ಭಾಗಗಳು ಹಾಗೂ ಸುರಪುರದ ನಾಯಕರಿಗೆ ಒಳಪಟ್ಟಿದ್ದ ಭಾಗಗಳಿಂದ ಕಂದಾಯ ಶೇಕಡಾ ೧/೧೦ನೇ ಭಾಗವನ್ನು ದಹಿಜಾ ರೂಪದಲ್ಲಿ ಸಲ್ಲಿಸಬೇಕಾದುದು ನಿಯಮವಾಗಿ ಮುಂದುವರೆಯಬೇಕಾಯಿತು. ಆಸಪ್ ಜಾಹನು ಕ್ರಿ.ಶ.೧೭೪೮ರಲ್ಲಿ ನಿಧನನಾದ ಮೇಲೆ ಹೈದರಾಬಾದಿನಲ್ಲಿ ನಾಸಿರ್ ಜಂಗ್

ಮತ್ತು ಅವನ ಅಕ್ಕನ ಮಗ ಮುಸಾಫರ ಜಂಗ್ ಇಬ್ಬರ ನಡುವೆ ಸಿಂಹಾಸನಕ್ಕಾಗಿ ಕಲಹ ಪ್ರಾರಂಭವಾಯಿತು. ಕೊನೆಗೆ ಬ್ರಿಟಿಷ್ ಸೈನ್ಯವು ಬೆಂಬಲ ನೀಡಿದ ಕಾರಣ ನಾಸಿರ್‌ಜಂಗನು ಕ್ರಿ.ಶ. ೧೭೫೦ರಲ್ಲಿ ಹೈದರಾಬಾದಿನ ನಿಜಾಮ ಸ್ಥಾನವನ್ನು ಹೊಂದಿದನು.

ನಿಜಾಮನು ಕ್ರಿ.ಶ.೧೭೬೬ರಲ್ಲಿ ಬ್ರಿಟಿಷರಿಗೆ ಸೈನಿಕ ನೆರವನ್ನು ಯಾವ ಸಮಯದಲ್ಲಿಯಾದರೂ ಒದಗಿಸುವುದಾಗಿ ಒಪ್ಪಂದ ಸಹಿ ಹಾಕಿದನು. ಮುಂದೆ ಹೈದರಾಬಾದ್ ನಿಜಾಮನ ಸಂಸ್ಥಾನವು ಬ್ರಿಟಿಷರ ಅಧೀನದಲ್ಲೇ ಮುಂದುವರೆಯುವಂತಾಯಿತು. ನಿಜಾಮ ಅಲಿಯು ಕ್ರಿ.ಶ.೧೮೦೩ರಲ್ಲಿ ನಿಧನನಾಗಲುಅವನ ಮಗನಾದ ಸಿಕಂದರ್ ಜಾಹ ನಿಜಾಮ ಪಟ್ಟಕ್ಕೆ ಬಂದನು. ಈತನು ೧೮೨೯ರಲ್ಲಿ ನಿಧದನನಾಗಲು ಅವನ ಮಗನಾದ ನಾಸಿರ್ ಉದ್ ದೌಲನು ನಿಜಾಮನ ಪಟ್ಟಕ್ಕೆ ಬಂದನು. ಈತನು ೧೮೫೭ರಲ್ಲಿ ನಿಧನನಾನು ನಂತರ ಅಫಜಲ್ ಉದ್‌ದೌಲನು (೧೮೫೭-೧೮೬೯) ರಾಜಕೀಯ ನೀತಿಯಲ್ಲಿ ತನ್ನ ತಂದೆಯ ಬ್ರಿಟಿಷರ ಅನುಯಾಯಿ ತತ್ವಗಳನ್ನು ಮುಂದುರೆಸಿದನು. ಕ್ರಿ.ಶ.೧೮೫೭-೫೮ರಲ್ಲಿ ಸಂಭವಿಸಿದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದೆದರು ಬ್ರಿಟಿಷರು ತಲ್ಲಣಿಸುತ್ತಿದ್ದಾಗಲೂ ನಿಜಾಮ ಮತ್ತು ಅವನ ಪ್ರಧಾನಿ ಸಾಲಾರ್ ಜಂಗ್ ಅವರಿಗೆ ಬೆಂಬಲವಾಗಿ ನಿಂತರು ನಿಜಾಮರಾಗಿ ನೇಮಕಗೊಂಡ ಮೀರ್ ಉಸ್ಮಾನ್ ಅಲಿ ಖಾನ್ ಅವರು (೧೯೧೧-೧೯೪೮) ಮೂರನೇ ಸಾಲಾರ ಜಂಗ್ ಕ್ರಿ.ಶ.೧೯೧೪ರಲ್ಲಿ ರಾಜೀನಾಮೆಯಿತ್ತಾಗ ಆಡಳಿತವನ್ನು ಸ್ವತಂತ್ರವಾಗಿ ನೋಡಿಕೊಳ್ಳುವಂತಾಯಿತು.

ಕ್ರಿ.ಶ.೧೯೪೬ರಲ್ಲಿ ಹೊಸ ಸಂವಿಧಾನ ಜಾರಿಗೆ ತಂದ ನಿಜಾಂ ಸರಕಾರ ಕಾಂಗ್ರೆಸ್ಸಿನ ಮೇಲೆ ಹೇರಿದ ಪ್ರತಿಬಂಧವನ್ನು ಏಪ್ರಿಲ್ ೧೯೪೬ರಲ್ಲಿ ಹಿಂತೆಗೆಯಿತು. ಆದರೆ ಆಗ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿಲ್ಲ. ಮಜ್ಲಸ್ ಪಕ್ಷದ ಲಾಯಕ್ ಅಲಿ ಮುಖ್ಯಮಂತ್ರಿಯಾದರು. ಆದರೆ ರಜಾಕಾರರ ಪುಂಡಾಟಿಕೆ ಹೆಚ್ಚಿತು. ಹಿಂದೂಗಳ ಕೊಲೆ, ಮನೆಗಳ ಲೂಟಿ, ಅಗ್ನಿಸ್ಪರ್ಶ ನಿತ್ಯದ ಮಾತಾಯಿತು. ಕ್ರಿ.ಶ.೧೯೪೬ರಲ್ಲಿ ಜೂನ್ ೨೪ ಭಾರತದ ಸಂವಿಧಾನ ರಚಿಸುವ ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸುವ ಪತ್ರಕ್ಕೆ ನಿಜಾಮರು ನಕಾರವಿತ್ತರು. ನಿಜಾಮರು ಭಾರತ ಒಕ್ಕೂಟ ಸೇರದೇ ಸ್ವತಂತ್ರರಾಗುವ ವಿಚಾರ ಹೊಂದಿ ಗೋವೆಯ ಪೋರ್ಚುಗೀಸರನ್ನು ಸಂಪರ್ಕಿಸಿ ಶಸ್ತ್ರಾಸ್ತ್ರ ಸಂಗ್ರಹಕ್ಕೆ ತೊಡಗಿದರು.[೨೬]

ಗಡಿಯುದ್ಧಕ್ಕೂ ಸಶಸ್ತ್ರ ತರುಣರ ಶಿಬಿರಗಳು ರಜಾಕರರನ್ನು ಪ್ರತಿಭಟಿಸಲು ಸಿದ್ಧವಾದವು. ಹೈದರಾಬಾದ್ ಗಡಿಯೊಳಗೆ ನುಗ್ಗಿ ರಜಾಕಾರರೊಡನೆ ಹೋರಾಡಿ ಅವರನ್ನು ಕೊಂದು ಶಸ್ತ್ರಾಸ್ತ್ರ ವಶಪಡಿಸಿಕೊಳ್ಳುವುದು ನಿತ್ಯದ ಮಾತಾಯಿತು. ೧೩ ತಿಂಗಳ ನಡೆದ ಈ ಹೋರಾಟದಲ್ಲಿ ಸಂಸ್ಥಾನದ ಒಳಗೂ ಗಡಿಭಾಗದಲ್ಲೂ ಸಾವಿರಾರು ಜನ ಪ್ರಾಣ ನೀಗಿದ್ದರು. ಅನೇಕ ಕುಟುಂಬಗಳೇ ನಿರ್ನಾಮವಾದವು. ಕಡೆಗೆ ಕೇಂದ್ರ ಸರಕಾರವು ಸರ್ದಾರ್ ಪಟೇಲರ ನಿರ್ಣಯದಂತೆ ೧೯೪೮ರ ಸೆಪ್ಟೆಂಬರ್ ೧೩ಕ್ಕೆ ಹೈದರಾಬಾದ್ ಮೇಲೆ ಐದು ದಿಕ್ಕುಗಳಲ್ಲಿ ಸೇನೆ ಕಳುಹಿಸಲು ಸೆಪ್ಟೆಂಬರ್ ೧೭ಕ್ಕೆ ಹೈದರಾಬಾದ ಮುಕ್ತಿಯಾಯಿತು. ಹೈದರಬಾದ್ ಭಾರತದ ಒಕ್ಕೂಟ ಸೇರಲು ನಿಜಾಮರು ಸಹಿ ಹಾಕಿದರು.[೨೭] ಹೈದರಬಾದನಲ್ಲಿ ನಿಜಾಮರ ರಾಜಪ್ರಮುಖರಾಗಿ ಜನಪ್ರಿಯ ಮಂತ್ರಿಮಂಡಲ ಬಂತು. ಆದರೆ ಸಾವಿರಾರು ಸ್ತ್ರೀ ಪುರುಷರು ಈ ಹೋರಾಟದಲ್ಲಿ ಪ್ರಾಣತೆತ್ತರು. ಲಾಯಕ್ ಅಲಿ ಮತ್ತು ಖಾಸಿಂರಜ್ವಿ ಮುಂದೆ ಪಾಕಿಸ್ತಾನಕ್ಕೆ ಪಲಾಯನ ಮಾಡಿದರು.

೩.೨ ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯಗಳು

''ಮಾನವ ಹುಟ್ಟಿನಿಂದಲೇ ಪ್ರಕೃತಿಯ ಒಂದಂಶವಾಗಿ ಬೆಳೆದು ಬಂದವನು. ಪ್ರಕೃತಿಯ ವೈವಿಧ್ಯ ವೈಚಿತ್ರ್ಯ ಸ್ವರೂಪವನ್ನು ನಿರಂತರವಾಗಿ ಅನುಭವಿಸುತ್ತ ಬಂದ ಮಾನವನಲ್ಲಿ ಅದರ ಬಗ್ಗೆ ಸಹಜವಾಗಿ ಪ್ರೀತಿ, ಗೌರವ, ಭಯ, ಆರಾಧನಾ ಭಾವಗಳು

ಹುಟ್ಟಿಕೊಂಡದ್ದು ಮಾತ್ರವಲ್ಲದೆ ಅದು ಅವನ ಪಾಲಿಗೆ ವಿಸ್ಮಯ ಲೋಕವೆನಿಸಿತು. ಸಾಂಸ್ಕೃತಿಕ ಆಲೋಚನೆಗಳ ಕೇಂದ್ರವಾಯಿತು. ನಡೆದಾಡುವ ವಿಶ್ವಕೋಶವಾಗಿ ಕಾಣಿಸಿತು. ಪರಿಣಾಮವಾಗಿ ಅವನ ಬುದ್ಧಿ ಮತ್ತು ಗ್ರಹಿಕೆಗೆ ನಿಲುಕದ್ದು ವಾಸ್ತವತೆಯಾದರೆ ಅದನ್ನು ಮೀರಿದ್ದು ಒಗಟಾಗಿ ಅನೇಕಾನೇಕ ಊಹೆ ಕಲ್ಪನೆ ನಂಬಿಕೆ ಆಚರಣೆಗಳಿಗೆ ವಸ್ತುವಾದವು''[೨೮] ಎಂಬ ಅಂಶವನ್ನು ಗಮನಿಸಿದಾಗ ಮಾನವನ ಜೀವನ ವಿಧಾನವು ಪ್ರಕೃತಿಯನ್ನು ಅವಲಂಬಿಸಿರುವಂಥದ್ದು ಎನ್ನುವುದು ವಿದಿತವಾಗುತ್ತದೆ. ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳಲು ಪ್ರಾಣಿ, ಪಕ್ಷಿ, ಗುಡ್ಡ ಬೆಟ್ಟ, ನೆಲ-ಜಲ, ಸಸ್ಯಗಳ ಸಂಪತ್ತು ಬಹುಮುಖ್ಯವಾಗಿತ್ತು. ಈ ರೀತಿಯ ಚಿಂತನೆಯನ್ನು ಪ್ರಾಚೀನ ಮಾನವ ಬಹುದಿನಗಳ ಹಿಂದೆಯೇ ಮಾಡಿರಬೇಕು. ಹೀಗಾಗಿ ಪ್ರಕೃತಿಯಲ್ಲಿ ತನಗೆ ಅವಶ್ಯವೆಂದೆನಿಸುವ ವಸ್ತುಗಳ ಸಂರಕ್ಷಣೆಗಾಗಿ ವಿಧಾನಗಳನ್ನು ಹುಟ್ಟುಹಾಕಿದನು. ಇದರ ಫಲವಾಗಿಯೇ ನಂಬಿಕೆ, ಸಂಪ್ರದಾಯ, ಆಚರಣೆ, ಹಬ್ಬ, ಉತ್ಸವಗಳು ಅಸ್ತಿತ್ವ ಪಡೆದುಕೊಂಡವು. ಆ ಮೂಲಕ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಕೃತಿಯ ನೆರವನ್ನು ಪಡೆದುಕೊಂಡನು.

ಜನಪದರು ಬಹುಮುಖ್ಯವಾಗಿ ನಂಬಿಕೆಯ ಮೂಲಕವೇ ಜೀವನ ಸಾಗಿಸುವವರು. ಈ ನಂಬಿಕೆಗಳು ಅವರ ದಿನನಿತ್ಯದ ಬದುಕಿನೊಂದಿಗೆ ಸಂಬಂಧ ಹೊಂದಿರುವ ಪ್ರಾಕೃತಿಕ ಪರಿಸರದ ಬಗೆಗೂ ಹುಟ್ಟು ಪಡೆದಿವೆ. ಪ್ರಕೃತಿ ಕುರಿತ ಅವರ ನಿಲುವುಗಳಲ್ಲಿ ಪ್ರಕೃತಿಯೊಂದಿಗೆ ಆತನು ಯಾವ ರೀತಿಯ ಸಂಬಂಧವನ್ನು ಹೊಂದಿದ್ದಾನೆ ಮತ್ತು ಅವುಗಳ ಸಂರಕ್ಷಣೆಯ ದೃಷ್ಟಿಯಿಂದ ಈ ಆತನು ಅನುಸರಿಸಿದ ಮಾರ್ಗೋಪಾಯಗಳನ್ನು ತಿಳಿದುಕೊಳ್ಳಬಹುದು. ಪ್ರಕೃತಿಯ ಬಗೆಗಿನ ತನ್ನ ನಿಲುವುಗಳನ್ನು ಹಾಗೂ ಸಂಬಂಧವನ್ನು ಕುರಿತು ಕಥೆ, ಗೀತೆ, ಗಾದೆ, ಒಗಟು, ಪುರಾಣ, ಐತಿಹ್ಯಗಳನ್ನು ಸೃಷ್ಟಿಸಿದ್ದಾನೆ. ಆ ಮೂಲಕ ಪರಂಪರಾಗತವಾಗಿ ಪ್ರಕೃತಿಯನ್ನು ಸಂರಕ್ಷಿಸಿಕೊಂಡು ಬಂದಿದ್ದಾನೆ. ಇವುಗಳಲ್ಲಿ ಐತಿಹ್ಯವು ಮಾನವನ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಸುತ್ತಮುತ್ತಲಿನ ಪ್ರಾಕೃತಿಕ ಚರಿತ್ರೆಯನ್ನು ದಾಖಲೀಕರಿಸಿಕೊಳ್ಳುತ್ತಾ ಬರುತ್ತಿರುವ ಜೀವಂತ ಪ್ರಕ್ರಿಯೆಯಾಗಿರುವುದನ್ನು ಕಾಣುತ್ತೇವೆ.

ಮಾನವ ತನ್ನ ದಿನನಿತ್ಯದ ಬದುಕಿನಲ್ಲಿ ಪ್ರಕೃತಿಯಲ್ಲಿನ ವಿಸ್ಮಯ, ವೈಚಿತ್ರ್ಯಕ್ಕೆ ಪೌರಾಣಿಕ, ಚಾರಿತ್ರಿಕ ಹಿನ್ನೆಲೆಯನ್ನು ಆರೋಪಿಸಿ ಇತರರು ನಂಬುವಂತೆ ಐತಿಹ್ಯಗಳು ನಿರೂಪಿಸುತ್ತವೆ. ಇವುಗಳ ಹಿಂದೆ ನಿರ್ದಿಷ್ಟ ಉದ್ದೇಶವಿರುತ್ತದೆ. ಉದ್ದೇಶ ಸಾಧನೆಗಾಗಿ ವರ್ಣಿತವಾಗುವ ಪ್ರಾಕೃತಿಕ ಪರಿಸರ ನಮ್ಮ ಕಣ್ಣ ಮುಂದಿದ್ದರು ಕೂಡ ಐತಿಹ್ಯದಲ್ಲಿ ಉಲ್ಲೇಖಿಸಿದ ಘಟನೆ ಇಲ್ಲಿ ಘಟಿಸಿದೆ ಎನ್ನುವ ತೀರ್ಮಾನಕ್ಕೆ ಬರುವಂತಿಲ್ಲ. ಏಕೆಂದರೆ ಇಲ್ಲಿ ಎರಡು ಸಾಧ್ಯತೆಗಳನ್ನು ಗುರುತಿಸಬಹುದು. ಒಂದು ಈ ಮೊದಲಿರುವ ಗುಡ್ಡ, ಬೆಟ್ಟ, ಪ್ರಾಣಿ-ಪಕ್ಷಿ, ಸಸ್ಯ, ಜಲ ಮುಂತಾದ ಭೌಗೋಳಿಕ ಪರಿಸರಕ್ಕೆ ಸ್ಥಳೀಯವಾಗಿ ನಡೆದಿರುವ ವಾಸ್ತವ ಘಟನೆಯನ್ನು ಆರೋಪಿಸಿ ಹೇಳುವುದು. ಇನ್ನೊಂದು ಸ್ಥಳೀಯವಾದ ಭೌಗೋಳಿಕ ಪರಿಸರಕ್ಕೆ ಪ್ರಾಮುಖ್ಯತೆಯನ್ನು ತಂದುಕೊಳ್ಳುವುದಕ್ಕಾಗಿ ಅಥವಾ ಸಂರಕ್ಷಿಸಿಕೊಳ್ಳುವುದಕ್ಕಾಗಿ ಪೌರಾಣಿಕ ಅಥವಾ ಕಾಲ್ಪನಿಕ ಅಂಶಗಳಿಂದ ಹುಟ್ಟುಪಡೆದಿರುವಂಥದ್ದು. ಹೀಗಾಗಿ ಐತಿಹ್ಯದಲ್ಲಿ ಉಲ್ಲೇಖವಾದಂತೆ ಇದು ಪೌರಾಣಿಕ ಘಟನೆ ನಡೆದ ಸ್ಥಳವೆಂಬ ತೀರ್ಮಾನಕ್ಕೆ ಬರಲಾಗುವುದಿಲ್ಲ. ಆದರೆ ಸ್ಥಳೀಯ ಘಟನೆಯೊಂದನ್ನು ಆರೋಪಿಸಿಕೊಳ್ಳುವ ಪ್ರಾಕೃತಿಕ ಪರಿಸರ ವಾಸ್ತವಕ್ಕೆ ಹತ್ತಿರವಾಗಿದ್ದು, ಘಟನೆಗೆ ಸಾಕ್ಷಿ ಎನ್ನುವಂತೆ ಬಿಂಬಿತವಾಗುತ್ತವೆ. ಇನ್ನೂ ಕೆಲವು ಇಂಥ ಐತಿಹ್ಯಗಳು ವಾಸ್ತವವನ್ನು ಪ್ರತಿನಿಧಿಸುತ್ತವೆ. ಪ್ರಾಕೃತಿಕ ನೆಲೆಗಟ್ಟನ್ನು ಹೊಂದಿರುವ ಸ್ಥಳನಾಮ ಐತಿಹ್ಯಗಳು ಇದಕ್ಕೆ ಉತ್ತಮ ನಿದರ್ಶನವಾಗಿವೆ.

ಪ್ರಕೃತಿಯ ನಾಶದಲ್ಲಿಯೇ ತಮ್ಮ ವಿನಾಶವಿದೆ ಎನ್ನುವುದನ್ನು ಜನಪದರು ಅರಿತುಕೊಂಡಿದ್ದರು. ಈ ಕಾರಣದಿಂದಾಗಿ ಪ್ರಕೃತಿಯ ಸಂರಕ್ಷಣೆಯನ್ನು ಮಾಡಿಕೊಳ್ಳುತ್ತಲೇ ಬಂದಿದ್ದಾರೆ. ಪ್ರಕೃತಿಯ ಸಂರಕ್ಷಣೆಗಾಗಿ ಜನಪದರು ಹಲವು ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದರು.[೨೯] ಈ ಮಾರ್ಗೋಪಾಯಗಳು ಯಾವುವು ಎನ್ನುವುದನ್ನು ಐತಿಹ್ಯಗಳಿಂದ ತಿಳಿದುಕೊಳ್ಳುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಅಲ್ಲದೆ ನಿಸರ್ಗದತ್ತ ಜಲ, ಸಸ್ಯ ಸಂಪತ್ತಿನಲ್ಲಿರುವ ಔಷಧೀಯ ಗುಣ ಮತ್ತು ಪ್ರಾಣಿ ಪಕ್ಷಿಗಳಲ್ಲಿರುವ ಗ್ರಹಿಕೆಯ ಸಾಮರ್ಥ್ಯವನ್ನು ಹಾಗೂ ಗುಡ್ಡ, ಬೆಟ್ಟಗಳು ಪ್ರತಿನಿಧಿಸುವ ಮಾನವನ ಸಾಂಸ್ಕೃತಿಕ ಬದುಕನ್ನು ಗುರುತಿಸುವ ಪ್ರಯತ್ನ ಕೂಡ ಇಲ್ಲಿ ಮಾಡಲಾಗಿದೆ.

ಪ್ರಾಕೃತಿಕವಾಗಿ ಸಮೃದ್ಧಿಯನ್ನು ಹೊಂದಿರುವ ಗುಲಬರ್ಗಾ ಜಿಲ್ಲೆಯ ಸುಣ್ಣದ ಕಲ್ಲಿನ ನಿಕ್ಷೇಪಗಳಿಂದಾಗಿ ಇಲ್ಲಿಯ ನಿಸರ್ಗಸಂಪತ್ತು ವೈವಿಧ್ಯತೆಯನ್ನು ಪಡೆದುಕೊಂಡಿದೆ. ಕೃಷಿಗೆ ಯೋಗ್ಯವಾದ ಮತ್ತು ಫಲವತ್ತಾದ ಕಪ್ಪು ಮಣ್ಣಿನ ಭೂಮಿ ಇಲ್ಲಿದೆ. ಜಿಲ್ಲೆಯಲ್ಲಿ ಹರಿಯುವ ಭೀಮಾ ಮತ್ತು ಮುಲ್ಲಾಮಾರಿ ನದಿಗಳು ಜನರ ಬದುಕಿಗೆ ವರದಾನವಾಗಿದೆ. ಕೆಲವೆಡೆ ಅಂತರ್‌ಜಲವು ಮೇಲ್ಮಟ್ಟದಲ್ಲಿದ್ದು, ಬಾವಿ, ಕೊಳ, ಕೆರೆಗಳಿಂದ ಕೃಷಿ ಮತ್ತು ತೋಟಗಾರಿಕೆ ಕಾರ್ಯ ಕೈಗೊಂಡಿದ್ದಾರೆ. ಗುಡ್ಡ, ಬೆಟ್ಟ, ದಿಬ್ಬ ಹಾಗೂ ಇಲ್ಲಿರುವ ಸಸ್ಯ ಸಂಪತ್ತು ನಿಸರ್ಗದ ಸ್ವರೂಪವನ್ನು ಹೇಳುತ್ತವೆ.

೩.೩ ನೆಲ-ಜಲ ಸಂಬಂಧಿ ಐತಿಹ್ಯಗಳು:-

ಜೀವಿಗಳ ವಿಕಾಸಕ್ಕೆ ಪೂರಕವಾದ ವಾತಾವರಣ ಈ ಭೂಮಿಯ ಮೇಲಿದೆ. ಅಂತೆಯೇ ಇಲ್ಲಿ ಜೀವಸಂಕುಲ ಹುಟ್ಟು ಪಡೆದುಕೊಂಡಿದೆ. ಭೂಮಿಯು ಇಲ್ಲದೆ ಬೇರೆಡೆ ಬದುಕುಳಿಯಲು ಸಾಧ್ಯವಿಲ್ಲ. ಮಾನವನು ತನಗೆ ಬೇಕಾದ ಸಕಲ ಸೌಕರ್ಯಗಳನ್ನು ಈ ಭೂಮಿಯಿಂದಲೇ ಪಡೆದುಕೊಳ್ಳುತ್ತಾನೆ. ಹೀಗಾಗಿ ಭೂಮಿಯು ತಾಯಿ ಸ್ಥಾನವನ್ನು ತುಂಬಿಕೊಡುತ್ತದೆ. ಜಲವೂ ಕೂಡ ಭೂಮಿಯಷ್ಟೇ ಮಹತ್ವದ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ಎಲ್ಲಾ ಜೀವರಾಶಿಗಳಿಗೂ ನೀರು ಅತ್ಯಗತ್ಯವೆಂದೇ ತೋರುತ್ತದೆ. ಹೀಗೆ ನೆಲ-ಜಲಗಳು ಮಾನವ ಮತ್ತು ಜೀವಸಂಕುಲಗಳ ಅಸ್ತಿತ್ವಕ್ಕಾಗಿ ಅತ್ಯಮುಲ್ಯವಾದ ಮತ್ತು ಮೂಲಭೂತವಾದ ಆಧಾರ ಸ್ತಂಭವಾಗಿ, ಜೀವಸೆಲೆಯಾಗಿ ನಿಲ್ಲುತ್ತದೆ. ಮಾನವ ಬದುಕಿನಲ್ಲಿ ಇಷ್ಟೊಂದು ಮಹತ್ವದ ಪಾತ್ರವಹಿಸಿದ ಈ ನೆಲ-ಜಲಗಳು ಅವನು ಕಟ್ಟಿಕೊಡುವ ಅನೇಕ ಐತಿಹ್ಯಗಳಲ್ಲೂ ಈ ವಿಷಯ ತುಂಬಾ ಹಾಸು ಹೊಕ್ಕಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ.

ಜನಪದರು ನೆಲ-ಜಲಕ್ಕೆ ದೈವತ್ವದ ಸ್ಥಾನವನ್ನು ಕೊಟ್ಟು ಆರಾಧಿಸುತ್ತಾ ಬಂದಿದ್ದಾರೆ. ಮಾನವನ ಬದುಕಿಗೆ ಸರ್ವಸ್ವವೇ ಆಗಿರುವ ನೆಲ (ಭೂಮಿ)ವನ್ನು ಭೂದೇವಿ, ಭೂತಾಯಿ ಎಂದು, ಜಲವನ್ನು ಗಂಗೆ, ಗಂಗಾಮಾತೆ, ತೀರ್ಥ, ಹೊಂಡ ಎಂಬ ಪಾವಿತ್ರ್ಯದ ಹೆಸರಿನಿಂದ ಕರೆಯಲಾಗುತ್ತದೆ. ನಿಸರ್ಗದ ಕ್ರಿಯೆಯೊಂದಿಗೆ ಕ್ರಿಯಾಶೀಲನಾಗಿ ಬದುಕುವ ಮಾನವನ ಹಲವಾರು ಸಮಸ್ಯೆಗಳನ್ನು ಭೂತಾಯಿ ಪರಿಸಹರಿಸುತ್ತಾಳೆಂಬುದು ಭೂಮಿಯ ಬಗೆಗಿರುವ ಐತಿಹ್ಯದಿಂದ ತಿಳಿಯುತ್ತದೆ. ''ಮೊದಲು ಆಕಾಶವು ಭೂಮಿಗೆ ಬಹಳ ಹತ್ತಿರದಲ್ಲಿದ್ದಿತ್ತು. ಅವು ಎಷ್ಟು ಹತ್ತಿರದಲ್ಲಿದ್ದವೆಂದರೆ ಎತ್ತರವಾದುದು ಅದನ್ನು ಮುಟ್ಟಬಹುದಿತ್ತು. ಮತ್ತು ಏನನ್ನಾದರೂ ಕುಟ್ಟುವಾಗ ಅದು ಆಕಾಶಕ್ಕೆ ಬಡಿಯುತ್ತಿತ್ತು. ಇದಕ್ಕೆ ಬೇಸತ್ತು ಜನರು ಆಕಾಶವನ್ನು ಮೇಲೆ ಹೋಗಲು ಕೇಳಿಕೊಂಡರು. ಆದರೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ತಮ್ಮ ಆಶ್ರಯದಾತೆಯಾದ ಭೂಮಿಯನ್ನೇ ಸ್ವಲ್ಪ ಹಿಂದಕ್ಕೆ ಸರಿಯಲು ಕೇಳಿಕೊಂಡರು. ಆಗ ಭೂಮಿಯು ಎಷ್ಟು ದೂರ ಸರಿಯಬೇಕು ಎಂದು ಜನರನ್ನು ಕೇಳಿದಾಗ ಅವರಲ್ಲಿ ಒಂದು ಅಭಿಪ್ರಾಯವು

ಬರಲಿಲ್ಲ. ಆಗ ಭೂಮಿಯು ನಾನು ಹಿಂದಕ್ಕೆ ಸರಿಯುತ್ತಾ ಹೋಗುತ್ತೇನೆ ನಿಮಗೆ ಸಾಕೆನಿಸಿದಾಗ ನಿಲ್ಲು ಎಂದು ಹೇಳಿರೆಂದು ಜನರಿಗೆ ತಿಳಿಸಿ ಸರಿಯಲು ಪ್ರಾರಂಭಿಸಿತು. ಜನರಲ್ಲಿ ಏಕಾಭಿಪ್ರಾಯವಿಲ್ಲದ್ದರಿಂದ ಬಹಳ ದೂರ ಸರಿಯಿತು.''[೩೦]ಇದು ಪ್ರಾರಂಭದಿಂದಲೂ ಮಾನವನಿಗೆ ಭೂತಾಯಿ ಸಹಕರಿಸುತ್ತಲೆ ಬಂದಿದ್ದಳೆನ್ನುವುದು ವಿದಿತವಾಗುತ್ತದೆ. ಈ ಕಾರಣದಿಂದಾಗಿಯೇ ಭೂಮಿಗೆ ತಾಯಿಯಂಥ ಪೂಜ್ಯನೀಯ ಸ್ಥಾನ ನೀಡಲಾಗಿದೆ. ಆಕಾಶ ಮತ್ತು ಭೂಮಿಯ ಈ ಅಂತರಕ್ಕೆ ಕಾರಣವನ್ನು ಜನಪದರು ಹೀಗೆ ಗ್ರಹಿಸಿದ್ದಾರೆ.

ನೆಲ-ಜಲಕ್ಕೆ ಸಂಬಂಧಿಸಿದ ಕೆಲವು ನಂಬಿಕೆ, ಸಂಪ್ರದಾಯ, ಆಚರಣೆಗಳು ಮೇಲ್ನೋಟಕ್ಕೆ ಧಾರ್ಮಿಕವೆಂದೆನಿಸುತ್ತವೆ. ಆದರೆ ಮೂಲತಃ ಇವು ಪ್ರಕೃತಿಯಲ್ಲಿ ಉಂಟಾಗುವ ಅಸಮತೋಲನವನ್ನು ತಡೆಯುವ ಹಿನ್ನೆಲೆಯನ್ನು ಹೊಂದಿರುತ್ತವೆ. ನೆಲ ಜಲಕ್ಕೂ ಕೂಡ ತನ್ನಂತೆ ಬಯಕೆಗಳಿರುತ್ತವೆಂದು ಮಾನವ ನಂಬಿದ್ದಾನೆ. ಈ ಕಾರಣದಿಂದಾಗಿ ಅದಕ್ಕೆ ಸಂಬಂಧಿಸಿದ ವಿಧಿ ನಿಷೇಧಗಳು ರೂಢಿಯಲ್ಲಿರುವುದನ್ನು ಕಾಣುತ್ತೇವೆ. ಈ ಬಗೆಗಿನ ಐತಿಹ್ಯಗಳಿಂದ ಇವುಗಳನ್ನು ತಿಳಿದುಕೊಳ್ಳಬಹುದು.

ಹೊನಗುಂಟ ಜಲಪಾತದ ಗವಿಸಿದ್ಧಲಿಂಗೇಶ್ವರ:-

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಹೊನಗುಂಟಿ ಗ್ರಾಮದಲ್ಲಿ ನಿಸರ್ಗ ಸೌಂದರ್ಯದ ಮಡಿಲಲ್ಲಿ ಗವಿಸಿದ್ಧಲಿಂಗೇಶ್ವರ ತಾಣವಿದೆ. ಈ ದೇವಾಲಯವು ಎರಡು ಬೃಹತ್ ಬಂಡೆಗಳಿಂದ ಕೂಡಿದ ಹತ್ತು ಅಡಿ ಉದ್ದ ಹಾಗೂ ನಾಲ್ಕು ಅಡಿ ಅಗಲ ಎತ್ತರವಿರುವ ಗವಿಸಿದ್ದೇಶ್ವರದೇವಾಲಯವಿದೆ. ಮುಖ್ಯದ್ವಾರದ ಮೇಲಿಂದ ನೀರು ಕೆಳಗಡೆ ಹರಿಯುತ್ತದೆ. ಈ ನೀರಿನಲ್ಲಿ ಹಾಯ್ದು ಗವಿಯೊಳಗೆ ಸಾಗಬೇಕು. ಅಬ್ಬಾ ಎಂಥ ಅದ್ಭುತವಾದ ನೋಟ, ಅಲ್ಲಿ ಹೋಗುವುದರ ಅನುಭವವೂ ಅಪೂರ್ವವಾದದ್ದು.

ಗವಿಯೊಳಗೆ ಸಿದ್ಧಲಿಂಗ ದರ್ಶನಕ್ಕೆ ಹೋಗಬೇಕಾದರೆ, ಜಲಪಾತದ ನೀರಿನ ಸ್ನಾನ ನೈಸರ್ಗಿಕವಾಗಿ ಆಗುತ್ತದೆ. ಇಂಥಹ ಮಹತ್ವದ ನಿಸರ್ಗಮಯವಾಗಿ ಕಂಗೊಳಿಸುವ ಅದ್ಭುತ ದೃಶ್ಯವಾಗಿದೆ. ಈ ಪ್ರದೇಶದಲ್ಲಿ ಮಹಾಯೋಗಿಗಳು ಮಾನವ ಧರ್ಮದ ಕಲ್ಯಾಣಕ್ಕಾಗಿ ಅನೇಕ ಸತ್ಪುರೂಷರು ಜನ್ಮತಾಳಿ ಹೋಗಿದ್ದಾರೆ. ಅಂಥವರಲೊಬ್ಬರಾದ ಗವಿಸಿದ್ಧಲಿಂಗೇಶ್ವರ ಮಹಾಸ್ವಾಮಿಗಳೊಬ್ಬರು. ಇವರು ಪವಾಡಮರುಷರಾಗಿದ್ದವರು. ಅನೇಕ ಕಾರ್ಯಗಳು ಕೈಗೊಂಡು ಸುತ್ತ-ಮುತ್ತಲು ಭಾಗಕ್ಕೆ, ಜನರ ಪ್ರೀತಿಗೆ ಪಾತ್ರರಾದವರು. ಹೊನಗುಂಟ ಗ್ರಾಮದ ಭೀಮಾ-ಕಾಗಿಣಾ ನದಿಗಳ ಸಂಗಮದ ಭೂಗರ್ಭದಿಂದ ಇವರು ಅವತರಿಸಿದರು ಎಂದು ಹೇಳಲಾಗುತ್ತದೆ.

ಗವಿಸಿದ್ಧಲಿಂಗೇಶ್ವರ ಪ್ರಮುಖ ಐತಿಹಾಸಿಕ ಸ್ಥಳಗಳಾದ ಕಾಶಿ, ಶ್ರೀಶೈಲ ಮಣ್ಯ ಕ್ಷೇತ್ರಗಳಲ್ಲಿ ಸಂಚರಿಸಿ, ಮಹಾತಪಸ್ಸು ಕೈಗೊಂಡು ಅನೇಕ ಪವಾಡಗಳನ್ನು ತೋರಿಸಿ, ಬಡವರ ಕಷ್ಟ-ಸುಖಗಳನ್ನು ಬಯಲು ಮಾಡಿ ಅವರ ಬದುಕಿಗೆ ನಂದಾದೀಪವಾಗುತ್ತಿದ್ದರು. ಇವರು ಯಾದಗೀರ ತಾಲೂಕಿನ ಕೊಟ್ಟರೆ (ಗಾಜರ ಕೋಟ) ಗ್ರಾಮದಲ್ಲಿ ಬಂದು ಒಬ್ಬ ಶ್ರೀಮಂತರ ಮನೆಯೊಳಗೆ ದುಡಿಯುತ್ತಾ ಬದುಕತೊಡಗಿದರಂತೆ. ಸಿದ್ಧಲಿಂಗೇಶ ದಿನನಿತ್ಯ ಚಿಂತನದಲ್ಲಿ ಕಾಡಿನಲ್ಲಿರುವ ಜಲಪಾತದ ಹತ್ತಿರ ಈ ದನಗಳನ್ನು ಕಾಯುತ್ತಾ ಬರುತ್ತಿದ್ದನು. ಹಾಗೆ ಧಾರಕಾರವಾಗಿ ಹರಿಯುವ ಜಲಪಾತದಲ್ಲಿರುವ ಗವಿಯಲ್ಲಿ ಕುಳಿತು ತಪಸ್ಸು ಈ ಮಾಡುತ್ತಿದ್ದರು. ಒಂದು ದಿವಸ ಶ್ರೀಶೈಲ ದರ್ಶನಕ್ಕಾಗಿ ಶಿವರಾತ್ರಿಯ ಹಬ್ಬದಂದು ಸಿದ್ಧಲಿಂಗೇಶ್ವರನ ಮನೆ ಯಜಮಾನರೆಲ್ಲರು ತಯಾರಾದರು. ಮನೆ ಹಾಗೂ ದನಕರುಗಳನ್ನು ನೋಡಿಕೊಳ್ಳಲು ಮನೆಯ ಕಡೆ ಯಾರಾದರೂ ಇರಬೇಕಾಗುತ್ತದೆ ಎಂದಾಗ

ಈ ಆಗ ಸ್ವಇಚ್ಚೆಯಿಂದ ಸ್ವಾಮಿಗಳು, ಯಜಮಾನರೆ ನೀವೆಲ್ಲರೂ ಶ್ರೀಶೈಲಕ್ಕೆ ಹೋಗಿ ಬನ್ನಿ ನಾನು ಇಲ್ಲೇ ಇದ್ದು ಮನೆಯನ್ನು ನೋಡಿಕೊಂಡಿರುತ್ತೇನೆ ಎಂದು ಹೇಳಿದರಂತೆ.

ಆದರೆ, ಯಜಮಾನ ಮತ್ತು ಮನೆಯವರೆಲ್ಲರೂ ಸ್ವಾಮಿಗಳನ್ನು ಬಿಟ್ಟು ಹೋಗುವ ಮನಸ್ಸಿರಲಿಲ್ಲ. ಯಜಮಾನರೇ ನಾನು ಶಿವರಾತ್ರಿಯ ದಿನದಂದು ಶ್ರೀಶೈಲಕ್ಕೆ ಬಂದು ತಲುಪುತ್ತೇನೆ. ತಾವೆಲ್ಲ ಪ್ರಯಾಣ ಬೆಳೆಸಿ ಎಂದರಂತೆ. ಶಿವರಾತ್ರಿ ದಿನದಂದು ದರ್ಶನಕ್ಕೆಂದು ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಪೋಳಿಯ ಸಾಲಿನಲ್ಲಿ ಅದ್ಭುತ ಶಕ್ತಿಯನ್ನು ಕಂಡು ಬೆರಗಾಗಿ ಆತನನ್ನು ಸ್ಮರಿಸಿದರು. ಪೂಜಾರಿ ಕಾಯಿ ಅರ್ಪಿಸಿ, ತೀರ್ಥ ನೀಡುವಾಗ ಸಾಲಿನ ಮುಂಚೂಣಿಯಲ್ಲಿ ಪ್ರತ್ಯಕ್ಷವಾಗಿ ಮಹಾಲಿಂಗೇಶ್ವರ ದರ್ಶನಗಗೈದರು. ಅಲ್ಲಿ ಒಂದು ತಾಮ್ರದ ತಂಬಿಗೆಯನ್ನು ಕಾಣಿಕೆಯಾಗಿ ಇಟ್ಟು ಮಾಯವಾದರೆಂದು ಹೇಳಲಾಗುತ್ತದೆ. ಹೀಗೆ ಗವಿಸಿದ್ಧಲಿಂಗೇಶ್ವರ ಮಹಾತ್ಮೆಯನ್ನು ಕಂಡು ದೈವಿಪುರಷನೆಂದು ತಿಳಿದು ಅವರನ್ನು ಭಕ್ತಿಯಿಂದ ಕಾಣತೊಡಗಿದರು. ಗಾಜರಕೋಟ ಗ್ರಾಮದಲ್ಲಿ ಭಕ್ತರ ಸಂಖ್ಯೆ ದಿನದಿನ ಹೆಚ್ಚಾಗತೊಡಗಿತು. ಮತ್ತೆ ಆ ಸ್ಥಳದಿಂದ ಯಾದಗಿರಿಗೆ ಪ್ರಯಾಣಿಸಿ, ಭಕ್ತರ ತೊಂದರೆಗಳನ್ನು ನಿವಾರಿಸುತ್ತಾ ಮಠವೊಂದರಲ್ಲಿ ವಾಸಿಸತೊಡಗಿದರು. ಕಾಲಕ್ರಮೇಣ ಯಾದಗಿರಿಯ ಗವಿಮಠದಲ್ಲಿ ಸಮಾಧಿಯಾಗಿ ಮತ್ತೆ ಗಾಜರಕೋಟ ಗ್ರಾಮದಲ್ಲಿ ಪ್ರತ್ಯಕ್ಷ ದರ್ಶನವಿತ್ತು.[೩೧] ಚಿಂಚನಪಲ್ಲಿ ಕಾಡಿನ ಪ್ರಕೃತಿ ನಿರ್ಮಿತ ಗವಿಯಲ್ಲಿ ಬಂದು ನೆಲೆಸಿದರು ತಮ್ಮ ಬದುಕು ಶಾಂತಿ ಪಡೆದು ಕೊಂಡಿತು ಎಂಬುದು ಅಲ್ಲಿ ಸುತ್ತಮುತ್ತಲ ಜನರಿಂದ ಈ ಸ್ಥಳಿಯ ಐತಿಹ್ಯದಿಂದ ತಿಳಿದು ಬರುತ್ತದೆ. ಆ ಗವಿಯ ಒಳಗಡೆ ಪ್ರವೇಶ ಮಾಡುವವರಿಗೆ ಸ್ನಾನದೊಂದಿಗೆ ಒಳಪ್ರವೇಶವಾಗುತ್ತದೆ. ಅಂಥಹ ವಿಶಿಷ್ಟವಾದ ಸ್ಥಳವಾಗಿದೆ. ಗವಿಯಲ್ಲಿರುವ ಸಿದ್ಧಲಿಂಗೇಶ್ವರ ಸ್ವಾಮಿಗಳ ದೇವಾಲಯವಾಗಿ, ಗವಿಸಿದ್ಧಲಿಂಗೇಶ್ವರ ದೇವಾಲಯ ಎಂದು ಕರೆಯಲ್ಪಡುತ್ತದೆ. ಇದೊಂದು ಅಪರೂಪದ ಬೆಟ್ಟದಿಂದ ಬೋರ್ಗರೆಯುವ ಜನಪಾತ ಈ ಗವಿಯ ಒಳಗಡೆಯಿಂದ ನೀರು ಹರಿದು ಬರುತ್ತದೆ.

ಕಾಗಿಣಾ ನದಿಯ ಉಗಮದ ಕುರಿತ ಐತಿಹ್ಯ:-

ಭೀಮಾ ನದಿಯ ಉಪನದಿಯಾಗಿರುವ ಕಾಗಿಣಾ ನದಿಯು ಆಂಧ್ರ ಪ್ರದೇಶದ ಕೋಹಿರ್ ಎಂಬಲ್ಲಿ ಹುಟ್ಟುತ್ತದೆ. ಇದು ಆಂಧ್ರ ಪ್ರದೇಶದಲ್ಲಿರುವ ತಾಂಡೂರು ಬಳಿ ಹರಿಯುತ್ತಿದ್ದರಿಂದ ಇದಕ್ಕೆ ತಾಂಡೂರು ನದಿಯೆಂಬ ಹೆಸರು ಇದ್ದುದ್ದು ತಿಳಿದು ಬರುತ್ತದೆ. ಸೇಡಂ ತಾಲೂಕಿನ ಈಶಾನ್ಯದ ಅಂಚಿನಲ್ಲಿ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸಿ ಹೈದರಾಬಾದ್ ವಾಡಿ ರೈಲುಮಾರ್ಗಕ್ಕೆ ಸಮಾನಾಂತರವಾಗಿ ಪಶ್ಚಿಮಾಭಿಮುಖವಾಗಿ ಹರಿದು ಚಿತ್ತಾಪುರ ತಾಲೂಕನ್ನು ಪ್ರವೇಶಿಸಿ. ಅಲ್ಲಿಂದ ನೈಋತ್ಯಾಭಿಮುಖವಾಗಿ ಹರಿದು ಹುನಗುಂಟ ಗ್ರಾಮದ ಹತ್ತಿರ ಭೀಮಾ ನದಿಯನ್ನು ಸೇರುತ್ತದೆ. ಈ ಜಿಲ್ಲೆಯಲ್ಲಿ ನದಿಯ ಹರಿವಿನ ಒಟ್ಟು ಉದ್ದ ೬೪ ಕಿ.ಮೀ. ಮುಲ್ಲಾಮಾರಿ, ಬೆಣ್ಣೆತೊರೆ ಮತ್ತು ಕಮಲಾವತಿ ಈ ನದಿಗೆ ಸೇರುವ ಮುಖ್ಯ ಉಪನದಿಗಳು. ಸೇಡಂ ಮತ್ತು ಚಿತ್ತಾಪುರ ಈ ನದಿಯ ಬಳಿ ಇರುವ ಮುಖ್ಯ ಊರುಗಳು. ಮಳಖೇಡ ನದಿದಂಡೆಯ ಪುಣ್ಯಕ್ಷೇತ್ರ. ಗುಲಬರ್ಗಾ, ಶಹಾಬಾದ್, ವಾಡಿ ಮಾರ್ಗದಲ್ಲಿ ಶಹಾಬಾದ ಸಮೀಪದಲ್ಲಿ ಕಾಗಿಣಾ ನದಿಗೆ ಸೇತುವೆ ಕಟ್ಟಲಾಗಿದೆ. ಈ ನದಿಗೆ ಯಡಹಳ್ಳಿ ಬಳಿ ಕಟ್ಟೆಯೊಂದನ್ನು ಕಟ್ಟಿ ಸೇಡಂ ಮತ್ತು ಚಿತ್ತಾಪುರ ತಾಲೂಕುಗಳಿಗೆ ನೀರೊದಗಿಸುವ ಯೋಜನೆ ಇದೆ.[೩೨]

ಕಾಗಿಣಾ ನದಿಗೆ ಸಂಬಂಧಿಸಿದ ಐತಿಹ್ಯ:-

ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಐತಿಹಾಸಿಕ ಸ್ಥಳ ಮಳಖೇಡ ಮಾನ್ಯಖೇಟವೆಂದು ಪ್ರಸಿದ್ಧ ಪಡೆದಿದೆ. ಶ್ರೀ ವಿಜಯನು "ಕವಿರಾಜಮಾರ್ಗ" ಎಂಬ ಕೃತಿಯನ್ನುಬರೆದು, ಈ ಭಾಗಕ್ಕೆ ಮೊದಲು ಸಾಹಿತ್ಯಿಕ ವಾತಾವರಣವನ್ನು ಕಲ್ಪಿಸಿಕೊಟ್ಟನು. ಇಂಥಹ ಪ್ರದೇಶದಲ್ಲಿ ಕಾಗಿಣಾ ನದಿಯ ಪಾತ್ರ ಆ ಭಾಗದ ಸುತ್ತಮುತ್ತಲೂ ಜನರಿಗೆ ಉಪಯುಕ್ತವಾಗಿದೆ. ಈ ನದಿಯ ಉಗಮದ ಕುರಿತು ಒಂದು ಅದ್ಭುತ ಕಥೆ ಈ ರೀತಿಯಾಗಿದೆ. ಈ ಕಾಗಿಣಾ ನದಿಯು ಅಗಸ್ತ್ಯ ಮುನಿಗಳ ಕಮಂಡಲಿನಿಂದ ಹುಟ್ಟಿಬಂದಿತೆಂದು ಆ ಸಮೀಪದ ಗ್ರಾಮದ ಜನರು ಹೇಳುವಂಥದ್ದು.

ಲೋಕದ ಕಲ್ಯಾಣಕ್ಕಾಗಿ ಅಗಸ್ತ್ಯ ಮುನಿಗಳು ತೀರ್ಥ ಕ್ಷೇತ್ರಗಳನ್ನೆಲ್ಲ ಸುತ್ತಿಕೊಂಡು ಎಲ್ಲ ಪುಣ್ಯನದಿಗಳ ನೀರನ್ನೂ ತಮ್ಮ ಕಮಂಡಲದಲ್ಲಿ ತೆಗೆದುಕೊಳ್ಳುತ್ತ ಸಾಗಿದರು. ಕೊನೆಗೆ ಆಂಧ್ರ ಪ್ರದೇಶದಲ್ಲಿರುವ ಅನಂತ ಬೆಟ್ಟದ ಸಮೀಪದ ಕೋಹಿರ ಬಳಿ ಎಲ್ಲಾ ನದಿತೀರ್ಥಗಳಿಂದ ತುಂಬಿಕೊಂಡಿದ್ದ ಕಮಂಡಲವನ್ನು ಆ ಸ್ಥಳದ ನೆಲದ ಮೇಲೆ ಇಟ್ಟು, ತಮ್ಮ ಕಾಯಕದಲ್ಲಿ ತೊಡಗಿಕೊಂಡರು. ಆ ಸಮಯದಲ್ಲಿ ಆಕಾಶದಿಂದ ಒಂದು ಕಾಗೆ ಹಾರಿ ಬಂದು ಕಮಂಡಲದಲ್ಲಿರುವ ನೀರನ್ನು ಕುಡಿಯಲು ಪ್ರಯತ್ನಿಸಿತು. ಕಮಂಡಲ ಕೆಳಗಡೆ ಉರಳಿತು. ಆ ಕ್ಷಣವೇ ಕಮಂಡಲದ ನೀರಿನ ಪ್ರವಾಹ ನದಿಯಾಗಿ ಹರಿಯಿತಂತೆ. ಅಗಸ್ತ್ಯಮುನಿಯ ಕಮಂಡಲದಲ್ಲಿರುವ ನೀರು ಕಾಗೆ ತಾನು ಕುಡಿಯಲು ಹೋಗಿ, ಅದರಲ್ಲಿರುವ ನೀರನ್ನು ಉರಳಿಸಿತು. ಅದೇ ಕಾಗಿಣಾ ನದಿಯಾಗಿ ಹೆಸರು ಪಡೆದು ಹರಿಯಿತೆಂಬುದು ಜನಪದರ ಅಭಿಪ್ರಾಯವಾಗಿದೆ.

ಇಂದ್ರನೇ ಕಾಗೆಯಾಗಿ ಕಮಂಡಲವನ್ನು ಉರುಳಿಸಿದ ಈ ವಿಷಯವನ್ನು ಅರಿತ ಅಗಸ್ತ್ಯಮುನಿ ಕೋಪದಿಂದ ಇಂದ್ರನಿಗೆ ಶಾಪಕೊಟ್ಟರು. ಭೂಮಿಯ ಮೇಲೆ ಮನುಷ್ಯನಾಗಿ ಹುಟ್ಟಬೇಕಾಯಿತು. ಜಯತೀರ್ಥರೇ ಆ ಇಂದ್ರಾಂಶರೆಂದು ಕೆಲವರ ಅಭಿಮತವಾಗಿದೆ. ಕಾಗಿಣಾ ನದಿಯು ಆಂಧ್ರಪ್ರದೇಶದಿಂದ ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಹುನಗುಂಟ ಕ್ಷೇತ್ರ ಭೀಮಾನದಿಗೆ ಬಂದು ತಲುಪುತ್ತದೆ.[೩೩] ನದಿಯ ಉಗಮದ ಬಗೆಗೆ ಐತಿಹ್ಯವಾಗಿ ಜನಮನದಲ್ಲಿ ಗಟ್ಟಿಯಾಗಿ ಉಳಿದುಕೊಂಡಿರುವುದು ತಿಳಿದುಬರುತ್ತದೆ. ವ್ಯಕ್ತಿ ಮತ್ತು ಘಟನೆಯ ಮೂಲಕ ಪ್ರಕೃತಿಯಲ್ಲಿ ಐತಿಹ್ಯವಾಗಿ ಈ ಕಾಗಣಾ ನದಿಯ ಸ್ವರೂಪವನ್ನು ಪಡೆದುಕೊಂಡಿತು.

ಭೀಮಾನದಿ:-

ಭೀಮಾ ನದಿಯು ಕೃಷ್ಣಾ ನದಿಯ ಉಪನದಿಯಾಗಿದೆ. ಇದು ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳ ಭೀಮಾ ಶಂಕರದಲ್ಲಿ ಉಗಮಿಸುತ್ತದೆ. ಈ ನದಿಯು ವಿಜಾಪುರ ಜಿಲ್ಲೆಯ ಉತ್ತರ ತುದಿಯಲ್ಲಿರುವ ದಸೂರಿನ ಬಳಿ ಕರ್ನಾಟಕದ ಎಲ್ಲೆಯನ್ನು ಮುಟ್ಟುತ್ತದೆ. ಅಲ್ಲಿಂದ ಪುರ್ವಾಭಿಮುಖವಾಗಿ ಹಲವಾರು ಅಂಕುಡೊಂಕುಗಳೊಡನೆ ವಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳ ಗಡಿರೇಖೆಯಾಗಿ ಪ್ರವಹಿಸುತ್ತದೆ. ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಬಳಿಯಿಂದ ಕೆಲವು ತಿರುವುಗಳನ್ನು ಸುತ್ತಿ ಸಿಂದಗಿ ತಾಲೂಕಿನ ಮಾದನಹಳ್ಳಿಯವರೆಗೆ ಆಗ್ನೇಯಾಭಿಮುಖವಾಗಿಯೂ ಅಲ್ಲಿಂದ ಅಫಜಲಪುರದವರೆಗೆ ಪೂರ್ವಾಭಿಮುಖವಾಗಿಯೂ ಹರಿದು ಮತ್ತೆ ಕೆಲವು ಬಳಸುಗಳೊಡನೆ ಆ ತಾಲೂಕಿನ ಘತ್ತರಗಿಯವರೆಗೆ ದಕ್ಷಿಣಕ್ಕೆ ಕ್ರಮಿಸುತ್ತ ವಿಜಾಪುರ ಮತ್ತು ಗುಲಬರ್ಗಾ ಜಿಲ್ಲೆಯ ಗಡಿರೇಖೆಯಾಗಿದೆ. ನದಿಯ ಮುಂದಿನ ಹರಿವು ಪೂರ್ಣವಾಗಿ ಗುಲಬರ್ಗಾ ಜಿಲ್ಲೆಯೊಳಗೆ ಇದೆ. ಘತ್ತರಗಿಯಿಂದ ಹಲವು ಬಳಸುಗಳೊಡನೆ ಅಫಜಲಪುರ ತಾಲೂಕಿನ ಬಂದರವಾಡದವರೆಗೆ

ಈಶಾನ್ಯಾಭಿಮುಖವಾಗಿ ಹರಿದು ಅಲ್ಲಿಂದ ಇದ್ದಕ್ಕಿದಂತೆ ನೈಋತ್ಯಕ್ಕೆ ತಿರುಗಿ ಮತ್ತೆ ಹಂಚನಾಳದ ಬಳಿ ಪೂರ್ವಕ್ಕೆ ತಿರುಗಿ ಹಲವು ಬಳಸುಗಳೊಡನೆ ಜೇವರ್ಗಿ ತಾಲೂಕಿನ ಹರವಾಳದವರೆಗೆ ಕ್ರಮಿಸುತ್ತದೆ. ಅಲ್ಲಿಂದ ಗುಲಬರ್ಗಾ ತಾಲೂಕಿನ ಹಾಗರಗುಂಡಗಿಯವರೆಗೆ ಈಶಾನ್ಯಾಭಿಮುಖವಾಗಿ ಸಾಗಿ ನಂತರ ದಕ್ಷಿಣಕ್ಕೆ ತಿರುಗಿ ಜೇವರ್ಗಿ ತಾಲೂಕಿನ ಕಟ್ಟೆಸಂಗಾವಿಯಿಂದ ಪೂರ್ವಕ್ಕೂ ಮತ್ತೆ ದಕ್ಷಿಣಕ್ಕೂ ಹರಿದು ಚಿತ್ತಾಪುರ ತಾಲೂಕಿನ ಸನ್ನತಿಯವರೆಗೂ ಬರುತ್ತದೆ. ಆ ಸ್ಥಳದಿಂದ ನದಿಯ ಗಮನ ಸಾಮಾನ್ಯವಾಗಿ ಆಗ್ನೇಯಾಭಿಮುಖವಾಗಿ ಇರುತ್ತದೆ. ಇದುವರೆಗೆ ಜೇವರ್ಗಿ ತಾಲೂಕಿನ ಉತ್ತರ ಮತ್ತು ಪೂರ್ವ ಗಡಿಯಾಗಿ ಹರಿಯುವ ಈ ನದಿ ಮುಂದೆ ಶಹಾಪುರ ತಾಲೂಕನ್ನು ಚಿತ್ತಾಪುರ ಮತ್ತು ಯಾದಗಿರಿ ತಾಲೂಕುಗಳಿಂದ ಬೇರ್ಪಡಿಸುವಂತೆ ಹರಿದು ಗುಲಬರ್ಗಾ ಜಿಲ್ಲೆಯ ಆಗ್ನೇಯದ ಅಂಚಿನಲ್ಲಿ ಶಹಾಪುರ ತಾಲೂಕಿನ ಸಂಗಮದ ಬಳಿ ಕೃಷ್ಣಾ ನದಿಯನ್ನು ಕೂಡುತ್ತದೆ. ಭೀಮಾ ನದಿಯು ತನ್ನ ಒಟ್ಟು ಹರಿವಿನ ೮೫೬ಕಿ.ಮೀ ನಲ್ಲಿ ೫೨೦ ಕಿ.ಮೀ. ಮಹಾರಾಷ್ಟ್ರದಲ್ಲೂ. ೪೪ ಕಿ.ಮೀ. ಕರ್ನಾಟಕ ಮಹಾರಾಷ್ಟ್ರ ಗಡಿಯಾಗಿಯೂ, ಮುಂದಿನ ೪೪ ಕಿ.ಮೀ. ವಿಜಾಪುರ ಮತ್ತು ಗುಲಬರ್ಗಾ ಜಿಲ್ಲೆಗಳ ಗಡಿಯಾಗಿಯೂ, ಇನ್ನು ಉಳಿದ ೨೪೦ ಕಿ.ಮೀ. ಪೂರ್ತಿ ಗುಲಬರ್ಗಾ ಜಿಲ್ಲೆಯಲ್ಲಿಯೇ ಹರಿಯುತ್ತದೆ.

ಗುಲಬರ್ಗಾ ಜಿಲ್ಲೆಯ ಅಫಜಲಪುರ, ಜೇವರ್ಗಿ ಮತ್ತು ಯಾದಗಿರಿ ಇವು ಭೀಮಾ ನದಿಗೆ ಸಮೀಪವಿರುವ ದೊಡ್ಡ ಊರುಗಳು. ಭೀಮಾ ನದಿಯ ದಂಡೆಯಲ್ಲಿ ಅನೇಕ ತೀರ್ಥಕ್ಷೇತ್ರಗಳಿವೆ. ಅಮರ್ಜಾ ಭೀಮಾ ಸಂಗಮದ ಬಳಿ ಇರುವ ದೇವಲಗಾಣಗಾಪುರ ಒಂದು ಸುಪ್ರಸಿದ್ಧವಾದ ತೀರ್ಥಕ್ಷೇತ್ರವಾಗಿದೆ. ಚಿತ್ತಾಪುರ ತಾಲೂಕಿನ ಸನ್ನತಿಯು ಚಂದ್ರಲಾಂಬಾ ಪರಮೇಶ್ವರಿ ದೇವಾಲಯವಿರುವ ಕ್ಷೇತ್ರ ಅಲ್ಲದೆ ಮಹತ್ವವಾದ ಪ್ರಾಗೈತಿಹಾಸಿಕ ನೆಲೆಯಾಗಿದೆ.

ಮತ್ಸ್ಯ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಹಾಗೂ ಮಹಾಭಾರತದಲ್ಲಿ ಭೀಮಾ ನದಿಯ ಉಲ್ಲೇಖ ಬಂದಿದೆ. ಪುರಾಣಗಳಲ್ಲಿ ಪವಿತ್ರ ನದಿಗಳ ಸಾಲಿನಲ್ಲಿ ಎಣಿಸಿದ ಇದನ್ನು 'ಮಹಾನದಿ' ಎಂದೂ ಉಲ್ಲೇಖಿಸಲಾಗಿದೆ. ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಭೀಮಾಶಂಕರಲಿಂಗ ಭೀಮಾನದಿಯ ಉಗಮ ಸ್ಥಾನದಲ್ಲಿದೆ.[೩೪]

ಭೀಮಾನದಿಗೆ ಸಂಬಂದಿಸಿದ ಐತಿಹ್ಯ:-

ಭೀಮಾನದಿಗೆ ಸಂಬಂದಪಟ್ಟಂತೆ ಒಂದು ಕಥೆ ಈ ರೀತಿ ಇದೆ. ಮಹಾಭಾರತದಲ್ಲಿ ಭೀಮಾನದಿಯ ಕುರಿತು ತಿಳಿಸಲಾಗಿದೆ. ಈ ನದಿಯನ್ನು ಮಹಾನದಿ ಎಂದು ಕರೆಯಲಾಗುತ್ತದೆ. ಭಾರತದ ದ್ವಾದಶ ಜ್ಯೋತಿರ್ಲಿಂಗ ಉಗಮ ಸ್ಥಾನವಾಗಿದೆ. ಶಿವನಿಗೆ ಪಾತ್ರ ತುಂಬಾ ಮೆಚ್ಚುಗೆಯನ್ನುಂಟು ಮಾಡುತ್ತದೆ. ಆತ ಸದಾ ಸಂಕಟಕದಲ್ಲಿ ನೆನೆದವರು ಅವರ ಪಾಲಿಗೆ ಅದ್ಭುತ ವ್ಯಕ್ತಿ ಪ್ರತ್ಯಕ್ಷನಾಗುತ್ತಾನೆ ತ್ರಿಪ್ರರಾಸುನನ್ನು ಸೋಲಿಸಿ ದಣಿದುಕೊಂಡ ಶಿವನು ವಿಶ್ರಾಂತಿಗಾಗಿ ಸಹ್ಯಾದ್ರಿಗೆ ಬರುತ್ತಾನೆ. ಆ ಸಮಯದಲ್ಲಿ ಇಬ್ಬರು ಋಷಿಗಳನ್ನು ಹತ್ಯೆ ಗೈದಿದ್ದ ಅಯ್ಯೋದ್ಯೆಯ ರಾಜ ಭೀಮಕನು ತನ್ನ ಪಾಪ ಪರಿಹಾರಕ್ಕಾಗಿ ತಪ್ಪಸ್ಸಿಗೆಂದು ಶಿವನೆದು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸ್ಥಳಕ್ಕೆ ಬಂದು ತಪ್ಪಸ್ಸು ಮಾಡುತ್ತಿದ್ದನಂತೆ.

ಭೀಮನ ತಪ್ಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ನಿನಗೆ ಏನು ಬೇಕು ಬಂದವರ ಕೇಳಿದನಂತೆ. ಆಗ ಶಿವನ ಹಣೆಯ ಬೆವರಿನಿಂದ ಸುರಿಯಲಾರಂಭಿಸಿತಂತೆ. ಇದನ್ನು ಕಂಡ ಭೀಮ. ಆ ಹಣೆಯ ಬೆವರೇ ನದಿಯಾಗಿ ಪ್ರವಹಿಸಲಿ ಎಂದು ಬೇಡಿಕೊಂಡನಂತೆ. ಈ ರೀತಿ ಭೀಮನ ತಪಸ್ಸಿನ ಫಲವೇ ಶಿವನು ಪ್ರತ್ಯಕ್ಷನಾಗಿ ಆತನ ಬೆವರ ಹನಿಯೊಂದು ಸುರಿದ ನದಿಯೇ

ಮುಂದೇ ಭೀಮರತಿ ಅಥವಾ ಭೀಮಾ ನದಿಯಾಗಿ ಜನಪ್ರಿಯವಾಯಿತಂತೆ. ಈ ರೀತಿಯ ಭೀಮಾನದಿಯ ಹುಟ್ಟಿನ ಕುರಿತ ಐತಿಹ್ಯವು ಲಭಿಸುವುದು.

ಕೃಷ್ಣಾ ನದಿ:-

ಕರ್ನಾಟಕದ ಜೀವ ನದಿಗಳಲ್ಲಿ ಒಂದಾಗಿರುವ ಕೃಷ್ಣಾ ನದಿಯು ಉತ್ತರ ಕರ್ನಾಟಕದ ಭಾಗಕ್ಕೆ ಅತಿ ಉಪಯುಕ್ತವಾದ ನದಿಯಾಗಿದೆ. ಇದು ಪವಿತ್ರ ನದಿಯೆಂದು, ಸ್ಥಳೀಯರಲ್ಲಿ ಇದಕ್ಕೆ ಹಿರೇಹೊಳೆ ಎಂಬ ಹೆಸರಿದೆ. ಶಾಸನಗಳಲ್ಲಿ ಪೆರ್ದೊರೆ, ಸಂಸ್ಕೃತದಲ್ಲಿ ಕೃಷ್ಣವೇಣಿ ಎಂಬ ಹೆಸರುಗಳು ಕಂಡು ಬರುತ್ತವೆ. ಸ್ಕಂದಪುರಾಣದ ಕೃಷ್ಣ ಮಹಾತ್ಮ್ಯವಿಭಾಗದಲ್ಲಿ ಹೇಳಿರುವಂತೆ ಸ್ವರ್ಗದಿಂದ ಈ ನದಿಯನ್ನು ಭೂಲೋಕಕ್ಕೆ ತಂದಂತೆಯೂ, ಕಲಿಯುಗದಲ್ಲಿ ಧರ್ಮಜ್ಞಾನಿಯಿಂದ ಬೇಸತ್ತ ಋಷಿಗಳು ನಾರದನನ್ನು ಮೊರೆಹೊಕ್ಕಾಗ ನಾರದ ತನ್ನ ತಂದೆ ಬ್ರಹ್ಮನನ್ನು ಪ್ರಾರ್ಥಿಸಿದನೆಂದೂ ಆಗ ಬ್ರಹ್ಮ ಅನೇಕ ತೀರ್ಥಗಳನ್ನು ಸೃಷ್ಟಿಸಿದನೆಂದು. ಹಾಗೆಯೇ ನಾರಾಯಣನು ಧರ್ಮ ರಕ್ಷಣೆಗಾಗಿ ಪ್ರಾರ್ಥಿಸಿದಾಗ ನಾರಾಯಣನ ಶರೀರದಿಂದ ಈ ನದಿ ಹುಟ್ಟಿದೆಂದು,ಆದ್ದರಿಂದಲೇ ಇದಕ್ಕೆ ಕೃಷ್ಣಾ ನದಿ ಎಂಬ ಹೆಸರು ಬಂದಿತೆಂದು ಹೇಳುವರು. ಪದ್ಮ ಮತ್ತು ಬ್ರಹ್ಮ ಪುರಾಣಗಳಲ್ಲೂ ಕೃಷ್ಣಾ ನದಿಯ ಮಹಿಮೆ ಕುರಿತು ಹೇಳಿದೆ. ಕೃಷ್ಣಾನದಿಯನ್ನು ದಕ್ಷಿಣದ ಗಂಗೆ ಎಂದೂ ಕರೆಯುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲಿ ಸುರಪುರ ತಾಲೂಕಿನ ಛಾಯಾ ಭಗವತಿ, ತಿಂಥಿಣಿ, ಯಾದಗಿರಿ ತಾಲೂಕಿನ ಭೀಮಾ ಕೃಷ್ಣಾ ಸಂಗಮ, ಕೃಷ್ಣಾ ನದಿಯ ದಂಡೆಯಲ್ಲಿರುವ ಪುಣ್ಯ ಕ್ಷೇತ್ರಗಳಲ್ಲಿ ಕೆಲವು.

ಈ ನದಿಗೆ ಮಳೆಯ ನೀರು ಪ್ರಧಾನ ಆಸರೆಯಾಗಿರುವುದರಿಂದ ಜೂನ್‌ನಿಂದ ಡಿಸೆಂಬರವರೆಗೆ ಇದರ ಪ್ರವಾಹ ಅಧಿಕವಾಗಿರುತ್ತದೆ. ಬೇಸಿಗೆಯ ದಿನಗಳಲ್ಲಿ ಇದು ತೀರ ಕೆಳಮಟ್ಟದಲ್ಲಿ ಹರಿಯುತ್ತದೆ. ಕರ್ನಾಟಕ ಪ್ರಸ್ಥಭೂಮಿಯ ಮೂರನೇ ಎರಡರಷ್ಟು ಭಾಗ ಕೃಷ್ಣಾ ಕೊಳ್ಳದ ಯೋಜನಾ ವ್ಯಾಪ್ತಿಗೆ ಸೇರಿದ್ದಾಗಿದೆ. ಗುಲಬರ್ಗಾ, ರಾಯಚೂರು ಜಿಲ್ಲೆಗಳ ಅನೇಕ ತೊರೆಗಳು ಕೃಷ್ಣಾ ನದಿಯನ್ನು ಸೇರುತ್ತವೆ. ವಿಜಾಪುರ ಜಿಲ್ಲೆಯ ಬಹುಭಾಗದಲ್ಲಿ ಹರಿದು ಗುಲಬರ್ಗಾ ಜಿಲ್ಲೆಯಲ್ಲಿ ಮುನ್ನೆಡೆಯುವ ದೋಣಿ ನದಿ ಕೃಷ್ಣಾ ನದಿಯ ಉತ್ತರದ ಉಪನದಿಗಳಲ್ಲಿ ಒಂದಾಗಿದೆ. ಇದು ಸುರಪುರ ತಾಲೂಕಿನ ನೈಋತ್ಯ ಭಾಗದಲ್ಲಿ ಉಮ್ಮಾಪುರದ ಬಳಿ ಕೃಷ್ಣಾನದಿಯನ್ನು ಕೂಡುತ್ತದೆ. ಮುಂದಿನ ಉಪನದಿಗಳಲ್ಲಿ ಭೀಮಾ ನದಿ ಮುಖ್ಯವಾದುದು.[೩೫] ಇದು ಗುಲಬರ್ಗಾ ಜಿಲ್ಲೆಯ ಪೂರ್ವದ ಅಂಚಿನಲ್ಲಿ ಕೃಷ್ಣಾ ನದಿ ರಾಜ್ಯದ ಎಲ್ಲೆಯನ್ನು ಬಿಡುವಲ್ಲಿ ಗುಂಡ್ಲೂರು ಸಂಗಮದಲ್ಲಿ ಸಂಗಮಿಸುತ್ತದೆ. ರಾಜ್ಯದ ಪ್ರಮುಖ ಬೃಹತ್ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ವಿಜಾಪುರ. ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಸುಮಾರು ೮,೪೩ ಲಕ್ಷ ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗುತ್ತದೆ.

ಅಮರ್ಜಾ ನದಿ:-

ಈ ನದಿಯು ಭೀಮಾ ನದಿಯ ಉಪನದಿಗಳಲ್ಲೊಂದು, ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಜಿಲ್ಲೆಯ ಉಮರ್ಗಾ ತಾಲೂಕಿನಲ್ಲಿ ಆಲೂರ ಗ್ರಾಮದ ಹತ್ತಿರ ಹುಟ್ಟಿ. ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ನೀರ್ಗುಡಿ ಗ್ರಾಮದ ಹತ್ತಿರ ಪ್ರವೇಶಿಸುತ್ತದೆ. ಆ ತಾಲೂಕಿನ ಮಧ್ಯದಲ್ಲಿ ದಕ್ಷಿಣಕ್ಕೆ ಹರಿದು ಅಫಜಲಪುರ ತಾಲೂಕಿನ ಗಾಣಗಾಪುರದ ಬಳಿ ಭೀಮಾನದಿಯನ್ನು ಸೇರುತ್ತದೆ. ಈ ನದಿಯ ಉದ್ದ ಸುಮಾರು ೧೦೦ ಕಿ.ಮೀಗಳು ಇದರ ಹರಿವು ಉಮರ್ಗಾ ತಾಲೂಕಿನಲ್ಲಿನ ೮,೫೨೮ ಕಿ.ಮೀ ಬಿಟ್ಟರೆ ಉಳಿದದ್ದು ಗುಲಬರ್ಗಾ ಜಿಲ್ಲೆಯಲ್ಲಿರುವುದು. ಅಮರ್ಜಾ ನದಿಯ ಒಟ್ಟು ಜಲಾನಯನ ಕ್ಷೇತ್ರ

ಸುಮಾರು ೧,೫೨೮ ಚ.ಕಿ.ಮೀ. ಆಳಂದ ಮತ್ತು ಅಫಜಲಪುರ ತಾಲೂಕುಗಳಲ್ಲಿನ ಅಮರ್ಜಾ ನದಿಯ ಬಯಲು ವ್ಯವಸಾಯಕ್ಕೆ ಅನುಕೂಲಕರವಾಗಿದೆ. ಆಳಂದ ತಾಲೂಕಿನಲ್ಲಿ ಶಾಖಾಪುರ ಗ್ರಾಮದ ಹತ್ತಿರ ಆಳಂದ ಹಿರೋಳಿ ರಸ್ತೆಗಾಗಿ ಈ ನದಿಗೆ ಸೇತುವೆಯನ್ನು ಕಟ್ಟಲಾಗಿದೆ. ಮುಂಬಯಿ, ಚನ್ನೈ ರೈಲುಮಾರ್ಗದಲ್ಲಿರುವ ಗಾಣಗಾಪುರ ರೋಡ್ ರೈಲು ನಿಲ್ದಾಣದ ಸಮೀಪ ಈ ನದಿಗೆ ಸೇತುವೆ ಕಟ್ಟಲಾಗಿದೆ. ಈ ನದಿಗೆ ಆಳಂದ ತಾಲೂಕಿನ ಸಂಗೋಳಗಿ ಗ್ರಾಮ ಸಮೀಪ ಆಣೆಕಟ್ಟು ಕಟ್ಟುವ ಯೋಜನೆ ಇದೆ. ಇದರಿಂದ ಅಫಜಲಪುರ ಮತ್ತು ಆಳಂದ ತಾಲೂಕಿನ ೮,೯೦೩ ಹೆ. ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಮುಲ್ಲಾಮಾರಿ ನದಿ:-

ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಮಟೌಲ ಬಳಿ ಹುಟ್ಟುವ ಮುಲ್ಲಾಮಾರಿ ಆಗ್ನೇಯ ದಿಕ್ಕಿನೆಡೆ ಸುಮಾರು ೫೦ ಕಿ.ಮೀ ಹರಿದು ಗುಲಬರ್ಗಾ ಜಿಲ್ಲೆಯನ್ನು ಕಿಣ್ಣಿ ಗ್ರಾಮದ ಬಳಿ ಪ್ರವೇಶಿಸುತ್ತದೆ. ಈ ನದಿ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗಡಿಯಾಗಿ ಹರಿಯುತ್ತದೆ. ಮುಂದೆ ಸುಮಾರು ೧೩ ಕಿ.ಮೀ. ಗುಲಬರ್ಗಾ ಜಿಲ್ಲೆಯೊಳಗೆ ಹರಿದು ಮತ್ತೆ ಕೊಟಗಿ ಗ್ರಾಮದವರೆಗೆ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗಡಿಯಾಚೆ ಹರಿಯುತ್ತದೆ. ನಂತರ ಅದೇ ದಿಕ್ಕಿನಲ್ಲಿ ಹರಿದು ಚಿಂಚೋಳಿ ಪಟ್ಟಣ ತಲುಪುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ನದಿಯ ಒಟ್ಟು ಹರಿವು ಚಿಂಚೋಳಿ ಪಟ್ಟಣದವರೆಗೆ ಸುಮಾರು ೬೫ ಕಿ.ಮೀ. ಚಿಂಚೋಳಿ ಪಟ್ಟಣದಿಂದ ದಕ್ಷಿಣದ ಕಡೆಗೆ ಪ್ರವಹಿಸುವ ಈ ನದಿಯು ಸುಮಾರು ೨೫ ಕಿ.ಮೀ ಹರಿದ ನಂತರ ಜಟ್ಟೂರು ಗ್ರಾಮದ ಬಳಿ ಕಾಗಿಣಾ ನದಿಯನ್ನು ಸೇರುತ್ತದೆ. ಈ ನದಿಯ ದಂಡೆಗಳಲ್ಲಿ ಮುಖ್ಯವಾಗಿ ಕಪ್ಪು ಮಣ್ಣು ಕಂಡುಬರುತ್ತದೆ. ಸರನಾಲಾ ಮತ್ತು ಕರಿನಾಲಾ ಸೇರಿದಂತೆ ಹಲವು ಹಳ್ಳಗಳು ಮುಲ್ಲಾಮಾರಿ ನದಿಯನ್ನು ಸೇರುತ್ತವೆ. ಚಿಂಚೋಳಿಯು ಈ ನದಿಯ ದಡದಲ್ಲಿದೆ.[೩೬]

ಬೆಣ್ಣೆತೂರೆ ನದಿ:-

ಕಾಗಿಣಾ ನದಿಯ ಉಪನದಿಯಾದ ಬೆಣ್ಣೆತೊರೆ ನದಿಯು ಮಹಾರಾಷ್ಟ್ರ ರಾಜ್ಯದ ಮಲೆಗಾಂವ್ ಗ್ರಾಮದ ಬಳಿ ಹುಟ್ಟಿ ಆಳಂದ ತಾಲೂಕಿನ ಹಿಪ್ಪರಗಿ ಗ್ರಾಮದ ಬಳಿ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ಉಪನದಿಯು ಸುಮಾರು ೮ ಕಿ. ಮಿ. ಗಳಷ್ಟು ದೂರ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗಡಿಯಾಗಿ ಹರಿದು ನಂತರ ಈಶಾನ್ಯಾಭಿಮುಖವಾಗಿ ಹರಿದು ಮಳಖೇಡ ಗ್ರಾಮದ ಬಳಿ ಕಾಗಿಣಾ ನದಿಯನ್ನು ಬಲದಂಡೆಯಲ್ಲಿ ಕೂಡುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಈ ನದಿಯು ಆಳಂದ, ಗುಲಬರ್ಗಾ ಮತ್ತು ಚಿತ್ತಾಪುರ ತಾಲೂಕುಗಳಲ್ಲಿ ಸುಮಾರು ೧೦೦ ಕಿ. ಮೀ. ದೂರ ಹರಿಯುತ್ತದೆ.[೩೭]

ಗುಲಬರ್ಗಾ ಕೋಟೆಗೆ ಸಂಬಂದಿಸಿದ ಐತಿಹ್ಯ:-

ಗುಲಬರ್ಗಾ ಕೋಟೆ ಕಟ್ಟಿಸಿದ ನಂತರ ಅದರ ಮುಖ್ಯ ಬಾಗಿಲನ್ನು (ದ್ವಾರ ಬಾಗಿಲು) ಎಷ್ಟು ಬಾರಿ ಕಟ್ಟಿಸಿದರು ಅದು ಬೀಳತೊಡಗಿತು. ಬಾಗಿಲ ಕಟ್ಟಡ ಸಂಪೂರ್ಣಗೊಳ್ಳಬೇಕಾದರೆ ಅದಕ್ಕೆ ಬಸುರಿ ಹೆಣ್ಣಮಗಳನ್ನು ಬಲಿ ಕೊಟ್ಟಾಗ ಮಾತ್ರ ಸಾಧ್ಯ ಎಂದು ಕೆಲವರು ಸಲಹೆ ನೀಡಿದರು. ಅದರಂತೆ ಕೆಳಸಮುದಾಯದ ಹೆಣ್ಣುಮಗಳಾದ ಬೋರಾಬಾಯಿ ಬಸುರಿಯಾಗಿರುತ್ತಾಳೆ ಅವಳನ್ನು ತಂದು ಬಲಿ ಕೊಡುತ್ತಾರೆ. ತದನಂತರ ಕೋಟೆಯ ಕಾರ್ಯ ಪೂರ್ಣಗೊಂಡಿತ್ತೆಂಬ ಐತಿಹ್ಯವಿದೆ. ಇಂದಿಗೂ ಈ ಬೋರಾಬಾಯಿಯ ಹೆಸರಲ್ಲಿ ಒಂದು ಕೆಳಸಮುದಾಯದ ಓಣಿ ಹೆಸರಿದೆ. ಅದನ್ನು ಬೋರಾಬಾಯಿ ಗಲ್ಲಿಎಂದು ಕರೆಯುತ್ತಾರೆ.[೩೮]

ಒಮ್ಮನತಾಯಿ ದೇವಸ್ಥಾನ:-

ಈ ದೇವಸ್ಥಾನವಿರುವುದು ಸುಲ್ತಾನಪುರಕ್ಕೆ ಹೋಗುವ ದಾರಿಯ ಬಲಭಾಗಕ್ಕೆ. ಒಮ್ಮನತಾಯಿ ಒಬ್ಬ ಮಹಿಳೆ ಇವಳು ಬ್ರಿಟೀಷರ ಕಾಲದಲ್ಲಿ ಬದುಕಿ ಬಾಳಿದವಳು. ಬ್ರಿಟೀಷರ ವಿರುದ್ಧ ಹೋರಾಡಲು ಈ ಭಾಗದ ಜನರನ್ನು ಹುರಿದುಂಬಿಸುತ್ತಿದ್ದಳು ಜೊತೆಗೆ ಒಮ್ಮನ ಅಕ್ಕಿ (ನಾಲ್ಕು ಸೇರು) ಹಾಕಿ ಅನ್ನ ಮಾಡಿ ಜನರಿಗೆ ಊಟಕ್ಕೆ ಇಡುತ್ತಿದ್ದಳು. ದಾರಿಗೆ ಹೋಗುವ ಬರುವ ಎಲ್ಲ ಜನರನ್ನು ಊಣಬಡಿಸಿ ದೇಶದ ವಿರುದ್ಧ ಹೋರಾಡಲು ಜನರನ್ನು ಪ್ರೇರೆಪಿಸುತ್ತಿದ್ದಳು. ಮುಂದೆ ಅವಳ ನಿಧನ ನಂತರ ಅವಳ ಸ್ಥಾನದಲ್ಲಿ ಅವಳಿಗಾಗಿ ಒಂದು ದೇವಸ್ಥಾನವನ್ನು ಜನರು ನಿರ್ಮಿಸಿದರು ಅದುವೇ ಈ ಒಮ್ಮನತಾಯಿ ದೇವಸ್ಥಾನ.[೨೯]

೩.೪ ಸಸ್ಯ ಸಂಬಂಧಿ ಐತಿಹ್ಯಗಳು:-

'ಹಸಿರೇ ಉಸಿರು' ಎನ್ನುವ ಮಾತು ಮಾನವ ಮತ್ತು ಸಸ್ಯ ಸಂಕುಲಗಳ ನಡುವೆ ಇರುವ ನಿಕಟ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಮಾನವ ತನ್ನ ಜೀವನ ವಿಧಾನವನ್ನು ರೂಪಿಸಿಕೊಳ್ಳುವಲ್ಲಿ ಸುತ್ತಮುತ್ತಲಿನ ಸಸ್ಯ ಸಂಕುಲ ನೆರವಾಗುತ್ತವೆ. ಮಾನವ ಬದುಕುವುದಕ್ಕಾಗಿ ರೂಪಿಸಿಕೊಂಡಿರುವ ನಂಬಿಕೆ, ಸಂಪ್ರದಾಯ, ಆಚರಣೆಗಳಂಥ ಎಷ್ಟೋ ವಿಧಿ ವಿಧಾನಗಳು ಇದಕ್ಕೆ ನಿದರ್ಶನವಾಗಿವೆ. ಈ ವಿಧಿ-ವಿಧಾನಗಳನ್ನು ಅಧ್ಯಯನಕ್ಕೆ ಒಳಪಡಿಸಿದರೆ ಆ ಪರಿಸರದ ಜನಾಂಗದ ಆಲೋಚನೆಯ ಕ್ರಮ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಕಂಡುಕೊಳ್ಳಲು ನೆರವಾಗುತ್ತವೆ. ಈ ತೆರನಾದ ಜನಪದ ಬದುಕನ್ನು ತಿಳಿದುಕೊಳ್ಳುವಲ್ಲಿ ಸಸ್ಯ ಸಂಬಂಧಿಯಾದ ನಂಬಿಕೆ ಸಂಪ್ರದಾಯ ಆಚರಣೆಯ ರೂಪದಲ್ಲಿರುವ ಐತಿಹ್ಯಗಳು ಬಹುಮುಖ್ಯವಾದವುಗಳು. ಇಲ್ಲಿ ಪ್ರಕೃತಿ ಮತ್ತು ಮಾನವ ನಡುವಿನ ಕಾರ್ಯ ಕಾರಣ ಸಂಬಂಧವು ಕಂಡುಬರುತ್ತದೆ. ಪ್ರಕೃತಿಯ ರಹಸ್ಯವನ್ನು ಭೇಧಿಸಲು ವಿಫಲನಾದ ಮಾನವ ಪ್ರಕೃತಿಯ ಆರಾಧನೆಯಲ್ಲಿ ತೊಡಗಿ ಹಲವಾರು ನಂಬಿಕೆಗಳನ್ನು ಹುಟ್ಟು ಹಾಕಿದ. ಹೀಗೆ ಹುಟ್ಟು ಪಡೆದ ಹಲವು ನಂಬಿಕೆಗಳಲ್ಲಿ ಸಸ್ಯ ಸಂಪತ್ತು ಕೂಡ ಸೇರಿದೆ. ಈ ನಂಬಿಕೆಗಳು ಸಸ್ಯವನ್ನು ಪೂಜ್ಯನೀಯ ಭಾವದಿಂದ ಕಾಣುವಂತೆ ಮಾಡಿವೆ. ಇದರಿಂದಾಗಿ ಪರಂಪರಾಗತವಾಗಿ ಸಸ್ಯ ಸಂಪತ್ತನ್ನು ಸಂರಕ್ಷಿಸಿಕೊಂಡು ಬರಲು ಜನಪದರ ಈ ಬಗೆಗಿನ ತಿಳುವಳಿಕೆ ಪ್ರಜ್ಞಾಪೂರ್ವಕವಾದದ್ದು. ಹೀಗಾಗಿ "ಸಸ್ಯ ಸಂಬಂಧದ ಆಚರಣೆಗಳು ಮನುಷ್ಯನ ಬದುಕಿನಲ್ಲಿ ವಿಚಿತ್ರವಾದ ಪಾತ್ರವನ್ನು ವಹಿಸುತ್ತವೆ. ಸಸ್ಯಗಳನ್ನು ತನ್ನಂತೆ ಅಥವಾ ತನಗಿಂತ ಹೆಚ್ಚೆಂದು ತಿಳಿದು ಜನರು ಆರಾಧಿಸುತ್ತಾರೆ".[೪೦]ಎನ್ನುವ ಅಂಶ ತಿಳಿದುಬರುತ್ತದೆ. ಈ ಆರಾಧನೆಯ ಕಾರಣಕ್ಕಾಗಿ ಸಸ್ಯಕ್ಕೆ ಸಂಬಂಧಿಸಿದ ಹಲವು ಐತಿಹ್ಯಗಳು ಹುಟ್ಟು ಪಡೆದಿವೆ.

ಈ ಐತಿಹ್ಯಗಳು ಜನಪದರ ಜೀವನ ವಿಧಾನದ ಮೇಲೆ ಪ್ರಭಾವ ಬೀರಿ ಸಸ್ಯ ಸಂಪತ್ತನ್ನು ದೈವಿಕ ದೃಷ್ಟಿಕೋನದಿಂದ ನೋಡುವುದಕ್ಕೆ ಪ್ರೇರಣೆಯಾಗಿವೆ. ಅತಿವಿರಳ ಎಂದೆನಿಸುವ ಅರಳಿಗಿಡ, ತುಳಸಿಗಿಡ, ಆಲದ ಮರ, ಬನ್ನಿಗಿಡ, ಬಿಲ್ವಪತ್ರಿಗಿಡಗಳ ಬಗೆಗೆ ಐತಿಹ್ಯಗಳು ಹುಟ್ಟಿಕೊಂಡಿರುವುದನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

ಪ್ರಾಚೀನ ಕಾಲದಿಂದಲೂ ಮಾನವ ತನ್ನ ಅನುಕೂಲಕ್ಕೆ ತಕ್ಕಂತೆ ಸಸ್ಯ ಸಂಪತ್ತನ್ನು ಬಳಸಿಕೊಳ್ಳುತ್ತಾ ಬಂದಿದ್ದಾನೆ. ಆದರೂ ಕೂಡ ದೇವರು ಮತ್ತು ದೆವ್ವ ಎನ್ನುವ ಎರಡು ನೆಲೆಯಲ್ಲಿ ಅದನ್ನು ಭಾವಿಸಿರುವುದನ್ನು ಕಾಣುತ್ತೇವೆ. ಉಪಯುಕ್ತವಾದುದನ್ನು ದೇವರೆಂದು, ಅಪಾಯಕಾರಿಯಾದುದ್ದನ್ನು ದೆವ್ವವೆಂದು ಕೆಲವು ಸಸ್ಯಗಳಿಗೆ ಸಂಬಂಧಿಸಿದಂತೆ ಪರಿಗಣಿಸಿಕೊಳ್ಳುತ್ತಾನೆ. ಬದುಕನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಇಂಥ ಬದ್ಧತೆಗಳು ನೆರವಾಗುತ್ತವೆ.

ತುಳಸಿ ಸಸ್ಯ

ತುಳಸಿ ಹಿಂದೂಗಳಿಗೆ ಪವಿತ್ರವಾದ ಸಸ್ಯ. ಇದರ ಹಿಂದೆ ಅದ್ಭುತ ಮತ್ತು ಕುಶಧ್ವಜರು ಮಹಾಲಕ್ಷ್ಮಿಯನ್ನು ಮೆಚ್ಚುಸುವುದಕ್ಕಾಗಿ ತಪಸ್ಸು ಮಾಡಿದರು. ಕುಶಧ್ವಜನಿಗೆ ಮಾಲವತಿ ಎಂಬ ಹೆಂಡತಿಯಿದ್ದಳು, ಧರ್ಮಧ್ವಜ ರಾಜನ ಹೆಂಡತಿ ಮಾಧವಿ, ಈಕೆಯ ಗರ್ಭದೊಳಗೆ ಮಹಾಲಕ್ಷ್ಮಿ ಪ್ರವೇಶಿಸಿದಳು, ನೂರು ವರ್ಷಗಳ ನಂತರ ಮಾಧವಿ ಒಬ್ಬ ಮಗಳಿಗೆ ಜನ್ಮ ನೀಡಿದಳು. ಈ ಮಗುವು ಹುಟ್ಟುತ್ತಿದ್ದಾಗಲೇ ವಯಸ್ಕಳಾದವಳಂತೆ, ಸುಂದರಳಾಗಿದ್ದಳು. ಆದ್ದರಿಂದಲೇ ಈಕೆಗೆ ತುಳಸಿ ಎಂದು ಕರೆಯಲಾಯಿತು. ಈ ತುಳಸಿಯು ತನ್ನೆಲ್ಲಾ ಪ್ರಾಪಂಚಿಕ ಸುಖಗಳನ್ನು ತೊರೆದು ಬದರೀಕಾಶ್ರಮಕ್ಕೆ ನಡೆದು, ಮಹಾವಿಷ್ಣುವೇ ತನ್ನ ಗಂಡನಾಗಬೇಕೆಂದು ತಪಸ್ಸು ಮಾಡಲಾರಂಭಿಸಿದಳು. ಬೇಸಿಗೆಯ ಸಮಯದಲ್ಲಿ ಬೆಂಕಿ ನಡುವೆಯೂ ಚಳಿಗಾಲದಲ್ಲಿ ನೀರಿನ ಮಧ್ಯೆ ಕುಳಿತು ಹಣ್ಣುಹಂಪಲುಗಳನ್ನು ಸೇವಿಸುತ್ತಾ ಇಪ್ಪತ್ನಾಲ್ಕು ಸಾವಿರ ವರ್ಷಗಳ ಕಾಲ ತಪ್ಪಸ್ಸು ಮಾಡಿದಳು. ಅನಂತರ ಆ ಮೂವತ್ತು ಸಾವಿರ ವರ್ಷಗಳ ಕಾಲಕೇವಲ ಎಲೆಗಳನ್ನು ತಿಂದು ತಪಸ್ಸು ಮಾಡಿದಳು. ಮತ್ತೆ ನಲವತ್ತು ಸಾವಿರ ವರ್ಷಗಳ ಕಾಲ ಆಹಾರವಿಲ್ಲದೆ ತಪಸ್ಸನ್ನು ಗೈದಳು. ಈಕೆ ಮಹಾವಿಷ್ಣುವು ತನ್ನ ಗಂಡನಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದಳು. ಇದನ್ನು ಕೇಳಿದ ಬ್ರಹ್ಮನು ಅವಳನ್ನು ಕುರಿತು ''ದೇವಿ, ಕೃಷ್ಣನ ಒಂದು ಭಾಗವಾಗಿ ಸುಧಾಮ ಮತ್ತು ಗೋಪಾಲಕ ಹುಟ್ಟಿದ್ದು ನಿನಗೆ ತಿಳಿದಿರಬಹುದು. ಈಗ ಆ ಗೋಪಾಲಕನೇ ರಾಧಾಳ ಶಾಪದಿಂದಾಗಿ ಶಂಖಚೂಡ ಎಂಬ ರಾಕ್ಷಸನಾಗಿ ಹುಟ್ಟಿದ್ದಾನೆ.

ಆತನಿಗೆ ಸರಿಸಮಾನರಾದವರೇ ಇಲ್ಲ. ಆತ ಒಮ್ಮೆ ನೀನು ಗೋಕುಲದಲ್ಲಿ ಇದ್ದಾಗ ನಿನ್ನನು ಕಂಡು ಮೋಹಿತನಾಗಿದ್ದಾನೆ. ಈಗ ನೀನು ಅವನ ಹೆಂಡತಿಯಾಗುತ್ತೀಯಾ. ಅನಂತರದಲ್ಲಿ ನೀನು ನಾರಾಯಣನ ಹೆಂಡತಿಯಾಗುವೆ. ನಿನ್ನ ದೈವದತ್ತಾವಾದ ದೇಹದ ಭಾಗವಾಗಿ ಭೂಮಿಯ ಮೇಲೆ ತುಳಸಿಎಂಬ ಸಸ್ಯವಾಗಿ ಉಳಿದುಕೊಳ್ಳುವೆ. ಎಲ್ಲಾ ಸಸ್ಯಗಳಲ್ಲಿಯೂ ತುಳಸಿಯು ತುಂಬಾ ಪವಿತ್ರವಾದದ್ದು ಹಾಗೂ ಮನುಷ್ಯನಿಗೆ ಉಪಯುಕ್ತವಾದ ಸಸ್ಯವಾಗಿದೆ ಎಂದು ಹೇಳುತ್ತಾರೆ.[೪೧]

ತುಳಸಿ ನೃತ್ಯ:-

ಸಾಮಾನ್ಯವಾಗಿ ತುಳಸಿ ನೃತ್ಯವು ದೀಪಾವಳಿ ಸಂದರ್ಭದಲ್ಲಿ ಕಂಡು ಬರುತ್ತದೆ. ಈ ನೃತ್ಯವು ತುಂಬಾ ಪುರಾತನ ಕಾಲದಿಂದಲೂ ನಡೆದು ಬಂದ ಒಂದು ಕಲೆ. ಇದರಲ್ಲಿ ಪ್ರಾಯದವರು ಭಾಗವಹಿಸುತ್ತಾರೆ. ಭಾಗವತರಂತೆ ಒಬ್ಬರು ಮುಂದೆ ಒಬ್ಬರು ಹಾಡುತ್ತಾ, ತಾಳ ಹಾಕುತ್ತಾ ಹೋಗುತ್ತಾರೆ. ಉಳಿದವರು ಜೊತೆಜೊತೆಯಾಗಿ ಕುಣಿಯುತ್ತ ಮುಂದೆ ಬರುತ್ತಾ ಇರುತ್ತಾರೆ. ತುಳಸಿ ನೃತ್ಯಕ್ಕೆ ಹೆಚ್ಚುಕಡಿಮೆ ೨೦ ಜನರ ಒಂದು ತಂಡ ಅನುಕೂಲ. ತುಳುನಾಡಿನ ಉತ್ತರಭಾಗದಲ್ಲಿ ಮುಖ್ಯವಾಗಿ ಉಡುಪಿ ತಾಲೂಕಿನಲ್ಲಿ ತುಳಸಿ ನೃತ್ಯ ಪ್ರಚಲಿತದಲ್ಲಿದೆ. ಕುಂದಾಪುರ ತಾಲೂಕು ಪರಿಸರದಲ್ಲಿ ತುಳಸಿ ಪೂಜೆ ಸಂದರ್ಭದಲ್ಲಿ 'ಹಾದೇರಾಯ್ನ ವಾಲ್ಗ' ಎನ್ನುವ ನೃತ್ಯ ಪ್ರಕಾರವಿದೆ. ಹತ್ತು ಹನ್ನೆರಡು ಜನರ ಗುಂಪು ತುಳಸೀಕಟ್ಟೆಯ ಸುತ್ತ ನರ್ತಿಸುತ್ತಿದ್ದರೆ, ಹೊಗಳಿಕೆಯ ನೃತ್ಯಗಾರ ಕೋಟೆಯ ಒಳಕ್ಕೂ ಹೊರಕ್ಕೂ ತಿರುಗುತ್ತ, ನಿಧಾನವಾಗಿ ಕುಣಿಯುತ್ತ ಹಾಡುತ್ತಿರುತ್ತಾನೆ. ಹಾಡಿದ ಪ್ರತಿಸಾಲಿನ ಕೊನೆಗೂ ಕುಣಿಯುತ್ತಿರುವ ಸಂಧಿಗೆ ತಕ್ಕಂತೆ ನೃತ್ಯಗಾರರು 'ಹಾದೇರಾಯ್ನ ವಾಲ್ಗವೇ''ಹಾದೇರಾಯ್ನ ಕ್ವಾಡಂಗಿ''ಶಿವಶಿವ ರಾಮ ಶಿವನೇ ರಾಮ' ಮುಂತಾಗಿ ಪಲ್ಲವಿ ಸೇರಿಸುತ್ತಾರೆ. ರಾತ್ರಿಯಿಡಿ ನಡೆಯುವ ಈ ನೃತ್ಯದಲ್ಲಿ ಅನೇಕ

ಸಂಧಿಗಳಿದ್ದು ಪ್ರತಿ ಸಂಧಿಯ ನೃತ್ಯ ಕ್ರಮವೂ ಬೇರೆ ಬೇರೆ ತೆರನಾದ ಹೆಜ್ಜೆ ಭಾವ ಭಂಗಿಗಳನ್ನು ಹೊಂದಿದ್ದು ವೈವಿಧ್ಯಪೂರ್ಣವಾಗಿರುತ್ತದೆ. ಕೊನೆಯ ಕೋಲು ಸಂಧಿಯ ಕೋಲಾಟದ ನೃತ್ಯವಂತೂ ಅದ್ಭುತವಾಗಿರುತ್ತದೆ.[೪೨]

ಈಚಲು ಮರದ ಐತಿಹ್ಯ:-

ಕದಂಬ ವೃಕ್ಷ ಎಂಬ ಹೆಸರು ಈಚಲು ಮರಕ್ಕೆ ಇದೆ. ಈಡಿಗರಿಗೆ ಇದು ಪೂಜನೀಯವಾದ ಮರ. ಈಚಲು ಮರದ ರಸದಿಂದ ಹೆಂಡ ಅಥವಾ ಸಾರಾಯಿಯನ್ನು ಉತ್ಪತ್ತಿ ಮಾಡಲಾಗುತ್ತದೆ. ಎಲ್ಲಮ್ಮನ ಕಥೆಗಳಲ್ಲಿ ಬರುವ ಮಾರ್ತಾಂಡಗೌಡ ಎಂಬುವನು ಈಚಲ ತನವನ್ನು ಹೊಂದಿದ್ದು ಅವುಗಳಿಂದ ಹೆಂಡವನು ಇಳಿಸಲು ಚಿನ್ನದ ಬಳಿ, ಬೆಳ್ಳಿಬಳಿ, ಉಡೆದೊಗಲು, ಚಿನ್ನದ ಕೈಗತ್ತಿ, ಬೆಳ್ಳಿ ಕೈಗತ್ತಿಗಳನ್ನು ಉಪಯೋಗಿಸುತ್ತಿದ್ದನು ಎಂಬುದು ತಿಳಿದು ಬರುತ್ತದೆ. ಚಿನ್ನದ ಈಚಲ ಮರವನ್ನು ಪೂಜಿಸುವ ಪದ್ಧತಿ ಈಡಿಗರ ಕೆಲವು ಕುಟುಂಬಗಳಲ್ಲಿ ರೂಢಿಯಲ್ಲಿದೆ. ಈಚಲು ಮರದ ಬಗೆಗೆ ಈ ವಂಶದ ಮೂಲದ ಕಥೆಗಳು ಈ ರೀತಿ ಹೇಳಿದ್ದಾರೆ. ಪಾರ್ವತಿ ಪರಮೇಶ್ವರರು ಕಾಡಿನಲ್ಲಿ ಹೋಗುತ್ತಿರುವಾಗ ಪಾರ್ವತಿಗೆ ಬಾಯಾರಿಕೆಯಾಯಿತು. ಸುತ್ತಲೂ ನೀರಿಲ್ಲ. ಎದುರಿಗೆ ಒಂದು ಈಚಲ ಮರ ಕಾಣಿಸಿತು. ಅದರಲ್ಲಿರುವ ನೀರೆ ನನ್ನ ದಾಹವನ್ನು ಪರಿಹರಿಸುವಂಥದ್ದು ಎಂದು ಶಿವನಿಗೆ ಹೇಳಿದಳು. ಆ ಸಮಯಕ್ಕೆ ಅಲ್ಲಿಗೆ ಬಂದ ಬಳೆಗಾರ ಬಣಜಿಗನಿಗೆ ತನ್ನ ತ್ರಿಶೂಲವನ್ನು ಕೊಟ್ಟು ಅದರಿಂದ ಈಚಲು ಮರದ ರಸ ತೆಗೆಯಲು ಶಿವ ಹೇಳಿದನು. ಶಿವನ ಮಾತಿನಂತೆ ತನ್ನ ಬಳೆ ಮಲ್ಲಾರವನ್ನು ಈಚಲ ಮರಕ್ಕೆ ತೂಗು ಹಾಕಿ ತಾನು ಧರಿಸಿರುವ ಶಿವಹಾರವನ್ನೇ ಕಾಲಿಗೆ ಒತ್ತಾಗೆ ಮಾಡಿಕೊಂಡು ಮರವನ್ನು ಹತ್ತಿ ತ್ರಿಶೂಲದಿಂದ ರಸವನ್ನು ತೆಗೆದು ತನ್ನ ಕೊರಳಲಿದ್ದ ಕರಡಿಗೆಯಲ್ಲಿ ತುಂಬಿಕೊಂಡು ಬಂದು ಶಿವ ಪಾರ್ವತಿಯರಿಗೆ ಅರ್ಪಿಸಿದನು. ಅದನ್ನು ಕೂಡಿದ ಶಿವಪಾರ್ವತಿಯರು ಸಂತೃಪ್ತರಾಗಿ ಇನ್ನೂ ಮುಂದೆ ನೀನು ಬಳೆಮಾರುವ ಕೆಲಸವನ್ನು ಬಿಟ್ಟು ಈಚಲು ಮರದ ರಸ ಇಳಿಸುವ ಕೆಲಸವನ್ನು ಮಾಡಿಕೊಂಡು ಸುಖವಾಗಿರು ಎಂದು ಬಳೆಗಾರ ಶೆಟ್ಟಿಗೆ ಹೇಳಿದರು. ಅಂದಿನಿಂದ ಆತ ತನ್ನ ಉದ್ಯೋಗವನ್ನು ಬದಲಿಸಿಕೊಂಡು ಈರ್ಶಿ ಎಂಬ ಹೆಸರು ಪಡೆದನಂತೆ.

ದೇವತೆಗಳು ಸಮುದ್ರ ಮಂಥನ ಮಾಡುವಾಗ ಅವರಿಗಾದ ದಾಹವನ್ನು ಪರಿಹರಿಸಿಕೊಳ್ಳಲು ತನ್ನ ಭಕ್ತರಾದ ಕಾಂಡಿನ್ನ ಮತ್ತು ಕಾರುಣ್ಯವೆಂಬ ಋಷಿಗಳಿಗೆ ಈಚಲ ಮರದ ರಸ ತೆಗೆಯಲು ಶಿವ ಆಜ್ಞೆ ಮಾಡಿದನಂತೆ. ಆಗ ಸ್ವತಃ ಪಾರ್ವತಿಯೇ ಈಚಲು ಮರದಿಂದ ರಸ ಸುರೂಪಿಗಳಂತೆ. ಸುರಿದ ರಸವನ್ನೆಲ್ಲಾ ಇಬ್ಬರು ಋಷಿಗಳು ಸಂಗ್ರಹಿಸಿ ಶಿವನಿಗೆ ಒಪ್ಪಿಸಿದರು. ಶಿವ ಅದನ್ನು ಎಲ್ಲ ದೇವತೆಗಳಿಗೂ ಹಂಚಿದನು. ಬೇವಿನ ಸಿಪ್ಪೆಯಲ್ಲಿ ಎಲ್ಲರೂ ರಸವನ್ನು ಕುಡಿದರು. ಆ ಮೇಲೆ ಋಷಿಗಳಿಬ್ಬರೇ ದೇವತೆಗಳಿಗೆ ಹೆಂಡ ಸರಬರಾಜು ಮಾಡುವ ಕೆಲಸ ಒಪ್ಪಿಕೊಂಡಾಗ ಅವರಿಗೆ ದುರಾಸೆಯುಂಟಾಗಿ ಈಚಲ ಮರದ ರಸಕ್ಕೆ ದಿವ್ಯಾ ರಸವನ್ನು ಬೆರೆಸಿದರಂತೆ. ಅಲ್ಲದೇ ಕೀಳು ಜಾತಿಯವರಿಗೆ ಕುಡಿಯಲು ಸೊಂಪಿಯನ್ನು ಕೊಟ್ಟರು. ಇದನ್ನು ಗಮನಿಸಿದ ದೇವತೆಗಳು ಆ ಋಷಿಗಳಿಗೆ ಭೂಲೋಕದಲ್ಲಿ ಹುಟ್ಟುವಂತೆ ಶಾಪಕೊಟ್ಟರು ಇದು ಈಡಿಗ ಜನಾಂಗದ ಒಂದು ಕಥೆಯೆಂದು ತಿಳಿದುಬರುತ್ತದೆ.[೪೩]

ಔದಂಬರ ವೃಕ್ಷದ ಕುರಿತು ಐತಿಹ್ಯ:-

ವೃಕ್ಷದ ಕುರಿತು ನಮ್ಮಲ್ಲಿ ಸಾಕಷ್ಟು ಐತಿಹ್ಯಗಳು ಪ್ರಚಲಿತದಲ್ಲಿವೆ. ಕೆಲವೊಂದು ಮರಗಳು ಅನೇಕ ಕಾರಣಗಳಿಂದ ಅಳಿದು ಹೋಗಿ ಅವುಗಳ ಮೂಲ ಐತಿಹ್ಯವನ್ನ ಅದರ ಜೊತೆ ನಶಿಸಿ ಹೋಗಿವೆ. ಅಂಥವುಗಳಲ್ಲಿ ಕೆಲವು ವೃಕ್ಷದ ಕುರಿತು

ಐತಿಹ್ಯಗಳು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ. ಗುಲಬರ್ಗಾ ಜಿಲ್ಲೆಯ ಗಾಣಗಾಪುರ ಗ್ರಾಮದ ಸಂಗಮ ಸ್ಥಳದಲ್ಲಿ ಪೌರಾಣಿಕ ಐತಿಹ್ಯಗಳು ಹೆಚ್ಚಾಗಿ ದೊರೆಯುತ್ತವೆ. ಸಂಗಮದಲ್ಲಿ ದತ್ತ ಮಂದಿರದ ಎದುರುಗಡೆ ಔದಂಬರವಿದೆ. ನರಹರಿ ಹೆಸರಿನ ಭಕ್ತನಿಗೆ ಕುಷ್ಠರೋಗವಿತ್ತು. ಮಹಾರಾಜರು ಅವನಿಗೆ ನಿತ್ಯ ಶುಷ್ಕ ಕುಷ್ಠ ಔದಂಬರಕ್ಕೆ ನೀರು ಹಾಕಿ ಪೋಷಿಸಲು ಹೇಳಿದರು. ಕೆಲವಾರು ದಿನಗಳು ಉರುಳಿದ ಮೇಲೆ ಆತನ ದೃಡ ಭಕ್ತಿಯನ್ನು ನೋಡಿ ಪ್ರಸನ್ನರಾಗಿ ತಮ್ಮ ಕಮಂಡಲದಲ್ಲಿ ನೀರನ್ನ ಸಿಂಪಡಿಸಿದರು. ಆಗ ನರಹರಿಯು ಕುಷ್ಠರೋಗದಿಂದ ಪಾರಾದನು. ಮೊದಲಿನ ಔದಂಬರ ವೃಕ್ಷವು ೧೯೧೪ರ ಮಹಾಪುರದಲ್ಲಿ ಸಿಕ್ಕು ಹರಿದುಹೋಯಿತು. ಈಗ ಅದೇ ಸ್ಥಳದಲ್ಲಿ ಬೇರೊಂದು ವೃಕ್ಷವನ್ನು ಪಾದುಕೆಗಳನ್ನ ಸ್ಥಾಪಿಸಿದ್ದಾರೆ. ನರಹರಿಯು ಕುಷ್ಠರೋಗದಿಂದ ಬಳಲುತ್ತಿದ್ದಾಗ ಮಹಾರಾಜರು ಉಪಾಯ ಸೂಚಿಸಿ, ಅದರಿಂದ ಮುಕ್ತಿಗೊಳಿಸಿದನು.[೪೪]

೩.೫. ಪ್ರಾಣಿ ಸಂಬಂಧಿ ಐತಿಹ್ಯಗಳು:-

ಮಂಗನಿಂದ ಮಾನವ ಎನ್ನುವ ನಾಣ್ಣುಡಿಯು ಮಾನವ ಜನ್ಮವೆತ್ತುವ ಮುಂಚೆ ಪ್ರಾಣಿಯಾಗಿದ್ದನೆಂಬ ಜನಪದರ ನಂಬಿಕೆಯ ಪ್ರತೀಕವಾಗಿದೆ. ಪ್ರಾಣಿಗಳ ಬಗೆಗಿರುವ ಇಂಥ ನಂಬಿಕೆಗೆ ಆತನು ಆ ಪ್ರಾಣಿಗಳೊಂದಿಗೆ ಹೊಂದಿರುವ ಸಂಬಂಧವೇ ಕಾರಣವಾಗಿದೆ. ತನ್ನಲ್ಲಿರುವ ಗುಣ, ಸ್ವಭಾವಗಳು ಪ್ರಾಣಿ ಪಕ್ಷಿಗಳಲ್ಲಿಯೂ ಕೂಡ ಇರುವುದನ್ನು ಮಾನವ ಗುರುತಿಸಿದ ಪರಿಣಾಮವಾಗಿ ಈ ಸಂಬಂಧ ಸಾಧ್ಯವಾಗಿರಬಹುದು. ಈ ಪ್ರಾಣಿ, ಪಕ್ಷಿಗಳು ಪ್ರಕೃತಿಯ ವಿಸ್ಮಯಗಳನ್ನು ಗ್ರಹಿಸಿಕೊಂಡು ಮುಂದೆ ಒದಗಬಹುದಾದ ಅಪಾಯಗಳ ವಿರುದ್ಧ ಮಾನವನನ್ನು ಎಚ್ಚರಿಸುತ್ತವೆ. ಅಲ್ಲದೇ ಆತನ ಜೀವನ ನಿರ್ವಹಣೆಗೆ ಹಲವು ರೀತಿಯಲ್ಲಿ ಸಹಕಾರಿಯಾಗಿವೆ ಹೀಗಾಗಿ ಇಂತಹ ಪ್ರಾಣಿಪಕ್ಷಿಗಳ ಅಸಾಮಾನ್ಯ ಕಾರ್ಯ ಚಟುವಟಿಕೆಗಳನ್ನು ನೋಡಿದ, ಕೇಳಿದ ಜನಪದರು ಐತಿಹ್ಯಗಳಲ್ಲಿ ಹಿಡಿದಿಟ್ಟಿದ್ದಾರೆ.

ಪ್ರಾಣಿಗಳ ಬಗೆಗಿರುವ ನಂಬಿಕೆಗಳೆ ಇಂಥ ಐತಿಹ್ಯಗಳು ಹುಟ್ಟಲು ಕಾರಣವಾಗಿರುತ್ತವೆ. ಈ ಐತಿಹ್ಯಗಳ ಮೂಲ ಉದ್ದೇಶ ಪ್ರಾಣಿ-ಪಕ್ಷಿಗಳಲ್ಲಿರುವ ಮಾನವ ಸ್ವಭಾವ ಮತ್ತು ಪರೋಪಕಾರವನ್ನು ಎತ್ತಿ ತೋರಿಸುವುದಾಗಿದೆ. ಆ ಮೂಲಕ ಐತಿಹ್ಯಗಳು ಪ್ರಾಣಿಗಳಿಗೆ ಅಥವಾ ಅವುಗಳ ಸ್ಮಾರಕಗಳಿಗೆ ಸಮಾಜದಲ್ಲಿ ಪೂಜ್ಯನೀಯತೆಯನ್ನು ತಂದುಕೊಡುತ್ತವೆ. ಜೊತೆಗೆ ಮಾನವ ಪ್ರಾಣಿದಯೆಯನ್ನು ಧ್ವನಿಸುತ್ತವೆ.

ನಂದಿಗೆ(ಬಸವ) ಸಂಬಂಧಿಸಿದ ಐತಿಹ್ಯ:-

ಪ್ರಾಣಿಗಳ ಕುರಿತು ನಮ್ಮಲ್ಲಿ ಸಾಕಷ್ಟು ಐತಿಹ್ಯಗಳು ಬಳಕೆಗೊಂಡಿವೆ. ನಂದಿಗೆ ಸಂಬಂಧಿಸಿದ ಐತಿಹ್ಯ ಒಂದು ಈ ರೀತಿಯಾಗಿದೆ. ಶಿವನ ವಾಹನವಾದ ನಂದಿ ಶಿವಗಣಗಳಲ್ಲಿ ಅತ್ಯಂತ ಪ್ರಮುಖನಾದವನು. ಈ ಕಾರಣದಿಂದ ಶಿವಭಕ್ತರಿಗೆ ಎತ್ತು ಪೂಜನೀಯ ಪ್ರಾಣಿ. ಶಿವಾಲಯ ಇರುವಡೆಯಲ್ಲೆಲ್ಲಾ ನಂದಿ ವಿಗ್ರಹವನ್ನು ಇಂದಿಗೂ ಕಾಣುತ್ತೇವೆ. ಜನಪದರಲ್ಲಿ ಎತ್ತು ವ್ಯವಸಾಯಗಾರನ ಒಡನಾಡಿಯಾಗಿ, ರೈತನ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತದೆ. ಶಿವನ ಶಾಪದಿಂದ ನಂದಿ ಭೂಮಿಗೆ ಬಂದು ನೆಲ ಊಳುವ ಕಾಯಕದಲ್ಲಿ ನಿರತನಾದನೆಂದು ಜನಪದರ ನಂಬಿಕೆ. ಅದೇ ಸಂದರ್ಭದಲ್ಲಿ ನೇಗಿಲು ಹೊತ್ತ ಎತ್ತಿನ ಹೆಗಲು ನೋಯುವುದನ್ನು ಕಂಡು ಕನಿಕರಗೊಂಡ ಶಿವ ಹಂದಿ (ವರಾಹ)ಯ ಮೂಲಕ ವಜ್ರೌಷದ ಕಳುಹಿಸಲು, ಹಂದಿ ತನ್ನ ಮೂತಿಗೆ ಬಳಿದುಕೊಂಡು ತನ್ನ ಮುಸುಡಿಯನ್ನು ಗಟ್ಟಿಮಾಡಿಕೊಂಡಿತು. ಆದ್ದರಿಂದ ಎಂಥ ತಗ್ಗು, ತಡಿಯನ್ನೆ ಇರಲಿ ಅದನ್ನ ಅಗೆಯುವ ಶಕ್ತಿ ಪಡೆದಿರುವುದು ಕಾಣುತ್ತೇವೆ. ನಂದಿಯು ತುಂಬಾ ಸಾದು ಪ್ರಾಣಿಯಾಗಿದೆ ಅಫಜಲಪೂರ ತಾಲೂಕಿನ ಅತನೂರ

ಗ್ರಾಮದಲ್ಲಿ ಭವ್ಯವಾದ ಎರಡು ನಂದಿ ದೇವಸ್ಥಾನಗಳಿವೆ.ಕಲ್ಲಿನ ವಿಗ್ರಹವಾಗಿದ್ದರೂ ಅವು ಜೋಳದ ಕಣಕಿ ತಿಂದಿರುವುದು ಇದೊಂದು ಪವಾಡವಾಗಿ ಜನಪ್ರಿಯತೆ ಪಡೆದಿದೆ.

ಜಿಂಕೆಗೆ ಸಂಬಂಧಿಸಿದ ಐತಿಹ್ಯ:-

ಬ್ರಹ್ಮನು ಒಂದು ದಿವಸ ಮತ್ತೇರಿಸುವ ಸೋಮರಸವನ್ನು ತನ್ನ ದೇಹಕ್ಕೆ ಅಳತೆ ಮೀರಿ ಸ್ವೀಕರಿಸಿದನಂತೆ. ಎದುರಿನವರು ಯಾರೆಂಬುದು ಅರಿತುಕೊಳ್ಳುವ ಶಕ್ತಿ ಕುಂದಿಹೋಗಿತ್ತು. ಆ ಸಂದರ್ಭದಲ್ಲಿ ಅಮಲೇರಿದ ಮೇಲೆ ಮಗಳನ್ನೇ ಮೋಹಿಸಿದನಂತೆ. ಪವಿತ್ರಾತ್ಮಳಾದ ಆ ಹುಡುಗಿಯು ಕೂಡಲೇ ಜಿಂಕೆಯಾಗಿ ತನ್ನ ರೂಪವನ್ನ ಪಡೆದು ಆ ಸ್ಥಳದಿಂದ ಓಡಿಹೋದಳಂತೆ, ಮರುಳುಗೊಂಡಿದ್ದ ಬ್ರಹ್ಮನು ಗಂಡು ಜಿಂಕೆಯ ರೂಪಧರಿಸಿ ಅವಳನ್ನು ಹಿಂಬಾಲಿಸಿದನಂತೆ.

ಪರಮೇಶ್ವರ ಅಪೂರ್ವ ಪ್ರೇಮದೃಶ್ಯವನ್ನು ಗಮನಿಸಿದನಂತೆ. ಗಂಡು ಜಿಂಕೆಯು ಹೆಣ್ಣು ಜಿಂಕೆಗೆ ತೀರಾ ಹತ್ತಿರವಾದಾಗ ಶಿವನು ಬಾಣ ಪ್ರಯೋಗ ಮಾಡಿದನು. ಗಂಡು ಜಿಂಕೆಯು ತಲೆ ಕತ್ತರಿಸಿ ಕೆಳಗೆ ಬಿದ್ದಿತು. ಬಾಣವು ಆಕಾಶದಲ್ಲೇ ಆರನೇ ಚಂದ್ರ ನಿವಾಸದಲ್ಲಿ ನಿಂತಿತು. ಮೃಗಶಿರ ಎಂದು ಕರೆಯಲ್ಪಡುವ ಐದನೇ ಚಂದ್ರ ನಿವಾಸದಲ್ಲಿ ಗಂಡು ಜಿಂಕೆಯು ತಲೆ ಎತ್ತಿ ನಿಂತಿತು. ಅನಂತರ ಬ್ರಹ್ಮ ಮತ್ತು ಸಂಧ್ಯಾ ಶಿವನಿಗೆ ಗೌರವಾರ್ಪಣೆ ಮಾಡಿ ತಮ್ಮ ವಾಸಸ್ಥಾನಕ್ಕೆ ತೆರಳಿದರಂತೆ. ಜಿಂಕೆಗೆ ಹುಟ್ಟಿದನೆಂದು ಹೇಳಲಾದ ಋಷ್ಯಶೃಂಗ ತನ್ನ ಹಣೆಯ ಮೇಲೆ ಚಿಕ್ಕ ಕೊಂಬುಗಳನ್ನು ಇರುವುದು ಕಾಣಬಹುದಾಗಿದೆ.

ಕುರಿಗಳ ಜನನದ ಕುರಿತು ಐತಿಹ್ಯ:-

ಪ್ರಾಣಿಗಳಲ್ಲೇ ಅತಿ ಸಾದು ಪ್ರಾಣಿ ಕುರಿಗಳು ಇವು ಹೇಗೆ ಹುಟ್ಟಿದವು, ಭೂಮಿಗೆ ಯಾವ ಮಾಯದಿಂದ ಬಂದವು, ಆದಿ ಪುರುಷರಾದ ಪದ್ಮಗೊಂಡ ಮತ್ತು ಬೀರದೇವರಿಗೆ ಅವುಗಳ ಸಾಕಣೆಯ ವೃತ್ತಿ ಹೇಗೆ ಬಂದಿತು ಎಂಬುದಕ್ಕೆ ಹಾಲಮತದಲ್ಲಿ ವಿವರಣೆ ದೊರೆಯುತ್ತದೆ. ಕೈಲಾಸದಲ್ಲೊಮ್ಮೆ ಶಿವ-ಪಾರ್ವತಿಯರು ಜೊತೆಯಾಗಿ ಕುಳಿತಿರುವಾಗ ಭೃಂಗೀಶನು ಬಂದು ನಿಂತು ಒಂದೇ ಕೈಯಿಂದ ವಂದಿಸಿದನು. ಪಾರ್ವತಿಯು ತಾವು ಇಬ್ಬರಿದ್ದಾಗ ಜೋಡು ಕೈಯಿಂದ ಏಕೆ ನಮಸ್ಕರಿಸಲಿಲ್ಲ ಎಂದು ಕೇಳಿದಳು. ಆದಕ್ಕೆ ಭೃಂಗೀಶನು 'ಶಿವನೊಬ್ಬನೆ ದೈವ, ಉಳಿದ ಜಡೆದೇವಿಯರೆಲ್ಲ ತನಗೆ ಲೆಕ್ಕವಿಲ್ಲ; ಮೊಡವಿಗೆ ಒಬ್ಬನೇ ಆದ ಶಿವನಿಗೆ ಮಾತ್ರ ವಂದನೆ ಅರ್ಪಿಸಿದೆ' ಎಂದು ಉತ್ತರಿಸುವನು. ಈ ಮಾತಿನಿಂದ ಪಾರ್ವತಿ ಈರ್ಷೆಗೊಳ್ಳುವಳು.

ಪಾರ್ವತಿ ಪರಿಪರಿಯಿಂದ ಪೀಡನೆಗೊಳಪಡಿಸಿ ಭೃಂಗೀಶನ ಸತ್ವಪರೀಕ್ಷೆ ಮಾಡುವಳು. ಆದರೆ ಪಾರ್ವತಿಗೆ ಅಪಜಯವಾಗುವುದು. ದೇವತೆಗಳೆಲ್ಲ ಪಾರ್ವತಿಯ ಸೋಲನ್ನು ಕಂಡು ನಗುವರು. ಕುಪಿತಳಾದ ದೇವಿ ಅವರಿಗೆಲ್ಲ ಕುಜನ್ಮದ ಶಾಪ ಹಾಕುವಳು. ಈ ಶಾಪಗ್ರಸ್ತ ದೇವತೆಗಳೇ ಕುರಿಗಳೆಂದು ಒಂದು ಅವತಾರ ಹೇಳಿದರೆ, ಇನ್ನೊಂದು ಅವತಾರ ಪರಮಶಿವಸ್ವರೂಪಿಯಾದ ರೇವಣಸಿದ್ಧನು ಕುರಿಗಳ ಹುಟ್ಟಿಗೆ ಕಾರಣ ಮಾಡಿ ಕಥೆ ಹೆಣೆಯುತ್ತದೆ; ಕೊಲ್ಲಾಪೂರದಲ್ಲಿದ್ದ ಮಾಯೆಯ ಮನೆಯಲ್ಲಿ ಎಲೆಕೋಟಿಸಿದ್ಧರು, ಅವಳು ಲೋಹದಿಂದ ಇಕ್ಕಿದ ವಿಷವನ್ನುಂಡು, ದಾಸರಾಗಿದ್ದರು. ರೇವಣಸಿದ್ಧರೂಪಿ ಶಿವನು ಆ ಮಾಯೆಯನ್ನು ಪರಾಭವಗೊಳಿಸಿ, ಅವಳ ಶಕ್ತಿ ಹರಣ ಮಾಡಿದನು. ಆದರೆ ಮೂಡತನದಿಂದ ಮಾಯೆಯ ವಿಷವುಂಡು ದಾಸರಾಗಿದ್ದ ನವಕೋಟಿ ಸಿದ್ಧರನ್ನು ಕುರಿಗಳಾಗಿರೆಂದು ಶಪಿಸಿದನು. ಅವರೇ ಕುರಿಗಳಾದರು.

ಕುರಿಗಳು ಭೂಲೋಕಕ್ಕೆ ಬಂದು ಕುರುಬ ಜನಾಂಗಕ್ಕೆ ಸಂಪತ್ತಾಗಿ ದೊರಕಿದ ವೃತ್ತಾಂತವೂ ಕಲ್ಪನಾರಮ್ಯ ಹಾಗೂ ಪೌರಾಣಿಕ ಮಾದರಿಯಲ್ಲಿ ನಿರೂಪಿತವಾಗಿದೆ. ಮೂಲತಃ ಸ್ವರ್ಗದಲ್ಲಿ ಹುಟ್ಟಿದ ಕುರಿಗಳನ್ನು ದೇವ ದೇವತೆಗಳು ಶಿವ-

ಪಾರ್ವತಿಯರನ್ನೊಳಗೊಂಡು ಸರದಿಯ ಮೇಲೆ ಕಾಯುತ್ತಿದ್ದರು. ಶಿವನು ಅವನ್ನು ಭೂಲೋಕಕ್ಕೆ ತಂದು ನೆಲಸಲು ಉದ್ದೇಶಿಸಿದನು. ಗುರುರೇವಣಸಿದ್ದನ ರೂಪದಲ್ಲಿ ಭೂಮಿಗೆ ಅವತರಿಸಿ ಒಕ್ಕಲಿಗನಾದ ಆದಿಗೊಂಡನಲ್ಲಿಗೆ ಹೋಗಿ ಆತನ ಭೂಮಿಯಲ್ಲಿ ಆಯ್ದುಮೊಳದಾನ ಬೇಡುವನು.

ಆದಿಗೊಂಡನು 'ಎಲ್ಲ ನಿನ್ನದೇ ಇದ್ದಾಗ ನಾನು ಕೊಡುವುದೇನಿದೆ' ಎಂದು ವಿನಯಪೂರ್ವಕವಾಗಿ ಐದು ಮೊಳ ಭೂಮಿಯನ್ನು ದಾನ ನೀಡುವನು. ದಾನಕೊಟ್ಟ ಭೂಮಿಯಲ್ಲಿ ಶಿವನು ತ್ರಿಶೂಲ ನೆಡಲು ಒಂದು ಗವಿಯುಂಟಾಗುವುದು. ಆ ಗವಿಯಲ್ಲಿ ಕುರಿಹಿಂಡು ಹೊಗಿಸಿ ಬಾಗಿಲಿಗೆ ಮುಳ್ಳು ಕಂಟಿಯನ್ನು ಈಡು ಇಡುವನು. ಬಾಗಿಲಿಗೆ ಪಾರ್ವತಿ ತನ್ನ ಮೂಗಿನ ಮುತ್ತನ್ನು ಕೀಲಿಯಾಗಿ ಇಡುವಳು. ಗವಿಯ ಮೇಲೆ ಹುತ್ತು ಬೆಳೆಯುವುದು. ಪಾರ್ವತಿಯ ಮೂಗಿನ ಮುತ್ತಿನಿಂದ ಹುತ್ತಿನ ಮೇಲೆ ಮುತ್ತುಗಮರ ಬೆಳೆಯುವುದು. ಮುತ್ತುಗ ಹುಟ್ಟಿದ್ದ ಈ ಪ್ರಕಾರ ಹಾಗೂ ಅಂದಿನಿಂದ ಈ ವಿವರಣೆ ದೊರೆಯುತ್ತದೆ.

ಆ ಕುರಿಗಳು ಅಡಗಿದ ಹುತ್ತವಿರುವ ಭೂಮಿಯು ಕುರುಬರ ಮೂಲ ಪುರುಷನಾದ ಆದಿಗೊಂಡನೆಂಬಾತನಿಗೆ ಸೇರಿದ್ದಿತು. ಈತನಿಗೆ ಶಿವಾಂಶ-ಸಂಭೂತನಾದ 'ಉಂಡಾಡು ಪದ್ಮಣ್ಣ' (ಪದ್ಮಗೊಂಡ), ಎಂಬೊಬ್ಬ ಕಿರಿಮಗನಿದ್ದನು. ಇವನು ತನ್ನ ನಾಲ್ಕು ಜನ ಅಣ್ಣಂದಿರಂತೆ ಹೊರಗಡೆ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ತಮ್ಮ ಸಂಗಡ ಕಳುಹಿಸಬೇಕೆಂದೂ, ಇಲ್ಲವಾದರೆ ತಾವು ಹೋಗುವುದಿಲ್ಲವೆಂದೂ ಹಟ ಹಿಡಿದರು. ವಿಧಿಯಿಲ್ಲದೆ ತಂದೆ ಮರುದಿನ ಮುಂಜಾನೆ ಪದ್ಮಣ್ಣನ್ನು ಮುದ್ದಿಸಿ ಅಣ್ಣಂದಿರೊಡನೆ ಹೊಲಗದ್ದೆಯ ಕೆಲಸಕ್ಕೆ ಕಳುಹಿಸಿದನು. ಪದ್ಮಗೊಂಡನಿಗೆ ಆರಂಭದ ಓನಾಮ ಗೊತ್ತಿಲ್ಲದ್ದರಿಂದ ಸಮೀಪದ ಹೊಲದಲ್ಲಿದ್ದ ಹುತ್ತವನ್ನು ಅಗೆದು ಸಮಮಾಡುವಂತೆ ಹೇಳಿ ಕಳುಹಿಸಿಕೊಟ್ಟರು. ದೇವತೆಗಳು ಕುರಿಗಳಾಗಿ ಅಡಗಿರುವ ಹುತ್ತ ಇದೇ ಎಂದು ಅವರಾರಿಗೊತ್ತಿಲ್ಲ. ಪದ್ಮಗೊಂಡ ಇದೊಂದು ವಿನೋದದ ಆಟವೆಂಬಂತೆ ಹುತ್ತವನ್ನು ಅಗೆಯುತ್ತಿರುವಾಗ ಆದರ ಬಾಯಿಗೆ ಮುಚ್ಚಿದ್ದ ಕಲ್ಲ ಚಪ್ಪಡಿಯು ಪಕ್ಕಕ್ಕೆ ಸರಿದು ಅದರೊಳಗಿನಿಂದ ಆರು ಬಣ್ಣದ ಕುರಿಗಳು ತೂರಿ ಬಂದವು. ಪದ್ಮಣ ದಿಗ್ಭ್ರಾಂತನಾಗಿ ಕಾಡಿನ ಕಡೆಗೆ ಓಡಿದನು. ಕುರಿಗಳು ಅವನನ್ನೇ ಹಿಂಬಾಲಿಸಿದವು. ಆಗ ಪದ್ಮಣ್ಣ ಸಾಕಾಗಿ ಒಂದು ಕಡೆ ನಿಂತುಬಿಟ್ಟನು. ಆ ಕುರಿಗಳೂ ಅವನನ್ನು ಸುತ್ತುಗಟ್ಟಿ ನಿಂತುಕೊಂಡು 'ನಮ್ಮನ್ನು ರಕ್ಷಿಸು' ಎಂದು ಸೂಚಿಸುವಂತೆ ಅವನನ್ನೇ ನೋಡುತ್ತಾ ಅರಚುತ್ತಿದ್ದವು. ಆಗ ಪದ್ಮಣ್ಣ ಏನು ಮಾಡಲೂ ತೋಚದೆ ಪರಮೇಶ್ವರನನ್ನು ಪ್ರಾರ್ಥಿಸಿದನು. ಆಗ ಪರಮೇಶನು (ಬೀರೇಶ) ಪ್ರತ್ಯಕ್ಷನಾಗಿ ಭೃಂಗಿಯ ಶಾಪದಿಂದ ದೇವತೆಗಳೇ ಕುರಿಗಳಾಗಿರುವರೆಂದೂ, ಅವರನ್ನು ಕಾಪಾಡುವುದಕ್ಕಾಗಿಯೇ ನನ್ನ ಅಂಶದಿಂದ ನೀನು ಹುಟ್ಟಿರುವೆಯೆಂದೂ, ಸುಖವಾಗಿ ಬಾಳೆಂದೂ ಹರಸಿ ಅಂತರ್ಧಾನಿಯಾದನು.

ಹೀಗೆ ಕುರಿಗಳನ್ನು ಮೇಯಿಸುತ್ತಿದ್ದಾಗ ದೂರದಿಂದ ಹೊಗೆ ಬರುತ್ತಿರುವುದನ್ನು ಕಂಡು ಕುತೂಹಲಭರಿತನಾಗಿ ಅಲ್ಲಿ ಹೋಗಿ ನೋಡಿದಾಗ ಗುಹೆಯಲ್ಲಿ ಒಬ್ಬ ಸುಂದರ ಕನ್ಯೆ ಇದ್ದಳು. ಒಬ್ಬ ರಾಕ್ಷಸ ಅಪಹರಿಸಿಕೊಂಡು ಬಂದಿದ್ದಾನೆಂದೂ, ಬಂಧನದಿಂದ ಬಿಡಿಸಿ ನನ್ನನ್ನು ವಿವಾಹವಾಗೆಂದೂ ಅವಳು ಗೋಗರೆಯುತ್ತಾಳೆ. ಆಗ ಪದ್ಮಣ್ಣ ತನ್ನ ಇಷ್ಟ ದೈವವಾದ ಬೀರೇಶ್ವರನನ್ನು ಧ್ಯಾನಿಸುತ್ತಾನೆ. ಪಾರ್ವತಿ ಪರಮೇಶ್ವರರು ಪ್ರತ್ಯಕ್ಷರಾಗಿ ಅವರಿಬ್ಬರಿಗೂ ಮದುವೆ ಮಾಡಿದರು. ವಿವಾಹ ಕಾಲದಲ್ಲಿ ಕುರಿಯ ಉಣ್ಣೆಯಿಂದ ದಾರ ಮಾಡಿ ಪಾರ್ವತಿಯ ಕೊರಳಲ್ಲಿದ್ದ ಅರಿಶಿಣವನ್ನು ಅದಕ್ಕೆ ಹಚ್ಚಿ ಕಂಕಣ ಕಟ್ಟಿದರು. ಅಂದಿನಿಂದ ಪದ್ಮಣ್ಣನ ವಂಶದವರಿಗೆ 'ಹತ್ತಿ ಕಂಕಣ'ದವರೆಂದೂ ಹೆಸರಾಗಿ ಎರಡು ಪಂಗಡಗಳಾದವು.

ವರಾಹ (ಹಂದಿ) ಕುರಿತ ಐತಿಹ್ಯ:-

ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದು. ಈ ಅವತಾರದ ಅವಶ್ಯಕತೆಯ ಬಗ್ಗೆ ಐತಿಹ್ಯಗಳು ಈ ರೀತಿ ಹೇಳುತ್ತವೆ. ಒಮ್ಮೆ ಮಹಾ ವಿಷ್ಣುವನ್ನು ಕಾಣಲು ಹೋದ ಸನಕ ಮತ್ತು ಇತರ ಮುನಿಗಳನ್ನು, ವಿಷ್ಣುವಿನ ದ್ವಾರಪಾಲಕರಾದ ಜಯ ವಿಜಯರು ಅಗೌರವದಿಂದ ಕಂಡರು. ಆ ಮುನಿಗಳು ಜಯ ವಿಜಯರನ್ನು 'ಅಸುರರಾಗಿ ಹುಟ್ಟಿರಿ' ಎಂದು ಶಪಿಸಿದನಂತೆ. ಅದರಂತೆ ಜಯ ವಿಜಯರು ಕಶ್ಯಪ ಪ್ರಜಾಪತಿಗೆ ಅವನ ಹೆಂಡತಿಯಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಅಸುರರಾಗಿ ಹುಟ್ಟಿದರು.

ಅವರ ಹುಟ್ಟೆ ಒಂದು ರೀತಿ ಅಮಂಗಳಕರವಾಗಿತ್ತು. ಒಮ್ಮೆ ಕಶ್ಯಪನು ತನ್ನ ಸಂಧ್ಯಾ ಕರ್ಮಗಳನ್ನು ಮುಂದುವರಿಸುತ್ತಿರುವಾಗ, ಕಾಮೋದ್ರೇಕದಿಂದ ಮನೋವಿಕಾರಕ್ಕೆ ಒಳಗಾಗಿ ಕಶ್ಯಪನನ್ನು ಅಪ್ಪಿಕೊಂಡಳು. ಯಾರು ಅಪ್ಪಿಕೊಂಡಿದ್ದು? ಆ ಮಂಗಳಕರವಾದ ಸಂದರ್ಭದಲ್ಲಿ ಆಕೆ ಗರ್ಭಿಣಿಯಾದುದರಿಂದ ಇಬ್ಬರು ಅಸುರರು ಹುಟ್ಟಿದರು. ಅವರು ಹುಟ್ಟಿದಾಗ ಪ್ರಪಂಚವನ್ನೆಲ್ಲಾ ಕತ್ತಲು ಆವರಿಸಿ, ಎಲ್ಲೆಲ್ಲೂ ಕೆಟ್ಟ ಶಕುನಗಳಾದವು. ದೇವತೆಗಳೆಲ್ಲಾ ನಡುಗಿದರು ಹಿರಣ್ಯಾಕ್ಷನು ಹಿರಿಯವನು. ಹಿರಣ್ಯಕಶಿಪು ಕಿರಿಯವನು. ಹಿರಣ್ಯಾಕ್ಷನು ಬೆಳೆದು ದೊಡ್ಡವನಾದ ಮೇಲೆ ದೇವತೆಗಳೊಡನೆ ಕಲಹಕ್ಕಿಳಿದನು. ಯುದ್ಧವು ಭಯಂಕರ ಸ್ವರೂಪಕ್ಕೆ ತಿರುಗಿದಾಗ ಅವನು ಭೂಮಿಯನ್ನು ಕೈಗಳಲ್ಲಿ ಚೆಂಡಿನಂತೆ ಎತ್ತಿಕೊಂಡು ನೀರಿನ ಆಳಕ್ಕೆ ಹೊರಟುಹೋದನು. ಎಲ್ಲೆಲ್ಲೂ ನೀರು ಮಾತ್ರ ಉಳಿಯಿತು. ದೇವತೆಗಳೆಲ್ಲಾ ವಿಷ್ಣುವಿನ ಬಳಿಗೆ ಹೋಗಿ ಭೂಮಿಯನ್ನು ಹಿಂದಕ್ಕೆ ಪಡೆಯಬೇಕೆಂದು ಪ್ರಾರ್ಥಿಸಿದರು.

ಆ ಸಮಯದಲ್ಲಿ ಬ್ರಹ್ಮನ ಮಗನಾದ ಸ್ವಯಂಭುವ ಮನುವು ತನ್ನ ತಂದೆಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದನು. ಮಗನ ಸೇವಾ ಮನೋಭಾವಕ್ಕೆ ಮೆಚ್ಚಿದ ಬ್ರಹ್ಮನು "ಮಗುವೆ ನೀನು ದೇವಿಯನ್ನು ಪೂಜಿಸು. ಆಕೆ ನಿನ್ನ ಭಕ್ತಿಗೆ ಮೆಚ್ಚಿ ಸಂತೋಷಗೊಂಡರೆ ನೀನು ಪ್ರಖ್ಯಾತನಾದ ಪ್ರಜಾಪತಿಯಾಗುವೆ" ಎಂದು ಹೇಳಿದನು. ಸ್ವಯಂಭು ಮನು ದೇವಿಯನ್ನು ಧೀರ್ಘವಾದ ಧ್ಯಾನ, ಭಕ್ತಿ, ತಪ್ಪಸ್ಸುಗಳಿಂದ ಪೂಜಿಸಿದನು. ಸಂತೋಷಗೊಂಡ ಜಗದಂಬೆ ಅವನೆದುರು ಪ್ರತ್ಯಕ್ಷಳಾಗಿ "ಏನು ವರಬೇಕು?" ಎಂದು ಕೇಳಿದಳು. ಆಗ ಮನು "ತಾನು ಯಾವುದೇ ತೊಂದರೆಗಳಿಲ್ಲದೆ ಸೃಷ್ಟಿಕಾರ್ಯವನ್ನು ಮುಂದುವರೆಸಲು ಅಪ್ಪಣೆ ಕೊಡಬೇಕೆಂದು ಕೇಳಿಕೊಂಡನು" ದೇವಿಯು ಅನುಗ್ರಹಿಸಿದಳು. ಮನು ತಂದೆಯ ಬಳಿಗೆ ಹಿಂದಿರುಗಿ "ತಂದೆಯೇ ನನಗೊಂದು ಏಕಾಂತವಾದ ಸ್ಥಳವನ್ನು ತೋರಿಸು. ನಾನು ಅಲ್ಲಿ ಕುಳಿತು ದೇವಿಯ ಅನುಗ್ರಹದಿಂದ ಪ್ರಜೆಗಳನ್ನು ಸೃಷ್ಟಿಸುತ್ತೇನೆ" ಎಂದು ಹೇಳಿದನು. ಬ್ರಹ್ಮನು ತನ್ನ ಮಗನಿಗೆ ಜರೂರಾಗಿ ಅಂಥ ಸ್ಥಾನವನ್ನು ಕೊಡಲು ನಿರ್ಧರಿಸಿದನು. ಬಹಳ ಕಾಲದಿಂದ ಬ್ರಹ್ಮನ ಸೃಷ್ಟಿಕಾರ್ಯದಲ್ಲೂ ಅಲ್ಪ ಸ್ವಲ್ಪ ತೊಂದರೆಯಾಗಿತ್ತು. ಆ ವಿಚಾರದಲ್ಲಿ ಆದಿನಾರಾಯಣನೊಬ್ಬನೇ ಏನಾದರೂ ಮಾಡಬಹುದಾಗಿತ್ತು. ಆದ್ದರಿಂದ ಬ್ರಹ್ಮ, ಮನುಗಳು, ಋಷಿಗಳು ಮತ್ತಿತರರೊಡನೆ ಸೇರಿ ವಿಷ್ಣುವನ್ನು ಕುರಿತು ಧ್ಯಾನಿಸಿದರು.

ಆಗ ಬ್ರಹ್ಮನ ಉಸಿರಿನಿಂದ ಮೂಗಿನ ಮೂಲಕ ಹಂದಿಯ ಮರಿಯೊಂದು ಹೊರಕ್ಕೆ ಬಂದಿತು. ಆ ದಿವ್ಯ ಜೀವಿಯು ಆಕಾಶದಲ್ಲಿ ನಿಂತು ಬೃಹದಾಕಾರವಾಗಿ ಬೆಳೆಯುತ್ತಾ ಹೋಯಿತು. ಮತ್ತಿತರರು ಅದನ್ನು ಆಶ್ಚರ್ಯದಿಂದ ನೋಡುತ್ತಾ ನಿಂತರು. ಆ ಹಂದಿಯು ಜನಲೋಕ, ಸತ್ಯಲೋಕ, ಮುಂತಾದ ಲೋಕಗಳಲ್ಲಿ ವಾಸಿಸುತ್ತಿದ್ದವರಿಗೆ ಆ ಗರ್ಜನೆಯು ಮಹಾವಿಷ್ಣುವಿನದೇ

ಎಂದು ಅರ್ಥವಾಯಿತು. ಅವರೆಲ್ಲಾ ಭಗವಾನನ್ನು ಹೊಗಳಿದರು. ಮಹಾವಿಷ್ಣು ಅವರೆಲ್ಲರ ಹೊಗಳಿಕೆಗಳನ್ನು ಕೇಳಿ, ಜೋರಾಗಿ ಸಮುದ್ರಕ್ಕೆ ಹಾರಿದನು. ಸರ್ವಶಕ್ತನಾದ ಭಗವಂತನ ಉದ್ದವಾದ ಮೊದಲಿನಿಂದಾಗಿ ಸಮುದ್ರ ಅಲ್ಲೋಲಕಲ್ಲೋಲವಾಯಿತು.

ವರುಣ ತನ್ನನ್ನು ಆ ಪ್ರಕ್ಷುಬ್ಧತೆಯಿಂದ ರಕ್ಷಿಸಬೇಕೆಂದು ವಿಷ್ಣುವನ್ನು ಬೇಡಿಕೊಂಡನು. ಆಗ ಭಗವಾನನ್ನು ತನ್ನ ಕೂದಲುಗಳನ್ನು ಮಡಿಸಿಕೊಂಡು ನೀರಿನ ಆಳಕ್ಕೆ ಹೋಗಿ ಭೂಮಿಗಾಗಿ ಹುಡುಕಾಡಿದನು. ಗುಟುರು ಹಾಕುತ್ತಾ, ವಾಸನೆ ಹಿಡಿಯುತ್ತಾ ಅಲೆದಾಡಿ ಕೊನೆಗೆ ಭೂಮಿಯನ್ನು ಹುಡುಕಿದನು. ಅದನ್ನು ಎತ್ತಿ ನಿಧಾನವಾಗಿ ತನ್ನ ದಾಡೆಗಳ ಮೇಲಿರಿಸಿಕೊಂಡು ನೀರಿನ ಮೇಲ್ಭಾಗಕ್ಕೆ ಬಂದನು. ಹೀಗೆ ಬರುತ್ತಿರುವಾಗ ಕ್ರೂರಿಯೂ ದುಷ್ಟನು ಆದ ಹಿರಣಾಕ್ಷ ಮಹಾ ವಿಷ್ಣುವಿಗೆ ತೊಂದರೆ ಕೊಟ್ಟನು. ಮಹಾವಿಷ್ಣು ಅವನ್ನು ನಂದಕ ಎಂಬ ಗದೆಯಿಂದ ಸಂಹರಿಸಿದನು. ಮಹಾವಿಷ್ಣು ನೀರಿನ ಮೇಲ್ಭಾಗಕ್ಕೆ ಬಂದು ಭೂಮಿಯನ್ನು ಮತ್ತೆ ಭದ್ರವಾಗಿ ನೀರಿನ ಮೇಲಿರಿಸಿದನು ಬ್ರಹ್ಮ. ಕಮಲದ ಹೂವಿನಂತೆ ನೀರಿನ ಮೇಲೆ ತೇಲಾಡುತ್ತಿರುವ ಭೂಮಿಯ ಮೇಲೆ ಬಂದು ಸ್ಥಾನವನ್ನು ತೋರಿಸಿ ಸ್ವಯಂಭು ಮನುವಿಗೆ ಸೃಷ್ಟಿಯ ಅಧಿಕಾರವನ್ನು ವಹಿಸಿದನು.

ಭೂಮಿಯ ಮೇಲ್ಭಾಗಕ್ಕೆ ಬಂದ ಭೂದೇವಿಯು ಮಹಾವಿಷ್ಣುವನ್ನು ಪ್ರೇಮಿಸಿ ಅಲಂಗಿಸಿಕೊಂಡಳು. ಪ್ರತಿಯಾಗಿ ಮಹಾವಿಷ್ಣುವೂ ಭೂದೇವಿಯನ್ನು ಆಲಂಗಿಸಿಕೊಂಡನು. ಪರಸ್ಪರದ ಆಲಿಂಗನವು ಒಂದು ದೇವ ವರ್ಷದವರಿಗೂ ಮುಂದುವರೆಯಿತು. ಕ್ರಮೇಣ ಭೂದೇವಿಯು ಬಳಲಿ ನಿಶಕ್ತಳಾಗಿ ಮೂರ್ಛೆಹೋದಳು. ಆದ್ದರಿಂದ ಭೂಮಿಯು ಮತ್ತೊಮ್ಮೆನೀರಿನೊಳಕ್ಕೆ ಜಾರಿಕೊಂಡಿತು. ಆಗ ಭಗವಾನ್ ಮಹಾವಿಷ್ಣವು ಎರಡನೇ ಬಾರಿಗೆ ಹಂದಿಯ ರೂಪ ತಾಳಿ ಭೂಮಿಯನ್ನು ಮೇಲೆತ್ತಿ ತಂದು ಮೊದಲಿನ ಜಾಗದಲ್ಲಿರಿಸಿ ವೈಕುಂಠಕ್ಕೆ ಹಿಂದಿರುಗಿದನು.

೩.೬. ಗುಡ್ಡ-ಬೆಟ್ಟ ಸಂಬಂಧಿ ಐತಿಹ್ಯಗಳು:-

ಮಾನವ ಹುಟ್ಟಿನಿಂದಲೇ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿ ಪ್ರಕೃತಿಯಲ್ಲಿಯ ವೈವಿಧ್ಯತೆ, ವೈಚಿತ್ರ್ಯಗಳಿಗೆ ಆಕರ್ಷಿತನಾಗಿ ಭಯ ಭಕ್ತಿಯನ್ನು ವ್ಯಕ್ತಪಡಿಸಿರುವನು. ಇದರ ಫಲವಾಗಿ ಹಲವಾರು ನಂಬಿಕೆಗಳು ಹುಟ್ಟು ಪಡೆದುಕೊಂಡವು. ತನ್ನ ಗುಣ, ಸ್ವಭಾವಗಳನ್ನು ಮತ್ತು ಸುತ್ತಮುತ್ತಲಿನಲ್ಲಿ ನಡೆದ ಘಟನೆಗಳನ್ನು ಪ್ರಕೃತಿಗೆ ಆರೋಪಿಸಿ ಹೇಳುವುದರ ಮೂಲಕ ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸುವುದರ ಜೊತೆಗೆ ತಮ್ಮ ಆದರ್ಶ ಜೀವನಕ್ಕೆ ದಾರಿ ದೀಪವೆಂಬಂತೆ ಬಳಸಿಕೊಂಡಿದ್ದಾರೆ. ನಿಸರ್ಗದ ಮಡಿಲಿನಲ್ಲಿರುವ ಬೆಟ್ಟ-ಗುಡ್ಡಗಳು ಮಾನವ ಜೀವನದೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿವೆ. ಇಂತಹ ಬೆಟ್ಟ-ಗುಡ್ಡಗಳಿಗಿರುವ ಹೆಸರುಗಳೂ ಕೂಡ ಜನರ ಜೀವನದೊಂದಿಗೆ ತಳುಕು ಹಾಕಿಕೊಂಡಿವೆ.

ಬಸ್ಮದ ಗುಡ್ಡ:-

ಪರಶುರಾಮನು ಬಂದು ಈ ಸ್ಥಳದಲ್ಲಿ ಯಜ್ಞ ಮಾಡಿದನು. ಆ ಯಜ್ಞದಿಂದ ಬಂದಂತಹ ಬೂದಿಯು ಅಲ್ಲಿಯೇ ಉಳಿದು ಕೊಂಡಿತು. ಅದು ಮುಂದೆ ದೊಡ್ಡ ಗುಡ್ಡವಾಗಿ ಮಾರ್ಪಟ್ಟಿತ್ತು. ಈಗ ಅದನ್ನು ಪರಶುರಾಮನ ಗುಡ್ಡ ಎಂದು ಕರೆಯುತ್ತಾರೆ. ಆದರೆ ವಾಸ್ಥವವಾಗಿ ನೋಡಿದರೆ ಅಲ್ಲಿ ಯಾವುದೇ ಬೆಟ್ಟವಿಲ್ಲ. ಏಕೆಂದರೆ ಜನರು ಅದರಲ್ಲಿ ಔಷದಿಯ ಗುಣವಿದೆ ಎಂಬುದು ಜನರ ನಂಬಿಕೆ ಯಾಗಿದೆ. ಆದರಿಂದ ಜನರು ಆ ಮಣ್ಣನ್ನು ಮುಟಿಗಟ್ಟಲೆ ಹೊತ್ತು ಒಯುತ್ತಿದ್ದಾರೆ. ಒಯಿದು ಅದನ್ನು

ನೀರಿನಲ್ಲಿ ಕಲಿಸಿ ಚರ್ಮಕ್ಕೆ ಹಚ್ಚಿಕೊಳ್ಳುವದರಿಂದ ಚರ್ಮಕ್ಕೆ ಸಂಬಂದಿಸಿದ ರೋಗಗಳು ಗುಣಮುಖವಾಗುತ್ತದೆ ಎಂಬುದು ಅವರ ನಂಬಿಕೆಯಾಗಿದೆ. ಪಾರ್ಶ್ವವಾಯು ರೋಗಕ್ಕೆ ಈ ಮಣ್ಣು ಒಳ್ಳೆಯ ಔಷದ ಎಂದು ಹೇಳುತ್ತಾರೆ ಜನರು.

ಜೊತೆಗೆ ಗುಡ್ಡದಲ್ಲಿ ಕಲ್ಲಿನ ಮೇಲೆ ಕಲ್ಲನ್ನು ಇಡುವ ವ್ಯವಸ್ಥೆ (ಲಗೊರಿ ಆಟದತರ) ಜನರು ಪರಶುರಾಮನ ಗುಡ್ಡಕ್ಕೆ ಬಂದು ಇಲ್ಲಿರುವ ಪರಶುರಾಮನ ಒಂದು ಸಣ್ಣಗುಡಿಯ ಎದುರು ಕಲ್ಲಿನ ಮೇಲೆ ಕಲ್ಲನ್ನು ಇಟ್ಟಿದ್ದಾರೆ. ಇದರ ಒಳನೊಟ ಜನರು ಬಂದು ದೇವರ ಎದುರು ಹರಕೆ ಹೊತ್ತು ೪ ರಿಂದ ೮ ಕಲ್ಲನ್ನು ಒಂದರ ಮೇಲೆ ಒಂದನ್ನು ಇಟ್ಟು ಹೋಗುತ್ತಾರೆ. ಅವರ ಹರಕೆ ತೀರಿದ ನಂತರ ಮತ್ತೆ ಅಲ್ಲಿಗೆ ಹೋಗಿ ಆ ಕಲ್ಲುಗಳನ್ನು ಬಿಚ್ಚಿಡುತ್ತಾರೆ. ಅವರು ಜೋಡಿಸಿರುವ ಕಲ್ಲು ಬಿಚ್ಚಿಡಬೇಕೆಂಬ ಪದ್ದತಿ ಏನಿಲ್ಲ. ಬೇರೆ ಯಾರೋ ಜೋಡಿಸಿ ಹೋದ ಕಲ್ಲನ್ನು ಸಹ ಬಿಚ್ಚಿಡಬಹುದು. ಈ ಒಂದು ನಂಬಿಕೆ, ಆಚರಣೆ ಕೂಡ ಅಲ್ಲಿ ಕಂಡುಬರುತ್ತದೆ.

ಬಂಕುರನಕಲ್ಲಿನಲ್ಲಿ ಉದ್ಭವಿಸಿದ ಗಣೇಶನ ಮೂರ್ತಿ:-

ಗಣೇಶನ ಮೂರ್ತಿಯು ಒರಟಾದ ಕಲ್ಲಿನಲ್ಲಿದೆ. ಈ ಮೂರ್ತಿ ಏಕ ಶಿಲೆಯಲ್ಲಿದೆ ಜನರು ಇದು ಬೆಳೆಯುತ್ತಾ ಇದೆ ಎಂದು ಹೇಳುತ್ತಿದ್ದಾರೆ. ಈ ಮೂರ್ತಿಯನ್ನು ನೋಡಿದರೆ ಇದು ಉದ್ಭವವಲ್ಲ. ಕಲ್ಲಿನ ಬಂಡೆಯನ್ನು ಕಟೆದು ಗಣೇಶನ ಮೂರ್ತಿಯನ್ನು ನಿರ್ಮಿಸಿದ್ದಾರೆ. ಒಂದೇ ತೆರನಾದ ಗಣೇಶನ ಮೂರ್ತಿಗಳು ಎರಡು ಇವೆ. ಆದರೆ ಒಂದು ಬೃಹತ್ ಬಂಡೆಯಲ್ಲಿದೆ ಮತ್ತೊಂದು ಚಿಕ್ಕ ಮೂರ್ತಿ ಇದೆ. ಈ ಚಿಕ್ಕ ಕಲ್ಲಿನ ಮೂರ್ತಿಇರುವ ಸ್ಥಳದಲ್ಲಿ ಒಂದು ದೇವಸ್ಥಾನವನ್ನು ನಿರ್ಮಿಸಿದ್ದಾರೆ ಭಕ್ತರು. ಅವರು ಬೇಡಿಕೊಂಡಿದ್ದು ಪಡೆದುಕೊಂಡ ನಂತರ ಈ ದೇವಸ್ಥಾನವನ್ನು ನಿರ್ಮಿಸಲಾಗಿದೆ.[೪೫]

ಸೂಗೂರಿನ ಬೆಟ್ಟದಲ್ಲಿ ಬೆಳೆಯುವ ಭತ್ತ:-

ಸೂಗೂರಿನಲ್ಲಿ ವೆಂಕಟರಮಣನ ದೇವಸ್ಥಾನವಿದೆ. ಈ ದೇವಸ್ಥಾನದ ಜಾತ್ರೆಯ ಸಂದರ್ಭದಲ್ಲಿ ನೈವಿದ್ಯವನ್ನು ಇದೆ ಊರಿನ ಬೆಟ್ಟದಲ್ಲಿ ಬೆಳೆದ ಭತ್ತದಿಂದ ತಯಾರಿಸುತ್ತಾರೆ. ಈ ಭತ್ತಕ್ಕೆ ಯಾವುದೇ ಕ್ರಿಮಿನಾಶಕ ಔಷಧಿಗಳನ್ನು ಬಳಸುವುದಿಲ್ಲ. ನಿಸರ್ಗದತ್ತವಾಗಿ ತನ್ನಿಂದ ತಾನೆ ಬೆಳೆದು ಫಸಲು ನೀಡುತ್ತದೆ. ಹಾಗೆ ಇದನ್ನು ಯಾರು ಬೆಳೆಸುವುದಿಲ್ಲ. ಈ ಭತ್ತವು ಯಾವ ಭಕ್ತರು ಕೂಡ ತಮ್ಮ ಮನೆಗೆ ಕೊಂಡುಯ್ಯುವುದಿಲ್ಲ. ಈ ರೀತಿಯಾದ ನೈಸರ್ಗಿಕವಾದ ಒಂದು ವೈಚಿತ್ರ್ಯವನ್ನು ನೋಡಿದರೆ ಒಂದು ಪವಾಡವೇ ಸರಿ ಎನಿಸುತ್ತದೆ.

ಅಡಿ ಟಿಪ್ಪಣಿಗಳು.

೧. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೧

೨. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೩೩

೩. ಕರ್ನಾಟಕ ದೇವಾಲಯ ಕೋಶ ಕಲಬುರಗಿ ಜಿಲ್ಲೆ, ಮಹಾದೇವ.ಸಿ, ವಾಸುದೇವ ಬಡಿಗೇರ, ರಮೇಶ ನಾಯಕ ಪುಟ ಸಂ-೧೬.

೪. ಇಂದುಮತಿ ಪಾಟೀಲ, ಕಲಬುರಗಿ ಜಿಲ್ಲೆಯ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ಪು-೧೪-೧೬

೫. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಕನ್ನಡ ನಾಡಿನ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳು, ಪು-೭೭

೬. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೨

೭. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೨೩

೮. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೧೯೭

೯. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೧೮

೧೦. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ-ಪಾಟೀಲ್ ಎಂ.ಬಿ ಪುಟ ಸಂ-೩೪,೩೫

೧೧. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ಚನ್ನಣ್ಣ ವಾಲೀಕಾರ ಪುಟ ಸಂ-೨೬

೧೨. ಶಾರದಾ ಪ್ರಸಾದ್ ಎನ್. ಎಸ್(ಅನು)., 'ಭಾರತದ ಪ್ರೌಢ ಇತಿಹಾಸ', ಪುಟ ಸಂ-೯೪

೧೩. ರಂಗಸ್ವಾಮಯ್ಯ ಜಿ.ಆರ್., ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಪುಟ ಸಂ-೫೯

೧೪. ಕರ್ನಾಟಕ ಚರಿತ್ರೆ., ಷೇಕ್ ಅಲಿ ಬಿ. ಸಂಪುಟ-೧, ಪುಟ ಸಂ-೪೩೫

೧೫. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೪೫

೧೬. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ., ಬಸವರಾಜ ಎನ್.ಅಕ್ಕಿ, ಪುಟ ಸಂ-೧೧೩

೧೭. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೪೮

೧೮. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೫೦

೧೯. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೫೫

೨೦. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೫೮,೫೯

೨೧. ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ., ಗೋಪಾಲ್.ಆರ್. ಪುಟ ಸಂ-೨೧೬

೨೨. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೬೧

೨೩. ಕರ್ನಾಟಕ ಚರಿತ್ರೆ., ಷೇಕ್ ಅಲಿ ಬಿ. ಸಂಪುಟ-೪ ಪುಟ ಸಂ-೭೦

೨೪. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಒಂದು., ಸೂರ್ಯನಾಥ ಕಾಮತ್ ಪುಟ ಸಂ-೨೩೭

೨೫. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೭೬

೨೬. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ್., ಪಾಟೀಲ.ಎಂ.ಬಿ ಪುಟ ಸಂ-೭೨

೨೭. ಕರ್ನಾಟಕ ಸಂಕ್ಷಿಪ್ತ ಇತಿಹಾಸ., ಸೂರ್ಯನಾಥ ಕಾಮತ್ ಪುಟ ಸಂ-೨೮೬

೨೮. ಜಾನಪದ ಸಾಹಿತ್ಯ ದರ್ಶನ, ಭಾಗ-೨೩, ಪ್ರ.ಸಂ. ಎಂ.ಬಿ. ನೇಗಿನಹಾಳ, ಪು.೧೧೯. ಲೇ. ಪದ್ಮಾಶೇಖರ.

೨೯. ಅಪ್ರಕಟಿತ ಸಂಶೋಧನಾ ಮಹಾಪ್ರಬಂದ ರಾಯಚೂರು ಜಿಲ್ಲೆಯ ಐತಿಹ್ಯಗಳು., ಅರಳಿಹಳ್ಳಿ ಗಿರೇಗೌಡ-ಪುಟ ಸಂ-೧೮೯ - ೧೯೧

೩೦. ಜಾನಪದ ಸಾಹಿತ್ಯ ದರ್ಶನ, ಭಾಗ-೨೩, ಪ್ರ.ಸಂ.ಎಂಬಿ ನೇಗಿನಹಾಳ, ಪುಟ ಸಂ-೫೧. ಲೇ. ಹರಿಲಾಲ ಪವಾರ.

೩೧. ಮನೋಹರ ವಯಸ್ಸು-೫೦, ಉದ್ಯೋಗ-ಕೃಷಿ, ಊರು-ಹೊನಗುಂಟಾ.

೩೨. ಗುಲಬರ್ಗಾ ಜಿಲ್ಲೆಯ ಗ್ಯಾಸೆಟೀಯರ-ಪಾಟೀಲ ಎಂ.ಬಿ. ಪುಟ ಸಂ-೨೩

೩೩. ಮಲ್ಲಿಕಾರ್ಜುನ ಕೊಡ್ಲಿ, ವಯಸ್ಸು-೭೦, ಊದ್ಯೋಗ-ವ್ಯವಸಾಯ, ಊರು-ಕೊಟಂದೆವರ ಹಳ್ಳಿ.

೩೪. ಗುಲಬರ್ಗಾ ಜಿಲ್ಲೆಯ ಗ್ಯಾಸೆಟೀಯರ-ಪಾಟೀಲ ಎಂ.ಬಿ. ಪುಟ ಸಂ-೨೧,೨೨

೩೫. ಗುಲಬರ್ಗಾ ಜಿಲ್ಲೆಯ ಗ್ಯಾಸೆಟೀಯರ-ಪಾಟೀಲ ಎಂ.ಬಿ. ಪುಟ ಸಂ-೨೦,೨೧

೩೬. ಗುಲಬರ್ಗಾ ಜಿಲ್ಲೆಯ ಗ್ಯಾಸೆಟೀಯರ-ಪಾಟೀಲ ಎಂ.ಬಿ. ಪುಟ ಸಂ-೨೨,೨೩

೩೭. ಗುಲಬರ್ಗಾ ಜಿಲ್ಲೆಯ ಗ್ಯಾಸೆಟೀಯರ-ಪಾಟೀಲ ಎಂ.ಬಿ. ಪುಟ ಸಂ-೨೩

೩೮. ಸವಿರಾಜ, ವಯಸ್ಸು-೪೦, ಊದ್ಯೋಗ-ಶಿಕ್ಷಕರು, ಊರು-ಗುಲಬರ್ಗಾ.

೩೯. ಸವಿರಾಜ, ವಯಸ್ಸು-೪೦, ಊದ್ಯೋಗ-ಶಿಕ್ಷಕರು, ಊರು-ಗುಲಬರ್ಗಾ.

೪೦. ಸುವರ್ಣ ಜಾನಪದ-ಪ್ರ.ಸಂ. ಎಚ್.ಜೆ.ಲಕ್ಕಪ್ಪಗೌಡ, ಪು.೧೨೭, ಲೇ. ಸಿದ್ಧಲಿಂಗಯ್ಯ

೪೧. ಅಪ್ರಕಟಿತ ಪಿ.ಎಚ್‌ಡಿ ಮಹಾಪ್ರಬಂದ "ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ"., ಶಂಕರ ಬಾಳಿ - ಪುಟ ಸಂ-೧೪೪.

೪೨. ಕರ್ನಾಟಕ ಜನಪದ ಕಲೆಗಳ ಕೋಶ., ಬೋರಲಿಂಗಯ್ಯ.ಹಿ.ಚಿ. ಪುಟ ಸಂ-೨೪೨.

೪೩. ಚಂದ್ರಶೇಖರ ಕಂಬಾರ ೧೯೮೪: ಕನ್ನಡ ಜಾನಪದ ವಿಶ್ವಕೋಶ (ಸಂ-೧), ಪುಟ ಸಂ-೧೮೩,೮೪

೪೪. ಅತ್ರಿಕುಮಾರ ಕಾಶಿನಾಥ ಭಟ್ಟ ಪೂಜಾರಿ, ಊರು-ಗಣಗಾಪುರ, ವಯಸ್ಸು-೫೩, ಊದ್ಯೋಗ-ಪೌರೊಹಿತ್ಯ, ದೇವಸ್ಥಾನ-ಗಾಣಗಾಪುರ.

೪೫. ಬೀರಣ್ಣ ದೊಡ್ಡಮನಿ, ಊರು-ಮುಗಟಾ, ವಯಸ್ಸು-೬೦, ಉದ್ಯೋಗ-ವ್ಯವಸಾಯ.

ಅಧ್ಯಾಯ-೪ ಗುಲ್ಬರ್ಗಾ ಜಿಲ್ಲೆಯ ಸ್ಥಳ ಪ್ರಧಾನ ಐತಿಹ್ಯಗಳು

೪.೧ ಪವಾಡಗಳು

೪.೨ ಸ್ಥಳ ನಾಮಗಳು

೪.೩ ಶಾಸನೋಕ್ತ ಸ್ಥಳನಾಮಗಳು

೪.೪ ನಂಬಿಕೆಗಳು

೪.೫ ಕೆರೆ-ಕುಂಟೆ, ಬಾವಿಗಳಿಗೆ ಸಂಬಂಧಿಸಿದ ಐತಿಹ್ಯಗಳು

೪.೬ ಐತಿಹ್ಯ-ಪುರಾಣ-ಚರಿತ್ರೆಗಳ ಅಂತರ ಸಂಬಂಧಗಳ ವಿಶ್ಲೇಷಣೆ

೪.೭ ಕಲಬುರಗಿ ಜಿಲ್ಲೆಯ ಶರಣಬಸವೇಶ್ವರರು ಮತ್ತು ಖಾಜಾ ಬಂದೇನವಾಜರು

ಅಧ್ಯಾಯ-೪

ಗುಲ್ಬರ್ಗಾ ಜಿಲ್ಲೆಯ ಸ್ಥಳ ಪ್ರಧಾನ ಐತಿಹ್ಯಗಳು

೪.೧ ಪವಾಡಗಳು

ಪೀಠಿಕೆ:-

"ಪವಾಡವನ್ನು"Encyclopedia Americaದಲ್ಲಿ ಹೀಗೆ ಹೇಳಿದೆ. "To understand the Miracle stories, as they were understood by those who believe in them, and reported the, we must simply forget our modern scientific of the word" . ಆದ್ದರಿಂದ ಪವಾಡ ಮುಖ್ಯವಾಗಿ ನಂಬಿಕೆಯನ್ನು ಆಧರಿಸಿದ್ದು. ನಮ್ಮ ಮುಖ್ಯ ಸಮಸ್ಯೆ ಪವಾಡಗಳ ಸತ್ಯಾಸತ್ಯತೆಯನ್ನು ಕುರಿತದ್ದಲ್ಲ. ಅದರ ಸ್ವರೂಪ, ಲಕ್ಷಣಗಳನ್ನು ಕುರಿತದ್ದು, ಪವಾಡವನ್ನು ಇಂಗ್ಲೀಷನಲ್ಲಿ 'Miracle' ಎನ್ನುತ್ತಾರೆ. Miracle ಲ್ಯಾಟಿನ್ ಭಾಷೆಯ Miraculum ದಿಂದ ಬಂದಿದೆ. ಚರಿತ್ರೆಯಲ್ಲಿಯೂ ಸಾಕಷ್ಟು ಪವಾಡಗಳು ಮೆರೆದಿರುವುದು ಕಂಡು ಬರುತ್ತದೆ. ೧೨ನೇ ಶತಮಾನದ ವಚನ ಸಾಹಿತ್ಯದಲ್ಲಿ ಬಸವಣ್ಣನವರ ಕುರಿತು, ಚೆನ್ನಬಸವಣ್ಣ ಅದರಲ್ಲೂ ಆಯಾ ಧರ್ಮದ ಸ್ಥಾಪಕರ ಬಗೆಗೆ ವಿಶೇಷವಾಗಿ ಸಾಕಷ್ಟು ಪ್ರಮಾಣದಲ್ಲಿ ಲಭಿಸುತ್ತವೆ.[೧] ಒಬ್ಬ ವ್ಯಕ್ತಿಯ ಬದುಕು ಪುರಾಣಕ್ಕೆ ವಸ್ತುವಾಗಬೇಕಾದರೆ ಆ ವ್ಯಕ್ತಿ ಸಾಕಷ್ಟು ಪ್ರಮಾಣದಲ್ಲಿ ಪವಾಡಗಳನ್ನು ಮಾಡಬೇಕಾದುದು ಅನಿವಾರ್ಯವಾಗಿರುತ್ತದೆ. ಒಂದೆರಡು ಪವಾಡಗಳನ್ನು ಮಾಡಿದರೆ ಆತ ಹೆಚ್ಚೆಂದರೆ ಐತಿಹ್ಯದ ವಸ್ತುವಾಗಬಲ್ಲನೇ ಹೊರತು ಪೌರಾಣಿಕ ವ್ಯಕ್ತಿಯಾಗಲು ಸಾಧ್ಯವಿಲ್ಲ.

ಪ್ರತ್ಯಕ್ಷ ರೂಪದ ಪವಾಡಗಳಲ್ಲಿ ಪವಾಡ ಪುರುಷ ತಾನೇ ಅದ್ಭುತ ಸಾಧನೆಗಳನ್ನು ತೋರಿಸುವ ಕೇಂದ್ರ ಶಕ್ತಿಯಾಗಿರುತ್ತಾನೆ. ಕೃತಕ ಜಂಗಮರು ಕಟ್ಟಿಕೊಂಡು ಬಂದಿದ್ದ ಬದನೇಕಾಯಿಯನ್ನು ಬಸವಣ್ಣ ಲಿಂಗ ಮಾಡಿದ್ದು, ಪ್ರವಾದಿಯೊಡನೆ ವಾದಿಸಲು 'ರುಜ್ಜುಪುರುಷ' ನನ್ನ ಸೃಷ್ಟಿಸಿ ಆ ಮೂಲಕ ಆತನಿಗೆ ಉತ್ತರ ಕೊಡಿಸುವುದು, ಯೇಸು ಐದು ರೊಟ್ಟಿ... ಎರಡು ಮೀನುಗಳಿಂದ ತನ್ನ ಐದು ಸಾವಿರ ಶಿಷ್ಯರಿಗೆ ಊಟ ಮಾಡಿಸಿದ್ದು ಹಾಗೆ ಕನಕದಾಸ ತನ್ನ ಅದ್ಭುತ ಶಕ್ತಿಯಿಂದ ಉಡುಪಿಯ ಶ್ರೀಕೃಷ್ಣನನ್ನು ಒಲಿಸಿಕೊಂಡು ದೇವಾಲಯದ ಗೋಡೆ ಒಡೆದು ದರ್ಶನನೀಡಿದ್ದು ಇತ್ಯಾದಿ ಪವಾಡಗಳು ಇಲ್ಲಿ ಪವಾಡಪುರುಷನೇ ಘಟನೆಯ ಬಿಂದುವಾಗಿ ನಿಲ್ಲುತ್ತಾನೆ. ಇನ್ನು ಕೆಲವು ಪವಾಡಗಳಲ್ಲಿ 'ಪವಾಡಪುರುಷ' ನೇರವಾಗಿ ಘಟನೆಯಲ್ಲಿ ಪಾಲುಗೊಳ್ಳದೆ, ತನ್ನ ಪವಾಡ ಶಕ್ತಿಯಿಂದಲೇ ಕುಳಿತಲ್ಲಿಂದ ದೂರಸ್ಥಳವೊಂದರಲ್ಲಿ ಏನು ನಡೆಯುತ್ತದೆಂಬುದನ್ನು ತಿಳಿಯಬಲ್ಲ. ದೂರವಸ್ತುಗಳ ಮೇಲೆ ಹತೋಟಿ ಸಾಧಿಸಬಲ್ಲ. ಇದನ್ನು 'ಪರೋಕ್ಷ ರೂಪದ ಪವಾಡಗಳು' ಎಂದು ಕರೆಯಬೇಕಾಗುತ್ತದೆ. ಹರಿಹರ ದ್ವಾರಸಮುದ್ರದ ರಾಜಸ್ಥಾನದಲ್ಲಿದ್ದುಕೊಂಡು ಕೈ ಹೊಸೆದು ದೂರದ ಹಂಪೆಯ ವಿರೂಪಾಕ್ಷನ ಗುಡಿಯಲ್ಲಿ ಹತ್ತಿ ಉರಿಯುತ್ತಿದ್ದ 'ತೆರೆ'ಯನ್ನು ನಂದಿಸುವುದು ಕಲ್ಯಾಣದ ಬೀದಿಯಲ್ಲಿ ಹಾಲು ಮಾರುವ ಬಾಲೆ ಕಾಲು ಜಾರಿ ಬಿದ್ದಲ್ಲಿ 'ಬಸವಾ' ಎಂದೊಡನೆ ಬಸವಣ್ಣ ಮನೆಯಲ್ಲಿದ್ದುಕೊಂಡೇ ಅಭಯಹಸ್ತವ ನೀಡಿ ರಕ್ಷಿಸಿದ್ದು ಇಂಥ ಮಾದರಿಯವು.

ಜನಪದರ ದೃಷ್ಟಿಯಲ್ಲಿ 'ಪವಾಡ'ಗಳನ್ನಾಗಿ ರೂಪಿಸುವ ಸಾಧು-ಸಂತರು, ಋಷಿಗಳು, ಶರಣರು ಅತಿಮಾನುಷ ವ್ಯಕ್ತಿಗಳು ಪವಾಡಪುರುಷರಾಗಿ ಜನಪದರ ಭಕ್ತಿ ಗೌರವಗಳಿಗೆ ಪಾತ್ರರಾಗುತ್ತಾರೆ. 'ಪವಾಡ'ದ ಇನ್ನೊಂದು ಪದ 'ಲೀಲೆ'. ಒಬ್ಬ ವ್ಯಕ್ತಿ ತನ್ನ ಮಹಾಕಾರ್ಯಗಳಿಂದ ಜನರಪ್ರೀತಿ – ವಿಶ್ವಾಸಕ್ಕೆ ಪಾತ್ರನಾಗುತ್ತಾನೆ. ಹಾಗೆ ಜನಪದರಲ್ಲಿ ಸಹಜವಾಗಿ ಬೆರೆತು ಜನಪ್ರಿಯಗೊಳ್ಳುತ್ತಾನೆ ಅವರನ್ನು ಪ್ರವಾದಿ ಪುರುಷ, ಪವಾಡ ಪುರುಷ ಎಂದು ಜನಪ್ರಿಯ ಖ್ಯಾತಿ ಹೊಂದಿರುತ್ತಾರೆ. ವಾಸ್ತವಾಂಶಗಳಿಂದ ಕೂಡಿದ ನೈಜ ಘಟನೆಯಿಂದ ಬಳಕೆಯಾದ ಇತಿಹಾಸದ ಎಳೆಯನ್ನು ಜನಪದರು ಪ್ರಸಾರಮಾಡಿರುವ ಗದ್ಯ ನಿರೂಪಣೆಯನ್ನು 'ಐತಿಹ್ಯ'ವೆಂದು ಕರೆಯುತ್ತೇವೆ. ಅಲ್ಲಿ ಸಾಹಸ ಘಟನೆಯಿಂದ ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿರಬಹುದು. ಒಟ್ಟಾರೆ ಜನಪದ ಸಾಹಿತ್ಯದಲ್ಲಿ ಪವಾಡ ಮತ್ತು ಐತಿಹ್ಯಗಳ ಬಳಕೆ ವಿಶಿಷ್ಟ ರೀತಿಯಿಂದ ಬಳಕೆಯಾಗುತ್ತ ಉಳಿದುಕೊಂಡಿವೆ.

ಅ) ಕಲಬುರಗಿ ಜಿಲ್ಲೆಯ ವಿವಿದ ತಾಲೂಕಿನಲ್ಲಿ ಬರುವ ಪವಾಡ ಪುರುಷರು ಮತ್ತು ಅವರ ಪವಾಡಗಳು:-

೧) ಹಲಕರ್ಟಿಯ ಲಿಂ.ಶ್ರೀ ವೀರತಪಸ್ವಿ ಮುನೀಂದ್ರ ಶಿವಾಚಾರ್ಯರ ಪವಾಡಗಳು ಮತ್ತು ಬೆಳೆದುಬಂದ ಬಗೆ:-

ಶಹಾಪೂರ ತಾಲೂಕಿನ ಬೀರನೂರು ಎಂಬುವುದೊಂದು ಸಣ್ಣ ಗ್ರಾಮ ಅಲ್ಲಿಯ ಹಿರೇಮಠದ ಅಧಿಪತಿಗಳಾದ ಶ್ರೀ ಚೆನ್ನಯ್ಯ ಸ್ವಾಮಿ ಅವರ ಧರ್ಮಪತ್ನಿ ಗುರುಸಿದ್ಧಮ್ಮನವರು ಸ್ಕಂದಗೋತ್ರದವರು ಚೆನ್ನಯ್ಯ ಸ್ವಾಮಿ ಒಳ್ಳೆಯ ಗುಣಸ್ವಭಾವದವರಾಗಿದ್ದು, ಭಕ್ತಾದಿಗಳಿಗೆ ಭಾಗ್ಯದಂತಿದ್ದವರು ದಿನನಿತ್ಯವು ಬೆಳಿಗ್ಗೆ ಆರಾಧ್ಯ ದೈವ ಈಶ್ವರ ಪೂಜೆ ತಮ್ಮ ಇಷ್ಟಲಿಂಗ ಪೂಜೆ ಮಾಡಿಕೊಂಡು ಹಿಟ್ಟಿನ ಕಾರ್ಯಕ್ಕಾಗಿ ಭಕ್ತರ ಮನೆಗಳಿಗೆಲ್ಲ ಪಾದವನಿತ್ತು ಆಶೀರ್ವಾದಗೈದು ಮನೆಗೆ ಮರುಳುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳು ಮೊದಲನೇಯ ಮಗ ಬಸಯ್ಯ ಎರಡನೇಯ ಮಗ ಗಂಗಯ್ಯ ಹಾಗೂ ಮೂರನೇಯ ಮಗ ರಾಮಲಿಂಗಯ್ಯನ ಜನನವಾಯಿತು.[2] ಸಂಪ್ರದಾಯದ ವಿಧಿನಿಯಮಗಳಿಗನುಗುಣವಾಗಿ ಜಾತಕರ್ಮಗಳನ್ನು ಕೇಳಲು ಅದೇ ಊರಿನಲ್ಲಿ ನೆಲೆಸಿದ ಅಖಂಡೇಶ್ವರ ತಾತನವರು ಜ್ಯೋತಿಷ್ಯದಲ್ಲಿ ಮಹಾಪಂಡಿತ ಮಹಾಜ್ಞಾನಿಯವರ ಹತ್ತಿರ ಮೂರನೇಯ ಮಗನ ನಾಮಕರಣ ಕೇಳಲಾಯಿತು. ಕೇಳಿದ ಕೂಡಲೇ ಅಖಂಡೇಶ್ವರ ತಾತನವರು ಮೊದಲನೇಯ ಮಗ ಮನೆನಾಶ (ಕೆಡಕು) ಮಾಡುತ್ತಾನೆ. ಮೂರನೇಯ ಮಗ ಅಡ್ಡಪಲ್ಲಕಿಯಲ್ಲಿ ಮೆರೆಯುತ್ತಾನೆ. ಅವನ ಜನ್ಮನಾಮ ರಾಮಲಿಂಗಯ್ಯ ಇರುವುದರಿಂದ ಅದೇ (ಹೆಸರು) ನಾಮಕರಣದಿಂದ ಕರೆಯಬೇಕೆಂದು ಸೂಚಿಸಿದರು.

ಅಯ್ಯಾಚಾರ:-

ಗುರುಸಿದ್ಧಮ್ಮ ಹಾಗೂ ಶ್ರೀ ಚೆನ್ನಯ್ಯ ಸ್ವಾಮಿಯವರ ಮೂವರು ಮಕ್ಕಳಿಗೆ ಅಯ್ಯಾಚಾರ ಸಂಸ್ಕಾರವನ್ನು ಮಾಡಲಾಯಿತು. ಯಾವುದೇ ಜಾತಿಯಾಗಲಿ ಆಯಾ ಧರ್ಮದ ರೀತಿ ನೀತಿ ಅನುಗುಣವಾಗಿ ಹುಟ್ಟಿನಿಂದ ಸಾಯುವವರೆಗಿನ ಕಾಲಾವಧಿಯಲ್ಲಿ ಕೆಲವೊಂದು ದೀಕ್ಷಾ ಸಂಸ್ಕಾರಗಳನ್ನು ಮಾಡುತ್ತಾರೆ. ಅದೇ ಪ್ರಕಾರವಾಗಿ ಲಿಂಗಾಯತ ಜನಾಂಗದವರ ಗುರುಗಳೆನಿಸಿಕೊಳ್ಳುವ ಜಂಗಮರಿಗೆ ಇರುವ ಸಂಸ್ಕಾರದಲ್ಲಿ ಅಯ್ಯಾಚಾರ ಎಂಬುದರಿಂದ ಜಂಗಮ ಬಾಲಕನು ಬಾಲ್ಯವ್ಯಸ್ಥೆಯನ್ನು ಕಳೆದು ಯೌವನಾವಸ್ಥೆಗೆ ಕಾಲಿಡುವ ಮುನ್ನವೇ ಮಾಡುವ ಒಂದು ಸಂಸ್ಕಾರ ಅಯ್ಯಾಚಾರ. ಅಯ್ಯಾಚಾರ ಎಂದರೆ ಮಾಂಸದ ಪಿಂಡದಂತೆ ಇದ್ದ ಬಾಲಕನನ್ನು ಮಂತ್ರ ಪಿಂಡವಾಗಿ ಮಾರ್ಪಡಿಸುವ ಸಂಸ್ಕಾರ ಅಯ್ಯಾಚಾರವಾಗುವುದಕ್ಕಿಂತ ಮೊದಲು ಯಾವ ಜಂಗಮ ಬಾಲಕನು ವೀರಶೈವ ಅಯ್ಯಾಚಾರವಾಗುವುದಕ್ಕಿಂತ ಮೊದಲು

ಯಾವ ಜಂಗಮ ಬಾಲಕನು ವೀರಶೈವ ಧರ್ಮಾಚರಣೆಯಲ್ಲಿ ಪೂಜೆಗೊಳ್ಳಲು ಯೋಗ್ಯನಾಗಿರುವುದಿಲ್ಲ.[೩] ಪೂಜೆಯ ಗದ್ದುಗೆ ಮೇಲೆ ಕುಳಿತು ಭಕ್ತರಿಂದ ಪೂಜಿಸಿಕೊಳ್ಳುವುದಿಲ್ಲ. ಗುರು ಪೀಠದ ಮೇಲೆ ಆತನು ಕೂಡುವಂತಿಲ್ಲ. ಅಯ್ಯಾಚಾರವಾದ ಮೇಲೆಯೇ ಆ ಬಾಲಕನು ಗುರುಸ್ವರೂಪವನ್ನು ಹೊಂದುವನು.

ಹೀಗೆ ಕೆಲವು ವರ್ಷದ ನಂತರ ತಮ್ಮ ಊರು ಬೀರನೂರಿನಲ್ಲಿ ಒಂದು ದೊಡ್ಡ-ಕದನ (ಜಗಳ)ವಾಗಿತ್ತು. ಆ ಕದನದಲ್ಲಿ ಚೆನ್ನಯ್ಯಸ್ವಾಮಿಯ ಹಿರಿಯ ಮಗ ಬಸಯ್ಯನ ಹೆಸರೂ ಕೂಡ ಇತ್ತು. ಈ ಕದನದ ವಿಷಯ ಪೋಲಿಸ ಸಿಬ್ಬಂದಿಯವರಿಗೆ ಸುದ್ದಿಯಾಗಿತ್ತು. ಸುದ್ದಿಯಾದ ಕೂಡಲೇ ಪೋಲಿಸ ಸಿಬ್ಬಂದಿಯು ಬಂದು ಬಸಯ್ಯನಿಗೆ ಪೋಲಿಸ ಠಾಣೆಗೆ ಹಾಜರುಪಡಿಸಿ ಕಾರಾಗೃಹದಲ್ಲಿ ಇರಿಸಲಾಯಿತು. ಚೆನ್ನಯ್ಯ ತಾತನವರು ಆರೋಗ್ಯ ಸರಿಯಿರಲಾರದ ಕಾರಣ ಲಿಂಗೈಕ್ಯರಾದರು. ತಾಯಿ ಗುರುಸಿದ್ಧಮ್ಮಳು ಕೆಲವು ದಿನ ಕಳೆದ ನಂತರ ತನ್ನ ಎರಡನೇಯ ಮಗ ಗಂಗಯ್ಯನಿಗೆ ತಮ್ಮ ಹಿಟ್ಟಿನ ಕಾಯಕಕ್ಕಾಗಿ ಭಕ್ತರ ಮನೆಗಳಿಗೆಲ್ಲ ಹೋಗಲು (ಭಕ್ತಾಧಿಗಳಿಗೆ ಪಾದವನಿತ್ತು ಆಶೀರ್ವದಿಸಲು ಗಂಗಯ್ಯನಿಗೆ) ಒಪ್ಪಿಸಿದಳು. ಮತ್ತು ಸಣ್ಣಮಗ ರಾಮನಿಂಗಯ್ಯನಿಗೆ ಆ ಊರಿನ ಶ್ರೀಮಂತ ದೇಸಾಯಿಯವರ ಮನೆಯಲ್ಲಿ ಹಸುಗಳನ್ನು ಕಾಯುವುದಕ್ಕೆ ಜೀತವಿಟ್ಟಳು.

ತಾಯಿಯ ಮಾತು ಮೀರದೆ ರಾಮನಿಂಗಯ್ಯನು ದೇಸಾಯಿಯವರ ಮನೆಯಲ್ಲಿ ದಿನಾಲೂ ಕೊಟ್ಟಿಗೆಯಿಂದ ಹಸುಗಳನ್ನು ಬಿಟ್ಟುಕೊಂಡು ತಮ್ಮ ಗೆಳೆಯ ಹಣಮಂತನ ಸಂಗಡ ವನದಲ್ಲಿ ಕೃಷ್ಣನ ಹಾಗೆ ಗೋಪಾಲಕನಾಗಿ ಹಾಡನ್ನು ಹಾಡುತ್ತಾ ಕೆಸರಿನ ಲಿಂಗ ಮಾಡಿ ಆ ಲಿಂಗಕ್ಕೆ ಪೂಜೆ ಮಾಡಿ ತನ್ನ ಮಾಲೀಕರು ಕಟ್ಟಿಕೊಟ್ಟ ಬುತ್ತಿಯನ್ನೆ ನೈವೇದ್ಯ ಮಾಡಿ ಎಲ್ಲರಿಗೂ ಪ್ರಸಾದ ರೂಪದಲ್ಲಿ ನೀಡುತ್ತಿದ್ದನು. ಒಂದು ದಿನ ಬೇಸಿಗೆಯ ಕಾಲದಲ್ಲಿ ನೀರಿನ ಅಭಾವ ತಲೆದೋರಿತ್ತು. ಜಾನುವಾರುಗಳಿಗೆ ಹಾಗೂ ಜನರಿಗೆ ಕುಡಿಯುವುದಕ್ಕೂ ಸಹ ನೀರು ಸಿಗಲಾರದಂತ ಸಮಯದಲ್ಲಿ ರಾಮಲಿಂಗಯ್ಯ ಗುಂಡಿಯನ್ನು ತೋಡಿ ಜಾನುವಾರುಗಳಿಗೆ ನೀರು ಕುಡಿಸಿದರಂತೆ ಆ ಗುಂಡಿಗೆ ಇಂದು ಸಹ ''ನಂದೆಹಳ್ಳಿ ಗುಂಡ'' ಎಂದು ಹೆಸರು. ಹೀಗೆ ಕೆಲವು ವರ್ಷ ಗತಿಸಿದ ನಂತರ ತಾಯಿ ಗುರುಸಿದ್ಧಮ್ಮರವರ ಆರೋಗ್ಯ ಸರಿಯಿರಲಾದ ಕಾರಣ ತಾಯಿಯೂ ಕೂಡ ಲಿಂಗೈಕ್ಯರಾದರು. ತಾಯಿಯ ಮರಣದ ನಂತರ ಅಣ್ಣ ತಮ್ಮ ಇಬ್ಬರೂ ಕೂಡಿ ತಮ್ಮ ಸ್ವಂತ ಮನೆಯನ್ನೇ ಬಿಟ್ಟು ಪ್ರಯಾಣ ಮಾಡುತ್ತಾ ಸುಕ್ಷೇತ್ರ ಹಲಕರ್ಟಿಗೆ ಬಂದು ತಲುಪಿದರು. ಶ್ರೀ ವೀರಭದ್ರೇಶ್ವರ ದೇವಾಲಯಕ್ಕೆ ಬಂದು ಶ್ರೀ ವೀರಭದ್ರೇಶ್ವರನ ದರ್ಶನ ಪಡೆದರು. ನಂತರ ದೇವಾಲಯದ ಅಂಗಳದಲ್ಲಿ ಚಿಂತೆ ಮಾಡುತ್ತಾ ಇಬ್ಬರೂ ಕುಳಿತಿದ್ದರು. ಹೊಟ್ಟೆಗೆ ಊಟವಿಲ್ಲ. ಕಣ್ಣಿಗೆ ನಿದ್ದೆಯಿಲ್ಲ. ಹೊತ್ತು ಹೋಗಲಾರದ ಸಮಯ ಈ ಸಮಯದಲ್ಲಿ ಮತ್ತೆ ಎಲ್ಲಿಗೆ ಹೋಗೋಣ ಯಾವ ದಿಕ್ಕಿಗೆ ಹೋಗೋಣ ಎಂದು ವಿಚಾರ ಮಾಡುತ್ತಾ ಕುಳಿತಿದ್ದರು ಆ ಸಮಯದಲ್ಲಿ ಒಬ್ಬ ಭಕ್ತ ಬಂದು ಹೇಳಿದರು ಗುಡಿಯ ಎಡಭಾಗದಲ್ಲಿ ಮಠವಿದೆ. ಆ ಮಠಕ್ಕೆ ಹೋಗಿರಿ ಅಲ್ಲಿ ನಿಮಗೆ ಪ್ರಸಾದ ಸಿಗುತ್ತದೆ. ಪ್ರಸಾದ ಮಾಡಿ ಮತ್ತೆ ಗುಡಿಗೆ ಬಂದು ರಾತ್ರಿ ಇಲ್ಲೇ ವಿಶ್ರಾಂತಿ ಮಾಡಬಹುದು ಎಂದು ಹೇಳಿದಾಗ ಅಣ್ಣ-ತಮ್ಮ ಇಬ್ಬರೂ ಕೂಡಿ ಹಲಕರ್ಟಿಯ ಕಟ್ಟಿಮನಿಯ ಹೀರೆಮಠದ ಏಳನೆಯ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ.ಷ.ಬ್ರ. ದೊಡ್ಡಯ್ಯ ಶಿವಾಚಾರ್ಯ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ ಗುರುಗಳು ಕೇಳಿದರು ಮಕ್ಕಳೇ ತಮ್ಮ ಹೆಸರೇನು, ಯಾವ ಊರಿನಿಂದ ಬಂದಿದ್ದೀರಿ ಹಾಗೂ ಮುಂದೆ ಎಲ್ಲಿಗೆ ಹೋಗಬೇಕು ಎಂದು ಶ್ರೀಗಳು ಕೇಳಿದರು.[೪] ಆಗ ನನ್ನ ಹೆಸರು ರಾಮಲಿಂಗಯ್ಯ ನನ್ನ ಅಣ್ಣ ಗಂಗಯ್ಯ ಅಂತ ಹೆಸರು ನಮ್ಮ ಊರು ಬೀರನೂರು ಗುರುಗಳೇ ನಮಗೆ ತಂದೆಯೂ ಇಲ್ಲ, ತಾಯಿಯೂ ಇಲ್ಲ. ತಾಯಿ ತಂದೆಯವರು ಲಿಂಗೈಕ್ಯರಾಗಿದ್ದಾರೆ.

ಗುರುಗಳೇ ತಾವೇ ನಮಗೆ ದೇವರು, ತಾವೇ ನಮಗೆ ಬಂಧು, ಬಾಂದವರೆಲ್ಲ ನಮಗೆ ಕೊನೆಗೆ ನಿಮ್ಮ ನಾಮವೇ ಆಧಾರವಾಗಿದೆ. ಈಗ ನಾವು ನಿಮ್ಮ ಆಶ್ರಯದಲ್ಲಿ ಬಡವರಲ್ಲ ಈಗ ನಮಗೆ "ಶಿವನಾಮ" ಎಂಬ ಸಂಪತ್ತು ಸಿಕ್ಕಿದೆ. ಜನ್ಮ ಸಾರ್ಥಕವಾಯಿತು ಗುರುಗಳಿಗೆ ಹೇಳುತ್ತಾ ಸಾಷ್ಟಾಂಗ ನಮಸ್ಕಾರ ಮಾಡಿದರು.

ಮುಂದೆ ಹೀಗೆ ಮಠದಲ್ಲಿ ಶ್ರೀ ಗುರು ಷ.ಬ್ರ.ದೊಡ್ಡಯ್ಯ ಶಿವಾಚಾರ್ಯರು ಗುರುಸೇವೆ ಮಾಡುತ್ತಾ ಮಠದಲ್ಲಿಯೇ ಉಳಿದುಕೊಂಡರು. ಅದೇ ಮಠದಲ್ಲಿ ಇನ್ನೊಬ್ಬರಾದ ಪಾರ್ವತಮ್ಮ ಒಬ್ಬರೂ ಕೂಡ ಮಠದಲ್ಲಿ ಗುರುಸೇವೆ ಹಾಗೂ ಬಂದ ಭಕ್ತರಿಗೆ ತಾಯಿಯಾಗಿ ಭಕ್ತರಿಗೆಲ್ಲ ಪ್ರಸಾದ ಮಾಡಿಸಿ ಬಂದ ಹೋದವರಿಗೆಲ್ಲ ಯಾವುದೇ ತೊಂದರೆ ಉಂಟಾಗದ ಹಾಗೆ ಪಾರ್ವತಮ್ಮ ತಾಯಿ ಮಠದಲ್ಲಿ ಸೇವೆ ಮಾಡುತ್ತಿದ್ದಳು.

ಗಂಗಯ್ಯ ಹಾಗೂ ರಾಮಲಿಂಗಯ್ಯ ಇಬ್ಬರೂ ಮಠದ ಗುರುಗಳಿಗೆ ಸೇವೆ ಮಾಡುತ್ತಾ ಅಪಾರವಾದ ಭಕ್ತಿ ಭಾವವನ್ನು ಹೊಂದಿದ್ದ ಶಿಷ್ಯರಾದರು. ಗುರು ಆಜ್ಞೆಯಂತೆ ನಡೆದುಕೊಂಡು ಗುರುವಿನ ಗುಲಾಮನಾಗಿ ಗುರುಗಳಲ್ಲಿ ಬೆಳೆದರು. ಗುರು ಶಿಷ್ಯರ ಸಂಭಂದ ಹೀಗೆ ಬೆಳೆಯಿತು, ಹಾಲಿನಲ್ಲಿರುವ ನೀರು ಬೆಂಕಿಯ ಕಾವಿಗೆ ಆವಿಯಾಗಿ ಹೋಗುತ್ತಿರುವಾಗ ನೀರು ಹಾಕಿದರೆ ಹೇಗೆ ಉಕ್ಕುವಿಕೆ ನಿಲ್ಲುತ್ತದೆಯೋ ಹಾಗೆ ಗುರುರೂಪದ ಹಾಲಿನಲ್ಲಿ ಶಿಷ್ಯ ರೂಪದ ನೀರು ಬೆರೆತ ಹಾಗೆ ಉಕ್ಕುವೂದು ನಿಲ್ಲುವಂತೆ ಶಿಷ್ಯನು ಗುರಿ ಮುಟ್ಟಿಗುರುನಾಗುವನು ಅಂತೆಯೇ ರಾಮಲಿಂಗಯ್ಯ ಗುರುವಿಗೆ ಒಬ್ಬ ಪರಮಶಿಷ್ಯರಾದರು. ಕರ್ನಾಟಕದ ಸುಪ್ರಸಿದ್ಧ ಸಂತ ಕವಿ ಶಿಶುನಾಳ ಶರಿಫರು ಹೇಳಿದಂತೆ...

ಗುರುವಿನ ಕರುಣೆ ಆಗಿರಬೇಕು

ಗುರುವಿನ ಕೀಲೊಂದು ಗುರುತಿರಬೇಕು.

ಒಳಗೂ ಹೊರಗೂ ಒಂದಾಗಿರಬೇಕು.

ಬಳಸಿದ ಗಂಟು ನಿಬಿಚ್ಚಿರಬೇಕು.

ಕೆಲವು ಕಾಲ ಕಳೆದ ನಂತರ ಪೂಜ್ಯರು ತಾವು ತಮ್ಮ ವೃದ್ಯಾಪ್ಯ ಜೀವನದ ಕೊನೆಯುಸಿರಿನ ದಿನಗಳು ಸಮೀಪಿಸುತ್ತಾ ಬರುವುದನ್ನು ಅರಿವಿಗೆ ತಂದುಕೊಂಡು ಈ ಮಠಕ್ಕೆ ಉತ್ತರಾಧಿಕಾರಿ ಹಾಗೂ ಪೀಠಾಧಿಕಾರಿಯನ್ನು ಆರಿಸುವಹೊಣೆ ಈ ಊರಿನ ಭಕ್ತರ ಮೇಲೆ ಬಂದಿತ್ತು. ಸೂಕ್ತ ಪೀಠಾಧಿಕಾರಿ ದೊರಕಿಸಿಕೊಳ್ಳುವುದರಲ್ಲಿ ಭಕ್ತ ವೃಂದದವರು ಒಂದುಗೂಡಿ ಸಮಾಲೋಚನೆ ಮಾಡಿದ್ದರು. ರಾಮಲಿಂಗಯ್ಯನವರು ಯಾವಾಗಲೂ ಗುರುಸೇವೆ ಮಾಡುತ್ತಾ ಮೋಕ್ಷಸಾಧನೆಯ ಮಾರ್ಗವನ್ನು ಅರಿಯುವಂತಹನಾಗಿದ್ದು ಆತನಿಗೆ ಪೀಠಾಧಿಪತಿ ಪಟ್ಟ ವಹಿಸಬೇಕೆಂದು ಗುರುಗಳು ಊರಿನ ಎಲ್ಲಾ ಭಕ್ತರಿಗೆ ತಿಳಿಸಿದರು.

ಶ್ರೀ ಗುರುಗಳ ಅನುಮತಿಯ ಪ್ರಕಾರ ಶುಭನಕ್ಷತ್ರ ಬ್ರಾಹ್ಮಿ ಮಹೂರ್ತದಲ್ಲಿ ಗುರುವಾರದಂದು ಹಲಕರ್ಟಿಯ ಕಟ್ಟಿಮನಿ ಹಿರೇಮಠ ಏಳನೇಯ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಷ.ಬ್ರ. ದೊಡ್ಡಯ್ಯ ಶಿವಾಚಾರ್ಯರು ತ್ರಿಕಾಲ ಜ್ಞಾನಿಗಳು ಶಿವಪೂಜಾದುರಂಧರರು ಮಹಾತಪಸ್ವಿಗಳು ವಾಕ್‌ಸಿದ್ಧಿ ಪುರುಷರು ಆಗಿರುವುದರಿಂದ ಅವರ ಮೇಲೆ ಅಪಾರವಾದ ಗೌರವ ಆಧಾರ, ಅಭಿಮಾನ, ಗೌರವ, ಭಕ್ತಿ, ಭಾವವನ್ನು ಹೊಂದಿದ ಸದ್ಭಕ್ತರು ಅವರ ಆಜ್ಞೆಯಂತೆ ಅವರು ನಿರ್ಧರಿಸಿದ ಉತ್ತಾರಾಧಿಕಾರಿಯ ಪಟ್ಟಾಧಿಕಾರದ ಮಹೋತ್ಸವವನ್ನು ಬಹಳ ಅದ್ದೂರಿಯಿಂದ ಸಂಭ್ರಮದಿಂದ, ಉತ್ಸಾಹದಿಂದ ಭಕ್ತಿ ಭಾವದಿಂದ ನಡೆಸಲಾಯಿತು.[3] ಈ ಪಟ್ಟಾಧಿಕಾರದ ಬ್ರಾಹ್ಮಿಮುಹೂರ್ತದಲ್ಲಿ ಉತ್ತರಾಧಿಕಾರಿಯಾಗಲಿರುವ ರಾಮಲಿಂಗಯ್ಯ

ಸ್ವಾಮಿಯವರ ಮಸ್ತಕದ ಮೇಲೆ ತಮ್ಮ ಹಸ್ತವನ್ನೇ ಇಟ್ಟು ನಿಜ ವಸ್ತುವನ್ನು ತೆಗೆದು ಹಸ್ತ ಪೀಠದೊಳಿತ್ತು ಭವ ಬೀಜದ ಸುಡುವ ಇಷ್ಟಾರ್ಥವ ಜವದಿ ಪಾಲಿಸುವ "ಶಿವಪಂಚಾಕ್ಷರಿ ಮಂತ್ರ" ಗೌಪ್ಯದಿ ಅರುಹುತ ನಾನಾವಿಧ ಭಕ್ತಿರಸದಿ ಮುಳುಗೆಂದು ಭೋಧಿಸಿ ಮರೆವೆಯ ತೆಗೆಯಿಸಿ ಬ್ರಹ್ಮ ಜ್ಞಾನದರೂವಿನೊಳಿರಿಸಿ ಶ್ರೀ ಗುರು ಮಹಾಲಿಂಗನೆನಿನೆಂದು ಅರಿವಿತ್ತು. ಗುರುತರಹದ ಶಿವಯೋಗ ಮುದ್ರೆಯ ಅನುಗ್ರಹಿಸಿ ತನ್ನದೇ ಆದ ಗುರುವಿನ ಹೆಸರು ಅಂದರೆ ಶ್ರೀ ಮುನೀಂದ್ರ ಶಿವಾಚಾರ್ಯರು ಎಂಬ ನೂತನ ಅಭಿಧಾನವನಿತ್ತು ಆಶೀರ್ವಧಿಸಿದರು ಇದೇ ನಾಮಾಂಕಿತವನ್ನು ಮುಂದಿನ ಎಲ್ಲಾ ಪೀಠಾಧಿಕಾರಿಗಳಿಗೆ ಪರಂಪರಾಗತವಾಗಿ ಶ್ರೀ ಮುನೀಂದ್ರ ಶಿವಾಚಾರ್ಯರು ಎಂಬ ನಾಮಾಂಕಿತವೇ ಮುಂದುವರೆಯಲಿ ಎಂದು ಅಪ್ಪಣೆ ನೀಡಿ ತಾವು ಹೊತ್ತ ಭಾರವನ್ನು ಇಳಿಸಿಕೊಂಡರು.

- **ಶ್ರೀ ವೀರತಪಸ್ವಿ ಮುನೀಂದ್ರ ಶಿವಾಚಾರ್ಯರ ಪವಾಡಗಳು**
- **ನದಿದಾಟಿದ ಪವಾಡ:-**

ಒಂದು ದಿನ ಆಂದೋಲ ಗ್ರಾಮದ ಭಕ್ತಾಧಿಗಳು ಒಂದು ದೊಡ್ಡ ಕಾರ್ಯಕ್ರಮ ಹಮ್ಮಿಕೊಂಡಿದ್ದು ಆ ಕಾರ್ಯಕ್ರಮದಲ್ಲಿ ಶ್ರೀ ಷ.ಬ್ರ. ಮುನೀಂದ್ರ ಶಿವಾಚಾರ್ಯರಿಗೆ ಆಮಂತ್ರಣ ನೀಡಿ ತಮ್ಮ ಪಾದವನ್ನು ನಮ್ಮ ಗ್ರಾಮಕ್ಕೆ ಇಟ್ಟು ತಾವು ಭಕ್ತರಿಗೆ ಆಶೀರ್ವಾದ ಮಾಡಬೇಕೆಂದು ಗುರಗಳಲ್ಲಿ ವಿನಂತಿಸಿದರು ಆಗ ಶ್ರೀಗಳು ಭಕ್ತರನ್ವಯ ಆಮಂತ್ರಿತದ ಮೇರೆಗೆ ಆಂದೋಲ ಗ್ರಾಮಕ್ಕೆ ಹೋಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲಾ ಭಕ್ತರ ಕಷ್ಟ ದುಃಖವನ್ನು ಕೇಳಿ ತಿಳಿದು ಪರಿಹಾರ ಮಾರ್ಗವನ್ನು ಸೂಚಿಸಿದರು ಅದೇ ದಿನ ಶಹಾಬಾದ ಗ್ರಾಮಕ್ಕೆ ಗುರುಗಳಿಗೆ ಆಮಂತ್ರಣವು ಇತ್ತು. ಆದ ಕಾರಣ ಗುರುಗಳು ತಮ್ಮ ಕಾರ್ಯಕ್ರಮವನ್ನುಹೆಚ್ಚು ಸಮಯವನ್ನು ಕಳೆದುಕೊಳ್ಳಲಾರದೆ ತಮ್ಮ ಪೂಜೆ ಸಾಮಾನುಗಳನ್ನು ಒಂದು ಎತ್ತಿನ ಗಾಡಿಯಲ್ಲಿ ಮೊದಲು ಕಳಿಸಿದರು ನಂತರ ಎಲ್ಲಾ ಭಕ್ತರು ಬಂದು ಶ್ರೀ ಮುನೀಂದ್ರ ಶಿವಾಚಾರ್ಯರ ಆಶೀರ್ವಾದ ಪಡೆಯಲು ಇಡೀ ಆಂದೋಲಾ ಗ್ರಾಮದ ಭಕ್ತರು ಬಂದು ಶ್ರೀ ಮುನೀಂದ್ರ ಶಿವಾಚಾರ್ಯರ ಆಶೀರ್ವಾದ ಪಡೆಯಲು ಬಹಳ ಸಮಯ ತೆಗೆದುಕೊಂಡರು. ಆ ಸಮಯದಲ್ಲಿ ಮಳೆ ಪ್ರಾರಂಭವಾಯಿತು. ಧಾರಾಕಾರದ ಮಳೆಗೆ ತಡೆಯಲಾರದೇ ಹಳ್ಳ ಕೊಳ್ಳ ತುಂಬಿ ತುಳುಕುತ್ತಿತ್ತು. ಮಳೆ ನಿಂತ ಮೇಲೆ ಶ್ರೀಗಳು ಶಹಾಬಾದ ಗ್ರಾಮಕ್ಕೆ ಸೇವಕರೊಂದಿಗೆ ನಡೆದರು. ಆ ಸಮಯದಲ್ಲಿ ಊರಿನ ಭಕ್ತರು ಗುರುಗಳಿಗೆ ಕುದುರೆಯ ಮೇಲೆ ಕೂಡಿಸಿಕೊಂಡು ಕಾಗಿಣಾ ನದಿಯವರೆಗೆ ತಲುಪಿಸಿದರು. ಆ ಸಮಯದಲ್ಲಿ ನದಿಯೂ ಆ ದಡದಿಂದ ಈ ದಡದವರೆಗೆ ತುಂಬಿ ಹರಿಯುತ್ತಿತ್ತು ಆ ಸ್ಥಳದಲ್ಲಿ ಅಂಬಿಗರು ಇದ್ದರು ಇವರಿಗೆ ಗುರುಗಳು ಹೀಗೆ ನುಡಿದರು ಅಯ್ಯಾ ಮಕ್ಕಳೆ ನಾವುಗಳು ಶಹಾಬಾದ ಗ್ರಾಮಕ್ಕೆ ಹೋಗಬೇಕಾಗಿದೆ ಆ ಗ್ರಾಮದಲ್ಲಿ ನಮಗೆ ಆಮಂತ್ರಣ ಕೊಟ್ಟಿದ್ದಾರೆ ಆದಕಾರಣ ನಮ್ಮನ್ನು ನಿಮ್ಮ ಹರಿಗೋಲಿನ (ದೋಣಿ) ಸಹಾಯದಿಂದ ಆಚೆದಡವನ್ನು ಮುಟ್ಟಿಸಬಲ್ಲಿರಾ ? ಎಂದು ಕೇಳುತ್ತಾರೆ ಅಂಬಿಗರು ಬಹಳ ಭಯ ಭಕ್ತಿಯಿಂದ ಶ್ರೀಗಳವರ ಪಾದಕ್ಕೆ ವಂದಿಸಿ ಸ್ವಾಮಿಗಳೆ ನದಿಯು ಈಗ ತಾನೇ ಏರುಮುಖವಾಗತೊಡಗಿದೆ. ಇನ್ನೂ ಎರಡು ಮೂರು ತಾಸು ತಡೆದರೆ ಇಳಿಮುಖವಾಗುತ್ತದೆ. ಅಲ್ಲಿಯವರೆಗೆ ನಾವು ಊಟವನ್ನು ಮಾಡುತ್ತೇವೆ. ನಮಗೆ ಈಗ ಬಹಳ ಹಸಿವು ಆಗಿದೆ. ಊಟ ಮುಗಿಸಿಕೊಂಡು ಬರುತ್ತೇವೆ. ಅಲ್ಲಿಯವೆಗೆ ತಾವು ವಿಶ್ರಾಂತಿ ತೆಗೆದುಕೊಳ್ಳಿ ಆನಂತರ ತಮಗೆ ಆಚೆ ದಡಕ್ಕೆ ಸುರಕ್ಷಿತವಾಗಿ ಮುಟ್ಟಿಸುತ್ತೇವೆ ಎಂದು ಕೇಳಿಕೊಂಡರು. ಶ್ರೀ ಮುನಿಂದ್ರ ಶಿವಾಚಾರ್ಯರು ಅಂಬಿಗರನ್ನು ಕುರಿತು ಮಕ್ಕಳೇ ನಾವು ಇಲ್ಲಿ ಬಹಳ ಸಮಯವನ್ನು ಕಳೆಯುವಂತಿಲ್ಲ, ನಮಗೆ ಈಗ ತಾನೆ ಬಹಳ ಸಮಯವಾಗಿದೆ. ಭಕ್ತರು ನಮ್ಮ ದಾರಿಯನ್ನು

ಕಾಯುತ್ತಿರಬಹುದು ಎಂದು ಹೇಳಿ ತಮ್ಮ ಹೆಗಲಿನ ಮೇಲೆ ಇದ್ದ ಕಂಬಳಿಯನ್ನು ತೆಗೆದು ಆ ಕಂಬಳಿಯನ್ನು ಹಾಸಿ ಅದರ ಮೇಲೆ ಪೂಜೆ ಮಾಡಿದರು. ನಂತರ ಗುರುವಿನ ನಾಮಸ್ಮರಣೆ ಮಾಡಿ ಕಂಬಳಿಯನಬ್ನು ಆಸನವನ್ನಾಗಿ ಮಾಡಿಕೊಂಡು ಕೈಯಲ್ಲಿದ್ದ ಯೋಗ ದಂಡದಿಂದ ಹುಟ್ಟನ್ನು ಹಾಕುತ್ತಾ ಅಪಾಯ ಮೀರಿ ತುಂಬಿ ಹರಿಯುತ್ತಿದ್ದ ಕಾಗಿಣಾ ನದಿಯನ್ನು ದಾಟುತ್ತಾರೆ.[5] ಇದನ್ನು ನೋಡುತ್ತಿದ್ದ ಅಂಬಿಗರಿಗೆ ಆಶ್ಚರ್ಯವಾಯಿತು... ಆಚೆ ದಡದಲ್ಲಿ ಶಹಾಬಾದ ಭಕ್ತರು ಗುರುಗಳನ್ನು ಕಂಬಳಿಯ ಮೇಲೆ ನದಿ ದಾಟಿ ಬರುವುದನ್ನು ನೋಡಿ ಭಕ್ತರು ಸಂತೋಷಪಟ್ಟು ಶ್ರೀಗಳೂ ಒಬ್ಬ ಯೋಗ್ಯ ಶಿವಜ್ಞಾನಿಯು, ಸದಾಚಾರ ಸಂಪನ್ನರು ಆದ ಸಾಧಕರು, ಶ್ರೇಷ್ಠ ತಪಸ್ವಿಗಳು, ವಾಕ್‌ಸಿದ್ಧಿ ಪುರುಷರಾಗಿದ್ದು, ಭಕ್ತರನ್ನು ಉದ್ಧರಿಸಿದವರಾಗಿದ್ದಾರೆ. ಭಕ್ತರ ಭಾಗ್ಯದೇವತೆಯಾಗಿ ಕಲ್ಪವೃಕ್ಷವಾಗಿ ಭಕ್ತರ ಹೃದಯ ಮಂದಿರದಲ್ಲಿ ದೇವರಾಗಿ ಹಲಕರ್ಟಿಯ ಕಟ್ಟಿಮನಿ ಹಿರೇಮಠದ ಶ್ರೀ. ಷ.ಬ್ರ. ಮುನೀಂದ್ರ ಶಿವಾಚಾರ್ಯರು ಎಂದು ಜಯ ಘೋಷ ಮಾಡುತ್ತಾ ವೈಭವದಿಂದ ಮಂಗಳವಾದ್ಯಗಳ ಸಹಿತ ಭಕ್ತ ಜನರು ಶಹಾಬಾದ ಗ್ರಾಮಕ್ಕೆ ಬರಮಾಡಿಕೊಳ್ಳುತ್ತಾರೆ. ಈ ಪವಾಡ ವಿಷಯ ಗೊತ್ತಾದ ಕೂಡಲೇ ಇಡೀ ಶಹಾಬಾದ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರುಬಂದು ಶ್ರೀಗಳ ಆಶೀರ್ವಾದ ಪಡೆದರು.

➢ **ಜೀವದಾನ ನೀಡಿದರು:-**

ಕಡಬೂರ ಗ್ರಾಮದ ಒಬ್ಬ ಮಹಿಳೆಯು ಅನಾರೋಗ್ಯದಿಂದ ಮಾತು ಸಹ ಬರಲಾರದಂತೆ ಕೊನೆಯುಸಿರಿನ ಮಟ್ಟಕ್ಕೆ ಬಂದಿದ್ದಳು. ಆ ಮಹಿಳೆಯನ್ನು ನಾಲ್ಕಾರು ಜನರು ಮಂಚದ (ಹೊರಸಿನ) ಮೇಲೆ ಹಾಕಿ ಹಲಕರ್ಟಿಯ ಶ್ರೀ ಮುನೀಂದ್ರ ಶಿವಾಚಾರ್ಯರ ಮಠಕ್ಕೆ ಕರೆತಂದರು. ಮಠದಲ್ಲಿ ಬಂದು ಶ್ರೀಗಳಿಗೆ ಆ ತಾಯಿಯ ಅನಾರೋಗ್ಯದ ಬಗ್ಗೆ ಗುರುಗಳಿಗೆ ತಿಳಿಸಿದ್ದರು. ಗುರುಗಳು ಆ ತಾಯಿಯನ್ನು ನೋಡಿ ಹೇಳುತ್ತಾರೆ. ಈಗ ನಮ್ಮ ಮಠದಲ್ಲಿ ಯಾವ ಔಷಧವೂ ಇಲ್ಲ. ಯಾವ ಗಿಡ ಮೂಲಿಕೆಯೂ ಸಹ ಇಲ್ಲ, ಈ ಅಮ್ಮಳ ಆರೋಗ್ಯ ಹೇಗೆ ಗುಣಪಡಿಸಬೇಕು ? ಎಂದು ಶ್ರೀಗಳು ಎನ್ನಲು ಆಗ ಕಡಬೂರು ಗ್ರಾಮದವರು ಗುರುಗಳಿಗೆ ಕೈಮುಗಿದು ಕೇಳಿಕೊಳ್ಳುತ್ತಾರೆ ಗುರುಗಳೇ ತಾವು ತ್ರಿಕಾಲ ಜ್ಞಾನಿಗಳು, ಶಿವಪೂಜಾ ದುರಂಧರು, ಮಹಾ ತಪಸ್ವಿಗಳು, ವಾಕ್ಸಿದ್ಧಿ ಪರುಷರು ಆಗಿರುವುದರಿಂದ ತಮ್ಮ ಮೇಲೆ ನಮಗೆ ಅಪಾರ ಭಕ್ತಿ, ಗೌರವವಿದೆ. ಎಂದು ಕಡಬೂರು ಗ್ರಾಮದಿಂದ ಹೊತ್ತುಕೊಂಡು ತಮ್ಮ ಮಠಕ್ಕೆ ತಂದಿದ್ದೇವೆ ಎಂದು ಶ್ರೀ.ಷ.ಬ್ರ. ಮುನೀಂದ್ರ ಶಿವಾಚಾರ್ಯರಲ್ಲಿ ಕೇಳಿಕೊಂಡರು. ಆಗ ಮಠದಲ್ಲಿ, ಮಠದ ಸೇವಕಿಯಾದ ರುದ್ರಮ್ಮ ಇದ್ದಳು, ಆ ರುದ್ರಮ್ಮಳಿಗೆ ಗುರುಗಳು ತಿಳಿಸಿದರು. ನೋಡಮ್ಮಾ ನಮ್ಮ ಮಠದಲ್ಲಿ ಯಾವುದಾದರೂ ಔಷಧ ಸಿಗುತ್ತ ಏನು ನೋಡಿಕೊಂಡು ಬರಲು ತಿಳಿಸಿದರು ಆಗ ತಾಯಿ ರುದ್ರಮ್ಮ ಹುಡುಕಾಡಿದರೆ ಒಂದು ಮಡಿಕೆಯಲ್ಲಿ ಎಂಟು ಹತ್ತು ಕಾಳು ಮೆಕ್ಕೆ ಜೋಳ ಸಿಕ್ಕಿದವು.ಮೆಕ್ಕೆ ಜೋಳದ ಕಾಳನ್ನು ಸಣ್ಣ ಪುಡಿ ಮಾಡಿಸಿದರು. ಅದರಲ್ಲಿ ಆದಾರವನ್ನು ಕಲಿಸಿ ಶಿವ ಪಂಚಾಕ್ಷರಿ ಮಂತ್ರವನ್ನು ಜಪಿಸಿ ಆ ಔಷಧವನ್ನು ಏಳು ದಿವಸ ಸೇವಿಸಬೇಕು. ಏಳು ದಿವಸಗಳಲ್ಲಿ ಗುಣಮುಖಳಾಗುತ್ತಾಳೆ ಎಂದು ಹೇಳಿ ಆಶೀರ್ವಾದ ಮಾಡಿ ಕಳಿಸುತ್ತಾರೆ.

ಗುರುಗಳು ನುಡಿದ ಹಾಗೆ ಏಳು ದಿವಸಗಳಲ್ಲಿ ಗುಣಮುಖಳಾಗಿಕಡಬೂರು ಗ್ರಾಮದಿಂದ ಹಲಕರ್ಟಿಯ ಮಠಕ್ಕೆ ತಾವೇ ನಡೆದುಕೊಂಡು ಬಂದು ಗುರುಗಳಿಗೆ ಸಾಷ್ಟಾಂಗ ಮಾಡಿ ಗುರುಗಳೇ ತಾವು ಶ್ರೀ ಕಟ್ಟಿಮನಿ ಹೀರೆಮಠದ ಮಹಾಮಹಿಮರು. ಒಬ್ಬ ಯೋಗ್ಯ ಶಿವಜ್ಞಾನಿ ಈ ಭಾಗದ ಎಲ್ಲಾ ಭಕ್ತರ ದುಃಖಃ ದುಮ್ಮಾನಗಳ ಕಷ್ಟಗಳನ್ನು ದೂರ ಮಾಡಿ ಉದ್ಧಾರ ಮಾಡುವಂತಹ ಶ್ರೇಷ್ಟ ಮುನಿವರ್ಯ. ಭಕ್ತರ ಭಾಗ ದೇವತೆಯಾಗಿ, ಕಲ್ಪವೃಕ್ಷವಾಗಿ ಭಕ್ತರ ಹೃದಯ ಮಂದಿರದಲ್ಲಿ ದೇವರಾಗಿ ಬೆಳಗುವಂತಹ

ನಡೆದಾಡುವ ದೇವರು. ತಾವು ನನ್ನ ಪ್ರಾಣ ಹೋದದನ್ನು ಮರಳಿ ಜೀವದಾನ ನೀಡಿದ್ದೀರಿ ಇದು ನನ್ನ ಜನ್ಮಪರ್ಯಂತ ಸದಾಕಾಲ ತಮ್ಮ ಸೇವೆ ಮಾಡುವೆ ನನ್ನ ಮೇಲೆ ದಯಪಾಲಿಸಬೇಕೆಂದು ತಮ್ಮ ಭಕ್ತಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರ ಮಾಡಿ ತನ್ನ ಗುರು ಭಕ್ತಿಯನ್ನು ಸಲ್ಲಿಸಿದಳು.

➢ **ಹಿಂದೂ ಮುಸ್ಲೀಂ ಭಾವ್ಯಕ್ಯತೆ (ಕಿಸ್ತಿ ಜುನೋದಿ ಸಾಹೇಬ ಖಾದ್ರಿ):-**

ಹಲಕರ್ಟಿಯ ಊರಿನವರೇ ಆದ ಸಾಹೇಬ ಕಿಸ್ತಿ ಜುನೇದಿ ಪಾಶಾ ಖಾದ್ರಿ ಸಾಹೇಬರ ಮೊಮ್ಮಗ ಜನಿಸಿದಾಗ ಪಾಶಾ ಖಾದ್ರಿ ಸಾಹೇಬರು ಕಟ್ಟಿಮನಿ ಹೀರೆಮಠದ ಪೀಠಾಧಿಪತಿಗಳಾದ ಶ್ರೀ ಮುನೀಂದ್ರ ಶಿವಾಚಾರ್ಯರವರ ಮಠಕ್ಕೆ ಬಂದು ಶ್ರೀಗಳ ದರ್ಶನ ಪಡೆದು ಮೊಮ್ಮಗ ಜನಿಸಿದ ಬಗ್ಗೆ ಗುರುಗಳಿಗೆ ತಿಳಿಸಿದರು. ಆಗ ಶ್ರೀ ಮುನೀಂದ್ರ ಶ್ರೀಗಳು ಬಹಳ ಸಂತೋಷಟ್ಟು ಸಾಹೇಬರಿಗೆ ತಿಳಿಸುತ್ತಾರೆ. ತಮ್ಮ ಮೊಮ್ಮಗ ಬಹಳ ತಪೋನಿಧಿಗಳಾಗುತ್ತಾರೆ. ಪವಾಡ ಪುರುಷರು ಆಗಿದ್ದು, ಭಕ್ತ ಸಮುದಾಯಕ್ಕೆ ತಮ್ಮ ಅಮೃತ ವಾಣಿಯಿಂದ ಧರ್ಮೋಪದೇಶ ಮಾಡುತ್ತಾ ಅಜ್ಞಾನ ಎಂಬ ಕತ್ತಲೆಯನ್ನು ಹೊಡೆದೋಡಿಸಿ ಸುಜ್ಞಾನದ ಬೆಳಕನ್ನು ತೋರಿಸುವಂತ ಒಬ್ಬ ಶರಣನಾಗುತ್ತಾನೆ ಎಂದು ತಿಳಿಸಿದರು. ಆಗ ಪಾಶಾ ಖಾದ್ರಿ ಸಾಹೇಬರು ಶ್ರೀ ಮುನೀಂದ್ರರ ಶಿವಾಚಾರ್ಯರಿಗೆ ನಮಸ್ಕರಿಸಿ ಗುರುಗಳೇ ನಮ್ಮ ಮೊಮ್ಮಗನ ನಾಮಕರಣ ಹಾಗೂ ತೊಟ್ಟಿಲು (ಜುಲಾ) ಕಾರ್ಯಕ್ರಮ ತಮ್ಮ ಸುಮ್ಮುಖದಲ್ಲಿ ನೆರವೇರಿಸಬೇಕೆಂದು ಸಾಹೇಬರು ಕೇಳಿಕೊಂಡರು.[2] ಶ್ರೀ ಷ.ಬ್ರ.ಮುನೀಂದ್ರ ಸ್ವಾಮಿಗಳು ಒಪ್ಪಿಕೊಂಡು ಸಾಹೇಬರ ಮನೆಗೆ ಹೋಗಿ ತೊಟ್ಟಿಲು (ಜುಲಾ) ಹಾಗೂ ನಾಮಕರಣ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮೊಮ್ಮಗನ ಹೆಸರು ಅಬ್ದುಲ್ ರಬ್ ಶಹಾಖಾದ್ರಿ ಎಂದ ನಾಮಕರಣ ಮಾಡಲಾಯಿತು ಹಾಗೂ ತೊಟ್ಟಿಲು(ಜುಲಾ) ಕಾರ್ಯಕ್ರಮವನ್ನು ಶ್ರೀಗಳವರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಈ ಐತಿಹ್ಯದಲ್ಲಿ ಎದ್ದು ತೋರುವ ಐತಿಹ್ಯ ಅಂಶವೆಂದರೆ ಹಿಮದೂ ಮುಸ್ಲಿಂ ಸಮನ್ವಯತೆಯಿಂದ ದೈಕ್ಯತೆಯಿಂದ ಬಾಳುವುದಾಗಿದೆ. ಒಬ್ಬ ಹಿಂದೂ ಧರ್ಮದ ಸಂತ ಶ್ರೀ. ಮುನೀಂದ್ರ ಶಿವಾಚಾರ್ಯರು ಮುಸ್ಲಿಂರ ಮನೆಗೆಹೋಗಿ ಆ ಮನೆಯಲ್ಲಿ ನಡೆಯುವ ಮಗುವಿನ ಜೊಲಾ ಕಾರ್ಯ ಕ್ರಮದಲ್ಲಿ ಭಾಗವಹಿಸುವುದುರಿಂದ ಜನರು ಇವರ ಸರ್ವಧರ್ಮಸಮಾನತೆಯ ನಿಲುವನ್ನು ಅರಿತು. ಅನ್ಯೂನ್ಯವಾಗಿ ತಮ್ಮ ಬದಕನ್ನು ನಡೆಸುತ್ತಾರೆ. ಇದು ಒಂದು ಧಾರ್ಮಿಕ ಐಕ್ಯತೆ ಮತ್ತು ಸೌಮ್ಯತೆಯನ್ನು ಒಳಗೊಂಡ ಐತಿಹ್ಯವಾಗಿದೆ.

೨) ಹಲಕರ್ಟಿ ಗ್ರಾಮದ ವೀರಭದ್ರೇಶ್ವರ ಪವಾಡ:-

ಹಲಕರ್ಟಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಪವಾಡ ಹೀಗಿದೆ. ಹೆಬ್ಬಾಳದ ಮಹಾಭಕ್ತನಾಗಿರುವ ಜಾಡಕುಲದ ಬಂಡೆಪ್ಪ ಎಂಬುವವರು ಬಹಳ ಭಕ್ತಿ, ಶ್ರದ್ಧೆಯಿಂದ ಇವರನ್ನು ಪೂಜಿಸುತ್ತಾ ಇರಲು ಅವರ ಭಕ್ತಿಗೆ ಮೆಚ್ಚಿದ ವೀರಭದ್ರ ಅವರ ಹಿಂದೆ ಹೋಗಿ ಗುಡ್ಡ (ಅಣ್) ದ ಮೇಲೆ ನಿಂತು 'ಅಣವೀರಭದ್ರೇಶ್ವರ' ಎಂದು ಇಂದು ಪ್ರಖ್ಯಾತನಾಗಿದ್ದಾನೆ. ಸಗರನಾಡಿನ ವಿಶ್ವಕರ್ಮ ಕುಲದ ನಿರಂಜನಪ್ಪಾ ಎಂಬುವವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಈ ಮಹಾದಯಾಳು ವೀರಭದ್ರರಿಗೆ ಹರಕೆ ಮಾಡಿ ''ನಾನು ನನ್ನ ರೋಗದಿಂದ ಮುಕ್ತನಾಗಿ ನಾಲ್ಕು ಜನರ ನಡುವೆ ಆರೋಗ್ಯದಿಂದ ಇರುವಂತೆ ಮಾಡಿದ್ದಾದರೆ ನಿನ್ನ ಹತ್ತಿರ ಬಂದು ಪುರವಂತ ಆಡಿ ಶಿರಚ್ಛೇದನ ಮಾಡಿಕೊಳ್ಳತ್ತೇನೆ'' ಎಂದು

ಹರಕೆಯ ಮಾಡಿದನಂತೆ ಅವನಿಚ್ಛೆಯಂತಾಗಲು ತನ್ನ ಹರಕೆಯನ್ನು ವೀರಭದ್ರರಿಗೆ ಮುಟ್ಟಿಸಿದ.[೮] ಮುಂದೆ ಶಿರವು ಕೊಟ್ಟ ವೀರಭದ್ರರು ಅವನಿಗೆ ಜೀವದಾನ ಮಾಡಿದರು.

೩) ಮೂಲ ಕರ್ತೃ ಭರತನೂರ ಶ್ರೀ ಗುರುನಂಜೇಶ್ವರರು:-

➢ **ಗುರುನಂಜೇಶ್ವರರ-ಜನನ:-**

ಶ್ರೀ ಚೆನ್ನಮಲ್ಲಸ್ವಾಮಿಗಳವರ ಕೃಪಾಕಟಾಕ್ಷದಿಂದ ಸದಾನಂದಶೆಟ್ಟಿ ಮತ್ತು ಸುಜ್ಞಾನಮ್ಮ ದಂಪತಿಗಳಿಗೆ ಒಬ್ಬ ಸತ್ಪುತ್ರ ಜನಿಸಿದನು. ಅವನಿಗೆ ಗುರುನಂಜೇಶ್ವರ ಎಂದು ನಾಮಕರಣ ಮಾಡಿದರು. ಗುರುನಂಜೇಶ್ವರರು ಊರಿಗೆ ಯಾರೇ ತಪಸ್ವಿಗಳು ಬಂದರೂ ಪೂಜೆ-ಪ್ರಸಾದಕ್ಕೆಂದು ತಮ್ಮ ಮನೆಗೇ ಕರೆದುಕೊಂಡು ಬರುತ್ತಿದ್ದರು. ತಂದೆ ಸದಾಶಿವ ಶೆಟ್ಟಿ, ತಾಯಿ ಸುಜ್ಞಾನಮ್ಮ ಇವರು ಮನೆಗೆ ಬಂದ ಗುರು-ಜಂಗಮರನ್ನು ಅತಿಥಿದೇವೋ ಭವ ಎಂದು ಅಷ್ಟೇ ಶ್ರದ್ಧೆಯಿಂದ ಅವರ ಪೂಜೆ ಮತ್ತು ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದರು. ತನು ಮನ ಧನದಿಂದ ಗುರುಲಿಂಗ ಜಂಗಮ ಸೇವೆ ಮಾಡುವುದು, ಸುಜ್ಞಾನಮ್ಮ ತಾಯಿಯ ಹಾಗೂ ಗಂಡನ ಮನೆಯವರಿಂದ ಬಂದ ಉದಾತ್ತ ಸಂಸ್ಕೃತಿಯಾಗಿತ್ತು.[೯] ಇಂಥ ಧಾರ್ಮಿಕ ಸಂಪನ್ನತೆಯ ಶ್ರೀಮಂತಿಕೆಯ ದಂಪತಿಗಳಿಗೆ ಮಗ ಓದಬೇಕು, ಚೆನ್ನಾಗಿ ಓದಿ, ಮಗನೂ ವ್ಯವಹಾರವನ್ನು ತಂದೆಯವರ ಜೊತೆಗೆ ನೋಡಿಕೊಳ್ಳಬೇಕೆಂದು ತಂದೆ-ತಾಯಿಗಳು ಬಯಸುತ್ತಲಿದ್ದರು. ಗುರುಗಳ ಆಶೀರ್ವಾದದಿಂದಲೇ ತಮಗೆ ಗುರುನಂಜೇಶ್ವರ ಜನಿಸಿದುದನ್ನು ಜ್ಞಾಪಿಸಿಕೊಳ್ಳುತ್ತ ಆಗಾಗ ಸದ್ಗುರು ಚನ್ನಮಲ್ಲಸ್ವಾಮಿಗಳವರನ್ನೆ ಮೊರೆಹೋಗುತ್ತಿದ್ದರು. ಮಗ ಬೆಳೆದು ದೊಡ್ಡವನಾಗಿ, ಮದುವೆ ಮಾಡಿಕೊಂಡು ಒಳ್ಳೆಯ ಗೃಹಸ್ಥನಾಗಿ ಬದುಕಬೇಕೆಂದು ಬಯಸುತ್ತಿದ್ದ ತಂದೆ ತಾಯಿಗಳಿಗೆ. ಗುರುನಂಜೇಶ್ವರರ ನಡೆವಳಿಕೆ ಒಮ್ಮೊಮ್ಮೆ ವ್ಯತಿರಿಕ್ತವಾಗಿ ಕಾಣಿಸುತ್ತಿತ್ತು.

➢ **ನಿರಾಭಾರಿ ಜಂಗಮ ದೀಕ್ಷೆ:-**

ಶ್ರೀ ಚೆನ್ನಮಲ್ಲಸ್ವಾಮಿಗಳು ಗುರುನಂಜರನ್ನು ಲೌಕಿಕಪ್ರಪಂಚದಲ್ಲಿ ಕಾಲಿಡಲು ತಿಳಿಸಿ ಹೇಳಿದರು. ಆದರೆ ಗುರುನಂಜರು ಅದಾವುದನ್ನು ತಲೆಗೆ ಹಾಕಿಕೊಳ್ಳಲಿಲ್ಲ. ಸದ್ಭಕ್ತ, ಸದಾಚಾರಿಗಳಾಗಿ, ಸತ್ಯಶುದ್ಧ ಕಾಯಕ, ತ್ರಿವಿಧ ದಾಸೋಹ ಮಾಡುತ್ತ ಅನುರೂಪ ಸತಿಯೊಂದಿಗೆ ಒಂದಾಗಿ ನೀವೂ ಗೃಹಸ್ಥರಾಗಿ, ಶರಣರಂತೆ ಬದುಕಬಹುದು ಎಂದೂ ಬೋಧಿಸಿದರು. ಇದಾವುದಕ್ಕೂ ಮನವೆಳಸದ ಗುರುನಂಜರು ವೀರವಿರಕ್ತರಾಗಲು ನಿರ್ಧರಿಸಿದರು. ಇದನ್ನು ಚೆನ್ನಮಲ್ಲಸ್ವಾಮಿ ಗುರುಗಳಲ್ಲಿ ಹೇಳುತ್ತಲೇ ಇದ್ದರು. ಚಿಕ್ಕಂದಿನಲ್ಲಿಯೆ ಗುರುನಂಜರಿಗೆ ಚೆನ್ನಮಲ್ಲಸ್ವಾಮಿಗಳು ನೀಡಿದ್ದ ಇಷ್ಟಲಿಂಗ ಸಾಧನಾದೀಕ್ಷೆಯಿಂದ ತಮ್ಮ ಪಾರಮಾರ್ಥ ಸಂಸಾರವನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದವರಾಗಿದ್ದರು. ಗುರುಗಳಿಗೆ ನೆಚ್ಚಿನ ಶಿಷ್ಯರಾಗಿ ಉನ್ನತಸಾಧನೆ ಮಾಡುತ್ತ ಪರಮಸಿದ್ಧಿಗಾಗಿ ಕಾಯ್ದು ಕುಳಿತುಕೊಂಡಿದ್ದರು. ಶ್ರೇಷ್ಠ ಸಾಧಕರ ಪಂಕ್ತಿಯಲ್ಲಿ ಗುರುನಂಜರನ್ನು ತಂದು ನಿಲ್ಲಿಸಿದ ಶ್ರೇಯಸ್ಸೂ ಚೆನ್ನಮಲ್ಲ ಸ್ವಾಮಿಗಳವರದೇ ಆಗಿತ್ತು. ಲೋಕದ ಜಂಜಾಟ, ದುಃಖ ದುಮ್ಮಾನಗಳಿಂದ ಕೂಡಿದ್ದ ಗುರುನಂಜರು ಅರ್ಥ, ಪ್ರಾಣ, ಶುದ್ಧ ಮಾಡಿಕೊಂಡ ನಿರಾಭಾರಿ ಎನಿಸಿದರು.

ಒಂದುದಿನ ಚೆನ್ನಮಲ್ಲ ಸ್ವಾಮಿಗಳೂ ಶಿಷ್ಯ ಗುರುನಂಜರನ್ನು ಕರೆದು ಸಿದ್ಧಲಿಂಗ ಶಿವಯೋಗಿಗಳ ಕೀರ್ತಿಗೆ ನೀವು ಮುಡಿಪಾಗಿರುವಿರಿ. ನನ್ನ ಶರೀರವೂ ಹಣ್ಣಾಗಿದೆ. ಸಿದ್ದಲಿಂಗ ಶಿವಯೋಗಿಗಳ ಧ್ಯೇಯದ ವಿಶಾಲ ಕ್ಷೇತ್ರವನ್ನು ಸಮರ್ಥರಾದ ನೀವು ಪ್ರವೇಶಿಸುವುದಾಗಬೇಕು. ಇದು ನನ್ನ ಪ್ರಬಲವಾದ ಇಚ್ಛೆಯಾಗಿದೆ. ಶಿವಸಂಕಲ್ಪವೂ ಆಗಿದ್ದೀತು. ಮರುದಿನ ಮಠದಲ್ಲಿ

ಸಾರ್ವಜನಿಕ ಸಭೆ ಜರುಗಿತು. ಮಂಗಳಪುರದ ಪ್ರಮುಖ ಭಕ್ತರೆಲ್ಲರೂ ಕೂಡಿದ್ದರು. ಈ ಸಭೆಗೆ ಸದಾನಂದ ಶೆಟ್ಟಿ ಮತ್ತು ಸುಜ್ಞಾನಮ್ಮ ದಂಪತಿಗಳೂ ಬಂದಿದ್ದರು. ಚೆನ್ನಮಲ್ಲ ಶಿವಯೋಗಿಗಳು ಗುರುನಂಜರ ಅಧ್ಯಾತ್ಮ ಜೀವನದ ಉನ್ನತಿಯನ್ನು ಬಣ್ಣಿಸಿ ಅವರಿಗೆ ಮಹೇಶ್ವರ ದೀಕ್ಷೆಯನ್ನಲ್ಲದೆ ನಿರಾಭಾರಿ ಜಂಗಮದೀಕ್ಷೆಯನ್ನೂ ಅನುಗ್ರಹಿಸಿದರು. ಶ್ರೀಗುರುನಂಜರು ದುಃಖದುಮ್ಮಾನಗಳಿಂದ ದೂರಉಳಿದರು.[೧೦] ಅರ್ಥ-ಪ್ರಾಣ-ಅಭಿಮಾನಗಳನ್ನು ಶುದ್ಧ ಮಾಡಿಕೊಂಡು, ಉನ್ನತ ವ್ಯಕ್ತಿತ್ವ ಪಡೆದುಕೊಂಡು ಸ್ವಾಮಿಯಾದರು, ಶಿವಯೋಗಿಗಳಾದರು. ಈ ಸಮಯದಲ್ಲಿ ಅಲ್ಲಿ ಹಾಜರಿದ್ದ ಸದಾನಂದ ಶೆಟ್ಟರು ತಮಗಿದ್ದ ಒಬ್ಬ ಮಗ ಸ್ವಾಮಿಯಾದಾಗ ಈ ಸಂಪತ್ತು ನನಗೇಕೆ ಎಂದುಕೊಂಡು ತಾನು, ತನ್ನ ಹೆಂಡತಿ ಸುಜ್ಞಾನಮ್ಮ ಬದುಕಲು ಮಾತ್ರ ಬೇಕಾಗುವಷ್ಟನ್ನು ತಾವು ಇಟ್ಟುಕೊಂಡು ತಮ್ಮ ಸಂಪತ್ತಿನ ಅಧಿಕ ಭಾಗವನ್ನು ಶ್ರೀ ಚೆನ್ನಮಲ್ಲಶಿವಯೋಗಿಗಳಿಗೆ ದಾಸೋಹಕ್ಕಾಗಿ ಅರ್ಪಿಸಿಬಿಟ್ಟರು.

ಸದಾನಂದ ಶೆಟ್ಟರು ಸುಜ್ಞಾನಮ್ಮ ದಂಪತಿಗಳು ಚೆನ್ನಮಲ್ಲಸ್ವಾಮಿಗಳವರ ಅಪ್ಪಣೆಯಂತೆ ಶ್ರೀಗುರುನಂಜ ಶಿವಯೋಗಿಗಳನ್ನು ತಮ್ಮ ಮನೆಗೆ ಆಮಂತ್ರಿಸಿದರು. ಅವರ ಪಾದಪೂಜೆಮಾಡಿ, ತೀರ್ಥಪ್ರಸಾಧ ಸ್ವೀಕರಿಸಿದರು. ಈ ಶರಣದಂಪತಿಗಳ ಸಂಪತ್ತೀಗ ಚೆನ್ನಮಲ್ಲಸ್ವಾಮಿಗಳ ದಾಸೋಹಕ್ಕಾಗಿ, ಬಡವರ ಮಕ್ಕಳ ಪಾಲನೆ-ಪೋಷಣೆಗಾಗಿ, ನಿರಾಶ್ರೀತರ ಸೇವೆಗೆ ವಿನಿಯೋಗವಾಗತೊಡಗಿತು. ಈ ಶರಣರು ಮರಣದ ಮಹಾ ನವಮಿಗೆ ಪಯಣ ಬೆಳೆಸುತ್ತಿರುವಾಗ, ಅದೆಷ್ಟೋ ಮಕ್ಕಳು ಅವರ ಆರೈಕೆಗೆ ಸಿದ್ಧರಾಗಿದ್ದರು. ಶ್ರೀ ಗುರುನಂಜೇಶ್ವರರೀಗ ಲೋಕಾನುಭವಕ್ಕಾಗಿ ದೇಶಸಂಚಾರ ಕೈಕೊಳ್ಳಲು ನಿಶ್ಚಯಿಸಿದರು. ಶ್ರೀ ಗುರುನಂಜರು ರುದ್ರಾಕ್ಷಿ ಧರಿಸಿದರು, ಪೂಜಾಪೆಟ್ಟಿಗೆ ಸಿದ್ಧಪಡಿಸಿಕೊಂಡರು. ವಚನಗ್ರಂಥಗಳ ಕಟ್ಟನ್ನು ಕಟ್ಟಿಕೊಂಡರು. ಗುರುಗಳ ಆದೇಶದಂತೆ ಅವರ ಮುಂದಿನ ಅಪ್ಪಣೆಗಾಗಿ ಮಠದಲ್ಲಿಯೆ ವಾಸಮಾಡಿಕೊಂಡಿರತೊಡಗಿದರು.

ಮೂಲ ಕರ್ತೃ ಶ್ರೀ ಗುರುನಂಜೇಶ್ವರರ ಕೆಲ ಪವಾಡಗಳು

೧. ಪ್ರಾಯದ ಮದದಿಂದ ಮಹಾತ್ಮರೊಬ್ಬರನ್ನು ಕಟುವಾಗಿ ನಿಂದಿಸಿ, ಎಳೆದಾಡಿ, ಜೋಳಿಗೆ ಹರಿದು, ಶಾಪದ ಫಲದಿಂದ, ಬ್ರಹ್ಮ ಪಿಶಾಚಿಯ ಬಾಧೆಗೀಡಾದ ಕಾಳಗಿಯ ವರ್ತಕನ ಸೊಸೆ 'ಭಾರತಿ'ಯ ಶಾಪವಿಮೋಚನೆ ಹಾಗೂ ಭೂತ ಬಾಧೆಯಿಂದ ಮುಕ್ತಗೊಳಿಸಿ 'ಶಿವಬಸಮ್ಮ' ಎಂದು ವರಪ್ರದಾನ ಮಾಡಿದುದು. ಭಾರತಿಪತಿಯನ್ನು ಕಾಳಗಿಯ ನಾಯಕನನ್ನಾಗಿಸಿದುದು.

೨. 'ಭಾರತಿ' ಭರತನೂರಿನ ತನ್ನ ಸ್ವಂತ ಮನೆಯನ್ನು (ತಂದೆ ತಾಯಿಗಳು ಕೊಟ್ಟಿದ್ದ) ಮಹಾತ್ಮರಿಗೆ ನೀಡಿ ದಾಸೋಹದ ಮಹಾಮನೆಯನ್ನಾಗಿ ಮಾಡಿ, ಶ್ರೀಗುರುನಂಜೇಶ್ವರರು ಅಲ್ಲಿಯೆ ವಾಸಿಸುವಂತೆ ಪ್ರಾರ್ಥಿಸಿಕೊಂಡು, ಆ ಮಠದ ಅಂಗಳದ ಕಸ ಗುಡಿಸುತ್ತ ದಾಸೋಹದ ಸಂಚಾಲಿಕೆಯಾಗಿ ಪ್ರಪಂಚ ತೊರೆದು ಆ ಮಠದಲ್ಲಿಯೆ ಜೀವಿಸಿದುದು.

೩. ರಾಜಾಪುರ ಗ್ರಾಮದಲ್ಲಿ ನಡೆದ ಸಮಾರಂಭಕ್ಕೆ ಆಗಮಿಸಿದ್ದ ಶ್ರೀಗುರುನಂಜೇಶ್ವರರ ದರ್ಶನಕ್ಕಾಗಿ ಭಕ್ತರ ಜನಸಂದಣಿಯಲ್ಲಿ ಕಾಲ್ತುಳಿತಕ್ಕೆ ಒಳಗಾಗಿ ಅಸುನೀಗಿದ ಹೆಣ್ಣುಮಗುವನ್ನು ಬದುಕಿಸಿದ್ದು.

೪. ಗರ್ಭಪಾತದ ಬಾಧೆಯಿಂದ ಬಳಲುತ್ತಿದ್ದ ಬ್ರಾಹ್ಮಣ ಯುವತಿಗೆ ಅವಳ ಪೂರ್ವಜನ್ಮದ ಕಥೆ ಹೇಳಿ ಹುಗಿದಿಟ್ಟಿದ್ದ ದ್ರವ್ಯವನ್ನು ಅವಳಿಂದ ಮನೆಯವರಿಗೆ ಕೊಡಿಸಿ ಮಕ್ಕಳ ಭಾಗ್ಯ ಪಡೆದದ್ದು.

೫. ಮೃತನಾದ ಕರಸ್ಥಲನಾಗೀದೇವನ ದೇಹಕ್ಕೆ ಲಿಂಗಸ್ಪರ್ಶ ಮಾಡಿ ಜೀವಂತಗೊಳಿಸಿದ್ದು.

೬. ಚಿತ್ತಾಪುರದ ಹೆಣ್ಣುಮಗಳು ಶ್ರೀಗುರುನಂಜೇಶ್ವರರು ಹೇಳಿದಂತೆ ಹರಕೆ ತೀರಿಸಿ, ಮಕ್ಕಳನ್ನು ಪಡೆದದ್ದು.

೭. ಶ್ರೀಗುರುನಂಜೇಶ್ವರರಿಗೆ ಬೇಡಿಕೊಂಡ ಅಮೀನ್ ಬೇಗಮ್ ಕುಷ್ಟರೋಗದಿಂದ ಬಳಲುತ್ತಿದ್ದಳು. ಪೂಜ್ಯರ ಕರುಣೆಯಿಂದ ಆ ತಾಯಿಯ ರೋಗ ಪರಿಹಾರಗೊಂಡಿತು. ಪತಿ ಹುಸೇನ ಪಟೇಲರದೂ ಪೂಜ್ಯರಲ್ಲಿ ಅಧಿಕನಿಷ್ಠೆ-ಇವರಿಬ್ಬರ ಸಮಾಧಿಗಳು ಮಠದ ಮುಂದುಗಡೆ ಇರುವವು.

೮. ರಾಜಾಪೂರದ ರಾಜಾಬಕ್ಷ ಮೌಲ್ವಿ, ಶ್ರೀಗುರುನಂಜೇಶ ಶಿವಯೋಗಿಗಳ ಆರಾಧನೆ, ಧರ್ಮೋಪದೇಶ, ಉತ್ಸವಾದಿಗಳನ್ನು ತಿಳಿದು, ಇದು ಜನರ ಮೂಢತನವೆಂದು ಕರುಬಿದ್ದರು. ಪೂಜ್ಯರ ಉತ್ಸವ ಹೊರಟಾಗ ತಬರುಕದಲ್ಲಿ ಇಟ್ಟುಕೊಂಡು ಬಂದಿದ್ದ ಮಾಂಸದ ತುಂಡುಗಳು-ಶಿವಯೋಗಿಗಳ ಮಹಿಮೆಯಿಂದ ಗಮಗಮಿಸುವ ಹೂವಿನ ಮೊಗ್ಗುಗಳಾಗಿದ್ದನ್ನು ಮೇಲೆ ಹೊದಿಸಿದ್ದ ವಸ್ತ್ರವನ್ನು ತೆಗೆದುನೋಡಿದಾಗ ಶಿವಯೋಗಿಗಳ ಘನ ಮಹಿಮೆಗೆ ರಾಜಾಬಕ್ಷ ಶರಣುಹೊದುದು. ರಾಜಾಬಕ್ಷರು ಸ್ವಸ್ಥಲದ ಮೋಹವೆಲ್ಲ ತೊರೆದು ಯಮನೂರ ಮಠಡಿಗೆ ಬಂದು ವಾಸಿಸಿದ್ದು.[೧೧]

೯. ಕೊಳ್ಳಿಯ ಶಂಭುಲಿಂಗ ದೇವಸ್ಥಾನದಲ್ಲಿ ನಡೆದ ಪವಾಡ:-

೧೯೭೨ರಲ್ಲಿ ರಾಜ್ಯಾದಾದ್ಯಂತ ಬರಗಾಲ, ಹೀಗಿರುವಾಗ ಸೇಡಂ ತಾಲೂಕಿನ ಕೊಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಬರವಿತ್ತು. ಕುಡಿಯುವ ನೀರಿಗಾಗಿ ಗ್ರಾಮದ ಜನತೆಯ, ದನ-ಕರುಗಳ ಬವಣೆ ಹೇಳತಿರದು ಅಂತಹ ಭೀಕರ ಬರಗಾಲದ ಸನ್ನಿವೇಶದಲ್ಲಿ ಕೊಳ್ಳಿಯ ಶಂಭುಲಿಂಗ-ಚೌಡೇಶ್ವರಿ ದೇವಿಯ ಗುಡಿಯಲ್ಲಿ ತಪಸ್ಸು ಅನುಷ್ಠಾನ ಮಾಡಲು ಶ್ರೀಗಳು ಆಗಮಿಸಿದರು. ನೀರಿಲ್ಲದ ಊರಿನಲ್ಲಿ ಈ ಸನ್ಯಾಸಿದೇನು ಕೆಲಸ ? ಶ್ರೀಗಳು ಹೇಗೆ ತಪಸ್ಸು ಮಾಡಿಯಾರು ? ಎಂದು ಜನರು ಆಡಿಕೊಳ್ಳುತಿರುವಾಗಲೇ ಶ್ರೀಗಳು ಅನುಷ್ಠಾನ ಕುಳಿತ ದಿನ ಸಾಯಂಕಾಲವೇ ಕೊಳ್ಳಿ ಗ್ರಾಮದಲ್ಲಿ ಎಲ್ಲಿಲ್ಲದ ಮೋಡಗಳೆಲ್ಲ ಬಂದು ಧಾರಕಾರವಾಗಿ ಮಳೆ ಸುರಿಯಿತು.[೧೨]ನಾಲ್ಕು ದಿನ ಜಡೆದ (ಸುರಿದ) ಸತತ ಮಳೆಯಿಂದ ಊರಿನ ಕೆರೆ, ಬಾವಿಗಳು ತುಂಬಿದವು, ಕೊಳ್ಳಿ ಗ್ರಾಮದ ಜನರ ಸಂತೋಷಕ್ಕೆ ಮಿತಿಯೇ ಇಲ್ಲ. ಶ್ರೀಗಳ ಪಾದಸ್ಪರ್ಶದಿಂದ ಬಿರುಕು ಬಿಟ್ಟ ನೆಲದಲ್ಲಿ ನೀರಿನ ಬುಗ್ಗೆ ಕಂಡ ಜನ ತಂಡೋಪತಂಡವಾಗಿ ಅವರ ದರುಶನಕ್ಕೆ ಬರತೊಡಗಿತು.

೧೦ ಹೊಸೂರು, ಮುರುಗೋಡದಲ್ಲಿ ಪವಾಡ ಮತ್ತು ಅನುಷ್ಠಾನ:-

ಸುಂದರ ವಾತಾವರಣದಿಂದ ಕೂಡಿದ ಶ್ರೀ ಸೋಗಲ ಸೋಮೇಶ್ವರ ದೇವಾಸ್ಥಾನದಲ್ಲಿ ೯೦ ದಿನಗಳ ಕಾಲ ದೀರ್ಘ ತಪಸ್ಸು ಮಾಡಲು ನಿಶ್ಚಯಿಸಿ ಶ್ರೀಗಳು ತಪೋನಿರತರಾಗುತ್ತಾರೆ. ೫೭ ದಿನಗಳ ತಪಸ್ಸಾಧನೆಯ ನಂತರ ೫೮ನೇ ದಿನ ಆರೋಗ್ಯದಲ್ಲಿ ಸ್ವಲ್ಪ ಬದಲಾವಣೆಯಾದುದರಿಂದ ತಪಸ್ಸು ಮೊಟಕುಗೊಳಿಸುವ ಪ್ರಸಂಗ ಬರುತ್ತದೆ. ಆಗ ಭಕ್ತರ ಒತ್ತಾಯದ ಮೇರೆಗೆ ಗುಲಬರ್ಗಾದ ಖ್ಯಾತ ವೈದ್ಯರಾದ ಡಾ.ಎಂ.ಎಸ್ ಪಾಟೀಲರ ಹತ್ತಿರ ಚಿಕಿತ್ಸೆ ಕೊಡಿಸಿದಾಗ ಶ್ರೀಗಳು ಗುಣಮುಖರಾಗುತ್ತಾರೆ. ಶ್ರೀಗಳ ಸೇವೆಗೈದು ಅವರಿಂದ ಪ್ರಭಾವಿತರಾದ ಡಾ.ಎಂ.ಎಸ್ ಪಾಟೀಲರು ಬಹುದಿನಗಳಿಂದ ತಮಗೆ ಸಂತಾನ ಭಾಗ್ಯ ಇಲ್ಲದಿರುವ ಕೊರಗನ್ನು ಶ್ರೀಗಳ ಮುಂದೆ ಹೇಳುತ್ತಾರೆ. ಶ್ರೀಗಳು ಡಾ.ಪಾಟೀಲ ದಂಪತಿಗಳಿಗೆ ಭರತನೂರಿಗೆ ಬರಲು ಹೇಳುತ್ತಾರೆ. ಅಂತೆಯೇ ಶ್ರೀಗಳ ಕರೆಗೆ ಓಗೊಟ್ಟು ಡಾ.ಪಾಟೀಲ ದಂಪತಿಗಳು ಭರತನೂರಿಗೆ ಹೋಗಿ ಶ್ರೀಗಳ

ಆರ್ಶೀವಾದ ಪಡೆಯುತ್ತಾರೆ. ಮರು ವರ್ಷದಲ್ಲಿಯೇ ಡಾ. ಪಾಟೀಲರಿಗೆ ಸಂತಾನ ಭಾಗ್ಯವಾಗುತ್ತದೆ. ಹದಿನಾರು ವರ್ಷಗಳಿಂದ ಸಂತಾನವಿಲ್ಲವೆಂದು ಕೊರಗುತ್ತಿದ್ದ ವೈದ್ಯ ದಂಪತಿಗಳ ಕೊರಗನ್ನು ಶ್ರೀಗಳ ಆಶೀರ್ವಾದದಿಂದ ದೂರವಾಯಿತು.[೧೩]

೪) ನಾಲವಾರದ ಪೂಜ್ಯ ಶ್ರೀ. ಲಿಂ. ತೋಟೆಂದ್ರ ಶಿವಯೋಗಿಗಳ ಪವಾಡಗಳು:-

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಬುರುಗಿ ಜಿಲ್ಲೆಯ ಚಿತ್ತಾಪುರದ ತಾಲೂಕಿನ ಸುಕ್ಷೇತ್ರ ನಾಲವಾರದ ಶ್ರೀ ಕೋರಿಸಿದ್ದೇಶ್ವರ ಮಹಾ ಸಂಸ್ಥಾನ ಮಠವು ಲಕ್ಷಾಂತರ ಭಕ್ತ ಭಕ್ತಿಯ ಶ್ರದ್ಧಾ ಕೇಂದ್ರವಾಗಿದೆ. ಈ ಜಾಗೃತ ಸ್ಥಳದ ಮೂಲ ಕರ್ತೃಗಳಾದ ಶ್ರೀ ಕೋರಿಸಿದ್ಧೇಶ್ವರರು ಶಿವಾವತಾರಿಗಳಾಗಿ ಮಹಾನ್ ತಪಸ್ವಿಗಳೆನಿಸಿ ಅನೇಕ ಪವಾಡಗಳನ್ನು ತೋರಿದವರು. ಅವರು ಕೋರಿ (ಕಂಬಳಿ)ಯನ್ನು ಹೊಂದಿರುತ್ತಿದ್ದುದರಿಂದ ಅದೇ ಕಂಬಳಿಯನ್ನು ತುಂಬಿದ ಭೀಮಾ ನದಿಯ ಮೇಲೆ ಹಾಸಿ ದಾಟಿ ನಾಲವಾರಕ್ಕೆ ಬಂದಿದ್ದರಿಂದ ಅವರಿಗೆ ಕೋರಿಸಿದ್ಧೇಶ್ವರರೆಂದು ಹೆಸರಾಯಿತು.

ಇವರ ನಂತರ ಶ್ರೀಮಠದ ಪೀಠವನ್ನೇರಿದವರು ಪ್ರಥಮ ತೋಟೇಂದ್ರ ಮಹಾಸ್ವಾಮಿಗಳವರು ಅನಂತರ ಮಠಾಧ್ಯಕ್ಷರಾದ ದ್ವಿತೀಯ ತೋಟೆಂದ್ರ ಶಿವಯೋಗಿಗಳ ಕೋರಿಸಿದ್ಧೇಶ್ವರರಂತೆ ಅನೇಕ ಲೀಲೆಗಳನ್ನು ತೋರಿದ ಪವಾಡ ಪುರುಷರಾಗಿದ್ದರು. ಸತ್ತ ವ್ಯಕ್ತಿಯನ್ನು ಕೂಡ ತಮ್ಮ ಪವಾಡದಿಂದ ಬದುಕಿಸಿದರು ಎನ್ನುವ ಹಾಗೂ ಇಂತಹ ಅನೇಕ ಲೀಲೆಗಳನ್ನು ತೋರಿದ ಕೀರ್ತಿ ದ್ವಿತೀಯ ತೋಟೇಂದ್ರ ಶಿವಯೋಗಿಗಳವರದಾಗಿತ್ತು. ಅವರು ತಮ್ಮ ಅಂತಿಮ ಸಮಯದಲ್ಲಿ ಶ್ರೀಮಠದ ಎಲ್ಲ ಭಕ್ತರನ್ನು ಕರೆಯಿಸಿಕೊಂಡು ತಾವು ಬರುವ ಮಹಾನವಮಿಯ ದಿನ ಲಿಂಗೈಕ್ಯರಾಗುವುದಾಗಿ ತಿಳಿಸಿ ಮುಂದಿನ ಮಹಾನವಮಿಯ ದಿವಸ ತಮ್ಮ ಸಹೋದರ ವೇ. ಗುರುಸಿದ್ಧಯ್ಯ ಹಾಗೂ ಅವರ ಧರ್ಮಪತ್ನಿ ಮಾತೆ ಗೌರಮ್ಮ ತಾಯಿಯವರ ಉದರದಲ್ಲಿ ಜನಿಸಿ ಬರುವುದಾಗಿ ಹೇಳಿ ಹೇಳಿದಂತೆ ಮಹಾನವಮಿಯ ದಿವಸ ಲಿಂಗೈಕ್ಯರಾಗುತ್ತಾರೆ.[೧೪] ಅವರು ಹೇಳಿದಂತೆ ಮುಂದಿನ ಮಹಾನವಮಿಯ ದಿವಸ ಜನಿಸಿ ಬಂದವರೇ ಈಗಿನ ಪ್ರಸ್ತುತ ಪೀಠಾಧಿಪತಿಗಳಾದ ಪೂಜ್ಯ ಡಾ.ಸಿದ್ಧತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳುರು. ಪೂಜ್ಯರು ಇಂದು ಶ್ರೀಮಠದ ಕೀರ್ತಿಯನ್ನು ಬೆಳಗುವಂತೆ ಮಾಡಿದ್ದಾರೆ. ನಡೆ ನುಡಿ ಒಂದಾದಾಗ ಮಾತ್ರ ತನ್ನ ಒಬ್ಬ ಶರಣ ಎನಿಸಿಕೊಳ್ಳಲು ಸಾಧ್ಯ. ಕೋರಿಸಿದ್ದೇಶ್ವರರು ತಮ್ಮ ದೈವಿ ಶಕ್ತಿ ಮತ್ತು ಅಧ್ಯಾತ್ಮದ ಶಕ್ತಿಯಿಂದ ಅವರಲ್ಲಿದ್ದ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತು ಭೀಮಾ ನದಿಯನ್ನು ದಾಟಿದರು. ಹೀಗೆ ಇವರ ನಂತರ ಬಂದ ಪೀಠಾಧಿಪತಿಗಳು ಕೂಡ ಪವಾಡ ಪುರುಷರಾಗಿದ್ದರು. ಶರಣರ ಮಹಿಮೆ ಮರಣದಲ್ಲಿ ನೋಡಾ ಎಂಬಂತೆ ತಾವು ಲಿಂಗೈಕ್ಯರಾಗಿ ತಮ್ಮನ ಮಗನಾಗಿ ಅದು ಮಹಜಾನವಮಿ ದಿವಸದಂದು ಹುಟ್ಟಿ ಬರುತ್ತೇನೆ ಎಂದು ಹೇಳಿದರು ಅದರಂತೆ ನಡೆಯಿತು. ಇಗಿರುವ ಪೀಠಾಧಿಪತಿಗಳು ಕೋರಿಸಿದ್ದೇಶ್ವರರು.

೫) ಜೇವರಗಿ ತಾಲೂಕಿನ ಇಜೇರಿಯ ಶರಣ ಖ್ವಾಜಾ ಅಮೀನುದ್ದೀನರ ಪವಾಡಗಳು:-

ಖ್ವಾಜಾ ಅಮೀನುದ್ದಿನ ಆಲಾಸಾಲಿಸ್ ರಹಮತುಲ್ಲಾ ರವರ ಮೂಲ ಪುರಷರು ವಿಜಾಪುರದವರು ಈಗಲೂ ಕೂಡಾ ಅವರ ವಂಶಜರು ಬಿಜಾಪುರದಲ್ಲಿದ್ದಾರೆ ಅಲ್ಲದೇ ದರ್ಗಾ ಜೇಲಿನ ಪಕ್ಕದಲ್ಲಿ ಗುಡ್ಡದ ಮೇಲಿರುವ ಬೃಹತ್ ದರ್ಗಾಶರೀಫ ಖಾಜಾ ಅಮಿನುದ್ದಿನ ಆಲಾರವರ ವಂಶಜರದೇ ಆಗಿದ್ದು. ಆ ದರ್ಗಾ ಶರೀಫದಲ್ಲಿರುವ ಖಬರೆ ಮುಬಾರಕದಲ್ಲಿರುವವರ ಹೆಸರು ಕೂಡಾ ಖಾಜಾ ಅಮೀನುದ್ದೀನ ಆಲಾ ಸಾಲಿಸ್ ರಹಮತುಲ್ಲಾ ರವರದು. ಅವರ ೭ನೇ ತಲೆಮಾರಿನವರೆ ಜೇವರಗಿ ತಾಲೂಕು ಇಜೇರಿಯಲ್ಲಿರುವ ದರ್ಗಾ ಶರೀಫದಲ್ಲಿರುವ ಖಾಜಾ ಅಮೀನುದ್ದೀನ ಆಲಾರವರ ಖಬರೇ ಮುಬಾರಕ. ಇಜೇರಿಯ ಶರಣರ

ಅಮೀನುದ್ದೀನ ಆಲಾರವರು ಬಿಜಾಪುರದಿಂದ ಇಜೇರಿಕಡೆ ಬಂದು ನೆಲೆಸಿದ ಸಂಗತಿಯು ಅತಿರೋಮಾಂಚನವೂ ಪವಾಡ ಸಾದೃಶ್ಯವೂ ಆಗಿದೆ ಎಂದು ಹೇಳಬಹುದು. ಬಿಜಾಪುರದ ಸೂಫಿ ಸಂತರ ವಂಶರಾದ ಹಜರತ್ ಬರಾನುದ್ದೀನ ಆಲಾ ಹಾಗೂ ಅವರ ಧರ್ಮಪತ್ನಿ ಮಖ್ತುಂಬಿಯವರು ಅಲ್ಲಾನ ಪರಮ ಭಕ್ತರು.[೧೫] ರೋಜಾ ನಮಾಜ ಜಕಾತ ಮುಂತಾದ ಇಸ್ಲಾಮಿನ ಪವಿತ್ರ ತತ್ವಗಳನ್ನರಿತು ನಡೆಯುವ, ಸಾತ್ವಿಕ ಜೀವನದ ಸತ್ಯ ವಿಶ್ವಾಸಿಗಳು ಅವರ ನಡೆ ನುಡಿ ಮೃದು ಹೃದಯದ ಮಮತೆ ಬಿಜಾಪೂರ ಪಟ್ಟಣದಲ್ಲಿ ಮಾತಾಗಿತ್ತು. ಇವರ ಮೂಲ ವಂಶಜರಾದ ಪವಾಡ ಪುರುಷರ ಪ್ರಭಾವದಿಂದ ಜನರು ಅವರನ್ನೂ ಗೌರವದಿಂದ ಕಾಣುತ್ತಿದ್ದರು ಇಂಥಹ ಸುವರ್ಣ ಗುಣದ ಸತಿಪತಿಗಳಿಗೆ ಮಕ್ಕಳಿಲ್ಲವೆಂಬ ಕೊರಗು ಒಳಗೊಳಗೆ ಕೊರೆಯುತ್ತಿತ್ತು.

ಒಂದೊಂದು ಬಾರಿ ಇಬ್ಬರೂ ಕಣ್ಣೀರುಹಾಕಿ – ಅಲ್ಲಾನಲ್ಲಿ ದುವಾ ಕೇಳುತ್ತಾ, ರಾತ್ರಿಯಿಂದ ಬೆಳಗಿನವರೆಗೆ ಪ್ರಾರ್ಥನೆಯಲ್ಲಿಯೇ ಕೂಡುತ್ತಿದ್ದರು. ಬುರಾನುದ್ದೀನ ಆಲಾರವರಿಗೆ ೬೦ ವರುಷ ವಯಸ್ಸಾಗಿ ವೃದ್ಧಾಪ್ಯದೆಡೆಗೆ ಅಡಿಯಿಟ್ಟು, ಇನ್ನೇನು ಈ ವಯಸ್ಸಿನಲ್ಲಿ ನಮಗೆ ಮಕ್ಕಳಾಗುವುದಿಲ್ಲ ನಮ್ಮ ವಂಶದ ಬಳ್ಳಿ ಇಲ್ಲಗೆ ನಿಂತು ಹೋಗುತ್ತದೆ - ನಮ್ಮ ಮನೆಯ ದೀಪದ ಬೆಳಕು ಇಲ್ಲಿಗೆ ಮುಕ್ತಾಯ ಎಂದು ಭಾವಿಸಿ ಚಿಂತಾಕ್ರಾಂತರಾಗಿದ್ದರು. ಅವರ ಮನದಿಂಗಿತ ಬಹಿರಂಗವಾಗಿ ತೋರ್ಪಟ್ಟಾಗ ದುಃಖ ಸರೋವರದಲ್ಲಿ ಮಣಿ ಗೆದ್ದ ಅವರ ಸತಿ ಮುಖ್ತುಂಬಿಯವರು ನೋಡಿ ಮುಂದೆ ನಮ್ಮ ಮನೆಯ ದೀಪವೇ ಇಲ್ಲವೆಂದ ಮೇಲೆ ದೀಪ ಹಚ್ಚುವ ಮಕ್ಕಳೇ ನಮಗಿಲ್ಲವೆಂದ ಮೇಲೆ ಇಂದಿಲ್ಲನಾಳೆ ಇಲ್ಲಿಯೇ ಬಿಟ್ಟು ಹೋಗುವ ಈ ನಮ್ಮ ವಾಸದ ಮನೆಗೆ ನಾವಿನ ಮೇಲೆ ದೀಪ ಹಚ್ಚುವುದೇ ಬೇಡಾ ಎಂದು ಕಠೋರ ಮನಸ್ಸಿನಿಂದ ಮುಖ್ತುಂಬಿಯವರು ನೊಂದು ನುಡಿಯುತ್ತಾರೆ. ಇವರ ಕಠೋರ ನಿರ್ಧಾರದಿಂದ ಹಿಂದೆ ಸರಿಯಲಿಲ್ಲಾ ಇವರ ನಿರ್ಧಾರ ಬಿಜಾಪೂರದ ಜನಕ್ಕೆ ಒಂದು ಚರ್ಚಾ ವಿಷಯವಾಯಿತು.

➢ **ಫಕೀರಸ್ವಾಮಿ ಆಗಮನ:-**

ಒಂದು ದಿನ ಶರಣ ದಂಪತಿಗಳಾದ ಬುರಾನುದ್ದೀನ ಆಲಾ ಹಾಗೂ ಅವರ ಪತ್ನಿಯು ದಿನನಿತ್ಯದಂತೆಅಲ್ಲಾಹನ ಪ್ರಾರ್ಥನೆ ಮುಗಿಸುವ ಸಮಯಕ್ಕೆ ಒಬ್ಬ ಫಕೀರರ ಆಗಮನವಾಗುತ್ತದೆ. ಕಾವಿ ಕಪನಿಯ ಧರಿಸಿ ಕೆಂಪು ಪೇಟಾ ಸುತ್ತಿ ಹೆಗಲಿಗೆ ಹಸಿರು ವಸ್ತ್ರ ಹಾಕಿ ಕೈಯಲ್ಲಿ ಕಿಸ್ತಾ ಪಾತ್ರೆ ಹಿಡಿದು ಬಾಗಿಲಿಗೆ ಬಂದು ನಿಲ್ಲುತ್ತಾರೆ. ತಕ್ಷಣವೇ ಹಸಿದು ಭಿಕ್ಷೆಗಾಗಿ ಬಂದಿದ್ದೇನೆ. ಆ ಅಲ್ಲಾನನ್ನು ತೃಪ್ತಿ ಪಡಿಸಲು ನನಗೇನಾದರೂ ಕೊಡುತ್ತಿರಾ ಎನ್ನುತ್ತಾರೆ. ಆ ಫಕೀರನ ಮಾತು ಕೇಳಿದ ತಕ್ಷಣವೇ ಬುರಾನುದ್ದೀನ ಹಾಗೂ ಮಖ್ತುಂಬಿ ಶರಣ ದಂಪತಿಗಳಿಬ್ಬರೂ ಬಾಗಿಲಿಗೆ ಬಂದು ಫಕೀರರ ಪ್ರಕಾಶಮಾನವಾದ ಮುಖ ಕೋಲ್ಮಿಂಚಿನಂತೆ ಹೊಳೆಯುವ ಕಣ್ಣುಗಳನ್ನು ಕಂಡು ಒಂದು ನಿಮಿಷ ಮೂಕ ವಿಸ್ಮಿತರಾಗುತ್ತಾರೆ. ಅವರ ಸ್ಥಿತಿ ಕಂಡ ಫಕೀರರು ಗೋಣಳ್ಳಾಡಿಸಿ ಭಯ ಪಡಬೇಡಿ ಎಂಬ ಸನ್ನೆ ಮಾಡುತ್ತಾರೆ. ಆಗ ಸತಿಪತಿಗಳಿಬ್ಬರೂ ಧೈರ್ಯಗೊಂಡವರಂತೆ ಭಯ ಭಕ್ತಿಯಿಂದ ನಯ ವಿನಯದ ಮಾತಿನಿಂದ ಒಳಗೆ ಬನ್ನಿ ಸ್ವಾಮಿನಿಮ್ಮ ಇಚ್ಛೆ ಪೂರೈಸುತ್ತೆವೆಂದು ಕರೆಯುತ್ತಾರೆ. ಅದಕ್ಕೆ ಕಿವಿ ಗೊಡದ ಫಕೀರರು ಮತ್ತೆ ತಮ್ಮ ಮೊದಲ ಮಾತನ್ನೆ ಆಡುತ್ತಾ ಆ ಅಲ್ಲಾಹನನ್ನು ಸಂತೃಪ್ತಿ ಗೊಳಿಸಲು ಕೊಡುವ ಇಚ್ಛೆ ಮಾಡುತ್ತಿರಾ ಎಂದು ಗಾಂಭಿರ್ಯವಾಗಿ ಕೇಳುತ್ತಾರೆ. ಆ ಫಕೀರರ ಗಾಂಭಿರ್ಯದ ಮಾತು ಕೇಳಿದ ಸತಿಪತಿಗಳಿರ್ವರೂ ಭಯ ಭೀತಿಯಿಂದ ಮೊರದ ತುಂಬ ಧಾನ್ಯ ತಂದು ಫಕೀರರ ಜೋಳಿಗೆ ತುಂಬುತ್ತಾರೆ ಅದೇ ತಯಾರಿಸಿದ ಖಿಚಡಿಯನ್ನು ಫಕೀರರ ಕಿಸ್ತಾ ಪಾತ್ರೆಗೆ ಅರ್ಪಿಸಿ ಸಲಾಂ ಹೇಳುತ್ತಾರೆ.

ಅವರ ನಯವಿನಯ ಭಯ ಭಕ್ತಿ ಕಂಡ ಫಕೀರರು ತದೇಕ ದೃಷ್ಟಿಯಿಂದ ಸತಿ ಪತಿಗಳನ್ನು ನೋಡುತ್ತಾರೆ. ಆ ಕಣ್ಣೋಟದ ಛಾಯೆ ಕಂಡು ಸತಿಪತಿಗಳು ನಡುಗಿ ಬಿಡುತ್ತಾರೆ. ಅದನ್ನರಿತ ಫಕೀರರು ಹೆದರ ಬೇಡಿ ನಿಮ್ಮ ಮನದಿಂಗಿತವನ್ನು ಅಲ್ಲಾನು ಅರಿತಿದ್ದಾನೆ. ನಿಮ್ಮ ಅಂತರಾತ್ಮದ ಪ್ರಾರ್ಥನೆ ಈಶ್ವರನ ಆಸ್ಥಾನಕ್ಕೆ ತಲುಪಿ ಅವನು ಸಂತೃಪ್ತನಾಗಿದ್ದಾನೆ. ವಂಶ ದೀಪ ಬೆಳಗಲು ಮಕ್ಕಳಿಲ್ಲವೆಂದು ನೊವು ನಿಮ್ಮ ಮನೆಗೆ ದೀಪ ಹಚ್ಚುವದನ್ನೆ ನೀವು ಬಿಟ್ಟಿದ್ದೀರೆಂದು ನನ್ನಂತರಾತ್ಮ ನುಡಿಯುತ್ತದೆ. ಚಿಂತಿಸಬೇಡಿ ಶರಣ ದಂತಿಗಳೇ ಇನ್ನು ಕೆಲವೇ ದಿನಗಳಲ್ಲಿ ನಿಮ್ಮ ವಂಶದ ದೀಪ ಬೆಳಗಿಸುವ ಸತ್ಪುತ್ರ ಜನಿಸುತ್ತಾನೆ. ''ಕಹಾಂತಕ್ ಜಮೀನ್ ವಹಾಂತಕ್ ಅಮೀನ್'' ಎಂಬ ಅಂಕಿತ ನಾಮದಿಂದ ಲೋಕ ಕಲ್ಯಾಣಕ್ಕಾಗಿ ಶ್ರಮಿಸುವ ಕೀರ್ತಿವಂತನಾಗುತ್ತಾನೆ. ಸೂಫಿ ಸಂತ ಸಂಸ್ಕೃತಿಯ ಹೆಸರನ್ನು ಸೂರ್ಯ ಚಂದ್ರರಿರುವ ಪರಿಯಂತ ಪ್ರಶಂಶಿಸುವ ಕೀರ್ತಿವಂತನಾಗುತ್ತಾನೆ. ಪವಾಡ ಪುರುಷನಾಗುತ್ತನೆ.[೯] ಶರಣ ದಂಪತಿಗಳೆ ನಿಮ್ಮುಉದರ ಸಂಜಾತನಾಗಿ ಬರುವ ಸತ್ಪುತ್ರಪುರನಿಗೆ ನಿಮ್ಮ ಮೂಲ ವಂಶದ ಮಹಾನ್ ಶರಣರಾದ (ಈಗ ದರಗಾ ಶರೀಫದ ಖಬರೆ ಮುಜಾರಕದಲ್ಲಿರುವ ವಲಿ ಅಲ್ಲಾ) ಹಜರತ್ ಖಾಜಾ ಅಮೀನುದ್ದೀನ ಹೆಸರನ್ನೆ ಕರೆಯಿರಿ. ಆದರೆ ಎಂದು ಫಕೀರರು ಏನೋ ಆಲೋಚನಾ ತತ್ಪರರಾಗುತ್ತಾರೆ.

ಆದರೆ ಎಂಬ ಮಾತು ಅರ್ಧಕ್ಕೆ ನಿಂತೊಡನೆ ಸತಿ ಪತಿಗಳಾದ ಬುರಾನುದ್ದೀನ ಹಾಗೂ ಮಖ್ತುಂಬಿಯವರು ಭಯದಿಂದ ಪೂಜ್ಯರೆ ಆದರೆ ಎಂಬ ಮಾತನ್ನೇ ಅರ್ಧಕ್ಕೆ ನಿಲ್ಲಿಸಿದಿರಲ್ಲ. ಹೇಳಿ ಮುಂದೇನ ಎಂದು ಕೇಳಿದಾಗ ಫಕೀರರು ನೋಡು ಬುರಾನುದ್ದೀನ ನಿಮ್ಮ ಮಗನು ಬಿದಿಗೆ ಚಂದ್ರನಂತೆ ಬೆಳೆದು ತನ್ನ ಹತ್ತನೆ ವಯಸ್ಸಿಗೆ ಈ ಬಿಜಾಪೂರ ಪಟ್ಟಣವನ್ನು ಬಿಟ್ಟು ಶರಣ ಸಂತರ ಸಂಗಮವೆಂದು ಹೆಸರಾದ ಸಗರನಾಡಿನ ಪುಣ್ಯಭೂಮಿಯಲ್ಲಿ ಹೋಗಿ ಆ ಈಶ್ವರ ಅಲ್ಲಾಹನ ಕೃಪೆಯಿಂದ ಪವಾಡ ಪರುಷನಾಗಿ ಬೆಳೆಯುತ್ತಾನೆ. ಆದರೆ ಮತ್ತೆ ಫಕೀರರು ಆದರೆ ಎಂದು ಮಾತನ್ನು ಅರ್ಧಕ್ಕೆ ನಿಲ್ಲಿಸಿದಾಗ ಸತಿಪತಿಗಳು ಆತುರದಿಂದ ಆದರೆ ಮತ್ತೇನು ಗುರುಗಳೇ ಎಂದು ಭಯದಿಂದ ಕೇಳುತ್ತಾರೆ.

ಆಗ ಫಕೀರರು ಉಸಿರು ಹಾಕಿ ಅದರ ಅರ್ಥ ನಾನೀಗ ನಿಮಗೆ ಹೇಳಲಾರೆ ಮುಂದೆ ತಾನೇ ತಿಳಿಯುತ್ತದೆ. ಎಂದು ಹೇಳುತ್ತಾ ಕ್ಷಣ ಮಾತ್ರನಿಲ್ಲದೇ ವಾಯು ವೇಗದಿಂದ ಕಣ್ಮರೆಯಾಗುತ್ತಾರೆ. ಅವರನ್ನು ನಿಲ್ಲಿಸುವ ಪ್ರಯತ್ನ ಫಲಿಸದೇ ಸತಿ ಪತಿಗಳಿಬ್ಬರೂ ನಿಂತಲ್ಲಿಂದಲ್ಲೆ ಅವರಿಗೆ ನಮಿಸುತ್ತಾರೆ. ವಿಶ್ವದೊಡೆಯನಾದ ಪ್ರಭು ಈಶ್ವರನು ಮನಸ್ಸು ಮಾಡಿದರೆ ಮೋಡವಿಲ್ಲದೇ ಮಳೆ ಬರೆಸುತ್ತಾರೆ. ಕಲ್ಲಿನಲ್ಲಿದ್ದ ಕಪ್ಪೆಗೂ ಆಹಾರವನಿತ್ತು ಪಾನಿ ಬಟ್ಟಲುದಲ್ಲಿದ್ದ ಇರುವೆಯ ಬಾಯಿಯಲ್ಲಿ ಸಕ್ಕರಿಯ ತುಂಡನಿಟ್ಟು ಸಲಹುವ ಸರ್ವಾಂತರ್ಯಾಮಿಗೆ ಅಸಾಧ್ಯವೆನ್ನುವದು ಯಾವುದು ಇಲ್ಲ. ಕೆಲವೇ ಕೆಲವು ದಿನಗಳಲ್ಲಿ ಫಕೀರರ ವಾಣಿ ಸತ್ಯವಾಯಿ ತೆಂಬರಂತೆ ಶರಣೆ ಮಖ್ತುಂಬಿಯವರು ಗರ್ಭವತಿ ಎಂಬ ಸುದ್ದಿ ಬಿಜಾಪೂರದ ಮೂಲೆ ಮೂಲೆಯ ಶಿಷ್ಯರಿಗೂ ಸಂಭಂಧಿಕರಿಗೂ ಸುಗಂಧದಂತೆ ಹಬ್ಬಿ ಆನಂದದ ಅಲೆ ಎಬ್ಬಿಸಿತು. ಅಬ್ಬಾ ೬೦-೬೫ ವಸಂತಗಳನ್ನು ಕಂಡ ಸತಿಪತಿಗೆ ಮಕ್ಕಳ ಭಾಗ್ಯವೇ ? ಅಂತೂ ಫಕೀರರು ಹೇಳಿದ ಮಾತು ಸತ್ಯವಾಯಿತು. ಆ ಫಕೀರರ ರೂಪದಲ್ಲಿ ಅಲ್ಲಾಹನೇ ಬಂದು ವರ ನೀಡಿದರೆಂದು ಜನರಾಡತೊಡಗಿದರು. ಸತಿ ಪತಿಗಳ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಶರಣ ಮಕ್ತುಂಬಿಯವರ ಬಸುರಿನ ಬಯಕೆ ತೀರಿಸಲು ಬಂದು ಬಾಂಧವರರು ಬಿಜಾಪುರದ ಜನರೂ ಬಗೆ ಬಗೆಯ ಸಿಹಿಗಳನ್ನು ತಂದು ನಾ ಮುಂದು ನೀ ಮುಂದು ಎಂದು ಬಂದು-ಮಕ್ತುಂಬಿಯವರ ಮೇಲಿದ್ದ ತಮ್ಮ ಪ್ರೀತಿ ಅಭಿಮಾನ ತೋರಿಸುತ್ತಿದ್ದರು. ಎಲ್ಲ ಕೋಮಿನ ಜನರು ಬುರಾನುದ್ದೀನ ಮನೆಗೆ ಬಂದು ಅಲ್ಲಾನ ಕರುಣೆಯನ್ನು ಕೊಂಡಾಡಿ ಹೋಗುತ್ತಿದ್ದರು. ಒಟ್ಟಾರೆ

ಬಿಜಾಪುರದ ಬುರಾನುದ್ದೀನರು ಭಾವಕ್ಯತೆಯ ಹರಿಕಾರರೆಂದು ಪ್ರಸಿದ್ಧಿ ಪಡೆದ್ದಿದ್ದರು. ಮುಂದೆ ಬುರಾನುದ್ದೀನ್ ಮತ್ತು ಮಖ್ಬುಂಬಿಯವರು ಖ್ವಾಜಾ ಅಮೀನುದ್ದೀನರನ್ನು ಶುಕ್ರವಾರದ ದೇವ ಪ್ರಾರ್ಥನೆಯದಿನದಂದು ಅಲ್ಲಾಹು ಅಕಬರ್ ಎಂಬ ಪವಿತ್ರ ಅಜಾನ್ ಸ್ವರದೊಂದಿಗೆ ಜನ್ಮನಿಡಿದರು.[೧೭]

➢ ನಾಮಕರಣ ಮತ್ತು ಪ್ರಯಾಣ:-

ಶರಣರ ದಂಪತಿಗಳಾದ ಬುರಾನುದ್ದೀನ ಆಲಾ ಹಾಗೂ ಮುಖ್ಬುಂಬಿಯವರ ಮನೆಯ ಬೆಳಕು ಕೊಡುವ ಬಾಲಚಂದ್ರನು ಜನಿಸಿದ ವಾರ್ತೆಯನ್ನು ಬಂದುಬಾಂಧವರು, ಸೂಫಿ ಸಂತರು, ಭಕ್ತರು ಕೇಳಿ ಸಂತೋಷದಲ್ಲಿ ಮುಳುಗಿ ಬಿಡುತ್ತಾರೆ ೬೦-೬೫ ವಸಂತಗಳನ್ನು ದಂಪತಿಗಳಿಗೆ ಅವರ ತಪದ ಫಲವಾಗಿ ಜನಿಸಿದ ಮಗುವಿಗೆ ಅವರ ಮೂಲ ವಂಶಜರಾದ ಬಿಜಾಪೂರದ ಖ್ವಾಜಾ ಅಮೀನುದ್ದೀನ ಆಲಾ ಸಾಲಿಸ್ರವರ ಹೆಸರಿನಿಂದಲೇ ನಾಮಕರಣ ಮಾಡಲು ಯೋಚಿಸುತ್ತಾರೆ ಶುಭ ದಿನದಂದು ಸರ್ವರು ಸೇರಿ ವಿಜೃಂಭಣೆಯಿಂದ ಮಗುವಿಗೆ ನಾಮಕರಣ ಮಾಡಿದರು. ಮುಂದೆ ಬಾಲಕ ಖಾಜಾ ಅಮೀನುದ್ದೀನರು ೧೧ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಂತೆ ಅವರ ತಾಯಿಯಾದ ಮಖ್ಬುಂಬಿಯವರು ಪೈಗಂಬರವಾಸಿಯಾದರು. ತಂದೆ ಬುರಾನುದ್ದೀನರು ಮಡದಿಯ ಮರಣದಿಂದ ಜರ್ಜಿತರಾದರು. ಆದರೆ ಬಾಲಕ ಖಾಜಾ ಅಮೀನುದ್ದಿನರು ತಂದೆಯವರಿಗೆ ಯಾಕೆ ಅಷ್ಟೊಂದು ಚಿಂತಾ ಕ್ರಾಂತರಾಗುವಿರಿ ಬಾಬಾ ಹುಟ್ಟಿದವರೆಲ್ಲರೂ ಈ ಲೋಕವನ್ನು ಬಿಟ್ಟು ಆ ಲೋಕಕ್ಕೆ ಹೋಗಲೇ ಬೇಕಲ್ಲವೆ ? ನಶ್ವರವಾದ ಈ ಜಗತ್ತು ನೀರ ಮೇಲಿನ ಗುಳ್ಳೆ ಇದ್ದಂತೆ ಈಶ್ವರನ ತಿರ್ಮಾನವೇ ಅಂತ್ಯ ತಿರ್ಮಾನ, ಈ ಜಗತ್ತಿನ ಒಡೆಯ ಪರಮಾಧಿಕಾರಿ ಅಂತ್ಯದಿನದ ಲೆಕ್ಕಾಧಿಕಾರಿ ಅಲ್ಲಾನಲ್ಲದೇ ಇನ್ನಾರಿದ್ದಾರೆ ಎಂದು ಹೇಳಿ ಆಧ್ಯಾತ್ಮದ ಉತ್ತುಂಗ ವಿಚಾರಗಳನ್ನು ತಂದೆಯವರ ಮನ ಮುಟ್ಟುವಂತೆ ಸಮಾಧಾನ ಹೇಳಿದರು. ಬಾಲಕ ಖಾಜಾ ಅಮೀನುದ್ದೀನ ಮಾತು ಕೇಳಿ ಬುರಾನುದ್ದೀನರಿಗೆ ಈ ಹಿಂದೆ ಫಕೀರರು ಮನೆಗೆ ಬಂದು ಹೇಳಿ ಹೋಗಿದ್ದು ನೆನಪಾಯಿತು. ಬುರಾನುದ್ದೀನ ನಿನ್ನ ಮಗ ಕೀರ್ತಿವಂತನಾಗಿ ಲೋಕ ಕಲ್ಯಾಣಕ್ಕಾಗಿ ಶ್ರಮಿಸುವ ಶರಣನಾಗುತ್ತಾನೆಂದು ಹೇಳಿದ್ದು ಇಂತಹ ದಿವ್ಯ ಜ್ಞಾನದ ಸಂಕೇತವಲ್ಲವೆ ಎಂದು ನೆನೆಯುವಾಗ ಅದೇ ಫಕೀರರು ಮಧ್ಯದಲ್ಲಿ ಆದರೆ ಎಂಬ ಆತಂಕದ ಶಬ್ದ ನುಡಿದು ಅದು ನಿಮಗೆ ಎಂದೆ ತಿಳಿಯುತ್ತದೆ.

ಎಂದು ನಿರ್ಗಮಿಸಿದರಲ್ಲ ಅವರ ಮಾತು ನನ್ನ ಪತ್ನಿ ಬೇಗ ಮರಣಹೊಂದುತ್ತಾಳೆ ಎನ್ನುವದು ಇರಬೇಕೆ ಎಂದು ಬಡಬಡಿಸುತ್ತಾ ಕಣ್ಣೀರಿಟ್ಟರು. ಮಗನ ಮಧುರ ಸಂಬಂಧ ಒಂದು ಕಡೆಯಿದ್ದರೆ ಮಡದಿ ನೋವು ಒಂದು ಕಡೆ ಕಾಡುತ್ತಿತ್ತು ಇದೇ ಆಲೋಚನೆ ಆಳದಲ್ಲಿ ದೇಹಕೃಶ್ಯವಾಗುತ್ತ ಶರಣರ ಖಾಜಾ ಅಮೀನುದ್ದೀನರ ತಂದೆ ಬುರಾನುದ್ದೀನ ಮಡದಿ ಮಡಿದ ೩ ತಿಂಗಳಲ್ಲಿಯೇ ಪೈಗಂಬರ ವಾಸಿಯಾದರು, ಬಾಲಕ ಅಮೀನುದ್ದೀರು ಮಾತಾಪಿತರನ್ನು ಕಳೆದುಕೊಂಡು ಪರದೇಶಿಯಾದರು.[೧೮] ಅಲ್ಲಾಹನ ಲೀಲೆ ಅರಿತವರಾರು? ಅಣು ರೇಣು ತೃಣ ಕಾಷ್ಟದ ಭವಿಷ್ಯವನ್ನು ಬರೆಯುವ ಆ ವಿಶ್ವದೊಡೆಯ ಲೋಕ ನಾಯಕ ಮಹಾ ಕರುಣಾಮಯಿ ಕರುಣಾಳು ಕರುಣಾಕಾರನಾಗಿದ್ದಾನೆ. ಮಾತಾ ಪಿತರನ್ನು ಕಳೆದುಕೊಂಡ ಬಾಲಕ ಅಮೀನುದ್ದೀನರು ಎದೆ ಗುಂದದೆ ಬಿಜಾಪೂರ ಪಟ್ಟಣದಲ್ಲಿದ್ದರು. ವಿನಾ ಕಾರಣ ಎಲ್ಲಿಯೂ ಹೋಗದೆ ದರ್ಗಾಶರೀಫರ ಆವರಣದಲ್ಲಿ ಕಾಲ ಕಳೆ ಹತ್ತಿದರು. ರಾತ್ರಿ ಬಹಳ ಹೊತ್ತಿನವರೆಗೆ ಪ್ರಾರ್ಥನೆಯಲ್ಲಿಯೇ ಮೌನಿಯಾಗಿ ಕೂಡುತ್ತಿದ್ದರು. ಕುಳಿತಲ್ಲಿಯೇ ಮಲಗಿಬಿಡುತ್ತದ್ದರು. ಒಂದುದಿನ ನಿದ್ರೆಯಲ್ಲಿದ್ದಾಗ ಬಾಲಕ ಒಂದು ವಿಚಿತ್ರ ಕನಸು ಕಂಡನು. ಕನಸಿನಲ್ಲಿ ತಂದೆ

ತಾಯಿಗಳು ಬಂದು ಬೇಟಾ ಒಬ್ಬ ಮಹಾನ್ ಫಕೀರರು ಹೀಗೆ ಹೇಳಿದ್ದರು. ನಿಮ್ಮ ಮಗ ಕೀರ್ತಿವಂತ, ಗುಣವಂತನಾಗಿ ವಿಶ್ವಕ್ಕೆ ಬೆಳಕಾಗುವ ಶರಣ ವಲಿಯಾಗುತ್ತಾನೆ ೧೦ನೇ ವರ್ಷಕ್ಕೆ ಬಿಜಾಪೂರದಿಂದ ಹೊರಟು ಶರಣರ ಸಂತರ ಬೀಡಾದ ಸಗರ ನಾಡಿನ ಮಣ್ಯ ಭೂಮಿ ಗುಲ್ಬರ್ಗ ಜಿಲ್ಲೆಯ ಜೇವರಗಿ ತಾಲೂಕಿನ ಇಜೇರಿ ಗ್ರಾಮಕ್ಕೆ ಹೋಗಿ ನೆಲೆಸುತ್ತಾನೆ ಎಂದು ಹೇಳಿದ್ದರು. ಎಂದು ತಂದೆ ತಾಯಿ ಕನಸಿನಲ್ಲಿ ಹೇಳಿದಾಗ ಬಾಲಕ ಎಚ್ಚರವಾಗಿ ಕಣ್ತೆರೆದು ನೋಡುತ್ತಾನೆ.[೧೯] ತಂದೆ ತಾಯಿಯ ಛಾಯೆ ಮರೆಯಾಗುತ್ತದೆ ಅದನ್ನೇ ಮನದಲ್ಲಿ ಮೂಡಿಸಿಕೊಂಡುಬಾಲಕ ಖಾಜಾ ಅಮೀನುದ್ದೀನರು ಗುಲ್ಬರ್ಗದ ಕಡೆ ಹೊರ ಪ್ರವಾಸಿಗರೊಂದಿಗೆ ಯಾರಿಗೂ ಏನೂಹೇಳದೆ ಹೊರಟು ಬಿಡುತ್ತಾರೆ. ಬಾಗೆವಾಡಿಯ ಬಸವಣ್ಣನ ಜನ್ಮ ಸ್ಥಾನವನ್ನು ನೋಡಿಕೊಂಡು ಇಜೇರಿ ಕಡೆಗೆ ಹೆಜ್ಜೆ ಹಾಕುತ್ತಾನೆ. ಪವಿತ್ರ ಭೂಮಿಯಾದ ಗುಲ್ಬರ್ಗ ಜಿಲ್ಲೆಯ ಜೇವರಗಿ ತಾಲೂಕ ಇಜೇರಿ ಗ್ರಾಮವು ಚಿಕ್ಕದಾದರೂ ಇಲ್ಲಿಯ ಜನ ಮಾತ್ರ ದೊಡ್ಡ ಗುಣದವರು ಹಿಂದೂ ಮುಸ್ಲಿಂರು ಸಮಸಂಖ್ಯೆಯಲ್ಲಿರುವ ಇಲ್ಲಿ ಒಂದೇ ತಾಯಿಯ ಮಕ್ಕಳಂತೆ ಬಾಳುತ್ತಾರೆ.

ಇಜೇರಿಯ ಕುಲಕರ್ಣಿ ಬಾಪೂರಾವ್ ರವರಲ್ಲಿ ಯಾವದೇ ವಿಷಯಕ್ಕಾಗಿ ಭವಿಷ್ಯ ಕೇಳಬೆಕೆಂದು ಪಕ್ಕದೂರಿನ ನಾಲ್ಕು ಜನ ಬಂದಿದ್ದರು. ಅವರೊಡಗೂಡಿ ಕುಲಕರ್ಣಿಯವರು ಕುಶಲೋಪರಿ ಮಾತಾಡುತ್ತಾ –ಮಾತಾಡುತ್ತಾ ಊರ ಹೊರಾಂಗಣದ ಕಡೆಗೆ ಹೊರಟಿದ್ದರು. ಹೊರಾಂಗಣದ ಜಗಲಿಯ ಮೇಲೆ ಇದ್ದ ಚಿಕ್ಕ ಬೇವಿನ ಮರದ ಕೆಳಗೆ ೮-೧೦ ವರುಷದ ಬಾಲಕನೊಬ್ಬ ಮೌನಿಯಾಗಿ ಕುಳಿತಿದ್ದ ಅವನನ್ನು ನೋಡಿದರೆ ಯಾವುದೋ ಆಲೋಚನೆಯಲ್ಲಿ ಇಳಿದಂತೆ ಕಾಣುತಿತ್ತು. ಆ ಚಿಕ್ಕ ಬಾಲಕನ ಪ್ರಸನ್ನ ಮುಖದಲ್ಲಿರುವ ಚಿನ್ಮಯ ಛಾಯೆ ಆಕರ್ಷಣೆಯವಾದ ಕಣ್ಣುಗಳ ನೋಟಾ ಮುಗ್ದತೆಯ ಆಭರಣ ಧರಿಸಿದ ಮುಖ ಕಮಲ ಕಂಡರೆ ಮಾತಾಡಿಸಬೇಕೆಂಬ ಬಯಕೆ ಎಲ್ಲರಿಗೂ ಮಾಡುವಂತಿತ್ತು.

ಈ ಬಾಲಕನನ್ನು ಪಾದದಿಂದ ಮಸ್ತಕದವರೆಗೆ ದಿಟ್ಟಿಸಿ ನೋಡಿದ ಗಣಿತ ಶಾಸ್ತ್ರಜ್ಞರು, ಭವಿಶಃ ಪಾಂಡಿತ್ಯ ಪಡೆದ ಬಾಪೂರಾವ್ ಕುಲಕರ್ಣಿಯವರು ಒಂದೆರಡು ನಿಮಿಷ ಮಂತ್ರ ಮುಗ್ಧರಾಗಿ ನೋಡುತ್ತಾ ನಿಂತಿರುತ್ತಾರೆ. ಸಂಗಡಿಗರಿಗೆ ನೋಡಿ ಇಲ್ಲಿ ಮಹಾ ಶರಣನಾಗಬೇಕು ಎಂದು ತಮ್ಮ ಪಾಂಡಿತ್ಯ ಪ್ರಭಾವದಿಂದ ಗಣಿತ ಶಾಸ್ತ್ರದಿಂದ ಭವಿಶಃ ಜ್ಞಾನದಿಂದ ಹಲವಾರು ವಿಷಯಗಳನ್ನು ಸಂಗಾತಿಗಳಿಗೆ ಹೇಳಹತ್ತಿದರು. ಮತ್ತು ಮುಂದುವರೆದು ಕುಲಕರ್ಣಿಯವರು ಈ ಹುಡುಗನಾಡಿದ ನುಡಿ ಹುಸಿಯಾಗದು. ಇವ ಮಾಡಿದ ಕೆಲಸ ಹುಸಿಯಾಗದು ಇವ ಸ್ಪರ್ಶಿಸಿದ ವಸ್ತು ಪುರುಷಮಣಿ ಸ್ಪರ್ಶದಂತೆ ಅಕ್ಷಯವಾಗುವುದು. ಮಹಾಮಹಿಮನಾಗಿ ವಾಕ್ಯ ಸಿದ್ಧಿ ಪುರುಷ ನೆನಿಸಿಕೊಂಡು ಸಗರನಾಡಿನ ಕೀರ್ತಿಗೆ ಕಳಸವಾಗಿ ಬೆಲುಗುವನು "ಕಹಾಂತಕಜಮೀನ ವಹಾಂತಕ್ ಆಮೀನ" ಎಂಬ ಅಂಕಿತನಾಮದಿಂದ ಸತ್ಯ ಶರಣನಾಗಿ ಬೆಳಗುವನು. ಎಂದು ಹೇಳುತ್ತಾ ಬಾಲಕನ ಹತ್ತಿರ ಹೋಗಿ ಯಾರಪ್ಪ ನೀನು ಎಲ್ಲಿಂದ ಬಂದೆ ಎಂದು ಕೆಳುತ್ತಾರೆ. ಆಗ ಬಾಲಕ ಸ್ವಾಮಿ ನಾನುನೀನೆಂಬ ಬೇಧ ವರಿಯದ ಬಾಲಕನಾನು, ಈ ಲೋಕವೆಲ್ಲ ಆ ಈಶ್ವರಪ್ರಭು ಅಲ್ಲಾಹನದು ನಾವೆಲ್ಲಾ ಅವನ ಸಂತತಿಗಳು ನಾನು ಅವನೂರಿನವ ಎಂದು ಚುಟುಕಾಗಿ ಉತ್ತರಿಸಿದ. ಆ ಬಾಲಕನ ಜಾಣ್ಮೆ ಅರಿತ ಕುಲಕರ್ಣಿಯವರಿಗೆ ಆಶ್ಚರ್ಯದೊಂದಿಗೆ ಸಂತೋಷವಾಗಿ ಮುದ್ದು ಬಾಲಕ ನಿನ್ನ ನುಡಿಮುತ್ತು ಕೇಳಿ ನನಗೆ ಹಿಡಿಸದಷ್ಟು ಆನಂದವಾಗಿದೆ.[೨೦] ನಡೆ ನಮ್ಮ ಮನೆಗಾದರೂ ಹೋಗೋಣವೆಂದು ಹೇಳುತ್ತಾರೆ. ಆಗ ಬಾಲಕ ಸಂಕೋಚದಿಂದ ಕುಲಕರ್ಣಿಯವರ ಮುಖ ನೋಡಿದಾಗ ಸಂಕೋಚ ಪಡಬೇಡಕುಮಾರ ನಿನ್ನಮನದಿಂಗಿತ ನಾನರಿತಿದ್ದೇನೆ. ನನ್ನ ಮನೆಗೆ ಬಂದು ಒಂದು ಘಳಿಗೆ ಕುಳಿತಾದರೂ ಹೋಗು ಎಂದು ಕುಲಕರ್ಣಿಯವರು ಕೇಳಿದಾಗ ಆ ಬಾಲಕ

ಒಂದು ನಿಮಿಷ ಕಣ್ಮುಚ್ಚಿ ಆಲೋಚಿಸಿ ಮಾತನಾಡದೆ ಕುಲಕರ್ಣಿಯವರ ಮನೆಗೆಹೊರಟೇಬಿಡುತ್ತಾನೆ ಆ ಬಾಲಕ ಈತನೇ ಬಿಜಾಪೂರದಿಂದ ಕಾಲ್ನಡಿಗೆಯಿಂದ ಇಜೇರಿಗೆ ಬಂದು ನೆಲೆಸಿದ ಶರಣ ಶ್ರೇಷ್ಠ ಖಾಜಾ ಅಮೀನುದ್ದೀನ ಆಲಾ ಸಾಲಿಸ್‌ರಹಮತುಲ್ಲಾರವರು.

ಬಾಲಕ ಖಾಜಾ ಅಮೀನುದ್ದೀನರನ್ನು ತನ್ನ ಮನೆಗೆ ಕರೆದುಕೊಂಡು ಹೊರಟ ಕುಲಕರ್ಣಿಯವರಿಗೆ ಆನಂದವೇ ಆನಂದ ತಮ್ಮ ಹಿಂದೆ ಹಿಂದೆ ಬರುತ್ತಿದ್ದ ಬಾಲಕನು ಬೆಳದಿಂಗಳ ಬೆಳಕೆ ನನ್ನ ಮನೆಗೆ ಬರುತ್ತಿದೆ ಎಂದು ಭಾವಿಸಿ ಉಬ್ಬಿನಿಂದ ನಡೆಯುತ್ತಿದ್ದರು. ಮನೆಗೆ ಬಂದು ಬಾಲಕ ಖಾಜಾ ಅಮೀನುದ್ದೀನರನ್ನು ಕುಳ್ಳಿರಿಸಿ ನಮ್ರತೆಯಿಂದ ಬಾಲಕಾ ನಿನ್ನ ಹೆಸರು ಹೇಳಲಿಲ್ಲವಲ್ಲಾ ಎಂದರು. ಸ್ವಾಮಿ ನನ್ನ ಹೆಸರು ಖಾಜಾ ಅಮೀನುದ್ದೀನ ಎಂದು. ನಾನು ಬಿಜಾಪೂರದಿಂದ ಬಂದಿದ್ದೇನೆ ಎಂದು ಹೇಳಿದ ಬಾಲಕನನ್ನು ಮತ್ತೆನನ್ನೋ ಪ್ರಶ್ನಿಸಬೇಕೆಂಬ ವಿಚಾರ ಇದ್ದರೂ ಕೂಡಾ ಕುಲಕರ್ಣಿಯವರು ಈಗಬೇಡವೆಂಬ ನಿರ್ಧಾರಕ್ಕೆ ಬಂದು ಹಾಗಾದರೆ ಊಟ ಮಾಡು ಬಾಲಕಾ ಎಂದರು. ಇಲ್ಲ ಸ್ವಾಮಿ ನಾನು ಊಟ ಮಾಡುವುದು ತಪ್ಪಲ್ಲವೇ ಇದನ್ನು ನಾವು ಆ ದೇವನಲ್ಲಿ ಉತ್ತರಿಸಬೇಕಲ್ಲವೆ ಎಂದನು. ಹಾಗಲ್ಲಾ ಬಾಲಕಾ ಬಾಲಕೃಷ್ಣ ನಂತೆ ನನ್ನ ಮನೆಗೆ ಬಂದು ಪಾದಾರ್ಪಣೆ ಮಾಡಿದ ನೀನು ಸತತವಾಗಿ ನನ್ನ ಮನೆಯಲ್ಲಿಯೇ ಊಟ ಮಾಡಿಕೊಂಡಿದ್ದರೆ ದ್ವಾರಕೆಯ ಶ್ರೀಕೃಷ್ಣನೆ ಊಟ ಮಾಡಿದಂತೆಯೆಂದು ಭಾವಿಸುತ್ತೇನೆಂದು ಹೇಳುತ್ತಾರೆ. ಬಾಲಕನು ಅದಕ್ಕೂ ಜಾಣ್ಮೆಯಿಂದ ಉತ್ತರ ಕೊಟ್ಟು ಹಿರಿಯರೆ ದ್ವಾರಕೆ ಶ್ರೀಕೃಷ್ಣ ದನಗಳನ್ನು ಕಾಯ್ದು ಕಾಯಕ ಮಾಡಲಿಲ್ಲವೇ ಅಣ್ಣ ಬಸವಣ್ಣ ಹೇಳಿಲ್ಲವೇ ಎಂದಾಗ ಕಾಯಕವೇ ಕೈಲಾಸವೆಂದ ಜನರ ಅಂಕು ಡೊಂಕುಗಳಿಗೆ ಉಪಾಯ ಹುಡುಕಿ ನ್ಯಾಯ ನೀತಿ ಹೇಳುವ ಕುಲಕರ್ಣಿ ಬಾಪೂರಾವ್ ರವರು ಬಾಲಕನ ಮಾತಿಗೆ ಮಣಿದು ಬಿಟ್ಟರು.[೨೧] ಆಗ ಕುಲಕರ್ಣಿಯವರು ನೋಡಪ್ಪಾ ನಿನ್ನ ಜಾಣ್ಮೆ ನಿನ್ನಲ್ಲಿರುವ ಸತ್ಯವಿಶ್ವಾಸಕ್ಕೆ ಉತ್ತರ ಕೊಡದೇ ನಾನು ಮೂಕನಾದೆ, ದುಡಿಮೆ ಮಾಡಿಯಾದರೂ ಊಟ ಮಾಡಲು ನಿರ್ಧಾರ ಮಾಡುವೆಯಾ ಎಂದರು. ಅದಕ್ಕೆ ಮುಗುಳ್ನಗೆಯ ಹೂ ಚೆಲ್ಲಿ ಮೌನದಲ್ಲಿ ಒಪ್ಪಿದ ಬಾಲಕ ಖಾಜಾ ಅಮೀನುದ್ದೀನರ ನೋಡಿ ಒಪ್ಪಿಗೆ ಸಿಕ್ಕಿತೆಂದು ಭಾವಿಸಿ ಕುಲಕರ್ಣಿಯವರು ನೋಡು ಬಾಲಕಾ ನನ್ನದು ೮ ಎತ್ತಿನ ವಕ್ಕಲುತನದ ಮನೆ ಎಲ್ಲ ಕೆಲಸಗಳನ್ನು ರೈತಕಾರ್ಮಿಕರೆ ಮಾಡಿಕೊಂಡು ಹೋಗುತ್ತಾರೆ. ನೀನು ಅವರೊಂದಿಗೆ ಬೆರೆತು ಅವರಿಗೆ ಬೇಕು ಬೇಡಗಳನ್ನು ನೀಡಿ ಒದಗಿಸುವುದು ಆಕಳು ಕರುಗಳಿಗೆ ನೀರು ಕುಡಿಸಿ ಮೇವು ಹಾಕುವುದನ್ನು ಮಾಡುತ್ತಾ ಇದ್ದು ಬಿಡು ಇಂದಿನಿಂದ ನನ್ನ ಮನೆ ನಿನ್ನದೆಂದು ತಿಳಿ, ಈಗಲಾದರೂ ಊಟ ಮಾಡುವೆಯಾ ಎಂದಾಗ ಬಾಲಕ ಖಾಜಾ ಅಮೀನುದ್ದೀನರು ಆಗಲಿ ಹಿರಿಯರೆ ನಿಮ್ಮಿಚ್ಛೆಯಂತೆ ಆಗಲಿ ಎಂದು ಒಪ್ಪಿಕೊಂಡು ಕುಲಕರ್ಣಿ ಬಾಪೂರಾವ್‌ರೊಡನೆ ಕುಳಿತು ಊಟ ಮಾಡಿದನು.

ಬಾಲಕ ಖಾಜಾ ಅಮೀನುದ್ದೀನರು ಎಂದು ಕುಲಕರ್ಣಿ ಬಾಪೂರಾವ್ ರವರ ಮನೆಯಲ್ಲಿ ನೆಲಸಿದರೋ ಅಂದಿನಿಂದ ಅವರ ಮನೆಯ ಸಂಪತ್ತು ವೃದ್ಧಿಸ ಹತ್ತಿತು. ಆಕಳುಗಳ ಹಾಲು ಕರೆಯುವುದನ್ನ ದ್ವಿಗುಣ ಗೊಳಿಸಿದವು. ಗೋಧಿ, ಜೋಳ ಮುಂತಾದ ಧಾನ್ಯಗಳು ಪ್ರತಿ ವರ್ಷವೂ ಅಕ್ಷಯವಾಗುತ್ತಾ ಊರ ರೈತರಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಹತ್ತಿದ್ದವು. ಕೆಲವರು ಆ ಪುಟ್ಟ ಬಾಲಕನು ಕುಲಕರ್ಣಿಯವರ ಮನೆಯಲ್ಲಿ ಕಾಲಿಟ್ಟಾಗಿನಿಂದ ಹಾಲು ಉಕ್ಕುವಂತೆ ಅವರ ಸಂಪತ್ತು ಬೆಳೆಹತ್ತಿದೆ. ಎಂದು ಆಡಿಕೊಳ್ಳುತ್ತಿದ್ದರು. ಬಾಲಕ ಖಾಜಾ ಅಮೀನುದ್ದೀನರ ಮೇಲುಸ್ತುವಾರಿಯಲ್ಲಿ ಒಕ್ಕಲುತನವು ಅಡೆತಡೆಯಿಲ್ಲದೆ ಸಾಗಿತು. ದನಕರುಗಳು ಮೊದಲಿಗಿಂತಲೂ ಚುರುಕಾದವು. ಧಾನ್ಯ ದವಸದ ರಾಶಿಗಳು ವೃದ್ಧಿಸಿದವು. ಹಾಲಿನ ಹೊಳೆ ಹರಿಯುವುದೆಂಬಂತೆ ಕುಲಕರ್ಣಿಯವರ ಮನೆತನ ಒಕ್ಕಲುತನಕ್ಕೆ ಪ್ರಸಿದ್ಧಿಯಾಯಿತು. ದಿನದಿನಕ್ಕೆ ಮನೆಯಲ್ಲಿ ಶಾಂತಿ ಸಾಗರ

ಸಂಪತ್ತಿನ ಆಗರವಾಯಿತೆಂದು ಜನರಾಡಿಕೊಳ್ಳಹತ್ತಿದರು. ಇಜೇರಿಗೆ ಬಂದು ನೆಲೆಸಿದ ಖಾಜಾ ಅಮೀನುದ್ದೀನರು ಒಂದೆರಡು ವರುಷದ ನಂತರ ಕುಲಕರ್ಣಿಯವರ ಅಪ್ಪಣೆ ಪಡೆದುಕೊಂಡು ವರುಷದಲ್ಲಿ ಒಂದೆರಡು ಸಲ ತಮ್ಮ ಮೂಲ ವಂಶಜರಾದ ಬಿಜಾಪೂರ ದರ್ಗಾ ಶರೀಫ ಖಾಜಾ ಅಮೀನುದ್ದೀನ ಕುಶಲೋಪರಿ ವಿಚಾರಿಸಿ ಬರುವ ಪರಿ ಪಾಠವಿತ್ತು ಆದರೂ ಹುಟ್ಟಿ ಬೆಳೆದ ಊರಲ್ಲಿ ಹೊತ್ತುಗಳೆಯದೇ ಇಜೇರಿಯ ಕಡೆಗೆ ಅವರ ಜೀವ ಹರಿಯುತ್ತಿತ್ತು. ಸುಗ್ಗಿ ಮುಗಿದು ಮಾಗಿಯ ಕಾಲ ಬಂದಾಗ ಖಾಜಾ ಅಮೀನುದ್ದೀನರು ಕುಲಕರ್ಣಿಯವರ ಊರ ಮುಂದಿನ ಹೊಲದಲ್ಲಿ ೬ ಎತ್ತಿನ ನೇಗಿಲು ಹೊಡೆಸುತ್ತಿದ್ದರು. ಬಲಿಷ್ಠವಾದ ಎತ್ತುಗಳು ನಿಷ್ಠರಾದ ಒಕ್ಕಲಿಗ ಕಾರ್ಮಿಕರಿರುತ್ತಿದ್ದರಿಂದ ಬೆಳಗಿನ ೩ ಗಂಟೆಗೇನೆ ಖಾಜಾ ಅಮೀನುದ್ದೀನರಿಗೆ ಎಚ್ಚರಾಗದೆ ಮಲಗಿಬಿಟ್ಟಿದ್ದರು.[೨೨] ರೈತರು ತಮ್ಮ ಮನೆಯಲ್ಲಿದ ಎತ್ತುಗಳು ಕೊಟ್ಟಿಗೆಯಲ್ಲಿ ಮೆಲುಕು ಹಾಕುತ್ತಾ ಮಲಗಿ ಬಿಟ್ಟಿವೆ ೪ ಗಂಟೆಗೆ ಕುಲಕರ್ಣಿಯವರು ದಿನನಿತ್ಯದಂತೆ ಎದ್ದು ಬಂದು ಎತ್ತಿನ ಕೊಟ್ಟಿಗೆ ನೋಡಿ ಅವಸರದಿಂದ ಮನೆಯ ಜಗಲಿಯ ಮೇಲೆ ಮಲಗಿದ ಖಾಜಾ ಅಮೀನುದ್ದೀನರ ಕಂಡು ಬೆಳಗಿನ ೪ ಗಂಟೆಯಾಗಿದೆ ನೇಗಿಲು ಕಟ್ಟಿಸದೆ ಮಲಗಿ ಬಿಟ್ಟಿದ್ದೀರಲ್ಲಾ ಎನ್ನುತ್ತಾರೆ. ಕಪ್ಪನೆ ಗಡಬಡಿಸಿ ಎಚ್ಚರಾದ ಖಾಜಾಅಮೀನುದ್ದೀನರು ಕಣ್ಣು ತಿಕ್ಕುತ್ತಾ ಹಾಗೇನಿಲ್ಲ ಕುಲಕರ್ಣಿಯವರೆ ಇವತ್ತು ೩ ಗಂಟೆಗೇನೆ ಎದ್ದು ಹೊಲದಲ್ಲಿ ನೇಗಿಲು ಕಟ್ಟಿಸಿ ಬಂದು ಮಲಗಿದ್ದೇನೆ ಬೇಕಾದರೆ ಹೋಗಿ ನೋಡಿ ಎನ್ನುತ್ತಾನೆ. ಈಗಾಗಲೇ ಖಾಜಾ ಅಮೀನರ ಮಹಿಮೆ ಅರಿತು ಕೊಂಡ ಕುಲಕರ್ಣಿಯವರು ಮರು ಮಾತನಾಡದೆ ಹೊಲಕ್ಕೆ ಹೋಗಿ ಒಡ್ಡಿನ ಮೇಲೆ ನಿಂತು ನೋಡುತ್ತಾರೆ. ರೈತ ಕಾರ್ಮಿಕರು ನೇಗಿಲ ಹೊಡಿ ಹೊಡೆಯ ಹತ್ತಿದ್ದಾರೆ.

ಬರುವಾಗ ಮನೆಯ ಪಕ್ಕದ ಕೊಟ್ಟಿಗೆಯಲ್ಲಿ ಎತ್ತುಗಳನ್ನು ನೋಡಿ ಬಂದ ಕುಲಕರ್ಣಿಯವರು ತಿರುಗಿ ಬಂದು ನೋಡುತ್ತಾರೆ ಕೊಟ್ಟಿಗೆಯಲ್ಲಿ ಎತ್ತುಗಳಿಲ್ಲಾ ನೋಡಿ ಆಶ್ಚರ್ಯ ಚಕಿತರಾದ ಕುಲಕರ್ಣಿಯವರ ಬಾಯಿಂದ ಮಾತು ಬಾರದೆ ಗದ್ಗರಿತರಾಗಿ ಶ್ರೀಹರಿ ಖಾಜಾ ಅಮೀನುದ್ದೀನ ಸಾಮಾನ್ಯ ಶರಣನಲ್ಲಾ ದಿವ್ಯ ಪುರುಷನ ದರ್ಶನ ಕೊಟ್ಟು ನನ್ನ ಮನೆಯಲ್ಲಿ ವಾಸಿಸುವಂತೆ ಮಾಡಿದ ನಿನ್ನ ಉಪಕಾರ ಮರೆಯಲಾರೆ ಕೃಷ್ಣ ನೀನೆ ಅವನು ಅವನೆ ನೀನಾಗಿರು ಎಂದು ಮನದಲ್ಲಿ ನಮಿಸುತ್ತಾರೆ. ಖಾಜಾ ಅಮೀನುದ್ದೀನರೆ ಪವಾಡದ ಮಹಿಮೆಯನ್ನು ಊರ ಜನರಿಗೆ ಹೇಳಿ ಆನಂದಿಸುತ್ತಾರೆ. ಇದನ್ನು ಕೇಳಿದ ಜನರಿಗೂ ಕೂಡಾ ಆಶ್ಚರ್ಯವಾಗುತ್ತದೆ. ಮತ್ತೊಂದು ದಿನ ಕುಲಕರ್ಣಿಯವರು ಬೇಸಿಗೆಯ ದಿನವಾಗಿರುವುದರಿಂದ ತಮ್ಮ ತೋಟದ ಬಾವಿಗೆ ಬಾವಿಯಲ್ಲಿ ತಣ್ಣೀರು ಜಳಕ ಮಾಡಿ ಬರಬೇಕೆಂದು ಹೋಗುತ್ತಾರೆ ತೋಟದ ಆಚೆಯ ಅಂಚಿನ ಎತ್ತರದ ದಿಬ್ಬಿನ ಮೇಲೆ ಮಲಗಿ ಬಿಟ್ಟಿದ್ದಾರೆ. ಇದನ್ನು ಕಂಡ ಕುಲಕರ್ಣಿಯವರು ಕನಿಕರ ಪಟ್ಟುಪಾಪ ಬಾಲಕ ಬಿಸಿಲಿಗೆ ಮಲಗಿ ಬಿಟ್ಟಿದ್ದಾನೆ. ತೋಟದ ಮನೆಯಲ್ಲಾದರೂ ಗಿಡದ ನೆರಳಿಗಾದರೂ ಮಲಗಬಾರದೆ ಎನ್ನತ್ತಾ ಅವರನ್ನ ಎಬ್ಬಿಸಲು ಸಮೀಪ ಹೋಗುತ್ತಾರೆ. ಸಮೀಪ ಹೋದ ಹಾಗೆ ಖಾಜಾ ಅಮೀನುದ್ದೀನರನ್ನು ನೋಡಿ ದಿಗ್‌ಭ್ರಮೆಗೊಂಡು ಮಾತುಬಾರದೇ ಹೆದರಿ ಗಡಗಡನೆ ನಡುಗಿ ಬಿಡುತ್ತಾರೆ.[೨೨] ಬಿಸಿಲಿಗೆ ಮೈಯೊಡ್ಡಿ ಮಲಗಿದ ಖಾಜಾ ಅಮೀನುದ್ದೀನರ ಮುಖದ ಮೇಲೆ ನೆರಳಿನ ಛಾಯೆ ಬಿದ್ದಿದೆ. ಅವರ ಮುಖ ಕಮಲವು ಬಿಸಿಲಿಗೆ ಬಾಡದಿರಲೆಂದು ೭ ಹೆಡೆಯ ಸರ್ಪ ಬಂದು ಹೆಡೆ ಬಿಚ್ಚಿ ಮುಖಕ್ಕೆ ನೆರಳಿನಾಶ್ರಯ ನೀಡಿದೆ. ಪ್ರತ್ಯಕ್ಷನಾಗಿ ಕಣ್ಣಿಟ್ಟು ನೋಡಿ ಭಯದಿಂದ ರೋಮಾಂಚನಗೊಂಡ ಕುಲಕರ್ಣಿಯವರು ದೇವಾ ಇಂತಹ ಪುಣ್ಯ ಪರುಷನ ದರ್ಶನ ಭಾಗ್ಯ ಕರುಣಿಸಿದ ನೀನು ಮಹಾ ಘನವಂತನು. ಖಾಜಾ ಅಮೀನನು ಸಾಮಾನ್ಯನಲ್ಲ ''ಸರ್ಪಶಯನ ಕೃಷ್ಣನಂತೆ ಸರ್ಪಾಸರೆ ಪಡೆದ ಪವಾಡ ಪುರುಷರು ಮಹಿಮಾವಂತರು.

ದೈವಿ ಸಂಭೂತ ಶರಣರೆಂದು ಸಗರ ನಾಡಿನ ಪುಣ್ಯಭೂಮಿಯ ಜನರೆಲ್ಲಾ ಕೊಂಡಾಡಿ ತಂಡೋಪ ತಂಡವಾಗಿ ಇಜೇರಿಗೆ ಬಂದು ಈ ಮಹಾತ್ಮನ ದರ್ಶನ ಭಾಗ್ಯ ಪಡೆಯ ಹತ್ತಿದರು ವಯಸ್ಸಿನಲ್ಲಿ ಚಿಕ್ಕವರಾದರೂ ಅವರಲ್ಲಿದ್ದ ಬೃಹತ್ ಮಹಿಮೆಯನ್ನು ಕೇಳಿ ನಾಡಿಗೆ ಅಮೀನುದ್ದೀನರಿಗೆ ಯಾವ ಕೆಲಸ ಕಾರ್ಯ ಮಾಡಬೇಡಿರೆಂದು ಹೇಳಿದಾಗಲು ರೈತರೊಂದಿಗೆ ಚರ್ಚೆ ಮಾಡುತ್ತಾ ಮಾರ್ಗದರ್ಶನ ಕೊಡುತ್ತಿದ್ದರು. ಊಟೋಪಚಾರವು ಕುಲಕರ್ಣಿಯವರ ವಿನಂತಿಯ ಮೇರೆಗೆ ಅವರ ಮನೆಯಲ್ಲಿಯೇ ನಡೆಯುತ್ತಿತ್ತು. ಹೆಚ್ಚಿನ ಸಮಯದಲ್ಲಿ ಇಜೇರಿಗೆ ಮೊದಲ ಬಾರಿಗೆ ಬಂದಾಗ ಊರಿನ ಹೊರ ಭಾಗದ ಒಳಾಂಗಣದ ಕಟ್ಟೆಯ ಮೇಲಿದ್ದ ಬೇವಿನ ಗಿಡದ ಬುಡದಲ್ಲಿ ಕುಳಿತದ್ದು ಮರೆಯದೆ ಅಲ್ಲಿಗೆ ದಿನಾಲೂ ಒಂದೆರಡು ಘಳಿಗೆ ಕುಳಿತುಕೊಳ್ಳುತ್ತಿದ್ದರು. ಅವರ ಆಸ್ಥಾನದಲ್ಲಿ ಕುಳಿತ ಸಮಯದಲ್ಲಿಯೇ ಊರಿನ ಜನ ಬಂದು ಅವರ ದರ್ಶನ ಪಡೆದು ಕುಂದು, ಕೊರತೆ, ಮಾಟ ಮಂತ್ರಗಳ ಬಗ್ಗೆ ಕೇಳಿ ಅವರಿಂದ ಮಾರ್ಗದರ್ಶನ ಪಡೆದು ಚಿಂತೆಯನ್ನುದೂರ ಮಾಡಿಕೊಳ್ಳುತ್ತಿದ್ದರು. ಬರ ಬರುತ್ತ ಶರಣ ಖಾಜಾ ಅಮೀನುದ್ದೀನ ನುಡಿ ವಾಕ್ಯ ಸಿದ್ದಿ ಪುರುಷರೆಂದು ಪ್ರಸಿದ್ದಿಯಾಗಿಬಿಟ್ಟರು. ಬೇರೆ ಬೇರೆ ಭಾಗದಿಂದ ಇಜೇರಿಯ ಸುತ್ತಮುತ್ತಲಿನ ಗ್ರಾಮದಿಂದ ಜನರು ಖಾಜಾ ಅಮೀನುದ್ದೀನ ದರ್ಶನ ಪಡೆದು ಅವರ ಆರ್ಶಿವಾದದಿಂದ ಪರಿಹಾರ ಕಂಡುಕೊಳ್ಳುತ್ತಿದ್ದರು.[೨೨] ಆದೇ ಸಮಯದಲ್ಲಿ ಇಜೇರಿಯ ಗಣ್ಯ ವ್ಯಕ್ತಿಗಳು, ಜಮೀನ್ದಾರರು ಆದ ಹುಸೇನ ಪಾಟೀಲ ಎನ್ನುವ ಪೋಲಿಸ್ ಪಾಟೀಲರಿಗೆ ವಿಚಿತ್ರ ರೋಗ ಒಂದು ಕಾಣಿಸಿಕೊಂಡಿತು. ಮನುಷ್ಯರ ಮೈಯಲ್ಲಿ ಬೆವರು ಬರುವುದು ಸಹಜ ಆದರೆ ಹುಸೇನ ಪಟೇಲರ ಮೈಯಲ್ಲಿ ಜಿನಿ ಜಿನಿ ರಕ್ತ ಬರಹತ್ತಿತು. ಅನೇಕ ವೈದ್ಯರಲ್ಲಿ ತೋರಿಸಿಕೊಂಡು ಔಷಧೋಪಚಾರ ಮಾಡಿಕೊಂಡರು. ಆದರೂ ಅವರ ಮೈಯಿಂದ ರಕ್ತ ಬರುವುದು ಮಾತ್ರ ನಿಲ್ಲಲಿಲ್ಲ.

ಬಂಧು ಬಾಂಧವರಿಗೆ ಆಪ್ತರಿಗೆಲ್ಲಾ ಈ ವಿಚಿತ್ರ ಕಾಯಿಲೆ ಕಂಡು ಧಿಗ್ಭ್ರಮೆಯಾಯಿತು. ಚಿಂತೆಯಲ್ಲಿ ಮಡದಿ ಮಕ್ಕಳು ಬಳಲಿಬೆಂದು ಬೆಂಡಾಗಿ ಹೋದರು. ಆಗ ಹುಸೇನ ಪಟೇಲರ ಆಪ್ತಮಿತ್ರರಾದ ಕುಲಕರ್ಣಿ ಬಾಪೂರಾವರವರು ಶರಣ ಖಾಜಾ ಅಮೀನುದ್ದೀನರನ್ನು ಹುಸೇನ ಪಟೇಲರ ಮನೆಗೆ ಕರೆದುಕೊಂಡು ಅವರಿಗಂಟಿದ ರೋಗದ ಲಕ್ಷಣವನ್ನು ಪ್ರತ್ಯಕ್ಷ ತೋರಿಸಿದರು. ಹುಸೇನ ಪಟೇಲರ ಮನೆಯವರಾದಿಯಾಗಿ ಎಲ್ಲರೂ ಕೈ ಮುಗಿದು ಗುರುವೆ ಕೃಪೆ ಮಾಡಿ ಈ ಕಾಯಿಲೆ ಕಳೆಯಿರಿ ಎಂದು ಅಂಗಲಾಚಿದರು ಆಗ ಖಾಜಾ ಅಮೀನುದ್ದೀನರು ಒಂದು ನಿಮಿಷ ಕಣ್ಮುಚ್ಚಿ ಅಲ್ಲಾಹನಲ್ಲಿ ಪ್ರಾರ್ಥಿಸಿ ಅಲ್ ಮದದ್ ಯಾನಬಿ ಎಂದು ಬೂದಿಯನ್ನು ಮಂತ್ರಿಸಿ ಕೊಟ್ಟು ಇದನ್ನು ೫ದಿನದ ವರೆಗೆ ಮೈಗೆಲ್ಲಾ ಸವರಬೇಕು. ೫ ದಿನಗಳ ವರೆಗೆ ನಾನೇ ಮನೆಗೆ ಬಂದು ಬೂದಿ ಮಂತ್ರಿಸಿ ಕೊಡುವೆನೆಂದು ಹೇಳಿದರು. ಸರ್ವಾಂತರಯಾಮಿಯಾದ ಪ್ರಭು ಈಶ್ವರನು ಗುಣ ಪಡಿಸುತ್ತಾನೆ ಚಿಂತಿಸಬೇಡಿ ಎಂದು ಕುಲಕರ್ಣಿಯವರೊಂದಿಗೆ ಹೊರಟರು.[೨೨] ಶರಣ ಖಾಜಾ ಅಮೀನುದ್ದೀನರು ಹೇಳಿದಂತೆ ಪ್ರತಿದಿನ ಅವರು ಹೇಳಿದಂತೆ ೫ ದಿನಗಳ ವರೆಗೆ ಬೂದಿಯನ್ನು ಅವರೇ ಬಂದು ಮಂತ್ರಿಸಿ ಕೊಡುತ್ತಿದ್ದರು. ಅದನ್ನು ಮನೆಯವರು ಹುಸೇನ ಪಟೇಲರ ಮೈಗೆಲ್ಲಾ ಸವರಹತ್ತಿದ್ದರು. ದಿನದಿಂದ ದಿನಕ್ಕೆ ರಕ್ತ ಬರುವದು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ೬ನೇ ದಿನಕ್ಕೆ ಪೂರ್ತಿ ರಕ್ತ ಬರುವುದು ಕಡಿಮೆ ಆಗಿ ಆರೋಗ್ಯ ಸುಧಾರಿಸಿತು. ಬಂದುಗಳೆಲ್ಲ ಆನಂದ ತುಂಬಿದವರಾಗಿ ಖಾಜಾ ಅಮೀನದ್ದೀನ ಆಲಾ ರವರನ್ನು ನೆನೆಯುತ್ತಾ ಅವರಿದ್ದಲ್ಲಿ ಹೋಗಿ ಆಶಿರ್ವಾದ ಪಡೆದರು. ಈ ವಿಷಯವು ಗುಲ್ಬರ್ಗ ಜಿಲ್ಲೆಯ ಮೂಲೆ-ಮೂಲೆಗೂ ಹಬ್ಬಿ ಖಾಜಾ ಅಮೀನುದ್ದೀನರ ಕೀರ್ತಿಯನ್ನು ಕೊಂಡಾಡದವರಿಲ್ಲದಾಯಿತು. ಅನೇಕರು ಸಗರನಾಡಿನ ಮೂಲೆ ಮೂಲೆಗಳಿಂದ ಭಕ್ತಿ ಭಾವದಿಂದ ಶರಣ ಖಾಜಾ ಅಮೀನದ್ದೀನ ಆಲಾರವರ ದರ್ಶನ ಪಡೆದು ಆಶಿರ್ವಾದ ಪಡೆಯಹತ್ತಿದರು.

ಭಯಂಕರ ರೋಗದಿಂದ ಮುಕ್ತಿ ಹೊಂದಿದ ಇಜೇರಿಯ ಜಮೀನ್ದಾರ ಪೋಲಿಸ ಪಟೇಲರಾದ ಹುಸೇನ ಪಟೇಲರು ಖಾಜಾ ಅಮೀನುದ್ದೀನ ಆಲಾರವರಿಗೆ ಗುರು ಕಾಣಿಕೆ ಅರ್ಪಿಸಬೇಕೆಂದು ಬಂಧು ಬಾಂಧವರೊಡನೆ ಊರಿನ ಛತ್ರಿ ಚಾಮರ ಸಮೇತವಾಗಿ ಖಾಜಾ ಅಮೀನುದ್ದೀನ ಆಲಾರವರ ಮಹಿಮೆಯ ಗುಣಗಾನದೊಂದಿಗೆ ''ಕಹಾಂ ತಕ್ ಜಮೀನ ವಹಾಂ ತಕ್ ಅಮೀನ'' ಎಂದು ಪರಾಕ್ ಎಂದು ಹೇಳುತ್ತಾ ವಿಜೃಂಭಣೆಯಿಂದ ಊರ ಹೋರಾಂಗಣದ ಬೇವಿನ ಕಟ್ಟೆಯ ಮೇಲೆ ಕುಳಿತ ಶರಣ ಖಾಜಾ ಅಮೀನುದ್ದೀನ ಶರಣರ ಬಳಿಗೆ ಬರುತ್ತಾರೆ. ಬಂದವರೆಲ್ಲ ಖಾಜಾ ಅಮೀನುದ್ದೀನರವರಿಗೆ ಭಕ್ತಿ ನಮನಗಳನ್ನು ಸಲ್ಲಿಸಿ ವಿನಯ ಭಾವನೆಯಿಂದ ನಿಲ್ಲುತ್ತಾರೆ. ಆಗ ಶರಣ ಖಾಜಾ ಅಮೀನುದ್ದೀನ ಆಲಾರವರು ಏನು ಹುಸೇನ ಪಟೇಲರೆ ಜನ ಸಮೂಹದೊಂದಿಗೆ ಬಂದಿದ್ದರಲ್ಲಾ ಆರೋಗ್ಯ ಚೆನ್ನಾಗಿದೆಯಲ್ಲವೇ ಅಲ್ಲಾಹನ ಕರುಣೆ ದೊಡ್ಡದಿದೆ. ಇರಲಿ ಏನಾದರೂ ಕೆಲಸ ವಿದ್ದರೆ ನಾನೇ ಬರುತ್ತಿದ್ದೆನಲ್ಲಾ ಎಂದು ತಮ್ಮ ನಿಗರ್ವ ಗುಣ ಸಿರಿಯನ್ನು ತೋರ್ಪಡಿಸಿದರು. ಆಗ ಹುಸೇನ ಪಟೇಲರು ಹಾಗೆನ್ನಬೇಡಿ ಗುರುಗಳೆ ನಾವು ನಿಮ್ಮದಾಸಾನುದಾಸರು ನಿಮ್ಮ ಆಜ್ಞಾಧಾರಕರು. ನನ್ನ ಭಯಂಕರ ರೋಗವನ್ನು ಗುಣಪಡಿಸಿ ನನಗೆ ಪುನರ್ಜನ್ಮ ನೀಡಿದ ಪುಣ್ಯ ಪುರುಷರು ನೀವು, ಅದಕ್ಕೆ ನಾವೆಲ್ಲಾ ಬಾಂಧವರು ತಮಗೆ ಸಾವಿರ ಸಾವಿರ ಶರಣುಗಳು ಅರ್ಪಿಸಿ ತಮ್ಮ ಸನ್ನಿಧಿಗೆ ಗುರು ಕಾಣಿಕೆ ಅರ್ಪಿಸಬೇಕೆಂದು ಬಂದಿದ್ದೇವೆ ತಾವು ತಮ್ಮ ಅಮೂಲ್ಯವಾಣಿಯಿಂದ ನನ್ನಲ್ಲಿದ್ದ ಏನು ಕೇಳಿದರೂ ಕೊಡುತ್ತೇನೆ. ತಮ್ಮ ಆಜ್ಞೆಗೆ ಪ್ರತಿಯಾಡದೆ ತಮ್ಮಿಚ್ಛೆ ಪೂರೈಸುತ್ತೇನೆ ಅಪ್ಪಣೆ ಕೊಡಿ ಗುರುಗಳೆ ಎಂದು ನಮ್ರತೆಯಿಂದ ನಿಲ್ಲುತ್ತಾರೆ.

ಆಗ ಶರಣರು ನೋಡಿ ಹುಸೇನ ಪಟೇಲರೆ ನಶ್ವರವಾದ ಸಂಪತ್ತಿನಾಸೆ ನನಗಿಲ್ಲಾ ನೀವು ಹಣ ಬೆಳ್ಳಿ ಬಂಗಾರ ಏನು ಕೊಟ್ಟರೂ ಅದು ಕೆಲದಿನಗಳಲ್ಲಿ ಕ್ಷಯವಾಗಿ ಹೋಗುತ್ತದೆ. ಅದಕ್ಕಾಗಿ ನಿಮ್ಮ ಪೋಲಿಸ್ ಪಟೇಲರ ಮನೆತನದ ಕೀರ್ತಿ ಸೂರ್ಯ ಚಂದ್ರರಿರುವರೆಗೂ ಅಜರಾಮರವಾಗಿ ಉಳಿಯುವಂತಾ ಒಂದು ವಸ್ತು ಕೇಳುತ್ತೇನೆ. ಕೊಡಲು ಸಿದ್ದರಿದ್ದಿರಾ ಎಂದಾಗ ಹುಸೇನ ಪಟೇಲರು ಶರಣರೇ ನನ್ನ ಜೀವವೇ ನಿಮ್ಮದಿರುವಾಗ ಕೊಡಲು ಹಿಂಜರಿಯಲಾರೆ ಅಪ್ಪಣೆ ಕೊಡಿ ಗುರುಗಳೇ ಎನ್ನುತ್ತಾನೆ ಆಗ ಖಾಜಾ ಅಮೀನುದ್ದೀನರು ಊರ ಗಣ್ಯವ್ಯಕ್ತಿಗಳಾದ ಕುಲಕರ್ಣಿ ಬಾಪೂರಾವ್ ಹಾಗೂ ಹುಸೇನ ಪಟೇಲರನ್ನು ಮತ್ತು ಸಾರ್ವಜನಿಕರನ್ನು ಕುರಿತು ಹೀಗೆ ಹೇಳುತ್ತಾರೆ. ನೋಡ್ರಪ್ಪಾ ಇನ್ನು ಕೆಲವು ದಿನಗಳಲ್ಲಿ ನಮ್ಮ ಮೂಲ ಪೀಠದ ವಂಶಜರಾದ ಬಿಜಾಪೂರದ ಖಾಜಾ ಅಮೀನುದ್ದೀನ ಆಲಾ ಸಾಲಿಸ್ ರಹಮತ್ತುಲ್ಲಾರವರು ತಮ್ಮ ಭಕ್ತ ಸಮೂಹದೊಂದಿಗೆ ವಿಜೃಂಭಣೆಯಿಂದ ಕುದುರೆಯ ಮೇಲೆ ಸವಾರಿಯಾಗಿ ಇಜೇರಿ ಗ್ರಾಮಕ್ಕೆ ಬರುತ್ತಾರೆ. ಅವರು ಬಂದು ಹುಸೇನ ಪಟೇಲರಯಾವ ಜಮೀನದಲ್ಲಿ ಕುದುರೆ ನಿಲ್ಲಿಸುತ್ತಾರೋ ಅದನ್ನು ನಮಗೆ ಕೊಡಬೇಕು. ಆ ಜಮೀನನ್ನು ನಮ್ಮ ತಪೋ ಭೂಮಿಯನ್ನಾಗಿ ಮಾಡಿಕೊಂಡರೆ ಮುಂದಿನ ದಿನಗಳಲ್ಲಿ ಅಲ್ಲಿ ವಿದ್ಯಾ ಕೇಂದ್ರವೇ ನಿರ್ಮಾಣವಾಗುತ್ತದೆ. ಎಂಬ ಭರವಸೆ ನನಗಿದೆ ಅದಕ್ಕೆ ನಿಮ್ಮ ಒಪ್ಪಿಗೆ ಇದೆಯೇ ಎನ್ನುವ ಮಾತು ಅವರ ಬಾಯಿಂದ ಹೊರ ಬೀಳುವುದಷ್ಟೇ ತಡ ಹುಸೇನ ಪಟೇಲರ ಬಾಯಿಂದ ಒಪ್ಪಿಗೆ ಗುರುಗಳೇ ತಮ್ಮ ಅಪ್ಪಣೆ ಶಿರಸಾ ವಹಿಸಿ ಪಾಲಿಸುತ್ತೇನೆ ಎಂದರು. ಆಗ ಕುಲಕರ್ಣಿಯವರು ಗುರುಗಳೆ ಹುಸೇನ ಪಟೇಲರ ಜಮೀನ ಅಷ್ಟೇಯಾಕೇ ಈ ಇಜೇರಿಯ ಯಾವ ಜಮೀನನಲ್ಲಿ ಶರಣರ ಕುದುರೆ ನಿಲ್ಲಿಸಿದರೂ ಆ ಜಮೀನನ್ನು ಕೊಡಲಿಕ್ಕೆ ಇಜೇರಿಯ ಜನ ಸಿದ್ದವಾಗಿದ್ದಾರೆ ನಿಮ್ಮ ಕೃಪಾ ಕಟಾಕ್ಷ ನಮ್ಮೂರಿಗೆ ವರದಾನ ವಾಗಲಿ ಎಂದು ಹೇಳುತ್ತಾರೆ ಆಗ ಶರಣ ಖಾಜಾ ಅಮೀನುದ್ದೀನರು ಅಲ್ ಮದದ್ ಯಾ ನಬಿ ಎಂದು ಹೇಳುತ್ತಾ ಇಜೇರಿಯ ಪುಣ್ಯ ಪುರುಷರೆ ಆ ಪ್ರಭು ಈಶ್ವರನು

ನಿಮ್ಮೆಲ್ಲರನ್ನು ಸುಖವಾಗಿಡಲೆಂದು ಹೇಳುತ್ತಾರೆ. ನೆರೆಯ ಜನರೆಲ್ಲಾ ಶರಣರ ಮಹಿಮೆಯನ್ನು ಕೊಂಡಾಡುತ್ತಾ ''ಕಹಾಂ ತಕ್ ಜಮೀನ ವಹಾಂ ತಕ್‌ಅಮೀನ'' ಎಂದು ಹೇಳುತ್ತಾ ಜಯಕಾರ ಹಾಕುತ್ತಾರೆ.

➢ **ಬಿಜಾಪೂರದ ಶರಣರ ಆಗಮನ:-**

ಅದೊಂದು ದಿನ ಗುರುವಾರವಾಗಿತ್ತು ಇಜೇರಿಯಲ್ಲಿ ಸಂಭ್ರಮವೋ ಸಂಭ್ರಮ. ಪ್ರತಿಯೊಂದು ಮನೆಗಳು ಸುಣ್ಣ ಬಣ್ಣದಿಂದ ಅಲಂಕಾರಗೊಂಡಿವೆ. ತಳಿರು ತೋರಣ, ಹೂವಿನ ಮಾಲೆಗಳಿಂದ ಮನೆ ಬಾಗಿಲುಗಳನ್ನು ಶೃಂಗರಿಸಿ ಜನರೆಲ್ಲಾ ಲವಲವಿಕೆಯಿಂದ ಸಂತಸಗೊಂಡು ಅತ್ತಿಂದಿತ್ತ ತಿರುಗಾಡುತ್ತಿದ್ದಾರೆ ಒಟ್ಟಾರೆ ಇಜೇರಿಯಲ್ಲಿ ಹಬ್ಬದ ವಾತಾವರಣವೇ ಹಬ್ಬಿದೆ. ಊರ ಗಣ್ಯ ವ್ಯಕ್ತಿಗಳೆಲ್ಲ ಅಲ್ಲಲ್ಲಿ ಸಭೆ ಸೇರಿ ಚರ್ಚಿಸಹತ್ತಿದ್ದಾರೆ. ಆಗಾಗ ಊರ ಹೊರಾಂಗಣದ ಜಗಲಿಯ ಮೇಲಿನ ಬೇವಿನ ಗಿಡದ ಕೆಳಗೆ ಕುಳಿತು ಶರಣ ಖಾಜಾ ಅಮೀನುದ್ದೀನ ಆಲಾ ರವರನ್ನು ಭೆಟ್ಟಿಯಾಗಿ ಯಾವ ಯಾವದೋ ವಿಷಯಗಳನ್ನು ಚರ್ಚಿಸಿ ಅವರ ಹೇಳಿಕೆಗೆ ಹೂಃ ಎನ್ನುತ್ತಾ ತಲೆದೂಗಿ ಬರುತ್ತಿದ್ದಾರೆ. ಇಷ್ಟೆಲ್ಲ ಸಂತಸ ಸಂಭ್ರಮ ಚರ್ಚಾಕೂಟ ಲವಲವಿಕೆ ಎನ್ನುವುದು ತಿಳಿಯಬೇಕಲ್ಲವೆ? ಈ ಸಂಭ್ರಮಕ್ಕೆ ಕಾರಣ ಹಿಂದೆ ಶರಣ ಖಾಜಾ ಅಮೀನುದ್ದೀನ ಆಲಾ ಸಾಲಿಸ್ ರವರು ತಮ್ಮ ಶಿಷ್ಯ ವೃಂದ ಸಮೇತರಾಗಿ ಛತ್ರಿ, ಚಾಮರ, ಕಹಳೆ ಕೂಗು, ನಗಾರಿಗಳ ಸಪ್ಪಳದೊಂದಿಗೆ ಪಂಚ ಕಲ್ಯಾಣಿ ಎಂಬ ಕುದುರೆಯ ಮೇಲೆ ಇಜೇರಿ ಗ್ರಾಮಕ್ಕೆ ಆಗಮಿಸಲಿದ್ದಾರೆ.

ಇಂತಹದೇ ವೇಳೆಗೆ ಇಜೇರಿ ಪಾದಾರ್ಪಣೆ ಮಾಡುತ್ತಾರೆಂಬ ಸಿಹಿ ಸುದ್ದಿಯನ್ನು ಬಿಜಾಪೂರದ ಶರಣರು ಅಣ್ಣ ಬಸವಣ್ಣನ ಜನ್ಮ ಸ್ಥಳವಾದ ಬಾಗೇವಾಡಿಗೆ ಬಂದ ಮೇಲೆ ಭಕ್ತನೋರ್ವನೊಂದಿಗೆ ಹೇಳಿ ಮುಂದಾಗಿ ಹೇಳಿ ಕಳಿಸುತ್ತಾರೆ ಅದಕ್ಕಾಗಿ ಇಜೇರಿ ಗ್ರಾಮಸ್ಥರೆಲ್ಲ ಸಂಭ್ರಮದಿಂದ ಗ್ರಾಮವನ್ನು ಸುಂದರ ಗೊಳಿಸಿದ್ದಾರೆ.[೨೩] ಅವರ ಆಗಮನದ ಕ್ಷಣವೂ ಸಮೀಪಿಸುತ್ತಿದ್ದಂತೆ ಇಜೇರಿ ಸಂಪ್ರದಾಯಿಕ ನೃತ್ಯಗಳು, ವಾದ್ಯ ಮೇಳಗಳು, ಆಟ ಕೋಲಾಟಗಳ ಕುಣಿತಗಳು, ತರುಣರ ಭಕ್ತರ ಜೈ ಜೈ ಕಾರ ಮುಂತಾದ ಕಲೆಗಳ ಪ್ರದರ್ಶನವೇ ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡಿದೆ. ಬಿಜಾಪೂರದ ಶರಣರು ಹೇಳಿದ ಸಮಯಕ್ಕೆ ಗುರುವಾರ ಬೆಳಗಿನ ೧೧ ಗಂಟೆಗೆ ಸಗರನಾಡಿನ ಪುಣ್ಯ ಭೂಮಿಯಲ್ಲಿ ಪಾದಾರ್ಪಣೆ ಮಾಡಿ ಇಜೇರಿಗೆ ಆಗಮಿಸುತ್ತಾರೆ. ಇಜೇರಿಯ ಜನರು ಜೈ ಕಾರ ಹಾಕಿ ಸ್ವಾಗತಿಸುತ್ತಾರೆ. ಇಜೇರಿಯ ಖಾಜಾ ಅಮೀನುದ್ದೀನ ಆಲಾರವರು ಊರ ಪಟೇಲ ಪಟವಾರಿ ದಳಪತಿ. ಠಾಣಾಧಿಕಾರಿ ದಫೇದಾರರು. ಬಿಜಾಪೂರದ ಶರಣರ ಪಂಚ ಕಲ್ಯಾಣಿ ಕುದುರೆಯ ಹಿಂದೆ ಹೊರಟಿದ್ದಾರೆ. ಪಂಚ ಕಲ್ಯಾಣಿ ಕುದುರೆಯು ನಡೆಯುತ್ತಾ ಇಜೇರಿಯ ಪೋಲಿಸ್ ಪಾಟೀಲರಾದ ಹುಸೇನ ಪಟೇಲರ ಸರ್ವೇ ನಂಬರ್ ೪೮೫ ರ ೧೮ ಎಕರೆ ಜಮೀನದಲ್ಲಿ ಕಾಲ್ಕೆದರಿ ಗೋಣು ಅಲ್ಲಾಡಿಸಿ ನಿಲ್ಲುತ್ತದೆ ಇದನ್ನು ಪ್ರತ್ಯಕ್ಷವಾಗಿ ಕಂಡ ಇಜೇರಿಯ ಸರ್ವ ಭಕ್ತ ಜನರು ಹುಸೇನ ಪಟೇಲರ ಈ ಜಮೀನು ತಪೋ ಭೂಮಿಯಾಯಿತೆಂದು ಜಯಕಾರ ಹಾಕುತ್ತಾರೆ. ತಕ್ಷಣವೇ ಪೋಲಿಸ್ ಪಾಟೀಲ ಹುಸೇನ ಪಟೇಲರು ಶರಣರಿಬ್ಬರಿಗೆ ಹಾರ ಹಾಕಿ ಅರ್ಪಣಾ ಮನೋಭಾವದಿಂದ ವಿನಯ ಪೂರ್ವಕವಾಗಿ ಗುರುವರ್ಯರೆ ಇಂದು ನನ್ನ ಜನ್ಮ ಪಾವನವಾಯಿತು. ಈ ಕ್ಷಣವೇ ಈ ನನ್ನ ೧೮ ಎಕರೆ ಜಮೀನು ನಿಮಗರ್ಪಿತ ಎಂದು ತಮ್ಮ ಬಂಧು ಬಾಂಧವರೊಡಗೂಡಿ ಆಶೀರ್ವಾದ ಪಡೆಯುತ್ತಾರೆ. ನೆರೆದ ಜನರೆಲ್ಲಾ ಗುರುಗಳಿಗೆ ಹಾರ ಹಾಕಿ ಆಶೀರ್ವಾದ ಪಡೆಯುತ್ತಾರೆ.[೨೩]

➤ ಶರಣರ ಮದುವೆ:-

ಪ್ರಪಂಚದಲ್ಲಿಯೇ ಪಾರ ಮಾರ್ಥವ ಕಂಡವರು ಪುನೀತರಾಗುತ್ತಾರೆ. ಸಂಸಾರ ಸಾಗರದಲ್ಲಿ ಈಸಿ ದಡ ಸೇರಿದವರೆ ಧನ್ಯರು. ಸುಖ ದುಃಖದಲ್ಲಿ ದೇವನನ್ನು ಸ್ಮರಿಸುತ್ತಾ ಸನ್ಮಾರ್ಗದಿಂದ ನಡೆದವರಿಗೆ ಸ್ವರ್ಗವು ಲಭಿಸುತ್ತದೆ. ಸಂತ ಶರಣರ ಪ್ರವಾದಿಗಳ ನಾಡಿಯನ್ನು ಪರಿ ಪೂರ್ಣ - ನಂಬಿದ ಖಾಜಾ ಅಮೀನುದ್ದೀನರು ಬಾಲ್ಯದಿಂದ ಯೌವ್ವನಾವಸ್ಥೆಗೆ ಬಂದ ಸಮಯದಲ್ಲಿ ಬಿಜಾಪುರದ ವಂಶಜರ ಅಣತಿಯಂತೆ ಮದುವೆಯಾಗುವ ಸಮಯ ಬಂದಿತು. ಅಲ್ಲದೇ ಶರಣರ ಮದುವೆ ಮಾಡಬೇಕೆಂಬ ವಿಷಯವನ್ನ ಬಿಜಾಪುರದ ಶರಣರು ಇಜೇರಿಯ ಹುಸೇನ ಪಟೇಲ ಕುಲಕರ್ಣಿ ದಳಪತಿ ಮುಂತಾದ ಗಣ್ಯರಿಗೆ ತಿಳಿಸಿದರು. ಆಗ ಹಿರಿಯರೆಲ್ಲಾ ಸೇರಿ ಒಂದು ದಿನ ಬಿಜಾಪುರಕ್ಕೆ ಹೋಗಿ ಶರಣರನ್ನು ಕಂಡು ಇಜೇರಿ ಖಾಜಾ ಅಮೀನುದ್ದೀನ ಆಲಾರವರು ಧರ್ಮ ಪತ್ನಿಯ ಸ್ಥಾನ ತುಂಬುವ ಕನ್ಯಾ ರತ್ನ ಶೋಧಿಸುವ ಕೆಲಸ ಬಿಜಾಪುರದವರಿಗೆ ಬಿಟ್ಟರು ಬಹು ವಿಜೃಂಬಣೆಯಿಂದ ಮದುವೆ ಮಾಡುವುದಕ್ಕೆ ಬರುವ ಖರ್ಚು ವೆಚ್ಚಗಳನ್ನು ಇಜೇರಿಯ ಭಕ್ತ ರೆಲ್ಲಾ ಸೇರಿ ಮಾಡುತ್ತೇವೆ ಎಂದು ಹೇಳಿ ಬಂದರು.[೨೪] ಇಜೇರಿಯ ಬಂದೆನವಾಜಗಲ್ಲಿಯಲ್ಲಿರುವ ಕೋರವಾರದವರ ಸುಸಂಸ್ಕೃತ ಮನೆತನದ ಸೌಮ್ಯ ಸ್ವಭಾವದ ಶ್ರೇಷ್ಠ ಗುಣವಂತೆ ಎನಿಸಿದ ಬಾನುಬಿ ಎನ್ನುವವರನ್ನು ಶರಣ ಇಜೇರಿ ಖಾಜಾ ಅಮೀನುದ್ದೀನ ಆಲಾರವರ ಬಾಳ ಸಂಗಾತಿಯನ್ನಾಗಿ ಮಾಡುವುದರಲ್ಲಿ ಸಫಲರಾದರು.

ಒಂದು ದಿನ ಖಾಜಾ ಅಮೀನುದ್ದೀನರಗೆ ಅದಾವದೋ ಕಣ್ಣಿಗೆ ಕಾಣದ ದಿವ್ಯ ಶಕ್ತಿ ಅಶರೀರವಾಣಿಯು ಕೇಳಿಸಹತ್ತಿತ್ತು. ಆದೇನೆಂದರೆ ನೀ ನೆಲೆಸಿರುವ ಈ ಸ್ಥಳ ಪುಣ್ಯ ಸ್ಥಳವಾಗಲಿದೆ. ನಿನ್ನ ವಾಕ್ಯಸಿದ್ಧಿಯಿಂದ ಜನ ಪುನೀತರಾಗಿ ನಿನಗೆ ಅಸಂಖ್ಯಾತ ಶಿಷ್ಯ ಬಳಗ ಬೆಳೆಯುತ್ತಾರೆ. ನಿನ್ನ ಹೆಸರೂ ಕೂಡಾ ಸೂರ್ಯ ಚಂದ್ರರಿರುವ ಪರಿಯಂತ ಉನ್ನತವಾಗಿರುತ್ತದೆ. ಅದಕ್ಕಾಗಿ ಈಗಿನಿಂದಲೇ ಈ ಸ್ಥಾನದಲ್ಲಿ ಒಂದು ದರ್ಗಾ ನಿರ್ಮಿಸುವ ಕಾರ್ಯವನ್ನು ಕೈಕೊಳ್ಳು ಆ ಕಾರ್ಯವು ಸಲಿಸಾಗಿ ಪವಾಡ ಸದೃಶ್ಯವಾಗಿ ಮುಗಿಯುತ್ತದೆ. ಎಂದುಹೇಳಿ ಆ ಶಬ್ದ ನಿಶ್ಯಬ್ದವಾಗುವ ಹೊತ್ತಿಗೆ ಪ್ರಾರ್ಥನೆಯಾಗಿ ಊರಲ್ಲಿಯ ಮಸೀದೆಯಿಂದ ಅಜಾನ್ ಕೇಳಿ ಬರುತ್ತದೆ. ಎಚ್ಚರಾದಾಗ ಖಾಜಾ ಅಮೀನುದ್ದೀನರು ಬೆವತು ಹೋಗಿರುತ್ತಾರೆ. ಅಲ್ಲಾನನ್ನು ನೆನೆಸಿ ಯಾ ಅಲ್ಲಾ ನಿನ್ನ ಲೀಲೆ ಅಗಾಧವೆಂದು ಎದ್ದು ಮನೆಗೆ ತೆರಳುತ್ತಾನೆ.

➤ ದರ್ಗಾ ನಿರ್ಮಿಸುವ ಸಂಕಲ್ಪ:-

ಅಲ್ಲಾಹನ ಆಜ್ಞೆಯಂತೆ ದರ್ಗಾ ನಿರ್ಮಿಸುವ ಸಂಕಲ್ಪ ಮಾಡಿದ ಶರಣರು ಊರಹಿರಿಯರಾದ ಕುಲಕರ್ಣಿ, ಪಟೇಲ, ದಳಪತಿ, ಮುಂತಾದ ಎಲ್ಲ ಕೋಮಿನ ಹಿರಿಯರನ್ನು ಪರ ಊರಿನ ಅನೇಕ ಶಿಷ್ಯರನ್ನು ಆಮಂತ್ರಿಸಿ ಒಂದು ಸಭೆ ಸೇರಿಸಿ ದರ್ಗಾ ನಿರ್ಮಿಸುವ ತಮ್ಮ ಮನದಿಚ್ಛೆಯನ್ನು ಬಿಚ್ಚಿಡುತ್ತಾರೆ. ಅದೇ ಆಗ ಬರಗಾಲ ಬಿದ್ದು ಜನರೆಲ್ಲಾ ತತ್ತರಿಸಿ ಹೌಹಾರಿ ದಿಕ್ಕು ಕಾಣದವರಾಗಿರುತ್ತಾರೆ. ಇಂತಹ ಸಮಯದಲ್ಲಿ ಖಾಜಾ ಅಮೀನುದ್ದೀನರು ದರ್ಗಾ ಕಟ್ಟಿಸಬೇಕೆಂಬ ವಿಚಾರಕ್ಕೆ ಹಾಂ ಹೂಂ ಎನ್ನದೇ ಇಂತಹ ಪರಸ್ಥಿತಿಯಲ್ಲಿ ಅದ್ಹೇಗೆ ಕಟ್ಟಿಸುವರು ಗುರುಗಳೇ ಎನ್ನದೇ ಸಭೆ ಸೇರಿದ ಎಲ್ಲ ಜನರೂ ಮೌನಕ್ಕೆ ಶರಣಾದದನ್ನು ಅರಿತ ಖಾಜಾ ಅಮೀನುದ್ದೀನರು ಭಕ್ತಾದಿಗಳೇ ನಿಮ್ಮ ಮೌನದ ಅರ್ಥ ನನಗೂ ಗೊತ್ತಿದೆ. ಈ ವರುಷ ಬರಗಾಲ ಬಿದ್ದು ದನಕರುಗಳಿಗೆ ಮೇವಿನ ಕೊರತೆಯುಂಟಾಗಿ ಜನರೆಲ್ಲಾ ಗುಳೆ ಹೊರಟ್ಟಿದ್ದಾರೆ. ಇಂತಹ ಸಮಯದಲ್ಲಿ ಹೇಗೆ ದರ್ಗಾ ನಿರ್ಮಿಸಬೇಕೆಂದು ಯೋಚಿಸುತ್ತಿದ್ದೀರಿ. ನಿಜ ಆದರೆ ದೈವಾಜ್ಞೆಯಾಗಿದೆ ಯಾರಿಗೂ ತೊಂದರೆ ಕೊಡದೆ ಕೊಟ್ಟ ಭಕ್ತರಿಗೆ ಇಷ್ಟೇಕೆ

ಎಂದು ಕಾಡದೇ ದರ್ಗಾಕಟ್ಟುವ ಕೆಲಸ ಪ್ರಾರಂಭಸೋಣ ಅದನ್ನು ನಡೆಸಿಕೊಡುವ ದೇವನೊಬ್ಬ ಬೇರೆ ಇದ್ದಾನೆ. ನಿಮಗಾರಿಗೂ ಇದರ ಭಾರ ಹೊರಿಸುವ ಇಚ್ಛೆ ನನಗಿಲ್ಲ ಎಂದರು. ಕೂಡಿದ ಜನರೆಲ್ಲಾ ನಿಬ್ಬೆರಗಾಗಿ ಇದೇನಿದು ಶರಣರ ವಿಚಾರ ಕಾಸಿನ ಆಸೆಯಿಲ್ಲದೇ ಜೀವಿಸುವ ಇವರು ಎಂಥ ಕಾರ್ಯಕ್ಕೆ ಅಣಿಯಾಗುತ್ತಿದ್ದಾರಲ್ಲಾ ಎಂದು ಮನದಾಳದಲ್ಲಿ ಯೋಚಿಸಿ ಅದು ಶರಣರ ಇಚ್ಛೆ ಅವರ ಮಹಿಮೆಯನ್ನು ತಿಳಿದವರಾರು ಆಗಲಿ ಎಲ್ಲಾ ಅಲ್ಲಾಹನ ಕೃಪೆಯೆಂದು ಎಲ್ಲರೂ ಮುಕ್ತಮಸ್ಸಿನಿಂದ ಹೂಂ ಎಂದು ಶರಣರ ಆಜ್ಞೆಗೆ ಅಣಿಯಾದರು. ಕೆಲವು ದಿನಗಳಲ್ಲಿ ಹುಸೇನ ಪಟೇಲರ ಜಮೀನಿನಲ್ಲಿ ಅವರು ತೋರಿಸಿದ ಸ್ಥಳವನ್ನು ನಿರ್ಧರಿಸಿದರು. ಶರಣ ಖಾಜಾ ಅಮೀನುದ್ದೀನರ ಶಿಷ್ಯತ್ವ ಪಡೆದ ಗೌಂಡಿ ಕೆಲಸ ಮಾಡಲು ಪ್ರಸಿದ್ಧನಾದ ಭೀಮಯ್ಯ ಬಂಡಿ (ವಡ್ಡರ) ಎನ್ನುವ ಕಾರ್ಮಿಕ ಮುಖಂಡನನ್ನು ಕರೆಸಿ ಊರಿನ ಗಣ್ಯರೆದುರಿನಲ್ಲಿ ದರ್ಗಾ ನಿರ್ಮಿಸಲು ಹೇಳಿದರು. ಶರಣರ ಕ್ಷೇತ್ರದಲ್ಲಿ ದರ್ಗಾ ನಿರ್ಮಿಸುವ ಭಾಗ್ಯ ನನ್ನ ಪಾಲಿಗೆ ಬಂದಿದ್ದು ನನ್ನ ಭಾಗ್ಯವೆಂದು ಭೀಮಯ್ಯ ಸಂತೋಷದಿಂದ ಒಪ್ಪಿಕೊಂಡನು. ಅನೇಕ ಪರಿಣಿತ ಕಾರ್ಮಿಕರನ್ನು ಕೂಡಿ ಹಾಕಿ. ಶುಭ ದಿನ ಒಂದು ಗೊತ್ತುಪಡಿಸಿ ದರ್ಗಾ ನಿರ್ಮಿಸುವ ಕೆಲಸವನ್ನು ಭೀಮಯ್ಯ ಪ್ರಾರಂಭ ಮಾಡಿದನು. ಬರಗಾಲದ ದವಡೆಯಲ್ಲಿ ಸಿಕ್ಕಿ ಇಜೇರಿಯ ಹಾಗೂ ಗುಲ್ಬರ್ಗಾದ ಭಾಗದ ಭಕ್ತರೆಲ್ಲಾ ತಮ್ಮ ಕೈಲಾದ ಮಟ್ಟಿಗೆ ಸಹಾಯ ಸಲ್ಲಿಸಿದರು. ಅವರು ಸಲ್ಲಿಸಿದ ಕಾಣಿಕೆ ಒಂದು ವಾರದ ಕೂಲಿ ಕೊಡಲು ಆಗದಪ್ಪಿತ್ತು. ಆದರೆ ಶರಣರ ಆಸೆಯಂತೆ ಕಟ್ಟಡ ಕಾರ್ಯ ಭರದಿಂದ ಸಾಗಿತು. ಹುರುಪು ಹುಮ್ಮಸ್ಸಿನಿಂದ ಲವಲವಿಕೆಯಿಂದ ನಗುನಗುತ್ತಾ ಹಾಡು ಹೇಳುತ್ತಾ ಕೂಲಿ ಕಾರ್ಮಿಕರು ದರ್ಗಾದ ಕಾರ್ಯ ಮಾಡಹತ್ತಿದರು. ಕುಲಕರ್ಣಿಯವರು ದರ್ಗಾದ ಕಾರ್ಯ ಮಾಡಹತ್ತಿದರು. ಕುಲಕರ್ಣಿಯವರು ಪಟೇಲರು ಮುಂತಾದ ಗಣ್ಯರು ಶರಣರೊಂದಿಗೆ ಉಸ್ತುವಾರಿ ಮಾಡುತ್ತಿದ್ದರು. ಕೆಲಸ ಪ್ರಾರಂಭವಾಗಿ ಒಂದು ವಾರಕಳೆಯಿತು. ವಾರಕ್ಕೊಮ್ಮೆ ಕೂಲಿ ಕಾರ್ಮಿಕರ ಕೂಲಿಯನ್ನು ಸಂದಾಯ ಮಾಡಿದರು. ೩-೪ವಾರದಲ್ಲಿ ಶರಣರ ಹತ್ತಿರವಿದ್ದ ಹಣವೆಲ್ಲಾ ಮುಗಿಯಿತು. ಕುಲಕರ್ಣಿಯವರು ಪಟೇಲರು ಮುಂತಾದ ಹಿರಿಯರು ಶರಣ ಖಾಜಾ ಅಮೀನುದೀನರಿಗೆ ಗುರುಗಳೇ ಕೆಲಸವಂತೂ ಭರದಿಂದ ನಡೆದಿದೆ.[೨೫] ಕೂಲಿ ಕಾರ್ಮಿಕರ ಕೂಲಿ ಕೊಡಲು ಕೂಡಿಟ್ಟ ಹಣ ಮುಗಿಯಿತು. ಮುಂದೇನು ಮಾಡುವುದೆಂದಾಗ ಶರಣರು ಚಿಂತೆಮಾಡಬೇಡಿ ಕುಲಕರ್ಣಿಯವರೇ ದರ್ಗಾ ನಿರ್ಮಿಸಲು ಪ್ರೇರಣೆ ಮಾಡಿದ ಆ ಪ್ರೇರಕ ಪ್ರಭುವೆ ಪಾರುಮಾಡುತ್ತಾನೆ. ಕೆಲಸನಿಲ್ಲಿಸುವುದು ಬೇಡ ಎಂದರು.

ಮತ್ತೆ ಒಂದು ವಾರ ಕೆಲಸ ಮುಗಿಯಿತು ಶರಣರು ಸ್ವತಃ ಕೂಲಿ ಕಾರ್ಮಿಕರನ್ನು ಕರೆದು ಕಟ್ಟಡ ನಡೆದ ಬಯಲಿನಲ್ಲಿ ಸಾಯಂಕಾಲ ೫ ಗಂಟೆಯ ನಂತರ ಸಾಲಾಗಿ ಮರಳಿನ ಗುಂಪು ಮಾಡಿಕೊಂಡು ಕೂಡಲು ಹೇಳಿದರು. ಅದರಂತೆ ಕಾರ್ಮಿಕರು ಕುಳಿತಲ್ಲಿಯೇ ಮರಳಿನಗುಂಪು ಮಾಡಿಕೊಂಡು ಕುಳಿತುಕೊಂಡರು. ಶರಣರು ಒಂದೆರಡು ನಿಮಿಷ ತಮ್ಮ ಕೈಯಲ್ಲಿನ ಬೆತ್ತ ಒಂದನ್ನು ಹಿಡಿದುಕೊಂಡು ಬಂದು ಸಾಲಾಗಿ ಕುಳಿತ ಕಾರ್ಮಿಕರ ಮುಂದೆ ನಡೆಯುತ್ತಾ ಮರಳಿನ ಗುಂಪಿಗೆ ಕೈಯಲ್ಲಿದ್ದ ಬೆತ್ತದಿಂದ ಬಡಿಯುತ್ತಾ "ಅಲ್ ನಬಿಯಾ ಮದದ ಯಾ ನಬಿಯಾ ಅಲ್ ಮದದ್ ಯಾರಬ" ಎಂದು ಬಡಿಯುತ್ತಾ ಹೊರಟರು. ನಂತರ ಕಾರ್ಮಿಕ ಸಹೋದರರಿಗೆ ನಿಮ್ಮ ಮುಂದಿರುವ ಮರಳಿನ ಗುಂಪಿನಲ್ಲಿ ಕೈಹಾಕಿ ನೋಡಿರೆಂದಾಗ ಅಂದಿನ ಕಾಲದ ಬೆಳ್ಳಿ ನಾಣ್ಯಗಳು ಎಲ್ಲರಿಗೂ ದೊರಕಿದವು. ಆದರೆ ಇಲ್ಲಿ ಒಂದು ಆಶ್ಚರ್ಯಕಾದಿರುತ್ತದೆ. ಅದೇನೆಂದರೆ ಯಾವ ಕಾರ್ಮಿಕನು ಎಷ್ಟು ದಿನದ ಕೂಲಿ ಕೆಲಸ ಮಾಡಿದ್ದರೋ ಅಷ್ಟೇ ಹಣ ಅವರವರ ಮರಳಿನ ಗುಂಪಿನಲ್ಲಿರುತ್ತದೆ. ಇದಕ್ಕಿಂತ ಪವಾಡದ ನಿದರ್ಶನ ಮತ್ತೇನು ಬೇಕು ಇಂತಹ ಮಹಾನ್ ಶರಣರ ದರಗಾದ ಕಟ್ಟಡ ನಿಲ್ಲುವುದಾದರೂ ಹೇಗೆ ಪ್ರತಿವಾರ ನಿರಂತರ ಕಾರ್ಮಿಕರ ಕೂಲಿ ಹಣ ದೊರಕಹತ್ತಿತು. ಈ ಸುದ್ದಿ ಸಗರ ನಾಡಿನ ಸುತ್ತೆಲ್ಲಾ ಹಬ್ಬಿತು. ಶರಣರ ಪ್ರಭಾವವೂ

ಪ್ರಸನ್ನವಾಗಹತ್ತಿತು.[೨೭] ಈ ಸಮಯದಲ್ಲಿ ಒಂದು ಘಟನೆಯು ನಡೆಯಿತು. ನೂರಾರು ಕೂಲಿಕಾರ್ಮಿಕರು ವಾರಕ್ಕೊಮ್ಮೆ ಕೂಲಿಗಾಗಿ ಸಾಲಾಗಿ ಕುಳಿತಾಗ ಕೆಲಸಕ್ಕೆ ಬಾರದೇ ಕೂಲಿ ಪಡೆಯಬೇಕೆಂಬ ಆಸೆಯಿಂದ ಒಬ್ಬ ಡೊಂಗಿ ಕಾರ್ಮಿಕನು ಸಾಲಿನಲ್ಲಿ ಕುಳಿತು ಮರಳಿನ ಗುಂಪಿ ಮಾಡಿದ್ದನು. ಶರಣರು ಸಂಪ್ರದಾಯದಂತೆ ತಮ್ಮ ಕೈಯಲ್ಲಿಯ ಬೆತ್ತದಿಂದ "ಅಲ್‌ನಬಿ ಯಾ ಮದದ್ ಎಂದು ಬಡಿಯುತ್ತಾ" ಹೋದರು ಎಲ್ಲ ಕಾರ್ಮಿಕರು ತಾವು ದುಡಿದಷ್ಟು ದಿನದ ಕೂಲಿ ಹಣ ತೆಗೆದುಕೊಂಡರು. ಆದರೆ ಡೊಂಗಿ ಕೂಲಿ ಕಾರ್ಮಿಕನು ತನ್ನ ಮುಂದೆ ತಾ ಮಾಡಿದ ಮರಳಿನಲ್ಲಿ ಕೈಹಾಕಿ ನೋಡುತ್ತಾನೆ. ಅದರಲ್ಲಿ ಹಣ ಸಿಗದೆ ಅತ್ತಿತ್ತ ನೋಡುತ್ತಾನೆ. ಇವನ ಡೊಂಗಿತನ ಮೂದಲೇ ಅರಿತಿದ್ದ ಕಾರ್ಮಿಕರೆಲ್ಲಾ ಖೊಳ್ಳನೆ ನಕ್ಕು ಬಿಡುತ್ತಾರೆ. ಆಗ ಡೊಂಗಿ ಮನುಷ್ಯ ನಾಚಿಕೆಯಿಂದ ತನ್ನ ತಪ್ಪಿನ ಅರಿವಾಗಿ ತಲೆ ತಗ್ಗಿಸುತ್ತಾನೆ. ಆಗ ಶರಣ ಖಾಜಾ ಅಮೀನುದ್ದೀನರು ಬೇಟಾ ಕಾಯಕವೇ ಕೈಲಾಸ ಸತ್ಯ, ನ್ಯಾಯ, ನೀತಿಯಿಂದ ನಡೆಯಬೇಕಪ್ಪಾ ಸುಳ್ಳಾಡಬಾರದು ಇರಲಿ ನಾಳೆಯಿಂದ ನೀನು ಕೆಲಸಕ್ಕೆ ಬಾ, ದೇವರು ನಿನಗೂ ಸರಿಯಾದ ಕೂಲಿ ಕೊಡುತ್ತಾನೆ. ಇದೋ ಈ ಹಣ ತೆಗೆದುಕೊ ನಿನ್ನ ಅಡಚಣೆ ನೀಗಿಸಿಕೋ ಎಂದು ಸ್ವಲ್ಪ ಹಣ ಕೊಟ್ಟು ಕಳಿಸುತ್ತಾರೆ.

ದರ್ಗಾಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದ ಗೌಂಡಿ ಭೀಮಯ್ಯನಿಗೆ ದರ್ಗಾದ ಕೆಲಸದೊಂದಗೆ ಅನೇಕ ಕಟ್ಟಡ ಕೆಲಸಗಳು ದೊರಕಿ ಶರಣರ ಕೃಪೆಯಿಂದ ಆರ್ಥಿಕವಾಗಿ ಬಲಿಷ್ಟನಾಗಹತ್ತಿದನು. ಮನೆಯಲ್ಲಿ ಮಡದಿ, ಮಕ್ಕಳು, ಮೊಮ್ಮಕ್ಕಳು ಸಂತೋಷದಿಂದ ಮನೆಯು ಸಿರಿಯ ಸಂಗಮವಾಯಿತು. ಆ ಗೌಂಡಿ ಭೀಮಯ್ಯ ಕಟ್ಟಿದ ಇಜೇರಿಯ ದರ್ಗಾ ಕಟ್ಟಡ ಇಂದು ನಾಡಿನ ತುಂಬಾ ಹೆಸರುಗಳಿಸಿದೆ. ಕಟ್ಟಡ ಕೆಲಸ ಮಾಡುವ ಭೋವಿ ಜನಾಂಗವು ಬಂಡಿ ಎಂಬ ಹೆಸರಿನಿಂದ ಎಂದು ಕರ್ನಾಟಕದ ತುಂಬ ಹರಡಿಕೊಂಡಿದ್ದಾರೆ. ಈಗಲೂ ಕೂಡಾ ಇಜೇರಿಯಲ್ಲಿ ಖಾಜಾ ಅಮೀನುದ್ದೀನರ ಉರುಸು ಜಾತ್ರೆ ಯುಗಾದಿಯಾದ ೧೧ನೇ ದಿನಕ್ಕೆ ನಡೆಯುತ್ತಿದ್ದು, ಆ ಉರುಸಿನ ಸಮಯಕ್ಕೆ ಬಂಡಿ ಜನಾಂಗದವರೆ ಎರಡು ಝುಂಡಾ ಏರಿಸುತ್ತಾರೆ. ಅವರು ಬಂದು ದರ್ಗಾದ ಮೇಲೆ ಝುಂಡಾ ಏರಿಸಿದ ನಂತರವೆ ಗಂಧ ಲೇಪಿಸುವ ಸಂಪ್ರದಾಯವಿದೆ. ಝುಂಡಾ ಏರಿಸುವ ಒಂದು ಪವಿತ್ರ ಕಾರ್ಯ ಈ ಭೋವಿ ಜನಾಂಗದ ಪಾಲಿಗಿದ್ದಿದ್ದು ಸರ್ವ ಜನರು ಸಹೋದರರೆಂಬ ಭಾವನೆ ಈ ಶರಣರದು ಎನ್ನುವದು ತಿಳಿದು ಬರುತ್ತದೆ. ದರ್ಗಾ ಕಟ್ಟಡ ಮುಗಿದು ಸರ್ವಜನರು ಸಂಭ್ರಮಿಸುತ್ತಾರೆ.

ಶರಣರ ಮಹಿಮೆಯ ಮೇಲ್ಮೆಯರಿತು ಜನರು ಮೂಕ ವಿಸ್ಮಿತರಾಗಿ ಮನದಲ್ಲಿಯೇ ಅವರನ್ನು ಆರಾಧಿಸುತ್ತಾರೆ. ಆಗ ಶರಣ ಖಾಜಾ ಅಮೀನುದ್ದೀನರು ಕಟ್ಟಡದ ಕೆಲಸ ಮುಗಿಸಿದ ಬಂಡಿ ಭೀಮಯ್ಯ ಗೌಂಡಿಯನ್ನು ಕರೆದು ನಿನ್ನ ಕೆಲಸ ಅಪ್ರತಿಮವಾಗಿದೆ. ದರ್ಗಾದ ಕಟ್ಟಡವನ್ನು ಸುಂದರವಾಗಿ ಕಟ್ಟಿದ್ದಿಯಾ - ನಿನ್ನ ಈ ಕಾಯಕಕ್ಕೆ ದೇವರು ಸಮೃಧ್ಧಿ, ದಯಪಾಲಿಸುತ್ತಾನೆ. ಅಲ್ಲದೆ ನಿನ್ನ ಹೆಸರು ಈ ದರ್ಗಾದೊಂದಿಗ ಸೂರ್ಯ ಚಂದ್ರರಿರುವ ತನಕ ಇರುತ್ತದೆ.ನಿನ್ನ ಶ್ರಮ, ಶಕ್ತಿ, ಭಕ್ತಿ ನಿನಗೆ ಕಾಣಿಕೆ ಕೊಡಬೇಕೆಂದುಮನಸಾಗಿದೆ[೨೮]. ಕೇಳು ಭೀಮಯ್ಯ ನಿನಗೇನು ಕಾಣಿಕೆ ಬೇಕು ಎನ್ನುತ್ತಾರೆ. ಆಗ ಬಂಡಿ ಭೀಮಯ್ಯನು ಬುದ್ಧಿ ನಿಮ್ಮ ಕೃಪಾಶಿರ್ವಾದವನ್ನು ಬಿಟ್ಟು ನಾನೇನು ಬೇಡಲಾರೆ ಆದರೆ ನಾನು ನನ್ನ ವಂಶಜರು ಸತತವಾಗಿ ಈ ದರ್ಗಾದ ಮೇಲೆ ವರುಷಕ್ಕೊಂದು ಬಾರಿ ದರ್ಗಾದ ಮೇಲೆ ಎರಡು ಝುಂಡಾ ಏರಿಸುವ ಸೇವಾ ಭಾಗ್ಯ ಕೊಡಬೇಕು ಮತ್ತು ನಾನು ಮರಣ ಹೊಂದಿದ ಸಮಯದಲ್ಲಿ ನೀವು ಬಂದು ಮೂರು ಹಿಡಿ ಮಣ್ಣು ಹಾಕಿ ನನ್ನ ಸಮಾಧಿಯ ಮೇಲೆ ಪಾದ ಸ್ಪರ್ಶಿಸಬೇಕು. ಈ ನನ್ನ ಬಯಕೆ ಈಡೇರಿಸಿದರೆ ನಾನು ಪುನೀತನಾಗುವೆ ಗುರುವೆ ಎಂದು ಬೇಡಿ ಕೊಂಡಾಗ ಅವನಾಸೆಗೆ ಅನುಕಂಪದಿಂದ

ಒಪ್ಪಿಗೆ ನೀಡಿದ ಶರಣರು ಆಗಲಿ ಭೀಮಯ್ಯ ನಿನ್ನಚ್ಛೆಯಂತೆ ಆಗಲಿ ಎನ್ನುತ್ತಾರೆ. ಅಂದಿನಿಂದ ಇಂದಿನ ವರೆಗೆ ಭೀಮಯ್ಯ ವಂಶಜರಾದ ಬಂಡಿ ವಡ್ಡರ ಜನಾಂಗದವರೇ ಬಂದು ಝಂಡಾ ಏರಿಸುತ್ತಾರೆ. ಆದರೆ ಭೀಮಯ್ಯ ನಿಧನವಾಗುವ ಪೂರ್ವದಲ್ಲಿಯೇ ಖಾಜಾ ಅಮೀನರು ಪೈಗಂಬರವಾಸಿಯಾಗುತ್ತಾರೆ. ಭೀಮಯ್ಯನ ನಿಧನದ ವೇಳೆಯಲ್ಲಿ ಸ್ಥಿರ ಪ್ರಜ್ಞೆ ಕಳೆದುಕೊಂಡು ನನ್ನ ಗುರು ಖಾಜಾ ಅಮೀನರು ಬಂದು ನನ್ನ ಸಮಾಧಿಯ ಮೇಲೆ ತಿರುಗಾಡುತ್ತಾರೆ. ಎಂದು ಬಡ ಬಡಿಸಿ ಪ್ರಾಣ ಬಿಟ್ಟನಂತೆ ಅವನಾಸೆ ಈಡೇರಿಸಲು ಭೀಮಯ್ಯನ ಮಕ್ಕಳು ಶವವನ್ನು ಸಮಾಧಿ ಒಳಗಿಟ್ಟು ಖಾಜಾ ಅಮೀನರನ್ನು ಸ್ಮರಿಸಿ ಗುರುವೇ ನನ್ನ ತಂದೆಯ ಆಸೆ ಈಡೇರಿಸು ಎಂದು ಒಕ್ಕೊರಲಿನಿಂದ ಕೂಗಿದಾಗ ಆಗ ಅಲ್ಲಿಗೆ ಯಾರೋ ಒಬ್ಬ ವ್ಯಕ್ತಿಕುದುರೆ ಹತ್ತಿ ಬಂದು "ಕಹಾಂ ತಕ್ ಜಮೀನ್ ವಹಾಂ ತಕ್ ಅಮೀನ" ಎನ್ನುತ್ತಾ ಕುದುರೆಯನ್ನು ಸಮಾಧಿಯ ಮೇಲೆ ತಿರುಗಾಡಿಸಿ ಅಲ್ಲಿ ನಿಲ್ಲದೆ ವಾಯು ವೇಗದಿಂದ ಕುದುರೆ ಓಡಿಸಿದನಂತೆ.

ಇದು ತರ್ಕಕ್ಕೆ ನಿಲುಕದ ವಿಷಯವಾದರೂ ಸತ್ಯವೆಂದು ಜನ ಹೇಳುತ್ತಾರೆ. ದರ್ಗಾ ಕಟ್ಟಡ ಮುಗಿದ ನಂತರ ಭೀಮಯ್ಯಕೆಲಸದ ನಿಮಿತ್ಯ ಒಂದೆರಡು ವರುಷ ಗುಲ್ಬರ್ಗಾ ಪಟ್ಟಣದಲ್ಲಿವಾಸವಾಗುತ್ತಾನೆ.[೨೯] ಅಷ್ಟೋತ್ತಿಗೆ ಶರಣ ಖಾಜಾ ಅಮೀನುದ್ದೀನರ ಉರುಸು ಪ್ರಾರಂಭವಾಗಿರುತ್ತದೆ. ಭಕ್ತ ಬಂಡಿ ಭೀಮಯ್ಯ ಪ್ರತಿ ವರ್ಷದಂತೆ ಝಂಡಾ ತೆಗೆದುಕೊಂಡು ಬರುವಾಗ ಭೀಮಾ ನದಿ ತುಂಬಿ ಹರಿಯುತ್ತಿದ್ದುದರಿಂದ ದಾರಿ ಇಲ್ಲದಾಗಿರುತ್ತದೆ.

ಈಗಿನಂತೆ ಆಗಿನ್ನು ಬ್ರಿಜ್ ನಿರ್ಮಾಣವಾಗಿದ್ದಿಲ್ಲಾ ಚಿಂತಾ ಕ್ರಾಂತನಾಗಿ ನದಿಯ ದಂಡೆಗೆ ಕುಳಿತ ಭೀಮಯ್ಯ ಏನು ಮಾಡುವುದು ಸಂಜೆಯಾಗುತ್ತಾ ಬಂತು ಬೆಳಗಿನ ೫ ಗಂಟೆಗೆ ಗಂಧ ಹೊರಡುತ್ತದೆ. ಅಷ್ಟರೊಳಗಾಗಿ ದರಗಾದ ಮೇಲೆ ಝಂಡಾ ಏರಿಸಬೇಕು ಎಂದು ಮೌನಿಯಾಗಿ ನದಿಯ ದಂಡೆಯ ಮೇಲೆ ಕುಳಿತಲ್ಲಿಯೇ ಕಂಬಳಿ ಹಾಸಿ ನಿದ್ರೆ ಹೋಗುತ್ತಾನೆ. ಒಂದೆರಡು ಗಂಟೆ ನಿದ್ರೆ ಮಾಡಿ ಎಚ್ಚೆತ್ತು ಕಣ್ಮುಚ್ಚಿ ಖಾಜಾ ಅಮೀನುದ್ದೀನ ಶರಣರೆ ನಾನಂತೂ ಝಂಡಾ ತಂದಿದ್ದೇನೆ ಹೊಳೆಯ ಹರಿವು ಕಡಿಮೆ ಮಾಡು ತಂದೆ ಬೇಗ ನಾನು ಬಂದು ಝಂಡಾ ಏರಿಸುತ್ತೇನೆಂದು ಕಣ್ಣು ತೆರೆಯುತ್ತಾರೆ ಹೊಳೆದಾಟಿ ಈಚೆ ದಂಡೆಗೆ ಭೀಮಯ್ಯ ಬಂದು ಕುಳಿತಿರುತ್ತಾನೆ.

ಆಶ್ಚರ್ಯಚಕಿತನಾದ ಭೀಮಯ್ಯ ತಿರುಗಿನೋಡುತ್ತಾನೆ ಹೊಳೆ ತುಂಬಿ ಹರಿಯುತ್ತಿರುತ್ತದೆ ಶರಣ ಖಾಜಾ ಅಮೀನುದ್ದೀನರೆ ನಿಮ್ಮ ಮಹಿಮೆ ಯಾರಿಗೆ ಗೊತ್ತು ತಂದೆ ಎಂದು ಓಡೋಡಿ ಬಂದು ಇಜೇರಿಯ ದರ್ಗಾದ ಮೇಲೆ ಝಂಡಾ ಏರಿಸುತ್ತಾನೆ. ಈ ಘಟನೆಯನ್ನು ಈಗಲೂ ಇಜೇರಿಯ ಜನರು ನಿಜವೆಂದು ಹೇಳುತ್ತಾರೆ. ಭೀಮಯ್ಯನ ಭಕ್ತಿ ಶರಣರ ತಪದ ಶಕ್ತಿ ಇದರಲ್ಲಿ ಎದ್ದು ಕಾಣುತ್ತದೆ. ಇಂದಿಗೂ ಬಂಡಿ ಜನಾಂಗದವರು, ವಂಶದವರೂ ವಿಜೃಂಭಣೆಯಿಂದ ಭಕ್ತಿ ಭಾವದಿಂದ ಪ್ರತಿ ವರ್ಷ ಇಜೇರಿಗೆ ಬಂದು ಝಂಡಾ ಏರಿಸುತ್ತಾರೆ.[೨೯]

➢ **ಕುಳಗೇರಿ ಶರಣ ಖಾದರ ಅಲಿಯವರು ಹೇಳಿದ್ದು ?:-**

ದರ್ಗಾ ಕಟ್ಟಡ ಕಟ್ಟುವಾಗ ಅನೇಕ ಪವಾಡ ಸದೃಶ ಘಟನೆಗಳು ನಡದದ್ದು ತಿಳಿದು ಬರುತ್ತದೆ. ಸಗರನಾಡಿನ ತುಂಬಾ ಇಜೇರಿಯ ಶರಣ ಖಾಜಾ ಅಮೀನುದ್ದೀನ ಆಲಾರವರ ಪವಾಡಗಳು ಜನ ಜನಿತವಾದವು. ಇವರ ಪ್ರಭಾವವನ್ನು ಕೇಳಿ ತಿಳಿದುಕೊಂಡಿದ್ದ ಕುಳಗೇರಿ ಗ್ರಾಮದ (ವಲಿ) ಶರಣ ಖಾದರಲಿಯವರು ಇಜೇರಿಯ ಮಾರ್ಗವಾಗಿ ಕುಳಗೇರಿಗೆ ಹೊರಟಾಗ ತಮ್ಮ ಜೊತೆಗಿದ್ದ ಶಿಷ್ಯನೊಂದಿಗೆ ದರ್ಗಾ ಕಟ್ಟಡದ ಕೆಲಸ ಪ್ರಾರಂಬಿಸಿದ್ದಾರೆ, ಶಿಷ್ಯ ಒಂದು ಸಂದೇಶವನ್ನು ಖಾಜಾ

ಅಮೀನುದ್ದೀನರಿಗೆ ತಿಳಿಸಿಬಾ ಎಂದು ಕಳಿಸಿಕೊಡುತ್ತಾರೆ. ಆಗ ಖಾದರಲಿಯವರ ಶಿಷ್ಯ ಬಂದು ಶರಣ ಖಾಜಾ ಅಮೀನುದ್ದೀನರಿಗೆ ತಮ್ಮ ಗುರುವಿನ ಸಂದೇಶ ತಿಳಿಸುತ್ತಾನೆ. ಆಗ ಶರಣರು ನಿಮ್ಮ ಗುರುವಿನ ಸಂದೇಶ ಏನು ಎಂದು ಕೇಳುತ್ತಾರೆ. ಆಗ ಶಿಷ್ಯನು ಖಾಜಾ ಅಮೀನುದ್ದೀನ ಶರಣರೆ ನಿಮ್ಮ ದರ್ಗಾ ಕಟ್ಟಡ ಮುಗಿಯುತ್ತದೆಯಂತೆ ಆದರೆ ಕಳಸವೇರುವುದಿಲ್ಲವಂತೆ, ಒಂದುವೇಳೆ ಕಳಸವೇರಿದರೂ, ನಿಮ್ಮ ಕಣ್ಣು ನೋಡುವುದಿಲ್ಲವಂತೆ ಇದು ನನ್ನ ಗುರುವಿನ ಸಂದೇಶ ಎಂದು ಹೇಳುತ್ತಾನೆ. ಆಗ ಶರಣ ಖಾಜಾ ಅಮೀನುದ್ದೀನರು ನಸು ನಕ್ಕು ಶಿಷ್ಯ ಅಲ್ಲಾ ನಿನ್ನ ಮೇಲೆ ಕೃಪೆ ಮಾಡಲಿ ಆದರೆ ನಿನ್ನ ಗುರು ಖಾದರಲಿಯವರಿಗೆ ನನ್ನ ಈ ಸಂದೇಶವನ್ನು ತಿಳಿಸು ಈ ದರ್ಗಾದ ಕಟ್ಟಡವೂ ಮುಗಿಯುತ್ತದೆ ಕಳಸವೂ ಏರುತ್ತದೆ. ನಾನು ನೋಡುತ್ತೇನೆ ಆದರೆ ಕಳಸ ಏರಿತೂ ಎನ್ನುವ ಸುದ್ದಿ ನಿನ್ನ ಗುರುಗಳು ಕೇಳುವುದಿಲ್ಲಾ ಅದು ಆ ಈಶ್ವರನ ಇಚ್ಛೆ ಈ ಸಂದೇಶವನ್ನು ನಿನ್ನ ಗುರುವಿಗೆ ತಲುಪಿಸು ಎನ್ನುತ್ತಾರೆ. ಅದರಂತೆ ಖಾದರಲಿಯವರ ಶಿಷ್ಯ ತನ್ನ ಗುರುಗಳಿಗೆ ತಿಳಿಸುತ್ತಾನೆ. ಆದರೆ ಆ ಸಂದೇಶದ ಕಡೆ ಗಮನ ಕೊಡದೆ ಖಾದರಲಿ ಶರಣರು ಸಿಟ್ಟಿನಿಂದ ಕುದುರೆ ಓಡಿಸುತ್ತಾರೆ. ದರ್ಗಾದ ಕಟ್ಟಡ ಮುಗಿದು ಭಕ್ತಾದಿಗಳೆಲ್ಲ ಶರಣ ಖಾಜಾ ಅಮೀನುದ್ದೀನರ ನೇತ್ರತ್ವದಲ್ಲಿ ಕಳಸ ಏರಿಸುವ ಸಂಭ್ರಮದಲ್ಲಿದ್ದಾಗ ಕುಳಗೇರಿಯ ಶರಣ ಖಾದರಲಿಯವರು ಸ್ವರ್ಗಸ್ಥರಾದರೆಂಬ ಸುದ್ದಿ ಇಜೇರಿಗೆ ಬರುತ್ತದೆ. ನಂತರ ಕಳಸ ಏರುತ್ತದೆ ಶರಣ ಖಾಜಾ ಅಮೀನುದ್ದೀನರ ಪವಾಡ ಮಹಿಮೆಗಳನ್ನು ಕೇಳಿದ ಕಡಪಟ್ಟಿ ಭಕ್ತನೊಬ್ಬ ಇವರನ್ನು ಪರೀಕ್ಷೆ ಮಾಡುವ ದುಸ್ಸಾಹಸಕ್ಕೆ ಕೈ ಹಾಕುತ್ತಾನೆ.[೨೦] ತನ್ನ ೮ ವರ್ಷದ ಮಗನೊಬ್ಬನಿಗೆ ಸತ್ತವನಂತೆ ನಟಿಸಬೇಕೆಂದು ಹೇಳಿ ಮಗನನ್ನು ಎತ್ತಿಕೊಂಡು ಶರಣರ ಬಳಿಗೆ ಜನಗಳೊಂದಿಗೆ ಬಂದು ಶರಣರೆ ಆಟ ಆಡುತ್ತಲಿದ್ದ ನನ್ನ ಮಗನು ಏಕಾ ಏಕಿ ಕಣ್ಮುಚ್ಚಿ ಜೀವ ಬಿಟ್ಟಿದ್ದಾನೆ. ಗುರುಗಳೇ ಪ್ರೀತಿಯಿಂದ ಬೆಳೆಸಿದ ಮಗನು ನನ್ನನ್ನು ಬಿಟ್ಟು ಹೊರಟಿದ್ದಾನೆ. ಇದನ್ನು ಸಹಿಸುವ ಶಕ್ತಿ ನನಗಿಲ್ಲ ಗುರುಗಳೇ ನನ್ನ ಮಗುವಿಗೆ ಬದುಕಿಸಿ ಪುಣ್ಯ ಕಟ್ಟಿಕೊಳ್ಳಿರಿ ಎಂದು ಕೃತಕವಾಗಿ ಕಣ್ಣೀರು ಹರಿಸಿ ಅಳ ಹತ್ತಿದನು. ಆ ೮ ವರ್ಷದ ಮಗನು ಕೂಡಾ ತಂದೆ ಹೇಳಿದಂತೆ ಸತ್ತವನಂತೆ ಕಣ್ಮುಚ್ಚಿದ್ದನು. ಅಂತರಂಗ ಜ್ಞಾನಿಗಳಾದ ಶರಣ ಖಾಜಾ ಅಮೀನುದ್ದೀನರು ಅವರ ಕಡೆಗೆ ತಿರುಗಿ ಸಹ ನೋಡದೆ ನಿನ್ನ ಮಗ ಇಷ್ಟೆ ಆಯುಷ್ಯ ಪಡೆದು ಬಂದಿದ್ದಾನೆ ಅದು ದೇವರ ಇಚ್ಛೆಯಪ್ಪಾ ನಾವು ಕೃಪೆ ಮಾಡುವ ಸಮಯ ಮೀರಿ ಹೋಗಿದೆ ಎಂದು ಒಳಗೆ ಹೋಗಿ ಬಿಡುತ್ತಾರೆ. ಆ ಬಾಲಕನ ತಂದೆಯು ಈ ಶರಣರು ಇದುವರೆಗೆ ಮಾಡಿದ ಪವಾಡಗಳೆಲ್ಲಾ ಡಾಂಭಿಕವಾಗಿವೆಯೆಂದು ಮನದಲ್ಲಿ ಅಹಂ ಭಾವ ತುಂಬಿಕೊಂಡು ಮಗನನ್ನು ಎಬ್ಬಿಸುತ್ತಾನೆ. ಆ ಬಾಲಕು ನಿಜವಾಗಿಯೂ ಸತ್ತುಹೋಗಿರುತ್ತಾನೆ ಕಪಟ ಭಕ್ತ ಮಾಡಿದ ತಪ್ಪಿಗಾಗಿಪಶ್ಚಾತಾಪ ಪಡುತ್ತಾನೆ ಆದರೆ ಮಗನ ಜೀವದುಸಿರು ಆಗಲೇ ಆ ದೇವನಲ್ಲಿಗೆ ಹೋಗಿಬಿಟ್ಟಿರುತ್ತದೆ.

ಸಿದ್ದಪ್ಪ ಸಾಹುಕಾರನೆಂಬ ಸ್ವಾರ್ಥಿಯೊಬ್ಬನು ತನ್ನ ಜಮೀನಿನಲ್ಲಿ ಬಾವಿ ತೊಡಿಸುವದಕ್ಕಾಗಿ ಕೂಲಿ ಕಾರ್ಮಿಕರಿಗೆ ಗುತ್ತಿಗೆ ಆಧಾರದ ಮೇಲೆ ಇಂತಿಷ್ಟೆ ಆಳ ತೆಗೆಯಬೇಕು ಇಂತಿಷ್ಟು ಹಣ ಕೊಡುತ್ತೇನೆಂದು ಕರಾರು ಮಾಡಿ ಗುತ್ತಿಗೆ ಕೊಟ್ಟಿರುತ್ತಾನೆ. ಕೂಲಿ ಕಾರ್ಮಿಕರು ಹಗಲಿರುಳೆನ್ನದೆ ಬೆವರು ಸುರಿಸಿ ಬಾವಿ ತೋಡುತ್ತಾರೆ. ಸಿದ್ದಪ್ಪನ ದುರ್ದೈವಕ್ಕೆ ಬಾವಿಯಲ್ಲಿ ನೀರು ಬೀಳುವುದಿಲ್ಲಾ ನಿರಾಸೆಗೊಂಡ ಸಾಹುಕಾರ ಕೂಲಿಯನ್ನು ಕೊಡದೆ ಹಾಗೆ ಹೀಗೆ ಎಂದು ತಂಟೆ ತೆಗೆದು ತನ್ನ ಶ್ರೀಮಂತಿಕೆಯ ದರ್ಪದಿಂದ ಅವರನ್ನು ಗದುರಿಸಿ ಬಿಡುತ್ತಾನೆ. ನಿಸ್ಸಹಾಯಕರಾದ ಆ ಬಡ ಕೂಲಿ ಕಾರ್ಮಿಕರು ತಮಗಾದ ಅನ್ಯಾಯವನ್ನು ಸರಿಪಡಿಸಿಕೊಡಬೇಕೆಂದು ಶರಣ ಖಾಜಾ ಅಮೀನುದ್ದೀನ ಆಲಾರವರಲ್ಲಿ ಬಂದು ಕಣ್ಣೀರಿಡುತ್ತಾರೆ. ಆಗ ಶರಣರು ಪಾಪ ಸಿದ್ದಪ್ಪನು ಹಾಗೆ ಮಾಡಬಾರದಿತ್ತು ಇರಲಿ ಆತನಿಗೆ ಬುದ್ಧಿ ಬಂದು ನಿಮ್ಮ ಕೂಲಿ ಕೊಟ್ಟೆ ಕೊಡುತ್ತಾನೆ. ಅಂದಹಾಗೆ ನೀವು ಸಿದ್ದಪ್ಪನ ಕರಾರಿನ ಪ್ರಕಾರ ಎಷ್ಟು ಅಡಿ ತೆಗೆಯ ಬೇಕೊ ತೆಗೆದು ಬಿಟ್ಟಿದ್ದೀರಿ ಆದರೆ ನಿಮ್ಮ ಕರ್ತವ್ಯ ಮುಗಿಯುವ ಸ್ಥಳಕ್ಕೆನೆ ಬಂದು

ಬಂಡೆಗಲ್ಲು ಭಾವಿ ತುಂಬಾ ಹಾಸಿಕೊಂಡಿದೆಯಲ್ಲವೇ, ಹೌದು ಬುದ್ಧಿ ಬಂದಿದೆ ಬೂದಿಯನ್ನು ಮಂತ್ರಿಸಿ ಕೊಡುತ್ತೇನೆ, ಅದನ್ನು ಬಂಡೆಗೆ ಸವರಿ ಒಡೆಯಿರಿ ಗಂಗಾ ಮಾತೆ ಚಿಮ್ಮಿ ಬರುತ್ತಾಳೆಂದು ಬೂದಿಯನ್ನು ತೆಗೆದುಕೊಂಡು "ಅಲ್ ಮದದ ಯಾ ನಬಿ" ಎಂದು ಪ್ರಾರ್ಥಿಸಿ ಕೊಡುತ್ತಾರೆ.[೩೧] ಆಗ ಎಲ್ಲ ಕಾರ್ಮಿಕರು ಆಗಲಿ ಬುದ್ಧಿ ಎಂದು ಹೇಳಿ ಹೊರಟು ಹೋಗುತ್ತಾರೆ. ಈ ಕಾರ್ಮಿಕರು ಶರಣರ ಹತ್ತಿರ ಬಂದ ಸುದ್ದಿ ಆ ಸಿದ್ದಪ್ಪನಿಗೆ ತಿಳಿಯುತ್ತದೆ. ಕಾರ್ಮಿಕರು ಹೋಗಿ ಶರಣರು ಹೇಳಿದಂತೆ ಆ ಬಂಡೆಯನ್ನು ಶಿಲುತ್ತಾರೆ. ತಕ್ಷಣವೇ ಭೂಮಿಯಿಂದ ನೀರು ಪುಟಿದು ಬರುತ್ತದೆ. ಆಗ ಎಲ್ಲ ಕಾರ್ಮಿಕರು "ಕಹಾಂತಕ್ ಜಮೀನ ವಹಾಂ ತಕ ಆಮೀನ್" ಎಂದು ಜೈಕಾರ ಹಾಕುತ್ತಾರೆ. ಇದನ್ನೆಲ್ಲಾ ಬಾವಿ ದಂಡೆಯ ಮೇಲೆ ನಿಂತು ನೋಡುತ್ತಿದ್ದ ಸಿದ್ದಪ್ಪನಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ಶರಣ ಖಾಜಾ ಅಮೀನುದ್ದೀನರಲ್ಲಿ ಕ್ಷಮೆ ಕೇಳಿ ಕೂಲಿಕಾರ್ಮಿಕರ ಕೂಲಿಗಿಂತಲೂ ಹೆಚ್ಚಿಗೆ ಹಣ ಕೊಟ್ಟು ಕಳಿಸುತ್ತಾರೆ. ಆಗ ಬಂದ ಆ ನೀರನ್ನು ಮೊಟ್ಟ ಮೊದಲನೆಯದಾಗಿ ಲೋಟದಲ್ಲಿ ತುಂಬಿಕೊಂಡು ಗುರುಗಳಲ್ಲಿ ಹೋಗಿ ತೋರಿಸುತ್ತಾನೆ. ಅದೇ ನೀರು ತೆಗೆದುಕೊಂಡು ಶರಣರು ಸಿದ್ದಪ್ಪ ಯಾವಾಗಲೂ ಸತ್ಯವನ್ನು ಬಿಡಬಾರದು, ಇರಲಿ ಆದೇವರು ನಿನ್ನನ್ನು ಕ್ಷಮಿಸಲಿ ಎಂದು ಆ ಸಿದ್ದಪ್ಪ ತಂದ ನೀರಿನಿಂದಲೇ ದೀಪ ಬೆಳಗಿಸಿದರೆಂದು ಇಜೇರಿಯ ಸುತ್ತ ಮುತ್ತಲು ಜನ ಈಗಲೂ ಕೂಡಾ ಹೇಳುತ್ತಾರೆ.

ಜೇವರ್ಗಿ ತಾಲೂಕಿನ ಮುದವಾಳ ಗ್ರಾಮದ ಹುಸೇನ ಮಾಲಿಪಾಟೀಲರಿಗೆ ೫೦ ವರುಷ ವಯಸ್ಸಾದರೂ ಮಕ್ಕಳಾಗಿಲ್ಲವೆಂಬ ಕೊರಗಿನಿಂದ ಚಿಂತಿಸುತ್ತಿದ್ದರು. ವೈದ್ಯರ ಸಲಹೆ ದೇವರು ದಿಂಡರು ಭವಿಶ್ಯಾವಾದಿಗಳು ಮುಂತಾದ ಎಲ್ಲ ಕಡೆ ಹೋಗಿ ಕೇಳಿ ಮಾಡಿ ಮುಗಿಸಿದ್ದನು. ಕೊನೆಗೆ ಶರಣ ಖಾಜಾ ಅಮೀನುದ್ದೀನರ ಬಳಿಗೆ ಬಂದು ಗುರುಗಳೆ ನನ್ನ ವಂಶ ಬೆಳಗಲು ಹೆಣ್ಣಾಗಲಿ, ಗಂಡಾಗಲಿ ಒಂದು ಮಗುವನ್ನು ದಯ ಪಾಲಿಸಲಿಲ್ಲಾ ಆ ದೇವರು ಅದಕ್ಕಾಗಿ ತಮ್ಮ ಆಶೀರ್ವಾದ ಪಡೆಯಲು ಬಂದಿರುವೆ ಆಗ ಶರಣರು ಚಿಂತಿಸಬೇಡಿರಿಪಟೇಲರೆ "ಅಲ್ ಮದದ ಯಾ ನಬಿ" ಎಂದು ಅವರಿಗೆ ಆಶೀರ್ವದಿಸಿ ಕಳಿಸಿದರು.[೩೨] ವರ್ಷ ತುಂಬುವುದರಲ್ಲಿ ಅವರ ಧರ್ಮ ಪತ್ನಿ ಗರ್ಭವತಿಯಾಗಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ವಂಶವೃಕ್ಷ ಬೆಳೆಯಲು ಆಶೀರ್ವದಿಸಿದ ಶರಣರನ್ನು ಕಂಡು ಅವರು ಕೇಳಿದ ಗುರುಕಾಣಿಕೆ ಅರ್ಪಿಸಿಬರಬೇಕೆಂದು ಮಡದಿ, ಮಗು, ಬಂಧು, ಬಾಂಧವರನ್ನು ಕರೆದುಕೊಂಡು ಕೊಲ್ಲಾರಿ ಬಂಡಿ ಕಟ್ಟಿಕೊಂಡು ವಿಜೃಂಭಣೆಯಿಂದ ಹೊರಟು ಇಜೇರಿಗೆ ಬಂದು ಗುರುಗಳೇ ಇದೋನೀವು ಕೊಟ್ಟ ಪ್ರಸಾದವೆಂದು ಮಗುವನ್ನು ಅವರ ಮುಂದೆ ಹಾಕಿ ಎಲ್ಲರೂ ಭಕ್ತಿಯಿಂದ ಕೈ ಮುಗಿದು ನಿಲ್ಲುತ್ತಾರೆ. ಆಗ ಗುರುಗಳು ಮಗುವಿನ ಮೈ ಮೇಲೆ ಕೈಯಾಡಿಸಿ ಪಾಟೀಲರೆ ಈ ನಿಮ್ಮ ಮಗನು ಮಹಾ ಬುದ್ಧಿವಂತನಾಗಿ ನಿಮ್ಮ ಮನೆತನದ ಕೀರ್ತಿಯನ್ನು ತರುತ್ತಾನೆಂದು ಹೇಳುತ್ತಾರೆ. ಆಗ ಮಾಲಿಗೌಡನು ಶರಣರಿಗೆ ವಂದಿಸಿ ತನ್ನ ಸ್ವಗ್ರಾಮ ಮುದವಾಳದಲ್ಲಿ ಶರಣರ ಹೆಸರಿಗೆ ೧೨ ಎಕರೆ ಜಮೀನನ್ನು ಭಕ್ತಿ ಕಾಣಿಕೆ ಯಾಗಿಡುತ್ತಾನೆ. ಈಗಲು ಕೂಡಾ ಮುದವಾಳದಲ್ಲಿ ಇಜೇರಿ ಶರಣರ ಹೆಸರಿನಿಂದ ೧೨ ಎಕರೆ ಜಮೀನಿದೆ ಅವರ ವಂಶಜರೂ ಈಗಲೂ ಅದನ್ನು ಅನುಭವಿಸುತ್ತಾರೆ.[೩೩]

➢ **ಬ್ರಿಟಿಷ ಅಧಿಕಾರಿಯ ಆಗಮನ:-**

ದರ್ಗಾ ಕಟ್ಟುವ ಕೆಲಸ ಭರದಿಂದ ನಡೆದಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿದ್ದ ನಮ್ಮ ದೇಶ ಅವರ ದಬ್ಬಾಳಿಕೆ ನಲುಗಿ ಹೋಗಿತ್ತು. ಗುಲ್ಬರ್ಗಾ ದಿಂದ ಸುಬೇದಾರನೆಂಬ ಬ್ರಿಟಿಷ ಅಧಿಕಾರಿ ಕುದುರೆ ಹತ್ತಿ ಇಜೇರಿ ಗ್ರಾಮಕ್ಕೆ ಭರದಿಂದ ಬರುತ್ತಾನೆ. ಊರಹೊರಾಂಗಣಕ್ಕೆ ಬಂದು ಕುದುರೆಯ ಮೇಲೆಯೆ ಕುಳಿತು ಇಲ್ಲಾರೋ ದರ್ಗಾ ಕಟ್ಟಿಸುತ್ತಾರಂತಲ್ಲ ಯಾರವರು ಕಂಪನಿ

ಸರಕಾರದ ಪರವಾನಿಗೆ ಪಡೆಯದೆ ದರ್ಗಾ, ಗುಡಿಗಳನ್ನು ಕಟ್ಟುವುದು ಮಹಾಪರಾಧವಾಗುತ್ತದೆ ಎಂದು ಗದರಿಸುತ್ತಾ ದರ್ಗಾ ನಿರ್ಮಾಣ ಮಾಡುವ ಸ್ಥಳಕ್ಕೆ ಬರುತ್ತಾನೆ. ಆಗ ಅಲ್ಲಿದ್ದ ಶರಣ ಖಾಜಾ ಅಮೀನುದ್ದೀನರನ್ನು ಕಂಡು ಏನು ಇಂತಹ ಬೃಹತ್ ಕಟ್ಟಡ ಕಟ್ಟಲು ಪ್ರಾರಂಭಿಸಿದವನು ನೀವೆನಾ ಪರವಾನಗಿ ಯಾರು ಕೊಟ್ಟರು ಎಂದು ಗದುರಿಸಿ ಮಾತನಾಡುತ್ತಾನೆ. ಆಗ ಶರಣ ಖಾಜಾ ಅಮೀನುದ್ದೀರು ಮುಗುಳ್ನಗೆಯಿಂದ ಆ ವಿಶ್ವದೊಡೆಯ ಅಲ್ಲಾಹನ ಪ್ರೇರಣೆಯಾಗಿದೆ ಸರ್ಕಾರ್ ಎಂದು ವಿನಯದಿಂದ ಹೇಳುತ್ತಾರೆ. ಅಹಂಕಾರದಿಂದ ವರ್ತಿಸಿದ ಅಧಿಕಾರಿ ಸಾಧ್ಯವಿಲ್ಲಾ ಈ ಕಟ್ಟಡದ ಕೆಲಸ ಮುಂದುವರಿದರೆ ಕಂಪನಿ ಸರಕಾರ ಸಹಿಸುವುದಿಲ್ಲ ಕಟ್ಟಡದ ಕೆಲಸ ನಿಲ್ಲಿಸಿರಿ ಎಂದು ಎಚ್ಚರಿಕೆ ಕೊಟ್ಟು ಕುದುರೆ ಹತ್ತಿ ಭರಭರನೆ ಹೊರಟು ಬಿಡುತ್ತಾನೆ. ಅಧಿಕಾರಿಯ ಕುದುರೆ ಇಜೇರಿಯನ್ನು ದಾಟಿ ಬಂದು ಕೂಗಳತೆ ಹೋಗಿದ್ದಿಲ್ಲಾ (ಈಗಿನ ಒಂದು ಕಿ.ಮೀ) ಕುದುರೆಯ ನಾಲ್ಕು ಕಾಲಿನ ಶಕ್ತಿಯುಡಿಗೆ ಮುನ್ನಡೆಯದೆ ಮುಗ್ಗರಿಸಿ ಕುಳಿತು ಬಿಟ್ಟಿತು.[೩೪] ಕುದುರೆಯಿಳಿದ ಅಧಿಕಾರಿಯ ಕಣ್ಣಿನ ದೃಷ್ಠಿ ಉಡುಗಿ ಕಣ್ಣೆ ಕಾಣದಾದವು. ಹೌಹಾರಿದ ಅಧಿಕಾರಿಯ ಕಷ್ಟವರಿತ ಆಸು ಪಾಸಿನ ಒಕ್ಕಲಿಗರು ಬಂದು ನಡೆದ ಸಂಗತಿಯನ್ನು ತಿಳಿದುಕೊಂಡು ಅಧಿಕಾರಿಗೆ ಸಾಹೇಬರೆ ನೀವು ತಪ್ಪು ಮಾಡಿದ್ದೀರಿ ಶರಣ ಖಾಜಾ ಅಮೀನುದ್ದೀನರು ಸಾಮಾನ್ಯರಲ್ಲಾ ಹೋಗಿ ಆ ಮಹಿಮಾ ಪುರುಷನಿಗೆ ಶರಣಾಗಿ ಕ್ಷಮೆ ಕೇಳಿರಿ ಎಂದು ಹೇಳಿ ಕೆಲವರು ದರ್ಗಾದ ಬಳಿಗೆ ಅಧಿಕಾರಿಯನ್ನು ಕರೆದೊಯ್ಯುತ್ತಾರೆ. ಆಗ ಶರಣರನ್ನು ಕುರಿತು ಬ್ರಿಟಿಷ ಅಧಿಕಾರಿ ಸಾಷ್ಟಾಂಗವೆರಗಿ ಗುರುಗಳೆ ನಾನು ಮಹಾ ಅಪರಾಧ ಮಾಡಿದೆ ನಾನಾಡಿದ ಮಾತನ್ನು ಮನ್ನಿಸಿ ನನ್ನ ಕ್ಷಮೆ ಮಾಡಿ ನನ್ನೊಡೆಯಾ ನನಗೆ ದೃಷ್ಠಿ ಕೊಡಿ ತಂದೆ ಎಂದು ಅಂಗಲಾಚುತ್ತಾನೆ. ಆಗ ಕರುಣಾ ಸಾಗರದಂತಿದ್ದ ಶರಣರು ಇರಲಿರಲಿ ಏಳಿರಿ ಸರಕಾರದ ಅಧಿಕಾರಿಗಳೇ ಆ ಈಶ್ವರನು ನಿಮ್ಮನ್ನು ಕ್ಷಮಿಸಲಿ ಎನ್ನುತ್ತಾ "ಅಲ್ ಮದದ ಯಾ ನಬಿ" ಎಂದು ಅಧಿಕಾರಿಯ ಕಣ್ಣಿನ ಮೇಲೆ ಕೈಯ್ಯಾಡಿಸುತ್ತಾರೆ. ತಕ್ಷಣವೇ ಕಣ್ಣಿನ ಛಾಯೆ ಬಂದು ಮೊದಲಿನಂತಾಗುತ್ತಾನೆ ನಡುದಾರಿಯಲ್ಲಿಯೇ ಮಲಗಿದ ಕುದುರೆಯು ದರಗಾದ ಹತ್ತಿರ ಬರುತ್ತದೆ ಮಂತ್ರಮುಗ್ದನಾದ ಅಧಿಕಾರಿ ದರಗಾದ ಮೇಲೆ ಹೊದಿಸುವ ಭಾರಿ ಬೆಲೆ ಬಾಳುವ ಕುತನಿಅರಿವೆಯನ್ನು ಹೊಲಿಸಿ ಕೊಟ್ಟಿದ್ದನೆಂದು ಜನ ಈಗಲೂ ಮಾತಾಡುತ್ತಾರೆ. ಅವನು ಗುಲ್ಬರ್ಗಾದಲ್ಲಿರುವ ತನಕ ಪ್ರತಿ ವರ್ಷ ಇಜೇರಿಗೆ ಶರಣರ ದರ್ಶನಕ್ಕೆ ಬರುತ್ತಿದ್ದನಂತೆ.[೩೫]

ಶರಣ ಅಮೀನುದ್ದೀನರ ದಾಂಪತ್ಯ ಜೀವನ ಮಾನವ ಜನಾಂಗಕ್ಕೆ ಒಂದು ಮಾದರಿಯಾಗಿತ್ತಂತೆ. ಅದನ್ನು ಮೆಲಕು ಹಾಕಿದಾಗ ಅಣ್ಣ ಬಸವಣ್ಣನವರ ಮಾತೊಂದು ನೆನಪಿಗೆ ಬರುತ್ತದೆ. ಸತಿಪತಿಗಳೊಂದಾದ ಭಕ್ತಿ ಹಿತ ಮಪ್ಪದು ಶಿವಂಗೆ ಎಂಬಂತೆ ಶರಣರ ಪತ್ನಿ ಬಾನೂಬಿಯವರೊಂದಿಗಿನ ಜೀವನ ಹಾಲು ಸಕ್ಕರೆಯಂತೆ ಸಮರಸವಾಗಿತ್ತು. ಶರಣರ ಮನದಂಗಿತವನ್ನರಿತ ಬಾನೂಬಿಯವರು ಅವರ ಬೇಕು ಬೇಡಗಳನ್ನು ಅವರು ಹೇಳುವ ಪೂರ್ವದಲ್ಲಿಯೇ ಸಿದ್ಧಗೊಳಿಸಿಡುತ್ತೆದ್ದರು. ಶರಣರ ಪತ್ನಿ ಮನೆಗೆ ಶರಣರನ್ನು ಕಾಣಲು ಯಾರೆ ಬರಲಿ ಆದರದಿಂದ ಬರಮಾಡಿಕೊಂಡು ಪ್ರೀತಿಯಿಂದ ಮಾತಾಡುತ್ತಿದ್ದರಲ್ಲದೆ ಬಂದವರಿಗೆಲ್ಲಾ ಊಟ ಮಾಡಿಕಳಿಸುತ್ತಿದ್ದರು.ಶರಣರ ಪತ್ನಿಯವರು ಊಟಕ್ಕೆ ಕರೆದರೆ ಒಲ್ಲೆ ಯೆನ್ನದೆ ಪ್ರಸಾದವೆಂದು ಭಕ್ತಿಯಿಂದ ಜನ ಸ್ವೀಕರಿಸುತ್ತಿದ್ದರು.

ಒಂದು ದಿನ ಖಾಜಾ ಅಮಿನುದ್ದೀನ ಆಲಾಸಾಲಿಸ್ ರವರು ತಮ್ಮ ಶಿಷ್ಯರೊಂದಿಗೆ ಧಾರ್ಮಿಕ ಗೋಷ್ಠಿ ನಡೆಸುತ್ತಿರುವಾಗ ತಮ್ಮ ಪತ್ನಿ ಬಾನೂಬಿಯವರ ಬಗ್ಗೆ ಹೇಳುತ್ತಾ ನನ್ನ ಶಿಷ್ಯ ಬಾಂಧವರೆ ನನ್ನ ನಂತರ ನನ್ನ ಪತ್ನಿಯ ಅಂತ್ಯವಾಗುತ್ತದೆ ಎಂದಾಗ ಭಕ್ತರೆಲ್ಲಾ ಗಾಬರಿಯಿಂದ ಶರಣರೆ ಹೀಗೇಕೆ ಹೇಳುತ್ತೀರಿ ಎಂದು ಪ್ರಶ್ನಿಸುತ್ತಾರೆ. ಹೌದಪ್ಪ ಆ ಅಲ್ಲಾಹನು ಮೊದಲು ನನ್ನನ್ನು ಕರೆಯುತ್ತಾನೆ. ನಂತರ ಬಾನೂಬಿಯನ್ನು ಕರೆಯುತ್ತಾನೆ. ಅದಕ್ಕಾಗಿ ನನ್ನ ಪತ್ನಿಯ ದಫನ ಕಾರ್ಯವನ್ನು ನನ್ನ ದರಗಾದ

ಹೊರಗಡೆ ೨೦೦ ಫರಾಟ ಅಂತರದಲ್ಲಿ ಮಾಡಬೇಕು ಎನ್ನುತ್ತಾರೆ. ಆಗ ಭಕ್ತಾದಿಗಳು ಗುರುಗಳೇ ಹಾಗೇಕೆನ್ನುವಿರಿ ನಿಮ್ಮನ್ನೂ ಮಾತೆಯವರನ್ನು ಒಂದೆ ಕಡೆಗೆ ನೋಡುವ ಭಾಗ್ಯ ನಮ್ಮದಾಗಲಿ ನಿಮ್ಮಿಬ್ಬರನ್ನು ಒಂದೆ ಸ್ಥಳದಲ್ಲಿ ಕಂಡರೆ ನಮಗೆ ಎಲ್ಲಿಲ್ಲದ ಸಂತೋಷವಾಗುತ್ತದೆ. ಎಂದು ಎಲ್ಲರೂ ಒಕ್ಕೊರಲಿನಿಂದ ಹೇಳಿದಾಗ ಶರಣರು ಒಂದು ನಿಮಿಷ ಯೋಚಿಸಿ ನಿಮ್ಮಿಷ್ಟ ಎಂದರು. ಅದಕ್ಕಾಗಿಯೇ ಭಕ್ತರು ಖಾಜಾ ಅಮೀನುದ್ದೀನ ಸಾಲಿಸವರ ಖಬರನ(ಗೋರಿ) ಪಕ್ಕದಲ್ಲಿಯೇ ಅವರ ಪತ್ನಿ ಬಾನೂಬಿಯವರನ್ನು ದಫನಾಯಿಸಿದ್ದಾರೆ. ಸತಿಪತಿಗಳು ಒಂದೇ ದರಗಾದಲ್ಲಿ ದಫನಾಯಿಸಿದ್ದು ಎಲ್ಲಿಯೂ ಕಾಣಸಿಗುವುದಿಲ್ಲ ಜೇವರಗಿ ತಾಲೂಕಿನ ಇಜೇರಿಯಲ್ಲಿದ್ದದ್ದು ಒಂದು ವಿಶಿಷ್ಟವಾಗಿದೆ.[೩೬]

ಇಜೇರಿಯ ಮೀರಾ ಪಟೇಲ ಕಾಲೆ ಗೌಡ್ರ ಎನ್ನುವವರು ಶರಣ ಖಾಜಾ ಅಮೀನುದ್ದೀನ ಆಲಾರವರ ಶಿಷ್ಯರಲ್ಲೊಬ್ಬರು. ಗುರು ಆಜ್ಞೆ,ಸೇವೆಯನ್ನು ತಪ್ಪದೆ ಭಕ್ತಿಯಿಂದ ಮಾಡುತ್ತಿದ್ದರು. ದರ್ಗಾ ಕಟ್ಟಡ ಪೂರ್ಣಗೊಂಡ ಸಮಯ ಖಾಜಾ ಅಮೀನುದ್ದೀನ ಆಲಾರವರು ದರಗಾದ ವರಾಂಡದಲ್ಲಿ ಒಂದುಚಿಕ್ಕ ಕಟ್ಟೆ ನಿರ್ಮಿಸಿ ಕೊಂಡಿದ್ದರು. ಅದರ ಮೇಲೆ ಕುಳಿತುಕೊಂಡು ಭಕ್ತರಿಗೆ ಉಪದೇಶ ಧರ್ಮದ ಆದೇಶ ನೀಡುತ್ತಿದ್ದರು. (ಈಗ ಆ ಕಟ್ಟೆಗೆ ಪವಾಡ ಕಟ್ಟೆ ಎಂದು ಕರೆಯುತ್ತಾರೆ. ಈಗಲೂ ಆ ಕಟ್ಟೆಯನ್ನು ಗೌರವಿಸುತ್ತಾರೆ.) ಒಂದೊಂದು ದಿನ ಭಕ್ತರೊಡನೆ ಚರ್ಚಿಸುತ್ತಾ ಕುಳಿತರೆ ಹೊತ್ತು ಹೋದದ್ದೇ ಗೊತ್ತಾಗುತ್ತಿದ್ದಿಲ್ಲ ಕತ್ತಲಾದರೆ ಅಲ್ಲಿ ಮೀರಾ ಪಟೇಲ ಕಾಲೆ ಗೌಡ್ರು ದೀವಟಿಗೆ ಹಚ್ಚಿಕೊಂಡು ಬೆಳಕು ಮಾಡುತ್ತಿದ್ದರು. ದೀವಟಿಗೆ ಹಿಡಿದುಕೊಂಡುಕೂಡುವುದು ಸೇವೆಯೆಂದು ಭಾವಿಸಿ ಸತತವಾಗಿ ದೀವಟಿಗೆ ಹಿಡಿಯುವ ಸೇವೆ ಇವರದಾಗಿತ್ತು. ಈಗಿನಂತೆ ಕರೆಂಟಿನ ಸೌಕರ್ಯ ಬ್ಯಾಟರಿಗಳ ಬೆಳಕು ಆಗಿನ್ನೂ ಇದ್ದಿಲ್ಲಾ. ಈ ದೀವಟಿಗಳೇ ಆಗಿನ ಕಾಲದ ಲೈಟ್‌ಗಳಾಗಿದ್ದವು ಎನ್ನಬಹುದು.

ಒಂದು ದಿನ ಸಂಜೆಯವೇಳೆ ಕಟ್ಟೆಯ ಮೇಲೆ ''ಅಲ್ ಮದದ''ಎಂದು ಹತ್ತಿ ಶರಣರು ಕುಳಿತುಕೊಂಡು ಅವರ ಶಿಷ್ಯ ಬಳಗದ ಅನು ತನುಗಳನ್ನು ಹೇಳುತ್ತಿದ್ದರು.[೩೭] ಕೈಯಲ್ಲಿ ದೀವಟಿಗೆ ಹಿಡಿದು ಕುಳಿತ ಮೀರಾ ಪಟೇಲ ಕಾಲೆ ಗೌಡ್ರು ಕೂಡಾ ತದೇಕ ದೃಷ್ಟಿಯಿಂದ ಗುರುಗಳನ್ನು ನೋಡುತ್ತ ಆಲಿಸ ಹತ್ತಿದನು. ಸ್ವಲ್ಪ ಸಮಯದ ನಂತರ ಮೀರಾ ಪಟೇಲ ಶರಣರೆ ಎಷ್ಟೋ ದಿನಗಳಿಂದ ನಾನು ಈ ದೀವಟಿಗೆಯ ಸೇವೆ ಮಾಡುತ್ತಾ ಬಂದಿದ್ದೇನೆ ಆದರೆ ನನ್ನ ವಂಶದ ದೀಪ ಹಚ್ಚಲು ಗಂಡು ಮಗನು ಜನಿಸಿಲ್ಲಾ ಇದೇ ರೀತಿ ನಾನು ಗಂಡು ಮಗು ಜನಿಸಿಲ್ಲವೆಂದು ಚಿಂತಿಸಬೇಕೋ ಅಥವಾ ನೀವು ಆ ಈಶ್ವರ ಪ್ರಭು ಅಲ್ಲಾಹನಲ್ಲಿ ಪ್ರಾರ್ಥಿಸಿ ನನಗೆ ಗಂಡು ಸಂತಾನಕೊಡೆಂದು ಬೇಡುತ್ತಿರೋ ಎಂದು ಕೇಳಿದಾಗ ಖಾಜಾ ಅಮೀನುದ್ದೀನ ಶರಣರು ಮೀರಾ ಪಟೇಲರೆ ನಿಮ್ಮ ಈ ಪ್ರಶ್ನೆ ಎಂದು ನಿಮ್ಮ ಬಾಯಿಂದ ಬರುತ್ತದೆ ಎಂದು ಸಮಯ ಕಾಯುತ್ತಿದ್ದೆ ಚಿಂತಿಸಬೇಡ ನಿನ್ನ ಕೈಯಲ್ಲಿ ದೀವಟಿಗೆ ಹಿಡಿದು ನಮಗೆಲ್ಲಾ ಬೆಳಕು ಕೊಡುವೆಯಲ್ಲಾ ಅದೇ ದೀವಟಿಗೆಯನ್ನು ದರಗಾದ ಬಾವಿಯ ಪಕ್ಕದಲ್ಲಿ ನೆಟ್ಟುಬಿಡು. ಅದಕ್ಕೆ ಆ ದರಗಾದ ಬಾವಿಯ ನೀರನ್ನು ಪ್ರತಿ ದಿನ ಹಾಕುತ್ತ ಹೋಗು ಆ ಕಟ್ಟಿಗೆ ಎಂದು ಚಿಗಿಯುತ್ತದೆಯೋ ಅಂದೆ ನಿನಗೆ ಗಂಡು ಸಂತಾನದ ಫಲವಾಗಿ ನಿನ್ನ ವಂಶ ದೀಪದ ಬೆಳಕು ನಿನ್ನ ಸಂಸಾರವನ್ನು ಸಮೃದ್ಧಿ ಗೊಳಿಸುತ್ತದೆ. ಎಂದು ಹೇಳಿದರು ಶರಣರು ಹೇಳಿದಂತೆ ದೀವಟಗಿಯ ಕಟ್ಟಿಗೆಯನ್ನು ದರಗಾದ ಬಾವಿಯ ಪಕ್ಕದಲ್ಲಿ ನಿರ್ಮಿಸಿ ಪಟೇಲರವರು ನೆಟ್ಟು ಅದಕ್ಕೆ ನೀರುಣಿಸಲು ಪ್ರಾರಂಭಿಸಿದರು. ಒಂದು ವರುಷ ಗತಿಸಿರಲಿಲ್ಲಾ ಮೀರಾ ಪಟೇಲರ ಮಡದಿ ಗರ್ಭಿಣಿಯಾಗಿ ದಿನ ತುಂಬಿದ ಶುಭ ದಿನಗಳಲ್ಲಿ ಗಂಡು ಮಗುವಿಗೆ ಜನ್ಮ ನೀಡಿದಳು.

ಇದೇ ಪ್ರಕಾರವಾಗಿ ಅನೇಕ ಜನರಿಗೆ ಪುತ್ರ ಸಂತಾನದ ಭಾಗ್ಯ ಕರುಣಿಸಿ ಅವರಿಗೆ ಅಂಟಿಕೊಂಡ ಅಪುತ್ರಶಃ ಗತಿರ್ ನಾಸ್ತಿಯೆಂಬ ಅಪವಾದದಿಂದ ದೂರ ಮಾಡಿದ್ದರೆ ಅನೇಕ ಜನರಿಗೆ ಅಂಟಿಕೊಂಡ ಮಾಟ ಮಂತ್ರ ಕಾಡಾಟ ರೋಗ ರುಜಿನಗಳನ್ನು ಪರಿಹರಿಸಿದ್ದಾರೆ. ಖಾಜಾ ಅಮೀನುದ್ದೀನರು ಯಾವುದೇ ಕೆಲಸ ಮಾಡಿದರೂ ಅದು ನನ್ನಿಂದಲ್ಲಾ ಆ ವಿಶ್ವ ಪ್ರಭು ಈಶ್ವರ ಅಲ್ಲಾಹನೆ ಪರಿಹರಿಸಿದ್ದಾನೆ. ಅವನ ಪ್ರಾರ್ಥನೆಯನ್ನು ತಪ್ಪದೇ ಮಾಡಿರೆಂದು ಹೇಳುತ್ತಿದ್ದರು.[೩೮]

➢ **ಖಾಜಾ ಅಮೀನುದೀನರ ನಿಧನ:-**

ಒಂದು ದಿನ ಶರಣ ಖಾಜಾ ಅಮೀನರು ಶಿಷ್ಯರೊಂದಿಗೆ ಅನುಭವಾಮೃತ ಸವಿಯುತ್ತಾ ಅಲೌಕಿಕ ವಿಷಯಗಳನ್ನು ಚರ್ಚಿಸುತ್ತಾ ಕುಳಿತಾಗ ಭಕ್ತಾದಿ ಶರಣರೆ ಇವತ್ತು ಅಮವಾಸೆಯಲ್ಲಾ ನಾಳೆ ಚಂದ್ರ ದರ್ಶನ ಆಗ್ತದ ಹದಿನೈದು ದಿವಸ ಚಂದ್ರ ಬೆಳಕು ಕೊಟ್ಟು ಮುಣಿಗಿ ಬಿಡತಾನ ಆವತ್ತ ಈ ದರಗಾದ ಪರಿಸರ ದೊಳಗಸಹಿತ ಚಂದ್ರ ಮುಳುಗಿ ಕತ್ತಲಾಗತ್ತಲ್ಲ ? ಎಂದು ಶರಣರು ಹೇಳಿದಾಗ ದೀವಟಗಿ ಸೇವೆ ಮಾಡುತ್ತಿದ್ದ ಮೀರಾಪಟೇಲ ಗುರುಗಳೇ ಎಂದೂ ಇಲ್ಲದೇ ಇಂದೇಕೆ ತಮ್ಮ ವಾಣಿಯಿಂದ ಈ ಅಶುಭ ನುಡಿ ನನಗೆ ಭಯವಾಗುತ್ತಿದೆಯೆಂದನು. ಸೇರಿದ ಭಕ್ತರೆಲ್ಲಾ ಹೌದು ಗುರುವರ್ಯರೇ ತಮ್ಮ ವಾಣಿಯಿಂದ ಹೊರಟ ಯಾವ ಮಾತು ಸುಳ್ಳಾಗಿಲ್ಲಾ ಹಾಗೆ ನುಡಿಯದಿರಿ ನನ್ನಪ್ಪ ನಮಗೆ ಸಹಿಸುವ ಶಕ್ತಿಯಿಲ್ಲಾ ಎನ್ನುತ್ತಾರೆ. ಅವರ ಧರ್ಮಪತ್ನಿಯವರಾದ ಬಾನೂಬಿ ಯವರಿಗಂತಲೂ ಭೂಮಿಗದ್ದರಿಸಿದಂತೆ ಆಕಾಶ ಕಳಚಿ ಬಿದ್ದಂತಾಗಿ ಸಪ್ತಸಮುದ್ರಗಳೇ ಉಕ್ಕಿ ಅವರನ್ನು ಕೊಚ್ಚಿ ಕೊಂಡುಹೊದಂತಾಗಿ ಬಿಡುತ್ತದೆ ಎಲ್ಲರೂ ದುಃಖಿತರಾಗಿ ಕಣ್ಣೀರೂ ಸುರಿಸುವುದನ್ನು ಕಂಡ ಶರಣ ಖಾಜಾ ಅಮೀನರು ಎಷ್ಟು ದಡ್ಡರುಇದ್ದೀರಪಾ ನೀವು ಚಂದ್ರ ಹುಟ್ಟಿದ ಮುಣಿಗಾಕ ಅಲ್ಲೇನ ಚಂದ್ರಗ ದೇವರು ಕೆಲಸಾ ಕೊಟ್ಟಾನಾ ಎಂದಾಗ ಮೀರಾ ಪಟೇಲ ಖಾಜಾ ನನ್ನನ್ನು ಬಿಟ್ಟು ಅಗಲಬೇಡಾ ನೀನು ಹೋಗುವುದಾದರೆ ನನ್ನನ್ನು ಜತೆಗೆ ಕರೆದುಕೊಂಡು ಹೋಗು ಎನ್ನುತ್ತಾ ಗೋಳೊ ಎನ್ನುತ್ತಾನೆ. ಮಡದಿ ಬಾನೂಬಿಯವರಂತೂ ದಿಗ್‌ಭ್ರಮೆಗೊಂಡು ಮೌನಿಯಾಗಿ ಮುದುಡಿಕುಳಿತು ಬಿಟ್ಟಿರುತ್ತಾರೆ.[೩೯]

ಶರಣ ಖಾಜಾ ಅಮೀನುದ್ದೀನರು ಕಾಯಿಲೆ ಬಿದ್ದ ಸುದ್ದಿ ಕಾಡ್ಗಿಚ್ಚಿನಂತೆ ಸಗರ ನಾಡಿನ ತುಂಬಾ ಹಬ್ಬಿ ಬಿಡುತ್ತದೆ. ಜನ ತಂಡೋಪ ತಂಡವಾಗಿ ಇಜೇರಿ ಕಡೆಗೆ ಧಾವಿಸಿ ಬಂದು ಶರಣರ ದರುಶನಪಡೆದು ರೋಧಿಸುತ್ತಾರೆ. ಕೇವಲ ಮೂರೇ ದಿನದಲ್ಲಿ ಅವರ ಕಾಯ ಕೃಷವಾಗಿ ಅವರ ವಾಣಿಯಿಂದ ''ಕಹಾಂ ತಕ್ ಜಮೀನ್ ವಹಾಂ ತಕ್ ಅಮೀನ'' ಎಂಬ ಶಬ್ದವು ಸತತವಾಗಿ ಪ್ರತಿಧ್ವನಿಸುತ್ತಿರುತ್ತದೆ. ಕಹಾಂತಕ್ ಜಮೀನ್ ವಹಾಂ ತಕ್ ಅಮೀನ್ ಅಂದರೆಎಲ್ಲಿಯವರೆಗೆ ಭೂಮಿ ಇದೆಯೋ ಅಲ್ಲಿಯ ವರೆಗೆ ಸತ್ಯ ಬೆಳಗಲಿ ಎಂಬ ಅವರ ವಿಶ್ವಪ್ರೇಮವು ಅಜರಾಮರವಾಗಿದೆ. ಚಂದ್ರ ಮೂಡಿದ ಹನ್ನೆರಡನೇ ದಿನಕ್ಕೆ ಕಾಯಲೆ ಬಿದ್ದಾಗ ಶರಣ ಖಾಜಾ ಅಮೀನುದ್ದೀನರು ಹದಿನೈದು ದಿನ ಮುಗಿದು ೧೬ನೇ ದಿನಕ್ಕೆ ಚಂದ್ರ ಮುಳುಗುವ ವೇಳೆಗೆ ಅಂದರೆ ಮಗರೀಬ್ ನಮಾಜಿನ ಸಮಯದಲ್ಲಿ ಇಹಲೋಕ ಯಾತ್ರೆಯ ವಿಮಾನದೊಂದಿಗೆ ಸಿದ್ಧರಾದಂತಾಗಿ ಮಾತು ಮೌನವಾಗಿ ನಾಲಿಗೆ ತಡವರಿಸುತ್ತಾ ಕಹಾಂ ತಕ್ ಜಮೀನ ವಹಾಂ ತಕ್ ಅಮೀನ ಎನ್ನುತ್ತಾ ರೋಧಿಸುತ್ತಿರುವ ಅಸಂಖ್ಯಾತ ಭಕ್ತರನ್ನೂ ಪತ್ನಿ ಬಾನೂಬಿಯವರನ್ನು ಇಬ್ಬರು ಪುತ್ರಿಯರನ್ನೂ ಉಳಿದೊಬ್ಬ ಪುತ್ರನನ್ನ ಕಣ್ತುಂಬಾ ನೋಡುತ್ತಾ ಅವರೆಲ್ಲರನ್ನು ಪರದೇಶಿಗಳನ್ನಾಗಿ ಮಾಡಿ ಇಹಲೋಕ ತ್ಯಜಿಸಿ ಪೈಗಂಬರ ವಾಸಿಗಳಾಗಿ ಬಿಡುತ್ತಾರೆ. ಚಂದ್ರ ನಿಲ್ಲದ ಸೃಷ್ಠಿ ಕತ್ತಲಾದ ಸಮಯ ಮಗರೀಬ ನಮಾಜಿನ ಸಮಯ ಇಜೇರಿಯ ಪುಣ್ಯ ಭೂಮಿಯಲ್ಲಿ ಮೌನ ಆವರಿಸಿ ಹಕ್ಕಿ ಪಕ್ಷಿಗಳು ಹಾರಾಡುವದನ್ನು ನಿಲ್ಲಿಸುತ್ತವೆ.[೪೦] ಗಿಳಿ

ಕೋಗಿಲೆಗಳುಕೂಗದೇ ಮೌನ ವಹಿಸುತ್ತವೆ. ಶರಣ ಖಾಜಾ ಅಮೀನುದ್ದೀನ ಆಲಾರವರ ಅಗಲುವಿಕೆಯಿಂದ ಗಾಳಿಯು ರೋಧಿಸಿದಂತೆ ಬೀಸುತ್ತದೆ. ಒಟ್ಟಾರೆ ಪುಣ್ಯಾತ್ಮನ ಜೀವಾತ್ಮ ವಿಶ್ವಾತ್ಮನಲ್ಲಿ ಲೀನ ವಾಗುತ್ತದೆ. ಇಲ್ಲಿಗೆ ಖಾಜಾ ಅಮೀನುದ್ದೀನ ಆಲಾರವರ ಯುಗ ಅಂತ್ಯವಾಗುತ್ತದೆ. ಅಂತ್ಯದಿನದ ವೇಳೆ ತಾರೀಖು ಲಭ್ಯವಿಲ್ಲ ಒಟ್ಟಾರೆ ೧೮ಲನೇ ಶತಮಾನ ದಿಂದೀಚೆ ಅವರ ಕಾಲವೆಂದು ತಿಳಿದು ಬರುತ್ತದೆ.

➢ **ಖಾಜಾ ಅಮೀನುದ್ದೀನರ ನಿಧನದ ನಂತರವು ಮುಂದುವರಿದ ಪವಾಡಗಳು:-**

ಶರಣ ಖಾಜಾ ಅಮೀನುದ್ದೀನ ಆಲಾರವರು ಪೈಗಂಬರ್ ವಾಸಿಯಾದ ನಂತರ ಅವರ ಕರ್ತೃ ಗದ್ದಿಗೆಯ ದರ್ಶನ ಮಾಡಿ ಹರಕೆ ಹೊತ್ತು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಂಡ ಅನೇಕ ಜನರು ಕಾಣಸಿಗುತ್ತಾರೆ. ಈಗಲೂ ಹರಕೆ ಹೊರುತ್ತಾರೆ. ಕಾಣಿಕೆ ಸಲ್ಲಿಸುತ್ತಾರೆ ಇಂತಹ ನಿದರ್ಶನಗಳು ಅತಿಶಯೋಕ್ತಿಯಾಗಿ ಕಂಡು ಬಂದರು ಜನರ ನಂಬಿಕೆ ಅಲ್ಲಿ ಮನೆ ಮಾಡಿ ಬಿಟ್ಟಿರುತ್ತದೆ. ಆ ನಂಬಿಕೆಯೆ ಅವರನ್ನು ಹರಕೆ, ಕಾಣಿಕೆ, ಪ್ರಾಣಬಲಿಮುಂತಾದಕ್ಕೆ ಪ್ರೇರಣೆ ನೀಡಲು ಹಚ್ಚುತ್ತದೆ. ಒಟ್ಟಾರೆ ಸತ್ಯ ವಿಶ್ವಾಸಗಳು ಅಲ್ಲಾಹನ ದಾಸರು, ವಾಕ್ಯ ಸಿದ್ಧಿಪುರುಷರು ಆದ ಶರಣ ಖಾಜಾ ಅಮೀನುದ್ದೀನರು ಸಗರ ನಾಡಿನ ಜನರ ಬಾಯಿಯಲ್ಲಿ ಪವಾಡ ಪುರುಷರೆನಿಸಿಕೊಂಡಿದ್ದಾರೆ.ಇತ್ತೀಚಿನ ೧೯೫೦ನೇ ಇಸ್ವಿಯ ಆಸು ಪಾಸಿನ ಶೈವ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಜನಾರ್ಧನರಾವ್ ಕುಲಕರ್ಣಿ ಎಂಬ ಡಾಕ್ಟರ ವೃತ್ತಿಯಲ್ಲಿದ್ದವರಿಗೆ ಅದ್ಯಾವ ವಿಧಿಯ ವಿರಾಟವೊ ದೇವನ ಕೊಪವೊ ೩೦-೩೫ ವಯಸ್ಸಿಗೆ ಇದ್ದಕ್ಕಿದ್ದಂತೆ ಎರಡೂಕಾಲಿನ ಶಕ್ತಿಯಡಗಿ ನಡೆಯಲು ಬಾರದೆ ನೆಲ ಹಿಡಿಯುತ್ತಾರೆ. ಅನೇಕ ಪ್ರಸಿದ್ಧ ಡಾಕ್ಟರರಿಂದ ಪರೀಕ್ಷಿಸಿದರೂ ಗುಣವಾಗಲಿಲ್ಲ ಎರಡೂ ಬಗಲಲ್ಲಿ ಕಟ್ಟಿಗೆ ಇಟ್ಟು ಕೊಂಡು ತಿರುಗುತ್ತಿದ್ದರು. ಎಲ್ಲ ಕಡೆಗೂ ತಿರುಗಾಡಿ ತೋರಿಸಿಕೊಂಡರು. ದೇವರು ದಿಂಡರ ಮಂತ್ರ ಅಂತ್ರ ಏನು ಮಾಡಿಸಿಕೊಂಡರು ಆರೋಗ್ಯ ಸುಧಾರಿಸಲಿಲ್ಲ. ಯಾರೋ ಒಬ್ಬರಿಂದ ಖಾಜಾ ಅಮೀನುದ್ದೀನರ ಮಹಿಮೆ ತಿಳಿದು ಅವರ ದರ್ಶನ ಪಡೆದುಕೊಂಡು ಬರೋಣ ಎಂದು ಅವರ ಪತ್ನಿ ಡಾಕ್ಟರರಿಗೆ ಹೇಳಿದಾಗ ವಿಜ್ಞಾನವನ್ನು ನಂಬಿದ ಆ ಡಾಕ್ಟರರು ಏ ಅವೆಲ್ಲ ಮೂಡನಂಬಿಕೆ ಅಲ್ಲಿಗೆ ಹೋದರೆ ಗುಣವಾಗುವ ಭರವಸೆ ನನಗಿಲ್ಲ ಎಂದರು ಕೂಡ ಅವರ ಮಡದಿ ಪತಿಯ ಮೇಲಿನ ಪ್ರೀತಿ ಕನಿಕರದಿಂದ ಹೋಗಿಯಾದರು ಬರೋಣ ಬನ್ನಿ ಎಂದಾಗ ಹೆಂಡತಿಯ ಹಟಕ್ಕೆ ಎದುರಾಡದೆ ಇಜೇರಿಯ ಖಾಜಾ ಅಮೀನುದ್ದಿನ ಶರಣರ ದರ್ಗಾದ ದರ್ಶನಕ್ಕೆ ಬಂದಾಗ ಅವರ ಮಡದಿ ನಿರ್ಮಲ ಭಕ್ತಿಯಿಂದ ಗದ್ದಿಗೆಯ ಮುಂದೆ ಕುಳಿತು ಕಣ್ಣೀರುಡುತ್ತಾ ಬೇಡಿಕೊಳ್ಳುತ್ತಾರೆ.[೪೧] ಬರ ಬರುತ್ತಾ ಒಂದೆರಡು ತಿಂಗಳಲ್ಲಿ ಅವರ ಕಾಲಿನ ಶಕ್ತಿ ಬರಹತ್ತಿ ಪೂರ್ಣ ಗುಣವಾಗಿ ಮತ್ತೆ ತಮ್ಮ ವೈದ್ಯಕೀಯ ವೃತ್ತಿ ಪ್ರಾರಂಭಿಸಿದರಂತೆ ಮುಂದೆ ಅವರಿಗೆ ಒಬ್ಬ ಮಗನೂ ಜನಿಸಿದನಂತೆ. ಆಗ ಡಾಕ್ಟರರು ಮಡದಿ ಮಕ್ಕಳೊಂದಿಗೆ ಬಂದು ಕಾಣಿಕೆ ಅರ್ಪಿಸಿ ಶರಣರಾದರಂತೆ ಈಗ ೨೦೦೬ನೆ ಇಸ್ವಿಯಲ್ಲಿ ಅವರಿಗೆ ೮೦ ವರುಷವಾಗಿದ್ದು ಈಗಲೂ ಗುಲಬರ್ಗಾದಲ್ಲಿ ವಾಸವಾಗಿದ್ದಾರೆ. ಪ್ರತಿ ವರುಷ ವೃದ್ಧ ಮಡದಿ ಮಗನೊಂದಿಗೆ ಇಜೇರಿ ಶರಣರ ದರ್ಶನಕ್ಕೆ ಬಂದು ಹೋಗುತ್ತಾರೆ. ಇದೆ ರೀತಿ ಖಾಜಾ ಅಮೀನುದ್ದೀನರ ಮರಣದ ನಂತರವೂ ಅವರ ಪವಾಡಗಳು ಇಂದಿಗೂ ನಡೆದು ಬಂದಿವೆ ಎಂದು ತಿಳಿದುಬರುತ್ತದೆ.

೬.ಜೇವರಗಿ ತಾಲೂಕಿನ ಮಾಗಣಗೇರಿಯ ಚೆನ್ನವೃಷಭೇಂಧ್ರರ ಮತ್ತು ವಿಶ್ವಚೇತನ ವಿಶ್ವಾರಾಧ್ಯರ ಪವಾಡಗಳು:-

ಚೆನ್ನವೃಷಭೇಂಧ್ರರ ತಂದೆ ಹೆಸರು ಗುರುಬಸವಾರ್ಯ, ತಾಯಿಯ ಹೆಸರು ಹಂಪಮ್ಮ ಇವರ ಹಾಲು ಜೇನಿನಂತ ಸಂಸಾರ ಪತಿಯ ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತ ಸುಖ ಸಂಸಾರದಲ್ಲಿ ಶರಣರ ಸೇವೆ ಕಾಯಕವೆಂದು, ಅಷ್ಟಾವರಣ

ಅಳವಡಿಸಿಕೊಂಡು, ಪಂಚಾಚಾರ ಮೈಗೂಡಿಸಿಕೊಂಡು ಷಟಸ್ಥಲ ಮೆಟ್ಟಿಲೇರಲಾರಂಭಿಸಿದವರು. ಈರ್ವರ ನಿಷಕಲ್ಮಷ ಭಕ್ತಿಗೆ ಮೆಚ್ಚಿರುವ ಪರಶಿವನು ಇವರ ಕನಸಲ್ಲಿ ಬಂದು ಜನಬೆಳಗುವ ಜ್ಯೋತಿಯ ನೀಡುವೆ, ಮನೆಯ ಮಗನಾಗಲಾರ, ಜಗದತಂದೆಯಾಗುವನು.

ಬೆಳಗಿನ ಜಾವದಿ ಸಂಧ್ಯಾವಂದನೆ ಮುಗಿಸಿದ ದಂಪತಿಗಳು ವಾದ್ಯ ಮೇಳದೊಂದಿಗೆ ತೆರಳಿ ಗದ್ದುಗೆಗೆ ಪೂಜೆ ನೆರವೇರಿಸಿನಿಂತು ಕರಮುಗಿದು ತೋಟೇಂದ್ರರಿಗೆ ವರಬೇಡುವ ಸಮಯದಲ್ಲಿ ವರವನ್ನು ಪುಷ್ಪರೂಪದಿ ದಯಪಾಲಿಸಿದನು. ಮಸ್ತಕದ ಪುಷ್ಪ ಮಸ್ತಕದಲ್ಲಿರಿಸಿದ ಹಂಪಮ್ಮಳ ವಡಲು ತುಂಬಿಬಂದು ಚನ್ನವೃಷಭರು ವಸಂತ ಮಾಸದ ಶುದ್ದ ವೈಶಾಖ ಅಕ್ಷಯ ತೃತೀಯ ಕ್ರಿ.ಶ. ೧೮೫೯ರಲ್ಲಿ, ಶಿವನಾಟದ ಸವಿಗಾಲು ಧರೆಗವತರಿಸಿ ಬಂದರು. ಹನ್ನೆರಡನೇ ದಿನಕ್ಕೆ ತೊಟ್ಟಿಲು ಕಾರ್ಯ ಮುಗಿಸಿದರು. ಮುತ್ತೈದೆಯರೆಲ್ಲ ಸೇರಿ ಮುತ್ತಿನ ಹಾರವನ್ನ ಹಾಕಿ ತೊಟ್ಟಿಲ ತೂಗುತ್ತ ಚನ್ನವೃಷಭೇಂದ್ರನೆಂದು ನಾಮವನಿಟ್ಟರು.[೬೨]

ಮನೆಗೆ ಮೊದಲನೇ ಪುತ್ರನಾದ ಚನ್ನವೃಷಭವನು ಚಿಕ್ಕವನಿರುವಾಗ ಒಂದು ದಿನ ತಾಯಿ ಸ್ನಾನ ಮಾಡಿಸಿ, ಬಟ್ಟೆ ಧರಿಸಿ ತೃಪ್ತಿಯಾಗುವವರೆಗೂ ಎದೆಹಾಲುಣಿಸಿ ತೊಟ್ಟಿಲ ತೂಗಿ ಮಲಗಿಸಿ, ತನ್ನ ಮನೆಗೆಲಸದಲ್ಲಿ ಮಗ್ನಳಾದಳು. ಮನೆಗೆ ಬಂದ ಗುರುಬಸವಾರ್ಯರು, ಮಗು ಎಲ್ಲೆಂದು ಕೇಳಿದಾಗ ತಾಯಿ ಹೊರಬಂದು ತೊಟ್ಟಿಲು ನೋಡಿದಾಗ ತೊಟ್ಟಿಲಲ್ಲಿ ಮಗು ಇರದಿರುವದನ್ನು ಕಂಡು, ತಂದೆ-ತಾಯಿ ಗಾಬರಿಗೊಂಡು ಊರೆಲ್ಲಾ ಹುಡುಕಿದರು. ಎಲ್ಲೂ ಕಾಣದಾದಾಗ ಸುಸ್ತಾಗಿ ಬಂದು ಕುಳಿತರು. ತಕ್ಷಣದಲ್ಲಿ ಮಠದ ಮೂಲೆಯೊಂದರಲ್ಲಿ ಚೀರಿದ ಶಬ್ಬ ಕೇಳಿದಾಕ್ಷಣ ಎಲ್ಲರೂ ಹೋಗಿ ನೋಡಲು ದೆವ್ವ ನಿಂಗಿಯನ್ನು ಧಹಿಸುತ್ತಲಿದ್ದುದ್ದನ್ನು ಕಂಡು ಜನ ಬೆರಗಾದರು.

➢ ಶ್ರೀ ಚೆನ್ನವೃಷಭೇಂದ್ರರ ಪಟ್ಟಾಧಿಕಾರ:-

ಗುರು ಬಸವಾರ್ಯರು ಮಂಗಳ ದ್ರವ್ಯಗಳೆಲ್ಲವ ತರಿಸಿ ಪಟ್ಟಾಧಿಕಾರ ಕೆಲಸಕ್ಕೆ ಅಣಿಯಾಗಿ ಹರಗುರು ಚರಮೂರ್ತಿಗಳೆಲ್ಲ ಸೇರಿ, ವೈದಿಕ ಪಂಡಿತರೊಡಗೂಡಿ, ಸಾವಿರದೆಂಟುನೂರಾ ತೊಂಬತ್ತನೆ ಸಾಲಿನ ಸರ್ವಧಾರಿನಾಮ ಸಂವತ್ಸರದಿ, ಚೈತ್ರ ಶುದ್ದದ ಪಾಡ್ಯಮಿಯಂದು ಪೂರ್ವಾಹ್ನ, ಶುಭ ಸಮಯದಲ್ಲಿ, ಒಂಬತ್ತು ಗಂಟೆ ಮೂವತ್ತು ನಿಮಿಷಕ್ಕೆ ಧನುರ್ಲಗ್ನದ ಶುಭಗಳಿಗೆಯಲ್ಲಿ ಮಂಗಳವಾದ್ಯ ಮೇಳಗಳ ಮಧ್ಯೆ ಓಲಗ (ದರ್ಬಾರು) ಅಲಂಕರಿಸಿದ ಪೀಠದಲ್ಲಿ ಷ.ಬ್ರ. ದೊಡ್ಡಬಸವ ಶಿವಾಚಾರ್ಯರು ಶ್ರೀಗಳನ್ನು ಕೂಡ್ರಿಸಿ ಅಭಿಷೇಕಗೈದು ಮಂತ್ರೋಪದೇಶ ನೀಡಿ, ದಂಡ ಕಮಂಡಲ, ಪಾದುಕೆ ಇತ್ತು, ರುದ್ರಾಕ್ಷಿ ಕಿರೀಟ ಧರಿಸಿ ಎಡಬಲದಿ ವಟುಗಳಿಬ್ಬರಿಂದ ಚಾಮರ ಬೀಸುತ್ತ ಮಂತ್ರೋಪದೇಶ ಗೈದು ಲೋಕೋದ್ದಾರಕ್ಕಾಗಿ ಬೀಳ್ಕೊಟ್ಟರು.[೬೩]

➢ ಶ್ರೀ ಚೆನ್ನವೃಷಭೇಂದ್ರರರ ಪವಾಡಗಳು:-

ಪೀಠ ಅಲಂಕರಿಸಿದ ಶ್ರೀಗಳು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಿಸುತ್ತ ಲೋಕ ಕಲ್ಯಾಣ ಕಾರ್ಯಕ್ಕೆ ಅಣಿಯಾದ ಚನ್ನವೃಷಬೇಂದ್ರರು ಬಡಭಕ್ತರ ಭಾವನೆಗಳಿಗೆ ಸ್ಪಂದಿಸುತ್ತ ಸದ್ದಿಲ್ಲದೆ ಸುದ್ದಿಯಾಗತೊಡಗಿದರು (ಪ್ರಸಿದ್ಧರಾದರು). ಶ್ರೀಗಳ ಪ್ರಥಮ ಪವಾಡ ಬರಡು ಹಯನವಾಗಿದ್ದು, ಲೋಕ ಸಂಚರಿಸುತ್ತಾ, ಕರುವಿನಾಳಕ್ಕೆ ಹೋದಾಗ ಭಕ್ತ ಕರಿಬಸಪ್ಪ, ಬೇರೆ ಮನೆಯ ಹಾಲೇಕೆ ? ಎದುರಿಗೆ ಕಾಣುವ ಬರಡು ಆಕಳದ ಕಡೆಗೆ ಕೈಮಾಡಿ ಈ ಆಕಳ ಹಾಲು ಹಿಂಡಿಕೊಡು

ಬಾ ಎಂದು ಕರಬಸಪ್ಪ ಸತಿಗೆ ಆಜ್ಞಾಪಿಸಲು ಆಜ್ಞಾಧಾರಕಳಾದ ಸತಿ ಹೋಗಿ ಹಾಲು ಕರೆಯಲು ಬರಡು ಆಕಳ ಹಾಲು ಕರೆಯಿತು.

❖ **"ನೀರನ್ನು ತುಪ್ಪವಾಗಿಸಿದ್ದು, ತುಪ್ಪವನ್ನು ನೀರಾಗಿಸಿದ್ದು.":-**

ಬಸವ ಪುರಾಣ ಮಂಗಲ ಕಾರ್ಯಕ್ಕೆ ಭಕ್ತರ ಕರೆಯ ಮೇರೆಗೆ ಕೊಲ್ಲೂರಿಗೆ ಹೋದಾಗ ಗುರುಗಳ ಪೂಜೆ ಮುಗಿದ ಮೇಲೆ ಗಣಾರಾಧನಗೆ ತುಪ್ಪ ತರಲು ವಿಳಂಬವಾಯಿತು, ಭಕ್ತರೆಲ್ಲ ಭಯಭೀತರಾದರು. ಭಕ್ತರ ಭಾವನೆಗಳನ್ನು ಕಂಡ ಚನ್ನವೃಷಭೇಂದ್ರರು ಮುತ್ತೈದೆಯರಿಗೆ ಕರೆಸಿ ಕೊಡಕೊಟ್ಟು ಭಾವಿಗೆ ಪೂಜೆ ಮಾಡಿ ನೀರು ತರಲು ಹೇಳಿದರು ಬರುವಷ್ಟರಲ್ಲಿ ನೀರು ತುಪ್ಪವಾಗಿತ್ತು.ನಂತರ ಬಂದ ತುಪ್ಪವನ್ನು ಗಂಗಾ ಮಾತೆಗೆ ಅರ್ಪಿಸಿ ಪವಾಡಗೈದ ಪುಣ್ಯ ಪುರುಷರು. ಮೊಗ್ಗುಗಳರಳಿ ಸುಗಂಧ ಭೀರಿದಂತೆ ಶ್ರೀಗಳ ಪವಾಡಗಳು ಎಲ್ಲೆಡೆ ಮನೆಮಾತದವು. ಇಂತಹ ಕೀರ್ತಿಯಿಂದ ಜನ ತಂಡೋಪ ತಂಡವಾಗಿ ಶ್ರೀಮಠಕ್ಕೆ ಬರತೊಗಿದರು.

ಶ್ರೀಗಳ ಸಾನಿಧ್ಯದಲ್ಲಿ ಪುರಾಣ ಪ್ರವಚನ ಆರಂಭ ಮಾಡಿದ್ದರು. ಜನ ಕಿಕ್ಕಿರಿದು ಸೇರಿತ್ತು. ಹಂಪಮ್ಮ ತಾಯಿ ಕೊನೆಯುಸಿರೆಳೆಯುವ ಸಮಯದಲ್ಲಿದ್ದಾಗಲೂ ಶ್ರೀಗಳು ಸ್ಥಳದಿಂದ ಕದಲದೇ ಪುರಾಣ, ಮಂಗಲವಾದ ಬಳಿಕ ಭಕ್ತರೊಡಗೂಡಿ ತಾಯಿಯನ್ನು ಕಾಣಲು ಬಂದರು. ತಿಂಗಳಿನಿಂದ ಅನ್ನವಿಲ್ಲದೆ ಕೊನೆ ಘಳಿಗೆ ಉಣಿಸುವ ತಾಯಿ ಮಗನ ಮುಖ ನೋಡಲು ಕಾತುರದಿಂದ ಕಾಯುತ್ತಿರುವಾಗ ಚನ್ನವೃಷಭೇಂದ್ರರನ್ನು ಕಂಡಾಕ್ಷಣ ಎದ್ದು ಕುಳಿತಳು. ಕರುಣಾ ಕಾರುಣ್ಯ ಮೂರ್ತಿಯು ಪಾದೋದಕ ಅರ್ಪಿಸಿದಾಕ್ಷಣ ಶಿವನ ಸನ್ನಿಧಿಗೆ ಸಾಗಿದಳು. ಬಾಲವಿಧವೆ, ತಂಗಿ ಗುರುಲಿಂಗಮ್ಮ ಮಠದ ಸೇವೆಯಲ್ಲಿ ಕಾಲ ಕಳೆದಳು.

❖ **ನೀರು ದ್ವೀಪ ಪ್ರಜ್ವಲನ:-**

ಮಾಗಣಗೇರಿಯ ಹತ್ತಿರದ ನೂರಾರು ಹಳ್ಳಿಗಳಲ್ಲಿರುವ ಭಕ್ತರ ಮನೆಯಲ್ಲಿ ಯಾವ ಮಂಗಲ ಕಾರ್ಯವಿದ್ದರೂ ಚನ್ನವೃಷಭೇಂದ್ರರ ಉಪಸ್ಥಿತಿ ಇರುತ್ತಿತ್ತು. ಕಾಚಾಪುರದ ಗುರುಲಿಂಗಪ್ಪಗೌಡ ಪುತ್ರನ ಮದುವೆಗೆಂದು ಕರೆಯಲು ಬಂದನು. ಶ್ರೀಗಳ ಪಾದಾರವೃಂದಕ್ಕೆ ಹಣೆಮಣಿದು ನಮ್ಮನ್ನುದ್ಧರಿಸಲೆಂದು ಅಂಗಲಾಚಿದನು.ಕೊನೆಯಲ್ಲಿ ಶ್ರೀಗಳು ಮಾತನಾಡುತ್ತಾ ಇದು ವಿಷಮ ಸಂಸಾರ, ಅಂಟಿಕೊಂಡರೆಂದಿಗೂ ಬಿಡದು ಹೇಗಿರಬೇಕೆಂದರೆ, ಕುಂಬಾರ ಹುಳು ಕೆಸರಲ್ಲಿದ್ದರೂ ಕೆಸರು ಅಂಟದಂತಿರುತ್ತದೆಯಲ್ಲ ಹಾಗೆ. ಅದಕ್ಕೆ ಆ ಕುಂಬಾರ ಘೋರಾ ಕುಂಬಾರನಾಗಿದ್ದು. ಘೋರ ಅಂದರೆ ಮಹಾ ಭಯಂಕರ ಭಯಂಕರ ಭಕ್ತಿಯ ಕುಂಬಾರ ಘೋರಾ ಕುಂಬಾರನಾಗಿ ಪರಿವರ್ತಿತನಾದಂತೆ. ಯಾವತ್ತೂ ತಿರಿದು ತಂದು, ಕರೆದು ತಿನ್ನುವದರಲ್ಲಿ ತೃಪ್ತಿಯ ಕಾಣುವ ಭಕ್ತರಾದಾಗ ಮಾತ್ರ ಘೋರನಾಗಬಲ್ಲ, ಭಕ್ತಸ್ಥಲಕ್ಕೆ ಮುಟ್ಟಬಲ್ಲಾ ಎಂದು ಹೇಳುತ್ತಾ.[೪೪] ಪುರಾಣದ ಪಕ್ಕದಲ್ಲಿರುವ ಜ್ಯೋತಿ ಎಣ್ಣೆ ನೀಗಿ ತಣ್ಣಗಾಗುವ ಹಂತದಲ್ಲಿರುವಾಗ, ಗಮನಿಸಿದ ಶ್ರೀಗಳು ಕಮಂಡಲದ ನೀರೆರೆದಾಗ ಎರೆದ ನೀರೇ ಎಣ್ಣೆಯಂದದಿ ಬೆಳಕನಿತ್ತಿತು. ಪುರಾಣ ಮಂಗಲವಾಗುವವರೆಗೆ ಜ್ಯೋತಿ ಬೆಳಗುತ್ತಲೇ ಇತ್ತು.

❖ **ಮಹಾರೋಗ ನಿವಾರಣೆ:-**

ಭೂಮಿಯ ಮೇಲೆ ಮಾನವ ಎಂದು ಉದಯಿಸಿದನೋ ಅಂದೇ ರೋಗ-ರುಜಿನಗಳು ಜನ್ಮ ತಾಳಿದವು. ರೋಗವಿಲ್ಲದ ಮಾನವ ಮಾನವನಲ್ಲ. ದೇವಮಾನವ ಕೂದಲುಗಳಿದ್ದಷ್ಟು ರೋಗರುಜಿನಗಳಿವೆ. ರೋಗದ ಗುರುವೇ ಮಾಹಾರೋಗ, ಇದರ ಹೇಸರೇ ಹೇಳುವಂತೆ, ಮಹಾರೋಗ ಮನಸ್ಸಿಗೆ ಯಾತನೆ ಮೂಡಿಸಿ ಸಾಯಿಸುವದೇ ಮಹಾರೋಗ. ಸಾಮಾನ್ಯ ಕಾಯಿಲೆಗೆ ಬೇಡದಾದವರೂ ಬಂದು ಮಾತನಾಡಿಸುವರು. ಮಹಾರೋಗ ಬಂದಾಗ ಬೇಕಾಗಿರುವ ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಹೆಂಡತಿ, ಮಕ್ಕಳು, ಬಂದು ಬಳಗ ಎಲ್ಲರೂ ದೂರಾಗುತ್ತಾರೆ. ಅದಕ್ಕೆ ಇದು ಮಹಾರೋಗವೆಂದು ಖ್ಯಾತಿ ಪಡೆದಿದೆ. ಇದರ ಇನ್ನೊಂದು ಹೆಸರೇ ಕುಷ್ಠರೋಗ.

ಇದು ಮಾಗಣಗೇರಿಯ ಚಂದ್ರಾಮಪ್ಪಗೌಡನಿಗೆ ಇರುವದು ಕಂಡು ಮನೆಯವರೆಲ್ಲರೂ ಆತನನ್ನು ಹೊರದಬ್ಬಿದರು. ಎಷ್ಟು ಉಪಚರಿಸಿದರೂ ಗುಣಮುಖನಾಗದೆ ನಿರಾಶನಾಗಿ ದಿಕ್ಕಿಲ್ಲದ ಪರದೇಶಿಯಂತೆ, ಊರ ಹೊರಗಿನ ಗುಡಿಯಲ್ಲಿದ್ದು ಸಾವಿನ ದಾರಿ ಕಾಯುತ್ತಿದ್ದ. ದಿನಗಳೆದಂತೆ ಬದುಕುವ ಆಸೆ ಕಮರಿ ಹೋಯಿತು. ಸಾಯಲು ನಿರ್ಧರಿಸಿ ಮಲಗಿರುವಾಗ ಚನ್ನವೃಷಭೇಂದ್ರರು ಆತನ ಕನಸಲ್ಲಿ ಬಂದು ಹೇಳಿದರು.[೪೫] ಮಠದ ಬಚ್ಚಲ ಮೋರಿಯ ನೀರಿನ ಸ್ನಾನ ಮಾಡೆಂದಾಗ, ನಸುಕಿನ ಜಾವದಿ ಕಾಯುತ ಕುಳಿತ, ಕಂಡ ಕನಸು ನನಸಾಗಿಸಿಕೊಂಡ ಪುಣ್ಯಾತ್ಮ ಚಂದ್ರಾಮಪ್ಪಗೌಡ ದಿನಗಳೆದಂತೆ ಚಂದ್ರನಂತೆ ಹೊಳೆಯಲಾರಂಭಿಸಿ ನಿರೋಗಿಯಾದ.

❖ **ಲಕಣಾಪುರದ ನೀರಿನ ಬರನೀಗಿಸಿದ ಯೋಗಿ:-**

ಒಂದು ದಿನ ಲಕಣಾಪುರದಲ್ಲಿ ಅಣ್ಣ ಬಸವಣ್ಣನ ಪುರಾಣ ಕಾರ್ಯಕ್ಕೆ ಶ್ರೀಗಳಿಗೆ ಕರೆಯಬಂದರು. ಕೈಲಾಸಪತಿಯ ಸ್ವಗ್ರಾಮ ಲಕಣಾಪುರದಲ್ಲಿ ನೀರಿಗಾಗಿಹಾಹಾಕಾರ ಅಧಿಕವಾಗಿತ್ತು. ಪುರಾಣಕ್ಕೆ ಬಂದ ಭಕ್ತರಿಗೆ ನೀರೆ ಮೊದಲು ಆಹಾರದಂತಾಗಿತ್ತು. ಶ್ರೀಗಳ ಮುಂದೆ ಕರಗಳ ಜೋಡಿಸಿ ಭಕ್ತರೆಲ್ಲರೂ ಅರಿಕೆ ಮಾಡುತ್ತ ನೀರಿನ ತೊಂದರೆ ನೀಗಿಸಿರೆಂದು ಪರಿಪರಿಯಿಂದ ಕೇಳಿದರು. ಭಕ್ತರ ಬವಣೆ ನೀಗಿಸಲು ವಾದ್ಯಮೇಳದೊಂದಿಗೆ ಬತ್ತಿದ ಬಾವಿಗೆ ತೆರಳಿ, ಪೂಜಾ-ವಿಧಿ ವಿಧಾನಗೈದು ನೆಲವನಗಿದು, ಗಂಗೆಯ ಕರೆದೊಡೆ, ಜೈಕಾರ ಮೊಳಗಿತು. ಮುತ್ತೈದೆಯರು ಕೊಡ ತುಂಬಿಕೊಂಡು ಬಂದ ಮೇಲೆ ಅಂದಿನಿಂದ ಇಂದಿನವರೆಗೂ ಲಕಣಾಪುರದ ನೀರಿನ ಬರ ನೀಗಿಸಿದ ಶ್ರೀ ಶಿವಯೋಗಿ ಚನ್ನವೃಷಭರು.

❖ **ಅಗ್ರಪೂಜಾ ಅರ್ಹಯೋಗಿ:-**

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಮದ್ರಕಿ ಗ್ರಾಮದಲ್ಲಿ ಶ್ರೀ ಬಸವಪುರಾಣ ಪ್ರವಚನದಲ್ಲಿ ೬೩ ಮಂಟಪ ಪೂಜಾ ವಿಧಾನ ಏರ್ಪಡಿಸಿದ್ದರು. ಸತ್ಯ ಸಂಗತಿ ಗೊತ್ತಿರುವ ೬೨ ಜನ ಶ್ರೀಗಳು ಒಂದು ಪೀಠ ಅಲಂಕರಿಸಿ ಕುಳಿತಾಗಿತ್ತು ಮದ್ರಕಿಗೌಡ ಖಡ್ಗ ಮಂಟಪದ ನಿರ್ಮಾಣದ ಹೊಣೆ ಹೊತ್ತು ನಿಭಾಯಿಸಿದ್ದ. ಈ ಪೀಠ ಅಂಗೀಕರಿಸಿದವರಿಂದ ಆಶೀರ್ವಾದ ಪಡೆಯಲು ಜನ ಕಾತುರವಾಗಿತ್ತು. ಆದರೂ ಗುರುವಿನ ಪರೀಕ್ಷೆ ಸಲ್ಲದೆಂಬ ಅರಿವಿದ್ದರೂ ಹೊಣೆಗಾರಿಕೆ ಮರೆದಗೌಡ ಬಂದುದೆಲ್ಲಾ ಬರಲೆಂದು ನಿರ್ಧರಿಸಿ ಮಂಟಪ ರಚಿಸಿದ. ಅಗ್ರ ಪೀಠವೇರಲು ಯಾರಿಲ್ಲದಾದಾಗ ಶ್ರೀ ಚನ್ನವೃಷಭೇಂದ್ರರುಕುದುರೆಯ ಮೇಲಿಂದಿಳಿದು ಮಂಟಪಕ್ಕೆ ಬಂದು ಬಸಯ್ಯ ತಾತನ ಆಶೀರ್ವಾದದಿಂದ ಮಂಟಪವೇರಿ ಪೂಜೆಗೈದರು.[೪೬]

❖ **ಚೇತನ:-**

ಹೀಗೊಂದು ದಿನ ಗೊಲ್ಲಾಳಪ್ಪಗೌಡ ಹದಗಲ್ಲರ ಮನೆಗೆ ಹೊರಟಾಗ ಗೊಲ್ಲಾಳಪ್ಪ ಗೌಡರ ಪಕ್ಕದ ಮನೆಯಲ್ಲಿ ಮಲ್ಲಪ್ಪಗೌಡನಿದ್ದನು. ನಾಳಿನ ಪೂಜೆ ನಮ್ಮ ಮನೆಯಲ್ಲಿರಲೆಂದು ಆಶೀರ್ವಾದ ಕೇಳಿ ಬಂದನು. ಎಷ್ಟು ಹೊತ್ತಾದರೂ ಬಾರದ ಮಲ್ಲಪ್ಪಗೌಡನನ್ನು ದಿವ್ಯದೃಷ್ಟಿಯಿಂದ ನೋಡಿದ ಶ್ರೀಗಳು, ಊರಿನ ಎಲ್ಲಾ ದೇವರುಗಳ ಎಡೆ ಮಾಡುವದನ್ನು ಕಂಡು, ಉಣ್ಣುವ ಜಂಗಮ ಯೋಗಿಯ ಕೂಡಿಸಿ, ಕಲ್ಲಿಗೆ ಎಡೆಮಾಡುವುದನ್ನು ಕಂಡು ಶ್ರೀಗಳು ನಕ್ಕು ಬಿಟ್ಟರು. ಗೊಲ್ಲಾಳಪ್ಪ ಗೌಡರ ಮನೆಯಲ್ಲಿ ಪ್ರಸಾದ ಮುಗಿಸಿ ಹೊರಟು ಬಂದರು. ವಿರಾಮ ವೇಳೆ ಕುಳಿತ ಸಮಯದಲ್ಲಿ ಖೈನೂರ ನಿಂಗಪ್ಪ ಸಾಹುಕಾರ ಕೇಳಿಕೊಂಡನು. ಬಡತನದಲ್ಲಿ ಭಕ್ತ ಹುಟ್ಟಿದಂತೆ ಇವರ ಸಾಲ ತೀರಿಸಿದ ಶ್ರೀಗಳು ವಿಮುಕ್ತನನ್ನಾಗಿಸಿದರು ಮುಂದೆ ಸಾಲಗಾರನೇ ಸಾಲ ಕೊಡುವಂತಾದನು.

ಹೀಗೆ ಹಲವಾರು ಪವಾಡ ಮೆರೆಯುತ್ತ ಕರವಿನಾಳ ಕರಬಸಪ್ಪನ ಮಗಳಿಗೆ ಮರಳಿ ಸೇರಿಸಿದ್ದು ಕಲಕೇರಿ ಗ್ರಾಮದ ಹೆಗ್ಗಣದೊಡ್ಡಿ ಮನೆತನದ ಮಲ್ಲಪ್ಪಗೌಡನ ಮಗ ಈರಗಂಟೆಪ್ಪನ ಹೆಂಡತಿ ಶಾಂತಾಬಾಯಿಯನ್ನು ಸುಖ ಸಂಸಾರಕ್ಕೆ ಸೇರಿಸಿದ್ದು ಮಾಗಣಗೇರಿ ಕೆಂಚಪ್ಪ ಶಿವಪ್ಪಗೌಡ ಶಿವದೀಕ್ಷೆ ಅರಸಿ ಬಂದಾಗ ಲಿಂಗದೀಕ್ಷೆ ನೀಡಿದ್ದು ಹೇಗೆಂದರೆ ಅಂತರ್ಜಾತಿ ಮದುವೆ ಮಾಡಿಸಿ ಬಸವಣ್ಣ ಕಲ್ಯಾಣ ತೊರೆದಂತೆ, ಕಡಕೋಳ ಮಡಿವಾಳಪ್ಪಗೆ ದೀಕ್ಷೆ ನೀಡಿ ಶರಣಬಸಪ್ಪ ಅರಳಗುಂಡಗಿ ತೊರೆದಂತೆ ಚನ್ನವೃಷಭರು ಕೆಂಚಪ್ಪನಿಗೆ ಲಿಂಗವಕಟ್ಟಿ ಮಾಗಣಗೇರಿ ತೊರೆಯಬೇಕೆಂದವರೆ ಸಾವಿರಾರು ಜನ. ಕೆಂಚಪ್ಪ, ಶಿವಪ್ಪಗೌಡರಿಬ್ಬರಿಗೂ ದೀಕ್ಷೆಯ ಕೊಟ್ಟು ಮಾಂಸಪಿಂಡಗಳನ್ನು ಮಂತ್ರ ಪಿಂಡವಾಗಿಸಿ ನಿರಾಳ ಮಠವ ಸೇರಿದರು.[೪೭]

ಮಾಗಣಗೇರಿ ವಡ್ಡೊಡಗಿ ಶಿವಪ್ಪನ ಮಗನ ಹೆಂಡತಿ ಮಡಿವಾಳಪ್ಪನಿಗೆ ಪಾದೋದಕದಿಂದ ರೋಗ ನಿವಾರಿಸಿದ್ದು, ಯಡ್ರಾಮಿ ಶಿವಲಿಂಗಪ್ಪ ಸನಹಳ್ಳಿ ಮನೆಯಲ್ಲಿ ಇದ್ದ ಒಬ್ಬ ಮಗಳ ತೊನ್ನು ನಿವಾರಣೆ ಮಾಡಿದ್ದು, ಸೋಮನಾಳದ ದುಂಡಪ್ಪ ಕುರಬರ ಇವನಿಗೆ ಊಟ ನೀರು ದಕ್ಕದೆ ಇದ್ದದ್ದಕ್ಕೆ ವಾಂತಿ ನಿಲ್ಲಿಸಿದ್ದು, ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಕಕ್ಕಳಮೇಲಿ ಕಬ್ಬಲಿಗೇರ ಮಲ್ಲಪ್ಪನಿಗೆ ಪುರುಷತ್ವ ಕರುಣಿಸಿದ್ದು. ಬೇಡರ ಭಿಮೇಶನಿಗೆ ಭೂತ ಬಿಡಿಸಿದ್ದು, ಸಿಂಧಗಿ ತಾಲೂಕಿನ ಹೊನ್ನಮಡಿಯಲ್ಲಿ ಆರಿದ ಗುಗ್ಗಳ ಹೊತ್ತಿಸಿದ್ದು. ಕೆಂಚರಾಯನ ಬಿನ್ನಹ ಸ್ವೀಕರಿಸಿದ್ದು. ಆಂಧ್ರಪ್ರದೇಶ ಗಟ್ಟಿಯವರ ಮನೆತನಕ್ಕೆ ಅನುಗ್ರಹವಿತ್ತಿದ್ದು, ಶ್ರೀಗಳೂ ಕಾಲ್ನಡಿಗೆಯಿಂದ ಪಂಚಲಿಂಗ ದರ್ಶನ ಮಾಡಿದ್ದು, ಗೋಲಗೇರಿ ಗೊಲ್ಲಾಳನ ತೇರು ಸಾಗಿಸಿದ್ದು, ಶಹಾಪೂರ ಗಟ್ಟಿನ ಚನಬಸಪ್ಪನ ಧರ್ಮಪತ್ನಿಗೆ ಭೂತ ಬಿಡಿಸಿದ್ದು, ಚಬನೂರ ಬಾಲಪ್ಪನಿಗೆ ಶಿವದೀಕ್ಷೆ ಕರುಣಿಸಿ ಮನೆತನ ಸಂಪದ್ಭರಿತವಾಗಿ ಮಾಡಿದ್ದು, ಭುವಿಯ ಭಕ್ತರ ಕಷ್ಟನಿಗೀಸಿ, ಸತತ ಕಾಯಕ ನಿಷ್ಠರಾಗಿ, ಜನಹಿತ ಕಾರ್ಯಗೈದು, (೧೯೫೯)ಸಾವಿರದೊಂಬೈನೂರಾ ಐವತ್ರೊಂಬತ್ತೆಂದು ವಿಕಾರಿನಾಮ ಸಂವತ್ಸರ ದಂದು ಮಾರ್ಗಶಿರ ಬಹುಳ ನವಮಿದಿನದಂದು. ಶ್ರೀಗರು ಚನ್ನವೃಷಭೇಂದ್ರ ಶ್ರೀಗಳು ಶಿವೈಕ್ಯರಾದರು. ನಮೋ ನಮಃ ಲಿಂಗಾಂ ಸಮರಸರಾದರು.

➢ **ವಿಶ್ವಚೇತನ ವಿಶ್ವಾರಾಧ್ಯರು ಮಾಡಿರುವ ಪವಾಡಗಳು:-**

❖ ಸೋಲಾಪುರದಲ್ಲಿ ದಿವಂಗತ ರೇವಣಸಿದ್ದಪ್ಪ ಅಡಕೆ ಇವರು ಗುರುವಿನ ಬಗ್ಗೆ ಅಪಾರವಾದ ಭಕ್ತಿ ಹಾಗೂ ನಂಬಿಗೆ ಇಟ್ಟುಕೊಂಡವರು. ಅತಿಥಿ ಸತ್ಕಾರ ಮಾಡುವುದರಲ್ಲಿ ಇವರು ಅಗ್ರಗಣ್ಯರು. ೧೯೮೭ರಲ್ಲಿ ಇವರು ಹೊಟ್ಟೆ ನೋವಿನಿಂದ ನರಳುತ್ತಿದ್ದರು. ಮುಂಬೈನ ಪ್ರತಿಷ್ಠಿತ ಆಸ್ಪತ್ರೆಗೆ ಸೇರಿಸಿದರೂ ಪ್ರಯೋಜನವಾಗಲಿಲ್ಲ. ವೈದ್ಯರೆಲ್ಲ ಕಷ್ಟಪಟ್ಟು

ಶಸ್ತ್ರ ಚಿಕಿತ್ಸೆ ಮಾಡಿದರು. ಹೊಟ್ಟೆ ನೋವಿಗೆ ಕಾರಣ ಗೊತ್ತಾಗಲಿಲ್ಲ. ಶಸ್ತ್ರ ಚಿಕಿತ್ಸೆಯ ಮೊದಲನೆಯ ದಿನ ಶ್ರೀಗುರು ಚನ್ನವೃಷಭೇಂದರು ಏಳು ವರ್ಷದ ಬಾಲೆಯ ಕನಸಲ್ಲಿ ಬಂದು ಹೊಟ್ಟೆ ನೋವಿನಿಂದ ನರಳುತ್ತಿದ್ದರು. ಇದರ ಅರ್ಥ ರೇವಣ ಸಿದ್ದಪ್ಪನವರ ಹೊಟ್ಟೆಯ ನೋವು ಗುರು ತೆಗೆದುಕೊಂಡು ಅವರಿಗೆ ಪುನರ್ಜನ್ಮ ಕೊಟ್ಟಿದ್ದರು.[೪೮] ಮುಂದೆ ರೇವಣ ಸಿದ್ದಪ್ಪನವರು ಹದಿನೈದು ವರ್ಷ ಸುಖವಾಗಿ ಬಾಳಿದರು.

- ಶ್ರೀ ಸೌಭಾಗ್ಯವತಿ ಗಂಗಾಬಾಯಿ, ಕೌಡಿ ದಂಪತಿಗಳು ಗಂಗಾ ಕೌಡಿ ಗುರುವಿನ ಮೇಲೆ ಅಚಲವಾದ ಭಕ್ತಿ. ಇವರ ಪತಿಗೆ ೧೯೮೭ರಲ್ಲಿ ಕಿಡ್ನಿ ಫೇಲಾದ ಆಘಾತಕಾರಿ ಸಂಗತಿ ವೈದ್ಯರಿಂದ ತಿಳಿದು ಬಂದಿತು. ಗಂಗಾ ಅವರು ಮಾಗಣಗೇರಿಯ ಗುರುವಿನ ಮೇಲೆ ಭಾರ ಹಾಕಿ ದಿನಾಲು ಗುರುವಿನ ತಿರ್ಥ ಹಾಗೂ ಪ್ರಸಾದ ಹಚ್ಚಿ ಗುರುವಿನ ಉಪಾಸನೆ ಹಾಗೂ ಗುರುವಾರಕ್ಕೊಮ್ಮೆ ಉಪವಾಸ ಮಾಡುತ್ತ ಇದ್ದರು. ಇದರಿಂದ ೨೫ ವರ್ಷವಾಯಿತು. ಯಾವುದೇ ತೊಂದರೆ ಇಲ್ಲದೆ ಜೀನವ ಸಾಗಿಸುತ್ತಿದ್ದಾರೆ. ಗಂಗಾ ಅವರು ೪೦ಕಿ.ಮೀ. ದಿಂದ ದೀಡ ನಮಸ್ಕಾರ ಹಾಕಿ ಸೇವೆ ಅರ್ಪಿಸಿದ್ದಾರೆ. ೨೦೦೫ ಅಸಾಧ್ಯವಾದ ರೋಗ ಕೂಡ ಗುರುವಿನ ಮೇಲೆ ನಂಬಿಕೆ ಇಟ್ಟು ನಿವಾರಿಸಿಕೊಂಡರು. ಪ್ರತಿ ಅಮವಾಸ್ಯೆಗೊಮ್ಮೆ ಬಂದು ಕಾಯಿ, ಕರ್ಪೂರ ಮಾಡಿಕೊಂಡು ಹೋಗುತ್ತಾರೆ.[೪೯] ಹಿತ ಶಕ್ತಿ ಉಳ್ಳವರಿದ್ದಾರೆ ನಮ್ಮ ಗುರುಗಳು. ಇದು ೨೦೦೫ರಲ್ಲಿ ಆದ ಘಟನೆ.

- ಮಾಗಣಗೇರಿಯ ಜಾತ್ರೆಗೆ ಪೂರ್ಣಿಮೆಯ ಶಿವ ಪೂಜೆಗೆ, ಮೂರು ತಿಂಗಳ ಮಗಳೊಂದಿಗೆ ಬಂದಿದ್ದರು. ಆಗ ಮಗುವಿಗೆ ಮಲಗಿಸಿ ಸ್ನಾನಕ್ಕೆ ಹೋದಾಗ ಎಂಟು ವರ್ಷದ ಹುಡುಗ ಟಿ.ವ್ಹಿ. ನೋಡುವ ಸಲುವಾಗಿ ಗಾದಿ ಸುತ್ತಿಕೊಂಡು ಟಿ.ವ್ಹಿ. ನೋಡುತ್ತಿದ್ದ. ಮರಳಿ ಹುಡುಗನನ್ನು ಹುಡುಕುತ್ತಿದ್ದಾಗ ಒಂದು ಘಂಟೆಯವರೆಗೆ ಹುಡುಕಿದಾಗ ಸಿಕ್ಕ ಮಗು ಗಾದೆಯ ಕೆಳಗೆ ನಿರ್ಜೀವ ಸ್ಥಿತಿಯಲ್ಲಿತ್ತು. ಮಗುವಿನ ಬಣ್ಣ ಕಪ್ಪಾಗಿ ನಿರ್ಜೀವ ಸ್ಥಿತಿಯಲ್ಲಿತ್ತು. ಗಾಬರಿಯಾಗಿ ಆ ಮಗುವನ್ನು ತೆಗೆದುಕೊಂಡು ಶ್ರೀ ವಿಶ್ವಾರಾಧ್ಯ ಗುರುವಿನ ಪಾದದ ಮೇಲೆ ಹಾಕಿದರು. ಆ ಕ್ಷಣದಲ್ಲಿ ಗುರು ಮಗುವಿನ ಮೇಲೆ ಹಸ್ತವಿಟ್ಟಾಗ ಕಣ್ಣು ತೆರೆಯಿತು.[೫೦] ನಿಜವಾದ ಅರ್ಥದಲ್ಲಿ ಇದು ಮಗುವಿನ ಪುನರ್ ಜನ್ಮವಾಗಿತ್ತು. ಮಗುವಿನ ತಂದೆ, ತಾಯಿಯರು ಗುರುವಿನ ಕೃಪೆಯಿಂದ ಕೃತಾರ್ಥರಾಗಿದ್ದಾರೆ.

೭. ಜೇವರ್ಗಿ ತಾಲೂಕಿನ ಕಡಕೋಳ ಮಡಿವಾಳಪ್ಪನವರ ಜೀವನ ಮತ್ತು ಪವಾಡಗಳು:-

ಮಡಿವಾಳಪ್ಪನವರ ಜನನ ತೀರ ವಿವಾದಾಸ್ಪದವಾಗಿದೆ. ಈ ಕುರಿತಂತೆ ಜನಮಾನಸದಲ್ಲಿ ಹಲವಾರು ದಂತಕತೆಗಳು ಬೆಳೆದು ಕೊಂಡಿವೆ. ಇವರ ತಂದೆ-ತಾಯಿಗಳ ಬಗೆಗೂ ಅಧಿಕೃತ ಪುರಾವೆಗಳಿಲ್ಲದ್ದಕ್ಕಾಗಿ ಹಲವು ಭಿನ್ನಾಭಿಪ್ರಾಯಗಳು ತಲೆದೋರಿವೆ. ಇವರು ಬಿದನೂರಿನ ಮಠಾಧೀಶ ವಿರೂಪಾಕ್ಷಯ್ಯ ಮತ್ತು ವಿಧವೆ ಗಂಗಮ್ಮ ನವರ ಗರ್ಭದಲ್ಲಿ ಜನಿಸಿದರೆಂದು ಜನವದಂತಿ ಇದೆ. ಈ ವದಂತಿಗೆ ಅನೇಕ ಪರ್ಯಾಯ ಹೇಳಿಕೆಗಳು ಸೃಷ್ಟಿಯಾಗಿರುವುದುಂಟು. ಮಡಿವಾಳಪ್ಪನವರ ತಾಯಿ ಗಂಗಮ್ಮ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣ ಗ್ರಾಮಕ್ಕೆ ಸೇರಿದವರು. ಗಂಗಮ್ಮ ನವರ ತಾಯಿಯ ಹೆಸರು ನಾಗಮ್ಮ. ಗುರುಗಳ ಹೆಸರು ಶಂಕರಯ್ಯ. ಗಂಗಮ್ಮ ಚಿಕ್ಕವರಿರುವಾಗಲೇ ಅಲ್ಲಿಯ ಬಗಲಿ ಮನೆತನದ ದುಂಡಪ್ಪ ಎಂಬುವವರೊಂದಿಗೆ ವಿವಾಹವಾಗಿರುತ್ತದೆ. ಕೆಲವು ದಿನಗಳಲ್ಲಿಯೇ ಗಂಗಮ್ಮನವರ ಪತಿ ಮರಣ ಹೊಂದುವರು. ಆ ಕಾಲಕ್ಕಾಗಲೇ ಇವರು ಗರ್ಭಿಣಿಯಾಗಿದ್ದು, ಅದೇ ಕಾಲಕ್ಕೆ ನಾಗಠಾಣ ಭಾಗದಲ್ಲಿ ಬರಗಾಲ ಬಿದ್ದು, ವಿಧವೆ ಗಂಗಮ್ಮ ಮುಪ್ಪಿನ

ತಂದೆಯೊಂದಿಗೆ ಜೀವನೋಪಾಯಕ್ಕಾಗಿ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ಬಿದನೂರಿಗೆ ಬರುತ್ತಾರೆ. ಅಲ್ಲಿ ಇವರು ಊರಿನ ಹೊರ ವಲಯದಲ್ಲಿರುವ ಹಿರೇಮಠದಲ್ಲಿ ಆಶ್ರಯ ಪಡೆದುಕೊಂಡು ಅಲ್ಲಿಯ ಮಠಾಧೀಶ ವಿರೂಪಾಕ್ಷಯ್ಯನವರ ಸೇವೆಮಾಡಿಕೊಂಡು ಬಾಳುತ್ತಿರುವಾಗ ಮಠದಲ್ಲಿಯೇ ಮಡಿವಾಳಪ್ಪನವರಿಗೆ ಜನ್ಮ ನೀಡುತ್ತಾಳೆ. ಸತ್ಯವನ್ನು ತಿಳಿಯದ ಜನ ಇವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡಿದರು ಎಂಬ ವಂದತಿಯೊಂದು ಇದೆ.[೨೧] ಮಡಿವಾಳಪ್ಪನವರು, ಗಂಗಮ್ಮ-ವಿರೂಪಾಕ್ಷಯ್ಯ ಇವರ ಉದರದಲ್ಲಿ ಜನಿಸಿದರು ಎಂಬವಂದಂತಿಯಿತ್ತು.

ಆದರೆ ಮಡಿವಾಳಪ್ಪನವರನ್ನು ಕುರಿತು ಬರೆಯಲಾದ 'ಶ್ರೀಗುರು ಮಡಿವಾಳ ದೇವರ ನಿಜಲೀಲಾ ಕಾವ್ಯ' ವೆಂಬ ಅಪ್ರಕಟಿತ ಪುರಾಣ ಕೃತಿಯಲ್ಲಿ ಇವರ ತಂದೆಯ ಹೆಸರು ಶಂಕರಯ್ಯ ಎಂದು ಕಾಣಿಸಲಾಗಿದೆ.[೨೨] ಪುರಾಣದಲ್ಲಿ ಮಡಿವಾಳಪ್ಪನವರ ಹುಟ್ಟನ್ನು ಹೀಗೆ ವಿವರಿಸಲಾಗಿದೆ; ದೇವಲೋಕದಲ್ಲಿ ಗಂಧರ್ವ ದಂಪತಿಗಳಿಬ್ಬರು ಅವಸರದಿಂದ ಬರುತ್ತಿರುವಾಗ ಕಾಲಭೈರವನಿಗೆ ಪಾದ ಸೋಂಕುತ್ತದೆ. ಈ ಅಪರಾಧವೇ ಕಾರಣವಾಗಿ ಅವರಿಬ್ಬರೂ ಶಾಪ ಪಡೆದುಕೊಂಡು ಪೊಡವಿಯಲ್ಲಿಜನಿಸುವರು. ಶಾಪಕ್ಕೆ ಪರಿಹಾರವಾಗಿ ಶಿವನೇ ಬಂದು ಅವರ ಉದರದಲ್ಲಿಜನಿಸುವನೆಂದು ಒಪ್ಪಂದವಾಗುತ್ತದೆ. ಈ ಕಡೆ ಭೂಲೋಕದಲ್ಲಿ ಬಿದನೂರಿನ ಹಿರೇಮಠದಲ್ಲಿ ಮಡಿವಾಳಯ್ಯ ಮತ್ತು ಚಂಗುಳಿ ಎಂಬ ದಂಪತಿಗಳಿದ್ದು, ಅವರಿಗೆ ಬಹಳ ದಿನಗಳವರೆಗೆ ಮಕ್ಕಳಾಗಿರುವುದಿಲ್ಲ, ಅವರು ಶಿವನನ್ನು ಪೂಜಿಸಿ, ಕಾಡಿ, ಬೇಡಿ ಗಂಡು ಮಗುವೊಂದನ್ನು ಪಡೆದು ಶಂಕರಯ್ಯನೆಂದು ಹೆಸರಿಡುತ್ತಾರೆ. ಶಂಕರಯ್ಯ ತಾರುಣ್ಯಕ್ಕೆ ಬರಲು ನಾಗಮ್ಮನೆಂಬ ಕನ್ಯೆಯೊಂದಿಗೆ ವಿವಾಹವಾಗುತ್ತದೆ. ಹೀಗೆ ಶಾಪಗ್ರಸ್ತ ಗಂಧರ್ವರಾದ ದಂಪತಿಗಳು ಭೂಲೋಕದಲ್ಲಿ ಶಂಕರಯ್ಯ-ನಾಗಮ್ಮ ಎಂಬ ದಂಪತಿಗಳಾಗಿ ಸಂಸಾರ ಸುಖದಲ್ಲಿ ಮೈ ಮರೆತಿರುವಾಗ ಚಿಣಮಗೇರಿ ಗುಡ್ಡದ ಮಹಾಂತ ಸ್ವಾಮಿಗಳು ಬಂದು ನಿಮ್ಮ ಉದರದಲ್ಲಿ ಗಣೇಶ್ವರನು ಹುಟ್ಟಿ ಬರುವನೆಂದು ಆಶೀರ್ವದಿಸುತ್ತಾರೆ. ಅದರಂತಯೇ ನಾಗಮ್ಮ ಬಸುರಿಯಾಗುತ್ತಾಳೆ. ಒಂದು ದಿನ ರಾತ್ರಿ ದೇವತೆಗಳು ಯಾರಿಗೂ ಕಾಣದಂತೆ ಬಂದು ಪರಮ ಶಿಶುವನ್ನು ನಾಗಮ್ಮನ ಮಗ್ಗುಲೊಳಿಟ್ಟು ಅದೃಶ್ಯರಾಗುತ್ತಾರೆ.[೨೩] ಈ ಮಗುವೇ ಮಹಾಯೋಗಿ ಮಡಿವಾಳೇಶ್ವರರೆಂದು ವಿವರಿಸಲಾಗಿದೆ. ಈ ಮೇಲಿನ ಕಥನ ಅವಾಸ್ತವ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ಇಲ್ಲಿ ನಮೂದಿಸಲ್ಪಟ್ಟಿರುವ ಹೆಸರುಗಳ ಬಗ್ಗೆ ಒಂದು ಕುತೂಹಲ ಮೂಡದೇ ಇರಲಾರದು. ಈ ಪುರಾಣ ಕರ್ತೃವಿನ ಪ್ರಕಾರ ಮಡಿವಾಳಪ್ಪನವರ ವಂಶಾವಳಿ ಬೇರೆ ಹಾದಿಯನ್ನು ಹಿಡಿಯುತ್ತದೆ.

ಮಡಿವಾಳಯ್ಯ-------------- ಚಂಗುಳಿದೇವಿ

ಶಂಕರಯ್ಯ----------------ನಾಗಮ್ಮ

ಮಡಿವಾಳಪ್ಪ

ಈ ಎರಡು ತಲೆಮಾರಿನ ಕಥೆಯ ಸತ್ಯಾಸತ್ಯತೆಗಳು ಚರ್ಚೆಗೆ ಆಹಾರವಾಗುತ್ತವೆ. ಎಸ್.ಎಮ್.ಹಿರೇಮಠರು ಪ್ರಸ್ತುತ ಪುರಾಣವನ್ನು ಆಧರಿಸಿ 'ಇಲ್ಲಿಯವರೆಗೆ ಯಾರು ಹೇಳದಿದ್ದ ಮಡಿವಾಳಪ್ಪನವರ ತಂದೆ-ತಾಯಿಯ ಹೆಸರನ್ನು ಈ ಕವಿ ಮೊದಲ ಬಾರಿಗೆ ಹೆಸರಿಸಿದ್ದಾನೆ' ಎಂದು ಅಭಿಪ್ರಾಯಪಡುತ್ತಾರೆ.[೨೪] ಪುರಾಣದಲ್ಲಿನ ಸಂಗತಿಗಳನ್ನು ಐತಿಹಾಸಿಕ ಆಧಾರವೆಂದು ಪರಿಗಣಿಸುವುದು ಸೂಕ್ತವೆನಿಸಲಾರದು. ಮಡಿವಾಳಪ್ಪನವರ ಹುಟ್ಟಿನ ಸಮಸ್ಯೆ ಪ್ರಸ್ತುತ ಪುರಾಣ ಕೃತಿಯಿಂದ

ಪರಿಹಾರವಾಗುವುದಿರಲಿ ಇನ್ನಷ್ಟು ಜಟಿಲವಾಗತೊಡಗುತ್ತದೆ. ಇವರ ತಂದೆ ದುಂಡಪ್ಪ ಬಗಲಿ ಅಥವಾ ಶಂಕರಯ್ಯ ಎಂಬುವವರಾಗಿದ್ದರು ಎಂಬುದಕ್ಕೆ ಯಾವುದೇ ಗಟ್ಟಿಯಾದ ಆಧಾರಗಳು ದೊರೆಯುವುದಿಲ್ಲ. ಆದ್ದರಿಂದ ಮಡಿವಾಳಪ್ಪನವರ ಬಗೆಗೆ ಅಲ್ಲಲ್ಲಿ ಬಿಡಿ ಲೇಖನಗಳನ್ನು ಬರೆದ ವಿದ್ವಾಂಸರು ಜನವದಂತಿಗಳನ್ನೆ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ಸ್ವೀಕರಿಸಿದ್ದಾರೆ. 'ಗಂಗಮ್ಮಎಂಬಬಾಲ ವಿಧವೆಯೊಬ್ಬಳು ತನ್ನ ಮುಪ್ಪಿನ ತಂದೆಯೊಂದಿಗೆ ಗುಲಬರ್ಗಾ ಜಿಲ್ಲೆಯ ಬಿದನೂರ ಗ್ರಾಮಕ್ಕೆ ಬಂದು ನೆಲೆಸುವಳಂತೆ. ಈ ನಡುವೆ ಗಂಗಮ್ಮನವರತಂದೆ ಮರಣ ಹೊಂದುತ್ತಾರೆ. ಇದರಿಂದ ಅನಾಥೆಯಾದ ಗಂಗಮ್ಮ ಆ ಊರಿನ ಮಲ್ಲಿಕಾರ್ಜುನಪ್ಪ ಗೌಡರ ಆಶ್ರಯಕ್ಕೆ ಬರುತ್ತಾಳೆ. ಹೀನ ಜನಗಂಗಮ್ಮನವರ ಕುರಿತು ಇಲ್ಲಸಲ್ಲದ ಮಾತುಗಳನ್ನಾಡುತ್ತಾರೆ. ಇದರಿಂದ ಬೇಸತ್ತು ಅವಳು ಆತ್ಮ ಹತ್ಯೆ ಮಾಡಿಕೊಳ್ಳಲು ಹೋಗುತ್ತಾಳೆ. ಅಷ್ಟರಲ್ಲಿ ಊರಿನ ಹಿರೇಮಠದ ಪಟ್ಟಾಧ್ಯಕ್ಷರಾದ ವಿರೂಪಾಕ್ಷಯ್ಯನವರು ಅವಳನ್ನು ಸಾವಿನ ದವಡೆಯಿಂದ ಪಾರು ಮಾಡುತ್ತಾರೆ. ಸ್ವಾಮಿಗಳು ಮಾಡಿದ ಉಪಕಾರಕ್ಕೆ ಗಂಗಮ್ಮ ಮಾರುಹೋಗುತ್ತಾಳೆ. ಪರಸ್ಪರ ಅವರಲ್ಲಿ ಪ್ರೀತಿ ಬೆಳೆದು ಇದರ ಫಲವಾಗಿ ಬಸುರಾಗಿ ಮಡಿವಾಳಪ್ಪನವರನ್ನು ಹೆತ್ತಳು'[೫೫]ಎಂಬುದು ಒಂದು ಅಭಿಪ್ರಾಯವಾದರೆ, ಇನ್ನೊಂದು ಕಡೆ ಇದೇ ಘಟನೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಹೀಗೆ ವಿವರಿಸಲಾಗಿದೆ. 'ಗಂಗಮ್ಮನಿಗೆ ಚಿಣಮಗೇರಿ ಮಠದ ಪಟ್ಟಾಧಿಕಾರಿಗಳು ಒಮ್ಮೆ ದರ್ಶನ ನೀಡಿ ತಿನ್ನಲು ಬಾಳೆ ಹಣ್ಣೊಂದನ್ನು ಕೊಟ್ಟು ಇದನ್ನು ವಿರುಪಾಕ್ಷಯ್ಯನವರೊಂದಿಗೆ ಹಂಚಿಕೊಂಡು ತಿನ್ನುವುದಕ್ಕೆ ಹೇಳಿದರಂತೆ ಅದರಂತೆ ಅವಳು ಹಣ್ಣನ್ನು ವಿರೂಪಾಕ್ಷಯ್ಯನವರೊಂದಿಗೆ ಹಂಚಿಕೊಂಡು ತಿನ್ನುತ್ತಾಳೆ. ಅದರ ಫಲವಾಗಿ ಅವರಿಬ್ಬರಲ್ಲಿ ಕಾಮನೆ ತಲೆದೋರಿ ಅವರು ಪರಸ್ಪರ ಒಬ್ಬರನ್ನೊಬ್ಬರು ಬಯಸುತ್ತಾರೆ. ಈ ಕೂಡುವಿಕೆ ಫಲವಾಗಿ ಗಂಗಮ್ಮ ಗರ್ಭ ಧರಿಸುತ್ತಾಳೆ. ಹೀಗೆ ಹುಟ್ಟಿದ ಮಗನೇ ಮಡಿವಾಳಪ್ಪನೆಂದು ವಿವರಿಸಲಾಗಿದೆ.'[೫೬]ಮಡಿವಾಳಪ್ಪನವರು ತಮ್ಮ ವಚನದಲ್ಲಿ ತಾಯಿ ವೀರಶೈವ ಧರ್ಮದ ಗಂಗಮ್ಮ ತಂದೆ ಬಿದನೂರಿನ ಹಿರೇಮಠದ ಒಡೆಯ ವಿರೂಪಾಕ್ಷ ಸ್ವಾಮಿ ಎಂದು ಹೇಳಿಕೊಂಡಿದ್ದಾರೆ. ಅನಾಥಳಾದ ವಿಧವೆ ಗಂಗಮ್ಮ, ವಿರುಪಾಕ್ಷಸ್ವಾಮಿಯ ಸೇವೆ ಮಾಡಿಕೊಂಡು ಮಠದಲ್ಲಿದ್ದಾಗ ಇವಳಿಗೆ ಮಡಿವಾಳಪ್ಪ ಹುಟ್ಟಿದ್ದುಎಂದು ಉಲ್ಲೇಖಿಸಲಾಗಿದೆ.[೫೭] ಸ್ವತಃ ಮಡಿವಾಳಪ್ಪನವರೇ ತಮ್ಮ ಹುಟ್ಟಿಗೆ ವಿರೂಪಾಕ್ಷಯ್ಯನವರು ಕಾರಣವೆಂದು ಅಧಿಕೃತವಾಗಿ ಹೇಳಿಕೊಂಡಿದ್ದಾರೆ.

ಜಾರತನವ ಮಾಡಿದೆನಮ್ಮ ಜಂಗಮನೊಡಗೂಡಿ ಎಂಬ ಪದದ ಕೊನೆಯಲ್ಲಿ

ಅಂಗಲಿಂಗದ ಸಂಗ ಬಿಸಿದನ

ನಿಸ್ಸಂಗ ನಿರಾಳ ಮಾಡಿದನ

ಶಿವಲಿಂಗ ಶಂಭೋ ರಸಿಕನ

ಅಂಗದೊಳಡಗಿ ಬೈಲಾದನ

ಗುರು ಬಿದನೂರ ವಿರೂಪಾಕ್ಷನ

ಆತನ ಉದರದಿ ಮಡಿವಾಳ ಜನಸಿದನ

➢ ಮಡಿವಾಳಪ್ಪನವರಿಂದ ನಡೆದ ಪವಾಡಗಳು:-

ಶರಣಬಸಪ್ಪ – ಮಡಿವಾಳಪ್ಪರಿಬ್ಬರಿಗೂ ಅನ್ಯೋನ್ಯ ಸಂಬಂಧ. ವಯಸ್ಸು ಮತ್ತು ಭಾವನೆಗಳ ಕಾರಣವಾಗಿ ತಂದೆ-ಮಗನ ವಾತ್ಸಲ್ಯ. ದಿನನಿತ್ಯ ಇಬ್ಬರೂ ಸೇರಿ ಅಲ್ಲೂ ಜ್ಞಾನ ದಾಸೋಹ, ಅನ್ನದಾಸೋಹಗಳನ್ನು ನಡೆಸುತ್ತಾರೆ. ಊರ ಹೊರಗಿನ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಡಿವಾಳಪ್ಪನ ವಾಸ್ತವ್ಯ. ಅರಳಗುಂಡಿಗಿ ಮಲ್ಲಣ್ಣಗೌಡರ ತಂಗಿ ಭಾಗಮ್ಮ. ಇವಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಕುಷ್ಠರೋಗ ಕಾಣಿಸಿಕೊಂಡಿದ್ದು, ಮನೆಯವರು ಇವಳನ್ನು ಊರಾಚೆಯ ತೋಟದಲ್ಲಿ ಇಟ್ಟಿರುತ್ತಾರೆ. ಕ್ರಮೇಣ ಇವಳಿಗೆ ಮಡಿವಾಳಪ್ಪನವರ ಪರಿಚಯವಾಗಿ ಅವರು ತಮ್ಮ ದೈವೀಶಕ್ತಿಯಿಂದ ಇವಳ ರೋಗವನ್ನು ಗುಣಪಡಿಸುತ್ತಾರೆ. ಇದರಿಂದ ಪ್ರಭಾವಿತಳಾದ ಈಕೆ ಇವರ ಶಿಷ್ಯತ್ವವನ್ನು ಸ್ವೀಕರಿಸಿ ಆರಾಧಿಸಲು ತೊಡಗುತ್ತಾಳೆ.[೨೮] ಇವರಿಬ್ಬರ ಗುರು-ಶಿಷ್ಯ ಸಂಬಂಧವು ಆತ್ಮೀಯವಾಗಿ ವೃದ್ಧಿಸುವದನ್ನು ಕಂಡ ಕುಹಕಿಗಳು ಪವಿತ್ರ ಸಂಬಂಧಕ್ಕೆ ಬೇರೆ ಅನರ್ಥ ಹಚ್ಚಲು ತೊಡಗುತ್ತಾರೆ. ಈಗಾಗಲೆ ಮಡಿವಾಳಪ್ಪ - ಶರಣ ಬಸಪ್ಪರಿಬ್ಬರ ಕೀರ್ತಿಯು ಸುತ್ತಲ್ಲೆಲ್ಲ ಪಸರಿಸಿರುತ್ತದೆ. ಇವರ ಉತ್ಕರ್ಷವನ್ನು ಕಂಡು ತಾಳದ ಮತ್ತು ಮೊದಲೊಮ್ಮೆ ಅಯ್ಯಾಚಾರ ಪ್ರಸಂಗದಲ್ಲಿ ಮುಖಭಂಗಿತರಾಗಿದ್ದ ಹಳಿಪ್ಯಾಟಿ ಬಸಯ್ಯನು ಏನಾದರೂ ದೋಷ ಆರಿಸಿ ಆಡಿಕೊಳ್ಳುವಲ್ಲಿ ನಿರತನಾಗುತ್ತಾನೆ. ಕೆಲವೊಂದು ದುಷ್ಕರ್ಮಿಗಳನ್ನು ಸೇರಿಸಿಕೊಂಡು ಭಾಗಮ್ಮ ಮಡಿವಾಳಪ್ಪನಿಗೆ ಅನೈತಿಕ ಸಂಬಂಧ ಕಲ್ಪಿಸಿ ಇಲ್ಲ ಸಲ್ಲದ ಮಾತುಗಳನ್ನು ಹಬ್ಬಿಸುತ್ತಾನಷ್ಟೇ ಅಲ್ಲ ಊರಿನ ಮುಂಗೋಪಿ ಗೌಡನಾದ ಮಲ್ಲಣ್ಣನ ಕಿವಿ ತುಂಬುತ್ತಾನೆ. ಇದರಿಂದ ಕುಪಿತನಾದ ಗೌಡ, ಹಿಂದು ಮುಂದು ನೋಡದೆ ಮಡಿವಾಳಪ್ಪನ ಕೊಲೆಗೈಯಬೇಕೆಂದು ಸಂಚು ಹೂಡುತ್ತಾನೆ.

ಶರಣಬಸಪ್ಪನವರಿಗೆ ಅದ್ಹೇಗೋ ವಿಷಯ ತಿಳಿದು ಆಗಬಹುದಾದ ಅನರ್ಥ ತಪ್ಪಿಸಲು ಪ್ರಯತ್ನಿಸುತ್ತಾರೆ. ಭಾಗಮ್ಮನಿಗೆ ವಿಷಯ ಗೊತ್ತಾಗಿ ಅವಳು ತಡಮಾಡದೆ ಮಡಿವಾಳಪ್ಪನನ್ನು ಕಂಡು ವಿಷಯ ತಿಳಿಸಿ, ಅವರು ಅಲ್ಲಿಂದ ಪಾರಾಗುವಂತೆ ವಿನಂತಿಸಿಕೊಳ್ಳುತ್ತಾಳೆ. ಕೊಲೆ, ಸುಲಿಗೆಯಂತಹ ಗೊಡ್ಡು ಬೆದರಿಕೆಗೆ ಸೊಪ್ಪು ಹಾಕದ ಮಡಿವಾಳಪ್ಪ ತಮಗೇನು ಆಗದೆಂದು, ಆದ್ದರಿಂದ ಭಾಗಮ್ಮ ಹೆದರುವ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಆದರೂ ಮುಗ್ಧ ಭಾಗಮ್ಮ ಅನಾವಶ್ಯಕ ದೊಂಬಿ ಗಲಭೆಗಳಿಗೆ ಹೆದರಿ ಮಡಿವಾಳಪ್ಪನನ್ನು ಕುರಿತು, 'ನೀವು ಇಲ್ಲಿಂದ ಹೊರಟುಹೋದರೆ ಶರಣಬಸಪ್ಪನವರಿಗೆ ಸ್ವಲ್ಪ ಮಟ್ಟಿಗಾದರೂ ಅಪಾಯತಪ್ಪಿ, ರಕ್ತಪಾತದಂಥ ದುರ್ಘಟನೆ ಸಂಭವಿಸುವುದು ನಿಲ್ಲುತ್ತದೆ. ಆದ್ದರಿಂದ ದಯವಿಟ್ಟು ಅರಳುಗುಂಡಿಗೆ ತೊರೆಯಬೇ:ಕೆಂದು' ಪರಿ ಪರಿಯಾಗಿ ಬೇಡಿಕೊಳ್ಳುತ್ತಾಳೆ. ಕೊನೆಗೆ ಮಡಿವಾಳಪ್ಪ ಬಸಯ್ಯ, ಮಲ್ಲಣ್ಣಗೌಡರ ಸಂಚಿಗೆ ಹೆದರದಿದ್ದರೂ ಭಾಗಮ್ಮ ಮತ್ತು ಶರಣಬಸಪ್ಪನವರ ಒಳತಿಗಾಗಿ ಆ ರಾತ್ರಿಯೇ ಅರಳುಗುಂಡಿಗೆ ತೊರೆದು ಪಕ್ಕದ ಕೋಣಸಿರಸಗಿ ಗ್ರಾಮಕ್ಕೆ ತೆರಳುತ್ತಾರೆ.[೨೮] ಅಲ್ಲಿ ಕೆಲವು ದಿವಸ ಇರುವಷ್ಟರಲ್ಲಿ, ಕೊಲೆಗಡುಕರು ಇವರ ಸುಳಿವನ್ನು ತಿಳಿದುಕೊಂಡು ಅಲ್ಲಿಗೂ ಬರಲು ಹವಣಿಸುತ್ತಾರೆ. ಅಷ್ಟರಲ್ಲಿ ಭಾಗಮ್ಮನಿಗೆ ವಿಷಯ ಗೊತ್ತಾಗಿ, ಅತ್ಯಂತ ಗುಪ್ತವಾಗಿ ಮಡಿವಾಳಪ್ಪನನ್ನು ಕಂಡು ಅಲ್ಲಿಂದಲೂ ಅವರು ತಪ್ಪಿಸಿಕೊಂಡು ಹೋಗಲು ನೆರವಾಗುತ್ತಾಳೆ.[೨೯] ಮಡಿವಾಳಪ್ಪವರನ್ನು ಕೊಲೆ ಮಾಡಬೇಕು. ಶರಣಬಸಪ್ಪನವರನ್ನು ಅರಳಗುಂಡಿಗೆ ತೊರೆಯುವಂತೆ ಮಾಡಬೇಕೆಂದೆಲ್ಲಾ ವೈರತ್ವ ಸಾಧಿಸಿದ್ದ ಮಲ್ಲಣ್ಣಗೌಡ ತನ್ನ ಬಾಳಿನ ಇಳಿವಯಸ್ಸಿನಲ್ಲಿ ಪರಿವರ್ತಿತನಾಗಿ, ಪಶ್ಚಾತ್ತಾಪ ಪಟ್ಟು ಮಡಿವಾಳಪ್ಪನವರ ಆಸರೆಗೆ ಬಂದು ನಿಲ್ಲುತ್ತಾನೆ. ಜನವದಂತಿಯ ಪ್ರಕಾರ ಮಡಿವಾಳಪ್ಪನವರನ್ನು ವಿರೋಧಿಸಿದ್ದಕ್ಕಾಗಿ ಗೌಡನಿಗೆ ಕುಷ್ಠರೋಗ ತಗಲುತ್ತದೆ. ಈ ಕಾರಣವಾಗಿ ಊರವರು ಗೌಡರ ಇಡೀ

ಕುಟುಂಬವನ್ನು ಬಹಿಷ್ಕರಿಸುತ್ತಾರೆ. ಊರ ಹೊರಗೆ ದಬ್ಬಲ್ಪಟ್ಟ ಗೌಡನಿಗೆ ತಪ್ಪಿನ ಅರಿವಾಗುತ್ತದೆ. ಆಗ ಭಾಗಮ್ಮನ ಬಳಿಗೆ ಹೋಗಿ ಕ್ಷಮೆ ಕೇಳಲು ಅವಳು ಕಡಕೋಳ ಮಠದ ಪರಿಸರಕ್ಕೆ ಅಣ್ಣನ ಕುಟುಂಬವನ್ನು ಕರೆತರುತ್ತಾಳೆ. ಮಡಿವಾಳಪ್ಪ ತಮ್ಮ ದೈವೀಶಕ್ತಿಯಿಂದ ಇವರ ರೋಗ ಕಳೆದರಂತೆ, ಅಂದಿನಿಂದ ಗೌಡರ ಪರಿವಾರ ಶಾಶ್ವತವಾಗಿ ಮಠದಲ್ಲಿ ನೆಲೆಸಿತು ಎಂಬ ಸಂಗತಿ ಅನೂಚಾನವಾಗಿ ಹೇಳಿಕೊಂಡು ಬರಲಾಗುತ್ತದೆ.[೭೦]

ಈ ರೀತಿಯ ವದಂತಿಗಳಿಗೆ ಯಾವದೇ ತಾತ್ವಿಕ, ವಾಸ್ತವಿಕ ಆಯಾಮಗಳೂ, ಇಂಥ ಘಟನೆಗಳು ತಮ್ಮ ಗರ್ಭದಲ್ಲಿ ಸಾಧ್ಯವೆನಿಸಬಹುದಾದ ಚಾರಿತ್ರಿಕ ಸಂಗತಿಗಳನ್ನು ರೂಪ ಬದಲಿಸಿಕೊಂಡು ಹಿಡಿದಿಟ್ಟಿರುತ್ತವೆ. ಈ ಎಲ್ಲ ಹೇಳಿಕೆಗಳ ನಡುವೆ ಇರುವ ವಾಸ್ತವ ಸಂಗತಿಯೆಂದರೆ, ಭಾಗಮ್ಮ ಆದಿಯಾಗಿ ಮಲ್ಲಣ್ಣಗೌಡನ ಪರಿವಾರ ಕಡಕೋಳ ಮಠದಲ್ಲಿ ಬಂದು ನೆಲೆಸಿದ್ದು, ಮುಂದೆ ಗೌಡನ ಮಕ್ಕಳು ಮಠದ ಮೇಲ್ವಿಚಾರಣೆ ವಹಿಸಿಕೊಂಡದ್ದು. ಅದರಲ್ಲೂ ವಿಶೇಷವಾಗಿ ಬಸಲಿಂಗಮ್ಮ ಮತ್ತು ಭಾಗಮ್ಮರಂತೂ ತಮ್ಮ ಉಳಿದ ಬದುಕನ್ನು ಕಡಕೋಳ ಮಠ ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ್ದು ಗಮನಸೆಳೆಯುತ್ತದೆ. ಭಾಗಮ್ಮ ಮಡಿವಾಳಪ್ಪನವರ ವ್ಯಕ್ತಿತ್ವಕ್ಕೆ ಹೊಳಪನ್ನು ತಂದುಕೊಟ್ಟವಳು. ಅರಳಗುಂಡಿಗೆ ಗೌಡರದು ಅವಿಭಕ್ತ ಕುಟುಂಬ. ಒಂದೇ ಸೂರಿನಡಿ ಹಲವಾರು ತಲೆಮಾರುಗಳು ಕೂಡಿ ಬಾಳುತ್ತಿದವು. ನತದೃಷ್ಟ ಭಾಗಮ್ಮ ಹದಿಹರೆಯಕ್ಕೆ ಬರುವಷ್ಟರಲ್ಲಿ ರೋಗಕ್ಕೆ ತುತ್ತಾಗಿ ಊರವರಿಂದ ಬಹಿಷ್ಕರಿಸಲ್ಪಟ್ಟು ಅನಾಥಳಾದ ಸಂದರ್ಭದಲ್ಲಿ ಮಡಿವಾಳಪ್ಪನವರು ಮೃದು ಸ್ವಭಾದವಳಾದ ಅವಳನ್ನು ಕಾಪಾಡಿದರು. ಸಣ್ಣ ಮಟ್ಟ ರೋಗಗಳ ಬಗೆಗೂ ಅಪಾರ ಹೆದರಿಕೆ ಮೌಢ್ಯ ಬೆಳೆಸಿಕೊಂಡಿದ್ದ ಅಂದಿನ ಗ್ರಾಮ್ಯಪರಿಸರ ಭಾಗಮ್ಮ ನಂಥವರ ಬದುಕಿಗೆ ಮಾರಕಪ್ರಾಯವಾದದ್ದು ಆಶ್ಚರ್ಯವೇನಲ್ಲ. ಮಡಿವಾಳಪ್ಪನವರ ಸಹಾನುಭೂತಿ, ಸಹಾಯಹಸ್ತ ಇವಳನ್ನು ಕರೆದು ಕಾಪಾಡಿರದಿದ್ದರೆ ಭಾಗಮ್ಮ ಇಂದು ಇತಿಹಾಸದ ತೆಕ್ಕೆಗೆ ಒದಗಿ ಬರುತ್ತಿರಲಿಲ್ಲ. ಈಕೆ ಮಡಿವಾಳಪ್ಪನವರ ಶಿಷ್ಯಳಷ್ಟೇ ಅಲ್ಲ ಅವರ ಹಿತಚಿಂತಕಿ, ರಕ್ಷಕಿಯಾಗಿಯೂ ಕಾರ್ಯ ನಿರ್ವಹಿಸುತ್ತಾಳೆ. ಅರಳಗುಂಡಿಗೆಯಲ್ಲಿರುವಾಗ ಗುರುವನ್ನು ಕೊಲೆಗಡುಕರಿಂದ ರಕ್ಷಿಸುವರೊಂದಿಗೆ, ಅವರು ಭೂಗತರಾಗುವಂತೆ ವ್ಯವಸ್ಥೆ ಮಾಡಿ, ಅಲ್ಲಿಂದಲ್ಲೆ ಸಾಹಿತ್ಯ ಚಟುವಟಿಕೆಗಳು ನಡೆಯುವಂತೆ ಮಾಡಿದ ಚತುರೆ ಇವಳು.

- ಒಂದು ಸಲ ಮಡಿವಾಳಪ್ಪನವರು ಚಿಂಚೋಳಿ ತಾಲ್ಲೂಕಿನ ಸಾಲೇಗಾಂವ ಗ್ರಾಮಕ್ಕೆ ಹೋಗಿದ್ದರಂತೆ. ಅಲ್ಲಿ ಗೋಸಾಯಿ ಬಾಬಾನೆಂಬ ಮಾಂತ್ರಿಕನಿದ್ದು. ಅವನ ಬಳಿ ಮಾಟದ ಮಂಚವೊಂದಿರುತ್ತದೆ. ಬಾಬಾನ ಹೊರತು ಯಾರೇ ಆ ಮಂಚದ ಮೇಲೆ ಮಲಗಿಕೊಂಡರೂ ಬೆಳಗಾಗುವುದರಲ್ಲಿ ಅವರು ಸಾವನ್ನಪ್ಪುತ್ತಿದ್ದರಂತೆ. ತನ್ನ ಮಾಂತ್ರಿಕ ಶಕ್ತಿಯಿಂದಾಗಿ ಹೀಗೆ ಆತ ಎಷ್ಟೋ ಜನರನ್ನು ಬಲಿ ತೆಗೆದುಕೊಂಡಿದ್ದಾನೆಂಬ ಸುದ್ದಿ ಮಡಿವಾಳಪ್ಪನವರಿಗೆ ತಿಳಿದು, ಅವರು ಗೋಸಾಯಿ ಬಾಬಾನನ್ನು ಕಂಡು ಇಂಥ ಕ್ಷುಲ್ಲಕ ವಿದ್ಯೆ ಬಿಡಬೇಕೆಂದು ತಿಳಿಸಿ ಹೇಳಿದರಂತೆ. ಅಲ್ಪ ವಿದ್ಯೆಯ ಅಹಂಕಾರಕ್ಕೆ ಬಲಿಯಾದ ಬಾಬಾ ಭಂಡವಾದಕ್ಕಿಳಿದು ಶಕ್ತಿ ಇದ್ದರೆ ಮಂಚದ ಮೇಲೆ ಮಲಗಿ ತೋರಿಸಬೇಕೆಂದು ಮಡಿವಾಳಪ್ಪನವರನ್ನೇ ಆಹ್ವಾನಿಸುತ್ತಾನೆ. ಬಾಬಾನ ಸವಾಲನ್ನು ಸ್ವೀಕರಿಸಿದ ಇವರು ಇಡಿ ರಾತ್ರಿ ಮಂಚದ ಮೇಲೆ ಮಲಗಿ ಜೀವಂತವಾಗಿ ಹೊರ ಬಂದದ್ದು ಕಂಡು ಬಾಬಾನ ಧಿಮಾಕಿನ ಚೀಲಹರಿದು ಹೋಗುತ್ತದೆ. ಕೊನೆಗೆ ಆತ ಸೋಲನ್ನೊಪ್ಪಿಕೊಂಡು ಮಂಚವನ್ನು ಅವರಿಗೆ ಅರ್ಪಿಸಿದನೆಂದು, ಭಕ್ತಾದಿಗಳು ಮೆರವಣಿಗೆಯೊಂದಿಗೆ ಮಂಚವನ್ನು ತಂದು ಕಡಕೋಳ ಮಠಕ್ಕೆ ತಂದು ಒಪ್ಪಿಸಿರುವರೆಂದು, ಇಂದಿಗೂ ಕಡಕೋಳ ಮಠದಲ್ಲಿ ಪುರಾತನ ಮಂಚವೊಂದಿದ್ದು ಅದು ಗೋಸಾಯಿ ಬಾಬಾನ ಮಂಚವೆಂಬ ಪ್ರತೀತಿ ಇದೆ.[೭೧]

೮. ಜೇವರಗಿ ತಾಲೂಕಿನ ಚೆನ್ನೂರಿನ ಜಲಾಲ ಸಾಹೇಬರ ಜೀವನ ಮತ್ತು ಪವಾಡಗಳು:-

- **ಜಲಾಲಸಾಹೇಬರ ಜೀವನ:-**

ಜಲಾಲಸಾಹೇಬರು ಸಗರನಾಡಿನ ಅವಧೂತ ಮತ್ತು ಸೂಫಿ ಪರಂಪರೆಯ ಪ್ರತೀಕವಾಗಿ ಬಾಳಿ ಹೋಗಿದ್ದಾರೆ. ಮಡಿವಾಳಪ್ಪನವರನ್ನು ಗುರುವೆಂದು ಒಪ್ಪಿಕೊಂಡು ಅವರ ಅಂಕಿತದಿಂದಲೇ ತತ್ವಪದಗಳನ್ನು ಬರೆದು ಕವಿ ಎನಿಸಿಕೊಂಡಿದ್ದಾರೆ. ಇವರು ಚನ್ನೂರಿನ ಜಲಾಲಸಾಹೇಬರೆಂದೇ ಪ್ರಸಿದ್ಧಿಗೆ ಬಂದಿರುವದರಿಂದ ಇಲ್ಲಿಯವರೆಗೆ ಗುಲಬರ್ಗಾ ಜಿಲ್ಲಯ ಜೇವರ್ಗಿ ತಾಲೂಕಿನ ಚನ್ನೂರನ್ನು ಇವರ ಜನ್ಮ ಗ್ರಾಮವೆಂದು ಭಾವಿಸಲಾಗಿತ್ತು. ಆದರೆ ನನ್ನ ಕ್ಷೇತ್ರಕಾರ್ಯದಿಂದ ಇವರ ಜನ್ಮ ಸ್ಥಳ ಚಿತ್ತಾಪೂರ ತಾಲೂಕಿನಲ್ಲಿರುವ 'ಅಣಕ ಸೂಗೂರು' ಎಂದು ತಿಳಿದುಬಂದಿಂದೆ. ಜನನ, ಬಾಲ್ಯ-ವಿದ್ಯಾಭ್ಯಾಸ ಮುಂತಾದವುಗಳನ್ನು ಅಣಕಸೂಗೂರಿನಲ್ಲಿ ಮುಗಿಸಿ ನಡು ಹರೆಯದಲ್ಲಿ ಹುಟ್ಟೂರನ್ನು ತೊರೆದು ಚನ್ನೂರಿಗೆ ಬರುತ್ತಾರೆ. ಹೀಗೆ ಚನ್ನೂರಿಗೆ ಬರಲು ಜನತೆ ಹೇಳುವ ಕಾರಣ ಹೀಗಿದೆ. ಈ ಹೊತ್ತಿಗಾಗಲೆ ಜಲಾಲಸಾಹೇಬರು ತಮ್ಮ ನಡೆ ನುಡಿಯಿಂದಾಗಿ ಜನಮಾನಸದಲ್ಲಿ ಸಂತ ಸಿದ್ಧಿ ಪುರುಷರೆಂದು ಹೆಸರುವಾಸಿಯಾಗಿದ್ದರಂತೆ. ಸಾಮನ್ಯ ಜನತೆಯು ತಮ್ಮ ಕಷ್ಟ ಕೋಟಲೆಗಳನ್ನು ಜಲಾಲರ ಎದಿರು ಹೇಳಿಕೊಂಡು ಅವುಗಳಿಗೆ ಪರಿಹಾರ ಪಡೆದುಕೊಂಡು ಹೋಗುತ್ತಿದ್ದರು. ಜಲಾಲಸಾಹೇಬರ ತಂದೆ ನಬಿಸಾಬ, ತಾಯಿ ನಬೂಮ್ಮಾಬಿ. ನಬಿಸಾಬರು ಆಚಾರವಂತ ಮುಸ್ಲಿಂ ಮನೆತನಕ್ಕೆ ಸೇರಿದವರಾಗಿದ್ದು. ಅಣಕಸೂಗೂರಿನ ಮುಸ್ಲಿಂ ಬಂಧುಗಳಿಗೆ ಗುರುಗಳಾಗಿಯೂ, ಮಸೀದಿಯ ಮೌಲ್ವಿ (ಮುಖ್ಯ ಅರ್ಚಕರು)ಗಳು ಆಗಿದ್ದರಂತೆ.[೨] ಜಲಾಲರು ತಂದೆ ತಾಯಿಗಳಿಗೆ ಏಕೈಕ ಸಂತಾನವಾಗಿದ್ದರು. ಹೆತ್ತವರ ಕಣ್ಮಣಿಯಾಗಿ ಬೆಳೆದ ಇವರು ನಾಲವರದ ಗಾಂವಠಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಾರೆ. ಶಾಲೆಯ ಬಿಡುವಿನ ವೇಳೆಯಲ್ಲಿ ಅದೇ ಊರಿನ ಕೋರಿಸಿದ್ದೇಶ್ವರ ಮಠದಲ್ಲಿ ಆಟವಾಡಿಕೊಂಡೂ ಇರುತ್ತಿದ್ದರಂತೆ.

ಬಾಲಕ ಜಲಾಲರು ಹಾಜರಿ ಕೊಡುವವರೆಗೆ ಶಾಲೆಯಲ್ಲಿದ್ದು. ಹಾಜರಿ ಕೊಡುವುದೆ ತಡ ಪಕ್ಕದ ಮಠಕ್ಕೆ ಓಡಿ ಹೋಗಿ ಅಲ್ಲಿಯ ಸ್ವಾಮಿಗಳೊಂದಿಗೆ ಹೊತ್ತು ಕಳೆಯುತ್ತಿದ್ದರಂತೆ. ಮಠದಲ್ಲಿ ಶ್ರಾವಣಮಾಸದಲ್ಲಿ ನಡೆಯುವ ಪುರಾಣ, ಪ್ರವಚನ, ಭಜನೆಗಳಲ್ಲಿಯೂ ವಿಶೇಷ ಆಸಕ್ತಿವಹಿಸುತ್ತಿದ್ದರು. ಹೀಗಾಗಿ ಸಹಜವಾಗಿಯೇ ಇವರು ಗಾಂವಠಿ ಶಾಲೆಯಲ್ಲಿ ಉರ್ದು ಕಲೆತರೆ ಮಠದ ಪರಿಸರದಲ್ಲಿ ಕನ್ನಡ, ಸಂಸ್ಕೃತಗಳನ್ನು ಕಲೆತು ಅದರಲ್ಲೂ ವಿಶೇಷವಾಗಿ ವೀರಶೈವ ಸಾಹಿತ್ಯ, ವಚನ ಸಾಹಿತ್ಯವನ್ನು ಇವರು ಅಭ್ಯಷಿಸಿದರೆಂಬ ಹೇಳಿಕೆ ಇದೆ. ಶರಣ ಸಾಹಿತ್ಯದ ಗಾಢ ಪ್ರಭಾವವನ್ನು ಇವರ ಸಾಹಿತ್ಯದಲ್ಲಿ ಗುರುತಿಸಬಹುದು. ಹೀಗೆ ಅಭ್ಯಾಸ ಮಾಡುತ್ತಲೆ ಪ್ರೌಢ ವಯಸ್ಸಿಗೆ ಬರುತ್ತಾರೆ. ತಂದೆ, ತಾಯಿ, ಹಿರಿಯರು ಸೇರಿ ಅದೇ ಊರಿನ ಇಮಾಮಬೀ ಎಂಬ ಸುಶೀಲ ಕನ್ಯೆಯೊಂದಿಗೆ ಇವರ ವಿವಾಹ ಮಾಡುತ್ತಾರೆ. ಸುಮಧುರ ದಾಂಪತ್ಯದ ಫಲವಾಗಿ ಕೆಲವೇ ವರ್ಷಗಳಲ್ಲಿ ಜಲಾಲರಿಗೆ ಇಬ್ಬರು ಗಂಡು ಮಕ್ಕಳು ಜನಿಸುತ್ತಾರೆ. ಜೇಷ್ಠ ಪುತ್ರನಿಗೆ ಹುಸೇನಸಾಹೇಬನೆಂದು, ಎರಡನೇ ಮಗನಿಗೆ ತಂದೆಯ ನೆನಪಿಗಾಗಿ ನಬಿಸಾಹೇಬನೆಂದು ಹೆಸರಿಡುತ್ತಾರೆ.

ಮುಂದುವರೆದಂತೆ ಜಲಾಲಸಾಹೇಬರಿಗೆ ಸಾಂಸಾರಿಕ ಬದುಕಿಗಿಂತ ಅಧ್ಯಾತ್ಮಿಕ ಬದುಕು ಸೆಳೆಯತೊಡಗುತ್ತದೆ. ಅದೇ ವೇಳೆಯಲ್ಲಿ ಕೂಡಲೂರ ಬಸವಲಿಂಗಪ್ಪನವರ ಕೀರ್ತಿ ಸುತ್ತಲೂ ಹಬ್ಬಿರಲು ಸಾಕು. ಬಸವಲಿಂಗ ಶರಣರ ವ್ಯಕ್ತಿತ್ವ ಜಲಾಲರನ್ನು ಆಕರ್ಷಿಸುತ್ತದೆ. ಆಂದಿನಿಂದ ಜಲಾಲರು ಬಸವಲಿಂಗ ಶರಣರ ಹಿಂಬಾಲಿಸ ತೊಡಗಿದರಲ್ಲದೆ, ಅವರಿಂದ ದೀಕ್ಷೆ

ಪಡೆದುಕೊಳ್ಳಲು ಬಯಸಿದರೆಂದು, ಶರಣರಾದರೂ ಬೇಡಿದಾಕ್ಷಣ ಗುರುದೀಕ್ಷೆ ನೀಡಲಾಗದು ಎಂದು ಹೇಳಿ ಜಲಾಲರನ್ನು ಅಧ್ಯಯನ ಅನುಸಂಧಾನಕ್ಕೆ ತೊಡಗಿಸಿದರೆಂದು ತಿಳಿದು ಬರುತ್ತದೆ.

- **ಜಲಾಲಸಾಹೇಬರು ದೀಕ್ಷೆಪಡೆದುಕೊಂಡದ್ದು:-**

ಸುಮಾರು ೧೨ ವರ್ಷ ಜಲಾಲರು ಕೂಡಲೂರ ಬಸವಲಿಂಗಪ್ಪನವರ ಸಂಗದಲ್ಲಿ ಸತತ ಅನುಸಂಧಾನಗೈದು, ಅವರೊಟ್ಟಿಗೆ ಅನುಭಾವ ಮಾರ್ಗದಲ್ಲಿ ಕ್ರಮಿಸುವುದಾಗಿ ತೀವ್ರ ಆಸಕ್ತಿ ತೋರಿಸಿದ ನಂತರವೇ ಬಸವಲಿಂಗಪ್ಪನವರು ದೀಕ್ಷೆ ನೀಡಿದರೆಂದು ತಿಳಿದುಬರುತ್ತದೆ. ಇಲ್ಲಿಂದ ಜಲಾಲರು ಸಂಪೂರ್ಣ ಶರಣಸಿದ್ಧಾಂತದಲ್ಲಿ ಸೇರಿ ಪ್ರಾಯೋಗಿಕವಾಗಿ ಶರಣರಂತೆ ಬದುಕು ನಡೆಸುವಲ್ಲಿ ನಿರತರಾಗುತ್ತಾರೆ. ವೀರಶೈವದ ಜೀವಪರ ಸಿದ್ಧಾಂತಗಳು ಇವರನ್ನು ಎಷ್ಟರ ಮಟ್ಟಿಗೆ ಪ್ರಭಾವಿಸಿದವೆಂದರೆ ತಮ್ಮ ಧರ್ಮಪತ್ನಿಯಾದ ಇಮಾಮಬಿಯನ್ನು ಶರಣಮಾರ್ಗದತ್ತ ಕರೆದೊಯ್ಯುತ್ತಾರೆ. ಜಲಾಲರ ವ್ಯಕ್ತಿತ್ವಕ್ಕೆ ದೃಢತೆ ತಂದುಕೊಟ್ಟವರೇ ಇವರ ಧರ್ಮಪತ್ನಿ ಇಮಾಮಬಿ. ಈಕೆ ಪತಿಯ ಹೆಜ್ಜೆಯಲ್ಲಿ ಹೆಜ್ಜೆ ಹಾಕಿದ ಸಾಧ್ವಿಶಿರೋಮಣಿ.[೬೩]ಗಂಡ ಶಿವಭಕ್ತರಾದುದನ್ನುಗೌರವಿಸುವದಷ್ಟೇ ಅಲ್ಲ ತಾನು ಅವರಂತಾಗಲು ಸತತ ಪ್ರಯತ್ನಿಸುತ್ತಾಳೆ. ಆಧ್ಯತೆ ಇಲ್ಲದಿರಲಿಲ್ಲ. ಅಥವಾ ಗಂಡನ ಪಾಡಿಗೆ ಗಂಡನನ್ನು ಬಿಟ್ಟು ತಟಸ್ಥಳಾಗುಳಿಯುವ ಸಾಧ್ಯತೆಯು ತಳ್ಳಿ ಹಾಕುವಂತಿರಲಿಲ್ಲ. ಆದರೆ ಜಲಾಲರ ವ್ಯಕ್ತಿತ್ವ ಎಂಥದಾಗಿತ್ತು ಎಂಬುದನ್ನು ಇಲ್ಲಿ ಮನವರಿಕೆ ಮಾಡಿಕೊಳ್ಳಬಹುದು.

ಬಸವಲಿಂಗ ಶರಣರು ಜಲಾಲರಿಗೆ ದೀಕ್ಷೆ ಕೊಟ್ಟದ್ದನ್ನು ಕಂಡು ಪ್ರೇರೇಪಿತಳಾಗಿ ತನಗೂ ಗುರುಕರುಣೆಯಾಗಬೇಕೆಂದು ಬಯಸಿದಳಂತೆ. ಆಗ ಬಸವಲಿಂಗಪ್ಪನವರು ಇಮಾಮಬಿಯನ್ನು ಕುರಿತು ನಿನ್ನ ಗಂಡನೇ ಅನುಗ್ರಹ ಕೊಡುವಷ್ಟು ಸಮರ್ಥನಾಗಿದ್ದಾನೆ. ಆತನಿಂದಲೇ ದೀಕ್ಷೆ ಪಡೆದುಕೊಳ್ಳಲು ಅಡ್ಡಿಯಿಲ್ಲ ಎಂದರಂತೆ ಬಸವಲಿಂಗ ಶರಣರು. ಇದನ್ನ ತಿಳಿದ ಇಮಾಮಬಿ ಅಂದಿನಿಂದ ಗುರುದೀಕ್ಷೆಗಾಗಿ ಜಲಾಲರನ್ನು ಪೀಡಿಸತೊಡಗುತ್ತಾಳೆ. ಜಲಾಲರಾದರೋ ದೀಕ್ಷಾರ್ಥಿಯ ಭಾವ ಪಕ್ವವಾಗುವವರೆಗೂ ಕಾಯುತ್ತಾರೆ. ಇಮಾಮಬಿಯನ್ನು ಅನೇಕ ಪರೀಕ್ಷೆಗಳಿಗೆ ಒಡ್ಡಿದರೆಂದು, ಒಂದು ಸಲವಂತೂ ಬಾವಿಯಿಂದ ನೂರೊಂದು ಕೊಡ ಬಿಡದಂತೆ ನೀರು ಸೇದಿ ಮಠಕ್ಕ ಬಂದವರಿಗೆ ಕೊಡಬೇಕು, ಮತ್ತು ಸೇದುವದು ಮುಗಿಯುವವರೆಗೂ ಬಾಗಿದ ಬೆನ್ನು ಎತ್ತಬಾರದೆಂದು ಸವಾಲು ಹಾಕಿದರಂತೆ.

ಇಮಾಮಬಿ ಛಲಬಿಡದ ತ್ರಿವಿಕ್ರಮನಂತೆ ಬಾಗಿದ ಬೆನ್ನನ್ನು ತುಸುಸೋಂಕಿಸದೆ ನೂರೊಂದು ಕೊಡ ನೀರು ಸೇದಿ ಸೈ ಎನಿಸಿಕೊಳ್ಳುತ್ತಾಳೆ. ಸತಿಯ ಶ್ರದ್ಧೆಗೆ ಮೆಚ್ಚಿದ ಜಲಾಲರು ಗುರುದೀಕ್ಷೆ ದಯಪಾಲಿಸಿದರೆಂದು ಹೇಳಿಕೆ ಇದೆ.[೬೪] ಈ ಘಟನೆಯ ಸತ್ಯಾಸತ್ಯತೆ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕಿಂತ ಇಂಥವುಗಳು ಹುಟ್ಟಿರಬಹುದಾದ ಸಾಧ್ಯತೆಯತ್ತ ಕುತೂಹಲ ಬೆಳೆಸುವದು ಹೆಚ್ಚು ಉಪಯೋಗಕಾರಿಯಾಗಹುದೇನೋ ? ಜಲಾಲರ ಬದುಕಿನ ಸುತ್ತ ಹೆಣೆದುಕೊಂಡಿರುವ ಇಂಥ ಹತ್ತಾರು ದಂತಕಥೆಗಳು, ಹೇಳಿಕೆಗಳು, ಪವಾಡಗಳು ಒಟ್ಟಾರೆ ಅವರೊಬ್ಬ ವಿಲಕ್ಷಣ ವ್ಯಕ್ತಿಯಾಗಿದ್ದರು ಮತ್ತು ಆ ಹೊತ್ತು ಜನಮಾನಸದ ಮೇಲೆ ಅಪಾರ ಪರಿಣಾಮ ಬೀರಿದ್ದರು ಎಂಬುದನ್ನೆ ಧ್ವನಿಸುತ್ತವೆ.

- **ಜಲಾಲ ಸಾಹೇಬರಿಂದ ನೆಡದ ಪವಾಡ:-**

ನೈಜ ವಚನಾನುಸಂಧಾನಿಯಾಗಿದ್ದ ಇವರು ಸ್ವಂತ ಬಸವಪುರಾಣ ಹೇಳಲು ತೊಡಗಿ, ಸುತ್ತಲಿನಿಂದ ಬಂದ ಜನತೆಗೆ ಪುರಾಣ ಮುಗಿದನಂತರ ಪ್ರತಿನಿತ್ಯ ಅನ್ನದಾಸೋಹ ನಡೆಸಿದರು. ಗ್ರಾಮೀಣ ಬದುಕಿನಲ್ಲಿ ಪುರಾಣ- ಪ್ರವಚನ ಇವೆಲ್ಲ

ಚಿಂತನೆಗಳನ್ನು ರೂಪಿಸುವ ಆ ಮೂಲಕ ಜನತೆಯನ್ನು ರುಜು ಮಾರ್ಗದತ್ತ ನಡೆಸುವ ಆಯಾಮಗಳಾಗಿದ್ದವು. ವಿವಿಧ ಜಾತಿ-ಮತ ಅಂತಸ್ತಿನವರು ಒಂದೆಡೆ ಸೇರಿ ಸಾಮೂಹಿಕವಾಗಿ ನಡಸುವ ಈ ಪರ್ವಗಳು ಸಾಮಾಜಿಕ ಸಹಚರ್ಯೆ ಬೆಳೆಸುವುದರೊಂದಿಗೆ ಸಾಂಸ್ಕೃತಿಕ ವೇದಿಕೆಗಳು ಆಗಿದ್ದವು. ಅಂತೆಯೇ ಸುತ್ತಲಿನ ಹಳ್ಳಿಗಳ ಜನರು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ರಾತ್ರಿ ಜಲಾಲರ ಪುರಾಣ ಕೇಳಲು ಬರುತ್ತಿದ್ದರು. ಜನರಿಗೆ ರಾತ್ರಿಯ ಊಟದ ತೊಂದರೆಯಾಗದಂತೆ ತಮ್ಮಲ್ಲಿರುವ ದವಸ ಧಾನ್ಯಗಳನ್ನು ವಿನಿಯೋಗಿಸಿ ಅನ್ನದಾಸೋಹಗೈದುದನ್ನು ಆ ಹೊತ್ತು ಜನತೆ ಬಹುದೊಡ್ಡ ಸಾಧನೆಯೆಂದೆ ಪರಿಗಣಿಸಿರಲು ಸಾಕು. ಆಧ್ಯಾತ್ಮ ದಾಹಿಗಳನ್ನು ಒಂದೆಡೆ ಕಲೆಹಾಕಿ ಅವರಿಂದ ಅನುಭಾವ ಚರ್ಚೆ ನಡೆಸಿ ಜ್ಞಾನ ಪ್ರಸಾರಗೊಳಿಸಬೇಕೆಂಬ ಜಲಾಲರ ಸದ್ದುದ್ದೇಶವನ್ನು ಅರ್ಥ ಮಾಡಿಕೊಳ್ಳದ ಕೆಲವೊಂದು ಪಟ್ಟಭದ್ರಹಿತಾಸಕ್ತರು ಪುರಾಣ ಹೇಳುವುದನ್ನು ವಿರೋಧಿಸುತ್ತಾರೆ. ಜಾತಿಯನ್ನೇ ಬಂಡವಾಳ ಮಾಡಿಕೊಂಡಿದ್ದ ಮತಾಂಧರು ಜಲಾಲರನ್ನು ಕುರಿತು ಮುಸ್ಲಿಂರಾದ ನಿಮಗೆ ಬಸವ ಪುರಾಣ ಹಚ್ಚುವ ಹಕ್ಕು ಇಲ್ಲ ಎಂದರೆ.

ಪರ್ಯಾಯವಾಗಿ ಮುಸ್ಲಿಂ ಮೂಲಭೂತವಾದಿಗಳು ಮಹ್ಮಮ್ಮದೀಯರಾದ ನೀವು ನಮ್ಮ ಧರ್ಮದ ಖುರಾನ ಪಠಿಸುವುದನ್ನು ಬಿಟ್ಟು ಮೂರ್ತಿಪೂಜೆ ಪುರಸ್ಕರಿಸುವ ಹಿಂದೂ ಪುರಾಣಗಳನ್ನು ಹೇಳುವುದು ಧರ್ಮಬಾಹಿರವೆಂದು ಬಂಡೇಳುತ್ತಾರೆ.[೬೫] ಇದರಿಂದ ಜಲಾಲರು ತುಂಬಾ ನೊಂದುಕೊಂಡು ಹಿಂದೂ, ಮುಸ್ಲಿಂ ಮೂಲಭೂತವಾದಿಗಳನ್ನು ಕರೆಸಿ ಜ್ಞಾನಕ್ಕೆ ಜಾತಿಯಿಲ್ಲ, ತತ್ವಕ್ಕೆ ಧರ್ಮಗಳ ಸೀಮೆ ಬೇಕಿಲ್ಲ ಎಂದು ತಿಳಿಸಿ ಹೇಳುತ್ತಾರೆ. ತಮ್ಮ ಉದ್ದೇಶವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾರೆ. ಮತೀಯ ಮೌಢ್ಯಕ್ಕೆ ಬಲಿಯಾದ ಪಟ್ಟಭದ್ರರು ಇವರ ಮಾತಿಗೆ ಬೆಲೆಕೊಡುವುದಿಲ್ಲ. ಜಾತಿಯ ದ್ವೇಷ ಇವರನ್ನು ಕುರುಡರನ್ನಾಗಿಸುತ್ತದೆ. ಜಲಾಲರನ್ನು ಸುತರಾಂ ಪುರಾಣ ನಡೆಸಲು ಬಿಡುವುದಿಲ್ಲ ಜಲಾಲರಿಗಾದರೊ ಹೇಳುತ್ತಿರುವ ಪೂರಾಣವನ್ನು ಪೂರ್ತಿ ಮುಗಿಸಬೇಕೆಂಬ ಬಯಕೆ.

ಊರವರಿಗೆ ಪುರಾಣ ನಿಲ್ಲಿಸಬೇಕೆಂಬ ಛಲ. ಪರಸ್ಪರ ಝಟಾಪಟಿ ನಡೆದು ಕೊನೆಗೆ ಎಲ್ಲರೂ ಸೇರಿ ಒಂದು ನಿರ್ಣಯಕ್ಕೆ ಬರುತ್ತಾರೆ. ಚನ್ನೂರಿನಲ್ಲಿ ಜಲಾಲಸಾಹೇಬರು ಪುರಾಣ ಹೇಳಬೇಕಾದರೆ, ಆಗಿನ ಆಳರಸರಾಗಿದ್ದ ಹೈದ್ರಾಬಾದ ನಿಜಾಮರಿಂದ ಹುಕುಂ ಪತ್ರ (ಅಪ್ಪಣೆ ಪತ್ರ) ತರಬೇಕೆಂದು ತಿಳಿಸುತ್ತಾರೆ. ಆಗ ಗುಲಬರ್ಗಾ, ಬೀದರ, ರಾಯಚೂರ ಜಿಲ್ಲೆಗಳು ನಿಜಾಮ ಇಲಾಖೆಗೆ ಸೇರಿದ್ದು, ಈ ಭಾಗದ ಆಡಳಿತಾತ್ಮಕ ಅಂಶಗಳಲ್ಲಿ ಅವರ ನೇರ ನಿಯಂತ್ರಣವಿರುತ್ತಿತ್ತು. ಹೀಗಾಗಿ ಊರವರ ಒತ್ತಾಯದ ಮೇರೆಗೆ ಜಲಾಲರು ನಿಜಾಮ ನಿಂದ ಹುಕುಂ ಪತ್ರ ತರಲು ಹೈದ್ರಾಬಾದಿಗೆ ತೆರಳುತ್ತಾರೆ. ಯಾವುದೇ ರೀತಿಯ ಸಾರಿಗೆ ಅನುಕೂಲಗಳಿಲ್ಲದಿದ್ದ ಆ ಸಮಯದಲ್ಲಿ ಜಲಾಲರು ತಮ್ಮ ಹಿತಚಿಂತಕರಾದ ನಾಲ್ಕೈದು ಜನರೊಂದಿಗೆ ಸೇರಿಕೊಂಡು ಕಾಲ್ನಡಿಗೆಯಿಂದ ಹೈದ್ರಾಬಾದ ತಲುಪಿ ಅಲ್ಲಿ ನಿಜಾಮನನ್ನು ಕಂಡು ತಮ್ಮ ಅಹವಾಲನ್ನು ಮುಂದಿಡುತ್ತಾರೆ. ಬಸವಣ್ಣನವರ ಜಾತ್ಯಾತೀತ ಮನೋಭಾವನೆ ಮತ್ತು ಅವರ ಹೋರಾಟದಿಂದ ಪ್ರಭಾವಿತರಾದ ತಾವು ಬಸವಪುರಾಣ ಹೇಳಲು ಉತ್ಸುಕರಾಗಿದ್ದು ಇದರಿಂದ ಯಾರಿಗೂ ತೊಂದರೆಯಾಗದೆಂದು, ಆದ್ದರಿಂದ ತಮಗೆ ಪುರಾಣ ಹೇಳಲು ಅಪ್ಪಣೆ ಕೊಡಬೇಕೆಂದು ವಿನಂತಿಸಿಕೊಳ್ಳುತ್ತಾರೆ. ಮೊದಲೇ ಅವರಿವರಿಂದ ಚಾಡಿಮಾತುಗಳಿಗೆ ಕಿವಿಕೊಟ್ಟಿದ್ದ ನಿಜಾಮನು ತನ್ನ ಮತೀಯ ಸಂಕುಚಿತ ಪ್ರವೃತ್ತಿಗೆ ಕಟ್ಟುಬಿದ್ದು ಪುರಾಣ ಹಚ್ಚಲು ಅಪ್ಪಣೆ ಕೊಡಲು ನಿರಾಕರಿಸುತ್ತಾನೆ. ನಿಜಾಮನು ಜಲಾಲರು ದೊಡ್ಡ ಬಂಡಾಯಗಾರರೆಂದು ಬಗೆದು ಸೆರೆಮನೆಯಲ್ಲಿಡುತ್ತಾನೆ. ಜಲಾಲರು ದೊಡ್ಡ ಜಾದುಗಾರರೆಂದು ತಿಳಿಸಿ ಜಿಲ್ಲಾಧಿಕಾರಿಗಳಿಗೆ ಇವರ ಮೇಲೆ ಬಂದೋಬಸ್ತ ನಿಗಾ ಇಡಬೇಕೆಂದು ಹೇಳುತ್ತಾನೆ. ಜಲಾಲರಾದರೋ ನಿರುಪಾಯದಿಂದ ಸೆರೆಮನೆಯಲ್ಲಿಯೇ

ಶಿವಭಜನೆ ಮಾಡುತ್ತ ಕಾಲ ನೂಕತೊಡಗುತ್ತಾರೆ. ಈ ನಡುವೆ ನಿಜಾಮನಿಗೆ ಚರ್ಮವ್ಯಾಧಿಯೊಂದು ಅಂಟಿಕೊಂಡಿದ್ದು, ಹಲವು ಉಪಚಾರಗಳಿಂದಲೂ ರೋಗ ವಾಸಿಯಾಗುವುದಿಲ್ಲ.[೬೬]

ಅದೇ ವೇಳೆಯಲ್ಲಿ ಸೆರಮನೆಯಲ್ಲಿದ್ದ ಜಲಾಲರು ಒಳ್ಳೆಯ ಜನಪದ ವೈದ್ಯರೆಂಬ ಮಾತು ಯಾರಿಂದಲೊ ನಿಜಾಮನಿಗೆ ತಿಳಿದು, ಆತ ಜಲಾಲರನ್ನು ಕರೆಸಿ ತನ್ನ ರೋಗವನ್ನು ತೋರಿಸುತ್ತಾನೆ. ಜಲಾಲರು ತಮ್ಮಲ್ಲಿದ್ದ ಗಿಡ ಮೂಲಿಕೆಗಳಿಂದ ನಿಜಾಮನ ರೋಗ ಕಳೆಯಲು, ಇದರಿಂದ ಸಂತೃಪ್ತನಾದ ನಿಜಾಮನು ಜಲಾಲರನ್ನು ಗೌರವಿಸಿ ತಮ್ಗೆ ಏನು ಬೇಕಾದರೂ ಬೇಡಬಹುದು ಎಂದು ಹೇಳಿದನಂತೆ. ಇದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ಜಲಾಲರು ಬಸವಪುರಾಣ ಹಚ್ಚಲು ಹುಕುಂ ಪತ್ರ ಕೇಳುತ್ತಾರೆ. ನಿಜಾಮನಿಗೆ ಧರ್ಮ ಸಂಕಟ, ಒಂದು ಕಡೆ ಧರ್ಮದ ಬಗೆಗಿನ ದುರಭಿಮಾನ. ಇನ್ನೊಂದೆಡೆ ಜಲಾಲರ ಸಹೃದಯ ವ್ಯಕ್ತಿತ್ವ, ಇವೆರಡರ ನಡುವೆ ಒದ್ದಾಡಲು ಜಲಾಲರು ಗ್ರಹಿಸಿ ನಿಜಾಮನನ್ನು ಕುಳ್ಳಿರಿಸಿ ಕೊಂಡು ಹಿಂದೂ ಮುಸ್ಲಿಂ ತತ್ವಗಳಲ್ಲಿನ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆ.

ಧರ್ಮದ ಮೂಲಭೂತ ಗುರಿ ಉದ್ದೇಶಗಳನ್ನು ಖುರಾನ್‌ನಲ್ಲಿರುವ ಶ್ಲೋಕಗಳೊಂದಿಗೆ ಸಾಧಾರಣವಾಗಿ ವಿವರಿಸಿ ನಿಜಾಮನ ಮನಸ್ಸಿನ ಮೈಲಿಗೆ ಕಳೆದು ಸತ್ಯದ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾರೆ. ಏಕೆಂದರೆ ಖುರಾನ್‌ನ ಉದ್ದಕ್ಕೂ ಜನಪರ ಆಶಯಗಳನ್ನು ಪ್ರತಿನಿಧಿಸುವ ವಾಕ್ಯಗಳಿವೆ. ಉದಾಹರಣೆಗಾಗಿ 'ಒಳಿತಿನತ್ತ ಆಹ್ವಾನಿಸುವ ಒಳ್ಳೆಯದನ್ನೆ ಆಜ್ಞಾಪಿಸುವ, ಕೆಡಕುಗಳನ್ನು ವಿರೋಧಿಸುವ ಒಂದು ಸಮಾಜ ನಿಮ್ಮೊಳಗೆ ಇರಬೇಕು. ಅವರೇ ವಿಜಯ ಸೌಭಾಗ್ಯವನ್ನು ಹೊಂದುವರು. ಆಗ ಮಾನವ ಜನಾಂಗಕ್ಕಾಗಿ ನಿಯೋಜಿತರಾದ ಉತ್ತಮ ಸಮುದಾಯ ನೀವಾಗಿರುತ್ತೀರಿ, ನೀವು ಒಳಿತನ್ನು ಆಜ್ಞಾಪಿಸುತ್ತೀರಿ, ಕೆಡುಕನ್ನು ವಿರೋಧಿಸುತ್ತೀರಿ. ಅಲ್ಲದೆ ಅಲ್ಲಾಹನಲ್ಲಿ ಅಚಲವಾದ ವಿಶ್ವಾಸವನ್ನು ಇಡುತ್ತೀರಿ'. ಎಂಬ ಇಂಥ ಸೂಕ್ತಿಗಳನ್ನು ಶರಣರ ವಚನಗಳನ್ನು ಸಮೀಕರಿಸಿ ಹೇಳಿರಲು ಸಾಕು. ಕೊನೆಗೆ ನಿಜಾಮನು ಜಲಾಲಸಾಹೇಬರ ಸರಳ ಸಜ್ಜನಿಕೆ ಮತ್ತು ಅಪಾರ ಪಾಂಡಿತ್ಯದ ಎದುರು ತಲೆಬಾಗಿ ಹುಕುಂ ಪತ್ರ ಕೊಟ್ಟು ಚನ್ನೂರಿಗೆ ಕಳುಹಿಸುತ್ತಾನೆ. ನೆನಪಿನ ಕಾಣಿಕೆಯಾಗಿ ನಿಜಾಮನು ಸನ್ಮಾನ ಪತ್ರದೊಂದಿಗೆ ಕುರ್ಚಿಯೊಂದನ್ನು ಕೊಟ್ಟು ಕಳುಹಿಸಿದನೆಂಬ ಪ್ರತೀತಿ ಇದೆ.[೬೭] ನಿಜಾಮನಿಂದ ಪತ್ರ ಪಡೆದು ಊರಿಗೆ ಬಂದ ಜಲಾಲರು ಊರಮುಂದಿನ ಚಿನ್ನಮ್ಮಾಯಿ ಮಠದಲ್ಲಿ ಪುರಾಣ ಪೂರ್ತಿ ಹೇಳಿ ಮುಗಿಸಿದರೆಂದು ತಿಳಿಬರುತ್ತದೆ. ಈ ಘಟನೆ ಜಲಾಲರ ಮಾನವೀಯ ಮೌಲ್ಯ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ.[೬೮]

ಜಲಾಲ ಸಾಹೇಬರು ಕಡಕೋಳ ಮಡಿವಾಳಪ್ಪನವರಿಂದ ಪ್ರಭಾವಿತರಾದದ್ದು. ಅಪರೂಪದ ಸಂಗತಿ. ಹಾಗೇ ನೋಡಿದರೆ ಜಲಾಲರು ಮಡಿವಾಳಪ್ಪನವರಿಂದ ಗುರುಬೋಧೆ ಅಥವಾ ದೀಕ್ಷೆ ಪಡೆದುಕೊಂಡು ಶಿಷ್ಯರಾಗಲಿಲ್ಲವಾದರೂ, ಇಬ್ಬರ ನಡುವೆ ನಿಕಟ ಬಾಂಧವ್ಯವಿದ್ದದ್ದು ಖಚಿತವಾಗಿ ತಿಳಿದುಬರುತ್ತದೆ. ವಯಸ್ಸಲ್ಲಿ ಜಲಾಲರು ಮಡಿವಾಳಪ್ಪನವರಿಗಿಂತ ಹಿರಿಯರಾಗಿದ್ದರು ಎಂಬುದು ಸಾಮಾನ್ಯವಾದ ಅಭಿಪ್ರಾಯ. ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಉಭಯರು ಆ ಹೊತ್ತು ತಮ್ಮ ತಮ್ಮ ವಲಯದಲ್ಲಿ ಜನಪ್ರಿಯರಾಗಿದ್ದಂತೆ ತೋರುತ್ತದೆ. ಬಸವಪುರಾಣ ಹಚ್ಚುವ ಗಲಭೆ ಸಂದರ್ಭದಲ್ಲಿ ಜಲಾಲರು ಬಸವಳಿದಿದ್ದ ವೇಳೆಗೆ ಮಡಿವಾಳಪ್ಪನವರು ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದರು. ಹೀಗಾಗಿ ಜಲಾಲುದ್ದೀನ್‌ರಿಗೆ ಮಡಿವಾಳಪ್ಪನವರನ್ನು ಕಾಣುವ ತವಕ ವಿರುತ್ತದೆ. ಅದೇ ರಿತಿ ಮಡಿವಾಳಪ್ಪನವರಿಗೂ ಜಲಾಲರ ಕೀರ್ತಿವಾರ್ತೆ ತವಕಿಸುತ್ತ

ಒಂದು ಸಲ ಎದುರುಬದುರು ಭೇಟಿಯಾಗುತ್ತಾರೆ. ನೋಡಲು ಅದ್ವೈತಿಯಂತೆ ಕಾಣುತ್ತಿದ್ದ ಮಡಿವಾಳಪ್ಪನವರನ್ನು ಕಂಡು ಜಲಾಲಸಾಹೇಬರು.

ಜಂಗಮನಾಗಬೇಕಾದರೆ ಮನ

ಲಿಂಗ ಮಾಡಿಕೊಂಡಿರಬೇಕು ಅಂಗದ ಗುಣ ಅಳಿದಿರಬೇಕು । ತಾ

ನಿಸ್ಸಂಗನಾಗಿ ಶರಣರ ಕೂಡಿಕೊಂಡಿರಬೇಕು ॥

ಶಿವಾಯನಮಯನುತಲುಸಿರು

ಹೋಗುದು ಕಂಡು ಹಿಡಿದಿರಬೇಕು

ಹಂಬಲಿಸಿದ ಘೋಷ ಝೇಂಕಾರ ತಾಳವಿರಬೇಕು

ದಾಸನಾಗಿ ಮೇ ಕೀಲು ತೊಳೇದು ಒಳಗೆ ತಾ ಕುಳಿತಿರಬೇಕು ॥

ಅಂಗದ ಗುಣಗಳು ಎಲ್ಲವು ಅಳಿದು

ಇಡಾ-ಪಿಂಗಳ ಖೂನವಿಟ್ಟಿರಬೇಕು

ಕಂಗಳನು ತಾ ಮುಚ್ಚಿ ನಿರತನಾಗಿ

ಮಂಗಳ ಪ್ರಭೆಯೊಳು ಮುಳುಗಿರಬೇಕು ॥

ಹಸಿರು ಹಳದಿ ಕೆಂಪು ಬಿಸಲಿನ ಖೂನ

ಹಸುರಾಗಿ ಹೊಳಪು ತಿಳಿ ತೋರಿರಬೇಕು

ಹೊಸ ಧಾತು ಕೋಲು ಮಿಂಚು ಹಿಡಿದು

ಈಶ ಗುರುಲಿಂಗೇಶನೊಳು ತಾನರಿತು ನೆಡದಿರಬೇಕು ॥೬

ಎಂದು ಪದವೊಂದನ್ನು ಕಟ್ಟಿ ಹಾಡುತ್ತಾರೆ. ವೀರಶೈವ ತತ್ವ-ಸಿದ್ಧಾಂತಗಳ ದಟ್ಟವಾದ ಪರಿಚಯವಿರುವ ಜಲಾಲರು ಜಂಗಮತ್ವದ ಕುರುಹು ಮತ್ತು ಶ್ರೇಷ್ಠತೆಯನ್ನು ಎತ್ತಿ ತೋರಿಸಿದಾಗ ಮಡಿವಾಳಪ್ಪನವರು ಸಹಿತ ಇದೇ ಧಾಟಿಯಲ್ಲಿ ಜಲಾಲರನ್ನು ಕುರಿತು.

ಫಕೀರನಾಗಬೇಕಾದರೆ ಈ ಮನ

ಧಿಕ್ಕಾರ ಮಾಡಿಕೊಂಡಿರಬೇಕೊ

ನಕಾರ ಮಕಾರ ಶಿಕಾರ ವಕಾರ

ಯಕಾರ ಓಂಕಾರ ತಿಳಿದಿರಬೇಕೊ ॥

ಹಸು ತೃಷಿ ವ್ಯಸನವು ಹುಸಿ । ಮನ

ಹಸನ ಮಾಡಿ ವಾಸನೊಗದಿರಬೇಕೊ

ತುಸು ಮಾತ್ರ ಕಳೆ ನಸು ಮಾಸದಲೆ

ಮುಸಲ್ಮಾನನಾಗಿ ಸೋಗಿಸಬೇಕೊ ||

ಸತಿ ಸುತರಂಬೊ ಮೋಹದ ಮಡಕಿಯು
ಗತಿಲಿಂದ ಅತಿ ಸಿರಿವುಳಸಿರಬೇಕೊ
ಕೃತ ಕೂದಲವು ಅತಿಗಳೆದಿ
ಸುಮತಿ ಎಂಬ ಗಡ್ಡ ಬೆಳಸಲಿಬೇಕೊ ||

ಕಾಮ ಕ್ರೋಧ ಮದ ಲೋಭಗಳೆಂಬ
ತಾಮಸ ಗುಣಗಳು ಸುಟ್ಟಿರಬೇಕೋ
ನಾನು ನೇಮಗಳ ಮುಟ್ಟೇನೆಂಬ ದೃಢ
ಪ್ರೇಮದ ಲುಂಗಿ ಉಟ್ಟಿರಬೇಕೊ||

ಸಾಕು ಬೇಕು ಎರಡು ಏಕ ಮಾಡಿತಾ
ರೀಕನಾಗಿ ಕೋಲ್ ಹಿಡಿದಿರಬೇಕೊ
ಲೋಕದೊಳಗೆ ತಾಮೂಕನಾಗಿ ಬಲು
ಜೋಕಿಲಿ ಮನೆ ಮನೆ ನಡೆದಿರಬೇಕೊ ||

ಸತ್ಯವುಳಿದು ಅಸತ್ಯವ ಕಳೆದು
ಖತಲರಾತ್ರಿ ಮಾಡಿರಬೇಕು
ಜೀತ ಪೀರ ಮಾಂತೇಶನ ಭಜಿಸುತ
ನುತಿಸುತಾಲಯದೊಳಾಡಲಿಬೇಕೊ ||[20]

ಜಲಾಲರು ಹೈದ್ರಾಬಾದಿಗೆ ಕಾಲುನಡಿಗೆಯಿಂದ ಹೋಗುವ ಮಾರ್ಗದಲ್ಲಿ ರದ್ದೇವಾಡಗಿ ಎಂಬ ಗ್ರಾಮದಲ್ಲಿ ನಿಮ್ನ ವರ್ಗದ ಭಕ್ತನೊಬ್ಬನ ಬೇಡಿಕಯಂತೆ ಅವನ ಹೊಲದಲ್ಲಿ ಪಾದವಿಟ್ಟರಂತೆ. ಜಲಾಲರು ಪಾದವಿಟ್ಟದ್ದರಿಂದ ಇವರ ರಾಶಿ ಇಮ್ಮಡಿ, ಮುಮ್ಮಡಿ ಹೆಚ್ಚಿತಂತೆ, ಇಂಥ ಹತ್ತಾರು ರೋಚಕ ಪವಾಡಗಳು ಜಲಾಲರು ಲೋಕ ಕಲ್ಯಾಣಕ್ಕಾಗಿ ಮಾಡಿದರು.

- **ಜಲಾಲುದ್ದೀನರ ಮರಣದೊಂದಿಗೆ ಇರುವ ಪವಾಡ:-**

ಬದುಕಿರುವಾಗಲೆ ಪವಾಡ ಪುರುಷರೆಂದು ಬಿಂಬಿಸಲ್ಪಟ್ಟಿದ್ದ ಜಲಾಲರ ಮರಣವನ್ನು ವೈಭವೀಕರಿಸಲ್ಪಟ್ಟಿರುವುದು ಸಾಮಾನ್ಯವೇ ಆಗಿದೆ. ಜನಪದರ ಹೇಳಿಕೆಯ ಪ್ರಕಾರ ಒಂದು ಸಲ ಚನ್ನೂರ ಗ್ರಾಮಕ್ಕೆ ಕಾಲರಾ ಬೇನೆ ಬಂದಿರುತ್ತದೆ. ಊರಿಗೆ ಊರೇ ಬೇನೆಗೆ ಬಲಿಯಾಗಿ ಮಾರಣಹೋಮ ನಡೆಯುತ್ತದೆ. ಇದನ್ನು ಕಂಡು ಜನ ಕಂಗಾಲಾಗಿರುವ ಸಾಧ್ಯತೆ ಇದೆ. ಏಕೆಂದರೆ ಆಗಿನ್ನೂ ಅಲೋಪಥಿಕ್ ವೈದ್ಯ ಪದ್ಧತಿ ಅಷ್ಟಾಗಿ ಪ್ರಸಿದ್ಧಿಗೆ ಬಂದಿರಲಿಲ್ಲ. ಮತ್ತು ಗ್ರಾಮಾಂತರಕ್ಕೆ ಈ ಪದ್ಧತಿ ಮುಟ್ಟಿರಲೂ ಇಲ್ಲ.

ಹೀಗಿರುವಾಗ ಊರವರೆಲ್ಲ ಸೇರಿ ಭಯದಿಂದ ತತ್ತರಿಸಿ ಪವಾಡ ಪುರುಷನೆಂದು ನಂಬಿಕೊಂಡಿದ್ದ ಜಲಾಲಸಾಹೇಬರ ಬಳಿ ಬರುತ್ತಾರೆ. ತಮ್ಮ ಅಳಲನ್ನು ತೋಡಿಕೊಳ್ಳಲು, ಜಲಾಲರು ಅವರನ್ನು ಸಂತೈಸಿ ಆದರ ಜವಾಬ್ದಾರಿ ತಮಗಿರಲಿ ಎಂದು ಹೇಳಿದರಂತೆ. ಅನಂತರ ಜಲಾಲರು ಮರಗಮ್ಮನನ್ನು ಪೂಜಿಸಿ (ಹಳ್ಳಿಗಳಲ್ಲಿ ಕಾಲರಾ, ಪ್ಲೇಗು ಮುಂತಾದ ಬೇನೆಗಳ ಹಾವಳಿಗೆ ಮರಿಗಮ್ಮನ ಹಾವಳಿ ಎಂದು ಹೇಳುವದು ವಾಡಿಕೆ. ಈ ಎಲ್ಲ ಬೇನೆಗಳ ಉಪಟಳಕ್ಕೆ ಕ್ಷುದ್ರ ದೇವತೆಯ ವಕ್ರ ದೃಷ್ಟಿಯೇ ಕಾರಣವೆಂದು ಅವರ ನಂಬಿಕೆ) ಈ ಮರಗಮ್ಮನನ್ನು ಕುರಿತು ನೀನು ನಮ್ಮೂರಿಗೆ ಬರಬೇಡ ಎಂದರಂತೆ. ಅದಕ್ಕೆ ಅವಳು ಜಲಾಲರನ್ನು ಕುರಿತು ನೀನೊಬ್ಬ ನನ್ನಜೊತೆ ಬಂದರೆ ಸಾಕು ನಾ ನಿಮ್ಮೂರಿಗೆ ಬರುವದಿಲ್ಲ ಎಂದಳಂತೆ. ಮರಗಮ್ಮನ ಈ ಷರತ್ತನ್ನು ಒಪ್ಪಿಕೊಂಡು ಜಲಾಲರು ಆ ಕ್ಷಣವೇ ಪ್ರಾಣಬಿಟ್ಟರೆಂದು ಊರ ಜನತೆ ಅತ್ಯಂತ ದುಃಖದಿಂದ ಜಲಾಲರ ಶವವನ್ನು ಮೆರವಣಿಗೆ ಮೂಲಕ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದರೆಂಬ ಪ್ರತೀತಿ ಇದೆ.

ಇನ್ನೊಂದು ಹೇಳಿಕೆಯು ಹೀಗಿದೆ. ಜಲಾಲಸಾಹೇಬರು ಚನ್ನೂರಿನ ಪೋಲಿಸ್ ಗೌಡನಾದ ಗುರುಲಿಂಗಪ್ಪ ಗೌಡನೊಂದಿಗೆ ತುಂಬಾ ಆತ್ಮೀಯವಾಗಿದ್ದರು. ಇವರಿಬ್ಬರ ನಡುವೆ ಅನ್ಯೋನ್ಯ ಬಾಂಧವ್ಯವಿದ್ದು ಮೇಲ್ವರ್ಗದವರು ಇದರಿಂದ ಅಸಮಾಧಾನಗೊಂಡಿದ್ದರಂತೆ. ಇವರ ಅನ್ಯೋನ್ಯತೆ ಕಂಡು ಕೆಂಡಮಂಡಲವಾದರಲ್ಲದೆ ಎಲ್ಲರೂ ಸೇರಿ ಜಲಾಲರನ್ನು ತರಾಟೆಗೆ ತೆಗೆದುಕೊಂಡರಲ್ಲದೆ. ಇತ್ತ ಗುರುಲಿಂಗಪ್ಪನಿಗೂ ಛೀಮಾರಿ ಹಾಕುತ್ತಾರೆ. ಆದರೆ ಇವರಿಬ್ಬರ ಬಾಂಧವ್ಯ ಎಲ್ಲ ವಿರೋಧಗಳನ್ನು ಮೀರಿ ಬೆಳೆಯುತ್ತದೆ. ಗುರುಲಿಂಗಪ್ಪ ಸ್ವಜಾತೀಯ ಬಾಂಧವರನ್ನು ಧಿಕ್ಕರಿಸಿ ಜಲಾಲರೊಂದಿಗೆ ವಾಸಮಾಡತೊಡಗುತ್ತಾನೆ. ಇದನ್ನು ಕಂಡು ಸಹಿಸದ ಗೌಡನ ಕುಲಬಾಂಧವನಾದ ಗೌಡಪ್ಪ ಗೌಡ ಎಂಬುವವನು ಜಲಾಲರನ್ನು ಊರುಬಿಟ್ಟು ಓಡಿಸಲು ಹವಣಿಸುತ್ತಾನೆ. ಅನೇಕ ಕಿರುಕುಳಗಳನ್ನು ಕೊಡುತ್ತಾನೆ. ಜಲಾಲರು ಮಾತ್ರ ಅವೆಲ್ಲವುಗಳನ್ನು ಸಮಾಧಾನದಿಂದ ಸಹಿಸಿಕೊಂಡು ಗೌಡಪ್ಪನನ್ನು ಕುರಿತು ನಾನು ಬಾಳುತ್ತಿರುವುದು ಚನ್ನೂರಿನಲ್ಲಿ ಆದ್ದರಿಂದ ಸಾಯುವವರೆಗೆ ಚನ್ನೂರನ್ನು ಬಿಟ್ಟು ಕದಲುವ ಮಾತೆ ಇಲ್ಲ ಎಂದು ಸವಾಲು ಹಾಕುತ್ತಾರೆ. ಅದಕ್ಕೆ ಗೌಡನು ಜಲಾಲರನ್ನು ಕುರಿತು ನಿಮ್ಮ ಶವಸಂಸ್ಕಾರ ಮಾಡಲು ಚನ್ನೂರಿನಲ್ಲಿ ಸ್ಥಳ ನೀಡುವದಿಲ್ಲ. ಅದು ಹೇಗೆ ಚನ್ನೂರಿನಲ್ಲಿ ನೀವು ಸಾಯುತ್ತೀರಿ ನೋಡೋಣ ಎಂದು ಹೆದರಿಸುತ್ತಾನೆ. ಜಲಾಲರು ಆ ಮಾತು ಕೇಳಿ ನಕ್ಕು ಸುಮ್ಮನಾದರಂತೆ. ಕೆಲವು ದಿನ ಗತಿಸಿದ ಬಳಿಕ ಗೌಡಪ್ಪಗೌಡನು ಕೋರ್ಟಿನಲ್ಲಿ ಖಾಸಗಿ ಕೆಲಸೊಂದಕ್ಕೆ ಹಾಜರಾಗಲು ಸುರಪುರಕ್ಕೆ ಹೋಗುತ್ತಾನೆ.[೨೧]

ಕೇಸಿನ ವಿಚಾರಣೆ ಮೂರು ದಿನಗಳವರೆಗೆ ವಿಸ್ತರಿಸಿಕೊಳ್ಳುತ್ತದೆ, ಅನಿವಾರ್ಯವಾಗಿ ಗೌಡ ಮೂರ್ನಾಲ್ಕು ದಿನ ಸುರಪೂರದಲ್ಲಿ ಉಳಿಯಬೇಕಾಗುತ್ತದೆ, ಇದೇ ಅವಧಿಯಲ್ಲಿ ಜಲಾಲರು ಮರಣ ಹೊಂದುತ್ತಾರೆ. ಗೌಡ ಬರುವಷ್ಟರಲ್ಲಿ ಜಲಾಲಸಾಹೇಬರ ಅನುಯಾಯಿಗಳೆಲ್ಲ ಸೇರಿ ಊರ ಮುಂದಿನ ಬಯಲಿನಲ್ಲಿ ಆಯಕಟ್ಟಿನ ಸ್ಥಳವೊಂದನ್ನು ಆರಿಸಿ ಅಲ್ಲಿಯೇ ಇವರ ಸಮಾಧಿ ಮಾಡುತ್ತಾರೆ. ಶವಸಂಸ್ಕಾರದ ವಿಧಿವಿಧಾನಗಳು ಮುಗಿದ ನಂತರ ಗೌಡನು ಊರಿಗೆ ಮರಳುತ್ತಾನೆ. ಅಷ್ಟರಲ್ಲಿ ಸಮಾಧಿಯ ಪೂಜೆ ಪುನಸ್ಕಾರ ನಡೆದು ಜನತೆ ಭಾವುಕರಾಗಿ ಗೌರವ ಸಲ್ಲಿಸುತ್ತಿರುವದನ್ನು ಕಂಡು ಗೌಡನು ಸುಮ್ಮನಾದನಂತೆ. ಹೀಗೆ ಜಲಾಲರು ತಮ್ಮ ಮರಣದಲ್ಲಿ ಕೂಡ ಪವಾಡ ಶಕ್ತಿಯಿಂದ ಮೆರೆದರು.

ಜೇವರ್ಗಿಯ ಜಲಾಲ ಸಾಹೇಬರು ಸಂಪ್ರದಾಯಸ್ಥ ಮುಸ್ಲಿಂ ಸಂಪ್ರದಾಯಕ್ಕೆ ಸೇರಿದವರಾಗಿದ್ದರು. ಇವರು ಧರ್ಮದಲ್ಲಿಯ ಅಂಧನಂಬಿಕೆಗಳಿಗೆ ಬೆಲೆ ಕೊಡದೇ ಅದರಲ್ಲಿಯ ಸತ್ಯಾಸತ್ಯತೆಯನ್ನು ಮನಗಂಡಿದರು. ಇವರು

ಬಸವಲಿಂಗಪ್ಪನವರಿಂದ ಪ್ರಭಾವಿತರಾಗಿ ಲಿಂಗದೀಕ್ಷೆ ಕೇಳಿದಾಗ ನೀನು ಮೊದಲು ಅಧ್ಯಯನ ಅನುಸಂಧಾನಕ್ಕೆ ಮೊದಲು ತೊಡಗು ತದ ನಂತರ ನಿನಗೇ ಲಿಂಗ ದೀಕ್ಷೆ ದೊರೆಯುವುದೆಂದರು ಅದರಂತೆ ಅವರಿಗೆ ಲಿಂಗ ದಿಕ್ಷೆ ಪ್ರಾಪ್ತಿಯಾಯಿತು.

ಜಲಾಲ ಸಾಹೇಬರ ಪತ್ನಿ ಇಮಾಮ್ಮಬಿ ಅವಳು ಕೂಡ ಪ್ರಭಾವಿತರಾಗಿ ಲಿಂಗದೀಕ್ಷೆ ಪಡೆಯಲು ಈಛಿಸಿದಳು ಬಸವಲಿಂಪ್ಪನವರ ಬೇಡಿದಾಗ ನಿನ್ನ ಗಂಡನೇ ಒಬ ಶರಣನಾಗಿದ್ದಾನೇ ಅವನಿಂದಲೇ ನಿನಗೆ ಲಿಂಗ ದೀಕ್ಷೆ ದೊರೆಯುತ್ತದೆ ಎಂದು ಹೇಳಿದರು. ಮುಂದೆ ಅವಳಿಗೆ ತನ್ನ ಪತಿಯಿಂದಲೇ ಲಿಂಗ ದೀಕ್ಷೆ ದೊರೆಯುತ್ತದೆ. ನಿಜಾಮನ ಆಡಳಿತದ ಕಾಲಾವಧಿಯಲ್ಲಿದ ಜಲಾಲರು ಒಬ್ಬ ಮುಸ್ಲಿಂ ಸಂತನಾಗಿ ಹಿಂದೂ ಮತ್ತು ಮುಸ್ಲಿಂರನ್ನು ಸಮಾನ ದೃಷ್ಟಿಯಿಂದ ಕಂಡರು. ಜನರನ್ನು ಜಾತಿಗಾಗಿ ಹೊಡೆದಾಡದೆ ಆ ಧರ್ಮದ ಮೌಲ್ಯಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ನಿಜಾಮನ ಕಾಲಾವಧಿಯಲ್ಲಿ ಬಸವ ಪುರಾಣವನ್ನು ಪ್ರಾರಂಬಿಸಬೇಕಾದರೆ ನಿಜಾಮನಿಂದ ಹುಕುಂ ಪತ್ರ ತರಬೇಕಾಗಿತ್ತು. ಊರಿನ ಜನ ಒತ್ತಾಯಿಸಿದರು ಈ ಪತ್ರ ತರದೆ ಹಾಗೇ ಪ್ರಾರಂಬಿಸಿದರು. ಊರನಲ್ಲಿ ಮತಿಯಗಲಭೆಗಳು ನಡೆದು ಅದನ್ನು ನಿಲ್ಲಿಸುವ ಸಲುವಾಗಿ ಅವರು ಮಾಡಿರುವ ಒಂದು ಕುತಂತ್ರವಾಗಿತ್ತು.

ಜಲಾಲರು ನಿಜಾಮನಿಂದ ಹುಕುಂ ಪತ್ರ ತರಲು ತನ್ನ ಸಹ ಚರರಿಂದ ಹೊರಟರು. ಇವರಿಗೆ ಆಗದ ಕೆಲವು ಮುಸ್ಲಿಂರು ಆಗಲೇ ಇವರ ಬಗ್ಗೆ ಚಾಡಿ ಹೇಳಿ ನಿಜಾಮನನ್ನು ಉದ್ವೇಗಗೊಳಿಸಿದರು. ನಾಲ್ಕೈದು ದಿನದ ಕಾಲುನಡಿಗೆಯಿಂದ ಹೈದ್ರಾಬಾದಗೆ ತಲುಪಿದರು. ಇವರನ್ನು ಕಂಡ ನಿಜಾಮ ಇವರನ್ನು ಜೈಲಿಗೆ ಅಟ್ಟಿದನು. ನಿಜಾಮನಿಗೆ ಚರ್ಮಕಾಯಿಲೇ ಒಂದಿತ್ತು. ಜಲಾಲರು ಒಬ್ಬ ಜನಪದ ವೈದ್ಯರು ಎಂಬ ಮಾತನ್ನು ಯಾರಿಂದಲೋ ತಿಳಿದ ನಿಜಾಮ ಅವನನ್ನು ಕರೆಯಿಸಿ ಅವನಿಂದ ಔಷದಿಯನ್ನು ಪಡೆದು ಗುಣಮುಖನಾದನು ಗುಣ ಮುಖವಾದ ನಿಜಾಮ ಸಂತೋಷಗೊಂಡು ನಿನಗೇ ಏನು ಬೇಕು ಕೇಳು ಎಂದನು ಆಗ ಹುಕುಂ ಜಪತ್ರ ಕೇಳಿದನು. ಕೊಡಲು ಒಪ್ಪದ ನಿಜಾಮನಿಗೆ ಹಿಂದುಗಳ ಭಗವದಗೀತೆ ಮತ್ತು ಮುಸ್ಲಿಂಮರ ಖುರಾನಿನ ಸಾಮ್ಯತೆಯನ್ನು ಅರ್ಥೈಸಿ ಹೇಳಿದನು. ಅದನರಿತ ನಿಜಾಮ ಹುಕುಂ ಪತ್ರ ನಿಡಿ ನೆನಪಿನ ಕಾಣಿಕೆಯಾಗಿ ಕುರ್ಚಿಯೊಂದನ್ನು ನಿಡಿದ್ದಾನೆ ಇಗಲು ಈ ಕುರ್ಚಿ ಇದೆ ಜಲಾಲ ಸಾಹೇಬರು ಮತ್ತೇ ಚನ್ನೂರಿಗೆ ಬಂದು ಬಸವ ಪುರಾಣವನ್ನು ನಡೆಸಿ ಮುಗಿಸಿದರು. ನಿಜಾಮರ ಕಾಲದಲ್ಲಿ ಹಿಂದು, ಮುಸ್ಲಿಂಮರ ಜಗಳ ಹೊಡೆದಾಟ ಮಿತಿಮಿರಿ ಇತ್ತು ಅವರಲ್ಲಿ ಸಾಮರಸ್ಯವನ್ನು ತರುವುದುರ ಮೂಲಕ ಹೊಡೆದಾಟ ಬಡದಾಟಕ್ಕೆ ಒಂದು ಅಂತ್ಯಹಾಡಿದರು.

೯.ಅಫಜಲಪುರದ ಶ್ರೀ.ಷ.ಬ್ರ.ಮಳೇಂದ್ರ ಶಿವಾಚಾರ್ಯರ ಪವಾಡಗಳು:-

ಪ್ರಥಮ ಪೀಠಾಧಿಕಾರಿಗಳಾಗಿ ಬಂದ ಶ್ರೀ ಷ.ಬ್ರ.ಮಳೇಂದ್ರ ಶಿವಾಚಾರ್ಯರು. ತ್ರಿಕಾಲ ಲಿಂಗ ಪೂಜಾಲೋಲರು ಕ್ರಿಯಾಮೂರ್ತಿಗಳು, ಅಷ್ಟಾವರಣ, ಪಂಚಾಚಾರ, ಷಟ್ ಸ್ಥಲಗಳನ್ನು ಅರುಹು ಕುರುಹಿನಿಂದ ಕರುಣಿಸಿದವರು. ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರರು ಅಫಜಲಪುರಕ್ಕೆ ಭೇಟಿನಿಡಿದಾಗ ಆ ಊರಿನ ವೀರಶೈವರಾದಿಯಾಗಿ ಯಾರು ನೀವು ? ಇಲ್ಲಿಗೇಕೆ ಬಂದಿರಿ.? ನಿಮ್ಮ ಪ್ರಸಾದದ ವ್ಯವಸ್ಥೆ ಹೇಗೆ ? ಎಂದು ವಿಚಾರಿಸದಾದಾಗ, ಗವಿಯಲ್ಲಿಳಿದು ಅನುಷ್ಠಾನಕ್ಕೆ ಕುಳಿತ. ಯಾರೊಬ್ಬರು ಸಮೀಪ ಬರಲಿಲ್ಲ. ಯಾರೂ ಮಾತಾಡಿಸಲಿಲ್ಲ. ಅವರ ಕಡೆಗೆ ಇವರೂ ನೋಡಲಿಲ್ಲ.[೨೧]

ಅಫಜಲಪೂರದಲ್ಲಿ ಹಾಹಾಕಾರವೆದ್ದಿತು. ಮಳೆ ಹೋಗಿ ಮೂರು ವರುಷವಾಗಿತ್ತು. ಅಲ್ಲಿಯೇ ಸಮೀಪದಲ್ಲಿರುವ ಭೀಮಾ ಹೊಳೆಯು ಕೂಡಾ ಬತ್ತಿ ಹೋಗಿತ್ತು. ಕುಡಿಯಲು ನೀರು ಸಿಗದಾಯ್ತು. ಪಶು, ಪಕ್ಷಿ, ಪ್ರಾಣಿಗಳು ನೀರಿಗಾಗಿ

ಪರದಾಡತೊಡಗಿದವು. ದನಕರುಗಳು ಅಂಬಾ ಎಂದು ಕೂಗತೊಡಗಿದವು. ಆಗ ಊರಿನವರೆಲ್ಲರೂ ಕೂಡಿ ಗವಿಯ ಹತ್ತಿರ ಬಂದು ಅನುಷ್ಠಾನಕ್ಕೆ ಕುಳಿತ ಶ್ರೀಗಳಿಗೆ ನಮಸ್ಕರಿಸಿ, ತಂದೆ ಮಳೆ! ಹೋಗಿ ಬರಗಾಲ ಬಿದ್ದಿದೆ, ತಿನ್ನಲಿಕ್ಕೆ ಒಂದಗಳು ಸಹಿತ ಅನ್ನ ಸಿಗದ ಸ್ಥಿತಿ ಉಂಟಾಗಿದೆ. ದನಕರುಗಳು ಚೀರಾಡತೊಡಗಿವೆ. ಕೆಲವು ಜೀವ ಕಳೆದುಕೊಂಡಿವೆ ಎಂದು ಪ್ರಾರ್ಥಿಸಿಕೊಂಡಾಗ ಶ್ರೀ.ಷ.ಬ್ರ. ಮಳೇಂದ್ರ ಶಿವಾಚಾರ್ಯರು ಅನುಷ್ಠಾನವನ್ನು ಮಂಗಳಗೊಳಿಸಿ ಹೊರಬಂದು ಆಕಾಶದೆಡೆಗೆ ಏಕದೃಷ್ಟಿಯಿಟ್ಟು ಬಿಳಿ ಕಂಬಳಿ ಬೀಸಿದರು. ಬಿಳಿ ಮೋಡದಲ್ಲಿಯೇ ಧಾರಾಕಾರ ಮಳೆ ಸುರಿದು ಸಮೃದ್ಧಿಗೊಂಡಿತು.[೨೨] ಶ್ರೀಗಳ ಪವಾಡಶಕ್ತಿ ಅಲ್ಲಿಂದಲೇ ಪ್ರಾರಂಭವಾಯಿತು. ಊರಭಕ್ತರೆಲ್ಲರು ಬಂದು ''ನಮ್ಮನ್ನ ಕ್ಷಮಿಸಿರಿ'' ಎಂದು ಅಂಗಲಾಚಿ ಬೇಡಿಕೊಂಡರು. ನಿಮಗೆ ನಾವ್ಯಾರು ಮಾತಾಡಿಸಲಿಲ್ಲ. ನಿಮ್ಮ ಸಮೀಪ ಬರಲಿಲ್ಲವೆಂದು ಕಂಬನಿಯಿಂದ ಶ್ರೀಗಳ ಚರಣ ತೊಳೆದರು. ಊರಿನವರೆಲ್ಲರೂ ಕೂಡಿ ತಮಗಿರಲು ನಾವು ಮಠಕಟ್ಟಿಸಿ ಕೊಡುತ್ತೇವೆ ಎಂದು ಹೇಳಿದ ಪ್ರಕಾರ ತಿಂಗಳೊಪ್ಪತ್ತಿನಲ್ಲಿಯೇ ಮಠ ಎದ್ದು ನಿಂತಿತು. ಅಲ್ಲಿಂದಲೇ ಊರಿನ ಸರ್ವಧರ್ಮದ ಭಕ್ತರು ಬಂದು ನಿತ್ಯ ದರುಶನ ಪಡೆದುಕೊಳ್ಳುತ್ತಿದ್ದರು.

➢ ಭವರೋಗ ವೈದ್ಯ:-

ಶ್ರೀ. ಷ.ಬ್ರ. ಮಳೇಂದ್ರ ಶಿವಾಚಾರ್ಯರು ಯೋಗ ಬಲ್ಲವರಾಗಿದ್ದರು, ರೋಗ ಬಲ್ಲವರಾಗಿದ್ರು. ದವಾಖಾನೆಗೆ ಹೋಗದ ರೋಗ ಶ್ರೀಗಳೂ ವಾಸಿಮಾಡಿ ಭವರೋಗ ವೈದ್ಯರೆನಿಸಿಕೊಂಡರು. ಅತನೂರಿನ ವ್ಯಕ್ತಿಗೆ ಕಾಮಣಿ ರೋಗ ಆವರಿಸಿಕೊಂಡು ಬಿಟ್ಟಿತ್ತು. ಎಲ್ಲಾ ಕಡೆಗೆ ತೋರಿಸಿ ನಿರಾಸೆಯಾಗಿದ್ದ. ಇನ್ನೇನು ನಾನು ಸಾಯುವುದು ಶತ ಸಿದ್ಧ ಎಂದು ತಿಳಿದುಬಿಟ್ಟಿದ್ದ. ಆತನ ಸುದೈವವೋ ಅಥವಾ ಪೂರ್ವ ಪುಣ್ಯವೋ, ಶ್ರೀಗಳು ರೋಗ ಬಲ್ಲವರು, ಅವರಿಂದ ನಿನ್ನ ರೋಗ ವಾಸಿಯಾಗುತ್ತದೆ. ಅಫಜಲ್‌ಪುರಕ್ಕೆ ಹೋಗಿ ಶ್ರೀಗಳ ದರ್ಶನ ಮಾಡಿಕೋ ಅಂತ ಆ ಊರ ಹಿರಿಯರು ಹೇಳಿದಾಗ, ಆ ವ್ಯಕ್ತಿಗೆ ಉಗುರ ಕಣ್ಣಲ್ಲಿ ಜೀವ ಬಂದಂತಾಗಿ ತನ್ನ ಮಡದಿಗೆ ಕರೆದುಕೊಂಡು ಅಫಜಲ್ ಪುರದ ಮಳೇಂದ್ರ ಮಠಕ್ಕೆ ಶ್ರೀಗಳ ದರ್ಶನ ಮಾಡಿದ.[೨೩] ಶ್ರೀಗಳೂ ಆತನ ಸ್ವರೂಪವನ್ನು ದಿಟ್ಟಿಸಿ ನೋಡಿದರೆ. ಅವರ ನೇತ್ರ ಚಿಕಿತ್ಸೆಯಿಂದ ಅರ್ಧರೋಗ ಪರಿಹಾರವಾಗಿತ್ತು. ಬೆಳಗಾಗುವುದರೊಳಗಾಗಿ ಆತ ನಿರೋಗಿಯಾಗಿದ್ದ. ತಂದೆ! ಮಳೇಂದ್ರ ಶಿವಯೋಗಿ ನೀನು ಸಾಮಾನ್ಯನಲ್ಲ. ಈ ಭವಕೆ ಬಂದ ಭಗವಂತ ನನ್ನ ರೋಗ ಕಳೆದವ ನೀನು, ಕೇವಲ ನೇತ್ರ ದೃಷ್ಟಿಯಿಂದಲೇ ಭವ ರೋಗ ಕಳೆದ ಭವರೋಗ ವೈದ್ಯ ನೀನು ಎಂದು ಸ್ಮರಿಸುತ್ತ ಶ್ರೀ ಮಠದ ಸೇವೆ ಮಾಡುತ್ತ ತನ್ನ ಜೀವನ ಸವೆಸಿದ.

➢ ಕಾಶ್ಮೀರದರಸನಿಗೆ ನೀಡಿದ ಸಂತಾನ ಫಲ:-

ಕಾಶ್ಮೀರದರಸನಿಗೆ ಮದುವೆಯಾಗಿ ಮೂವತ್ತು ವರುಷವಾದರೂ ಮಕ್ಕಳಾಗಿರಲಿಲ್ಲ. ಅಲ್ಲಿ, ಇಲ್ಲಿ ಎಲ್ಲೇಲ್ಲಿ ತೋರಿಸಿಯೂ ಆಗಿತ್ತು. ಅಫಜಲ್ ಪುರದ ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರು ವಾಗ್ಪುರುಷರು, ನೇತ್ರ ಚಿಕಿತ್ಸಕರು, ಭವರೋಗ ವೈದ್ಯರು ಎಂಬ ಸುದ್ದಿಯನ್ನು ತಿಳಿದು ಶ್ರೀಗಳಿಗೆ ಕಾಶ್ಮೀರಕ್ಕೆ ಕರೆಯಿಸಿಕೊಂಡು ಸಕಲ ರಾಜ ಮರ್ಯಾದೆಯಿಂದ ಮೆರವಣಿಗೆಯ ಮುಖಾಂತರ ಅಡ್ಡಪಲ್ಲಕ್ಕಿಯಲ್ಲಿ ಕೂಡಿಸಿ ಅರಮನೆಗೆ ಬರಮಾಡಿಕೊಂಡು ರಾಜರಾಣಿಯರು ಅತಿ ವಿನಮ್ರತೆಯಿಂದ ಶ್ರೀಗಳ ಚರಣಕ್ಕೆ ಹಣೆ ಹಚ್ಚಿದರು. ಮಕ್ಕಳಿಲ್ಲದೆ ನಾವು ಪರಿತಪಿಸುತ್ತೇವೆ. ಎಲ್ಲೇಲ್ಲಿ ತೋರಿಸಿದರೂ ನಿಮಗೆ ಮಕ್ಕಳೇ ಆಗುವುದಿಲ್ಲವೆಂದು ಹೇಳಿದರು. ನಾವು ನಿರಾಶರಾಗಿ ಕುಳಿತಾಗ ಕರ್ನಾಟಕದ ನಾಡಿನಲ್ಲಿ ಕಲಬುರಗಿ ಜಿಲ್ಲೆಯ

ಅಫಜಲ್‌ಪುರದ ಶ್ರೀಮಠದೊಡೆಯರು "ವಾಗ್ಪುರುಷರು" ಅನ್ನುವ ವಿಷಯ ತಿಳಿದು ತಮ್ಮಲ್ಲಿಗೆ ನಾವು ಬರಬೇಕೆನ್ನುವಷ್ಟರಲ್ಲಿ ತಾವು ದರ್ಶನ ನೀಡಿದ್ದೀರಿ ಎಂದು ತಮ್ಮ ಮನದಳಲನ್ನು ತೋಡಿಕೊಂಡರು.

ಶ್ರೀ.ಷ.ಬ್ರ. ಮಳೇಂದ್ರ ಶಿವಾಚಾರ್ಯರು ತಮ್ಮ ಜೋಳಿಗೆಯಲ್ಲಿಯ ಎರಡು ಉತ್ತತ್ತಿಗಳು ತೆಗೆದುಕೊಂಡು ಅವರಿಗೆ ಕೊಡುತ್ತ ರಾಣಿಯ ಉಡಿಯಲ್ಲಿ ಹಾಕಿ. ನೀವಿಬ್ಬರು ಈ ಉತ್ತತ್ತಿಗಳನ್ನು ಸೇವಿಸಿರಿ. ನಿಮಗೆ ಇಬ್ಬರು ಮಕ್ಕಳು ಅವಳಿ ಜವಳಿ ಜನಿಸುತ್ತಾರೆ. ನೀವು ಚಿಂತಿಸುವ ಕಾಲವೀಗ ಸರೆದು ಹೋಯಿತು. ನಿಶ್ಚಿತೆಯಿಂದಿರಿ. ನಾವು ಮತ್ತೆ ಬರುತ್ತೇವೆ ಎಂದು ಹೇಳಿದರು. ರಾಜನು ಶ್ರೀಗಳಿಗೆ ಸಕಲ ಸನ್ಮಾನದೊಂದಿಗೆ ರಾಜ ಮರ್ಯಾದೆಯಿಂದ ಕಾಣಿಕೆಗಳನ್ನಿತ್ತು ಕಳಿಸಿದನು.

ಕೆಲವೇ ದಿವಸಗಳಲ್ಲಿ ರಾಣಿಯು ಗರ್ಭ ಧರಿಸಿದಳು. ನವಮಾಸ ತುಂಬಿ ಅವಳಿ ಜವಳಿ ಒಂದು ಹೆಣ್ಣು ಹಾಗೂ ಗಂಡು ಮಗುವಿಗೆ ಜನ್ಮ ಕೊಟ್ಟ ದಿವಸವೇ ಶ್ರೀ.ಷಬ್ರ. ಮಳೇಂದ್ರ ಶಿವಾಚಾರ್ಯರು ಕಾಶ್ಮೀರಕ್ಕೆ ಆಗಮಿಸಿ, ದೊರೆಗೆ ಹೇಳಿಕಳಿಸಿದಾಗ, ದೊರೆಯು ಸಕಲರಾಜ ವೈಭವದೊಡನೆ ಅರಮನೆಗೆ ಕರೆದುಕೊಂಡು ಬಂದರು.[೨೩] ಅಂದೇ ತಾನೇ ಜನಿಸಿದ ಶಿಶುಗಳು, ಶ್ರೀಗಳಿಗೆ ನೋಡಿದಾಕ್ಷಣವೇ ಎರಡು ಮಕ್ಕಳು ಒಂದೇ ಸ್ವರದಲ್ಲಿ 'ಪೂಜ್ಯ ಗುರುಗಳಿಗೆ ನಮಸ್ಕಾರ' ಎಂದು ಹೇಳಿದಾಗ ಇಡೀ ದರ್ಬಾರವೇ ದಂಗಾಯಿತು. ಇವರೆಂತಹ ಪವಾಡ ಪುರುಷರು. ಇಂದೇ ತಾನೇ ಜನಿಸಿದ ಶಿಶುಗಳೆರಡು ಮಾತಾಡಿದ್ದು ನೋಡಿದರೆ ಇವರು ಸಾಮಾನ್ಯದವರಲ್ಲ, ದೈವಾಂಶಸಂಭೂತರು, ಭೂಲೋಕದ ಕೊಳೆ ಕಳೆಯಲು ಬಂದ ಮಳೇಂದ್ರ ಶಿವಾಚಾರ್ಯರು ಎಂದು ಕೊಂಡಾಡಿದರು.[೨೪]

➢ **ಮಲ್ಲಯ್ಯನ ದರ್ಶನ :-**

ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರು ನಿಂತ ನೀರಾಗಲಿಲ್ಲ ಚಲಿಸುವ ನೀರಾದರು. ಹೀಗೆ ಅವರು ಸಂಚಾರ ಮಾಡುತ್ತ ಹುನಗುಂದಕ್ಕೆ ಹೋದಾಗ. ಆ ಗ್ರಾಮದವರೆಲ್ಲರೂ ಕೂಡಿ ಭಜನೆ ಮಾಡುತ್ತ ಪಾದಯಾತ್ರೆಯೊಂದಿಗೆ ಶ್ರೀ ಶೈಲಕ್ಕೆ ನಡೆದಿದ್ದರು. ಅವರ ಎದುರಾಗಿ ಶ್ರೀ ಮಳೇಂದ್ರ ಶಿವಾಚಾರ್ಯರು ಬರುತ್ತಿರುವುದನ್ನು ಕಂಡು ಇವರೊಬ್ಬರು ಮಹಾತ್ಮರೆಂದು ಎಲ್ಲರು ನಮಸ್ಕರಿಸಿದರು. ಆಗ ಶ್ರೀಗಳು ನೀವೆಲ್ಲಿಗೆ ಹೊರಟಿದ್ದೀರಿ ಎಂದು ಕೇಳಿದಾಗ ಶ್ರೀಶೈಲ ಮಲ್ಲಯ್ಯನ ದರ್ಶನಕ್ಕೆ ಭಜನೆ ಮಾಡುತ್ತ ಹೊರಟಿದ್ದೇವೆ ಎಂದು ಹೇಳಿದರು. ಶ್ರೀಗಳು ನಿಮ್ಮ ಮಲ್ಲಯ್ಯ ಎಲ್ಲೆಲ್ಲಿಯೂ ಇಲ್ಲ, ನಿಮ್ಮೆಲ್ಲರ ಹೃದಯದೊಳಗಿದ್ದಾನೆ. ಕೇವಲ ಬಾಹ್ಯಾಡಂಭರಕೆ ನೀವೆಲ್ಲರೂ ಹೋಗುತ್ತಿರೇ ಹೊರತು ನಿಜವಾದ ಮನಸ್ಸಿನಿಂದಲ್ಲ. ಅಂಧ, ಅನಾಥ, ಅಂಗವಿಕಲರನ್ನ ಕರೆದು ಉಪಚರಿಸಬೇಕು. ಅಲ್ಲದೆ ಸತ್ಯಶುದ್ಧ ಕಾಯಕದಲ್ಲಡಗಿದ್ದಾನೆ. ಆ ನಿಮ್ಮ ಮಲ್ಲಯ್ಯ ದಾಸೋಹ ಭಾವದಲ್ಲಡಗಿದ್ದಾನೆ. ಆ ನಿಮ್ಮ ಮಲ್ಲಯ್ಯ ಮೊದಲು ನಿಮ್ಮ ನಿಮ್ಮ ಮನಸುಗಳನ್ನು ನಿರ್ಮಲಗೊಳಿಸಿಕೊಳ್ಳಿರಿ. ನಿಮ್ಮ ಕಣ್ಣುಗಳನ್ನು ಸ್ವಚ್ಛಗೊಳಿಸಿಕೊಳ್ಳಿರಿ. ನಿಮ್ಮ ಹೆಜ್ಜೆಗಳನ್ನು ಗಟ್ಟಿಗೊಳಿಸಿಕೊಳ್ಳಿರಿ. ಕೇವಲ ಜನರು ನೋಡಲೆಂದು ಮಾಡುವ ಆಚರಣೆಗಳು ಡಂಭಾಚಾರವಾಗಬಾರದು. ಇದೋ ನೋಡಿರಿ ಇಲ್ಲಿಂದಲೇ ನಿಮಗೆ ಮಲ್ಲಯ್ಯನನ್ನು ತೋರಿಸುತ್ತೇನೆ ಎಂದು ಹೇಳಿದ ತಕ್ಷಣ ಶ್ರೀಶೈಲ ಮಲ್ಲಯ್ಯನು ಗಿಡದಲ್ಲಿ ಪ್ರತ್ಯಕ್ಷನಾದಾಗ ಅಲ್ಲಿರುವ ಭಕ್ತರೆಲ್ಲರೂ ಮಲ್ಲಿಕಾರ್ಜುನನ ಪ್ರತಿರೂಪವೇ ಮಳೇಂದ್ರ ಶಿವಾಚಾರ್ಯರೆಂದು ಕೊಂಡಾಡಿದರು.

➢ **ಆಕಳ ಕಲ್ಲ್ ಹೊಲ:-**

ಮಳೇಂದ್ರ ಶಿವಾಚಾರ್ಯರು ಶಿವಾನುಭವದಲ್ಲಿ ಭಕ್ತರೊಂದಿಗೆ ಚರ್ಚೆಯಲ್ಲಿ ತೊಡಗಿದರು. ಅಷ್ಟರಲ್ಲಿ ಭಕ್ತನೊಬ್ಬ ಓಡುತ್ತ ಬಂದು ಎಪ್ಪಾ ! ನಾನು ಪ್ರೀತಿಯಿಂದ ಸಾಕಿದ ಆಕಳು ಮೇಯ್ಲಿಕ್ಕೆ ಹೋದಲ್ಲಿ ಏಕಾಏಕಿ ಸತ್ತು ಹೋಗಿದೆ ಅಂತ ಅಳುತ್ತ

ಹೇಳಿದಾಗ, ದಯಾ ಸಾಗರ ಶ್ರೀ ಮಳೇಂದ್ರ ಶಿವಾಚಾರ್ಯರು, ದಿಗ್ಗನೆ ಎದ್ದವರೇ ಭಕ್ತರನ್ನು ಕರೆದುಕೊಂಡು ಆಕಳು ಸತ್ತಲ್ಲಿಗೆ ಹೋಗಿ ಪ್ರಾಣಾ ಪಂಚಾಕ್ಷರ ಮಹಾಮಂತ್ರವನ್ನು ಆಕಳ ಕಿವಿಯಲ್ಲಿ ಉಸಿರಿದಾಗ ಸತ್ತ ಆಕಳು ಎದ್ದು ನಿಂತಿತು. ರೈತ ಸಂತಸದಿಂದ ಶ್ರೀಗಳ ಚರಣಕ್ಕೆ ಬಿದ್ದ. ಆಗ ಶ್ರೀಗಳು ಈ ಹೊಲದಲ್ಲಿ ಆಕಳಮೂರ್ತಿ ಬನ್ನಿಗಿಡದಡಿಯಲ್ಲಿಟ್ಟು ಪೂಜಿಸಿರಿ. ಅಂದಿನಿಂದಲೇ ಆ ಹೊಲಕ್ಕೆ ಆಕಳ ಕಲ್ಲ ಹೊಲ ಎಂದು ಕರೆಯಲಾಯಿತು, ಅಲ್ಲಿಂದ ಇಲ್ಲಿಯವರೆಗೆ ಆಕಳ ಕಲ್ಲ ಹೊಲವೆಂದೇ ಕರೆಯುತ್ತಾರೆ.[೨೫]

➢ **ದೇಸ್ಗತಿ ಮರಳಿ ಪಡೆದದ್ದು:-**

ದೇಸಾಯಿ ಕೆಲ್ಲೂರಿನ ಶಿವರಾಜ ದೇಸಾಯಿಯವರು ದೊಡ್ಡವರಾದಾಗ ಪರಮಪೂಜ್ಯ ಶ್ರೀ ಷ. ಬ್ರ. ಮಳೇಂದ್ರ ಶಿವಾಚಾರ್ಯರು ದೇಸಾಯಿಗೆ ಕರೆಯಿಸಿಕೊಂಡು ಬಿಜಾಪುರದ ಅಲಿ ಆದಿಲ್ ಶಾಹಿ ದೊರೆಗಳ ಹತ್ತಿರ ಹೋಗಿ ನಮ್ಮ ದೇಶ್ಗತಿ ಮರಳಿ ಕೊಡಿ ಎಂದು ಕೇಳಲು ಆದೇಶ ನೀಡಿದರು. ಶ್ರೀಗಳ ಆದೇಶದಂತೆ ಬಿಜಾಪುರದ ದೊರೆಗೆ ಕೇಳಿದಾಗ ನೀನೆ ಆ ಮನೆತನದವನೆಂದು ನಾವು ಹೇಗೆ ಗುರುತಿಸಬೇಕು. ಅದಕ್ಕೆ ನಾವೊಂದು ಕರಾರು ಹಾಕುತ್ತೇವೆ ನಮ್ಮಲ್ಲಿರುವ ಮದಗಜಕ್ಕೆ ಮುಷ್ಠಿಯಿಂದ ಹೊಡೆದು ಮಲಗಿಸಿದಾಗ ನಾವು ನಿಮ್ಮ ದೇಸ್ಗತಿ ಹಿಂತಿರುಗಿಸುತ್ತೇವೆ ಎಂದು ಹೇಳಿದರು. ಪರಮ ಪೂಜ್ಯರ ಪ್ರಸಾದ ವಾಣಿಯಿಂದ ಜನಿಸಿದ ಶಿವರಾಜನು ಯಾವುದಕ್ಕೂ ಹಿಂದೆ ಮುಂದೆ ಆಲೋಚಿಸದೆ. ಬಂದ ಮದಗಜಕ್ಕೆ "ಜೈ ಮಳೇಂದ್ರ ಶಿವಾಚಾರ್ಯ" ಎಂದು ಒಂದೇ ಒಂದು ಮುಷ್ಠಿಯ ಹೊಡೆತಕ್ಕೆ ಮಲಗಿಸಿಯೇ ಬಿಟ್ಟರು. ಆಗ ದೊರೆಗಳು ಬಂದು ಅಪ್ಪಿ ಭಾಪು ಭಾಪು ನೀ ಆ ಮನೆತನದ ವಂಶದ ಕುಡಿ. ಬನ್ನಿ ನಿನ್ನ ದೇಸ್ಗತಿ ಮರಳಿಕೊಟ್ಟಿದ್ದೇವೆ ಸ್ವೀಕರಿಸು ಎಂದು ತಾಮ್ರಪಟದ ಸನದುಗಳನ್ನು ಕೊಟ್ಟು ರಾಜಮರ್ಯಾದೆಯಿಂದ ಸನ್ಮಾನಿಸಿ ಕಳಿಸಿಕೊಟ್ಟಿದ್ದು ಒಂದು ಇತಿಹಾಸವೇ ಸರಿ.

ಸಿಕ್ಕ ಸದಾವಕಾಶವನ್ನು ಸದುಪಯೋಗಿಸಿ
ಬರುವ ಸವಾಲುಗಳ ಸುತ್ತ ಮುತ್ತ
ಪ್ರಪಂಚದೊಡನೆ ಹೊರುವುದೆ
ಜೀವನ ಕೃಷಿನೋಡೆಂದಾತ

➢ **ಮಳೆ ತರಿಸಿದ ಮಳೇಂದ್ರ ಶಿವಾಚಾರ್ಯರು:-**

ಪಂಚನದಿಗಳ ಬೀಡಾದ ಬಿಜಾಪುರ ಜಿಲ್ಲೆ ಬರಗಾಲಕ್ಕೆ ಹೆಸರಾದದ್ದು. ಆ ನಾಡಿನಲ್ಲಿ ಪಂಚನದಿಗಳೂ ಪ್ರವಹಿಸಿದರೂ ಕಾಲಕಾಲಕ್ಕೆ ಬರಗಾಲಕ್ಕೆ ತುತ್ತಾಗುತ್ತಲೇ ಇತ್ತು. ಅಂತೆಯೇ ಬಿಜಾಪುರ ಜಿಲ್ಲೆ ಬರಗಾಲಕ್ಕೆ ಹೆಸರಾದದ್ದು.ಮೂರು ವರುಷ ಮಳೆ ಹೋದಾಗ ಶಾಹ ದೊರೆಗಳು, ತತ್ತರಿಸಿ ಹೋದ "ಪ್ರಜಾನುರಂಜನಾದ್ರಾಜಾ" ಎಂಬ ಹೆಸರಿಗೆ ಕಪ್ಪು ಚುಕ್ಕೆ ಹತ್ತುತ್ತದೆ ಎಂದು ಹಲವಾರು ಮೌಲ್ವಿಗಳಿಗೆ, ಶಿವಯೋಗಿ ಶಿವಚಾರ್ಯರಿಗೆ, ಶರಣ, ಸಂತ, ಫಕೀರರಿಗೆ ಕರೆಯಿಸಿ ವಿಚಾರಿಸಿದರೂ ಪ್ರಯೋಜನವಾಗಲಿಲ್ಲ. ಆಗ ಆತನ ದಂಡನಾಯಕನಾಗಿದ್ದ ಅಫಜಲ್‌ಖಾನನಿಂದ ಅಫಜಲ್ ಪುರದ ಮಳೇಂದ್ರ ಶಿವಾಚಾರ್ಯರ ಅದ್ಭುತ ಪವಾಡ ಕೇಳಿ ಶ್ರೀಗಳಿಗೆ ರಾಜಧಾನಿಗೆ ಬರಲು ತಿಳಿಸಿದಾಗ, ಶ್ರೀಗಳು ಅವನ ಕರೆಗೆ ಸಮ್ಮತಿಸಲಿಲ್ಲ. ಆಗ ಆ ಆದಿಲ್ ಶಾಹಿ ದೊರೆ ನಾನೇ ಹೋದರಾಯಿತು ಅಂತ ದರ್ಬಾರಿನ ಸಕಲ ಪರಿವಾರದೊಂದಿಗೆ ಹೊರಟು ಬಿಜಾಪುರ ಹೊರವಲಯಕ್ಕೆ ಬರುವುದರೊಳಗೆ ಶ್ರೀ.ಷ.ಬ್ರ ಮಳೇಂದ್ರ ಶಿವಾಚಾರ್ಯರು ತ್ರಿಕಾಲ ಜ್ಞಾನಿಗಳು, ನಾಡಾಳುವ ಪ್ರಭುವಿಗೆ ಮನ್ನಣೆ

ಕೊಡಬೇಕೆಂದು ಸ್ವತಃ ಅಲ್ಲಿಯೇ ಪ್ರತ್ಯಕ್ಷರಾಗಿ ದರ್ಶನ ಕೊಟ್ಟರು. ದರ್ಶನ, ಸ್ಪರ್ಶನ, ಸಂಭಾಷಣೆಗಳೊಂದಿಗೆ ದರಭಾರಕ್ಕೆ ಸಕಲ ರಾಜ ಮಾರ್ಯಾದೆಯಿಂದ ಕರೆದುಕೊಂಡು ಹೋಗಿ ಪೂಜ್ಯರೇ ! ಈ ನಾಡಿಗೆ ಮೂರು ವರುಷದಿಂದಲೂ ಮಳೆಗಾಲವಿಲ್ಲ. ಹೊಳೆ ಹಳ್ಳಗಳು ಬತ್ತಿ ಹೋಗಿವೆ, ಪಶು, ಪಕ್ಷಿ, ಪ್ರಾಣಿಗಳು ಒಕ್ಕೂರಿಲಿನಿಂದ ಭೋ ಎಂದು ಕೂಗುತ್ತಿವೆ. ಮನುಷ್ಯರ ಪಾಡಂತೂ ದೇವರೆ ಬಲ್ಲ ಎಂದು ಅಂಗಲಾಚಿ ಬೇಡಿಕೊಂಡಾಗ ಮಳೆ ಬಗೆಯ ಸೂತ್ರಾನುವರ್ತಿಯಾದ ಮಳೇಂದ್ರ ಶಿವಾಚಾರ್ಯರು ಏಕದೃಷ್ಟಿಯಿಂದ ಆಕಾಶದೆಡೆ ನೋಡಿ ತಮ್ಮ ಹೆಗಲ ಮೇಲಿದ್ದ ಬಿಳಿಕಂಬಳಿಯನ್ನು ಬೀಸಿದ ಕೂಡಲೇ ಧಾರಾಕಾರವಾಗಿ ಮಳೆ ಸುರಿಯಿತು. ಇಳೆ ತಣಿಯಿತು, ಕಳೆ ಮೂಡಿತು. ಮಳೆ ತರಿಸಿದ ಮಳೇಂದ್ರನೆಂದು ಆದಿಲಾಶಾಹಿ ದೊರೆಗಳು ಕನಕಾಭಿಷೇಕದೊಂದಿಗೆ ಖಿಲ್ಲತ್, ಸನ್ನದುಗಳನ್ನು ತಾಮ್ರಪಟದಲ್ಲಿ ಕೆತ್ತಿಸಿ, ಬಿಜಾಪುರದ ಶಹಾಪೇಟೆಯಲ್ಲಿ ಶ್ರೀಮಠದ ನಿವೇಶನವನ್ನು ಕೊಟ್ಟು ಕಟ್ಟಿಸಿಯೇ ಬಿಟ್ಟರು.[22] ಅದು ಈಗಲೂ ಶಾಹಪೂರ ಪೇಟೆಯಲ್ಲಿ ಮಳೇಂದ್ರ ಮಠವೆಂದು ರಾರಾಜಿಸುತ್ತದೆ.

➢ **'ಅಂತರ ನಿಂತ ಪಲ್ಲಕ್ಕಿ':-**

ಹರ ತನ್ನ ರೂಪವನ್ನು ತೋರಿಸಲು ಗುರುವಾಗಿ ಧರೆಗೆ ಅವತರಿಸಿ ಬಂದ ವಿಶ್ವರೂಪ. ವಿಶ್ವಕೌಟುಂಬಿ, ಅಂತೆಯೇ ಆ ಗುರುವಿನಲ್ಲಿ ಬ್ರಹ್ಮ, ವಿಷ್ಣು, ರುದ್ರ ಈ ಮೂವರಿದ್ದು ಏಕಾತ್ಮವಾಗಿದ್ದಾರೆ ಅಂತೆಯೇ ವೇದಗಳು

ಗುರುಬ್ರಹ್ಮ, ಗುರುವಿಷ್ಣು

ಗುರುದೇವೋ ಮಹೇಶ್ವರಃ

ಗುರುಸಾಕ್ಷಾತ್ ಪರಬ್ರಹ್ಮ

ತಸ್ಮೈಶ್ರೀ ಗುರುವೇ ನಮಃ

ಎಂದು ಸ್ಮೃತಿಗಳು ಸಾರಿ ಹೇಳುತ್ತಿವೆ. ಉಜ್ಜಯಿನಿಯ ಜಗದ್ಗುರು ೧೦೦೮ ಸಿದ್ಧಿರ್ಮಸಿಂಹಾಸನಧೀಶ ಶ್ರೀ. ಷ.ಬ್ರ. ಮಳೇಂದ್ರ ಶಿವಾಚಾರ್ಯ ಭಗವತ್ಪಾದಂಗಳ ವಿಶ್ವರೂಪವೇ ಅಫಜಲ್‌ಪುರದ ಮಳೇಂದ್ರ ಶಿವಾಚಾರ್ಯರು. ಈ ಧರೆ ಬೆಳಗಲು ಬಂದು ಗುರು ರೂಪ ತೊಟ್ಟವರು. ಈ 'ಧರೆಯ ದೀಪ'ವಾಗಿ ಬೆಳಗಿದರು ಎಂದು ಅಫಜಲ್‌ಪುರದ ಮಹಾಜನತೆ ಶ್ರೀಗಳಲ್ಲಿ ಭಕ್ತಿ ಇಟ್ಟವರಾಗಿದ್ದ ಪ್ರಯುಕ್ತ, ಪ್ರತಿವರುಷ ಪಲ್ಲಕ್ಕಿ ಉತ್ಸವ ನಡೆಸುವಂತೆ ಉತ್ಸವಕ್ಕೆ ಅಣಿಯಾದರು. ಊರಿಗೆ ಊರೇ ಶೃಂಗಾರಗೊಂಡಿತ್ತು. ತಳಿರುತೋರಣಗಳಿಂದ ಪ್ರತಿ ಮನೆಗಳು ಶೋಭಿಸತೊಡಗಿದವು. ಅಂಗಳಕ್ಕೆ ಪನ್ನೀರು ಹನಿಸಿ ರಂಗವಲ್ಲಿ ಹಾಕಿದರು. ಊರಿಗೆ ಊರೇ ಬಂಧು-ಬಾಂಧವರಿಂದ, ನೆಂಟರಿಷ್ಟರಿಂದ ತುಂಬಿ ತುಳುಕತೊಡಗಿತು. ಊರಿದ್ದಲ್ಲಿ ಕಿಡಿಗೇಡಿಗಳಿರುತ್ತಾರೆ ಅನ್ನುವುದಕ್ಕೆ ಅಂದಿನ ಉತ್ಸವವೇ ಸಾಕ್ಷಿಯಾಗಿತ್ತು. ಇನ್ನೇನು ಊರಿನ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿಯಲ್ಲಿ ಕುಳಿತ ಶ್ರೀ ಷ.ಬ್ರ.ಮಳೇಂದ್ರ ಶಿವಾಚಾರ್ಯರ ಮೆರವಣಿಗೆವೈಭವದಿಂದ ಸಾಗಿತು. ಅಫಜಲ್ ಪುರಕ್ಕೆ ಏಳು ಹಳ್ಳಿಗಳೂ ಕೂಡಿದ್ದ ಪ್ರಯುಕ್ತ ಜನಸಾಗರ ಹರಿದು ಬಂದಿತ್ತು. ಮೆರವಣಿಗೆ ಪ್ರಮುಖ ಬೀದಿಗೆ ಬಂದಾಗ ಪಲ್ಲಕ್ಕಿ ಹೊತ್ತ ಕಿಡಿಗೇಡಿಗಳು ಪಲ್ಲಕ್ಕಿಯಿಂದ ಕಡೆಗಾದರು. ಆದರೆ, ಪರಶಿವನ ಅವತಾರಿ ಮಳೇಂದ್ರ ಶಿವಾಚಾರ್ಯರು ಮಾತ್ರನಗುತ್ತಲೇ ಕುಳಿತಿದ್ದರು. ಪಲ್ಲಕ್ಕಿ ನೆಲಕ್ಕೆ ಬೀಳದೆ ಎಷ್ಟು ಅಂತರದ ಮೇಲೆ ಪಲ್ಲಕ್ಕಿ ಇತ್ತೋ ಅಷ್ಟೇ ನಿಂತಿತ್ತು. ಈ ಚಾತುರ್ಯ ಕಂಡ ಭಕ್ತರು ಶಂಭೊ ಹರಹರ ಮಹದೇವ ಎಂದು ಜೈಕಾರ ಹಾಕಿದರು.

ಆದರೆ ಆ ಕಿಡಿಗೇಡಿಗಳಿಗೆ ಮುಂದೆ ಹೆಜ್ಜೆ ಇಡಲು ಕಣ್ಣುಗಳೇ ಕಾಣದಾದವು. ಆಗ ತಂದೆ! ಮಳೆಂದ್ರ ಶಿವಾಚಾರ್ಯ! ನಮ್ಮದು ತಪ್ಪಾಗಿದೆ ಕ್ಷಮಿಸು ನನ್ನಪ್ಪಾ. ನಮಗೆ ಕಣ್ಣುಗಳು ಕಾಣಿಸುವಂತೆ ಮಾಡು ಎಂದು ಅಂಗಲಾಚಿ ಬೇಡಿಕೊಂಡಾಗ ಆ ಸದ್ಭಕ್ತರ ಸಿಂಧು ಮರುಮಾತಾಡದಲೇ ಅವರ ಕಣ್ಣುಗಳು ಕಾಣಿಸುವಂತೆ ಮಾಡಿ, ಇನ್ನೊಮ್ಮೆ ಶಿವಯೋಗಿಗಳಿಗೆ, ಶಿವಾಚಾರ್ಯರಿಗೆ, ಶರಣರಿಗೆ, ಸಂತ ಸೂಫಿಗಳಿಗೆ ಈ ರೀತಿ ಕುಚೇಷ್ಟೆ ಮಾಡಬೇಡಿ ನಿಮ್ಮ ನಿಮ್ಮ ನಿರೀಕ್ಷೆಗಳು ಉನ್ನತವಾಗಿರಲಿ, ಆಪೇಕ್ಷೆಗಳು ಸನ್ನಿಹಿತವಾಗಿರಲಿ, ಉಪೇಕ್ಷೆಗಳು ಸರ್ವ ಸಮ್ಮತವಾಗಿರಲಿ ಅಂದಾಗ ಜ್ಞಾನದ ನಿಕ್ಷೇಪವೇ ನೀವಾಗ್ತೀರಿ ಅಂತ ಉಪದೇಶ ಮಾಡಿದರು. ಪಲ್ಲಕ್ಕಿ ಉತ್ಸವಕ್ಕೆ ಮಂಗಳ ಹಾಡಿದರು ಆದರೆ, ಎಲ್ಲಿ ನೋಡಿದರಲ್ಲಿ ಅಂತರ ನಿಂತ ಪಲ್ಲಕ್ಕಿಯ ಮಾತೇ ಮಾತು.

➢ **<u>"ಮಳೆತಂದ ಮಲ್ಲೇಶ್ವರ":-</u>**

ಸರ್ವಧರ್ಮಕ್ಕೆ ಸಾಕಾರ ಮೂರ್ತಿಯಾದ ಶ್ರೀ ಮಳೇಂದ್ರ ಶಿವಾಚಾರ್ಯರು ಒಡೆದಾಳುವ ರೀತಿಗೆ ಧಿಕ್ಕರಿಸಿ ಕೂಡಿಬಾಳುವ ಬದುಕನ್ನು ಭಕ್ತರಿಗೆ ಕಟ್ಟಿಕೊಟ್ಟರು. ಬದುಕೊಂದು ಅನುಭವದ ಸಂತೆ. ಅಲ್ಲಿ ದೃಶ್ಯಮಾಧ್ಯಮಗಳುಂಟು, ಜೀವನಾನುಭವಕ್ಕೆ ಸರಕುಗಳುಂಟು. ಕೊಂಡು ಕೊಳ್ಳುವುದು ಮನಸ್ಸಿಗೆ ಬಿಟ್ಟದ್ದು. ಒಂದು ಬಿಟ್ಟು ಇನ್ನೊಂದು ಹಿಡಿದಾಗ ಜೀವನ ಮೌಲ್ಯ ಕಳೆದುಕೊಳ್ಳುವುದು, ಇನ್ನೊಂದು ಹಿಡಿದು ಮತ್ತೊಂದು ಬಿಟ್ಟಾಗ ಬೆಳ್ಳುಬ್ಬಿಯೆಂಬ ಗ್ರಾಮದಲ್ಲಿ ಸರ್ವಧರ್ಮವನ್ನುದ್ದೇಶಿಸಿ ಆಶೀರ್ವಚನ ನೀಡುತ್ತಿದ್ದರು.

ಬೆಳ್ಳುಬ್ಬಿ ಕೃಷ್ಣೆಯ ದಡದ ಮೇಲೆ ಪರಿಶೋಭಿಸುತ್ತಿತ್ತು. ಆ ಗ್ರಾಮಕ್ಕೆ ಶ್ರೀಗಳು ಪಾದಾರ್ಪಣೆಯಾದ ಮೇಲೆ ಆ ಊರಿನ ಚಿತ್ರಣವೇ ಪಲ್ಲಟವಾಯಿತು. ವೀರಶೈವದ ಸರ್ವಾಭಿಮಾನಿಗಳೆಲ್ಲಾ ಕೂಡಿರಲು ಮಠವನ್ನು ಕಟ್ಟಿಸಿದರು. ಪಕ್ಕದಲ್ಲಿಯೇ ಕೃಷ್ಣಾನದಿ ತುಂಬಿ ಹರಿಯುತ್ತಿತ್ತು. ಆದರೆ ಅಲ್ಲಿ ಮೂರು ವರುಷದಿಂದಲೂ ಮಳೆಯಿಲ್ಲದ ಒಕ್ಕಲಿಗರು ಕೃಷಿಯನ್ನೇ ನೆಚ್ಚಿಕೊಂಡವರು ಆಕಾಶದೆಡೆಗೆ ನೋಡುತ್ತ ನಮಗೆ ಪರಿಹಾರ ನೀಡುವ ಮಹಾದೇವನಿಗೆ ಕರುಣೆಯಿಲ್ಲವೇ ? ದಯೆಯಿಲ್ಲವೇ ? ಎಂದು ಹೃದಯಮಿಡಿತದಿಂದ ತೋಡಿಕೊಳ್ಳುತ್ತಿದ್ದರು. ಆ ಕೃಷಿಕರ ಕೂಗು, ಶ್ರೀಗಳ ಕಿವಿಗಳಿಗೆ ಕೇಳಿಸಿತೇನೋ ಎಂಬಂತೆ ಹರಿಯುವ ಕೃಷ್ಣೆಯ ಒಡಲಲ್ಲಿಳಿದು ನೀರಿನ ಮೇಲೆ ತಪಸ್ಸನ್ನಾಚರಿಸಿದರು. ಅವರು ಪತಂಜಲಿ ಯೋಗ ಬಲ್ಲವರಾಗಿದ್ದರು. ನೀರಿನ ಮೇಲೆ ನಡೆಯುತ್ತಿದ್ದರು, ಮಲಗುತ್ತಿದ್ದರು, ಕುಳಿತುಕೊಳ್ಳುತ್ತಿದ್ದರು.ಶ್ರೀಗಳು ನೀರಿನ ಮೇಲೆ ಕುಳಿತ ದೃಶ್ಯವನ್ನು ತಮ್ಮ ಕಣ್ತುಂಬಿಸಿಕೊಳ್ಳಲು ನಾಡಿನ ಮೂಲೆ ಮೂಲೆಗಳಿಂದ ಜನರು ಬಂದು ನೋಡಿ ಸಾಷ್ಟಾಂಗವನ್ನು ಹಾಕಿ ಇವರುಸಾಮಾನ್ಯರಲ್ಲ ಶಿವನಸ್ವರೂಪಿಗಳು ಎಂದು ಕೊಂಡಾಡ ತೊಡಗಿದರು. ಶ್ರೀಗಳು ತಮ್ಮ ಧ್ಯಾನ ಮುಗಿದಾಕ್ಷಣವೇ ನೀರಿನ ಮೇಲೆ ಎದ್ದುನಿಂತು ಬಿಳಿ ಕಂಬಳಿ ಬೀಸಿದ ತಕ್ಷಣವೇ ಧಾರಾಕಾರವಾಗಿ ಮಳೆ ಸುರಿಯಿತು. ಕೆರೆ-ಬಾವಿಗಳು ತುಂಬಿದವು. ಹಳ್ಳ-ಎರಡು ದಡ ಸೋಸಿ ಹರಿಯತೊಡಗಿದವು. ಬಾಯಾರಿಕೆಯಿಂದ ಚಡಪಡಿಸುತ್ತಿದ್ದ ಭೂಮಿ ಬೀಳುವ ಮಳೆಯನ್ನು ಕುಡಿದು ತನ್ನ ಹೊಟ್ಟೆ ತಣ್ಣಗಾಗಿಸಿಕೊಂಡಿತು. ಗಿಡ, ಮರ, ಬಳ್ಳಿಗಳು ಕುಣಿದಾಡತೊಡಗಿದವು.[೨೮] ಪಶು, ಪಕ್ಷಿ, ಪ್ರಾಣಿಗಳೆಲ್ಲಾ ಚೆಂಗು ಚೆಂಗೆಂದು ನೀರು ಕುಡಿದು ಹಾರಾಡತೊಡಗಿದವು. ಬಂದ ಭಕ್ತರು, ಬೆಳ್ಳುಬ್ಬಿಯ ಭಕ್ತರು ಒಕ್ಕೊರಲಿನಿಂದ ಮಳೆ ತಂದ "ಮಳೆ ಮಲ್ಲೇಶ್ವರನೆಂದು" ಜೈಕಾರ ಹಾಕಿದರು. ಶ್ರೀಗಳು ನಿಂತ ಸ್ಥಳದಲ್ಲಿಯೇ ಬೃಹದಾಕಾರವಾದ ಮಂದಿರವನ್ನು ಕಟ್ಟಿದರು "ಮಳೆ ಮಲ್ಲೇಶ್ವರ ಲಿಂಗ" ಸ್ಥಾಪಿಸಿದರು ಬೆಳ್ಳುಬ್ಬಿಯ ಆರಾಧ್ಯದೈವರಾದರು.

➢ ನೀರೊಳಗೆ ಮುಳುಗಿದ್ದ ಲಿಂಗ ಅಂಗೈ ಸೇರಿತು:-

ಹುನುಗುಂದ ತಾಲೂಕಿನ ಹಗೆದಾಳ ಗ್ರಾಮದ ಭಕ್ತರು ಆಮಂತ್ರಣ ಕೊಟ್ಟ ಪ್ರಕಾರ ಶ್ರೀಗಳು ಹಗೆದಾಳಕ್ಕೆ ಹೋಗಿ ಭಕ್ತರ ತೋಟದಲ್ಲಿಳಿದಿದ್ದರು. ಬೆಳಗಿನ ಜಾವ ಸ್ನಾನ ಮಾಡಿಕೊಂಡು ಬಾವಿಯ ದಂಡೆಯ ಮೇಲೆ ಲಿಂಗಾರ್ಚನೆಗೆ ಕುಳಿತಾಗ ಅಂಗೈಯೊಳಗಿರುವ ಲಿಂಗ ಜಾರಿ ಬಾವಿಯಲ್ಲಿ ಬಿದ್ದಿತು. ಆಗ ಭಕ್ತರು ಬಾವಿಯಲ್ಲಿ ಮುಳುಗಿ ಲಿಂಗ ತರಲು ಸಿದ್ದರಾದಾಗ ಶ್ರೀಗಳು ಯಾರು ಬಾವಿಗಿಳಿಯಬೇಡಿರಿ. ಅಂಗೈಯಿಂದ ಲಿಂಗದೇವನು ಹೇಗೆ ಜಾರಿರುವನೋ ಹಾಗೆಯೇ ಮರಳಿ ನನ್ನ ಅಂಗೈಯೆಂಬ ಪೀಠದಲ್ಲಿ ಅಲಂಕರಿಸಬೇಕು ಎಂದು ಧ್ಯಾನಮಗ್ನರಾದರು. ಭಕ್ತರಿಗೆ ಇನ್ನೂ ಕುತೂಹಲ ಹೆಚ್ಚಾಯಿತು. ಬಂದ ಭಕ್ತರೆಲ್ಲರು ಈ ಪವಾಡಶಕ್ತಿಯನ್ನು ನೋಡಲು ನಿಂತರು. ಈ ವಿಷಯ ಸುತ್ತಲ ಹಳ್ಳಿಗಳಿಗೆ ಗೊತ್ತಾಗಿ, ತಂಡೋಪತಂಡವಾಗಿ ಬರತೊಡಗಿತು. ಪೂಜ್ಯರ ಧ್ಯಾನ ಯೋಗ ಪ್ರಾರಂಭವಾಯಿತು. ಏಕದೃಷ್ಟಿಯಿಟ್ಟು ಬಾವಿಗೆ ನೋಡಿದರು. ಮುಳುಗಿದ್ದ ಲಿಂಗದೇವ ಕಣ್ಣು ಮುಚ್ಚಿ, ಕಣ್ಣು ತೆರೆಯುವುದರೊಳಗಾಗಿ ಅಂಗೈ ಪೀಠದಲ್ಲಿ ಅಲಂಕರಿಸಿತ್ತು. ಕೂಡಿದ ಜನರು ಶ್ರೀ ಮಳೇಂದ್ರ ಶಿವಾಚಾರ್ಯರಿಗೆ ಜಯವಾಗಲಿಯೆಂದು ಉದ್ಘೋಷ ಮಾಡಿದರು. ಆಗ ಶ್ರೀಗಳು ಲಿಂಗಾರ್ಚನೆಯಾದ ಬಳಿಕ ಬಂದ ಭಕ್ತರಿಗೆ ತೋಟದ ಮಾಲೀಕರು ಪ್ರಸಾದ ವ್ಯವಸ್ಥೆ ಮಾಡಿದ್ದರು. ಎಲ್ಲರಿಗೂ ಶ್ರೀಗಳ ಆದೇಶದ ಮೇರೆಗೆ ಪ್ರಸಾದ ಮಾಡಿಸಿದರು. ನಂತರ ಶ್ರೀಗಳಿಂದ ಆಶೀರ್ವಚನ ನೀಡಲಾಯಿತು.

➢ ಸೊಂಡೂರು ಕುಮಾರ ಸ್ವಾಮಿಯ ದರುಶನ ಮಾಡಿಸಿದ್ದು:-

ಚರಮೂರ್ತಿ ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರು ಅಫಜಲ್‌ಪುರಕ್ಕೆ ಬಂದು ಶ್ರೀಮಠದ ವ್ಯವಸ್ಥೆಗೆ ಅಚ್ಚುಕಟ್ಟಾಗಿಸಲು ಕೆಲವು ಭಕ್ತರನ್ನು ಹಿಡಿದು ಜವಾಬ್ದಾರಿ ಹೊರಿಸಿದರು. ಇದು ನನ್ನ ಮಠವಲ್ಲ, ನಿಮ್ಮ ಮಠ, ನಿಮ್ಮೂರಿನ ಮಠ, ನೀವೆಲ್ಲರೂ ನಿಂತು ನೋಡಿಕೊಂಡು ಹೋದಾಗ ಮಾತ್ರ ಶ್ರೀಮಠ ಬೆಳಕಿಗೆ ಬರುತ್ತದೆ. ಎಂದು ಭಕ್ತರನ್ನು ಹುರಿದುಂಬಿಸಿ ಮಠದ ಕೆಲಸಕ್ಕೆ ಅಣಿಗೊಳಿಸಿದರು. ಒಂದು ದಿವಸ ಭಕ್ತರ ಕರೆಯ ಮೇರೆಗೆ ಹಾವಳಗಾ ಗ್ರಾಮಕ್ಕೆ ಹೋದರು. ಹೋಗುವ ದಾರಿಯಲ್ಲಿ ಎದುರಾಗಿ ಸೊಂಡೂರು ಕುಮಾರ ಸ್ವಾಮಿಯ ದರುಶನಕ್ಕಾಗಿಹೊರಟಿದ್ದ ಭಕ್ತರಿಗೆ ಕಂಡು ಎಲ್ಲಿಗೆ ಹೋಗುತ್ತೀರಿ ಎಂದು ಕೇಳಿದಾಗ, ಕುಮಾರ ಸ್ವಾಮಿಯ ದರುಶನಕ್ಕಾಗಿ ಹೊರಟಿದ್ದೇವೆ ಎಂದು ಹೇಳಿದರು.[೭೯] ಆಗ ಶ್ರೀಗಳು ಬನ್ನಿ ನಿಮಗೆ ಈ ಅರಳಿಮರದಲ್ಲಿ ಕುಮಾರ ಸ್ವಾಮಿಯ ದರುಶನವನ್ನು ಮಾಡಿಸುತ್ತೇನೆ. ನೀವೆಲ್ಲರೂ ಅರಳಿಯ ಗಿಡದತ್ತ ನೋಡಿರಿ ಅಂತ ಹೇಳಿದಾಗ ಅವರೆಲ್ಲರೂ ಏಕಮನಸ್ಕರಾಗಿ ಭಯಭಕ್ತಿಯಿಂದ ನೋಡತೊಡಗಿದರು. ಕೋಟಿ ಶೆಲೆಮಿಂಚುಗಳ ಮಧ್ಯ ನವಿಲುವಾಹನವನ್ನೇರಿ ಬಂದ ಕುಮಾರಸ್ವಾಮಿಯ ದರುಶನಪಡೆದ ಭಕ್ತರು ಜಯಕಾರ ಮಾಡಿದರು.

➢ ಪ್ರಸಾದ ಮಹಿಮೆ:-

ನೋಟದಿಂದ ಮೀನ ಮರಿಗಳಿಗೆ ಸಲಹುವಂತೆ ಸ್ಮರಣೆಯಿಂದ ಆಮೆಯ ಮರಿಗಳಿಗೆ ರಕ್ಷಿಸುವಂತೆ ಶ್ರೀಗುರು ನೋಟದಿಂದ, ಸ್ಮರಣೆಯಿಂದ, ಸ್ಪರ್ಶದಿಂದ ಕರುಣಿಸುತ್ತಾನೆ ಎನ್ನುವುದಕ್ಕೆ ಅಫಜಲ್‌ಪುರದ ಶ್ರೀಮಠದೊಡೆಯರಾದ ಮಳೇಂದ್ರ ಶಿವಾಚಾರ್ಯರೇ ಸಾಕ್ಷಿ. ಶಿಷ್ಯರು ಎಲ್ಲೆಲ್ಲಿರುತ್ತಾರೋ ಅಲ್ಲಲ್ಲಿಗೆ ಹೋಗಿ ಧಾರ್ಮಿಕ ಭಾವನೆಗಳನ್ನು ಹಂಚಿಬರುತ್ತಿದ್ದರು.

ಕಲಬುರಗಿ ಜಿಲ್ಲೆಯ ಕೌಲಗಾ(ಕೆ) ಗ್ರಾಮಕ್ಕೆ ಹೋದಾಗ ಭಕ್ತರೊಬ್ಬರು ಶ್ರೀಗಳಿಗೆ ಆಮಂತ್ರಣ ನೀಡಿ ಮನೆಗೆ ಕರೆದುಕೊಂಡು ಹೋದಾಗ ಒಂದು ಘಟನೆನಡೆಯಿತು. ಪಾಪ ಕರೆದುಕೊಂಡು ಹೋದ ಆ ವ್ಯಕ್ತಿ ಬಡವನಾಗಿದ್ದ. ಶ್ರೀಗಳಿಗೆ

ಮನೆಯಲ್ಲಿ ಪಾದ ಹಾಕಿಸಿಕೊಂಡರೆ ನನಗೆ ಬೆನ್ನು ಹತ್ತಿದ ಬಡತನ ಓಡಿಹೋದಿತು ಎಂಬ ಭಾವನೆಯಿಂದ ಶ್ರೀಗಳಿಗೆ ಆಗುವಷ್ಟು ತೃಪ್ತಿಯ ಭೋಜನ ಮಾಡಿಸಿದ್ದ. ಮಡಿಹುಡಿಯಿಂದ ಮನೆ ಓರಣಗೊಳಿಸಿ ತೋರಣ ಕಟ್ಟಿದ್ದ. ಶ್ರೀಗಳು ಆತನ ಭಕ್ತಿಗೆ ಸಂತೃಪ್ತರಾಗಿದ್ದರು. ಸ್ನಾನ ಮಾಡಿ ಪೂಜೆ ಮುಗಿಸಿಕೊಂಡು ಇನ್ನೇನು ಪ್ರಸಾದಕ್ಕೆ ಎಡೆಮಾಡಿಸಿದ್ದರು. ಅಷ್ಟರಲ್ಲಿ ಸುತ್ತಹಳ್ಳಿಯ ಜನರು ಶ್ರೀಗಳ ದರುಶನಕ್ಕೆ ಬಂದಾಗ ಅವರಿಗೂ ಪ್ರಸಾದಕ್ಕೆ ಕೂಡಿಸು ಅಂತ ಆದೇಶವಾಯಿತು. ಆ ಬಡವ ದಂಗಾಗಿ ಹೋದ. ಏನು ಮಾಡಬೇಕೆಂದು ಚಿಂತಿಸುವಷ್ಟರಲ್ಲಿ ಶ್ರೀಗಳು ಆತನಿಗೆ ಕರೆಯಿಸಿ ನನ್ನ ಪಾದೋದಕ ತೆಗೆದುಕೊಂಡು ಪ್ರಸಾದದ ಮೇಲೆ ಸಿಂಪಡಿಸಿ, ಪ್ರಸಾದ ನೀಡು ಎಂದು ಅಪ್ಪಣೆ ಕೊಟ್ಟರು. ಅವರಂದಂತೆ ಪಾದೋದಕ ತೆಗೆದುಕೊಂಡು ಪ್ರಸಾದದ ಮೇಲೆ ಸಿಂಪಡಿಸಿ ಪ್ರಸಾದಕ್ಕೆ ಕೂಡಿಸಿದ. ಎಲ್ಲರೂ ತೃಪ್ತಿಯಿಂದ ಭೋಜನ ಮಾಡಿದರು. ಮೊದಲೆಷ್ಟು ಮಾಡಿದ್ದರೋ ಅಷ್ಟೇ ಉಳಿದಿತ್ತು ಇದು ಶ್ರೀಗುರುವಿನ ಪ್ರಸಾದ ಮಹಿಮೆಯೆಂದು ಶಿರಸಾಷ್ಟಾಂಗ ಹಾಕಿದ ಊರೊಳಗಿನ ಎಲ್ಲಾ ಜನರು ಈ ಪವಾಡ ಶಕ್ತಿಯನ್ನು ಕಂಡು ಬೆರಗಾದರು.

➢ **<u>ನೀರು ತುಪ್ಪ ಮಾಡಿದರು:-</u>**

ಪರಮಪೂಜ್ಯರಾದ ಮಳೇಂದ್ರ ಶಿವಾಚಾರ್ಯರು ಹುನಗುಂದ ತಾಲೂಕಿನ ತುರುಮುರಿಗೆ ಭಕ್ತರ ಕರೆಯ ಮೇರೆಗೆ ಹೋಗಿದ್ದರು. ಅಲ್ಲಿಯ ಭಕ್ತರು ವರವೀರಶೈವ ಸಂಪನ್ನರು, ಲಿಂಗಪೂಜಾಲೋಲರು, ಅಷ್ಟಾವರಣ ಪಂಚಾಚಾರ, ಷಟ್‌ಸ್ಥಲಗಳನ್ನು ಗುರುಮುಖೇನ ಅರಿತವರಾಗಿದ್ದರು. ಆ ಊರಲ್ಲಿ ಯಾವುದೇ ಕಾರ್ಯಕ್ರಮ ಸಂಯೋಜಿಸಿದರೂ ಅಲ್ಲಿ ಶ್ರೀಗಳ ಮಾರ್ಗದರ್ಶನವಿರುತ್ತಿತ್ತು.

ಈ ಸಲ ಮಾತ್ರ ೧೦೮ ಅಯ್ಯಾಚಾರ (ಶಿವದೀಕ್ಷೆ) ಹಮ್ಮಿಕೊಂಡಿದ್ದರು. ಸಾಮೂಹಿಕ ವಿವಾಹಗಳು ಏರ್ಪಡಿಸಿದ್ದರು. ಈ ಕಾರಣಕ್ಕಾಗಿ ತುರುಮುರಿ ತುಂಬ ಜನಸಾಗರದಿಂದ ಭರಿಸಿ ಹೋಗಿತ್ತು. ಎಲ್ಲಾ ಕಾರ್ಯಗಳು ಶ್ರೀಗಳು ಸನ್ನಿಧಾನದಲ್ಲಿ ಸಂಪನ್ನಗೊಂಡವು. ಇನ್ನೇನು ಹೋಳಿಗೆ ಕರಿಗಡಬಿನ ಊಟ. ಆದರೆ ತುಪ್ಪವೇ ಹೇಳಿಕಳಿಸಿದಂತೆ ಬರಲೇ ಇಲ್ಲ. ಸಮೀಪದಲ್ಲಿರುವ ಬಾವಿಯ ನೀರನ್ನು ತೆಗೆದುಕೊಂಡು ಬನ್ನಿ ಎಂದು ತರಿಸಿಕೊಂಡು ತಮ್ಮ ವರದಹಸ್ತವಿಟ್ಟು ಈ ತಂಬಿಗೆಯಲ್ಲಿರುವ ತುಪ್ಪಕ್ಕೆ ಬಾವಿಯಲ್ಲಿ ಹಾಕಿರಿ. ಆ ಬಾವಿಯೇ ತುಪ್ಪದ ಬಾವಿ ಆಗುತ್ತದೆ. ಕೊಡಗಟ್ಲೆ ತುಂಬಿಕೊಂಡು ಬಂದು ಹೋಳಿಗಿ, ಕಡುಬು ತೇಲಾಡುವಂತೆ ಹಾಕಿರಿ.[೮೦] ಬಂದವರಿಗೆ ಸಂತೃಪ್ತಿಯ ಭೋಜನ ಮಾಡಿಸಿದರು. ಆ ತುಪ್ಪದ ಬಾವಿಯ ನೀರಿನಿಂದಲೇ ದೀಪ ಬೆಳಗಿಸಿದರು. ಎಲ್ಲಾ ಕಾರ್ಯಕ್ರಮ ಮುಗಿದು ನಂತರ ಹೇಳಿ ಕಳಿಸಿದ ತುಪ್ಪದ ಗಾಡಿ ಬಂದಿತು.

➢ **<u>ಒಂದೇ ದಿವಸ ಎರಡು ಕಡೆ ದರ್ಶನ:-</u>**

ಒಮ್ಮೊಮ್ಮೆ ಶ್ರೀ ಮಳೇಂದ್ರ ಶಿವಾಚಾರ್ಯರ ಮೇಲೆ ಸಮಯವೂ ಕೂಡಾ ಸವಾರಿ ಮಾಡತಕ್ಕಂಥ ಸನ್ನಿವೇಶಗಳು ಕೂಡಾ ಮುತ್ತಿಗೆ ಹಾಕುತ್ತಿದ್ದವು. ಆದರೂ ಅವರು ಧೃತಿಗೆಡದೆ ಬಂದ ಸಮಯಕ್ಕೆ ಸದುಪಯೋಗಿಸಿಕೊಂಡು ಸೈ ಎನಿಸಿಕೊಂಡಿದ್ದರು. ಶ್ರೀಗಳ ದೈವ ಪರೀಕ್ಷೆಗೋ ಅಥವಾ ಅವರಲ್ಲಿರುವ ಶಕ್ತಿ ಪರೀಕ್ಷೆಗೋ ಅಂಥ ದುರ್ಧರ ಪ್ರಸಂಗ ಬಂದರೆಗಿತು. ಅಕ್ಕಲಕೋಟೆ ತಾಲೂಕಿನ ಬಾದ್ದೇಲಿಯಿಂದ ಬಂದ ಭಕ್ತ ಗ್ರಹಪೂಜೆಗೆ ತಾವು ಬರಬೇಕೆಂದು ಕಾಯಿಕೊಟ್ಟು ಹೋದ, ಕೆಲಸಮಯದ ನಂತರ ಹುನಗುಂದ ತಾಲೂಕಿನ ರಾಮವಾಡಿ ಭಕ್ತ ಬಂದು ನನ್ನ ಮಕ್ಕಳ ಮದುವೆಗೆ ಬರಬೇಕೆಂದು ಕಾಯಿ ಕೊಟ್ಟು ನಮಸ್ಕರಿಸಿದ. ಆದರೇ ಇಬ್ಬರೂ ಶ್ರೀಗಳಿಗೆ ಆಹ್ವಾನ ಮಾಡಿದ್ದು ಒಂದೇ ದಿನಾಂಕವಾಗಿತ್ತು. ಭಕ್ತರಿಗೆ ಬರುತ್ತೇನೆ ಅಂತ

ಮಾತುಕೊಟ್ಟು ಆಗಿತ್ತು. ದಿನಾಂಕ ಸಮೀಪಿಸುತ್ತಿದ್ದಂತೆ ಶ್ರೀಗಳು ಮೌನಿಗಳಾಗಿ ಗವಿಯಲ್ಲಿಳಿದು ಯೋಗದೊಳಗೆ ನಿರತರಾದರು. ಆದರೆ ಒಂದೇ ದಿವಸ ಎರಡೂ ಕಡೆಗೆ ಇಲ್ಲಿಯೇ ಕುಳಿತು ಅಲ್ಲಿ ದರುಶನ ಕೊಟ್ಟಿದ್ದು ಸಾಮಾನ್ಯ ಮಾತಲ್ಲ ನಿಜವಾಗಿಯೂ ಮಲೆ ಮಹದೇಶ್ವರರೇ ಇವರೆಂದು ಜನ ಕೊಂಡಾಡಿದರು.

➢ **ಪುನರ್ ಜನ್ಮ ನೀಡಿದ ಪುಣ್ಯಪುರುಷ:-**

ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರು ತಮ್ಮ ಅಫಜಲ್ ಪುರದ ಭಕ್ತರೊಡಗೂಡಿ ವಿಜಯಪುರ ಜಿಲ್ಲೆಯ ಬೆಳ್ಳುಬ್ಬಿಗೆ ಅಲ್ಲಿಯ ಭಕ್ತ ಅಮರಪ್ಪನ ಕರೆಯ ಮೇರೆಗೆ ಹೋದರು. ಅಂದು ಬೆಳ್ಳುಬ್ಬಿಯ ಗುರುಗಳ ಬರುವಿಗಾಗಿ ನವ ವಧುವಿನಂತೆ ಶೃಂಗಾರಗೊಂಡಿತ್ತು. ತಳಿರು, ತೋರಣದಿಂದ ಬೀದಿಗಳು ಅಲಂಕೃತಗೊಂಡಿದ್ದವು. ಇನ್ನೇನು ಗುರುಗಳು ಬರುವುದಷ್ಟೇ ತಡ ಅಡ್ಡಪಲ್ಲಕ್ಕಿಯ ಮೆರವಣಿಗೆಗೆ ಸಿದ್ದಗೊಳಿಸಿಕೊಂಡಿದ್ದರು. ಭಕ್ತರು, ಊರ ಹೆಣ್ಣುಮಕ್ಕಳು ನೂರಾರು ಕುಂಭ, ಕಳಸದೊಂದಿಗೆ ಬಂದು ಸಾಲಂಕೃತವಾಗಿ ಕಂಗೊಳಿಸಿದ್ದರು. ಆದರೆ, ಅಮರಪ್ಪನ ಮನೆಯಲ್ಲಿ ಸ್ಮಶಾನ ಮೌನಾವರಿಸಿತ್ತು. ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರ ಆಶೀರ್ವಾದದಿಂದ ಹುಟ್ಟಿದ ಏಕೈಕ ಮಗು ಶಿವಲಿಂಗನು ೫-೬ ವರುಷದವನು ಏಕಾಏಕಿ ವಿಷಮ ಜ್ವರ ಕಾಣಿಸಿಕೊಂಡು ಕಣ್ಣು ಬೆಳ್ಳಗೆ ಮಾಡಿದಾಗ ಅಮರಪ್ಪ ಆತನ ಹೆಂಡತಿ ಮಲ್ಲಮ್ಮ ಗಾಬರಿಗೊಂಡು ಆಸ್ಪತ್ರೆಗೆ ಹೋಗಬೇಕೆನ್ನುವಷ್ಟರಲ್ಲಿ ಮಗು ಸತ್ತು ಹೋಯಿತು. ಗಂಡಹೆಂಡತಿ ಗೋಳಿಟ್ಟು ಅಳತೊಡಗಿದರು. ಅತ್ತ ಗುರುಗಳು ಬಂದು ಅಡ್ಡಪಲ್ಲಕ್ಕಿಯಲ್ಲಿ ಕುಳಿತರು. ಮೆರವಣಿಗೆ ಬೆಳ್ಳುಬ್ಬಿಯ ಬೀದಿಯಲ್ಲಿ ಹಲಗಿ ಬಾಜಾ, ಡೊಳ್ಳು ಭಜನೆಗಳ ಮೂಲಕ ನಡೆಯಿತು. ಪಟಾಕಿಗಳನ್ನು ಹಾರಿಸುವುದು, ಮದ್ದು ಸುಡುವುದು ನೋಡುಗರ ಕಂಗಳಿಗೆ ಹಬ್ಬದೂಟವಾಗಿ ಪರಿಣಮಿಸಿತ್ತು. ಇತ್ತ ಅಮರಪ್ಪ ಆತನ ಹೆಂಡತಿ ಆ ಸತ್ತ ಮಗುವಿಗೆ ಕೌದಿಯಲ್ಲಿ ಸುತ್ತಿ ಒಳಮನೆಯಲ್ಲಿಟ್ಟರು. ಪಾಲಿಕೆಯಿಂದಿಳಿದು ಗುರುಗಳು ಮನೆಯೊಳಗೆ ಪ್ರವೇಶಿಸಿದರು. ಇಬ್ಬರು ಗಂಡಹೆಂಡತಿ ದುಃಖವನ್ನು ತೋರಗೊಡದೆ ಗುರುಗಳ ಪಾದಸೇವೆ ಮಾಡಿದರು. ಆಗ ಗುರುಗಳು ನಿಮ್ಮ ಚಿರಂಜೀವಿ ಸಿದ್ದಲಿಂಗನು ಎಲ್ಲಿ ಎಂದು ಕೇಳಿದಾಗ ದುಃಖದ ಕಟ್ಟೆಯೊಡೆಯಿತು.[೮೧] ಮಲ್ಲಮ್ಮ ಅಳುತ್ತ ವಿಷಮಜ್ವರದಿಂದ ಸತ್ತಹೋಗ್ಯಾನ್ರಿ ನಿಮಗ ಗೊತ್ತಾಗಬಾರ್ದು ಅಂತ ಒಳ ಮನ್ಯಾಗ ಕೌದ್ಯಾಗ ಸುತ್ತಿ ಇಟ್ಟೇವಿ ಅಂದಾಗ ಗುರುಗಳು ಒಂದು ನಿಮಿಷ ಏಕಾಂಗಿಯಾಗಿ ಕುಳಿತು ಶಿವಲಿಂಗಾ ಎದ್ದು ಬಾರೋ ಅಂತ ಕರೆದಾಗ ಒಳಮನೆಯಿಂದ ಶಿಶು ತಂದೆತಾಯಿಗಳ ಹತ್ತಿರ ಬಂದಾಗ ಆ ತಂದೆತಾಯಿಗಳಿಗೆ ಆದ ಆನಂದ ಹೇಳತೀರದಷ್ಟು. ನನ್ನ ಮಗುವಿಗೆ ಪುನರ್ ಜನ್ಮ ನೀಡಿದ ಪುಣ್ಯಚಿತ್ತರು ಎಂದು ಗುರುವಿನ ಪಾದದಡಿಯಲ್ಲಿ ಉರುಳಾಡಿದರು.

➢ **ಕೇಡಿಗಳಿಗೆ ಶಿಕ್ಷೆ:-**

ಶ್ರೀ ಷ.ಬ್ರ. ಮಳೇಂದ್ರ ಶಿವಾಚಾರ್ಯರು ಬರುವ ಹಾದಿಗೆ ಹೊಂಚು ಹಾಕಿ ಕುಳಿತುಕೊಂಡಿದ್ದ ಆ ಕಿಡಿಗೇಡಿಗಳು ಶ್ರೀಗಳ ಹತ್ತಿರ ಬಂದು ತಾವು ಉಂಡ ಊಟ, ಕಂಡ ಕನಸು ಹೇಳುತ್ತೀರಂತೆ, ಮಂತ್ರಶಕ್ತಿಯಿಂದಲೇ ರೋಗ ಪರಿಹಾರ ಮಾಡುತ್ತೀರಂತೆ. ಹಿಡಿದುಕೊಂಡ ಭೂತ ಬಿಡಿಸ್ತೀರಂತೆ ಹೀಗೆ ಪ್ರಶ್ನೆಗಳ ಸುರಿಮಳೆಯೇ ಸುರಿಸಿದರು. ಆಗ ಶ್ರೀಗಳು ಸಮಾಧಾನ ಚಿತ್ತರಾಗಿ ನಿಮಗೆ ಸಂಭವಿಸಿರುವುದಾದರೂ ಏನು ಎಂದು ಕೇಳಿದಾಗ ಅವರೀರ್ವರೂ ಒಬ್ಬರಿಗೊಬ್ಬರು ಮುಖ ನೋಡುತ್ತ, ನನ್ನ ಹೆಂಡತಿಗೆ ಖಾಯಿಲೆಯಾಗಿದೆ. ದವಾಖಾನೆಗೆ ಹೋಗಿ ತೋರಿಸಿದರೂ ವಾಸಿಯಾಗಿಲ್ಲ ಅಂತ ಒಬ್ಬ ಹೇಳಿ, ಇನ್ನೊಬ್ಬನು ನಾನು ಬರುವಾಗ ಹಲ್ಲಿ ನುಡಿಯಿತು ಅದರ ಅರ್ಥ ಏನೂ ಅಂತ ತಮಗೆ ಕೇಳ್ತಾ ಇದ್ದೀನಿ. ಅಂದಾಗ ಶ್ರೀಗಳು ಅಯ್ಯೋ ನಿನ್ನ ಹೆಂಡತಿ

ಸತ್ತುಹೋಗಿದ್ದಾಳೆ ಇಷ್ಟರಲ್ಲಿಯೇ ನಿನಗೆ ಕರೆಬರುವುದು ಎಂದು ಹೇಳಿದಾಗ ಆತ ನಗುತ್ತ ಗುರುಗಳೇ ನನ್ನ ಹೆಂಡತಿಗೆ ಖಾಯಿಲೆಯೇ ಆಗಿಲ್ಲ ಆಕೆ ಹೇಗೆ ಸಾಯುತ್ತಾಳೆ ಅಂದ ಇನ್ನೊಬ್ಬನಿಗೆ ನೀನು ನಿಮಿಷಾರ್ಧದಲ್ಲಿಯೇ ಕಾಲು ಮುರಿದುಕೊಳ್ಳುತ್ತೀ ಅಂತ ಹೇಳಿದಾಗ ಅವರಿಬ್ಬರು ನಗುತ್ತಾ ಗೇಲಿ ಮಾಡುತ್ತಾ ಇರುವಾಗ ಒಬ್ಬ ಓಡಿ ಬಂದು ನಿನ್ನ ಹೆಂಡತಿ ಮಾಳಿಗೆಯ ಮೇಲಿನಿಂದ ಬಿದ್ದು ಸತ್ತಿದ್ದಾಳೆ ಅಂತ ತಿಳಿಸಿದ. ಇನ್ನೊಬ್ಬ ಗುರುಗಳಿಗೆ ಸೋಲಸಿದೆ ಎಂದು ಹಾರಾಡುತ್ತಿರುವಾಗ ಬಿದ್ದು ಕಾಲು ಮುರಿದುಕೊಂಡು ಬಿಟ್ಟ.

ಆಗ ಅವರೀರ್ವರು ಗುರುಗಳಿಗೆ ತಮಗೆ ಪರೀಕ್ಷೆ ಮಾಡಿ ನಾವೇ ನಮ್ಮ ಕೇಡಿಗೆ ತುತ್ತಾದವೆಂದು ಪರಿತಪಿಸಿದರು. ಕಾಲು ಹಿಡಿದು ಬೇಡಿಕೊಂಡರು. ಆದರೆ ಗುರುಗಳು, ನಿಮ್ಮ ದೈವಕ್ಕೆ ನೀವೆ ಕಾರಣರು ಬಂದದ್ದು ಭೋಗಿಸಬೇಕು ಎಂದು ತುರುಮರಿಗೆ ನಡೆದೇ ಬಿಟ್ಟರು.[೬೨] ಇತ್ತ ತನ್ನ ಹೆಂಡತಿ ಮರಣಕ್ಕೆ ಶೋಕ ಮಾಡುತ್ತಾ ಅಂತಿಮ ಸಂಸ್ಕಾರ ಮಾಡಿದರೆ, ಇನ್ನೊಬ್ಬ ಆಸ್ಪತ್ರೆ ಸೇರಿದ.

➢ **<u>ತನ್ನ ಪ್ರತಿಷ್ಠೆಯೇ ತನ್ನ ಸರ್ವನಾಶಕ್ಕೆ ಕಾರಣ:-</u>**

ಅಹಂಕಾರದ ದಳ್ಳುರಿಗೆ ರಾವಣ, ಕುಂಭಕರ್ಣ, ದುರ್ಯೋಧನ ಮೊದಲಾದ ಕೌರವರು ಸರ್ವನಾಶವಾಗಿ ಹೋದರು. ಅಹಂಕಾರ ಏನೆಲ್ಲವೂ ಮಾಡಿಸುತ್ತದೆ. ಮಾಡಬಾರದ್ದನ್ನು ಮಾಡಿಸುತ್ತದೆ. ದರ್ಪ, ದಬ್ಬಾಳಿಕೆಯಿಂದ ಮೆರೆಯುತ್ತಿದ್ದ ಒಬ್ಬ ಶ್ರೀಮಂತನಿಗೆ ಈ ಮೇಲ್ಕಂಡ ಎಲ್ಲಾ ಅಹಂಕಾರಗಳಿಂದ ತುಂಬಿ ಹೋಗಿದ್ದ. ಸಾಧು-ಸಂತರನ್ನು ಛೇಡಿಸುವುದು, ಶಿವಯೋಗಿಗಳನ್ನು ದೂರಿಕರಿಸುವುದು ಹೀಗೆ ಮಾಡುತ್ತಿರಬೇಕಾದರೆ. ಓಡಿ ಹೋಗುವ ಕೇಡನ್ನು ಕೈ ಮಾಡಿ ಕರೆದಂತೆ, ಸಂತರು, ಶರಣರು ಅಂದರೆ ಕೇಡಿಗೆ ಕೇಡು ದಾಟನಿಂತವರು, ಅವರಿಗೆ ತಡವಿ ಕೇಡನ್ನು ತನ್ನ ಬಳಿಗೆ ಕರೆದುಕೊಂಡಂತೆ.

ಅಹಂಕಾರದಿಂದ ತುಂಬಿ ತುಳುಕುತ್ತಿರುವ ಶ್ರೀಮಂತ ಬಂದು ಗುರುಳೇ ನನ್ನ ಮನೆಗೆ ನಾಲ್ಕು ಬಾಗಿಲುಗಳಿವೆ. ನಾನು ಮುಂಜಾನೆ ಯಾವ ಬಾಗಿಲಿಂದ ಹೋಗುತ್ತೇನೆ ಎಂಬುದನ್ನು ನೀವು ಹೇಳಬೇಕು ಅಂದಾಗ ಶ್ರೀಗಳು ನಸುನಗುತ್ತ ನಾನೊಂದು ಚೀಟಿ ಬರೆದು ಕೊಡುತ್ತೇನೆ, ನೀನು ಚೀಟಿ ಒಡೆದು ನೋಡಬೇಕೆಂದು ಕಟ್ಟಪ್ಪಣೆ ಹಾಕಿ. ಚೀಟಿ ಬರೆದು ಅದು ಲಕೋಟೆಯಲ್ಲಿಟ್ಟು ಅಂಟು ಹಚ್ಚಿ ಕೊಟ್ಟರು.

ಶ್ರೀಮಂತನು ಆ ಚೀಟಿಯನ್ನು ತೆಗೆದುಕೊಂಡು ಬಂದ ಊಟ ಮಾಡಿ ಮಲಗಿದ ಆತನ ಮೂರ್ಖ ಮನಸು ನಾಲ್ಕು ಬಾಗಿಲಬಿಟ್ಟು ಬೆನ್ನು ಗೋಡೆ ಒಡೆದು ಹೋಗಲು ಸೂಚಿಸಿದಾಗ ಶ್ರೀಮಂತನೆದ್ದು ತನ್ನ ಆಳು ಮಕ್ಕಳನ್ನು ಕರೆದು ಈ ಬೆನ್ನು ಗೋಡೆ ಒಡೆಯಿರಿ ಎಂದು ಹೇಳಿದ ಅವರು ಬೆಳಗಾಗುವುದರೊಳಗೆ ಗೋಡೆ ಒಡೆದರು. ಆ ಗೋಡೆಯಿಂದ ಹೊರಬಂದು ಲಕೋಟೆ ಒಡೆದು ನೋಡಿದ. ನೀನು ಬೆನ್ನು ಗೋಡೆ ಒಡೆದು ಹೊರಗೆ ಬರುತ್ತೀ. ಇನ್ನು ಮೇಲೆ ನಿನ್ನ ಸರ್ವ ಸಂಪತ್ತು ನಾಶವಾಗುತ್ತದೆ. ಅಲ್ಲದೇ ನಿನ್ನ ಮನೆತನದ ವಂಶವೇ ಇಲ್ಲಿಗೆ ಸಮಾಪ್ತಿ. ನಿನ್ನ ಕುಚೇಷ್ಟೆ ಸರ್ವನಾಶಕ್ಕೆ ಕಾರಣವಾಯಿತು. ಆಗ ಆ ಶ್ರೀಮಂತ ಶ್ರೀಗಳ ಸನ್ನಿಧಿಗೆ ಬಂದು ತಪ್ಪಾಗಿದೆ ಅಂತ ಗೋಗರೆದ. ಆದರೇನು ಆ ಬ್ರಹ್ಮ ಬರಹಕ್ಕೆ ಅಳುಕಿಸುವವರಾರು ? ಅದು ಸಾಧ್ಯವಿಲ್ಲ 'ಜಾತಸ್ಯ ಮರಣಂ ಧೃವಂ' ಎಂದು ಹೇಳಿದರು. ಇನ್ನಾದರೂ ಶಿವಯೋಗಿಗಳಿಗೆ ಸತ್ವಪರೀಕ್ಷೆಗೆ ಒಡ್ಡದಿರು ಶರಣ, ಸಂತರಲ್ಲಿ ಭಕ್ತಿಯಿಡು.[೬೩] ಮುಂದಿನ ಜನ್ಮದಲ್ಲಾದರೂ ಆ ಶಿವಶರಣರ ಆಶೀರ್ವಾದ ನಿನ್ನನ್ನು ಕಾಪಾಡುತ್ತದೆ ಎಂದು ಹೇಳಿ ಕಳುಹಿಸಿದರು.

➢ **ಮಂತ್ರವಾದಿಗೆ ಹಿತವಚನ:-**

ಶ್ರೀ.ಷ.ಬ್ರ.ಮಳೇಂದ್ರ ಶಿವಾಚಾರ್ಯರ ವ್ಯಕ್ತಿತ್ವವೆ ನೃಪತುಂಗನ ನಾಡು ಅವರ ಶಕ್ತಿತ್ವಕ್ಕೆ ಬಾಗಿತ್ತು. ಈ ನಾಡಿಗೆ ಆಂಧ್ರಮೂಲದ ಮಾಂತ್ರಿಕನ ಪ್ರವೇಶವಾಗಿತ್ತು. ಆತ ಯಕ್ಷಿಣಿ ವಿದ್ಯೆಯ ಮುಖಾಂತರ ಸುಂದರ ಯುವತಿಯರನ್ನು ಮೂರ್ಛೆಗೊಳಿಸಿ ಲೈಂಗಿಕ ದೌರ್ಜನ್ಯ ನಡೆಸಿ ನಂತರ ಆ ಯುವತಿಯರಿಗೆ ಎಚ್ಚರಿಸಿ ಕಳುಹಿಸುವಾಗ ಯಾರ ಮುಂದೆ ಈ ವಿಷಯ ಬಿತ್ತರಿಸಬೇಡ.

ಒಂದು ವೇಳೆ ಬಿತ್ತರಿಸಿದರೆ ನಿಮ್ಮನ್ನ ನಾಯಿ, ಬೆಕ್ಕು ಮಾಡಿ ನನ್ನ ಹಿಂದೆ ತಿರುಗುವಂತೆ ಮಾಡುತ್ತೇನೆಂದು ಅಂಜಿಕೆ ಹಾಕಿ ಕಳುಹಿಸುತ್ತಿದ್ದ. ಈ ವಿಷಯ ಅದು ಹೇಗೋ ಶ್ರೀಗಳಿಗೆ ಗೊತ್ತಾಗಿ ಅವನಿದ್ದಲ್ಲಿಗೆ ಹೋಗಿ ನೀ ಕಲಿತ ವಿದ್ಯೆಯನ್ನು ಸದುಪಯೋಗ ಪಡಿಸಿಕೋ, ನಿನ್ನಿಂದ ಜಗತ್ತು ಉದ್ಧಾರವಾಗಲಿ ಎಂದು ಹಿತೋಪದೇಶ ಹೇಳಿದಾಗ ಆ ಮಾಂತ್ರಿಕನು ಇಲ್ಲಿಯವರೆಗೆ ನನಗ್ಯಾರೂ ಬಂದು ನನ್ನೆದುರು ನಿಂತು ಮಾತಾಡಿಲ್ಲ. ನನ್ನ ಶಕ್ತಿ ನಿನಗೆ ಗೊತ್ತಿಲ್ಲ, ಮರಳಿಹೋಗು ಜಗತ್ತನ್ನು ಉದ್ದಾರ ಮಾಡ್ತೀನಿ ಎನ್ನುವ ಹುಚ್ಚು ಹವ್ಯಾಸ ಬಿಟ್ಟು ನಿನ್ನೂರು ಸೇರಿಕೋ ಎಂದು ಗುಡುಗುಡಿಸಿದ. ಆದರೆ, ಶ್ರೀಗಳು ಯಾವುದಕ್ಕೂ ಭಯ ಪಡದೆ, ಅಲ್ಲಿಯೇ ನಿಂತು ನೀ ಕಲಿತ ವಿದ್ಯೆ ನಿನ್ನ ಕ್ಷಣಿಕ ಸುಖಕ್ಕಾಗಿ ಹೊರತು ಜನಹಿತಕ್ಕಾಗಿ ಅಲ್ಲ. ನೋಡು, ತಿರುಗಿ ನೋಡು, ಭೋಗಿಯಾಗಬೇಡ, ಯೋಗಿಯಾಗಿ, ಜನಾನುರಾಗಿಯಾಗೆಂದು ಹೇಳಿದರೂ ಕೇಳದೆ ಆ ಮಾಂತ್ರಿಕನು ತನ್ನೆಲ್ಲ ವಿದ್ದೆಯನ್ನು ಪ್ರಯೋಗಿಸಿದ. ಅವಾವೂ ನಾಟಲಿಲ್ಲ. ಆತನ್ನಲ್ಲಿರುವ ಯಕ್ಷಿಣಿ ವಿದ್ಯೆಯನ್ನೇ ನಾಶಗೊಳಿಸಿದ್ದರು. ಮಂತ್ರವಾದಿಯು ಓಡಿಹೋಗಲಣಿಯಾದಾಗ ಆತನ ಸುತ್ತೆಲ್ಲ ಬೆಂಕಿ ಹರಡಿಕೊಂಡಿತು. ತನ್ನದು ತಪ್ಪಾಯಿತೆಂದು ಗೋಗರೆದ, ಚೀರಾಡಿದ, ಬೆಂಕಿಯನ್ನು ನಂದಿಸು ಗುರುವೇ ಎಂದು ಅಂಗಲಾಚಿದ. ಇನ್ನ ಮೇಲೆ ಮನುಷ್ಯನಾಗಿ ಬಾಳುತ್ತೇನೆ, ಪರಹೆಣ್ಣು ಮಕ್ಕಳು ತಾಯಿ, ತಂಗಿ, ಅಕ್ಕನೆಂದು ತಿಳಿದು ನಡೆಯುತ್ತೇನೆ, ತಂದೆ! ಶಿವಯೋಗಿ ನಿಮ್ಮ ಮಾರ್ಗದರ್ಶನದಲ್ಲಿ ಬಾಳಲು ನನಗೆ ಹಾದಿ ಮಾಡಿಕೊಡು ಎಂದು ಅಂಗಲಾಚಿದನು.[೮೪] ಕರುಣಾಮೂರ್ತಿ ಮಳೇಂದ್ರ ಶಿವಾಚಾರ್ಯರು, ನಿನ್ನಲ್ಲಿರುವ ವಿದ್ಯೆಯಲ್ಲಾ ಸರ್ವನಾಶ ಮಾಡಿಬಿಟ್ಟಿರುವೆ, ಹೋಗು ಇನ್ನು ಮುಂದಾದರೂ ಒಳ್ಳೇತನವನ್ನು ಬಿತ್ತು, ಸಮಾಜೋದ್ಧರಕನಾಗಿ, ದೀನದಲಿತರ ಸೇವೆ ಮಾಡು, ಅಂಧ, ಅನಾಥ, ಅಂಗವಿಕಲರಿಗೆ ಕರೆದುಉಪಚರಿಸು ಎಂದ ಮಂತ್ರವಾದಿಗೆ ಹಿತವಚನಗಳನ್ನು ಬೋಧಿಸಿ ಕಳಿಸಿಕೊಟ್ಟಿರುವುದು ಇತಿಹಾಸವಾಗಿ ಉಳಿಯಿತು. ಮಳೇಂದ್ರ ಶಿವಾಚಾರ್ಯರು ಅಫಜಲಪುರಕ್ಕೆ ಬಂದಾಗ ಅವರನ್ನು ಯಾರು ಮಾತನಾಡಿಸಲಿಲ್ಲ. ಇಲ್ಲಿ ಬಂದು ಗವಿಯೊಂದರಲ್ಲಿ ಅನುಷ್ಠಾನಕ್ಕೆ ಕೂಡುತ್ತಾರೆ.

ಮುಂದೆ ಅಫಜಲಪುರದಲ್ಲಿ ಬರಗಾಲಬಂದಾಗ ಜನ ಈ ಸಿದ್ಧಿಪುರಷ ನೆಡೆಗೆ ಹೊಗುತ್ತಾರೆ. ಮಳೇಂದ್ರ ಶಿವಾಚಾರ್ಯರು ತಮ್ಮ ಅನುಷ್ಠಾನವನ್ನು ನಿಲ್ಲಿಸಿ ಗವಿಯಿಂದ ಹೊರಬಂದು ಏನು ಎಂದು ಕೇಳಿದಾಗ ಬರಗಾಲವಿದೆ ಇದನ್ನು ನಿವೇ ನಿಗಿಸಬೇಕು ಎಂದಾಗ ತನ್ನ ಹೆಗಲ ಮೇಲೆ ಇದ್ದ ಬಿಳಿ ಕಂಬಳಿಯನ್ನು ಆಕಾಶದೇಡೆಗೆ ಬಿಸಿ ಮಳೆತರೆಯಿಸಿದರು. ಇದರಿಂದ ಯಾವ ಒಬ್ಬ ವ್ಯಕ್ತಿಯನ್ನು ತಾತ್ಸರ ಮನೋಭಾವದಿಂದ ಕಾಣಬಾರದು. ಏಕೆಂದರೇ ಮಳೇಂದ್ರ ಶಿವಾಚಾರ್ಯರು ಅಫಜಲಪುರಕ್ಕೆ ಬಂದಾಗ ಜನರು ಅವರಿಗೆ ಸರಿಯಾದ ರೀತಿಯಲ್ಲಿ ಕಾಣಲಿಲ್ಲ. ಆದರು ಶಿವಾಚಾರ್ಯರು ಅಲ್ಲಿಯೇ ಗವಿಯೊಂದರಲ್ಲಿ ಉಳಿದು ಅಫಜಲಪುರದ ನೀರಿನ ದಾಹವನ್ನು ತಿರಿಸಿದರು.

ಕಾಶ್ಮೀರದ ಆರಸನಿಗೆ ಮಕ್ಕಳಿರುವುದಿಲ್ಲ ಆಗ ಅವರು ಮಳೇಂದ್ರ ಶಿವಾಚಾರ್ಯರಿಂದ ಎರಡು ಊತತ್ತಿಯನ್ನು ಪಡೆದು ಮುಂದೆ ಅವರು ಎರಡು ಅವಳಿ ಜವಳಿ ಮಕ್ಕಳನ್ನು ಪಡೆದರು. ಊತ್ತತ್ತಿಯನ್ನು ಪಡೆದ ತಕ್ಷಣ ಮಕ್ಕಲಾದವು

ಎಂಬುವದಿಲ್ಲ ಮುಖ್ಯವಲ್ಲ. ರಾಜ ರಾಣಿಯರು ತಮಗೆ ಮುಂದೆ ಮಕ್ಕಳೇ ಆಗುವುದಿಲ್ಲ ಎಂದು ತಮ್ಮ ಮನಸ್ಸಿನಲ್ಲಿ ನಿರ್ಧರಿಸಿದರು. ಈ ಊತ್ತತ್ತಿ ಪಡೆದ ನಂತರ ಮಾನಸಿಕ ನೆಮ್ಮದಿಯನ್ನು ಅವರು ಪಡೆದು ಎಂದಿನಂತೆ ತಮ್ಮ ಸಂಸಾರಿಕ ಜೀವನ ನಡೆಸಿದರು. ಮುಂದೆ ಅವರಿಗತೆ ಮಕ್ಕಳ ಭಾಗ್ಯ ಕಣ್ಣುತೇರಿಯಿತ್ತೆಂದು ಹೆಳಬಹುದಾಗಿದೆ.

ದೇಶ ಸಂಚಾರವಾಗಿ ಹೂನಗುಂದಕ್ಕೆ ಹೊದಾಗ ಅಲ್ಲಿ ಜನರೆಲ್ಲರು ಶ್ರೀಶೈಲಕ್ಕೆ ಹೊರಟ್ಟಿದರು ಅವರನ್ನು ತಡೆದು ಕೆಳಿದಾಗ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ಹೊರಟ್ಟಿದರ ಬಗ್ಗೆ ಹೇಳಿದರು. ಆಗ ಮಳೇಂದ್ರ ಶಿವಾಚಾರ್ಯರು ನಿಮ್ಮ ಕೆಲಸಗಳನ್ನು ಜವಬ್ದಾರಿಯಿಂದ ಮಾಡಿದಾಗ ಮಾತ್ರ ದೇವರ ಕರುಣೆಗೆ ಪಾತ್ರರಾಗುತ್ತೀರಿ ಎಂದು ತಿಳಿ ಹೇಳಿದರು. ಕಾಯಕವೇ ಕೈಲಾಸವೆಂದನ್ನು ತಿಳಿಸಿಕೊಟ್ಟರು. ಇದೇ ರೀತಿ ಅವರು ಸಂಚಾರ ಹೊದಲೆಲ್ಲ ಜನರಿಗೆ ನಿಜ ಜೀವನದ ಬಗ್ಗೆ ತಿಳಿಸಿಕೊಟ್ಟರು.

೭. ಅಫಜಲಪುರದ ಶ್ರೀ ಘತರಗಿಯ ಭಾಗ್ಯವಂತಿದೇವಿಯ ಹಿನ್ನೆಲೆ ಮತ್ತು ಪವಾಡಗಳು:-

➢ **ಹಿನ್ನೆಲೆ:-**

ಭಾಗ್ಯವಂತಿ ದೇವಿ ವಿಜಯನಗರದ ಅರಸು ಮನೆತನದ ಕುಲದೇವತೆಯಾಗಿ ಮೆರೆದು ಕೊನೆಯ ಅರಸನಾದ ರಾಮರಾಯನು ದೇವಿಯವಾಣಿಯನ್ನು ಅಲಕ್ಷಿಸಿದ ಕಾರಣ ವಿಜಯ ನಗರದ ಮಹಾಸಂಪತ್ತಿಗೆ ಅವನತಿಕಾಲ ಬಂದೋದಗುತ್ತದೆ. ಆಗ ಅಲ್ಲಿ ಯವನರ ಆಳ್ವಿಕೆ ಪ್ರಾರಂಭವಾದ ನಂತರ ಭಾಗ್ಯವಂತಿ ದೇವಿಗೆ ಅಲ್ಲಿ ನೆಲಸಲಿಕ್ಕೆ ಮನಸ್ಸಾಗಲಿಲ್ಲ. ತಕ್ಷಣದಲ್ಲಿಯೇ ದೇವಿಯು ರಾಜ್ಯ ತೊರೆಯುತ್ತೇನೆಂದು ರಾಜನ ಸ್ವಪ್ನದಲ್ಲಿ ಎಲ್ಲ ವಿಷಯ ತಿಳಿಸುತ್ತಾಳೆ. ದೇವಿಯು ಘಟಸರ್ಪರೂಪ ತಾಳಿ ತುಂಬಿ ಹರಿಯುವ ತುಂಗಭಧ್ರಾ ನದಿಯಲ್ಲಿ ಧುಮುಕಿ ಕಲಬುರಗಿ ಜಿಲ್ಲೆಯಲ್ಲಿ ಹರಿವ ಭೀಮಾನದಿಯ ಮಾರ್ಗವಾಗಿ ಬಂದು ಘತ್ತರಗಿ ಸಮೀಪದಲ್ಲಯೇ ಹೊಳೆಯ ಒತ್ತಿನಲ್ಲಿ ಲಕ್ಕಿ, ಭೂತಬಾಳೆ ಹಲವಾರು ಕಂಟಿಗಳ ಗುಂಪಿನಲ್ಲಿ ಹಲವಾರು ದಿನ ಯಾರಿಗೂ ಕಾಣದಂತೆ ಗುಪ್ತವಾಗಿ ಇರುತ್ತಾಳೆ ಈ ಮಹಾಭಾಗ್ಯ ಯಾರಿಗೂ ಕಾಣದಂತೆ ಗುಪ್ತವಾಗಿ ಇರುತ್ತಾಳೆ ಈ ಮಹಾಭಾಗ್ಯ ದೇವತೆ.[೭೨]

ಮುಂದೆ ಸುಲ್ತಾನರ ಆಳ್ವಕೆಯು ಹಿಂದಾಗಿ ಬ್ರಿಟಿಷರ ಆಳ್ವಿಕೆ ನಡೆಯುತ್ತದೆ. ಆಗ ಅವಳು ಕನ್ನಡ ರಾಜ್ಯದ ನವ ನಿರ್ಮಾಣಕ್ಕಾಗಿ ದೀರ್ಘಕಾಲ ತಪಸ್ಸನ್ನು ಆಚರಿಸುತ್ತಾಳೆ. ಅದೇ ಹೊಳೆ ಒತ್ತಿನಲ್ಲಯೇ ದೇವಿಗೆ ಅವತಾರ ಬಂದೊದಗಿದ ನಂತರ ಈ ದೇವಿಯು ವಾಸಿಸಿದ ಈ ಹೊಳೆ ಇವತ್ತು ಗಡ್ಡಿಲಕ್ಷ್ಮಿ ಎಂದು ಕರೆಯುತ್ತಾರೆ. ಈಗಲೂ ಭಾಗ್ಯವಂತಿದೇವಿಯ ಪೂಜೆಯ ಸಮಯಕ್ಕೆ ಈ ಗಡ್ಡಿ ಲಕ್ಷ್ಮೀಯ ಪೂಜೆಯಾಗುತ್ತದೆ. ಇದೊಂದು ಈಗ ಪವಿತ್ರ ಸ್ಥಾನವೆಂದು ಪ್ರಸಿದ್ಧಿ ಪಡೆದಿದೆ.

➢ **ದ್ಯಾಮಣ್ಣನಿಗೆ ದರ್ಶನ ನೀಡಿದ ದೇವಿ:-**

ಘತ್ತರಗಾ ಗ್ರಾಮದಲ್ಲಿ ದ್ಯಾಮಣ್ಣನೆಂಬ ಓರ್ವ ಕುರುಬರವನು ಕುರಿಗಳನ್ನು ಮೇಯಿಸಲು ಹೊಳೆ ಕಡೆ ಹೋಗುತ್ತಿದ್ದನು. ಅವನಾದರೂ ದೇವರಲ್ಲಿ ಅತ್ಯಂತ ಭಕ್ತಿಯುಳ್ಳವನೂ, ಧಾರ್ಮಿಕ ಬುದ್ಧಿಯುಳ್ಳವನೂ ಆಗಿದ್ದ. ಮೇಲಾಗಿ ಅವನಲ್ಲಿ ಬಹಳ ಭಕ್ತಿ ಇತ್ತು. ಮಾನವನು ಮಹಾನ್ ಆಗಬೇಕಾದರೆ ಮೊದಲು ಭಕ್ತಿಬೇಕು.ದ್ಯಾಮಣ್ಣನಿಗೆ ಒಂದು ದಿನ ಲಕ್ಕಿಗಡ್ಡಿಯಲ್ಲಿ ಕಾಜಿನ ಕಂಬದ ರೂಪದಲ್ಲಿ ಭಾಗ್ಯವಂತಿ ದೇವಿಯಕಾಣಿಸುತ್ತಾಳೆ. ಅದು ಹೇಗೆಂದರೆ, ಕಾಜಿನ ಕಂಬದ ನೀರಿನ ಘಟಸರ್ಪ ಕಾಣಿಸಿ ಅದೇ ಕಂಬದಿಂದ ವಿಚಿತ್ರವಾದ ವಾಣಿಯು ಕೇಳಿ ಬರುತ್ತದೆ. ಈ ದೃಶ್ಯವನ್ನು ಮುಗ್ಧಭಕ್ತ ದ್ಯಾಮಣ್ಣ ಕಂಡು

ವಿಸ್ಮಯಗೊಂಡು ಅನ್ನುತ್ತಾನೆ. ಇದು ಏನಾಗಿರಬೇಕು ? ಕಾಜಿನ ಕಂಬ! ಕಂಬದಲ್ಲಿ ನೀರು !! ನೀರಿನಲ್ಲಿ ಘಟಸರ್ಪ !! ಇದುಏನೋ ಇರಬೇಕು ಎಂದು ವಿಚಾರಿಸಿದ ''ಓಹೋ ಇವಳು ಸಾಕ್ಷಾತ್ ದೇವಿಯೇ ಇರಬಹುದು'' ಎಂದು ಅವನ ನಂಬಿಕೆ ಯಾಗಿದೆ. ಅದಕ್ಕೆ ದೊಡ್ಡವರು ಹೇಳುತ್ತಾರೆ.

ನಂಬು ನಂಬೆಲೆ ಮನವೆ ಹಂಬಲಿಸಿ ಕೆಡಬೇಡ ।

ಶ್ರೀ ಸಾಂಬನೊಲುಮಗೆ ನಂಬಿಗೆ ಆ ಕರಣ ।।

ದೇವರನ್ನು ನಂಬಿ ಯಾರು ಕೆಟ್ಟಿಲ್ಲ ।

ಆದರೆ ದೇವರನ್ನು ಕೆಣಕಿ ಜಗತ್ತಿನಲ್ಲಿ ಯಾರೂ ಬದುಕಿಲ್ಲ ।।

ದ್ಯಾಮಣ್ಣ ದೇವಿಯನ್ನು ನಂಬಿ ದಿನಾಲೂ ಭಕ್ತಿಯಿಂದ ಪೂಜೆಯನ್ನು ಪೂರೈಸುತ್ತಾನೆ. ಈ ವಿಷಯವನ್ನು ಊರಿನ ಹಿರಿಯರಿಗೆ, ಕೇರಿಯ ಬಂಧುಗಳಿಗೆ ದ್ಯಾಮಣ್ಣಸಾರಿ ಸಾರಿ ಹೇಳುತ್ತಿರುವಾಗ ಅವನ ಮಾತಿಗೆ ಯಾರೂ ಬೆಲೆ ಕೊಡಲಿಲ್ಲ''. ಇವನು ಮಬ್ಬು ಇದ್ದಾನೆ ಏನೇನೋ ಹೇಳುತ್ತಾನೆ. ಏನೋ ಕಾಜಿನ ಕಂಬಂತೆ,ಅದರಲ್ಲಿ ನೀರು ಇದೆ ಅಂತೆ, ಆ ನೀರಿನಲ್ಲಿ ಘಟಸರ್ಪ ಅಂತೆ, ಅದು ಮಾತಾಡುತ್ತಂತೆ, ಈತ ಹೋಗಿ ದಿನಾಲೂ ಪೂಜಾಮಾಡಿ ಬರುತ್ತಾನಂತೆ.[೮೬] ಇವನಿಗೆ ಹುಚ್ಚು ಹಿಡಿದಿದೆ ಅಂತ ಕೆಲವು ದಿನ ಆಡಿಕೊಳ್ಳುತ್ತಾರೆ. ಆದರೆ ಸದ್ಭಕ್ತನಾದ ದ್ಯಾಮಣ್ಣ ಜನ ಮೆಚ್ಚಿ ನಡೆದುಕೊಳ್ಳುವವನಲ್ಲ. ಮನ ಮೆಚ್ಚಿ ನಡೆದುಕೊಳ್ಳುವವನು. ಯಾಕೆಂದರೆ ಜನರ ಬಾಯಿ ಮುಚ್ಚಿಸಲಿಕ್ಕೆ ಸಾಧ್ಯವಿಲ್ಲ. ಹೇಗಿದ್ದರೂ ಒಂದು ಮಾತು ಅನ್ನುತ್ತಾರೆ.

ಸರ್ವರಿಗೂ ದೇವಿಯ ಸಾಕ್ಷಾತ್ಕಾರ:-

ದ್ಯಾಮಣ್ಣ ಕೆಲವು ದಿವಸ ಗತಿಸಿದ ನಂತರ ಊರಿನ ಹಿರಿಯರೆಲ್ಲ ಕೂಡಿ ಕೊಂಡು ವಿಚಾರ ಮಾಡುತ್ತಾರೆ. ದ್ಯಾಮಣ್ಣ ಹೇಳುವುದು ನಿಜವೊ ಅಥವಾ ಸುಳ್ಳೋ ಹೋಗಿ ನೋಡಿಕೊಂಡಾದರೂ ಬರೋಣ ಎಂದು ಎಲ್ಲರೂ ಕೂಡಿಕೊಂಡು ಹೊಳೆ ಒತ್ತಿನ ಹತ್ತಿರ ಹೋಗಿ ನಿಂತುಕೊಳ್ಳುತ್ತಾರೆ. ಅಲ್ಲಿ ಕುರಿ ಕಾಯುವ ದ್ಯಾಮಣ್ಣ ಕುರಿಗಳನ್ನು ಮೇಯಿಸುತ್ತಿದ್ದ. ಅವನನ್ನು ನೋಡಿ '' ಏ ದ್ಯಾಮಣ್ಣ, ಬಾ ಇಲ್ಲಿ ನಾವೆಲ್ಲರೂ ಬಂದಿದ್ದೇವೆ'' ಎಂದು ಕೂಗಿ ಕರೆದಾಗ ದ್ಯಾಮಣ್ಣ ಓಡಿ ಬರುತ್ತಾನೆ.

ಆಗ ಅವರು ಕೇಳುತ್ತಾರೆ ''ದ್ಯಾಮಣ್ಣ ನೀನು ಹೇಳಿದ ಕಾಜಿನ ಕಂಬ ಎಲ್ಲದೆ? ಕಾಜಿನ ಕಂಬದಲ್ಲಿ ನೀರು ಎಲ್ಲದೆ? ನೀರಿನಲ್ಲಿ ಘಟಸರ್ಪ ಎಲ್ಲಿದೆ? ತೋರಿಸು'' ಎಂದು ಊರಿನ ಹಿರಿಯರು ಕೇಳುತ್ತಿರುವಾಗ ದ್ಯಾಮಣ್ಣನಿಗೆ ಆನಂದವಾಗಿ ಸ್ವಲ್ಪ ಮುಂದಕ್ಕೆ ಬಂದು ಭೂಮಾತೆಗೆ ನಮಸ್ಕರಿಸಿ, ಎರಡೂ ಕೈ ಜೋಡಿಸಿ ಭಕ್ತಿಯಿಂದ ಬೇಡಿಕೊಳ್ಳುತ್ತಾನೆ.

ದ್ಯಾಮಣ್ಣನ ಭಕ್ತಿಗೆ ಮೆಚ್ಚಿ ಭಾಗಮ್ಮ ತಾಯಿಯು ಬುಸು ಗುಟ್ಟುತ್ತ ನೀರಿನಿಂದ ಹೊರಗೆ ಬರುತ್ತಾಳೆ. ಆಗ ದ್ಯಾಮಣ್ಣನಿಗೆ ಆನಂದವೇ ಆನಂದ ಆನಂದಸಾಗರದಲ್ಲಿ ಮುಳುಗಿದ ದ್ಯಾಮಣ್ಣ ಹೇಳುತ್ತಾನೆ ''ನೋಡಿರಿ, ನನ್ನ-ತಾಯಿ ಹೇಗೆ ಬುಸುಗುಟ್ಟುತ್ತ ಬರುತ್ತಿದ್ದಾಳೆ. ಕಾಜಿನ ಕಂಬ, ಅದರಲ್ಲಿ ನೀರು, ನೀರಿನಲ್ಲಿ ಕಾಣಿಸುತ್ತಿರುವುದೇ ಘಟಸರ್ಪ'' ಎಂದು ಕೂಡಿದವರಿಗೆಲ್ಲ ಕೂಗಿ ಕೂಗಿ ಹೇಳುತ್ತಾನೆ. ಕೂಡಿದ ಜನರಿಗೆ ಅದೇನೊ ಕಾಣಲಿಲ್ಲ.[೮೭] ಆದರೆ ನಾಲ್ಕೈದು ಜನರಿಗೆ ಮಾತ್ರ ಕಂಬದೊಳಗಿದ್ದ ಕರಿಯ

ನಾಗರಹಾವು ಕಾಣಿಸುತ್ತಲಿದೆ. ಇನ್ನೊಂದು ವಿಚಿತ್ರವೇನೆಂದರೆ. ಅದೇ ಕಂಬದಿಂದ ಧ್ವನಿ ಕೇಳಿ ಬರುತ್ತದೆ. ಅದೇನೆಂದರೆ. '' ನಾನು ಬರುತ್ತೇನೆ, ನನಗೆ ಜಾಗ ಕೊಡ್ರಿ ನಾನು ಬರುತ್ತೇನೆ, ನನಗೆ ಜಾಗಾ ಕೊಡ್ರಿ'' ಎಂದು ಸ್ಪಷ್ಟವಾದ ವಾಣಿ ಕೇಳಿ ಬರುತ್ತದೆ.

ಆ ವಾಣಿಯನ್ನು ಕೇಳಿದ ಊರಿನ ಹಿರಿಯರಿಗೆ ಆನಂದವಾಗಿ ''ಭಾಗ್ಯದ ಲಕ್ಷ್ಮೀ ಮಹಾರಾಣಿಕೀ ಜೈ, ಜಯಲಕ್ಷ್ಮೀ ಮಹಾರಾಣಿಕೀ ಜೈ'' ಎಂದು ಜಯಘೋಷ ಮಾಡುತ್ತಾರೆ. ಊರ ಗೌಡರು ಮುಂದೆ ಬಂದು –''ತಾಯಿ ನಿನ್ನ ಇಚ್ಛೆಯನ್ನು ಈಡೇರಿಸುತ್ತೇವೆ. ಎಲ್ಲವೂ ನಿನ್ನದೇ ತಾಯಿ ಭೂಮಿ ನಿನ್ನದು, ಹೇಮ ನಿನ್ನದು. ನಾವೆಲ್ಲ ನಿನ್ನ ಮಕ್ಕಳು ಆಂದಮೇಲೆ ನೀನೇಕೆ ಕೇಳಬೇಕು ? ಬರಬೇಕು ಭಾಗಮ್ಮ ತಾಯಿ ''ಎಂದು ಬೇಡಿಕೊಳ್ಳುತ್ತಾರೆ. ಊರಿನಿಂದ ಕಾಯಿ ಕರ್ಪೂರ, ಭಾಜಾ ಭಜಂತ್ರಿ, ಜಾಗಟೆ, ಡೊಳ್ಳು, ಆರತಿ, ಭಜನೆ ತರಿಸಿ ದ್ಯಾಮಣ್ಣನಿಂದಲೇ ತಾಯಿಯ ಪೂಜೆ ಮಾಡಿಸಿ, ಕಾಯಿ-ಕರ್ಪೂರ ಅರ್ಪಿಸಿ, ಎಲ್ಲರೂ ಒಂದೇ ಮನಸ್ಸಿನಿಂದ, ಭಕ್ತಿಯಿಂದ ಕೊಂಡಾಡುತ್ತಿರುವಾಗ, ಮರೆಯಾಗಿದ್ದ ಕಾಜಿನ ಕಂಬ ಮುಂದಕ್ಕೆ ಸರಿದು ಬಯಲಿಗೆ ತಾನಾಗಿ ಬರುತ್ತದೆ.

ಆಗ ಕೆಲವು ಜನ ಕಾಜಿನ ಕಂಬದೊಳಗಿದ್ದ ಘಟಸರ್ಪ ನೋಡಿ ಭಯಗೊಂಡು ಓಡುತ್ತಿರುವಾಗ ಸದ್ಭಕ್ತನಾದ ದ್ಯಾಮಣ್ಣ ಹೇಳುತ್ತಾನೆ '' ಓಡ ಬೇಡಿರಿ, ನಿಲ್ಲಿರಿ ಅದು ಹಾವಲ್ಲ ನಮ್ಮ ನಿಮ್ಮೆಲ್ಲರ ಲೋಕದ ಮಾನವರ ಮಹಾತಾಯಿ. ನಿಮಗೇನೂ ಮಾಡುವುದಿಲ್ಲ'' ಎಂದು ಧೈರ್ಯ ಹೇಳಿದ. ಆಗ ಓಡಿ ಹೋಗುತ್ತಿರುವ ಜನ ಮರಳಿ ಬರುತ್ತಾರೆ. ಎಲ್ಲರೂ ಭಜನೆ ಮಾಡುತ್ತಾ ಗ್ರಾಮದ ಅಗಸಿ ಬಾಗಿಲ ಬಳಿ ತಂದು ಇಳಿಸುತ್ತಾರೆ. ಊರಿನ ಜನರಿಗೆ ಆನಂದವೇ ಆನಂದ. ಸ್ವರ್ಗ ಲೋಕದ ದೇವತೆ ಭೂಮಿಗಿಳಿದಂತೆ ಭಾಸವಾಗಿದೆ. ಅವತ್ತಿನ ರಾತ್ರಿ ಭಜನೆ, ಕೀರ್ತನೆ, ಸಂಗೀತ, ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ. ಅವತ್ತಿನ ರಾತ್ರಿ ಕಂಬ ಇಳಿಸಿದ ಜಾಗವೇ ಇಂದು ಪಾದಗಟ್ಟಿಯಾಗಿ ಪರಿಶೋಭಿಸುತ್ತಲಿದೆ. ಅಂದಿನಿಂದಲೂ ಇಂದಿನವರೆಗೆ ಸಿಡಿಯಾಡುವ ಬಂಡಿಯು ಈ ಪಾದಗಟ್ಟೆಗೆ ಬಂದು ಅಲ್ಲಿಂದಲೇ ಸಿಡಿ, ಆಡುವವರನ್ನು ಕಂಬಕ್ಕೆ ಏರಿಸಿಕೊಂಡು ಗುಡಿಯ ದ್ವಾರ ಬಾಗಿಲವರೆಗೆ ಬರುವ ಪದ್ಧತಿ ಇದೆ. ಅದೇ ಜಾಗೆಯಲ್ಲಿ ಪೂರ್ವಾಭಿಮುಖವಾಗಿ ಒಂದು ಚಿಕ್ಕದಾದ ಲಕ್ಷ್ಮೀ ಗುಡಿಯನ್ನು ಕಟ್ಟಿಸಿದ್ದಾರೆ.ಭಾಗ್ಯವಂತಿ ತಮ್ಮ ಊರಿಗೆ ಬಂದು ನೆಲೆಸಿದುದರಿಂದ ಊರಿನ ಸರ್ವ. ಜನತೆ ಸಾರದಲ್ಲಿ ಮಿಂದು ನಿತ್ಯ ದೇವಿಯ ಸ್ಮರಣೆಯಲ್ಲಿ ನಿರತರಾಗುತ್ತಾರೆ.

ಸ್ವಪ್ನದಲ್ಲಿ ಚೆನ್ನಮ್ಮ ತಾಯಿಗೆ ದೇವಿದರ್ಶನ:-

ಊರ ಗೌಡರ ತಾಯಿ ಚೆನ್ನಮ್ಮ ಅವರ ಕನಸಿನಲ್ಲಿ ಶ್ರೀಭುವನೇಶ್ವರಿಯು ಪ್ರತ್ಯಕ್ಷಳಾಗಿ ವಿಜಯನಗರದ ನಗರದಿಂದ ಬಂದ ವಿಷಯವನ್ನು ಚೆನ್ನಾಗಿ ತಿಳಿಸಿ, ಕೊನೆಗೆ ಒಂದು ಮಾತು ಹೇಳುತ್ತಾಳೆ ''ತಾಯಿ ಚೆನ್ನಮ್ಮ , ನಿಮ್ಮೆಲ್ಲರ ಭಕ್ತಿಗೆ ಮೆಚ್ಚಿ ಬಂದಿದ್ದೇನೆ. ಈ ಫತ್ತರಗಾ ಗ್ರಾಮ ಪುಣ್ಯಧಾಮವಾಗಿ ಭಕ್ತಿಗೆ ಮೆಚ್ಚಿ ಬಂದ್ದಿದ್ದೇನೆ. ಈ ಫತ್ತರಗಾ ಗ್ರಾಮ ಪುಣ್ಯಧಾಮವಾಗಿ ಮೆರೆಯಬೇಕಾಗಿದೆ. ಜಗತ್ತಿನ ಇತಿಹಾಸದಲ್ಲಿಯೇ ಅತ್ಯದ್ಭುತವಾದ ಸಿಡಿ ಆಡುವ ಕಾರ್ಯ ನಡೆಯಬೇಕಾಗಿದೆ. ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಸುಕ್ಷೇತ್ರವಾಗಿ ಮೆರೆಯುವಂಥ ಸಂದರ್ಭ ಬಂದೊದಗಿದೆ. ಆದ ಕಾರಣ ನಿನ್ನ ತೋಟದ ಮೂಲೆಯಲ್ಲಿ ನನಗೆ ಇರಲು ಸ್ಥಳವನ್ನು ಕೊಡಿಸು. ಈ ವಿಷಯವನ್ನು ನಿನ್ನ ಮಗನಿಗೆತಿಳಿಸು, ಮರೆಯಬೇಡ'' ಎಂದು ಹೇಳಿ ಭಾಗಮ್ಮ ದೇವಿಯು ಅಂತರ್ಧಾನವಾಗಿದ್ದಾಳೆ.

ಚೆನ್ನಮ್ಮ ತಾಯಿ ಬೆಳಿಗ್ಗೆ ಎದ್ದು ತಮ್ಮ ಮಗ, ಗೌಡರನ್ನು, ಊರಿನವರನ್ನು ಕೂಡಿಸಿಕೊಂಡು ಕನಸಿನ ವಿಚಾರ ಹೇಳುತ್ತಾಳೆ. ಆಗ ಮರುದಿವಸವೇ ಗೌಡರು ಹೊಲದಲ್ಲಿ ಗುಡಿ ಕಟ್ಟಿಸಲಿಕ್ಕೆ ವ್ಯವಸ್ಥೆಮಾಡಿ ಅಗಸಿಯಲ್ಲಿರುವ ಕಂಬವನ್ನು ಗೌಡರ ಹೊಲದಲ್ಲಿ ಅರಳೆ ಮರದ ಕೆಳಗಡೆ ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಯಾದ ಸ್ಥಳ ಇಂದೂ ಭವ್ಯವಾದ ಗುಡಿಯಾಗಿ ಕಂಗೊಳಿಸುತ್ತಲಿದೆ.[೮೮] ಅಂದಿನಿಂದ ಗೌಡರ ಮನೆಯ ಸಂಪತ್ತು ಹಾಲು ಉಕ್ಕಿದಂತೆ ಉಕ್ಕಿ ಅಪಾರ ಸಂಪತ್ತು ಬೆಳೆದಿದೆ. ಹೀಗೆ ದೇವಿಯ ಕೀರ್ತಿಯು ಎಲ್ಲ ಕಡೆಗೆ ಹರಡಿಕೊಂಡಿತು. ದೂರ ದೂರದಿಂದ ಭಕ್ತರು ಬಂದು ದರ್ಶನ ಪಡೆದುಕೊಂಡು ಧನ್ಯರಾಗುತ್ತಾ ನಡೆದರು. ಇದು ಭಾಗಮ್ಮ ದೇವಿಯು ಫತ್ತರಗಿ ಗ್ರಾಮಕ್ಕೆ ಬಂದು ನೆಲೆಸಿದ ಇತಿಹಾಸ. ಅಂದಿನಿಂದ ದೇವಿಯ ಮಹಿಮೆಯು ಎಲ್ಲೆಡೆಗೂ ಹರಡಿತು. ಬೇಡಿದವರ ಇಷ್ಟಾರ್ಥಗಳನ್ನು ಕರುಣಿಸುವ ಕರುಣಾಮಯಿ ಭಾಗ್ಯವಂತಿ ದೇವಿಯೆಂದು ಪ್ರಸಿದ್ಧಿಯಾಯಿತು.

ಸನ್ಯಾಸಿಯ ತಪಸ್ಸು-ದೇವಿಯ ಮಹಿಮೆ:-

ಫತ್ತರಗಿ ಗ್ರಾಮಕ್ಕೆ ಓರ್ವಸನ್ಯಾಸಿ ಎಲ್ಲಿಂದಲೋ ಬಂದು ತಾಯಿಯ ಮಂದಿರದಲ್ಲಿ ಕಾಲ ಕಳೆಯುತ್ತ. ಹಂಪೆಯ ವಿಷಯ ಹೇಳುತ್ತ ತನ್ನ ಯೋಗ ಸಾಮರ್ಥ್ಯದಿಂದ ತನ್ನ ವಾಕ್ ಸಿದ್ಧಿಯಿಂದ, ಹಸ್ತಚಾತುರ್ಯದಿಂದ ಪೂಜ್ಯ ದೇವಿಯ ಎದುರಿನಲ್ಲಿ ಶುಕ್ರವಾರಕ್ಕೊಮ್ಮೆ ಅಗ್ನಿಕುಂಡ ಸಿದ್ಧ ಮಾಡಿ ಅದರಲ್ಲಿ ಹಾಯುತ್ತಾ, ಹಾಯುವಾಗ ಶರೀರದ ಹಲವೆಡೆಗಳಲ್ಲಿ ಶಸ್ತ್ರಗಳನ್ನು ಹಾಕಿಕೊಳ್ಳುತ್ತಾ ಶುಕ್ರವಾರದ ಪೂರ್ತಿ ದಿನವೂ ಹೆಣ್ಣು ಉಡುಪಿನಲ್ಲಿ ಇರುತ್ತಾನೆ. ಯಾರೊಂದಿಗೂ ಮಾತನಾಡದೆ ಮೌನವಾಗಿ, ಧ್ಯಾನದಲ್ಲಿ ಕಾಲ ಕಳೆಯುತ್ತಿರುವಾಗ ಇದನ್ನೆಲ್ಲಾ ಕಂಡ ಸಕಲ ಸದ್ಭಕ್ತರು ಈ ಸನ್ಯಾಸಿಗೆ ತಾಯಿಯೆಂದೇ ಕರೆಯಲಿಕ್ಕೆ ಪ್ರಾರಂಭ ಮಾಡಿದರು.

ಈ ಸನ್ಯಾಸಿ ಮಾಡುವಂಥ ಅಗ್ನಿ ಉತ್ಸವವು ದೀಪಾವಳಿ ಪಾಡ್ಯದಿಂದ ಪ್ರಾರಂಭವಾಗಿ ಪ್ರತಿ ಹುಣ್ಣಿಮೆ, ಅಮವಾಸ್ಯೆ, ಪ್ರತಿ ಶುಕ್ರವಾರ ದಿವಸ ಎಡಬಿಡದೆ ಮೂರು-ನಾಲ್ಕು ತಿಂಗಳವರೆಗೆ ಈ ಉತ್ಸವವು ವೈಭವದಿಂದ ಜರಗುತ್ತದೆ. ಸನ್ಯಾಸಿದೇವಿಯ ಹೆಸರಿನಿಂದ ಅನಂತ ಪವಾಡಗಳು ಮಾಡುತ್ತ ಏಕಕಾಲಕ್ಕೆ ಆ ಸ್ಥಾನದಿಂದ ಮಾಯವಾದನು. ಈ ಸನ್ಯಾಸಿ ಅಗಲಿಕೆಯಿಂದ ಸಕಲ ಸದ್ಭಕ್ತರಿಗೆ ದುಃಖವಾಯಿತು. ಎಲ್ಲಿ ಹುಡುಕಾಡಿದರೂ ಸಿಗಲಿಲ್ಲ. ಈತ ದೇವಿ ಶಕ್ತಿಯನ್ನು ಪಡೆದುಕೊಂಡ ಮಹಾ ಸತ್ಪುರುಷನೆಂದು ತಿಳಿದು ಅವನು ಮೊದಲು ವಾಸಿಸಿದ ಕುಟೀರದಲ್ಲಿ ಅವನ ಹೆಸರಿನಿಂದಲೇ ದೀಪಸ್ತಂಭ ಮಾಡುತ್ತಾರೆ.[೮೯] ಅದೇ ಕಂಬ ಈಗ ದೇವಿಯ ಪ್ರಾಂಗಣದಲ್ಲಿ ವಿರಾಜಮಾನವಾಗಿ ಪರಿಶೋಭಿಸುತ್ತಲಿದೆ. ಆತ ಆಡುತ್ತಿದ್ದ ಸಿಡಿಯನ್ನು ಕಂಡ ಭಕ್ತರು ದೇವಿಯ ಲೀಲೆಗೆ ಮಾರು ಹೋಗಿದ್ದಾರೆ. ಆತನ ಕೃಪೆಯಿಂದ ಇಷ್ಟಾರ್ಥ ಸಾಧನೆಗಾಗಿ ತಾವು ಸಿಡಿ ಆಡುತ್ತಾರೆ. ದೇವಿಯ ಕೃಪೆ ಪಡೆದು ಇಷ್ಟಾರ್ಥ ಪೂರೈಸಿಕೊಂಡಿದ್ದಾರೆ.

ದೇವಿಯ ಪವಾಡ : ಜೀವಂತ ಸತ್ಯ ಘಟನೆ:-

ಜಾತ್ರೆಗೆ ಬಂದ ಸಾಕಷ್ಟು ಜನಸಮೂಹ ಮಧ್ಯದಲ್ಲಿ ಇರುವ ಸಿಡಿಬಂಡಿಗೆ ಸಿಡಿ ಆಡುವವರನ್ನು ಕರೆದುಕೊಂಡು ಬರುತ್ತಾರೆ. ಗಾಡಿಯ ಕಂಬದ ತುದಿ ಕೆಳಗೆ ಮಾಡಿ ಬೆನ್ನ ಹಿಂದೆ ಚ್ಚುಚ್ಚಿ ಕಬ್ಬಿಣ ಹುಕ್ಕುಗಳ ತುದಿಗೆ ಕಟ್ಟಿರುವ ೩ ಮಳವಿರುವ ಒಂದು ಹಗ್ಗವಿದ್ದು ಆ ಹಗ್ಗವನ್ನು ಸಿಡಿ ಆಡುವವರ ಕೈಗೆ ಕೊಡುತ್ತಾರೆ. ಅಲ್ಲದೆ ಅವರ ಉಡಿಯಲ್ಲಿ ಮಂಡಕ್ಕಿ, ಫಳಾರ, ಬೆಂಡು-ಬೆತ್ತಾಸಗಳನ್ನು ಕೂಡಿಸಿ ಕಟ್ಟುತ್ತಾರೆ. ನಂತರ ವಾದನಗಳ ಆರ್ಭಟ, ಜನರ ಹರ್ಷೋದ್ಗಾರ, ದೇವಿಯ ಜೈ –ಜೈಕಾರಗಳೊಂದಿಗೆ

ಸಿಡಿಯ ಕಂಬವನ್ನು ಮೇಲೆ ಎತ್ತುತ್ತಾರೆ. ಆ ಸಮಯದಲ್ಲಿ ಸಿಡಯಾಡುವ ಹೆಣ್ಣುಮಕ್ಕಳು ಸಾಕ್ಷಾತ್ ಪಾರ್ವತಿ ಹಾಗೆ ಕಂಡು ಭೂಲೋಕದಿಂದ ಕೈಲಾಸಕ್ಕೆ ಹೋಗುತ್ತಾಳೇನೋ ಎನ್ನುವ ಹಾಗೆ ಇರುತ್ತಾರೆ. ಗುಡಿಯ ಬಾಗಿಲದವರೆಗೆ ಮುಂದೆ ಬಂದ ದೃಶ್ಯವು ಭಗೀರಥನು ತಪಶ್ಚರ್ಯ ಮಾಡಿ ಗಂಗೆಯನ್ನು ಆಕಾಶದಿಂದ ಇಳಿಸಿ ತಂದಂತೆ ಕಾಣಿಸುತ್ತದೆ. ಕೆಳಗಿಳಿದ ಮೇಲೆ ಅಲ್ಲಿ ನೆರೆದ ಜನರೆಲ್ಲರೂ ಸಿಡಿ ಆಡಿದವರ ಪಾದವನ್ನು ಮುಟ್ಟಿ ನಮಸ್ಕರಿಸುತ್ತಾರೆ.[೯೦] ನಂತರ ಕಟ್ಟಿದ ಹಗ್ಗ ಬಿಚ್ಚಿ ಗುಡಿಯ ಒಳಗೆ ಕರೆದೊಯ್ದು ಸೊಂಟ ಮೇಲೆ ಮಾಡಿ ಮಲಗಿಸಿ ಕಬ್ಬಿಣದ ಹುಕ್ಕನ್ನು ಕಡೆಗೆ ತೆಗೆಯುತ್ತಾರೆ. ಕಡೆಗೆ ತೆಗೆಯುವ ದೃಶ್ಯವನ್ನು ನೋಡಿದರೆ ಮೈಯೆಲ್ಲ ಜುಮ್ಮೆನ್ನುತ್ತದೆ. ಯಾಕೆಂದರೆ ಎರಡು ಇಂಚು ಮಾಂಸದಲ್ಲಿ ಸೇರಿದ ಕಬ್ಬಿಣದ ಸಲಾಕೆ ಕನಿಷ್ಠ ಎರಡು ತಾಸು ಸೊಂಟದಲ್ಲಿದ್ದರೂ ಸ್ವಲ್ಪವೂ ಕೂಡಾ ರಕ್ತದ ಕಲೆ ಕಾಣಿಸುವುದಿಲ್ಲ. ಇದೊಂದು ಪವಾಡ ಸದೃಶ್ಯವಾದ ಸಂಗತಿ. ನಂತರ ಚುಚ್ಚಿದ ಗಾಯಕ್ಕೆ ದೇವಿಯ ಪ್ರಸಾದ ಹಾಕಿ, ಒಂದು ಹೊಸ ಅರಿವೆ ಸೊಂಟಕ್ಕೆ ಹಾಕಿ ಕಟ್ಟುತ್ತಾರೆ. ಇದಾದ ಮೇಲೆ ಸಂಬಂಧಿಕರು ತಂದ ಬಟ್ಟೆ- ಬರೆ, ಬಂಗಾರ ಇತ್ಯಾದಿ ಮುಯ್ಯಿ ಮಾಡಿ ಮಡಿಯಿಂದ ಮಾಡಿದ ಅಡುಗೆಯನ್ನು ಮುತ್ತೈದೆಯರಿಗೆ ಹಾಗೂ ಸಿಡಿಬಂಡಿ ಜಗ್ಗುವವರಿಗೆ ಉಣ ಬಡಿಸಿ ತಾವೆಲ್ಲರೂ ಊಟಮಾಡಿ ಹರಕೆಯನ್ನು ಮುಗಿಸಿಕೊಂಡು ಭಾಗಮ್ಮ ತಾಯಿಯನ್ನು ಕೊಂಡಾಡುತ್ತ ತಮ್ಮ ಊರಿಗೆ ಹೋಗುತ್ತಾರೆ.

ಶ್ರೀ ಭಾಗ್ಯವಂತಿ ದೇವಿಯ ಸತ್ಯ ಪವಾಡಗಳು:-

೧. **ಸಂತಾನಭಾಗ್ಯ ನೀಡಿದ ತಾಯಿ:-**

ಬೀದರ ಜಿಲ್ಲೆ ದೇವನೂರೆಂಬ ಗ್ರಾಮದಲ್ಲಿ ಲಿಂಗಶೆಟ್ಟಿ ಹಾಗೂ ನೀಲಗಂಗಮ್ಮ ಎಂಬ ದಂಪತಿಗಳಿದ್ದರು. ಅವನು ಸಾಕಷ್ಟು ಶ್ರೀಮಂತನಾಗಿದ್ದನು. ಆದರೆ ಹೃದಯ ಶ್ರೀಮಂತವಾಗಿರಲಿಲ್ಲ ಆತ ಬಹಳ ಜಿಪುಣನಾಗಿದ್ದ. ದಾನ ಧರ್ಮ, ಪರೋಪಕಾರ ಇವು ಯಾವವೂ ಅವನ ಕನಸಿನಲ್ಲಿಯೂ ಸುಳಿದಿರಲಿಲ್ಲ. ಅತ್ಯಂತ ಕಠೋರ ಹೃದಯದವನಾಗಿದ್ದ.

ಅದಕ್ಕೆ ದೊಡ್ಡವರು ಹೇಳುತ್ತಾರೆ

ಆಶಾ ಆಶಾ ಪರಂ ದುಃಖಂ ।

ನಿರಾಶಾ ನಿರಾಶಾ ಪರಂ ಸುಖಂ ।

ಇತನಿಗೆ ಮದುವೆಯಾಗಿ ಹತ್ತುವರ್ಷ ಗತಿಸಿದರೂ ಸಂತಾನ ಭಾಗ್ಯಲಭಿಸಿರಲಿಲ್ಲ. ಇದರಿಂದ ಮಹಾಸಾಧ್ವಿಗೆ ಒಂದು ಬಗೆಯ ಮನೋರೋಗವೇ ಆಗಿತ್ತು ವೈದ್ಯರುಗಳಿಂದ ಔಷಧೋಪಚಾರ ಹೊಂದಿ ನಿರಾಶರಾದರು. ಅದೆಷ್ಟೋ ಮಂತ್ರ-ತಂತ್ರ, ಚೀಟಿ-ಚಿಪಟಗಳು ಮುಗಿದವು. ಹಲವಾರು ನೇಮ, ವ್ರತಗಳನ್ನು ಮಾಡಿದರೂ ಸಂತಾನದ ಮಹದಾಸೆ ಕೂಡಿಬಾರದಿದ್ದರಿಂದ ದಂಪತಿಗಳಿಗೆ ಅತೀ ದುಃಖವಾಯಿತು. ಹೀಗಿರುವಾಗ ಆಕಸ್ಮಾತ್ ದೇವನೂರಿಗೆ ಓರ್ವ ಕೊರವಂಜಿ ಬರುತ್ತಾಳೆ. ಆ ಕೊರವಂಜಿಯನ್ನು ಎಲ್ಲರೂ ತಮ್ಮ-ತಮ್ಮ ಮನೆಗೆ ಕರೆದುಕೊಂಡು ಹೋಗುವರು ಪೂಜೆ ಮಾಡಿಸುವುದು, ಹೇಳಿಕೆ ಕೇಳುವದು ನಡೆಯಿತು. ಇದನ್ನು ಕಂಡ ನೀಲಗಂಗಮ್ಮ ಕೈಮುಗಿದು ತನ್ನ ಮನೋಭಿಲಾಷೆಯನ್ನು ತೋಡಿಕೊಂಡಾಗ ಕೊರವಂಜಿ ಹೇಳುತ್ತಾಳೆ.

"ತಾಯಿ ನೀಲಗಂಗಮ್ಮ, ನಿಮಗೆ ಭಾಗ್ಯವಂತಿ ತಾಯಿ ಸಾಕಷ್ಟು ಸಿರಿ-ಸಂಪತ್ತು ಕೊಟ್ಟಾಳ. ಆದರೆ ನಿನ್ನ ಮನೆತನಕ್ಕೆ ಬಡ ಜನರ ಶಾಪ ತಗುಲಿ ನಿನ್ನ ಸಂತಾನಕ್ಕೆ ತಡೆಯಾಗಿದೆ. ಆದರೆ ನಿನ್ನ ನಿರ್ಮಲಭಾವಕ್ಕೆ ದೇವಿಯ ಪರಿಪೂರ್ಣ ಕೃಪೆ ಇದೆ. ನೀನು ಒಂದು ಕೆಲಸ ಮಾಡಬೇಕು.[೧] ಇದೇ ಕಲಬುರಗಿ ಜಿಲ್ಲೆ ಅಫಜಲಪುರ ತಾಲೂಕ ಘತ್ತರಗಾದ ಗ್ರಾಮದೇವತೆಯಾದ ಶ್ರೀಭಾಗ್ಯವಂತಿದೇವಿಯನ್ನು ಕಂಡು ದರ್ಶನ ಮಾಡಿಕೊಂಡು ಬಂದರೆ ನಿನ್ನ ಬಯಕೆ ನಿಶ್ಚಯವಾಗಿಯೂ ಈಡೇರುವದು. ಒಂದೇ ವರ್ಷದಲ್ಲಿ ಸಂತಾನವಾಗುತ್ತದೆ ಎಂದು ಹೇಳಿದಾಗ ನೀಲಗಂಗಮ್ಮನ ಹೃದಯದಲ್ಲಿ ಒಂದು ತರಹದ ಕೋಲ್ಮಿಂಚು ಆಡಿದಂತಾಗುತ್ತದೆ. ಕೊರವಂಜಿ ಮಾತಿನಲ್ಲಿ ಪೂರ್ಣ ನಂಬಿಕೆ ಇಟ್ಟು. ಅದೇ ಆನಂದದಲ್ಲಿ ಕೊರವಂಜಿಗೆ ಸಾಕಷ್ಟು ಉಡುಗೊರೆ ಸಲ್ಲಿಸಿ ಅವಳನ್ನು ಬೀಳ್ಕೊಟ್ಟಳು. ಆ ದಿವಸವೇ ತಾನು ಕೊರವಂಜಿಯಿಂದ ಕೇಳಿದ ಎಲ್ಲ ಸಂಗತಿಯನ್ನು ಪತಿಗೆ ತಿಳಿಸುತ್ತಾಳೆ. ಶೆಟ್ಟಿಗೂ ಆನಂದವಾಗಿದೆ. ಕೆಲವು ದಿವಸ ಗತಿಸಿದ ನಂತರ ಬಂಡಿಯನ್ನು ಬಾಡಿಗೆಮಾಡಿಕೊಂಡು ಘತ್ತರಗಿಗೆ ಹೊರಡುತ್ತಾರೆ. ದಾರಿಯಲ್ಲಿ ಹಲವಾರು ಶುಭ ಚಿನ್ಹೆಗಳನ್ನು ಕಾಣುತ್ತಾರೆ. ಮುಂದೆ ಸ್ನಾನ ಮಾಡಿಕೊಂಡು ಹೋಗಬೇಕೆಂದು ಒಂದು ತೋಟದಲ್ಲಿ ಸ್ನಾನ ಮಾಡುತ್ತಾರೆ. ಆ ತೋಟದ ಕಾವಲಿಗಾಗಿ ಒಂದು ಮುದುಕಿ ಇದ್ದಳು. ಶೆಟ್ಟರಿಗೆ ಆದರದ ಉಪಚಾರ ಮಾಡುತ್ತಾಳೆ. ದಂಪತಿಗಳಿಗೆ ಸಾಕಷ್ಟು ಸಂತೋಷವಾಗುತ್ತದೆ. ಶೆಟ್ಟಿಯು ಮುದುಕಿಯ ಸದ್ವರ್ತನೆಗೆ ಮೆಚ್ಚಿ ಅವಳಿಗೆ ತಮ್ಮ ಬುತ್ತಿಯ ಕೆಲ ಭಾಗವನ್ನು ಊಟಕ್ಕೆ ಕೊಡುತ್ತಾನೆ. ಅನ್ನದಾನ ಎಲ್ಲ ದಾನಗಳಲ್ಲಿ ಶ್ರೇಷ್ಠವಾದದ್ದು. ಅದಕ್ಕೆ ದೊಡ್ಡವರು ಹೇಳುತ್ತಾರೆ.

ಅನ್ನದ ಮಹಿಮೆ ಚೆನ್ನಾಗಿ ತಿಳಕೊಂಡು

ಅನ್ನವ ಕಾಯ್ದುಕೊಂಡು ಇರಬೇಕೋ ।

ಅನ್ನದ ಮುನ್ನ ಮತ್ತೊಂದಿಲ್ಲ

ಅನ್ನಕ ಬಸವೇಶ ಅನಬೇಕೋ ॥

"ಹಸ್ತಸ್ಯ ಭೂಷಣಂ ದಾನಂ" ದಾನ ಮಾಡುವದು ಬಹಳ ಶ್ರೇಷ್ಟವಾದದ್ದು. ಅನ್ನದಾನ ಮಾಡಿದಾಗ ಆ ಮುದುಕಿಗೆ ಆನಂದವಾಗಿ "ಆ ಭಾಗಮ್ಮತಾಯಿ ನಿಮಗೆ ಸೌಭಾಗ್ಯ ನೀಡಲಿ" ಎಂದು ಹಾರೈಸುತ್ತಾರೆ. ಆದರಂತೆ ತಾನು ಆಯ್ದು ತಂದಂಥ ೨-೩ ಮಾವಿನ ಹಣ್ಣುಗಳನ್ನು ಗಂಗಮ್ಮನ ಉಡಿಯಲ್ಲಿ ಹಾಕಿ ಹರಸುತ್ತಾಳೆ. ನೀಲಗಂಗಮ್ಮ ಹಣ್ಣು ಸ್ವೀಕಾರ ಮಾಡುತ್ತಾರೆ. ಮುಂದೆ ಘತ್ತರಗಿಗೆ ತಲುಪುತ್ತಾರೆ. ಭೀಮಾನದಿಯಲ್ಲಿ ಸ್ನಾನ ಮಾಡಿ ಕಾಯಿ – ಕರ್ಪೂರ ಅರ್ಪಿಸಿ ಅಲ್ಲಿ ನಡೆಯುತ್ತಿದ್ದ ಉತ್ಸವ ನೋಡಿ ದಂಪತಿಗಳೀರ್ವರೂ ತಾಯಿಯ ಮೂರ್ತಿ ಎದುರು ನಿಂತು ಬೇಡಿಕೊಳ್ಳುತ್ತಾರೆ.[೨] ಭಾಗಮ್ಮ ದೇವಿಯೇ ಸಂತಾನವಿಲ್ಲದೆ ಕೊರಗುತ್ತಿರುವ ನಮಗೆ ಒಂದು ಗಂಡು ಮಗು, ಒಂದು ಹೆಣ್ಣು ಮಗು ಕರುಣಿಸು ತಾಯಿ. ಈ ಬಯಕೆ ಈಡೇರಿದರೆ ಮಂದಿರದ ಆವರಣ ಗೋಡೆ ಕಟ್ಟಿಸುತ್ತೇವೆ. ಅದಲ್ಲದೆ ನೀನು ಕರುಣಿಸಿದ ಸಂತಾನದೊಂದಿಗೆ ಬಂದು ಸಿಡಿಯಾಡುತ್ತೇವೆ ಎಂದು ಹರಕೆ ಹೊತ್ತಿದ್ದಾರೆ. ಅಂದಿನ ರಾತ್ರಿ ಅಲ್ಲಿಯೇ ಇರುತ್ತಾರೆ. ನಡುರಾತ್ರಿಯ ನಂತರ ಶೆಟ್ಟಿಯು ಸ್ವಪ್ನ ಕಾಣುತ್ತಾನೆ.

ಆ ಸ್ವಪ್ನದಲ್ಲಿ ಹಿಂದೆ ತನ್ನೂರಿಗೆ ಬಂದ ಕೊರವಂಜಿ ಹಾಗೂ ತೋಟದಲ್ಲಿ ಹಣ್ಣುಗಳನ್ನಿತ್ತ ಆ ಮುದುಕಿಯ ರೂಪ ಕಾಣಿಸಿ ಕೊಂಡಾಗ ಶೆಟ್ಟಿಯು ಸ್ವಪ್ನದಿಂದ ಎಚ್ಚತ್ತು ಇದೆಲ್ಲವೂ ದೇವಿಯ ಲೀಲೆಯಂದರಿತ. ದಂಪತಿಗಳಿಗೆ ಮತ್ತಷ್ಟುಆನಂದವಾಗಿ

ಮರುದಿವಸ ತಾಯಿಗೆ ವಂದಿಸಿ ತಮ್ಮ ಗ್ರಾಮಕ್ಕೆ ಹೋಗುತ್ತಾರೆ. ಮುಂದೆ ಒಂದೇ ವರ್ಷದಲ್ಲಿ ನೀಲಗಂಗಮ್ಮ ಗಂಡುಮಗುವಿನ ತಾಯಿ ಆಗುತ್ತಾಳೆ. ಮನೆಗೆ ಸಂತಾನದ ಬೆಳಕು ಬಂದಿದೆ. ಇದೆಲ್ಲವೂ ಭಾಗಮ್ಮ ದೇವಿಯ ಆಶೀರ್ವಾದವೆಂದರಿತು, ಎಲ್ಲರೂ ದೇವಿಯ ಕ್ಷೇತ್ರಕ್ಕೆ ಬಂದು ಮಗುವಿನೊಂದಿಗೆ ಸಿಡಿಯಾಡುತ್ತಾರೆ. ಶೆಟ್ಟಿಯ ಗುಡಿಯ ಸುತ್ತಲೂ ಆವರಣದ ಗೋಡೆಯನ್ನು ಕಟ್ಟಿಸಿದ ಪ್ರತಿವರ್ಷವೂ ಕ್ಷೇತ್ರಕ್ಕೆ ಬಂದು ದಾನ, ಧರ್ಮ, ಪರೋಪಕಾರಗಳನ್ನು ಮಾಡುತ್ತ ಬಂದರು. ಶೆಟ್ಟಿಯ ಜಿಪುಣತನ ತಾಯಿಯ ದರ್ಶನದಿಂದ ದೂರಾಗಿ ಅವನೊಬ್ಬದಾನಿಯಾಗಿ ಜೀವನ ಸಾಗಿಸಿದ. ಶೆಟ್ಟಿಯ ಮನೆತನ ಮುಂದೆ ದಾಸೋಹದ ಮನೆತನವಾಗಿ ಪರಿಣಮಿಸುತ್ತ ಮನೆತನದ ಕೀರ್ತಿ ಎಲ್ಲಕಡೆಗೂ ಬೆಳಗಿತು. ಅವನ ನಂತರ ಮಕ್ಕಳು, ಮೊಮ್ಮಕ್ಕಳು ದೇವಿಯ ದರುಶನ ಪಡೆಯುವುದು ತಪ್ಪಿಸಲಿಲ್ಲ.[೬೩]

ಮಹಾತಾಯಿಯ ಈ ಪವಾಡದಿಂದ ನಮಗೆ ಪುರಂದರದಾಸರ ಚರಿತ್ರೆ ನೆನಪಾಗುತ್ತದೆ. ಯಾಕೆಂದರೆ ಜಿಪುಣತನದಿಂದ ಇದ್ದ ಪುರಂದರದಾಸರಿಗೆ ಅವರ ಪತ್ನಿಯ ದಾನ ಗುಣಗಳಿಂದ ಶ್ರೀಭಾಗಮ್ಮದೇವಿ ಪ್ರತ್ಯಕ್ಷಳಾಗಿ ಬೇಡಿದ ಇಷ್ಟಾರ್ಥಗಳನ್ನು ಪೂರೈಸಿಕೊಟ್ಟಿದ್ದಾಳೆ. ಇದನ್ನರಿತ ನಾವೆಲ್ಲರೂ ಅಧರ್ಮ, ಅನ್ಯಾಯಗಳನ್ನು ತೊರೆದು ಸತ್ಯಶೀಲರಾಗಿ ದಾನ, ಧರ್ಮಗಳನ್ನು ಮಾಡಿ ಮಾನವ ಮುಕ್ತನಾಗಬೇಕೆಂದು ದೇವಿಯ ಪವಾಡಗಳು ಹೇಳುತ್ತವೆ.

ಪಾಪತ್ಮರಿಗೆ ಪ್ರಾಯಶ್ಚಿತ್ತ:-

ಶಿವಪುರವೆಂಬ ಗ್ರಾಮದಲ್ಲಿ ಚೆನ್ನಬಸವ ಹಾಗೂ ಸಂಗಮ್ಮ ಎಂಬ ಪುಣ್ಯದಂಪತಿಗಳಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಹೀಗೆ ನಾಲ್ಕು ಜನ ಮಕ್ಕಳು ಇರುತ್ತಾರೆ. ಹಿರಿಯ ಹೆಣ್ಣು ಮಗಳು ಚಿನ್ನಮ್ಮ ವಯಸ್ಸಿಗೆ ಬಂದ ನಂತರ ಶೇಖರ ಎನ್ನುವ ವರನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಶೇಖರನು ತಹಶೀಲ್‌ದಾರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ. ಮೇಲಾಗಿ ಬಹಳ ಭಕ್ತಿವಂತ, ಆಚಾರವಂತ, ಆದರಂತೆ ಬಹಳ ಸುಂದರನಾಗಿದ್ದ. ಹೀಗಿರುವಾಗ, ಚಿನ್ನಮ್ಮಳ ತಂಗಿ ಬಸಮ್ಮಳಿಗೂ ವರ ಶೋಧ ನಡೆಯಿತು. ಆದರೆ ಬಸಮ್ಮಳನ್ನು ನೋಡಲಿಕ್ಕೆ ಎಷ್ಟೋವರ ಬಂದರೂ ಬಸಮ್ಮ ಒಪ್ಪಲಿಲ್ಲ. ಆಕೆಯ ಮನಸ್ಸು ಅವಳಕ್ಕನ ಗಂಡ ಶೇಖರನ ಮೇಲೆ. ಶೇಖರನನ್ನೇ ಮದುವೆ ಆಗಬೇಕು, ಇಲ್ಲದಿದ್ದರೆ ಮದುವೆ ಆಗಬಾರದು ಎಂದು ನಿರ್ಧಾರ ಮಾಡುತ್ತಾಳೆ. ಮನಸ್ಸಿ ಕಟ್ಟಿ ಹಾಕುವುದು ಬಹಳ ಕಷ್ಟ, ಮನಸ್ಸು ಬಹಳ ಚಂಚಲ ಅದರಲ್ಲಿಯೇ ಹೆಣ್ಣು ಮಕ್ಕಳ ಮನಸ್ಸು ಇನ್ನೂ ಚಂಚಲ.

ಚಂಚಲವಾದ ಮನಸ್ಸನ್ನು ಬಿಗಿ ಹಿಡಿಯುವದು ಕಷ್ಟಕರವಾಯಿತು. ಕೆಲವು ದಿವಸ ಗತಿಸಿದ ನಂತರ ಬಸಮ್ಮಳ ಅಕ್ಕನಿಗೆ ಗಂಡು ಮಗುವಾಗುತ್ತದೆ. ಅವರು ತಮ್ಮ ಮನೆಯ ದೇವತೆಯಾದ ಭಾಗಮ್ಮ ತಾಯಿಯ ಸಿಡಿಯಾಡಬೇಕೆಂದು ನಿರ್ಧಾರ ಮಾಡಿ ತಮ್ಮ ಬಂಧು ಬಾಂಧವರನ್ನು ತವರು ಮನೆಯವರನ್ನು ಕರೆಯಿಸಿಕೊಂಡು ಸುಕ್ಷೇತ್ರ ಘತ್ತರಗಿಗೆ ಬಂದು ತಮ್ಮ ಸಿಡಿಯಾಡುವ ಹರಕೆಯನ್ನು ಪೂರೈಸುತ್ತಾರೆ. ಎಲ್ಲರೂ ಊಟಕ್ಕೆ ಕುಳಿತುಕೊಂಡಾಗ ಚಿನ್ನಮ್ಮಳ ತಂಗಿ ಬಸಮ್ಮ, ದೇವಿಯ ಹತ್ತಿರ ಬಂದು ಕೈ ಜೋಡಿಸಿಕೊಂಡು ನಿಂತು ತಾಯಿ ಬೇಡಿದವರಿಗೆ ಬೇಡಿದ್ದನ್ನೇ ನೀಡುತ್ತ ಬಂದಿರುವೆ. ಅದರಂತೆ ನನಗೂ ವರ ನೀಡು.[೬೪] ನನಗೆ ಇಲ್ಲಿಯವರೆಗೆ ಕಂಕಣಬಲ ಕೂಡಿ ಬಂದಿಲ್ಲ. ಆ ಕಂಕಣಬಲ ಯಾವ ರೀತಿಯಾಗಿ ಕೂಡಿ ಬರಬೇಕೆಂದರೆ ನನ್ನ ಜೊತೆಗೆ ನನ್ನ ಅಕ್ಕನ ಗಂಡ ಶೇಖರನೊಂದಿಗೆ ನನ್ನ ಮದುವೆಯಾಗಬೇಕು. ನನಗೆ ಬಹಳ ದಿನಗಳಿಂದ ಆಸೆಹುಟ್ಟಿದೆ. ಮದುವೆಯಾದರೆ ಅವನನ್ನೇ ಆಗಬೇಕು. ಇಲ್ಲದಿದ್ದರೆ ಹೀಗೆ ಇರುತ್ತೇನೆಂದು ಸಂಕಲ್ಪ ಮಾಡಿಕೊಂಡಿದ್ದೇನೆ. ಹಗಲು—ರಾತ್ರಿ

ಅವನನ್ನೇ ಹಂಬಲಿಸುತ್ತಲಿದ್ದೇನೆ. ಈ ಹರಕೆ ಕೂಡಿಸಿಕೊಟ್ಟರೆ ನಾನು ಮುಂದಿನ ವರ್ಷ ಬಂದು ನಿನ್ನ ಸನ್ನಿಧಿಯಲ್ಲಿ ಸಿಡಿಯಾಡುತ್ತೇನೆ. ಎಂದು ಬೇಡಿಕೊಂಡು ನಮಸ್ಕರಿಸುತ್ತಾಳೆ. ನಂತರ ಅವರ ಜೊತೆಗೆ ಊಟ ಮಾಡಿ ಊರಿಗೆ ಹೋಗುತ್ತಾಳೆ. ಈ ಹರಕೆ ಭಾಗಮ್ಮ ದೇವಿಗೆ ಬಹಳ ಸಂಕಟಕ್ಕೀಡು ಮಾಡಿದೆ. ಬೇಡಿದ ಭಕ್ತರಿಗೆ ಬೇಡಿದ್ದನ್ನೇ ಕೊಡುವ ತನ್ನ ವಿಚಾರವನ್ನು ಬದಲಿಸಲಿಲ್ಲ. ಬಸಮ್ಮನ ಹಣೆಯ ಬರಹದಲ್ಲಿ ಅದೇನು ಬರೆದಿತ್ತೋ ಏನೋ. ಒಂದು ವರ್ಷ ತುಂಬುವದರಲ್ಲಿ ಇವಳ ಅಕ್ಕ ಚಿನ್ನಮ್ಮಳು ಗರ್ಭಿಣಿಯಾಗಿ ಒಂದು ಹೆಣ್ಣು ಮಗುವನ್ನು ಹೆತ್ತು ಎರಡು ಮೂರುದಿವಸದಲ್ಲಿಯೇ ಪ್ರಾಣ ಕಳೆದು ಕೊಳ್ಳುತ್ತಾಳೆ. ಶೇಖರನಿಗೆ ಬಹಳ ದುಃಖವಾಗುತ್ತದೆ. ಎರಡು ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಬದುಕುವುದು ಕಷ್ಟವಾಗುತ್ತಿರುವಾಗ ಊರಿನ ಜನರು ವಿಚಾರ ಮಾಡಿ ನಿನ್ನ ಹೆಂಡತಿಯ ತಂಗಿ ಬಸಮ್ಮಳನ್ನು ಮದುವೆಯಾಗು ಎಂದು ಒತ್ತಾಯ ಮಾಡಿದಾಗ ತನ್ನ ಮಕ್ಕಳ ಜೋಪಾನದ ಸಲುವಾಗಿ ಮದುವೆಯಾಗಲು ಒಪ್ಪಿಕೊಂಡ.

ಊರ ಹಿರಿಯರು ಶುಭ ಮುಹೂರ್ತ ನೋಡಿ ಬಸಮ್ಮಳ ಜೊತೆಗೆ ಮದುವೆ ಮಾಡುತ್ತಾರೆ. ಆಕೆಯೂ ಒಂದು ವರ್ಷ ತುಂಬುವದರಲ್ಲಿ ಗಂಡು ಮಗುವಿನ ತಾಯಿಯಾಗುತ್ತಾಳೆ. ಕೆಲವು ದಿವಸಗಳ ನಂತರ ಬಸಮ್ಮ ಗಂಡನಿಗೆ ಹೇಳುತ್ತಾಳೆ ರೀ, ರೀ, ಭಾಗಮ್ಮ ತಾಯಿ ಒಳ್ಳೆದು ಮಾಡಿದ್ದಾಳೆ. ಸಿಡಿ ಆಡಿ ಬರೋಣವೆ ಎಂದು ತಿಳಿಸಿ ಬಂಧು ಬಾಂಧವರನ್ನು ಕೂಡಿಸಿ ಸುಕ್ಷೇತ್ರ ಘತ್ತರಗಿಗೆ ಬರುತ್ತಾರೆ. ಶುಕ್ರವಾರ ದಿವಸ ಎಲ್ಲರೂ ಸ್ನಾನ ಮಾಡಿ ಬಸಮ್ಮಳ ಸಿಡಿ ಆಡುವ ಕಾರ್ಯ ಸಿದ್ಧ ಮಾಡುತ್ತಾರೆ. ಉಡುಗೆ ತೊಡುಗೆ ಅಲಂಕಾರ ಮಾಡಿ ಊದಿಸುತ್ತಾ. ಬಾರಿಸುತ್ತಾ ಗುಡಿಗೆ ಬಂದು ಐದು ಸುತ್ತು ಪ್ರದಕ್ಷಿಣೆ ಹಾಕಿಸಿ ಸಿಡಿ ಕಂಬಕ್ಕೆ ಕರೆದುಕೊಂಡು ಬರುತ್ತಾರೆ.

ಭಾಗಮ್ಮ ದೇವಿಯ ಕ್ಷೇತ್ರದಲ್ಲಿ ಪುರಾತನದಿಂದಲೂ ಒಂದು ಅತ್ಯದ್ಭುತವಾದ ಸಂಪ್ರದಾಯವಿದೆ. ಯಾರೇ ಭಕ್ತಾದಿಗಳು ಸಿಡಿ ಆಡುವಾಗ, ಸಿಡಿ ಶಸ್ತ್ರ ಚುಚ್ಚುವಾಗ ಅವರು ಯಾವ ಕಾರಣದಿಂದ ಹರಕೆ ಹೊತ್ತಿರುವರೋ ಅದು ಶಸ್ತ್ರಚುಚ್ಚುವ ಪೂಜಾರಿ ಮುಂದೆ ಹೇಳಬೇಕು. ಹೇಳಿದ ಸಂಗತಿಯಲ್ಲಿ ಸುಳ್ಳು, ಮೋಸ ಇರಬಾರದು ಒಂದು ವೇಳೆ ಸುಳ್ಳು ಹೇಳಿದರೆ ಶಸ್ತ್ರಗಳೇ ಮೈಯಲ್ಲಿ ಚುಚ್ಚುವುದಿಲ್ಲ ಪೂಜಾರಿಗೆ ಹೇಳಿದ ಸಂಗತಿ ಏನು ಎಂದು ಸಿಡಿ ನೋಡಲು ಬಂದ ಭಕ್ತರೆಲ್ಲರೂ ಕೇಳುತ್ತಾರೆ. ಅದೇ ರೀತಿ ಇಲ್ಲಿ ಬಸಮ್ಮ ತಾನು ಬೇಡಿಕೊಂಡ ಹರಕೆಯನ್ನು ಜನರ ಮುಂದೆ ಹೇಳಿದರೆ ತನಗೆ ಅವಮಾನವಾಗುವುದೆಂದು ಭಾವಿಸಿ ಏನೇನೋ ಸುಳ್ಳು ಹೇಳುತ್ತಾಳೆ. ಎರಡು ಮೂರು ಸಲ ಶಸ್ತ್ರ ಚುಚ್ಚಿದರೂ ಚುಚ್ಚಲಿಲ್ಲ. ಆಗ ಪೂಜಾರಿಗಳಿಗೆ ಆಶ್ಚರ್ಯವಾಗುತ್ತದೆ.[೬೫] ಏನಮ್ಮಾ ನಡೆದ ಸಂಗತಿ ನಿಜವಾಗಿ ಹೇಳಿದರೆ ಸಿಡಿಯಾಡಬಹುದು, ಇಲ್ಲವಾದರೆ ನಿನ್ನಿಂದ ಸಾಧ್ಯವಿಲ್ಲ ಎಂದು ತಿಳಿಸಿದಾಗ ಬಸಮ್ಮ ಪೂಜಾರಿಯ ಕಿವಿಯಲ್ಲಿ ಸತ್ಯ ಹೇಳುತ್ತಾಳೆ. ಕೂಡಿದ ಜನರು ಅದೇನು ಹರಕೆ ಅದೇನು ಹರಕೆ ಎಂದು ಕೂಗಾಡಹತ್ತಿದರು. ಎಲ್ಲರಿಗೂ ಕೇಳಿಸುವಂತೆ ಪೂಜಾರಿ ಹೇಳುತ್ತಾನೆ. ಅಕ್ಕ ಸಾಯಲಿ ಅಕ್ಕನ ಗಂಡನಿಗೆ ನನ್ನ ಮದುವೆ ಆಗಲಿ ಆಗ ನಾನು ಬಂದು ಸಿಡಿ ಆಡುತ್ತೇನೆಂದು ಬೇಡಿಕೊಂಡಿದ್ದಾಳೆ ಎಂದು ಜೋರಿನಿಂದ ಪೂಜಾರಿಯು ಹೇಳಿ ಬಿಡುತ್ತಾನೆ ಈ ಸುದ್ದಿಯನ್ನು ಕೇಳಿದ ಗಂಡ ಶೇಖರನಿಗೂ, ಬಂಧು ಬಳಗದವರಿಗೂ ಮೈಯೆಲ್ಲ ನಡುಗು ಹುಟ್ಟುತ್ತದೆ. ಜನರೆಲ್ಲ ಥೂ ಪಾಪ ಎಂಥ ಅನ್ಯಾಯ ಎಂಥ ಮೋಸ. ದೇವರಿಗೂ ಮೋಸ ಮಾಡುವಂಥ ಜನರಿದ್ದಾರೆ ಈ ಭೂಮಿಯ ಮೇಲೆ ಎಂದು ಬಾಯಿಗೆ ಬಂದಂತೆ ಮಾತನಾಡ ಹತ್ತಿದರು.

ಅಂತೂ ಬಸಮ್ಮ ಸಿಡಿ ಕಂಬ ಏರಿದಳು. ಕೆಳಗಿದ್ದ ಜನರ ಮುಖದ ಕಡೆ ನೋಡದೆ ಸಿಡಿಯಾಡುತ್ತಾಳೆ. ಸಾಂಪ್ರದಾಯದ ಪ್ರಕಾರ ಗಂಡ ಹೆಂಡತಿಗೆ ಮುಯ್ಯಿ ಮಾಡಿಸಿಕೊಳ್ಳಲು ಶೇಖರನು ಒಪ್ಪಲಿಲ್ಲ. ತನ್ನ ಮೊದಲಿನ ಎರಡು ಮಕ್ಕಳನ್ನು ಕರೆದುಕೊಂಡು

ಹೋದ. ಬಸಮ್ಮಳೂ ತನ್ನ ತಾಯಿಯ ಜೊತೆಗೆ ತವರು ಮನೆಗೆ ಬರುತ್ತಾಳೆ. ಇತ್ತ ತಾಯಿ ಭಾಗ್ಯವಂತಿಯು ಇವಳ ದುರ್ಗುಣಗಳ ಬಗ್ಗೆ ಉಗ್ರವಾದ ಉರಿಗಣ್ಣು ತೆಗೆಯುತ್ತಾಳೆ. ನಾಲ್ಕೈದು ದಿನದಲ್ಲಿ ದೇವಿಯು ಬಸಮ್ಮನ ಮುಂದೆ ಪ್ರತ್ಯಕ್ಷಳಾಗಿ ಬಂದು ಒಂದೇ ಸವನೆ ಚೀರುತ್ತ ನಾನು ಬೇಡಿದವರಿಗೆ ಬೇಡಿದ್ದನ್ನು ಕೊಡುತ್ತೇನೆ. ಆದರೆ ಬೇಡಿದ ಹರಕೆ ಯಾರಿಗೂ ಕೆಡಕು ಮಾಡುವಂತಿರಬಾರದು. ಒಂದು ವೇಳೆ ಅಂಥ ಕೆಡುಕೇನಾದರೂ ಬೇಡಿಕೊಂಡಿದ್ದರೂ ವರವನ್ನು ಕೊಡುತ್ತೇನೆ. ಅದರ ಜೊತೆಗೆ ಅಂಥ ಹರಕೆ ಹೊತ್ತವರ ಪ್ರಾಣವನ್ನು ಹೀರಿಕೊಳ್ಳುತ್ತೇನೆ ಎಂದು ಸಿಂಹದಂತೆ ಎದುರಿಗೆ ನಿಂತು ಘರ್ಜನೆ ಮಾಡುತ್ತಾಳೆ.[೬೧]

ಈ ದೇವಿಯ ರೂಪ ಕಣ್ಣಾರೆ ಕಂಡ ಬಸಮ್ಮಳು ಚಿಟ್ಟನೆ ಚೀರುತ್ತಾಳೆ. ಎಲ್ಲರೂ ಬಂದು ಬಸಮ್ಮಳನ್ನು ನೋಡುತ್ತಾರೆ. ಬಸಮ್ಮಳಿಗೆ ಹೊಟ್ಟೆಯಲ್ಲಿ ಉರಿ ಹಚ್ಚಿದಂತಾಗಿದೆ. ನಾನು ಅಕ್ಕನಿಗೆ ದ್ರೋಹ ಮಾಡಿದೆ. ನನಗೆ ತಾಯಿಯ ಶಾಪ ತಟ್ಟಿದೆ. ನಾನು ಉಳಿಯುವುದಿಲ್ಲ ಎಂದವಳೇ ಎದೆಯೊಡೆದು ಪ್ರಾಣ ಬಿಟ್ಟಳು. ಮುಂದೆ ಎರಡು ಮೂರು ತಿಂಗಳಿನಲ್ಲಿ ಅವಳ ಮಗು ರೋಗದಿಂದ ಬಳಲಿ ಸತ್ತು ಹೋಯಿತು. ತಾನೊಂದು ಬಗೆದರೆ ದೈವ ಒಂದು ಬಗೆಯಿತಂತೆ. ತಾಯಿಯ ವಾಡದಲ್ಲಿ ಬೇಡಿದವರಿಗೆ ಬೇಡಿದ್ದನ್ನ ಕೊಟ್ಟರೂ ಅದರಲ್ಲಿ ಸತ್ಯವಿದ್ದರೆ ಮಾತ್ರ ಮಹಾ ತಾಯಿಯ ಕೃಪೆಯಾಗುತ್ತದೆ. ಇಲ್ಲವಾದರೆ ಆಗುವುದು ವಿನಾಶ. ಇದರಿಂದ ನಾವು ತಿಳಿದು ಕೊಳ್ಳುವುದೇನೆಂದರೆ ಸುಳ್ಳು, ವಂಚನೆ, ಮೋಸ ಮಾಡಕೂಡದೆಂಬುದನ್ನು ಈ ಭಾಗಮ್ಮ ದೇವಿಯ ಚರಿತ್ರೆಯಿಂದ ತಿಳಿಯುತ್ತದೆ.

ಧರ್ಮಮೂರ್ತಿ ಭಾಗ್ಯವಂತಿ:-

ಸಿಂದಗಿ ತಾಲೂಕಿನಲ್ಲಿ ಆಹೇರಿ ಎಂಬುದೋಂದು ಗ್ರಾಮವಿದೆ. ಆ ಗ್ರಾಮದ ಜನರು ಘತ್ತರಗಿ ಶ್ರೀಭಾಗ್ಯವಂತಿ ದೇವಿಗೆ ಸಿಡಿ ಆಡುವ ಹರಕೆ ಹೊತ್ತು ಬೇಡಿದ ವರಗಳನ್ನು ಪಡೆದುಕೊಂಡಿರುತ್ತಾರೆ. ಊರಲ್ಲಿ ಪ್ರಮುಖರೆಲ್ಲರೂ ಕೂಡಿ ಘತ್ತರಗಿ ಶ್ರೀಭಾಗಮ್ಮ ದೇವಿಯು ಸದಾ ನಮ್ಮ ಕಣ್ಣ ಮುಂದೆ ಇರಲೆಂದು ಒಂದು ಭಾಗ್ಯವಂತಿ ದೇವಸ್ಥಾನವನ್ನು ಕಟ್ಟಿಸಿ ನಡೆದುಕೊಳ್ಳುತ್ತಿರುತ್ತಾರೆ. ಹೀಗಿರುವಾಗ ಒಂದು ಪವಾಡ ಜರುಗುತ್ತದೆ. ಆದೇ ಊರಲ್ಲಿ ಗುರುಲಿಂಗಪ್ಪ ಭೀಮರಾಯಪ್ಪ ಹಡಪದ ಎನ್ನುವವನಿಗೆ ಕಾಲಿಗೆ ಹುಣ್ಣು ಆಗಿ ಮೂರು ನಾಲ್ಕು ತಿಂಗಳು ಹಾಸಿಗೆ ಹಿಡಿದು ಮಲಗಿಕೊಂಡ. ಎಷ್ಟೋ ಹಣ ಖರ್ಚು ಮಾಡಿದರೂ ಕಾಲಿನ ನೋವು ಕಡಿಮೆ ಆಗಲಿಲ್ಲ. ಯಾರೋ ಸಿಡಿ ಆಡಲು ಘತ್ತರಗಿಗೆ ಹೊರಟ್ಟಿದ್ದರು. ಏನು ತಿಳೀತೋ ಏನೋ ತಾನೂ ಅವರ ಜೊತೆಗೆ ಘತ್ತರಗಿಗೆ ಹೋಗುತ್ತಾನೆ. ಸ್ನಾನ ಮಾಡಿ, ದರ್ಶನ ಪಡೆಯುತ್ತಾನೆ. ತಾಯಿಯ ಮುಂದೆ ನಿಂತು ಹೇ ಜಗಜ್ಜನನಿಯೇ ದೇವಲಾಂಬಿಕೆಯೇ ಭುವನೇಶ್ವರಿಯೇ ನೊಂದು ಬೆಂದು ನಂಬಿದವರ ಜೀವನ ಪಾವನ ಮಾಡುವ ಮಹಾಶಕ್ತಿಯೇ ನನ್ನ ಕಾಲಿನ ನೋವು ಕಡಿಮೆಮಾಡಿ ಮೊದಲಿನಂತೆ ನಡೆಯುವಂತೆ ಮಾಡಿದರೆ ಮುಂದಿನ ವರ್ಷ ನಿನ್ನ ದಿವ್ಯ ಸನ್ನಿಧಿಯಲ್ಲಿ ಸಿಡಿ ಆಡುತ್ತೇನೆ ಎಂದು ಬೇಡಿಕೊಂಡು ಊರಿಗೆ ಮರಳಿ ಬಂದ.[೬೨] ಕೆಲವೇ ದಿವಸಗಳಲ್ಲಿ ನೋವು ಕಡಿಮೆಯಾಗುತ್ತದೆ. ಮೊದಲಿಗಿಂತಲೂ ಚನ್ನಾಗಿ ನಡೆಯಲಿಕ್ಕೆ ಪ್ರಾರಂಭಮಾಡಿದ. ದೇವಿಯನ್ನು ಮರೆಯದೇ ಮಹಾತಾಯಿಯ ಆಶೀರ್ವಾದಿಂದ. ನಾನು ಉದ್ಧಾರಾದನೆಂದು ದೇವಿಯನ್ನು ಕೊಂಡಾಡಿ ತನ್ನ ಬಂಧುಗಳೊಡನೆ ಘತ್ತರಗಿಗೆ ಬಂದು ಸಿಡಿಯಾಡಿ ಹರಕೆಯನ್ನು ಸಲ್ಲಿಸಿ ಉದ್ಧಾರಾಗುತ್ತಾನೆ. ಅವನ ಜೀವನದಲ್ಲಿ ಮುಂದೆ ಯಾವ ತೊಂದರೆಯೂಬರಲಿಲ್ಲ.

ಭವರೋಗ ವೈದ್ಯಳು:-

ಭಾಗಮ್ಮ ತಾಯಿಯು ಭವರೋಗ ವೈದ್ಯಳು ಅನ್ನುವದಕ್ಕೆ ಒಂದು ಮಹತ್ತರವಾದ ಪವಾಡದಿಂದ ತಿಳಿಯಬಹುದು. ವಿಜಾಪುರ ಜಿಲ್ಲೆ ಸಿಂದಗಿಯಲ್ಲಿ ಭೀಮರಾಯ ನಾವಿ ಎನ್ನುವ ವ್ಯಕ್ತಿ ತನ್ನ ಕುಲ ಕಸುಬನ್ನು ಮಾಡಿಕೊಂಡು ಆನಂದವಾಗಿ ಕಾಲ ಕಳೆಯುತ್ತಿದ್ದನು. ಅವನಿಗೆ ಮದುವೆಯನ್ನು ಕೂಡಾ ಮಾಡಿದರು. ಅವನ ಹೆಂಡತಿ ೨, ೩ ಮಕ್ಕಳನ್ನು ಸುರಕ್ಷಿತವಾಗಿ ಹೆತ್ತಳು. ನಂತರ ಸ್ವಲ್ಪ ಹೊಟ್ಟೆನೋವು ಪ್ರಾರಂಭವಾಯಿತು. ಉಪಚಾರ ಮಾಡಿಸಿದರೂ ಕಡಿಮೆಯಾಗಲಿಲ್ಲ. ಕಲಬುರಗಿ ಸೊಲ್ಲಾಪುರ ಇನ್ನೂ ಎಷ್ಟೋದೊಡ್ಡ ಆಸ್ಪತ್ರೆಗಳಿಗೆ ತೋರಿಸಿದರೂ ಜಾಸ್ತಿಯಾಯಿತೇ ಹೊರತು ಕಡಿಮೆಯಾಗಲಿಲ್ಲ. ಆ ಹೆಣ್ಣು ಮಗಳಿಗೆ ಏಳಲಿಕ್ಕೆ ಬರಲಿಲ್ಲ. ಕೂಡಲಿಕ್ಕೆ ಬರಲಿಲ್ಲ. ಹೀಗಾದಾಗ ಭೀಮರಾಯನಿಗೆ ಬಹಳ ದುಃಖವೆನಿಸಿತು. ಈಗ ಸಾಯುತ್ತಾಳೆ. ಆಗ ಸಾಯುತ್ತಾಳೆಂದು ಜನರು ಆಡಿಕೊಳ್ಳುತ್ತಾರೆ. ಇನ್ನೇನು ಮಾಡುವುದು ಉಳಿಯುವದಿಲ್ಲವೆಂದು ಎಲ್ಲರೂ ಕಣ್ಣೀರು ಸುರಿಸುತ್ತಿರುವಾಗ. ಅಲ್ಲಿಗೆ ಬೆಂಗಳೂರಿನ ಡಾಕ್ಟರರು ಬರುತ್ತಾರೆ. ಎಂಥಾ ರೋಗವಿದ್ದರೂ ಗುಣ ಮಾಡುತ್ತಾರೆ ಎಂದು ಹೇಳಿದಾಗ ನಡೆಯಲಿಕ್ಕೆ ಬಾರದ ಹೆಂಡತಿಯನ್ನು ಒಂಟೆತ್ತಿನ ಗಾಡಿಯಲ್ಲಿ ಹಾಕಿಕೊಂಡು ದವಾಖಾನೆಗೆ ತೆಗೆದುಕೊಂಡು ಬರುತ್ತಾರೆ. ಡಾಕ್ಟರರು ಆ ಹೆಣ್ಣು ಮಗಳನ್ನು ನೋಡಿ ಗಾಬರಿಯಾದರೂ ಏನ್ರೀ ಎಷ್ಟುಕ್ಷೀಣವಾಗಿದ್ದಾಳೆ. ಈ ಕೇಸು ಉಳಿಯುವ ಭರವಸೆ ಇಲ್ಲ. ಆದರೆ ಇನ್ನೊಂದು ದಾರಿ ನಿಮಗೆ ಹೇಳುತ್ತೇನೆ. ಆ ಪ್ರಕಾರ ನಡೆದುಕೊಂಡರೆ ಮಾತ್ರ ಕೇಸು ಉಳಿಯುವದು ಎಂದು ಹೇಳುತ್ತಿರುವಾಗ ಭೀಮರಾಯ ಅನ್ನುತ್ತಾನೆ ಆಗಲಿ ಡಾಕ್ಟರರೇ ನೀವು ಏನು ಹೇಳುತ್ತಿರೋ ಅದನ್ನು ನಾನು ಪಾಲಿಸುತ್ತೇನೆ. ನನ್ನ ಹೆಂಡತಿಯ ಜೀವ ಉಳಿಸಿದರೆ ಸಾಕು ಎಂದನು ನೋಡ್ರಿ ಭೀಮರಾಯರೇ ನಾನಂತೂ ಔಷಧ ಕೊಡುತ್ತೇನೆ.[೮೮] ಆದರೆ ನಾನು ನಿಮ್ಮ ಭಾಗದಲ್ಲಿ ಘತ್ತರಗಿ ಭಾಗ್ಯವಂತಿ ದೇವಸ್ಥಾನಕ್ಕೆ ನಡೆದುಕೊಳ್ಳುತ್ತೇನೆ. ಆ ತಾಯಿ ನನ್ನ ಹತ್ತಿರ ಬಂದ ಪೆಶಂಟುಗಳನ್ನು ಸಾವು ನೋವುಗಳಿಂದ ಪಾರು ಮಾಡಿದ್ದಾಳೆ. ಆದ್ದರಿಂದ ನೀವು ಆರಾಮವಾದರೆ ಸಿಡಿಯಾಡುತ್ತೇನೆಂದು ಸಂಕಲ್ಪ ಮಾಡಿದರೆ ಔಷಧ ಕೊಡುತ್ತೇನೆ ಎಂದಾಗ ಭೀಮರಾಯ ಸಂಕಲ್ಪ ಮಾಡಿಕೊಳ್ಳುತ್ತಾನೆ. ಡಾಕ್ಟರರು ಔಷಧ ಕೊಡುತ್ತಾರೆ. ಕ್ಷಣದಲ್ಲಿ ಪ್ರಾಣಹೋಗುವ ಹೆಣ್ಣು ಮಗಳು ದಿನದಿಂದ ದಿನಕ್ಕೆ ಆರಾಮವಾಗುತ್ತಾಳೆ. ಮುಂದೆ ಅವರು ಸಿಡಿಯಾಡಿ ಹರಕೆ ಮುಟ್ಟಿಸುವರು. ಅಂದಿನಿಂದ ಇಂದಿನವರೆಗೆ ದೇವಿಯ ಕೃಪೆ ಪಡೆದುಕೊಳ್ಳುತ್ತಿದ್ದಾರೆ.

ಕರುಣಾಮಯಿ:-

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ಶ್ರೀ ಧನಸಿಂಗ ಚವ್ಹಾಣ ತಹಸೀಲ್ದಾರರು ಇದ್ದರು. ಅವರು ನಿಜವಾಗಿ ಅಧಿಕಾರಕ್ಕೆ ತಕ್ಕಂತೆ ದಯಾಶೀಲರಾಗಿ ಬಹಳ ಸ್ನೇಹ ಜೀವಿಯಾಗಿ ಬಾಳುತ್ತಿದ್ದರು. ಎಲ್ಲವೂ ಶಿವನಿಚ್ಚೆ ಇದ್ದಂತೆ ಆಗಲಿ ಎನ್ನುವ ಮನೋಭಾವನೆ.ಶ್ರೀ ಚವ್ಹಾಣರು ಅಧಿಕಾರಿಗಳಾಗಿದ್ದರೂ ಗರ್ವ ಅನ್ನುವದು ಸ್ವಲ್ಪವೂ ಇದ್ದಿರಲಿಲ್ಲ. ಕಲಬುರಗಿ ಜಿಲ್ಲೆಯಲ್ಲಿ ಕೆಲವು ದಿವಸ ಸೇವೆ ಸಲ್ಲಿಸಿ ಕೊನೆಯದಾಗಿ ೧೯೮೬ರಲ್ಲಿ ಜೇವರ್ಗಿ ತಾಲೂಕಿಗೆ ತಹಶೀಲ್ದಾರರಾಗಿ ಬಂದರು. ಕೆಲವು ದಿವಸಗಳ ನಂತರ ಪ್ರವಾಸಕ್ಕೆ ಹೋದಾಗ ಜೀಪ್ ಅಪಘಾತದಲ್ಲಿ ಅವರ ಒಂದು ಕಾಲು ಜಜ್ಜಿ ಹೊಯಿತು. ಕಲಬುರಗಿ ಆಸ್ಪತ್ರೆಯಲ್ಲಿ ಪ್ಲಾಸ್ಟರ್ ಔಷಧೋಪಚಾರ ಮಾಡಿದರೂ ಕಾಲುಗಳು ನಡಿಯಲಿಕ್ಕೆ ಬಾರದಂತಾಗಿತ್ತು. ಇಡೀ ವರ್ಷವು ಆಫೀಸಿಗೆ ರಜೆ ಹಾಕಿ ಮನೆಯಲ್ಲಿಯೇ ಉಳಿಯಬೇಕಾಯಿತು. ಚವ್ಹಾಣ ಸಾಹೇಬರಿಗೆ ಹಗಲು, ರಾತ್ರಿ ನಿದ್ರೆ ಇಲ್ಲದಂತಾಯಿತು. ಹೀಗಿರುವಾಗ ಒಂದು ವಿಚಿತ್ರವಾದ ಸನ್ನಿವೇಶ ನೆಡಯಿತು.

ಅದೇನೆಂದರೆ ತಹಶೀಲ್ದಾರರ ಮನೆಯ ಪಕ್ಕದಲ್ಲೇ ಶ್ರೀಸುಕ್ಷೇತ್ರ ಘತ್ತರಗಿ ಗ್ರಾಮದವರೇ ಆದ ಒಂದು ಕುಟುಂಬದವರು ಇಟ್ಟಂಗಿ ಭಟ್ಟಿಹಾಕಿಕೊಂಡು ಜೀವನ ನಡೆಸುತ್ತಿದ್ದರು. ಅವರು ಬಡವರಾಗಿದ್ದರೂ ಭಾಗಮ್ಮ ತಾಯಿಯ ಮೇಲೆ ಭಕ್ತಿಯನ್ನಿಟ್ಟು ಆಚಾರ, ವಿಚಾರ ಶೀಲರಾಗಿ ಜೀವನ ಸಾಗಿಸುತ್ತಿದ್ದರು. ಒಂದು ದಿವಸ ಸಾಯಂಕಾಲ ಇಟ್ಟಂಗಿ ಭಟ್ಟಿಯ ಹೆಣ್ಣು ಮಗಳು ಚವ್ಹಾಣ ತಹಶೀಲ್ದಾರರ ಹೆಣ್ಣು ಮಗಳ ಹತ್ತಿರ ಬಂದು ನೋಡಿ ಬಾಯಿಯವರೆ ನಮ್ಮ ಘತ್ತರಗಿ ಗ್ರಾಮದಲ್ಲಿ ಭಾಗ್ಯವಂತಿ ಅಂತಾ ದೇವತೆ ಇದ್ದಾಳ್ರಿ ಅವಳಿಗೆ ನಡೆದುಕೊಂಡ್ರ ನಿಶ್ಚಿತವಾಗಿ ಸಾಹೇಬರ ಕಾಲು ನಡೆಯಲಿಕ್ಕ ಬರತಾವರಿ. ನೀವು ನೋಡರೆ ನೋಡ್ರಿ ಅಂತ ಬಲವಂತಾಗಿ ಹೇಳುತ್ತಾಳೆ. ಇದನ್ನು ಕೇಳಿ ಚವ್ಹಾಣ ಸಾಹೇಬರ ಪತ್ನಿ ಆಕೆಯ ಮಾತಿಗೆ ಯವ್ವಾ ನಾನು ಏನು ಮಾಡಬೇಕು ಹೇಳು ನೀ ಹೇಳಿದಂಗ ನಾನು ಮಾಡುತ್ತೇನೆ ಎನ್ನುತ್ತಾಳೆ. ನೋಡ್ರಿ ನಾಳೆ ಮುಂಜಾನೆ ಶುಕ್ರವಾರ ಐತ್ರಿ ತಲೆಮೇಲೆ ನೀರು ಹಾಕಿಕೊಂಡು ಒಂದು ನೀರಗಿಂಡಿ ತುಂಬಿ ಅದಕ್ಕೆ ಅರಿಷಿಣ, ಕುಂಕುಮ ಹಚ್ಚಿ ಒಂದು ತೆಂಗಿನಕಾಯಿ ಇಡಿರಿ. ಸಾಹೇಬರ ಕಾಲು ನಡೆಯಲಿಕ್ಕೆ ಬಂದ್ರ ಐದು ಅಮವಾಸ್ಯೆ ನಿನ್ನ ದರ್ಶನಕ ಬರತೀನಿ ಅಂತ ಬೇಡಿಕೊಳ್ರಿ ಅಂತ ಹೇಳಿದಾಗ ಮುರುದಿವಸವೆ ಸಾಹೇಬರ ಸತಿ ಪೂಜೆಗೆ ಎಲ್ಲ ಸಿದ್ಧತೆ ಮಾಡಿದಳು.

ಇದನ್ನು ನೋಡಿದ ಸಾಹೇಬರು ಸತಿಗೆ ಕೇಳುತ್ತಾರೆ ಇದೇನು ಮಾಡುತ್ತಿರುವಿ ಹೊಸದಾಗಿ ಪೂಜೆ ಎಂದಾಗ ಪಕ್ಕದ ಮನೆಯ ಹೆಣ್ಣು ಮಗಳು ಹೇಳಿದ ವಿಷಯ ವಿಸ್ತಾರವಾಗಿ ಹೇಳುತ್ತಾಳೆ. ಇದನ್ನು ಕೇಳಿದ ತಹಸೀಲ್ದಾರರಿಗೆ ವಿಚಿತ್ರವೆನ್ನಿಸಿತು. ಅವರಿಗೆ ನಗು ಕೂಡಾ ಬರುತ್ತದೆ. ಯಾಕೆಂದರೆ ಎಷ್ಟೋ ಡಾಕ್ಟರರಿಗೆ ತೋರಿಸಿದರೂ ನಡೆಯಲಿಕ್ಕೆ ಬಾರದ ಕಾಲು ಘತ್ತರಗಿ ಭಾಗಮ್ಮನ ಪೂಜೆ ಮಾಡಿದರೆ ಬರುತ್ತವೆಂದಮೇಲೆ ಸಂತೋಷ ಎಂದ್ಹೇಳಿ ತಾವೂ ಪೂಜೆ ಮಾಡುತ್ತಾರೆ.[೬೬] ಎರಡು ಮೂರು ಶುಕ್ರವಾರ ಕಳೆಯುವದರಲ್ಲಿಯೇ ಅಫಜಲಪುರಕ್ಕೆ ವರ್ಗಾವಣೆಯಾಗಿ ಬರುತ್ತಾರೆ. ಅಷ್ಟೊತ್ತಿಗೆ ಅವರ ಕಾಲು ನಡೆಯಲಿಕ್ಕೆ ಸ್ವಲ್ಪ ಮಟ್ಟಿಗೆ ಬರುವಂತೆ ಆಗಿದ್ದವು. ಘತ್ತರಗಿ ದೇವಸ್ಥಾನವು ಸರ್ಕಾರದ ಕೈ ಕೆಳಗಿದೆ. ಅಫಜಲಪುರಕ್ಕೆ ಯಾರು ತಹಸೀಲ್ದಾರರಾಗಿ ಬರುತ್ತಾರೋ, ಅವರೇ ಆ ದೇವಸ್ಥಾನದ ಕಮೀಟಿ ಚೇರಮನ್ ಅಂತಾ ಸರ್ಕಾರ ನೇಮಿಸುತ್ತದೆ. ಅದೇ ರೀತಿ ತಹಶೀಲ್ದಾರ ಚವ್ಹಾಣ ಸಾಹೇಬರು ಅಫಜಲಪುರಕ್ಕೆ ಬಂದು ತಮ್ಮ ಕಛೇರಿಯ ಚಾರ್ಜ್ ತೆಗೆದುಕೊಂಡ ದಿವಸವೇ ಶ್ರೀಸುಕ್ಷೇತ್ರ ಘತ್ತರಗಿ ಗ್ರಾಮಕ್ಕೆ ಹೋಗಿ ನದಿಯಲ್ಲಿ ಸ್ನಾನ ಮಾಡಿ ತಾಯಿ ಮಂದಿರಕ್ಕೆ ಬಂದು ದರ್ಶನ ಪಡೆದುಕೊಂಡು ದೇವಿಯ ದರ್ಶನ ಮಾಡಿದರು. ಸಂತೋಷದಿಂದ ಊರ ಜನರೆಲ್ಲರನ್ನೂ ಸೇರಿಸಿ ನಾನು ನಿಮ್ಮ ಕ್ಷೇತ್ರದ ಪವಾಡದ ಮಹಾತ್ಮೆ ಕೇಳಿದ್ದೇನೆ. ಅಲ್ಲದೆ ನನ್ನದೇ ಒಂದು ಸಂಕಲ್ಪ ಮಾಡಿ ತಾಯಿ ಭಾಗ್ಯವಂತಿಮೇಲೆ ಭಾರ ಹಾಕಿದ್ದೇನೆ. ಅದು ಪೂರೈಸಿಕೊಟ್ಟರೆ ನಿಮ್ಮ ಊರ ದೇವಸ್ಥಾನದ ಜೀರ್ಣೋದ್ಧಾರದ ಕಾರ್ಯ ಮಾಡುತ್ತೇನೆಂದು ಕಾಗದಪತ್ರ, ಲೆಕ್ಕ ಪತ್ರಗಳನ್ನು ತಮ್ಮ ಜೊತೆಗೆ ತೆಗೆದುಕೊಂಡು ಚೇರಮನ್ ಚಾರ್ಜ್ ವಹಿಸಿ ಕೊಂಡು ಅಫಜಲಪುರಕ್ಕೆ ಬರುತ್ತಾರೆ.

ಮುಂದಿನ ಅಮವಾಸ್ಯೆಯು ಬರುವುದರಲ್ಲಿ ಯಾವ ತಹಶೀಲ್ದಾರರಿಗೆ ಊರುಗೋಲು ಸಹಾಯವಿಲ್ಲದೇ ನಡೆಯಲಿಕ್ಕೆ ಬರುತ್ತಿರಲಿಲ್ಲವೋ ಅದೇ ತಹಶೀಲ್ದಾರರು ಜನರ ಹಾಗೂ ಕೋಲಿನ ಸಹಾಯವಿಲ್ಲದೆ ನಡೆಯುತ್ತಾ ದೇವಸ್ಥಾನಕ್ಕೆ ಬರುತ್ತಾರೆ. ಮುಂದಿನ ಅಮವಾಸೆಗೆ ಬಹಳ ಸಂತೋಷದಿಂದ ದಂಪತಿಗಳ ಸಮೇತ ಬಂದು ತಾಯಿ ಮಂದಿರಕ್ಕೆ ಐದು ಪ್ರದಕ್ಷಿಣೆ ಹಾಕಿ, ದರ್ಶನ ಮಾಡಿದರು. ಮಂದಿರದಲ್ಲಿ ಕುಳಿತು ಹಿರಿಯರಿಗೂ, ಕಮೀಟಿಯವರಿಗೂ ಕೂಡಿಸಿ ದೇವಸ್ಥಾನದ ಹಾಗೂ ದೇವಿಯ ಅವತಾರ ಹೇಗಾಯಿತು ಎಂದು ಎಲ್ಲ ವಿಷಯ ಕೇಳಿಕೊಂಡು ಎಲ್ಲ ರೀತಿಯಿಂದಲೂ ನಾನು ಸೇವೆ ಮಾಡುತ್ತೇನೆಂದು ಹೇಳಿ ತನು,ಮನ, ಧನಗಳಿಂದ ಸೇವೆ ಸಲ್ಲಿಸಿ ಪುನೀತರಾಗುತ್ತಾರೆ.

ಭಕ್ತಿಗೆ ಒಲಿದ ಭಾಗ್ಯವಂತಿ:-

ಸಿದ್ದಣ್ಣ ಹಾಗೂ ಶಿವಲಿಂಗಮ್ಮನೆಂಬ ಸತಿ, ಪತಿಗಳು ಕಲ್ಯಾಣವೆಂಬ ಗ್ರಾಮದಲ್ಲಿ ವಾಸಿಸುತ್ತಿದ್ದರು. ಅವರಿಗೆ ಬಹಳ ದಿವಸಗಳಿಂದ ಸಂತಾನ ಭಾಗ್ಯಲಭಿಸಿರಲಿಲ್ಲ. ಆಗ ಅವರು ಘತ್ತರಗಿಯ ಮಹಿಮೆಯನ್ನು ತಿಳಿದು ಕೇಳಿ ಬಂದು ಶ್ರೀ ತಾಯಿಗೆ ಹರಕೆ ಹೊತ್ತು ಹೋಗುತ್ತಾರೆ. ಕೆಲವು ದಿವಸ ಗತಿಸಿದ ನಂತರ ಈ ದಂತಿಗಳಿಗೆ ಒಂದು ಹೆಣ್ಣು ಮಗು ಹುಟ್ಟುತ್ತದೆ. ಆ ಕಂದಮ್ಮಳಿಗೆ ಗಂಗಮ್ಮಳೆಂದು ಹೆಸರಿಟ್ಟರು.

ಗಂಗಮ್ಮಳು ಚಿಕ್ಕವಳಿರುವಾಗಲೇ ಸ್ನಾನ, ಪೂಜೆ ಆಚಾರ, ವಿಚಾರದಲ್ಲಿ ನಿರತಳಾದಳು. ಅವಳಿಗೆ ಗುರು, ಹಿರಿಯರು ಹಾಗೂ ತಂದೆ, ತಾಯಿಗಳೆಂದರೆ ಬಹಳ ಪ್ರೀತಿ. ಅದರಂತೆ ವಿದ್ಯೆಯನ್ನು ಸರಿಯಾಗಿ ಕಲಿತು ಜಾಣಳಾದಳು. ಶರಣರ ವಚನಗಳು, ಮಹಾತ್ಮರ ಚರಿತ್ರೆಗಳೆಂದರೆ ಎಲ್ಲಿಲ್ಲದ ಸಂತೋಷ ಗಂಗಮ್ಮಳಿಗೆ. ಹೀಗಿರುವಾಗ, ಅವಳ ತಂದೆ ತಾಯಿಗಳು,ಬಂಧು ಬಳಗದವರು ಗಂಗಮ್ಮಳ ಮದುವೆ ಬಗ್ಗೆ ವಿಚಾರ ಮಾಡುತ್ತಾರೆ. ಇಲ್ಲಿ ಇನ್ನೊಂದು ವಿಚಾರವೇನೆಂದರೆ. ಶಿವಗಂಗಮ್ಮಳಿಗೆ ಒಬ್ಬ ತಮ್ಮನಿದ್ದ. ಅವನ ಹೆಸರು ಶಿವ, ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡಿದ್ದನು. ಶಿವನ ತಂದೆಯು ಸಾಯುವಾಗ ಶಿವಗಂಗಮ್ಮಳಿಗೆ ಒಪ್ಪಿಸಿ ನನ್ನ ಮಗನನ್ನು ಜೋಪಾನವಾಗಿ ಮಾಡುವ ಭಾರ ನಿನ್ನದು ಮತ್ತು ನಿನ್ನ ಮಗಳಾದ ಗಂಗಮ್ಮಳನ್ನು ಕೊಟ್ಟು ಮದುವೆ ಮಾಡಬೇಕು ಎಂದು ವಚನ ತೆಗೆದುಕೊಂಡಿದ್ದನು.[100] ಆದರೆ ಶಿವನು ಸಣ್ಣವನಿರುವಾಗಲೇ ಮಲರೋಗಕ್ಕೆ ತುತ್ತಾಗಿ ಅರೇ ಹುಚ್ಚನಂತೆ ವರ್ತಿಸುತ್ತಿದ್ದನು. ಸಿದ್ದಣ್ಣನ ಮನೆಯಲ್ಲಿ ಇದ್ದ ದನಗಳನ್ನು ಕಾಯುವುದೇ ಅವನ ಕೆಲಸವಾಗಿತ್ತು. ಶಿವನಿಗೆ ಸರಿಯಾಗಿ ಮನೆಯಲ್ಲಿ ನೋಡಿ ಕೊಳ್ಳುತ್ತಿರಲಿಲ್ಲ. ಹಳಸಿದ ಅಡುಗೆ ಕೊಡುತ್ತಿದ್ದರು. ಹರಿದ ರಗಟೆ ಕೊಟ್ಟು ಮನೆಯ ಹೊರಗಿನ ಕಟ್ಟೆಯ ಮೇಲೆ ಮಲಗಿಸುತ್ತಿದ್ದರು. ಇದನ್ನು ನೋಡುತ್ತಿದ್ದ ಗಂಗಮ್ಮಳು ತನ್ನ ತಾಯಿಯನ್ನು ಕುರಿತು ಕೇಳುತ್ತಾಳೆ. ಅಮ್ಮಾ ಶಿವನನ್ನು ಕಂಡು ಹೀಗೇಕೆ ಸಿಟ್ಟು ಮಾಡುತ್ತಿರುವಿ ಅವನಿಗೆ ತಂದೆ ತಾಯಿಗಳಿಲ್ಲವೆ ಅಂದಾಗ ಸುಮ್ಮನಿರು, ನಿನಗೇಕೆ ಈ ವಿಚಾರ ಎಂದು ಬೆದರಿಸಿ ಬಿಡುತ್ತಿದ್ದಳು. ಮುಂದೆ ಸ್ವಲ್ಪ ದಿವಸಗಳು ಕಳೆದ ನಂತರ ಗಂಗಮ್ಮಳ ಚಿಕ್ಕಮ್ಮ ಅಕ್ಕಳಾದ ಶಿವಲಿಂಗಮ್ಮಳನ್ನು ಮಾತಾಡಿಸಿಕೊಂಡು ಹೋಗಲು ಬರುತ್ತಾಳೆ. ಆಗ ಅಕ್ಕನಿಲ್ಲದಾಗ ಹಿಂದೆ ತಮ್ಮ ತಂದೆ ಮರಣದ ಕಾಲದಲ್ಲಿ ನಿಮ್ಮ ತಾಯಿ ನಿನ್ನನ್ನು ಶಿವನಿಗೆ ಕೊಟ್ಟು ಮದುವೆ ಮಾಡುತ್ತೇನೆಂದು ಮಾತು ಕೊಟ್ಟಿದ್ದಾಳೆ. ಆದರೆ ನೀನು ವಿದ್ಯಾವಂತಳು. ಅವನು ಅರೆ ಹುಚ್ಚ ಅಂದಮೇಲೆ ನನ್ನ ತಮ್ಮ ಶಿವನಿಗೆ ಹೆಣ್ಣು ಕೊಡುವವರಾರು ನನಗಿರುವುದು ಒಂದು ಗಂಡು ಮಗು ಎಂದು ಕಣ್ಣೀರು ಸುರಿಸಿದಳು. ಈ ಕರುಣಾಜನಕ ಕಥೆಯನ್ನು ಕೇಳಿ ಗಂಗಮ್ಮಳು ಕಣ್ಣೀರು ಸುರಿಸಿ ಬಹಳ ವ್ಯಥೆಪಟ್ಟಳು. ಇತ್ತ ಶಿವಲಿಂಗಮ್ಮ ಹಾಗೂ ಸಿದ್ದಣ್ಣ ಮಗಳಿಗೆ ಒಳ್ಳೆಕಡೆ ವರನನ್ನು ನೋಡಿ ಮದುವೆ ಮಾಡಿಕೊಡಬೇಕೆಂದು ನಿರ್ಧರಿಸಿದರು. ಸಾಕಷ್ಟು ವರಗಳು ಬಂದರೂ ಗಂಗಮ್ಮ ಮಾತ್ರ ಒಪ್ಪಲಿಲ್ಲ.

ಒಂದು ದಿವಸ ಊರಲ್ಲಿ ನಾಲ್ಕು ಹಿರಿಯರು ಹಾಗೂ ತಂದೆ ತಾಯಿಗಳು ಕೂಡಿಕೊಂಡು ಒಬ್ಬ ಒಳ್ಳೆಯ ಶ್ರೀಮಂತ ವರನನ್ನು ನಿಶ್ಚಯ ಮಾಡಲು ಕುಳಿತರು. ಅಂಥ ಸಮಯದಲ್ಲಿ ಸುಮ್ಮನಿರುವದು ಒಳ್ಳೆಯದಲ್ಲವೆಂದು ಧೈರ್ಯ ತಂದುಕೊಂಡು ನೋಡಿರಿ. ನನ್ನ ಮನಸ್ಸಿಗೆ ಒಪ್ಪುವಂತಹ ವರನಿಗೆ ಕೊಟ್ಟು ಮದುವೆ ಮಾಡುವದಾದರೆ ಮಾಡಿರಿ. ಇಲ್ಲವಾದರೆ ನಾನು ಬ್ರಹ್ಮಚಾರಿಣಿಯಾಗಿ ಇರುತ್ತೇನೆ. ಇದೇ ನನ್ನ ನಿರ್ಧಾರ ಎಂದು ಹೇಳಿದಳು. ಗಂಗಮ್ಮನ ಮಾತು ಕೇಳಿ ಎಲ್ಲರೂ ಹೊರಟು ಹೋದರು. ಆಮೇಲೆ ತಂದೆ ತಾಯಿಗಳು ಇಬ್ಬರೂ ಸೇರಿ ಏನಮ್ಮಾ ಗಂಗಮ್ಮ ದೇವರಿಗೆ ಹರಕೆ ಹೊತ್ತು ಪಡೆದು ನೀನೊಬ್ಬಳೇ

ಮಗಳೆಂದು ಸಲುಗೆಯಿಂದ ಜೋಪಾನ ಮಾಡಿದೆವು. ನಿನ್ನ ಸುಖ, ದುಃಖಗಳನ್ನು ನೋಡಬೇಕೆಂಬ ನಮ್ಮ ಆಸೆಗೆ ಮಣ್ಣು ಬೆರೆಸುತ್ತಿರುವಿ. ಹೇಳು ಗಂಗಮ್ಮ ನಿನ್ನ ಮನಸ್ಸಿನಲ್ಲಿ ಏನಿದೆ ಎಂದು ಹೆದರಿಸಿ ಕೇಳಿದರು. ಆಗ ಗಂಗಮ್ಮಳು ಸತ್ಯ ಹೇಳಮ್ಮಾ ನೀನು ಹರಕೆ ಹೊತ್ತು ನನ್ನನ್ನು ಪಡೆದಿರುವೆನೆಂದು ಬಾಯಿ ತುಂಬಾ ಹೇಳಿದೆ. ಆದರೆ ಒಂದು ದಿನವಾದರೂ ಆ ನಿನ್ನ ದೇವರಿಗೆ ಹೋಗಿ ಹರಕೆ ಮುಟ್ಟಿಸಿದೆಯಾ ನಿಜ ಹೇಳು. ಅಮ್ಮಾ ನಿನ್ನ ತಂದೆಯ ಮರಣದ ಕಾಲಕ್ಕೆ ಏನೆಂದು ಮಾತು ಕೊಟ್ಟಿರುವೆ ಈ ರೀತಿ ನ್ಯಾಯ ಅನ್ಯಾಯಗಳನ್ನು ವಿಚಾರ ಮಾಡದೇ ದೇವರಂಥ ನಿನ್ನ ಸ್ವಂತ ತಮ್ಮನನ್ನು ಆಳಿನಂತೆ ನಡೆಸಿಕೊಳ್ಳುತ್ತಿರುವಿ.[೧೦೧] ನಿನ್ನ ಮಾತು ನಿನಗೆ ಪಾಲಿಸಲಾಗಲಿಲ್ಲ. ಆದ ಕಾರಣ ನಿನ್ನ ಮಗಳಾದ ನಾನು ಆ ಕಾರ್ಯ ನೆರವೇರಿಸುತ್ತೇನೆ. ನಾನು ಮದುವೆ ಆಗುವುದಾದರೆ ಆ ನಿನ್ನ ಹುಚ್ಚ ತಮ್ಮ ಶಿವನನ್ನು ಆಗುತ್ತೇನೆ. ಎಂದು ಗಟ್ಟಿಯಾಗಿ ನುಡಿದಳು. ಮಗಳ ಮಾತು ಕೇಳಿದ ಶಿವಲಿಂಗಮ್ಮನಿಗೆ ಸಿದ್ದಣ್ಣನಿಗೆ ಆಕಾಶವೇ ಕಳಚಿ ಮೇಲೆ ಬಿದ್ದಂತಾಗಿ ಮೈ ಜುಮ್ಮೆನಿಸತ್ತದೆ. ಇಂಥಾ ಅರೆಹುಚ್ಚನಿಗೆ ನಿನ್ನನ್ನು ಕೊಟ್ಟು ಮದುವೆ ಮಾಡಿದರೆ ಜನರು ಏನನ್ನುತ್ತಾರೆ. ಗಂಗಮ್ಮಾ ನಿನಗೆ ಹೇಳಲಿಕ್ಕಾದರೂ ನಾಚಿಕೆಯಾಗುವದಿಲ್ಲವೆ ಎನ್ನುತ್ತಾರೆ.

ಆಗ ಗಂಗಮ್ಮಳು ಅಮ್ಮಾ ನಾನು ನಿಜವಾದ ಸತ್ಯವಂತಳೇ ಆದಲ್ಲಿ ಆ ಹುಚ್ಚನನ್ನು ಜಗತ್ತೇ ನೋಡಿ ನಾಚುವಂಥಾ ಗಂಡನಾಗಿ ಮಾಡಿ ಪರಮಾತ್ಮನ ಜಡೆಯಲ್ಲಿ ಗಂಗಾ ಮೆರೆಯುವಂತೆ ಈ ನಿಮ್ಮ ಮಗಳು ಗಂಗಾ ಮೆರೆಯುತ್ತಾಳೆ ಎಂದು ಹೇಳುತ್ತಾಳೆ. ಮುಂದೆ ಸ್ವಲ್ಪ ದಿನಗಳಲ್ಲಿ ಪದ್ಧತಿ ಪ್ರಕಾರ ಲಗ್ನವನ್ನು ಮಾಡುತ್ತಾರೆ. ಅಂಥ ಅರೆ ಹುಚ್ಚ ಗಂಡನನ್ನು ಕರೆದುಕೊಂಡು ತಮ್ಮ ತಾಯಿ ಹರಕೆ ಹೊತ್ತ ಆ ಮಹಾತಾಯಿ ಘತ್ತರಗಿಯ ಶ್ರೀಭಾಗ್ಯವಂತಿ ದೇವಸ್ಥಾನಕ್ಕೆ ಹೋಗುತ್ತಾಳೆ. ಶುಕ್ರವಾರ ಸೂರ್ಯೋದಯದಲ್ಲಿ ಸ್ನಾನ ಮಾಡಿಕೊಂಡು ಹುಚ್ಚ ಪತಿಯನ್ನು ನಿಲ್ಲಿಸಿಕೊಂಡು ಕೈ ಮುಗಿದು ಮಹಾತಾಯಿ ಭಾಗ್ಯವಂತಿ ನನ್ನ ಪತಿಯನ್ನು ಈ ಹುಚ್ಚು ರೋಗದಿಂದ ಮುಕ್ತನನ್ನಾಗಿ ಮಾಡಿದರೆ ನಿನ್ನ ದೇವಸ್ಥಾನಕ್ಕೆ ಬಂದು ಸಿಡಿಯಾಡುತ್ತೇನೆ. ಮತ್ತು ಐದು ಜನ ಮುತ್ತೈದೆಯರನ್ನು ಉಡಿ ತುಂಬಿ ನದಿಯಿಂದ ದೇವಾಯಲದವರೆಗೆ ದಂಡ ನಮಸ್ಕಾರ ಹಾಕುತ್ತೇನೆ ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ.

ನಂತರ ತನ್ನ ತವರೂರಿಗೆ ಹೋಗದೇ ತನ್ನ ಪತಿಯ ಮನೆಗೆ ಹೋಗುತ್ತಾಳೆ. ಬಹಳ ವರ್ಷಗಳಿಂದ ಹಾಳು ಬಿದ್ದಿರುವ ಪತಿಯ ಮನೆ, ಹೊಲ ನೋಡಿ ಮರ ಮರ ಮರುಗಿದಳು. ಈ ವಿಷಯ ತಿಳಿದ ತಂದೆ ತಾಯಿಗಳು ಎತ್ತು, ಬಂಡಿ ಹೊಡಕೊಂಡು ಜೋಳ, ಪಾತ್ರೆ ಸಾಮಾನು, ಬಟ್ಟೆ ಬರೆ ಎಲ್ಲವನ್ನು ತಂದು ಮಗಳಿಗೆ ಕೊಟ್ಟು ಅಮ್ಮಾ ಗಂಗಮ್ಮ ಇದ್ದೊಬ್ಬ ಮಗಳನ್ನು ಬಿಟ್ಟು ನಾವು ಇರಲಾರೆವು. ನಮ್ಮೂರಲ್ಲಿಯೇ ಇರುವಿಯಂತೆ ನಡೆ ಎಂದು ಪರಿ ಪರಿಯಾಗಿ ಬೇಡಿದರು. ಆಗ ಗಂಗಮ್ಮಳ ಅಮ್ಮಾ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು. ನನ್ನ ಪತಿಯೇ ದೇವರು. ಪತಿಯ ಮನೆಯೇ ನನಗೆ ದೇವಾಲಯ. ಪತಿಯ ಪಾದವೇ ಪಾವನ. ನನಗೆ ಸಂತೋಷವಿದೆ. ಆ ಮಹಾತಾಯಿ ಭಾಗ್ಯವಂತಿ ದರ್ಶನದಿಂದ ನನ್ನ ಪತಿ ಬುದ್ಧಿವಂತನಾಗಿದ್ದಾನೆ ಎಂದು ಹೇಳಿದಳು. ಮಗಳ ಮಾತು ಕೇಳಿದ ತಂದೆ ತಾಯಿಗೆ ಹಿಡಿಸಲಾರದಷ್ಟು ಆನಂದವಾಗುತ್ತದೆ. ಇಷ್ಟು ದಿವಸ ಹುಚ್ಚನೆಂದು ಭಾವಿಸಿದ ಅಳಿಯ ಇಂದು ಜಾಣನಾಗಿದ್ದಾನೆ. ಭಾಗ್ಯವಂತಿ ದೇವಿಯ ಕರುಣೆಯಿಂದ ಜ್ಞಾನೋದಯವಾಗಿದೆ.[೧೦೨] ಅವನಿಗೆ ಆಗಾಗ ಬರುತ್ತಿರುವ ಮಲರೋಗವೂ ನಿಂತು ಹೋಗಿದೆ. ಗಂಗಮ್ಮ ಹಾಗೂ ಶಿವು ಇಬ್ಬರೂ ಒಳ್ಳೆಯ ಸತಿ, ಪತಿಗಳಾಗಿ ಎಲ್ಲರ ಬಾಯಿಯಲ್ಲಿ ಬೆಲ್ಲವಾಗಿ ಬದುಕಿದರು. ಮುಂದೆ ಎಲ್ಲರೂ ಕೂಡಿಕೊಂಡು ಘತ್ತರಗಿ ಭಾಗ್ಯವಂತಿ ದೇವಾಲಯಕ್ಕೆ ಬಂದರು. ಭೀಮಾನದಿಯಲ್ಲಿ ಸ್ನಾನ ಮಾಡಿಕೊಂಡು ಸಿಡಿ ಆಡುವ ಸೇವೆಯನ್ನು ಸಲ್ಲಿಸಿದರು. ಪತಿಯು ನದಿಯಿಂದ ದೇವಸ್ಥಾನದವರೆಗೆ ದಂಡ ನಮಸ್ಕಾರ

ಹಾಕಿದನು. ಐದು ಜನ ಮುತ್ತೈದೆಯರಿಗೆ ಉಡಿ ತುಂಬಿ, ಬಂದ ಜನರಿಗೆ ಎಲ್ಲರಿಗೂ ಅನ್ನಸಂತರ್ಪಣೆ ಮಾಡಿದರು. ಗಂಗಮ್ಮನ ತಾಯಿ ತಂದೆಗಳು ಮಗಳಿಗೆ ಬಳಿ, ಬಂಗಾರ, ಬಟ್ಟೆ ಕೊಟ್ಟರು.

ಇಷ್ಟಲ್ಲದೇ ತಮ್ಮ ಎಲ್ಲ ಆಸ್ತಿಯನ್ನು ಅಳಿಯನಿಗೆ ಕೊಡುತ್ತೇವೆಂದು ಸಂಕಲ್ಪ ಮಾಡಿದರು. ದೇವಿಯ ಆಶೀರ್ವಾದದಿಂದ ಎಲ್ಲರಿಗೂ ಒಳ್ಳೆಯದಾಯಿತು. ಮುಂದೆ ತಾಯಿಯ ಕೃಪೆಯಿಂದ ಎರಡು ಗಂಡು, ಎರಡು ಹೆಣ್ಣು ಮಕ್ಕಳಾದವು. ಸಿದ್ಧಣ್ಣ, ಶಿವಗಂಗಮ್ಮ ಮೊಮ್ಮಕ್ಕಳನ್ನು ಆಡಿಸುತ್ತ, ಆನಂದದಿಂದ ಕಾಲ ಕಳೆಯತೊಡಗಿದರು. ಗಂಗಮ್ಮ ಹುಚ್ಚ ಗಂಡನನ್ನು ಭಾಗ್ಯವಂತಿ ದೇವಿಯ ಕೃಪೆಯಿಂದ ಬುದ್ಧಿವಂತನನ್ನಾಗಿ ಮಾಡಿದಳೆಂದು ಜಗತ್‌ಪ್ರಸಿದ್ಧವಾಯಿತು. ಹೀಗೆ ಅನೇಕ ಸದ್ಭಕ್ತರು ಉದ್ಧಾರವಾಗಿದ್ದಾರೆ. ಈಗಲೂ ಕೂಡಾ ಉದ್ಧಾರವಾಗುತ್ತಲಿದ್ದಾರೆ.

ಜ್ಞಾನದೇವಿ ಭಾಗ್ಯವಂತಿ:-

ಅಫಜಲಪೂರ ತಾಲೂಕಿನಲ್ಲಿ ಮಾಶ್ಯಾಳ ಎಂಬ ಊರು ಇದೆ. ಆ ಗ್ರಾಮದಲ್ಲಿ ಚೌಡೇಶ್ವರಿ ದೇವಿಯ ದೇವಾಲಯವು ಬಹಳ ಪ್ರಸಿದ್ಧಿಹೊಂದಿದೆ. ಅಲ್ಲಿ ಪತ್ತಾರ ಮನೆತನದಲ್ಲಿ ಶಂಕರ ಹಾಗೂ ಭಾಗೀರಥಿ ಎಂಬ ಅಣ್ಣ ತಂಗಿ ಇದ್ದರು. ಅವರು ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡಿದ್ದರು. ಕೆಲವು ದಿವಸ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಆನಂತರ ಶಂಕರನಿಗೆ ಇವರ ಚಿಕ್ಕಪ್ಪ ಮದುವೆ ಮಾಡಿದನು. ಎಲ್ಲರೂ ಆನಂದಮಯವಾಗಿ ಕಾಲ ಕಳೆಯುತ್ತಿದ್ದರು.[೧೦೩]

ವಿಧಿಲೀಲೆ ಯಾರಿಗೂ ತಿಳಿದಿಲ್ಲ. ಶಂಕರ ಮದುವೆಯಾಗಿ ಒಂದು ವರ್ಷ ತುಂಬುವುದರಲ್ಲಿ ಇವರ ಚಿಕ್ಕಪ್ಪನು ಮೃತಪಟ್ಟನು. ಮನೆತನದ ಜವಾಬ್ದಾರಿಯು ಶಂಕರನಮೇಲೆ ಬಿದ್ದಿತು. ಮನೆಯಲ್ಲಿ ಚಿಕ್ಕಮ್ಮಳ ತೊಂದರೆ ಹೆಚ್ಚಾಯಿತು. ಚಿಕ್ಕಪ್ಪನ ಆಗಲಿಕೆಯಿಂದ ಹಾಗೂ ಅವನ ಹೆಂಡತಿಯ ಉಪದ್ರವವು ಹೆಚ್ಚಾಗಿ ಅವನಿಗೆ ತೊಂದರೆಯಾಯಿತು. ಶಂಕರನು ಬಳಲಿ ಬೆಂಡಾದನು. ಅಲ್ಲದೆ ಅವನಿಗೆ ಬಿಳಿ ರೋಗವಾಗಿ ದೇಹವು ಅಸಹ್ಯವಾಗಿ ಕಾಣಹತ್ತಿತ್ತು. ಈ ಮಹಾ ಅಂಟು ರೋಗದಿಂದ ಶಂಕರನು ಮುಖವೆತ್ತಿ ತಿರುಗಾಡದಂತಾಯಿತು. ಹೆಂಡತಿಯು ಹೇಳದೇ ಕೇಳದೇ ತವರೂರಿಗೆ ಹೋದಳು. ಇತ್ತ ಚಿಕ್ಕಮ್ಮ ಶಂಕರನಿಗೆ ಹಲವಾರು ರೀತಿಯಿಂದ ಯಾತನೆ ನೀಡಿ ತನ್ನ ಮನೆ ಬಿಡಿಸಿ ಹೊರಗೆ ಕಳುಹಿಸಿದಳು. ಇಂಥಾ ವಿಧಿಯ ಕಾಡಾಟದಲ್ಲಿ ಸಿಲುಕಿದ ಶಂಕರನು ಜೀನದಲ್ಲಿ ಬೇಜಾರಪಟ್ಟು ಮೂರು ಸಲ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಿರುವಾಗ ತನಗೊಬ್ಬಳು ತಂಗಿ ಇರುವದನ್ನು ಜ್ಞಾಪಿಸಿಕೊಂಡನು. ಬಂದ ಕಷ್ಟವನ್ನೆಲ್ಲ ನುಂಗಿ ಜೀವಂತ ಉಳಿದನು. ತಾನು ತಂಗಿ ಭಾಗೀರಥಿ ಈರ್ವರೂ ಊರ ಮುಂದಿನ ಒಂದು ಬೈಲಿನಲ್ಲಿ ಗುಡಿಸಲವನ್ನು ಕಟ್ಟಿಕೊಂಡು ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸಹತ್ತಿದರು. ಇಲ್ಲಿಯತನಕ ತಮ್ಮ ಮನೆಯ ಆರಾಧ್ಯ ಕುಲದೇವತೆ ಯಾರೆಂಬುದನ್ನೇ ಅರಿಯದಾಗಿದ್ದ ಅವರು ತಮ್ಮ ಹಿರಿಯ ಬಂಧುಗಳಿಂದ ಘತ್ತರಗಿಯ ಶ್ರೀ ಭಾಗ್ಯವಂತಿ ದೇವಿ ಎಂದು ಗೊತ್ತಾಯಿತು. ಮೊದಲೇ ದೈವೀ ಭಕ್ತರಾದ ಇವರುಗಳ ಮನಸ್ಸು ಯಾವಾಗ ನಮ್ಮ ಕುಲದೇವತೆಯ ದರ್ಶನ ಪಡೆದುಕೊಳ್ಳುವೆವೋ ಎಂಬ ಹಂಬಲವನ್ನು ಹೊಂದಿತು.[೧೦೪] ಅಣ್ಣ ತಂಗಿಯರಿಬ್ಬರೂ ಕೂಡಿಕೊಂಡು ಮಾಶ್ಯಾಳದಿಂದ ಘತ್ತರಗಿಗೆ ನಡೆದುಕೊಂಡು ಬಂದರು. ಭೀಮಾ ನದಿಯಲ್ಲಿ ಸ್ನಾನ ಮಾಡಿ ಶ್ರೀದೇವಿಯ ಸನ್ನಿಧಿಯ ಮುಂದೆ ನಿಂತು ಸ್ತೋತ್ರವನ್ನು ಹಾಡುತ್ತಾರೆ.

ಆಗ ಮಹಾಭಾಗ್ಯವಂತಿ ದೇವಿಯು ಪ್ರತ್ಯಕ್ಷಳಾಗಿ ಭಾಗೀರಥಿಗೆ ನಿಮ್ಮ ಅಣ್ಣನಿಗೆ ಅಂಟಿದ ರೋಗ ಮುಕ್ತವಾಗಬೇಕಾದರೆ ನೀನು ನನ್ನ ಮಂದಿರದಲ್ಲಿ ಸಿಡಿಯಾಡಬೇಕು ಎಂದು ಹೇಳಿದಂತಾಯಿತು. ತಂಗಿಗೆ ಆನಂದವಾಗಿ ಭಾಗ್ಯವಂತಿದೇವಿ ಪ್ರತ್ಯಕ್ಷಳಾದ

ವಿಷಯವನ್ನು ಅಣ್ಣನಿಗೆ ತಿಳಿಸಿದಳು. ಆತನಿಗೂ ಬಹಳ ಸಂತೋಷವಾಯಿತು. ಅದೇ ಪ್ರಕಾರವಾಗಿ ಅಣ್ಣ ಶಂಕರನೂ ಕೂಡ ಹೇ ತಾಯಿ ಭಾಗ್ಯವಂತಿಯೇ ಸರ್ವ ದುಃಖ ನಿವಾರಕಳೆಂದು ಅವಳಲ್ಲಿ ಹೀಗೆ ಬೇಡಿಕೊಳ್ಳುತ್ತಾನೆ ನನಗೆ ಅಂಟಿಕೊಂಡಿರುವ ರೋಗವನ್ನು ಗುಣಪಡಿಸಿ ತನ್ನ ತಂಗಿಗೆ ಒಂದು ವರ್ಷದಲ್ಲಿ ಮದುವೆಯಾದರೆ ಮುಂದಿನ ಈ ದಿವಸಕ್ಕೆ ನದಿಯಿಂದ ಗುಡಿಯವರೆಗೆ ದೀರ್ಘ ದಂಡ ನಮಸ್ಕಾರ ಹಾಕುತ್ತ ಬಂದು ನಿನಗೆ ಸೀರೆ, ಹಸಿರು ಬಳೆಗಳನ್ನು ಇಡಿಸುತ್ತೇನೆ ಎಂದು ಬೇಡಿಕೊಂಡು ತಾಯಿಯ ದರ್ಶನ ಪಡೆದು ತೀರ್ಥ, ಪ್ರಸಾದಗಳನ್ನು ಸ್ವೀಕರಿಸಿ ತಮ್ಮೂರಿನ ದಾರಿ ಹಿಡಿದರು.

ಅವನು ತಮ್ಮ ಗ್ರಾಮದಲ್ಲಿ ಒಂದು ಚಿಕ್ಕ ಮನೆಯನ್ನ ಕಟ್ಟಿಕೊಂಡು ತಮ್ಮ ಮೊದಲಿನ ಕಾಯಕ ಪ್ರಾರಂಭಿಸಿದನು. ಒಂದೆರಡು ತಿಂಗಳ ಕಾಲ ಕಳೆಯುತ್ತಿದ್ದಂತೆಯೇ ಶಂಕರನ ಮೈ ಮೇಲಿನ ಬಿಳಿ ಕಲೆಗಳು ತಮ್ಮಿಂದ ತಾವೇ ಮಾಯವಾದವು. ನಾಲ್ಕು ತಿಂಗಳುಗಳಲ್ಲಿ ಅವನ ತಂಗಿ ಭಾಗೀರಥಿಗೆ ಮದುವೆ ಆಯಿತು. ಶಂಕರನಿಗೂ ಕೂಡಾ ಮದುವೆ ಆಯಿತು ಮುಂದೆ ಭಾಗೀರಥಿಗೆ ಒಂದು ಗಂಡು ಮಗು ಹುಟ್ಟಿತು.[೧೦೫] ಆ ಮಗುವಿಗೆ ವರ ಪ್ರಸಾದ ಎಂದು ಹೆಸರಿಟ್ಟರು. ಮುಂದೆ ಶಂಕರನಿಗೂ ಒಂದು ಹೆಣ್ಣು ಮಗುವಾಯಿತು ಆ ಮಗುವಿಗೆ ಭಾಗ್ಯವಂತಿ ಎಂದು ಹೆಸರಿಟ್ಟರು. ಅದೇ ವರ್ಷ ಅಣ್ಣ, ತಂಗಿಯರಿಬ್ಬರೂ ಕೂಡಿಕೊಂಡು ಅನೇಕ ಜನರ ಸಮೇತ ಶ್ರೀತಾಯಿಯ ಸುಕ್ಷೇತ್ರಕ್ಕೆ ಬಂದು ತಮ್ಮ ತಮ್ಮ ಹರಕೆಗಳನ್ನು ಮುಟ್ಟಿಸಿದರು. ತಾಯಿಯ ಕೃಪೆಯಿಂದ ಜನಿಸಿದ ತಮ್ಮ ಕಂದಮ್ಮಗಳ ಜವುಳ ತೆಗೆಯುವ ಕಾರ್ಯಕ್ರಮವನ್ನೂ ಕೂಡ ಅಲ್ಲಿಯೇ ಮಾಡಿದರು. ಈ ರೀತಿ ಅಣ್ಣ ತಂಗಿಯರ ಜೀವನವು ಪಾವನವಾಯಿತು. ಸುಖದಿಂದ ಶ್ರೀಭಾಗ್ಯವಂತಿ ದೇವಿಯ ನೆನೆಯುತ್ತ ಹೊಸ ಜೀವನದಲ್ಲಿ ಕಾಲಿರಿಸಿದರು. ಭಕ್ತರ ಬಂಧು ದಯಾಸಿಂಧುವಾದ ಭಾಗ್ಯವಂತಿ ದೇವಿಯು ಕಾಪಾಡುತ್ತಾಳೆ. ಆದ ಕಾರಣ ಪ್ರತಿಯೊಬ್ಬರೂ ಆ ದೇವಿಯನ್ನು ನೆನೆಯೋಣ ಮತ್ತು ಆ ತಾಯಿಯ ಪಾದಕ್ಕೆ ಭಕ್ತಿಯನ್ನು ಅರ್ಪಿಸೋಣ.

೮. ಆಳಂದದ ಮಾದನಹಿಪ್ಪರಗಿಯ ಶೀವಲಿಂಗೇಶ್ವರ ಮಠ:-

ಮಾದನಹಿಪ್ಪರ್ಗಿಯ ಶ್ರೀ ಶಿವಲಿಂಗೇಶ್ವರ ಮಠದ ಲಿಂ.ಪೂಜ್ಯ ಶಿವಲಿಂಗ ಮಹಾಸ್ವಾಮಿಗಳು ಒಬ್ಬರು. ಈ ಭಾಗದಲ್ಲಿ ನಡೆದಾಡುವ ದೇವರು, ತ್ರಿಕಾಲ ಜ್ಞಾನಿಗಳು, ಎಂದು ಪ್ರಸಿದ್ಧಿ ಪಡೆದು ಇಲ್ಲಿನ ಭಕ್ತರ ಆರಾಧ್ಯ ದೈವವಾಗಿ ಜನಮಾನಸದಲ್ಲಿ ನೆಲೆಸಿದ್ದಾರೆ. ೧೨ನೇ ಶತಮಾನ ಕಲ್ಯಾಣ ಕ್ರಾಂತಿಯ ನಂತರ ಚದುರಿದ ಶಿವಶರಣರು ನಾಡಿನ ನಾಲ್ಕೂ ದಿಕ್ಕಿಗೂ ಬಸವಾದಿ ಶರಣರ ಸಂದೇಶ ಸಾರಲು ಆರಂಭಿಸಿದರು. ವೈರಾಗ್ಯ ಮೂರ್ತಿ ಪ್ರಭುದೇವರ ಕರಸಂಜಾತ ಅನೇಕ ವಿರಕ್ತರು ಕಲಬುರಗಿ ನಾಡಲ್ಲಿ ಬಂದು ನೆಲೆಸಿದರು. ಅವರಲ್ಲಿ ಶ್ರೀಶಿವಲಿಂಗೇಶ್ವರರು ಒಬ್ಬರು. ನಾಡಿನಲ್ಲೆಲ್ಲಾ ಸಂಚರಿಸಿ ಭಕ್ತರನ್ನು ಉದ್ದರಿಸಿದ್ದಾರೆ. ಅವರು ನೆಲೆ ನಿಂತ ಸ್ಥಳಗಳೆಲ್ಲಾ ಸುಕ್ಷೇತ್ರಗಳಾಗಿವೆ. ಅದರಲ್ಲಿ ಮಾದನಹಿಪ್ಪರ್ಗಿಯ ಇತಿಹಾಸ ಪ್ರಸಿದ್ಧವಾದ ಶ್ರೀ ಶಿವಲಿಂಗೇಶ್ವರ ಮಠವು ಒಂದು.

ಶಿವಲಿಂಗೇಶ್ವರರ ನಂತರ ಈ ಮಠಕ್ಕೆ ಶಾಂತಲಿಂಗ ಶಿವಯೋಗಿಗಳು ಅಧಿಕಾರವಹಿಸಿಕೊಂಡು ಭಕ್ತರ ನೋವನ್ನು ತಾವು ತೆಗೆದುಕೊಂಡು ಮಠದಲ್ಲಿಯೇ ಲಿಂಗೈಕ್ಯರಾದರು. ನಂತರ ಅಧಿಕಾರವಹಿಸಿಕೊಂಡವರು ಶ್ರೀ ಶಿವಲಿಂಗ ಮಹಾ ಸ್ವಾಮಿಗಳವರು. ಶಿವಮೊಗ್ಗ ಜಿಲ್ಲೆ ಸಾಂಸ್ಕೃತಿಕ ಪರಂಪರೆಯ ಮೊಟ್ಟ ಮೊದಲ ಬೀಡು ಶರಣ ಶರಣೆಯರ ಬದುಕನ್ನ ಸಾರಿ ಹೇಳುತ್ತಿರುವ ಮಯೂರವರ್ಮ, ಶಾಂತಲೆ ನಾಡಿಗೆ ಪರಿಚಯಿಸಿದ ನೆಲ ಇದು. ಬಸವಣ್ಣನ ಕ್ರಾಂತಿಗೆ ಕೈ ಜೋಡಿಸಿದ ಅಲ್ಲಮ, ಅಕ್ಕಮಹಾದೇವಿ ಅವರಂಥ ದೈವೀ ಪುರುಷರನ್ನು ಈ ನಾಡು ಹೊಂದಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂಥ ಪುಣ್ಯ ನಾಡಿನಲ್ಲಿ

ಶಿಕಾರಿಪುರ ತಾಲೂಕಿನ ಶಿರಾಳಕೊಪ್ಪದಲ್ಲಿ ಮುಚ್ಚಿಕೊಪ್ಪ ಮಠದ ವೇ. ಬಸವಣ್ಣಯ್ಯನವರು ಹಾನಗಲ್ಲ ಶಿವಯೋಗಿಯ ಭಕ್ತರು ಪತ್ನಿಯ ಅಗಲುವಿಕೆಯಿಂದ ಇದ್ದೊಬ್ಬ ಮಗನನ್ನ ಶಿವಯೋಗಿಗಳ ಉಡಿಯಲ್ಲಿಹಾಕಿ ಸನ್ಯಾಸ ಸ್ವೀಕರಿಸಲು ಮುಂದಾದರು ಆದರೆ ಶಿವಯೋಗಿಗಳು ಅವರಿಗೆ ಉಪದೇಶ ನೀಡಿ ಸಾಧ್ವಿಯಾದ ಫಕೀರಮ್ಮನನ್ನು ಮದುವೆ ಆಗಿ ಬದುಕು ನಡೆಸು ಎಂದು ಅಪ್ಪಣೆ ನೀಡಿದರು. ಮದುವೆಯಾಗಿ ವರ್ಷಗಳೇ ಕಳೆದರೂ ಮಕ್ಕಳಾಗದಿದ್ದಾಗ ಚಿಂತಿತರಾಗಿ ಶಿವಯೋಗಿಗಳ ಮೊರೆ ಹೋದರು.[೧೦೬] ಆಗ ಶಿವಯೋಗಿಗಳು ನಿಮಗೆ ಜನಿಸುವ ಮಗುವನ್ನು ನಮ್ಮ ಮಡಿಲಿಗೆ ಹಾಕಬೇಕೆಂದು ಹೇಳಿದರು. ಅವರ ಆಶೀರ್ವಾದದಿಂದ ಮಹಾಶಿವರಾತ್ರಿಯ ಪುಣ್ಯದಿನವಾದ ದಿ.೩.೩.೧೯೧೮ರಂದು ಫಕೀರಮ್ಮ ಸುಂದರ ಗಂಡು ಮಗುವಿಗೆ ಜನ್ಮ ನೀಡಿದಳು. ಮಗುವಿಗೆ ಶಿವಯೋಗಿ ಎಂದು ನಾಮಕರಣ ಮಾಡಲಾಯಿತು. ಹಾನಗಲ್ಲ ಶಿವಯೋಗಿಯ ಅಪ್ಪಣೆಯಂತೆ ೩ವರ್ಷದ ಮಗು ಶಿವಯೋಗಿಯನ್ನು ಹಾನಗಲ್ಲ ಗುರುವಿನ ಮಡಿಲಿಗೆ ಹಾಕಿದರು.

ಮಾದನ ಹಿಪ್ಪರ್ಗಿಯ ವಿಶಿಷ್ಟವಾದ ಇತಿಹಾಸ ಹೊಂದಿದೆ. ಮಹಾನ್ ತಪಸ್ವಿಗಳ ನೆಲೆಬೀಡು. ಭಕ್ತರ ಪಾಲಿಗೆ ಕಾಮಧೇನುವಿನಂತೆ ಇರುವ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರರು ಎಂಬ ಹೆಸರಿನ ಶಿವಯೋಗಿಗಳು ಕೀರ್ತನೆ, ಪುರಾಣ, ಪ್ರವಚನ ಮೂಲಕ ಭಕ್ತರ ಉದ್ಧಾರಕ್ಕಾಗಿ ಶ್ರಮಿಸಿವುದರ ಜೊತೆಗೆ ಪವಾಡಗಳನ್ನು ಮಾಡುತ್ತ ಶಿವಮಾರ್ಗ ಹಿಡಿಸಿರುವ ಘಟನೆಗಳು ಹಿಪ್ಪರಗಿ ಜನರ ನಾಲಿಗೆ ಮೇಲೆ ನಲೆದಾಡುತ್ತಿವೆ. ಅಂದಿನಿಂದ ಶಿವಲಿಂಗೇಶ್ವರ ವಿರಕ್ತ ಮಠ ಪ್ರಸಿದ್ಧಿ ಪಡೆದಿದ್ದು ಕಾಲಾಂತರದಲ್ಲಿ ಶ್ರೀ.ಮ.ನಿ.ಪ್ರ. ಬಸವಲಿಂಗ ಮಹಾಸ್ವಾಮಿಗಳು, ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಪೀಠಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು. ಇವರು ಭಕ್ತರ ಕಲ್ಯಾಣಕ್ಕಾಗಿ ಹಲವಾರು ಪವಾಡಗಳನ್ನು ತೋರಿಸಿಕೊಟ್ಟಿದ್ದಾರೆ. ಇವರ ನಂತರದಲ್ಲಿ ಇದೇ ಗ್ರಾಮದ ಓರ್ವ ಬಾಲಕನನ್ನು ಮಠಕ್ಕೆ ಉತ್ತರಾಧಿಕಾರಿಯೆಂದು ನೇಮಿಸುವ ಸಲುವಾಗಿ ಶಿವ ಮಂದಿರಕ್ಕೆ ಅಧ್ಯಯನ ಮಾಡಲು ಕಳುಹಿಸಿದರು.

ಶ್ರೀ ಶಾಂತಲಿಂಗ ಸ್ವಾಮಿಗಳು ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಆ ಬಾಲಕನ ವಿಚಾರ ಮರೆಯುವಂತಾಗಿ ೧೯೪೪ರಲ್ಲಿ ಲಿಂಗೈಕ್ಯರಾದರು. ಈ ಬಾಲಕ ಹಿಪ್ಪರ್ಗಿ ಗ್ರಾಮಕ್ಕೆ ಬರದೆ ಉಜ್ಜಯಿನಿ ಪೀಠದ ತೆಲಸಂಗ ಮಠಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡು ಶ್ರೀ.ಷ.ಬ್ರ.ಬಸವಲಿಂಗ ಸ್ವಾಮಿಗಳೆಂದು ಹೆಸರುವಾಸಿಯಾದರು. ಹಿಪ್ಪರಗಿ ಮಠಕ್ಕೆ ಯೋಗ್ಯವಾದ ಗುರು ಬೇಕೆಂಬ ಊರಿನ ಜನರ ಆಪೇಕ್ಷೆಯಂತೆ ತೆಲಸಂಗಿ ಶ್ರೀ.ಷ.ಬ್ರ. ಬಸವಲಿಂಗ ಸ್ವಾಮಿ ಮಾರ್ಗದರ್ಶನದಂತೆ ಹಾನಗಲ್ಲ, ಹಾವೇರಿಯ ಶ್ರೀಗಳಿರ್ವರ ಗರಡಿಯಲ್ಲಿ ಪಳಗಿದ ಶಿವಯೋಗಿಯೇ ಈ ಮಠಕ್ಕೆ ತಕ್ಕ ಉತ್ತರಾಧಿಕಾರಿಯೆಂದು ೧೨-೦೫-೧೯೪೬ರಂದು ಶ್ರೀ ಮ.ನಿ.ಪ್ರ. ಸದಾಶಿವ ಮಹಾಸ್ವಾಮಿಗಳು ಹಾನಗಲ್ಲ ಇವರ ಅಮೃತ ಹಸ್ತದಿಂದ ನಿರಾಭರಣ ಪಟ್ಟಾಭಿಷೇಕ ನಡೆಯಿತು.

ಗುರುವಿಗೆ ಗುರುವಾದ ಪ್ರಸಂಗ ಜಿಡಗಾ ಮಠದ ಶ್ರೀ ಸಿದ್ಧರಾಮ ಶಿವಯೋಗಿಗಳ ಗುರುವಾಗಿ ಜಿಡಗಾ ಮಠದ ಪಲ್ಲಕ್ಕಿ ಉತ್ಸವ ಶ್ರೀ ಶಿವಲಿಂಗ ಶಿವಯೋಗಿಗಳು ನೆರವೇರಿಸುತ್ತಾ ಬಂದರು. ಹಿಪ್ಪರ್ಗಿಯಲ್ಲಿ ಜನರಿಲ್ಲದೆ ರಥ ಎಳೆದಿದ್ದು ಎಲ್ಲರಿಗೂ ಆಶ್ಚರ್ಯ ಉಂಟುಮಾಡಿದೆ. ಭಕ್ತನೊಬ್ಬ ಶಿವಯೋಗಿಯ ಮೇಲಿನ ಅಪಾರ ಭಕ್ತಿ ಹೊಂದಿದ್ದು ಸುನಾಮಿ ಬಂದಾಗ ಅವರನ್ನು ನೆನೆದು ಪಾರಾಗಿದ್ದು ಸೋಜಿಗವೇ ಸರಿ. ಕುರುಡ ಭಕ್ತರನ್ನು ಕಂಡು ಅವರಲ್ಲಿ ಒಬ್ಬರಾದರೂ ಕಣ್ಣು ಕಾಣುತ್ತಿರುವಂತವರಾಗಿದ್ದರೆ ಉತ್ತಮವಾಗಿರುತ್ತಿತ್ತು ಎಂದು ಭಕ್ತರು ಮಾತಾಡುತ್ತಿದ್ದಾಗ ಶ್ರೀ ಶಿವಲಿಂಗ ಮಹಾಸ್ವಾಮಿಗಳ ಆಶೀರ್ವಾದದಿಂದ ಕುರುಡು ದಂಪತಿಗಳಲ್ಲಿ ಪತ್ನಿಗೆ ಕಣ್ಣು ಬಂದಿದು ಇದು ಹೇಗೆ ಸಾಧ್ಯವಾಯಿತು ಎಂಬ ವಿಸ್ಮಯಕ್ಕೆ ಅನುವು ಮಾಡಿಕೊಡುತ್ತದೆ.

ಶ್ರೀ ಶಿವಲಿಂಗ ಮಹಾಸ್ವಾಮಿಗಳ ಮೇಲಿನ ಅಪಾರ ಭಕ್ತಿಯಿಂದ ಮಕ್ಕಳಿಲ್ಲದವರಿಗೆ ಮಕ್ಕಳ ಸಂಪತ್ತು ಲಭಿಸಿದೆ. ಶ್ರೀ ಶಿವಲಿಂಗರ ಭಕ್ತನೊಬ್ಬನು ಕಾಶಿ ವಿಶ್ವನಾಥನ ದರ್ಶನಕ್ಕೆ ಹೋಗಿ ದರ್ಶನ ಮಾಡದೆ ನಿಜವಾದ ವಿಶ್ವನಾಥನು ಹಿಪ್ಪರ್ಗಿಯಲ್ಲಿಯೇ ಇರುವನೆಂದು ಮರಳಿ ಬಂದದ್ದು.[೧೦೭] ಒಡಲಲ್ಲಿ ಶಿವಲಿಂಗನಿರಲು ಸಿಡಲು ಆ ಭಕ್ತನಿಗೆ ಏನು ಮಾಡಲು ಸಾಧ್ಯವಾಗಲಿಲ್ಲಾ. ಶ್ರೀ ಶಿವಲಿಂಗರ ಭಕ್ತರಾದ ಪುಟ್ಟರಾಜ ಗವಾಯಿಗಳು ಪಾದೋದಕ ಸೇವಿಸಿ ಹಾಡಲು ಹೋಗುತ್ತಿದ್ದಾಗ ಆಪತ್ತಿನಿಂದ ಪಾರಾಗಿದ್ದು. ಈ ಎಲ್ಲಾ ಪವಾಡಗಳನ್ನು ನೋಡಿದರೆ ಶ್ರೀ ಶಿವಲಿಂಗರ ಮಹಿಮೆ ಎಂತಹದ್ದು ಎಂದು ಆಶ್ಚರ್ಯವಾಗದೆ ಇರದು.

ಬಾಬು ಕಾಲಬಿತ್ತಿಯವರಿಗೆ ವರನೀಡಿದ ಶಿವಯೋಗಿ:-

ಒಮ್ಮೆ ಜೇಷ್ಠ ಮಾಸದಲ್ಲಿ ಗುಡ್ಡಗಾಡಿನ ಆಕಾಶದಲ್ಲಿ ಮೋಡಗಳು ಕೋಲ್ಮಿಂಚಿನಂತೆ ಆರ್ಭಟಿಸುತ್ತಾ, ಗುಡುಗಿನ ಗರ್ಜನೆ ಪ್ರಾರಂಭವಾಯಿತು. ಒಮ್ಮಿಂದೊಮ್ಮೆಲೆ ಬೆಳಕು ಚೆಲ್ಲಿದಂತಾಯಿತು. ಘೋರವಾದ ಸಿಡಿಲು ಅಪ್ಪಳಿಸಿದಾಗ ಆಗ ಕಣ್ಣ ಕತ್ತಲಾದಂತಾಯಿತು. ಬಾಬು ಕಾಲಬಿತ್ತಿಯವರು ಜೋರಾಗಿ ಶ್ರೀ ಶಿವಲಿಂಗ ಶಿವಯೋಗಿಯನ್ನು ಧ್ಯಾನಿಸಿಕೊಂಡು ನೆಲಕ್ಕುರುಳಿದರು. ಕಷ್ಟಕಾಲದಲ್ಲಿ ಕರೆದರೆ ಬರಲಾರನೇ ಶಿವನು? ಆಗ ಶ್ರೀ ಶಿವಲಿಂಗ ಶಿವಯೋಗಿಗಳ ಆಶೀರ್ವಾದದ ಫಲದಿಂದ ಬಾಬು ಕಾಲಬಿತ್ತಿಯವರು ಪ್ರಾಣಾಪಾಯದಿಂದ ಪಾರಾದರು. ಶ್ರೀಗಳ ಪೂಜೆ ಧ್ಯಾನ, ಶಿವಲಿಂಗ ಶಿವಯೋಗಿಯ ನಾಮಸ್ಮರಣೆ ಮಾಡದೇ ಇರುವ ದಿನಗಳಲ್ಲಿ ಹಾವೇರಿಯಲ್ಲಿ ನಡೆಯುವ ಸುವರ್ಣ ತುಲಭಾರ ಕಾರ್ಯಕ್ರಮ ನೋಡಲು ಗ್ರಾಮಸ್ಥರೊಂದಿಗೆ ಹೊರಟಿದ್ದರು. ಆಗ ಮಾರ್ಗ ಮಧ್ಯದಲ್ಲಿ ಕೂಡಲ ಸಂಗಮನ ದರ್ಶನಕ್ಕಾಗಿ ನಿಲ್ಲಿಸಿ. ಮಲಪ್ರಭ, ಘಟಪ್ರಭ, ಮತ್ತು ಕೃಷ್ಣ ನದಿಗಳ ಸಂಗಮಸ್ಥಾನದಲ್ಲಿ ಪೂಜೆ ಮಾಡಿಕೊಳ್ಳುವ ಹಂಬಲದಿಂದ ನೀರಿನಲ್ಲಿ ಇಳಿದು ಬಿಟ್ಟರು. ಆಗ ಅಲ್ಲಿ ನೆರೆದ ಜನರೆಲ್ಲಾ ನೀರಿನಲ್ಲಿ ಹಾವುಗಳಿವೆ ಇಳಿಯಬೇಡ ಎಂದರು. ಕೇಳದೆ ಹಾಗೇ ಪೂಜೆಗೆ ಕುಳಿತುಬಿಟ್ಟು. ಕೈಯಲ್ಲಿ ಇಷ್ಟಲಿಂಗ ಹಾಗೂ ಬಾಯಲ್ಲಿ ಶ್ರೀ ಶಿವಲಿಂಗಶಿವಯೋಗಿಗಳ ನಾಮಸ್ಮರಣೆಯ ಶಕ್ತಿಯನ್ನು ತೋರಿ ಕೀರ್ತಿ ಪಡೆದರು ಎಂದು ಇಂದಿಗೂ ಪ್ರತ್ಯಕ್ಷದರ್ಶಿಗಳು ಕೊಂಡಾಡುತ್ತಾರೆ.

ಶ್ರೀ ಶಿವಲಿಂಗಶಿವಯೋಗಿಗಳಿಗೆ ಮಾದನ ಹಿಪ್ಪರಗಿಯ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠ ಹಾವೇರಿಯ ಹಾಗೂ ಹುಕ್ಕೇರಿಯ ಮಠಗಳು ಎರಡು ಕಣ್ಣುಗಳು ಇದ್ದ ಹಾಗೆ. ಎರಡು ಮಠಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳುವುದು ಶ್ರೀಗಳ ವಾಡಿಕೆ ಅಂತೆಯೇ ಆರು ತಿಂಗಳು ಹಿಪ್ಪರ್ಗಿ ಮಠದಲ್ಲಿ ಇದ್ದು ಭಕ್ತರನ್ನು ಆಶಿರ್ವದಿಸುತ್ತಿದ್ದರು. ಅದರಂತೆ ಇನ್ನಾರು ತಿಂಗಳು ಹಾವೇರಿಗೆ ಹೋಗುವಾಗ ಶ್ರೀ ಮಠದಲ್ಲಿ ಜಾತ್ರೆಯ ಸಂಭ್ರಮ. ಹಲವಾರು ಗ್ರಾಮಗಳಿಂದ ಭಕ್ತರ ದಂಡು ಆಗಮಿಸುತ್ತಿತ್ತು. ಕ್ರಿ.ಶ. ೨೦೦೮ರಲ್ಲಿ ಪೂಜ್ಯರನ್ನು ಹಾವೇರಿಗೆ ಕಳುಹಿಸಲು ಮಾಣಿಕರಾವ ಪಾಟೀಲ ಶ್ರೀಮಠಕ್ಕೆ ಬಂದಾಗ ಅಲ್ಲಿ ಕುಸಿದು ಬಿದ್ದರು. ಆಗ ಶ್ರೀಗಳು ಸಿಟ್ಟಿನಿಂದ ಮುಂದೆ ನಾನೇನು ನಿಮಗೆ ಸಿಗುವುದಿಲ್ಲ ಅಂತ ಹಿಂಗ ಬಿದ್ದು ಎದ್ದು ದರ್ಶನ ತಗೋತಿದ್ದರೇನು ? ಎಂದು ಪ್ರಶ್ನೆ ಮಾಡಿದರು. ಆಗ ಭಕ್ತರೆಲ್ಲ ಬುದ್ಧಿ ಈ ಬಾರಿ ನಿಮ್ಮನ್ನು ಹಾವೇರಿಗೆ ಕಳುಹಿಸಲು ನಮ್ಮ ಮನಸ್ಸು ಹಿಂಜರಿಯುತ್ತಿದೆ ಹೋಗಬ್ಯಾಡ್ರೀ ಎಂದು ಕೇಳಿಕೊಂಡ್ರು, ಅಲ್ಲಿ ಹಾವೇರಿಯಲ್ಲಿ ಸಾವಿರಾರು ಭಕ್ತರು ನಮ್ಮ ದಾರಿಯನ್ನು ಕಾಯುತ್ತಿದ್ದಾರೆ. ನಮ್ಮ ಹಿಂದಿನ ಪರಂಪರೆ ಮುರಿಯಬು ನನಗೂ ಮನಸ್ಸಿಲ್ಲ ನಾನು ಹೋಗಲೇಬೇಕು ಎಂದು ನಡೆದೇ ಬಿಟ್ಟರು. ಆಗ ಬಾಬು ಕಾಲಬಿತ್ತಿಯವರನ್ನು ಹತ್ತಿರ ಕರೆದು ಬಾಬು ಇನ್ನು ಮುಂದ ನಿನ್ನ ಕಾಯಕದಲ್ಲಿ ನೀನು ಇರು, ಸಾಧ್ಯವಾದಷ್ಟು ಕಷ್ಟದಿಂದ ಬಂದ

ಜನರಿಗೆ ನಮ್ಮ ಭಾವಚಿತ್ರ ಮತ್ತು ಪ್ರತಿಮೆ ಕಾಣುತ್ತವೆ ಎಂದು, ಶ್ರೀಮಠವನ್ನು ಮತ್ತೊಮ್ಮೆ ಶ್ರೀ ಶಿವಲಿಂಗಶಿವಯೋಗಿಗಳು ಹಿಪ್ಪರಗಿ ಭಕ್ತರಿಗೆ ಪ್ರತಿಮೆಯಾಗಿಯೇ ಉಳಿದರು. ತಪಃಶಕ್ತಿಯಬಲ ಮಠದಲ್ಲಿ ಇಟ್ಟರು.

ಸಿಂದನ ಮಡು:-

ಈ ಊರಿನ ಮೊದಲಿನ ಹೆಸರು ಮಡು ಇಲ್ಲಿ ಸಿದ್ಧಿಪುರುಷ ಸದಾನಂದ ಬಂದು ನೆಲೆಸಿದರು ಇವರು ಸಿದ್ಧಿಪುರುಷರಾದರಿಂದ ಈ ಊರನ್ನು ಸಿಂದನ ಮಡು ಎಂದು ಕರೆಯುವರು. ಈ ಊರಿನಲ್ಲಿರುವ ಸದಾನಂದರ ಗುಡಿಯ ತರ ಬಳ್ಳಾರಿಯಲ್ಲಿದೆಯಂತೆ. ದೇವಾಲಯ ಕಟ್ಟುವಾಗ ಕೆಲಸಗಾರರು ಗುಡಿಯ ಎದುರು ಹರಿಯುವ ಕಮಲಾವತಿ ನದಿಯಲ್ಲಿ ಕೈ ಹಾಕಿದರೆ ಉಸುಕು ಸಿಗುವ ಬದಲು ಕೈ ದುಡ್ಡು ಸಿಗುತ್ತಿತಂತೆ. ಅಂದರೆ ಜನರ ಶ್ರಮಕ್ಕೆ ತಕ್ಕಂತೆ ಕೂಲಿಯನ್ನು ಪಡೆಯುತ್ತಿದ್ದರಂತೆ. ಸದಾನಂದರುಒಬ್ಬ ತಪಸ್ವಿ ಜೊತೆಗೆ ಬ್ರಹ್ಮಚಾರಿಯಾಗಿದ್ದರು. ಇವರು ಮೊದಲು ಹೊಸಳ್ಳಿಯಲ್ಲಿ ದ್ಯಾನಸಕ್ತರಾದಾಗ ಊರಿನ ಗೌಡ ಅವರ ಶಕ್ತಿಯನ್ನು ಪರೀಕ್ಷಿಸಲೆಂದು ಅವರ ಮೇಲೆ ಸುಡುವ ನೀರು ಹಾಕಿದನು. ಆಗ ಸದಾನಂದರ ಮೈ ಮೇಲೆ ಬರಬೇಕಾದ ಬೊಬ್ಬೆಗಳು ಗೌಡನ ಹೆಂಡತಿ ಬಸುರಿ ಇದ್ದಳು ಅವಳ ಮೈತುಂಬ ಬೊಬ್ಬೆಗಳು ಬಂದಿದ್ದವು. ಇಲ್ಲಿ ಅವಮಾನಿತನಾದ ಈ ಸಿದ್ಧಿ ಪುರುಷರು ಸಿಂದನ ಮಡುವಿಗೆ ಬಂದು ನೆಲೆಸಿದರು.[೧೧೯] ಇವರು ಕೊನೆ ದಿನದಲ್ಲಿ ಜೀವಂತ ಸಮಾಧಿಯಾದರು. ಇವರ ಸಮಾಧಿಯ ಪಕ್ಕದಲ್ಲಿ ಬ್ರಹ್ಮಾನಂದ ಮತ್ತು ಶಿವಾನಂದರ ಸಮಾಧಿಗಳಿವೆ. ಸದಾನಂದರ ತಮ್ಮ ಬ್ರಹ್ಮಾನಂದ ಇವರ ಮಗ ಶಿವಾನಂದ ಈಗಿರುವ ಮನೆತನದವರು. [೧೧೦]

೪.೨ ಸ್ಥಳನಾಮಗಳು:-

ಸ್ಥಳವೊಂದರ ವಿಶಿಷ್ಟತೆಯನ್ನು ಕುರಿತಂತೆ ನಿರೂಪಿತವಾಗುವ ಐತಿಹ್ಯಗಳಿಗೆ ಸ್ಥಳೈತಿಹ್ಯಗಳು ಅಥವಾ ಸ್ಥಳೀಯ ಐತಿಹ್ಯಗಳು. ಸ್ಥಳದ ವಿಶಿಷ್ಟತೆ ಆಕರ್ಷಕವಾಗಿ ಮನಮುಟ್ಟುವಂತೆ ವರ್ಣಿತವಾಗುವುದು ಇಂಥ ಐತಿಹ್ಯಗಳ ವೈಶಿಷ್ಟ್ಯ ಸಾಮಾನ್ಯವಾಗಿ ಐತಿಹ್ಯಗಳು ಘಟನಾ ಪ್ರಧಾನವಾದ ನಿರೂಪಣೆಗಳಾಗಿರುತ್ತವೆ. ಪ್ರಾದೇಶಿಕವಾಗಿ ಒಂದು ಸ್ಥಳದ ಪ್ರಾಕೃತಿಕ ವೈಶಿಷ್ಟ್ಯವು ಐತಿಹ್ಯ ಸೃಷ್ಟಿಗೆ ಕಾರಣವಾಗಿರಬಹುದು ಅಥವಾ ಸ್ಥಳದ ಭೌಗೋಳಿಕ ಗುಣವೂ ಆಗಿರಬಹುದು. ಇವು ಹೀಗೇಕೆ ಎಂಬ ಕುತೂಹಲ ತಾಳುವಾಗ ಇಲ್ಲವೇ ಪ್ರಶ್ನೆ ಉದ್ಭವಿಸುವಾಗ ಅವುಗಳಿಗೆ ಉತ್ತರ ರೂಪದಲ್ಲಿ ಕಂಡುಕೊಂಡ ರಚನೆಗಳಿವು. ಹಾಗೆ ಉದ್ಭವಿಸುವಾಗ ಅವುಗಳಿಗೆ ಉತ್ತರ ರೂಪದಲ್ಲಿ ಕಂಡುಕೊಂಡ ರಚನೆಗಳಿವು. ಹಾಗೆ ಉತ್ತರಿಸಲು ಪ್ರಯತ್ನಿಸುವಾಗ ಜನಪದರು ತಮ್ಮ ಸ್ವನುಭವಗಳನ್ನೋ ಲೋಕಾನುಭವಗಳನ್ನೋ ಆಧರಿಸುತ್ತಾರೆ. ಇವು ಈ ಹಿಂದೆ ನಡೆದಿರಬಹುದಾದ ಚಾರಿತ್ರಿಕ ಘಟನೆಗಳನ್ನಾಗಲಿ ನಡೆದಿವೆಯೆಂದು ನಂಬುವ ಪೌರಾಣಿಕ ಅಂಶಗಳನ್ನಾಗಲಿ ನೆನಪಿಸಿಕೊಳ್ಳುತ್ತಾರೆ. ಪ್ರಾಕೃತಿಕ ವೈಚಿತ್ರ್ಯಗಳಿಗೆ ಸಂಬಂಧಿಸಿದಂತೆ ಸೀತೆಯ ಸೆರಗು, ಭೀಮನ ಬಂಡೆ, ರಾಮನು ಸ್ಥಾಪಿಸಿದ ಲಿಂಗ ಇತ್ಯಾದಿ ಐತಿಹ್ಯಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಇಲ್ಲೆಲ್ಲಾ ಪುರಾಣ ಘಟನೆಗಳ ಪ್ರಭಾವ ಕಂಡು ಬರುತ್ತದೆ. ಪೌರಾಣಿಕ ವ್ಯಕ್ತಿಗಳ ಸಾಮರ್ಥ್ಯ, ಗುರಿ, ಸಾಧನೆ ಕಟ್ಟುಪಾಡು ಇಟ್ಟ ಹೆಜ್ಜೆ ಎಲ್ಲವೂ ಮುಖ್ಯವಾಗುತ್ತವೆ. ಪುರಾಣವ್ಯಕ್ತಿಗಳಿಗೆ ಸಂಬಂಧಿಸಿದಂತೆ ಜನಪದರಿಗೆ ಮನಮಿಡಿಯುವ ಘಟನೆಗಳನ್ನು ವಿಶಿಷ್ಟವೆನಿಸುವ ಸ್ಥಳವೈಚಿತ್ರ್ಯಕ್ಕೆ ಅನ್ವಯಿಸುತ್ತಾರೆ. ಈ ಮೂಲಕ ಆ ಸ್ಥಳದ ಘನತೆ ಲೌಕಿಕ ಮತ್ತು ಅಲೌಕಿಕ ನೆಲೆಗಳೆರಡನ್ನು ಕಟ್ಟಿಕೊಂಡು ವಿಸ್ತೃತವಾಗಿರುತ್ತದೆ. ರಾಮಸೀತೆಯರ ವನವಾಸ, ಪಾಂಡವರ ವನವಾಸಗಳು ಜನರ ಮನಸ್ಸನ್ನು ಎಷ್ಟರ ಮಟ್ಟಿಗೆ ಮಿಡಿಯುವಂತೆ ಮಾಡಿವೆಯೆಂದರೆ, ಪೌರಾಣಿಕ ಘಟನೆಗಳನ್ನು ಚಾರಿತ್ರಿಕ ಘಟನೆಗಳಾಗಿ ಪರಿಭಾವಿಸಿದ್ದಾರೆ.

ಆದ್ದರಿಂದಲೇ ತಮ್ಮ ಭೌಗೋಳಿಕ ಪರಿಸರದ ನೆಲೆಗಳಲ್ಲಿ ಅವುಗಳನ್ನು ಪುನರ್ ಸ್ಥಾಪಿಸಿ ಸದಾ ತಮ್ಮೊಂದಿಗೆ ಉಳಿಸಿಕೊಂಡಿದ್ದಾರೆ.[೧೧೧] ಈ ಹಿನ್ನಲೆಯಲ್ಲಿ ಎಲ್ಲೆಲ್ಲೊ ರಾಮನ ವನವಾಸದ ಎಡೆಗಳು ಪಾಂಡವರ ಗುಹೆಗಳು ಕಂಡುಬರುತ್ತವೆ. ಆದರೆ ಪಾಂಡವರ ಗುಡಿಗಳೆಂದು ಹೇಳುವ ಐತಿಹ್ಯಗಳು ಬೇರೆ ಯಾಗುತ್ತವೆ. ಅವು ಕಟ್ಟಿಕೊಡುವ ವಿವರಗಳು ಭಿನ್ನವಾಗುತ್ತವೆ. ಇಂಥವು ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳು ನಂಬಿಕೆ ಆಚರಣೆಗಳ ಕುರುಹುಗಳಾಗಿವೆ.

ಕೆಲವೊಮ್ಮೆ ಲೋಕಾನುಭವಗಳು ಆರೋಪಿತವಾಗುವಲ್ಲಿ ಲೋಕಜ್ಞಾನದ ತಿಳಿವಳಿಕೆ ಮೂಡಿಸುವ ಅಂಶಗಳು ಐತಿಹ್ಯಗಳಲ್ಲಿರುತ್ತವೆ. ತಲೆಯ ಭಾರ ಹೊತ್ತ ವ್ಯಕ್ತಿಯನ್ನು ಹೋಲುವ ಬಂಡೆಗಲ್ಲಿನ ಬಗ್ಗೆ ಹೇಳುವ ಐತಿಹ್ಯ (ಡಿ. ಪಾಳ್ಯ. ಗೌರೀಬಿದನೂರು ತಾ.) : ಒಬ್ಬ ವ್ಯಕ್ತಿಯು ಬದುಕಿದ್ದಾಗ ಅತೀವ ಸಾಲ ಮಾಡಿದ್ದ ಅವನು ಸಾಯುವ ಕಾಲಕ್ಕೆ ಸಾಲವನ್ನು ತೀರಿಸಲಾಗಿಲಿಲ್ಲ ಸತ್ತು ಸಾಲದ ಭಾದೆಯಿಂದ ತಪ್ಪಿಸಿಕೊಳ್ಳಲು ಬಂಡೆಕಲ್ಲಾದ. ಅವನ ಸಾಲದ ರಾಶಿಯು ಮತ್ತೊಂದು ಬಂಡೆಯಾಗಿ ತಲೆಯ ಮೇಲೆ ಉರುಳಿ ಅಲ್ಲೇ ನಿಂತಿತು. ಇದು ಎತ್ತರವಾದ ಬಂಡೆಯ ಮೇಲೆ ದುಂಡಗಿನ ಕಲ್ಲೊಂದು ಭದ್ರವಾಗಿ ಕುಳಿತಿರುವ ಎರಡು ಗುಂಪು ಕಲ್ಲುಗಳ ಕುರಿತಂಥ ನಿರೂಪಣೆ. ಇದರ ನಿದರ್ಶನವು ಸಾಲದಹೊರೆಯಿಂದ ವಿಮುಕ್ತಿದೊರೆಯದ ಜನಪದರ ಲೋಕಾನುಭವವನ್ನು ಹೇಳುತ್ತದೆ. ಬೃಹತ್ ಗಾತ್ರದ ಬೆಟ್ಟ ಗುಡ್ಡ, ಬಂಡೆ, ಗುಹೆ, ತೋಡು, ನದಿ ಹಳ್ಳ, ಕೆರೆ, ಕೋಟೆ ಇತ್ಯಾದಿಗಳೆಲ್ಲವೂ ಸ್ಥಳೈತಿಹ್ಯಗಳಿಗೆ ನೆಲೆಗಳಾಗುತ್ತವೆ. ಇಂಥಲ್ಲಿ ಸಹಜಕಲ್ಪನೆಯಿಂದ ಜನಪದರು ಐತಿಹ್ಯಗಳನ್ನು ಕಟ್ಟಿದರೂ ಹಲವು ನೈಜ ಸಂಗತಿಗಳಿಂದಲೂ ತುಂಬಿರುತ್ತವೆ. ಮನುಷ್ಯ ನಿರ್ಮಿತ ಎಡೆಗಳಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಸಹಜ ಸಂಗತಿಗಳ ಸುಳಿವುಗಳಿರುತ್ತವೆ. ಅನೇಕ ಬಾರಿ ಅವು ಪರೋಕ್ಷವಾಗಿ ಬಿಂಬಿತವಾಗಿರಬಹುದು. ಕಾಕತಾಳೀಯವಾಗಿ ಸಂಬಂಧ ಬೆಸುಗೆಯಾಗಬಹುದು. ಉದಾ: ಕೆರೆಗಳಲ್ಲಿ ನೀರು ನಿಲ್ಲದೆ ಇರುವುದಕ್ಕೆ ಅನೇಕ ಕಾರಣಗಳೂ ನಂಬಿಕೆಗಳು ಇವೆ. ಇವುಗಳಿಗೆ ಸಂಬಂಧಿಸಿದಂತೆ ಐತಿಹ್ಯಗಳೂ ರೂಪಿತವಾಗಿರುತ್ತವೆ.[೧೧೨] ಆದರೆ "ಕೆರೆಯನ್ನು ಕಟ್ಟಿದ ವಡ್ಡನಿಗೆ ನಿಗದಿಪಡಿಸಿದ ಸಂಭಾವನೆಯನ್ನು ಕೊಡದ ಕಾರಣ ಅವನು ಈ ಕೆರೆಯಲ್ಲಿ ನೀರು ನಿಲ್ಲದೆ ಹೋಗಲಿ ಎಂದು ಶಾಪ ಹಾಕಿದನೆಂಬ ನಿರೂಪಣೆ ಬರುತ್ತದೆ. ಇಲ್ಲಿ ಕೆಲಸಗಾರರಿಗೆ ಕೂಲಿ ಕೊಡುವಲ್ಲಿ ಮೋಸಮಾಡುವ, ಕೆಲಸಗಾರರು ಶಪಿಸುವುದರ ಮೂಲಕ ಪ್ರತಿಭಟಿಸುವ, ಅಸಹಾಕರಾಗಿ ಸ್ಥಿತಿವಂತರ ನಾಶ ಬಯಸುವ ಆಶಯಗಳೆಲ್ಲವುಗಳ ಜೊತೆಗೆ ಕಾಕತಾಳೀಯವಾಗಿ ಕೆರೆಯಲ್ಲಿ ಕಾರಣಾಂತರಗಳಿಂದ ನೀರು ನಿಲ್ಲದೆ ಸದಾ ಬತ್ತಿಹೋಗುವ ವಾಸ್ತವ ಚಿತ್ರಣವೂ ಇದೆ.

ಪ್ರತಿಯೊಂದು ಸ್ಥಳಕ್ಕೂ ತನ್ನದೇಯಾದ ಒಂದು ಅನನ್ಯತೆಯ ಗುಣ ಇಲ್ಲವೆ ಕುರುಹು ಇರುತ್ತದೆ. ಈ ವಿಶಿಷ್ಟ ಗುಣಸ್ವಭಾವ, ಕುರುಹನಿಂದಾಗಿಯೇ ಆಯಾ ಸ್ಥಳವನ್ನು ಪತ್ತೆ ಹಚ್ಚುತ್ತೇವೆ. ಈ ಬಗೆಯ ಗುರುತಿಸುವಿಕೆ ಇಂದು ನಿನ್ನೆಯದಲ್ಲ. ಇದು ಪುರಾತನ ಕಾಲದಿಂದಲೂ ಚಾಲ್ತಿಯಲ್ಲಿ ಬಂದಂಥ ವಿಷಯವಾಗಿದೆ. ಮಾನವ ತನ್ನ ವ್ಯವಹಾರಕ್ಕೋಸ್ಕರ ಮತ್ತು ತನ್ನ ಅನುಕೂಲಕ್ಕಾಗಿ ಸ್ಥಳವನ್ನು ನಾಮನಿರ್ದೇಶನ ಮಾಡುತ್ತಬಂದಿದ್ದಾನೆ. ಹಾಗಂತಲೇ ಒಂದು ಪ್ರದೇಶ, ಒಂದು ಸಮುದಾಯ, ಒಂದು ರಾಷ್ಟ್ರವನ್ನು ನಿಶ್ಚಿತವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಸ್ಥಳಗಳನ್ನು ನಿಶ್ಚಿತವಾಗಿ ಮತ್ತು ಅಧೀಕೃತವಾಗಿ ಪತ್ತೆ ಹಚ್ಚುವ ಸಲುವಾಗಿ ಮಾಡಿಕೊಂಡ ಒಂದು ಸೌವಲತ್ತು ಸೌಲಭ್ಯವೇ ಈ ಸ್ಥಳನಾಮಗಳ ಹುಟ್ಟಿಗೆ ಕಾರಣವಾಗಿವೆ.

ಸ್ಥಳನಾಮಗಳ ಹುಟ್ಟು ಸಾಮಾನ್ಯವಾಗಿ ಆಯಾ ಭೂವೈಶಿಷ್ಟ್ಯತೆಯ ಮೇಲೆ ಹೆಚ್ಚು ನಿರ್ಧಾರಗೊಂಡರೂ ಇಲ್ಲಿ ಹಲವಾರು ಬಗೆಯ ಕಾರಣಗಳನ್ನು ಕಾಣಬಹುದಾಗಿದೆ. ಪ್ರಕೃತಿಯೊಂದಿಗಿರುವ ಸಂಬಂಧ, ಗುಣಲಕ್ಷಣಗಳ ಮೇಲೆ ಸ್ಥಳನಾಮಗಳು ಹುಟ್ಟು ಪಡೆದಂತೆ, ಆಯಾ ಸ್ಥಳಗಳ ಮಹಿಮೆ, ಸಾಂಸ್ಕೃತಿಕ ಮೌಲ್ಯ ಆ ಪರಿಸರದ ವ್ಯಕ್ತಿ ಸಾಮರ್ಥ್ಯದ ಮೇಲೂ

ನಿರ್ಧಾರಗೊಂಡಿವೆ.ಒಂದೆಡೆ ಭೌಗೋಳಿಕ ಪರಿಸರ ಕಾರಣವಾದರೆ ಮತ್ತೊಂದೆಡೆ ಸಾಮಾಜಿಕ, ರಾಜಕೀಯ, ಆರ್ಥಿಕ, ಪೌರಾಣಿಕ ಮುಂತಾದ ಆವರಣವನ್ನು ಪಡೆದುಕೊಂಡು ಬೆಳೆದುಬಂದಿವೆ. ಇಲ್ಲಿ ಬಹುಮುಖ್ಯವಾಗಿ ಗಮನಿಸುವ ಒಂದು ಅಂಶವೆಂದರೆ ನಮ್ಮ ಜನಪದರು ಸ್ಥಳನಾಮಗಳನ್ನು ನಿರ್ದೇಶನ ಮಾಡುವ ಸಂದರ್ಭದಲ್ಲಿ ಕಲ್ಪನಾ ಲೋಕಕ್ಕೆ ತೆರಳದೆ ವಾಸ್ತವದ ನೆಲೆಯಲ್ಲಿಯೇ ಹೆಚ್ಚಾಗಿ ಸ್ಥಳನಾಮಗಳನ್ನು ಕಟ್ಟಿಕೊಟ್ಟಿದ್ದಾರೆ.[೧೧೩] ಇಷ್ಟೊಂದು ಬಹುಮುಖ ಆಯಾಮವನ್ನು ಹೊಂದಿರುವ ಸ್ಥಳನಾಮಗಳು ವಿಶೇಷವಾಗಿ ಐತಿಹ್ಯಗಳಲ್ಲೂ ಕಾಣಸಿಗುತ್ತವೆ. ಈ ಮೊದಲೇ ಹೆಸರಿಸಿದಂತೆ ಪೌರಾಣಿಕ, ರಾಜಕೀಯ, ಸಾಮಾಜಿಕ, ಭೌಗೋಳಿಕ ಈ ಮುಂತಾದ ಅಂಶಗಳೆಲ್ಲಾ ಇಲ್ಲಿಯ ಐತಿಹ್ಯಗಳಲ್ಲಿ ವ್ಯಕ್ತಗೊಂಡಿರುವುದು ವಿದಿತವಾಗುತ್ತದೆ. ಸಾಮಾನ್ಯವಾಗಿ ಐತಿಹ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾಕೃತಿಕ ಹಿನ್ನೆಲೆ ಇರುವ ಸ್ಥಳನಾಮಗಳೇ ಕಾಣಸಿಗುತ್ತವೆ. ಈ ಸ್ಥಳೈತಿಹ್ಯಗಳು ವಾಸ್ತವ ಸತ್ಯವನ್ನು ಹಿಡಿದಿಟ್ಟುಕೊಂಡು ಬಂದಿವೆ. ಸ್ಥಳನಾಮಗಳು ಹುಟ್ಟಲು ಕಾರಣವಾದ ಜಲ, ಸಸ್ಯ, ಪ್ರಾಣಿ, ಪಕ್ಷಿ, ಗುಡ್ಡ, ಬೆಟ್ಟ, ವನ, ಕೆರೆ, ಬಾವಿ ಮುಂತಾದ ಪ್ರಕೃತಿಯ ಮಡಿಲಿನಲ್ಲಿರುವ ಪ್ರತಿಯೊಂದು ವಸ್ತು, ಸಂಗತಿಗಳನ್ನು ಅವಲಂಬಿಸಿವೆ. ಇದರಂತೆ ಸಾಂಸ್ಕ್ರತಿಕ ಬದುಕಿನ ಅಸಾಮಾನ್ಯ ವ್ಯಕ್ತಿತ್ವವೊಂದು ವ್ಯಕ್ತಿ, ವೃತ್ತಿ, ಮೌಲ್ಯ, ದೈವಿಸಂಬಂಧ, ಪೌರಾಣಿಕ ಪ್ರಜ್ಞೆ ಮುಂತಾದವುಗಳ ಹಿನ್ನೆಲೆಯಲ್ಲಿ ಅದೆಷ್ಟೋ ಸ್ಥಳನಾಮಗಳು ಹುಟ್ಟು ಪಡೆದಂತಿವೆ. ಅದೇ ರೀತಿ ಚಾರಿತ್ರಿಕ ವ್ಯಕ್ತಿಗಳ ಹೆಸರುಗಳು ಕೂಡ ಸ್ಥಳನಾಮಕ್ಕೆ ಕಾರಣವಾಗಿದೆ. ಇಂಥ ಸ್ಥಳನಾಮಗಳ ಬಗೆಗೆ ಐತಿಹ್ಯಗಳು ಕಾಣಸಿಗುತ್ತವೆ.[೧೧೪]

ಸ್ಥಳನಾಮಗಳು ಮಾನವರ ಸಣ್ಣ ನೆಲೆಯಿಂದ ಆರಂಭಿಸಿ ಅತಿದೊಡ್ಡ ಮಾನವ ವಸಾಹತು ನೆಲೆಗಳ ಅರ್ಥವನ್ನು ಹೊಂದಿವೆ. ಸ್ಥಳನಾಮಗಳನ್ನು ಎರಡು ರೀತಿಯಲ್ಲಿ ಅರ್ಥಯಿಸಬಹುದಾಗಿದೆ. ಒಂದು, ಭೌಗೋಳಿಕ ವೈಲಕ್ಷಣವನ್ನು ಸೂಚಿಸುವ ಸಾಮಾನಾರ್ಥ. ಈ ಬಗೆಯ ಹೆಸರುಗಳು ಹೆಚ್ಚಾಗಿ ರೂಢನಾಮಗಳ ಸ್ವರೂಪದಲ್ಲಿ ಮಾತ್ರ ಉಳಿಯುತ್ತವೆ. ಎರಡು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸೂಚಿಸುವ ವಿಶೇಷಾರ್ಥ. ಆಯಾ ಜನಸಮುದಾಯವು ನೆಲೆನಿಂತ ಒಂದೊಂದು ಸ್ಥಳದ ವಿಸ್ತೀರ್ಣ, ಅಲ್ಲಿನ ಜನಸಂಖ್ಯೆ ಮುಂತಾದ ಆಧಾರಗಳ ಮೇಲಿಂದ ಅದನ್ನು ಒಂದು ಹಳ್ಳಿ, ಊರು, ಗ್ರಾಮ, ನಗರ, ಖೇಡ, ಪುರ, ಪಟ್ಟಣ ಎಂದು ಮುಂತಾಗಿ ಕರೆಯಲಾಗುತ್ತದೆ. ಇದರೊಂದಿಗೆ ಆಯಾ ಸ್ಥಳಕ್ಕೆ ಪ್ರಾಪ್ತವಾದ ಒಂದು ರೀತಿಯ ವಿಶಿಷ್ಟ ಘಟಕಗಳು ಬರುತ್ತವೆ. ಇಂಥ ನಿರ್ದಿಷ್ಟ ಹೆಸರುಗಳುಳ್ಳ ಪದಗಳು ಘಟಕಗಳು ಕೂಡಿ ಸಾಮಾನ್ಯವಾಗಿ ಸ್ಥಳನಾಮಗಳು ಸಿದ್ಧಗೊಳ್ಳುತ್ತವೆ. ಎರಡಕ್ಕಿಂತ ಹೆಚ್ಚು ಘಟಕಗಳು ಇರಬಹುದು ಮತ್ತು ಒಂದೇ ಘಟಕವೂ ಕೂಡ ಅದರಲ್ಲಿರಬಹುದು.[೧೧೫]

ಸ್ಥಳನಾಮಧ್ಯಯನಕ್ಕೆ ದೇಶ, ವಿದೇಶಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ. ಭಾರತದಲ್ಲೂ ತಕ್ಕಮಟ್ಟಿಗೆ ಈ ಅಧ್ಯಯನ ನಡೆದಿದೆ. ಕನ್ನಡದಲ್ಲೂ ಈ ವಿಷಯ ಕುರಿತು ಅಧ್ಯಯನವನ್ನು ದೇ. ಜವರೇಗೌಡ, ಶಂಬಾ ಜೋಶಿ, ಸಂಗಮೇಶ ಸವದತ್ತಿಮಠ, ಕಲಬುರ್ಗಿ, ಆರ್ಕೆ, ಮಣಿಪಾಲ, ವಿ. ಗೋಪಾಲಕೃಷ್ಣ, ಚೆನ್ನಕ್ಕ ಎಲಿಗಾರ ಮುಂತಾದವರು ನಡೆಸಿದ್ದಾರೆ. ಆದರೆ ಕನ್ನಡದಲ್ಲಿ ಇನ್ನೂ ಇದು ''ಸ್ಥಳನಾಮ ವಿಜ್ಞಾನ''ವೆಂಬ ಪ್ರತ್ಯೇಕ ಅಧ್ಯಯನ ಶಾಖೆಯನ್ನೇನೂ ಹೊಂದಿಲ್ಲ. ಹೊಂದಬೇಕಾಗಿದೆ.[೧೧೬] ಈ ಅಧ್ಯಯನ ನಿಜಕ್ಕೂ ಮಹತ್ವಪೂರ್ಣವಾದುದು. ಸ್ಥಳನಾಮದ ಹಿಂದೆ ಆ ಊರಿನ ಇತಿಹಾಸವೇ ಅಡಗಿರಬಹುದು. ಪ್ರತಿಯೊಂದು ಊರ ಹೆಸರಿನ ಹಿಂದೆ ಸಾಮಾನ್ಯವಾಗಿ ಒಂದು ವಿಧದ ವಿಶೇಷತೆ ಇರುತ್ತದೆ. ಜನತೆಯ ಜೀವನ ವಿಧಾನ, ಅವರ ಸಂಸ್ಕೃತಿ ಅದರಲ್ಲಿ ಅಡಗಿರುತ್ತದೆ. ಒಂದು ಊರಿಗೆ, ಅಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಅಥವಾ ರಾಜಕೀಯ ಇತ್ಯಾದಿ ವಿಶೇಷ ಘಟನೆಯ ನೆನಪಿಗಾಗಿ ಹೆಸರು ಇಟ್ಟಿರಲು ಸಾಧ್ಯವಿದೆ.

ಊರುಗಳಿಗೆ ಆಯಾ ಹೆಸರುಗಳು ಬರಬೇಕಾದರೆ ಏನಾದರೂ ಐತಿಹ್ಯಗಳು, ದಂತಕಥೆಗಳು, ಪುರಾಣ ಕಥೆಗಳು ಕಾರಣವಾಗಬಹುದು. ಅಲ್ಲಿನ ಮಣ್ಣು, ಕಲ್ಲು, ಪೈರು, ಗುಡ್ಡ, ಹೊಳೆ, ಹಳ್ಳ, ತೊರೆ ಮುಂತಾದ ನೈಸರ್ಗಿಕ ಹಿನ್ನೆಲೆಯನ್ನೂ ಅವು ಹೊಂದಿರಬಹುದು ಹಾಗೂ ಯಾರಾದರೂ ರಾಜ, ರಾಣಿ, ಮಂತ್ರಿ, ಧಾರ್ಮಿಕ ಮಹಾಪುರುಷ, ಸಾಧು ಸತ್ಪುರುಷರು ಅಲ್ಲಿ ಆಗಿಹೋಗಿದ್ದರೆ, ಅವರ ಪ್ರಭಾವವಾಗಿದ್ದರೆ ದೇವರ ಜಾತ್ರೆ, ಉತ್ಸವ ವಿಶೇಷವಾಗಿ ನಡೆಯುತ್ತಿದ್ದರೆ ಸಾಮಾನ್ಯವಾಗಿ ಇವೆಲ್ಲ ಆಯಾ ಊರುಗಳಿಗೆ ಆ ಹೆಸರುಗಳು ಬರಲು ಕಾರಣವಾಗುತ್ತವೆ. ಊರುಗಳಿಗೆ ಹೆಸರುಗಳು ಬರಲು ಇಂಥವೇ ಕಾರಣಗಳಿರುತ್ತವೆಯೆಂದು ಖಚಿತವಾಗಿ ಬೊಟ್ಟು ಮಾಡಿ ಹೇಳಲಿಕ್ಕೆ ಬರದು. ಆದರೂ ಕೆಲವಾದರೂ ಊರುಗಳಿಗೆ ಆಯಾ ಹೆಸರುಗಳು ಹೇಗೆ ಬಂದವು ಎಂಬುದನ್ನು ಅಧ್ಯಯನ ಮಾಡಿದರೆ ಅದೊಂದು ರೀತಿಯಲ್ಲಿ ಆ ಊರಿನ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ತಿಳಿದುಕೊಂಡಂತಾಗುತ್ತದೆ. ಭಾಷಾದೃಷ್ಟಿಯಿಂದ ಅಧ್ಯಯನ ಮಾಡಿದಾಗಲಂತೂ ಆ ಊರ ಹೆಸರಿನ ಮೇಲೆ ಹೊಸಬೆಳಕು ಚೆಲ್ಲಿದಂತಾಗುತ್ತದೆ.[೧೧೭]

ಕಲಬುರಗಿ ನಗರ ಜಿಲ್ಲಾ ಸ್ಥಳವೂ, ವಿಭಾಗ ಸ್ಥಳವೂ ಆಗಿದ್ದು, ಭಾಷಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಕರ್ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಸಾಹಿತ್ಯಿಕ ದೃಷ್ಟಿಯಿಂದಲೂ ಇದು ಕ್ರಿ.ಶ.೯ನೆಯ ಶತಮಾನದಿಂದ ತುಂಬ ಮಹತ್ವ ಪಡೆಯುತ್ತ ಬಂದಿದೆ. ರಾಷ್ಟ್ರಕೂಟ ನೃಪತುಂಗ ದೊರೆ ಈ ಜಿಲ್ಲೆಯ ಮಳಖೇಡದಲ್ಲಿದ್ದು, ಸಾಹಿತ್ಯ ಸಂವರ್ಧನೆಗೆ ಶ್ರಮಿಸಿದುದು ಎಲ್ಲರಿಗೂ ತಿಳಿದ ವಿಷಯವೇ. ಕ್ರಿ.ಶ೧೪ನೆಯ ಶತಮಾನದಿಂದೀಚೆಗೆ ಈ ಭಾಗವು ಮುಸ್ಲಿಂ ರಾಜರ ಆಡಳಿತಕ್ಕೊಳಪಟ್ಟಿತ್ತು. ಇದರ ಪರಿಣಾಮವಾಗಿ ಆ ಸಂಸ್ಕೃತಿಯ ಪ್ರಭಾವ ಈ ಭಾಗದ ಮೇಲಾಯಿತು. ಉರ್ದು ಭಾಷೆಯ ಪ್ರಭಾವವಂತೂ ಈ ಭಾಗದ ಮೇಲೆ ಅತ್ಯಂತ ಗಾಢವಾಗಿ ಆಯಿತು. ಅಚ್ಚಗನ್ನಡ ಭಾಗವಾದ ಇದು ನಿಜಾಮನ ಆಡಳಿತಕ್ಕೊಳಪಟ್ಟಾಗಲಂತೂ ಉರ್ದುವನ್ನೇ ತನ್ನ ಆಡಳಿತ ಭಾಷೆಯನ್ನಾಗಿ ಸ್ವೀಕರಿಸಿತ್ತು. ಇಂದಿಗೂ ಇಲ್ಲಿನ ಜನ ದೈನಂದಿನ ಮಾತುಗಳಲ್ಲಿ,"ಕಿಲಾ, ಸವಾರಿ, ಜಲಸಾ, ದೋಬಿ, ರಜಾಯಿ, ದುಕಾನ್, ಖಾರಿಖ್, ಹಿಕಮತ್, ನಜರ್, ಕಿರಾಯ್, ತೇಜ, ಬತಾಯಿ, ಖರಾಬ್, ದುನಿಯಾದ್, ಗುಂಜಾಯಿಸ್, ಮುಷ್ಕೀಲ್, ಮಜಬೂರ್, ಷಿಕಾಯತ್ ಮುಂತಾದ ಉರ್ದು ಪದಗಳನ್ನು ಹೇರಳವಾಗಿ ಬಳಸುವುದುಂಟು. ಇದಕ್ಕೆ ಕಾರಣವೆಂದರೆ ಸುಮಾರು ೬೦೦ ವರ್ಷಗಳ ಸುದೀರ್ಘ ಅವಧಿಯ ಮುಸ್ಲಿಂ ಅರಸರ ಆಳ್ವಿಕೆ. ಉರ್ದುವಿನ ಇಂಥ ಅನೇಕ ಶಬ್ದಗಳು ನಮಗೆ ಅರಿವಿಲ್ಲದಂತೆ ನಮ್ಮ ಭಾಷಾಕೋಶದಲ್ಲಿ ಸೇರಿಹೋಗಿವೆ. ಇದು ಸಹಜ ಮತ್ತು ಇದು ಜೀವಂತವಾದ ಎಲ್ಲ ಭಾಷೆಗಳಲ್ಲೂ ನಡೆಯುವ ಪ್ರಕ್ರಿಯೆಯಾಗಿ ಉರ್ದುವಿನ ಪ್ರಭಾವ ಕೇವಲ ಈ ಭಾಗದ ಜನತೆಯ ದೈನಂದಿನ ಮಾತುಗಳಲ್ಲಿ, ವಿವಿಧ ಧಾರ್ಮಿಕ ಆಚರಣೆಗಳಲ್ಲಿ ಅಷ್ಟೇ ಆಗದೆ ಈ ಭಾಗದ ಸ್ಥಳನಾಮಗಳ ಮೇಲೂ ಆದುದನ್ನು ಗುರುತಿಸಬಹುದು. ಇಲ್ಲಿನ ಕೆಲವು ಊರುಗಳ ಹೆಸರುಗಳಂತೂ ಮುಸ್ಲಿಂ ರಾಜರ, ರಾಣಿಯರ ಹಾಗೂ ಮಂತ್ರಿಗಳ ಹೆಸರುಗಳನ್ನು ಹೊಂದಿ ಇಂದಿಗೂ ಪ್ರಚಲಿತದಲ್ಲಿರುವುದನ್ನು ಕಾಣುವೆವು. ಈ ಭಾಗದ ಭಾಷೆಯ ಬಗೆಗೆ ನಡೆದಷ್ಟು ಅಧ್ಯಯನ ಸ್ಥಳನಾಮಗಳ ಮೇಲೆ ನಡೆದಿಲ್ಲ.[೧೧೮]

- **ಸಾಂಸ್ಕೃತಿಕ ಅಧ್ಯಯನ:-**

ಸಂಸ್ಕೃತಿ ಜನತೆಯ ಜೀವನ ವಿಧಾನವೇ ಆಗಿದ್ದು, ಅವರವರ ಸಂಸ್ಕಾರಗಳಿಂದ ಹುಟ್ಟಿಕೊಂಡಂಥದು. ಬಾಹ್ಯದಲ್ಲಿ ಕಾಣುವಂಥದ್ದಲ್ಲ. ಇದು ಅಂತರಂಗಕ್ಕೆ ಸಂಬಂಧಪಟ್ಟ ವಿಶೇಷ ಗುಣ. ಇದನು ಪ್ರತಿಯೊಬ್ಬರೂ ಕಷ್ಟಪಟ್ಟು ಗಳಿಸಿ ಕೊಳ್ಳಬೇಕೆ ವಿನಾ ಇನ್ನೊಬ್ಬರಿಂದ ಪಡೆದುಕೊಳ್ಳಲಾಗದು. ಸಂಸ್ಕೃತಿ ಮಾನವನಲ್ಲಿರುವಂತೆ ಆತ ಊರುಗಳಿಗೆ ಹೆಸರಿಡುವಾಗಲೂ ಇದನ್ನು

ಪ್ರದರ್ಶಿಸಿದ್ದಾನೆ. ಅದನ್ನಿಂದು ಗುರುತಿಸುವ ಅಗತ್ಯವಿದೆ. ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿದ ವಸ್ತು, ವ್ಯಕ್ತಿ, ಘಟನೆಗಳನ್ನು ಧರ್ಮ, ಸಂಸ್ಕೃತಿಯ ಹಿನ್ನೆಲೆಯಲ್ಲಿ ತಾನು ವಾಸಿಸುವ ಸ್ಥಳಗಳಿಗೆ ಹೆಸರಿಸಿ ಮಾನವನು ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ. ಈ ಮಾತು ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳಿಗೂ ಅನ್ವಯಿಸುವಂಥದಾಗಿದೆ. ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳ ಮೇಲೆ ಉರ್ದುಭಾಷೆ, ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಆಗಿದೆ. ಜೊತೆಗೆ ಆ ಜನಾಂಗದ ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಆಗಿದೆ. ಜೊತೆಗೆ ಆ ಜನಾಂಗದ ಸಂಸ್ಕೃತಿಯ ಪರಿಣಾಮ ಹಿಂದೂಗಳ ಮೇಲಾದುದನ್ನು ಗುರುತಿಸಬಹುದು. ಈ ತಾಲ್ಲೂಕಿನ ಹಲವಾರು ಹಿಂದೂ ದೇವಾಲಯಗಳು, ಮಠಗಳು, ಮುಸ್ಲಿಂ ಮಸೀದಿಯಾಕಾರದ ಗುಂಬಜಗಳನ್ನು ಹೊಂದಿರುವುದನ್ನು ಕಾಣಬಹುದು.

ಮುಸ್ಲಿಂರ ಈದ್‌ಮಿಲಾದ್, ರಮಜಾನ್ ಮುಂತಾದ ಹಬ್ಬಗಳಲ್ಲಿ ವಿಶೇಷವಾಗಿ ಹಳ್ಳಿಗಾಡಿನ ಹಿಂದೂ ಜನ ಸಂಭ್ರಮದಿಂದ ಪಾಲ್ಗೊಳ್ಳುವುದುಂಟು. ಹಿಂದೂ ದೇವಾಲಯಗಳಿಗೆ ಹೋಗುವಂತೆ ಮಸೀದಿ, ದರ್ಗಾಗಳಿಗೆ ಹೋಗಿ ತಮ್ಮ ಭಕ್ತಿ ಕಾಣಿಕೆ ಸಲ್ಲಿಸುವುದುಂಟು. ಭಾವೈಕ್ಯತೆಯ ಈ ಗುಣ ಹಿಂದೂಗಳಿಗೆ ರಕ್ತಗತವಾದುದು. ಇದು ಬಹುಮಟ್ಟಿಗೆ ನಿಜವಾದರೂ ಅನೇಕ ಸಂದರ್ಭಗಳಲ್ಲಿ ಮುಸ್ಲಿಂ ರಾಜರ ಆಡಳಿತ, ಆದೇಶ, ಪ್ರಭಾವ, ಒತ್ತಡ ಕಾರಣವಾಗಿಯೂ ಹಿಂದೂಜನ ನಡೆದುಕೊಂಡರೆನ್ನುವುದನ್ನು ಅಲ್ಲಗಳೆಯಲಿಕ್ಕಾಗದು. ಅಧಿಕಾರ ಯಾರ ಬಳಿ ಇರುತ್ತೋ ಸಾಮಾನ್ಯ ಜನ ಅವರಂತೆ ನಡೆದುಕೊಳ್ಳುವುದು ಸಹಜ. ಮುಸ್ಲಿಂರ ಆಳ್ವಿಕೆಯ ಅವಧಿಯಲ್ಲಿ ಈ ಭಾಗದ ಜನ ಅವರ ಧರ್ಮ, ಸಂಸ್ಕೃತಿಯನ್ನು ಬಹಳಷ್ಟು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿ ಕೊಂಡದ್ದು ಉಂಟು. ಇಷ್ಟೇ ಅಲ್ಲದೇ ಈ ತಾಲ್ಲೂಕಿನ ಎಷ್ಟೋ ಊರುಗಳಿಗೆ ಇರುವ ಹೆಸರುಗಳು ಉರ್ದುಮಯವಾಗಿವೆ. ವಿಶೇಷವಾಗಿ ಈ ತಾಲ್ಲೂಕಿನ ಕೆಲವು ಊರುಗಳ ಹೆಸರುಗಳು ಮುಸ್ಲಿಂ ರಾಜ, ರಾಣಿಯರ ಮಂತ್ರಿಗಳ ಹೆಸರು ಹೊಂದಿರುವುದನ್ನು ಈಗಲೂ ಕಾಣಬಹುದು. ಇದಕ್ಕೆ ಹೀರಾಪೂರ, ಫರಹತಾಬಾದ, ಫಿರೋಜಾಬಾದ ಮುಂತಾದವನ್ನು ಹೆಸರಿಸ ಬಹುದು. ಹಿಂದೂ, ಮುಸ್ಲಿಂರು ಹಿಂದೆ ಸ್ನೇಹ ಸೌಹಾರ್ದದಿಂದ ಬಾಳುತ್ತಿದ್ದರು. ಆದಕ್ಕೆ ಭಾವೈಕ್ಯತೆಯ ದ್ಯೋತಕವಾಗಿ ಈ ರೀತಿ ಊರುಗಳಿಗೆ ಹೆಸರು ಬಂದಿವೆಯೆಂದು ಕೆಲವರು ಅನ್ನುವುದುಂಟು. ಇದು ಸಂಪೂರ್ಣ ಸರಿಯಲ್ಲ. ಸ್ನೇಹ, ಸೌಹಾರ್ದಕ್ಕಿಂತ ಅವರ ಸಂಸ್ಕೃತಿಯನ್ನು ಬಲವಂತವಾಗಿ ಹಿಂದೂಗಳ ಮೇಲೆ ಹೇರಿದ್ದರ ಪರಿಣಾಮ ಈ ತಾಲ್ಲೂಕಿನ ಅನೇಕ ಸ್ಥಳನಾಮಗಳು ಉರ್ದುಮಯವಾಗಿವೆಯೆಂದು ಹೇಳುವುದೇ ಹೆಚ್ಚು ಸೂಕ್ತವೆನಿಸುತ್ತದೆ.[೧೧೯]

೧. **ಫಿರೋಜಾಬಾದ:-**

ಈ ಊರು ಹಿಂದೆ ಫಿರೋಜಷಾನ ಆಡಳಿತಕ್ಕೆ ಒಳಪಟ್ಟುದುದರಿಂದ ಇದಕ್ಕೆ ಆತನ ಹೆಸರೇ ಬಂದಿದೆ. ಹಿಂದೆ ಪ್ರಭಾವಿ ವ್ಯಕ್ತಿಗಳ. ಧಾರ್ಮಿಕ ಮಹಾಪುರುಷರ ಸ್ಮರಣೆಗಾಗಿ ಅವರ ಹೆಸರೇ ಊರುಗಳಿಗೆ, ಹೊಳೆಗಳಿಗೆ ಬಂದುದುಂಟು.

೨. **ಸುಲ್ತಾನಪುರ:-**

ಬಹಮನಿ ಅರಸರಲ್ಲಿ ಪ್ರಮುಖವಾದ ಆದಿಲ್ ಶಾಹಿಯ ಪತ್ನಿಯಲ್ಲೊಬ್ಬಳಾದ ಸುಲ್ತಾನಬಿಯ ಸ್ಮರಣಾರ್ಥವಾಗಿ ಆಕೆಯ ಹೆಸರನ್ನು ತಂದು ನಿಂತುದೇ ಸುಲ್ತಾನಪುರ.

೩. **ಹೀರಾಪುರ:-**

ಸುಲ್ತಾನಪುರವು ಸುಲ್ತಾನಬಿಯ ಹೆಸರನ್ನು ತಳೆದು ನಿಂತಂತೆ ಆದಿಲ್‌ಶಾಹಿಯ ಇನ್ನೊಬ್ಬ ಪತ್ನಿಹೀರಾಬಿಯ ಸ್ಮರಣಾರ್ಥ ರೂಪಪಡೆದ ಊರು ಹೀರಾಪುರ.

೪. **ಗುಲಬರ್ಗಾ:-**

ಗುಲಬರ್ಗಾಎಂದೇ ಈಗ ಹೆಚ್ಚಾಗಿ ಈ ಊರು ಕರೆಯಲ್ಪಡುತ್ತಿದ್ದರೂ ಇದರ ಮೂಲ ಹೆಸರು ಕಲಬುರ್ಗಿ. ಕಲಬುರ್ಗಿ, "ಕ್ರಿ.ಶ.೧೧೮೧ರ ಹುಣಸಿ ಹಡಗಲಿ ಶಾಸನದಲ್ಲಿ ಇದರ ಹೆಸರು 'ಕಲಬುರಗೆ' ಎಂದು ನಿರ್ದೇಶಿಸಿದೆ. ಗುಲಬರ್ಗಾ ಜಿಲ್ಲೆಯ ತಾಲ್ಲೂಕು ಸ್ಥಳವಾದ 'ಅಫಜಲಪೂರ' ಅಫಜಲಖಾನನೆಂಬ ಮಂತ್ರಿಯ ಹೆಸರನ್ನು ಹೊತ್ತು ನಿಂತುದನ್ನಿಲ್ಲಿ ಸ್ಮರಿಸಬಹುದು.

ಸುಲ್ತಾನಪುರ, ಹೀರಾಪುರ ಈ ಊರುಗಳು ಆದಿಲ್ ಶಾಹಿಯ ಪತ್ನಿಯರ ಹೆಸರು ಹೊತ್ತು ನಿಂತಂತೆ ಇಂದಿನ ಯಾದಗೀರ ಜಿಲ್ಲೆಯ ಸುರಪುರ ನಾಯಕ ದೊರೆಗಳ ಉಪಪತ್ನಿಯರಾದ ರಂಗಮ್ಮ, ವೆಂಕಮ್ಮ, ರುಕ್ಕಮ್ಮ, ಹಸನಮ್ಮ ಇವರ ಸ್ಮರಣಾರ್ಥ ರಂಗಂಪೇಟೆ, ವೆಂಕಟಾಪುರ, ರುಕ್ಕುಂಪೇಟೆ ಹಾಗೂ ಹಸನಾಪುರ ಎಂಬ ಹೆಸರು ಹೊಂದಿ ಈಗಲೂ ಇರುವುದನ್ನು ಇಲ್ಲಿ ಸ್ಮರಿಸಬಹುದು.

ಕಲಬುರಗೆಯ ವಿಗ್ರಹ ರೂಪ ಕಲ್ಲುಂಪರಿಗೆ ಎಂದರೆ ಕಲ್ಲುಬಂಡೆಗಳ ಹಾಸುಗಳಿಂದ ಕೂಡಿದ ಊರು. ಇಲ್ಲಿನ ಭೂಮಿಯ ಒಳಭಾಗದಲ್ಲಿ ಕಲ್ಲುಗಳ ಥರದ ಹಾಸು ಇದ್ದುದನ್ನು ಕಾಣಬಹುದು. 'ಬುರಗ' ಎಂದರೆ ಕಲ್ಲುಗಳು ಒಂದಕ್ಕೊಂದು ಅಂಟಿಕೊಂಡುದು. ಅಂದರೆ ಕಲ್ಲಿನ ಕಣಿವೆ ಎಂದರ್ಥ. ಕಲ್ಲಿನ ಕಣಿವೆಗಳು ಇಲ್ಲಿರುವುದರಿಂದ ಈ ಊರಿಗೆ ಕಲಬುರ್ಗಿ ಎಂಬ ಹೆಸರು ಬಂದಂತಿದೆ. ಆದರೆ ಎಂ. ಎಂ. ಕಲಬುರ್ಗಿಯವರು ಬೇರೆ ರೀತಿಯಲ್ಲಿ ಈ ಊರ ಹೆಸರನ್ನು ವಿಗ್ರಹಿಸಿ ಅರ್ಥೈಸಿದ್ದಾರೆ. ಅದು ಹೀಗಿದೆ. ಕಲಂಬರ+ಕೆಯ್=ಕಲಂಬರಕೆ (ಗೆ)>ಕಲಂಬರಗೆ> ಕಲಂಬರಗಿ> ಕಲಬುರಗಿ. ಹಿಂದೆ ಕಲಂಬರು ಎಂಬ ಹೆಸರಿನ ಜನಾಂಗ ವಾಸಿಸುವ ಸ್ಥಳ ಇದಾಗಿತ್ತು. ಅದಕ್ಕೆ ಈ ಊರಿಗೆ ಕಲಬುರಗಿ ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಕಲ್ಲುಗಳ ಕಣಿವೆ, ಕಲಂಬರು ವಾಸಿಸುವ ಕೃಷಿ ಪ್ರದೇಶ ಎಂಬೆರಡು ರೀತಿಯಲ್ಲಿ ಈ ಊರನ್ನು ಅರ್ಥೈಸಲಾಗಿದೆ. ಇದರ ಬಗ್ಗೆ ಇನ್ನೂ ಸಂಶೋಧನೆ ನಡೆಯುತ್ತಲಿವೆ. ಅರ್ಥದ ಬಗ್ಗೆ ಇನ್ನೂ ಖಚಿತ ನಿರ್ಧಾರವಾಗಬೇಕಿದ್ದರೂ ಇದರ ಹೆಸರು ಮಾತ್ರ ಕಲಬುರಗಿ ಎಂದೇ ಖ್ಯಾತಿ ಪಡೆದಿತ್ತು. 'ಗುಲಬುರ್ಗಾ'ಕ್ಕಿಂತ ಪ್ರಾಚೀನ ಹೆಸರಾದ ಕಲಬುರ್ಗಿ ಎಂದೇ ಇದಕ್ಕೆ ಕರೆಯುವುದು ಅರ್ಥಪೂರ್ಣವಾದುದು ಮತ್ತು ಸಮರ್ಪಕವಾದುದು.[೧೨೦]

ಈ ಹೆಸರು ನಿಜಾಂ ಅರಸನ ಕಾಲಕ್ಕೆ ಪಾರಸೀಕರಣಗೊಂಡು ಮುಸ್ಲಿಂರ ಆಡಳಿತ ಹಾಗೂ ಪ್ರಭಾವಕ್ಕೊಳಗಾಗಿ ಗುಲಬರ್ಗಾ ಎಂದಾಯ್ತು. 'ಗುಲಬರ್ಗಾ' ಹೆಸರನ್ನು ಈ ರೀತಿ ಅರ್ಥಯಿಸಲಾಗುತ್ತದೆ. 'ಗುಲ್' ಎಂದರೆ "ಹೂ", ಬುರ್ಗ ಎಂದರೆ "ಎಲೆ ತೋಟ" ಎಂದರ್ಥ. ಹೂದೋಟಗಳ ನಗರ ಎಂಬರ್ಥ ಹೊರಡುವುದು. ಏನೇ ಆಗಲಿ ಮುಸ್ಲಿಂರ ಆಡಳಿತ, ಸಂಸ್ಕೃತಿ, ಪ್ರಭಾವ ಕಾರಣವಾಗಿ ಮೂಲದಲ್ಲಿದ್ದ ಕಲಬುರ್ಗಿ ಸ್ಥಳನಾಮವು 'ಗುಲಬರ್ಗಾ' ಎಂದು ಮಾರ್ಪಾಟಾಗಿದೆ. ಹೇಗಾದರೂ ಜನ ಈಗ ಗುಲಬರ್ಗಾ, ಕಲಬುರ್ಗಿ ಎರಡೂ ಹೆಸರುಗಳಿಂದ ಇದನ್ನು ಕರೆಯುತ್ತಾರೆ. ಸಾಮಾನ್ಯವಾಗಿ ಹಳ್ಳಿಗರು,

ಇದಕ್ಕೆ ಕಲಬುರ್ಗಿ ಎಂದೇ ಅನ್ನುವುದುಂಟು. ಇದರಂತೆಯೇ ಈ ತಾಲ್ಲೂಕಿನ ಇನ್ನೂ ಅನೇಕ ಊರುಗಳು ಹೆಸರಿನ ಬಗ್ಗೆ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವದನ್ನರಿಯಬಹುದು.[೧೨೧]

ಸುಲ್ತಾನಪುರ ಮತ್ತು ಹೀರಾಪುರ ಇವು ಊರುಗಳ ಹೆಸರುಗಳು ಬಿಜಾಪುರ ಆದಿಲ್ ಶಾಹಿಯ ಹೆಂಡತಿಯರ ಹೆಸರಿನಲ್ಲಿಯೇ ಒಂದೊಂದು ಊರುಗಳಿಗೆ ಹೆಸರುಗಳಾಗಿ ನಿರ್ಮಿಸಿದರು. ಬಹುಶಹ ಅವನ ಹೆಂಡತಿಯರು ಇರುವ ಸ್ಥಳವೇ ಮುಂದೆ ಆ ಊರಿಗೆ ಬಂದಿರಬಹುದು.

ಗುಲಬರ್ಗಾದ ಮೂಲ ಹೆಸರು ಕಲಬುರಗಿ ಈಗ ಇದಕ್ಕೆ ಇದೆ ಹೆಸರಿನಿಂದ ಕರೆಯಲಾಗುತ್ತದೆ. ಕಲ್ಲುಗಳ ಗಣಿ ಮತ್ತು ಕಲ್ಲಚಪ್ಪಡಿಗಳಿಂದ ಕೂಡಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಸುಣ್ಣದ ಕಲ್ಲಿನ ನೀಕ್ಷೆಪಗಳಿಂದ ಕೂಡಿದ ನಾಡಾಗಿದೆ ಇದೇ ಕಾರಣಕ್ಕೆ ಸಿಮೆಂಟ್ ಕಾರ್ಖಾನೆಗಳು ಬಹಳಷ್ಟು ಕಂಡುಬರುತ್ತವೆ ನಮ್ಮ ಕಲಬುರಗಿ ಜಿಲ್ಲೆಯಲ್ಲಿ. ಬಹುಮನಿಯರ ಕಾಲದಲ್ಲಿ ಕಮಲದ ಹೂ ಬಹಳಷ್ಟು ದೊರೆಯುತ್ತಿದರಿಂದ ಈ ನಾಡಿಗೆ ಕಲಬುರಗಿ ಎಂಬ ಹೆಸರು ಬಂದಿದೆ ಎಂಬ ಮೂಲವು ಇದೆ.

ಮಹಾಗಾಂವ್:-

'ಗಾಂವ್'ಎಂಬ ಪದವು ಸಂಸ್ಕೃತದಲ್ಲಿ'ವಾರ್ಗಿಕ' ಎಂಬ ಅರ್ಥವನ್ನು ಕೊಡುತ್ತದೆ ಹೀಗೆಂದರೆ ದೊಡ್ಡದಾದ ಊರು. ಹೆಸರೇ ಸೂಚಿಸುವಂತೆ ಇದು ದೊಡ್ಡ ಊರು. ದೊಡ್ಡ ಊರು ಎಂದು ಒಂದರ್ಥದಲ್ಲಿ ಕೆಲವರು ಇದನ್ನು ಅರ್ಥಯಿಸಿದರೆ. ಇನ್ನೂ ಕೆಲವರು ಇದು ಮಹಾದೇವಿಯಕ್ಕ ಜನಿಸಿದ ಸ್ಥಳವಾದುದರಿಂದ ಇದಕ್ಕೆ ಆ ಹೆಸರು ಪ್ರಾಪ್ತವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಈ ಊರಿನಲ್ಲಿ ಹಾಗೂ ಬೆಣ್ಣೆತೊರಾದ ದಡದಲ್ಲಿ ಮಹಾದೇವಿಯಕ್ಕನ ಗುಡಿಗಳಿವೆ. ಈ ಮಂದಿರಗಳು ಒಂದು ವಿಧದಲ್ಲಿ ಮಹದೇವಿಯಕ್ಕ ಇಲ್ಲಿಯೇ ಜನಿಸಿದಳೆಂಬ ಪ್ರತೀತಿಗೆ, ಐತಿಹ್ಯಕ್ಕೆ ಕಾರಣವಾಗಿವೆ. ಗುಡಿಗಳಿದ್ದ ಮಾತ್ರಕ್ಕೆ ಆಕೆ ಇಲ್ಲಿಯೇ ಜನಿಸಿದಳೆಂದು ಹೇಳಲಿಕ್ಕೆ ಬರದು. ಆದರೂ, ಜನ ನಂಬಿಕೊಂಡು ಬಂದಿರುತ್ತಾರೆ, ಸತ್ಯ ಇನ್ನೂ ಹೊರಬರಬೇಕಿದೆ.[೧೨೨]

ಧಾರ್ಮಿಕ ವ್ಯಕ್ತಿಗಳ ಹೆಸರನ್ನು ಭೌಗೋಳಿಕ, ಐತಿಹಾಸಿಕ, ಪ್ರಾಕೃತಿಕ ವಸ್ತುಗಳ ಹೆಸರನ್ನು ಹಾಗೂ ಜಾತ್ರೆ, ಉತ್ಸವ, ಹಬ್ಬಗಳ ಸ್ಮರಣೆಗಾಗಿ ವಿಶೇಷ ಹೆಸರನ್ನು ಹಲವಾರು ಊರುಗಳು ಪಡೆದಿರುವುದುಂಟು. ಅವು ಆಯಾ ಹೆಸರುಗಳನ್ನು ಹೊಂದಿದ ಹಿನ್ನೆಲೆಯನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದರೆ, ಆ ಕಾಲದ ಜನರ ರೀತಿ, ನೀತಿ, ಜೀವನ ವಿಧಾನ, ಉಡುಗೆ, ತೊಡುಗೆ ಆಚಾರ, ವಿಚಾರ ಇವೆಲ್ಲ ಬೆಳಕಿಗೆ ಬರುವುವು. ತನ್ಮೂಲಕ ಒಂದು ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಹೊರ ಹಾಕಿದಂತೆ ಆಗುತ್ತದೆ. ಈ ದಿಸೆಯಲ್ಲಿ ಗುಲಬರ್ಗಾ ತಾಲ್ಲೂಕಿನ ಊರುಗಳ ಸಾಂಸ್ಕೃತಿ ಅಧ್ಯಯನವನ್ನು ಇನ್ನೂ ಆಳವಾಗಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದೇನೆ.[೧೨೩]

ಒಂದು ಜನಾಂಗದ ಏಳು, ಬೀಳು, ಕಷ್ಟ, ಸುಖ, ಪ್ರಾಕೃತಿಕ, ಸಾಂಸ್ಕೃತಿಕ ಕಾರಣಗಳು ಊರ ಹೆಸರು ಬರಲು ಪ್ರೇರಕವಾಗಿರುತ್ತವೆ. ಅಲ್ಲದೆ ದಾನಿಗಳ, ವೀರರ, ತ್ಯಾಗಿಗಳ, ರಾಜ-ರಾಣಿ-ಮಂತ್ರಿಗಳ, ಮಹಾಪುರುಷರ ಸ್ಮರಣೆಗಾಗಿಯೂ ಕೆಲವು ಊರ ಹೆಸರುಗಳು ಬಂದಿರುವುದನ್ನಿಲ್ಲ ನೋಡಿದೆವು. ಚರಿತ್ರೆಯ ದೃಷ್ಟಿಯಿಂದ ಅಧ್ಯಯನ ಮಾಡುವವರಿಗಂತೂ ಇವು ತುಂಬಿದ ಗಣಿಗಳೇ ಆಗಿವೆ. ಚರಿತ್ರೆ ಮೌನ ತಾಳಿದಲ್ಲಿ ಸ್ಥಳನಾಮಗಳು ಮಾತನಾಡುತ್ತವೆ ಎಂಬ ಮಾತು ಗುಲಬರ್ಗಾ ತಾಲ್ಲೂಕಿನ ಅನೇಕ ಸ್ಥಳನಾಮಗಳಿಗೆ ಅಕ್ಷರಶಃ ಅನ್ವಯಿಸುತ್ತದೆ. ಈ ತಾಲ್ಲೂಕಿನ ಹಲವಾರು ಸ್ಥಳನಾಮಗಳು ಐತಿಹಾಸಿಕ ಘಟನೆಗಳನ್ನು, ಸಾಂಸ್ಕೃತಿಕ ವಿವರಗಳನ್ನು, ಧಾರ್ಮಿಕ ಪುರುಷರನ್ನು ದಾಖಲೆಯ ರೂಪದಲ್ಲಿ ಉಳಿಸಿಕೊಂಡು ಬಂದಿವೆ.

ಆದ್ದರಿಂದ ಇವು ಸಾಂಸ್ಕೃತಿಕ ಅಧ್ಯಯನಕ್ಕಂತೂ ಅಮೂಲ್ಯ ಆಕರಗಳಾಗಬಲ್ಲವು. ಇವುಗಳಂತೆ ಮನೆತನದ ಅಡ್ಡ ಹೆಸರುಗಳನ್ನು ಅಧ್ಯಯನ ಮಾಡುವುದೂ ಅಗತ್ಯವಿದೆ. ಸಂಗಮೇಶ ಸವದತ್ತಿಮಠ ಅವರು ಬರೆದಂತೆ ''ಅಡ್ಡ ಹೆಸರುಗಳಲ್ಲಿ ಕನ್ನಡ ಸಂಸ್ಕೃತಿ ಅಡಗಿದೆ''. ಸ್ಥಳನಾಮ ಹಾಗೂ ಮನೆತನದ ಅಡ್ಡ ಹೆಸರುಗಳ ಅಧ್ಯಯನವಿಂದು ತಾಲ್ಲೂಕಿನ ಸ್ಥಳನಾಮಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಿದುದರ ಪರಿಣಾಮಗಳನ್ನು ಈ ಕೆಳಗಿನ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.[೧೨೪]

- ಮುಸ್ಲಿಂ ಅರಸರ ಆಡಳಿತ, ಪ್ರಭಾವ, ಸಂಸ್ಕೃತಿ ಹಿಂದೂಗಳ ಮೇಲೆ ಆದುದರ ಪರಿಣಾಮವಾಗಿ ಈ ತಾಲ್ಲೂಕಿನ ಹಲವು ಸ್ಥಳನಾಮಗಳು ಉರ್ದುಮಯವಾಗಿವೆ.
- ದಕ್ಷಿಣ ಕರ್ನಾಟಕದ ಊರ ಹೆಸರುಗಳಿಗಿಂತ ಗುಲಬರ್ಗಾ ತಾಲ್ಲೂಕಿನ ಊರ ಹೆಸರುಗಳು ಸಾಂಸ್ಕೃತಿಕ ದೃಷ್ಟಿಯಿಂದ ಭಿನ್ನವಾಗಿವೆ.

ಈ ತಾಲ್ಲೂಕಿನಲ್ಲಿ ತಗ್ಗುದಿನ್ನೆ, ಗುಡ್ಡಗಾಡು ಪ್ರದೇಶ ಇಲ್ಲವೆನ್ನುವಷ್ಟು ಕಡಿಮೆ ಬಯಲು ಪ್ರದೇಶವೇ ಹೆಚ್ಚಾಗಿದೆ. ಇದನ್ನು ಇಲ್ಲಿನ ಊರ ಹೆಸರುಗಳು ಸೂಚಿಸುತ್ತವೆ. ವಿಶಾಲವಾದ, ಸಮತಲವಾದ ಬಯಲು ಪ್ರದೇಶ, ಕೃಷಿ ಪ್ರದೇಶದಲ್ಲಿ ಊರುಗಳಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.[೧೨೫]

ಸ್ಥಳನಾಮಗಳು ಮತ್ತು ಸ್ಥಳೈತಿಹ್ಯಗಳು:-

ಪ್ರತಿಯೊಂದು ಸ್ಥಳನಾಮವೂ ಏನಾದರೊಂದು ಅಂಶವನ್ನು ಒಳಗೊಂಡಿರುತ್ತದೆ. ಭಾಷೆ ಹೇಗೆ ಮಾನವನ ಸ್ವಪ್ರಯತ್ನದ ಫಲವೋ ಹಾಗೆಯೇ ಆ ಭಾಷೆಯೊಳಗಿನ ಸ್ಥಳನಾಮ ಕೂಡ ಆತ ಬುದ್ಧಿ ಪೂರ್ವಕವಾಗಿ ನಿರ್ಮಿಸಿಕೊಂಡುದು, ಭಾಷೆಯಂತೆ ಇಲ್ಲೂ ಒಂದು ಬಗೆಯ ವ್ಯವಸ್ಥೆಯಿರುತ್ತದೆ. ಆ ವ್ಯವಸ್ಥೆಗೆ ಒಂದು ಅರ್ಥವಿರುತ್ತದೆ. ಆ ಅರ್ಥವನ್ನು ಹುಡುಕಹೊರಟರೆ ಈ ನಾಡಿನ ಸಂಸ್ಕೃತಿಯು ಅರಿವಾಗದಿರದು. ಬಹುಸಂಖ್ಯೆಯ ಸ್ಥಳನಾಮಗಳು ರಚನೆಯಾಗಿರಬಹುದಾದ ಮೂಲಸ್ವರೂಪವನ್ನು ಅವುಗಳ ನಿಷ್ಪತ್ತಿಯನ್ನು ಕಂಡುಕೊಂಡು. ಅವುಗಳನ್ನು ಭಾಷಾ ವೈಜ್ಞಾನಿಕವಾಗಿ ಅಧ್ಯಯನ ನಡೆಸುವ, ಈ ಮೂಲಕ ಅವುಗಳು ಪ್ರತಿ ಬಿಂಬಿಸುವ ಇತಿಹಾಸ ಸಂಸ್ಕೃತಿಯ ಅಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನವು ಇಂದು ನಡೆಯುತ್ತಿದೆ.[೧೨೬] ಆದರೆ ಎಷ್ಟೋ ಸ್ಥಳನಾಮಗಳೂ ಅವು ರಚನೆಯಾಗಿರಬಹುದಾದ ಮೂಲ ಸ್ವರೂಪದಲ್ಲಿ ನಮಗಿಂದು ದೊರಕುತ್ತಿಲ್ಲ. ಕಾಲಾನುಗತಿಯಲ್ಲಿ ಕಾರಣಾಂತರಗಳಿಂದಾಗಿ ಅವು ರೂಪ, ವ್ಯತ್ಯಾಸವನ್ನು ಪಡೆದುಕೊಂಡಿವೆ. ಇಂತಹ ರೂಪ ವ್ಯತ್ಯಾಸದ ಪ್ರಕ್ರಿಯೆಯಲ್ಲಿ ಸಂಸ್ಕೃತೀಕರಣ, ಪಾಶ್ಚಾತ್ಯೀಕರಣಗಳೂ ಮುಖ್ಯವಾಗಿವೆ. ಹೀಗೆ ಬದಲಾದ ಸ್ವರೂಪಗಳಿಗೆ ಹೊಂದಿಕೊಂಡಂತೆ ಹೊಸ ನಿಷ್ಪತ್ತಿಗಳನ್ನು, ಅರ್ಥ ವಿವರಣೆಗಳನ್ನು ನೀಡಲಾಗುತ್ತದೆ ಕಥೆ, ಐತಿಹ್ಯ, ಪುರಾಣಗಳನ್ನು ಹೆಣೆಯಲಾಗುತ್ತದೆ.

ಪ್ರಾಕೃತಿಕ, ಭೌಗೋಳಿಕ ಇಲ್ಲವೆ ಪ್ರಾದೇಶಿಕ ವೈಶಿಷ್ಟ್ಯ ಸ್ವರೂಪಗಳೇ ಕಾರಣವಾಗಿ ಒಂದು ಸ್ಥಳಕ್ಕೆ ಅನ್ವರ್ಥನಾಮವು ಸಿದ್ಧಿಸುವುದುಂಟು, ವ್ಯಕ್ತಿ ಪ್ರಾಣಿ ಪಕ್ಷಿಗಳ ಕಾರಣದಿಂದಾಗಿ ನಿರ್ದಿಷ್ಟ ಸ್ಥಳವೊಂದರಲ್ಲಿ ಘಟಿಸಿದ ವಿಶಿಷ್ಟ ಘಟನೆಗಳಿಂದಲೂ ಆ ಸ್ಥಳಕ್ಕೆ ಹೆಸರಾಗುವುದುಂಟು. ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಶೌರ್ಯ, ಸಾಹಸ, ಸಮಾಜ ಸೇವೆ, ಪ್ರಾಮಾಣಿಕತೆಗಳಿಂದ ಪ್ರಸಿದ್ಧರಾಗಿದ್ದರೆ ಅಂಥವರ ಹೆಸರುಗಳಿಂದಲೇ ಆ ಸ್ಥಳವು ಗುರುತಿಸಲ್ಪಡುವುದೂ ಉಂಟು.

ಸ್ಥಳನಾಮಾಧ್ಯಯನದಲ್ಲಿ ಪೂರ್ವಪದ, ಉತ್ತರಪದಗಳೆರಡನ್ನೂ ಗಮನಿಸಬೇಕಾಗುತ್ತದೆ. ಇಲ್ಲಿ ನೋಡಿದ ಬಹುಪಾಲು ಸ್ಥಳನಾಮಗಳಲ್ಲೂ ಪೂರ್ವ ಪದವು ವಿಶಿಷ್ಟಾರ್ಥವನ್ನೂ ಉತ್ತರಪದವು ಸಾಮಾನ್ಯಾರ್ಥವನ್ನೂ ನೀಡುತ್ತವೆ. ಕೆಲವೇ ಕೆಲವು ಹೆಸರುಗಳಲ್ಲಿ ಮಾತ್ರ ಈ ನಿಯಮಕ್ಕೆ ಅಪವಾದವಿರುವುದೂ ಉಂಟು. ಇಲ್ಲಿ ಬರುವ ಪಾಡಿ(ವಾಡಿ), ಬೆಟ್ಟು, ಕಟ್ಟೆ ಪದವು, ಗುಡ್ಡೆ, ಕುಮೇರ್, ಬಿತ್ತಿಲ್ (ಹಿತ್ತಿಲು), ಕಾಡು, ಹಳ್ಳಿ, ಊರು, ಅಡ್ಕ, ಮಕ್ಕಿ, ಮಜಲ್ ಮುಂತಾದ ಪರ ಪದಗಳೆಲ್ಲಾ ಅಚ್ಚ ದ್ರಾವಿಡ, ಅಚ್ಚತುಳು ಇಲ್ಲವೇ ಅಚ್ಚಗನ್ನಡ ಎನ್ನಬಹುದಾದ ದೇಸಿಯ ಶಬ್ದಗಳು.[೧೨೭]

ಹೀಗೆ ಇಲ್ಲಿನ ಪೂರ್ವಪದ, ಉತ್ತರ ಪದಗಳೆರಡನ್ನೂ ಕೂಲಂಕುಷವಾಗಿ ಅಧ್ಯಯನ ನಡೆಸಿದರೆ ಸ್ಥಳನಾಮಗಳ ಹುಟ್ಟಿನ ಹಿನ್ನೆಲೆಯನ್ನು, ಆ ಮೂಲಕ ಸ್ವಲ್ಪ ಮಟ್ಟಿಗೆ ಈ ನಾಡಿನ ಸಾಂಸ್ಕೃತಿಕ ಸಂದರ್ಭವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಏಷ್ಟೋ ಸ್ಥಳನಾಮಗಳು ಚಾರಿತ್ರಿಕ ಘಟನೆ, ಸನ್ನಿವೇಶಗಳ ವಿವರಣೆಗಳನ್ನೊಳಗೊಂಡಿರುತ್ತವೆ. ಅವು ಚಾರಿತ್ರಿಕ ವಸ್ತು ಸತ್ಯಗಳೂ ಆಗಿರುತ್ತದೆ. ಉದಾ;- ಹರಣೆಗೆ ಬೆಳ್ತಂಗಡಿ ಪರಿಸರದಲ್ಲಿರುವ ನರಸಿಂಹರಾಯಗೌಡ ಮತ್ತು ಜಮ್ಲಾಬಾದ್ ಎಂಬ ಎರಡು ಕೋಟೆಗಳ ಹೆಸರುಗಳನ್ನೂ ಅವುಗಳ ಕುರಿತು ಪ್ರಚಾರದಲ್ಲಿರುವ ಐತಿಹ್ಯಗಳನ್ನೂ ಇಲ್ಲಿ ಗಮನಿಸಬಹುದು. ಉಳಿದಂತೆ ವ್ಯಕ್ತಿಯ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ[೧೨೮] ಆತನ ಜೀವನದೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವ, ಆತನ ನಿತ್ಯ ಜೀವನಕ್ಕೆ ಅತ್ಯಗತ್ಯವಾದ ವಸ್ತು ವಿಷಯಗಳಿಂದಲೇ ಇಲ್ಲಿನ ಹೆಚ್ಚಿನ ಸ್ಥಳನಾಮಗಳೂ ಹುಟ್ಟಿಕೊಂಡಿವೆ.

ಸ್ಥಳನಾಮ, ಸ್ಥಳಪುರಾಣ ಮತ್ತು ಸ್ಥಳೈತಿಹ್ಯಗಳೊಳಗಿನ ಪರಸ್ಪರ ಸಾಮ್ಯ, ವ್ಯತ್ಯಾಸಗಳನ್ನು ಕೆಲಮಟ್ಟಿಗೆ ಈ ಹಿಂದಿನ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಅದೇ ಸಂದರ್ಭದಲ್ಲಿ ಎಲ್ಲಾ ಸ್ಥಳನಾಮಗಳೂ ಸ್ಥಳೈತಿಹ್ಯಗಳನ್ನು ಹೊಂದಿರುವುದಿಲ್ಲ ಎಂಬುದನ್ನೂ ಗಮನಿಸಲಾಗಿದೆ. ಕೆಲವು ಸ್ಥಳನಾಮಗಳು ನಿಷ್ಪನ್ನವಾಗಿರಬಹುದಾದ ಬಗೆಯನ್ನು ಸ್ವತಃ ಅಧ್ಯಯನಕಾರರೇ ಕಂಡುಕೊಂಡು ಅವುಗಳಿಗೆ ಭಾಷಾ ವೈಜ್ಞಾನಿಕ ದೃಷ್ಟಿಯಿಂದ ಅರ್ಥ, ವಿವರಣೆಗಳನ್ನು ಕೊಟ್ಟುಕೊಳ್ಳಬೇಕಾಗುತ್ತದೆ. ಇನ್ನು ಕೆಲವು ಸ್ಥಳನಾಮಗಳ ಹಿಂದೆ ಏನಾದರೂ ವಿವರಣ ರೂಪದ ಕಿರುಗತೆಗಳಿರುತ್ತವೆ. ಇಂಥವುಗಳನ್ನು ಸ್ಥಳೈತಿಹ್ಯಗಳೆಂದು ಪರಿಗಣಿಸಬಹುದಾಗಿದೆ.[೧೯] ಸ್ಥಳೈತಿಹ್ಯ, ಸ್ಥಳ ಪುರಾಣಗಳು ಒಂದು ನಿರ್ದಿಷ್ಟ ಪ್ರದೇಶಕ್ಕಷ್ಟೇ ಸೀಮಿತಗೊಂಡ ಪ್ರಾದೇಶಿಕ ಐತಿಹ್ಯ ಪುರಾಣಗಳಾಗಿರುತ್ತವೆ. ಪ್ರಾದೇಶಿಕ ಪುರಾಣ ಐತಿಹ್ಯಗಳಲ್ಲಿ ಕೆಲವು ಸೀಮಿತ ಸ್ಥಳ, ಅಲ್ಲಿನ ವಿಶಿಷ್ಟ ವಸ್ತು ವಿಷಯಗಳಿಗಷ್ಟೇ ಸಂಬಂಧಪಟ್ಟವುಗಳಾಗಿದ್ದರೆ, ಕೆಲವು ವಿಸ್ತೃತ ಪ್ರದೇಶ, ಅಲ್ಲಿನ ಜನರ ಆಚಾರ, ವಿಚಾರ, ರೀತಿ ನೀತಿಗಳಿಗೆ ಸಂಬಂಧಪಟ್ಟವುಗಳಾಗಿರುತ್ತವೆ.[೧೨೯]

ಕ್ಷೇತ್ರ ಕಾರ್ಯದಿಂದ ಪಡೆದಗುಲಬರ್ಗಾ ಜಿಲ್ಲೆಗೆ ಸಂಬಂದಿಸಿದ ಕೆಲವು ಊರುಗಳ ಸ್ಥಳನಾಮಗಳ ಚರಿತ್ರೆ:-

ನರೋಣಾ:-

ನರೋಣಾ ಪೌರಾಣಿಕ ಕಥೆಯನ್ನು ಹೊಂದಿರುವ ಊರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನಲ್ಲಿದೆ. ಈ ಊರಿನ ಹಿಂದೆ ಅಡಗಿಕೊಂಡಿರುವ ನೈಜ ಸಂಗತಿಯೊಂದು ಅಲ್ಲಿಯ ಜನರು ತುಂಬಾ ಸೊಗಸಾಗಿ ವ್ಯಕ್ತಪಡಿಸುತ್ತ. ಪೌರಾಣಿಕ ಐತಿಹ್ಯವಾಗಿ ಸುತ್ತ ಮುತ್ತಲೂ ಪ್ರದೇಶಗಳಲ್ಲಿ ತುಂಬಾ ಜನಪ್ರಿಯತೆ ಪಡೆದಿದೆ. ಒಂದು ಕಾಲದಲ್ಲಿ ನಡೆದ ಘಟನೆಯೊಂದು ಐತಿಹ್ಯವಾಗಿ ಸುತ್ತ ಮುತ್ತಲೂ ಪ್ರದೇಶಗಳಲ್ಲಿ ತುಂಬಾ ಜನಪ್ರಿಯತೆ ಪಡೆದಿದೆ. ಒಂದು ಕಾಲದಲ್ಲಿ ನಡೆದ ಘಟನೆಯೊಂದು ಗರ್ಭದಲ್ಲಿಟ್ಟುಕೊಂಡು ಪ್ರಸಾರಗೊಳ್ಳುತ್ತ ಸಾಗಿರುವುದು ಈ ಐತಿಹ್ಯದಿಂದ ಸ್ಪಷ್ಟವಾಗಿ ದೊರೆಯುತ್ತದೆ. ರಾಮಾಯಣ

ಮಹಾಕಾವ್ಯದಕಥೆ ಜನಪದರಲ್ಲಿ ಗಟ್ಟಿಯಾಗಿ ನಿಂತಿದೆ.[೧೩೦] ರಾಮ ಮತ್ತು ರಾವಣನ ಹೆಸರು ಕೇಳಿದರೆ ಸಾಕು, ಇಡೀ ಮಹಾಕಾವ್ಯ ಈ ಮಹಾಪುರುಷರಿಂದ ಜನಪ್ರಿಯತೆ ಪಡೆದಿರುವುದೆಂದು ಎಲ್ಲರೂ ಒಪ್ಪಿಕೊಳ್ಳುವ ಮಾತಾಗಿದೆ.

ರಾಮ ರಾವಣನನ್ನು ಕೊಂದ ನಂತರ ರಾಮನು ಬ್ರಹ್ಮ ಹತ್ಯ ಪಾಪಕ್ಕೆ ತುತ್ತಾಗುತ್ತಾನೆ. ಬ್ರಹ್ಮ ಹತ್ಯ ಎಂದರೆ ರಾವಣನು ಬ್ರಾಹ್ಮಣನಾಗಿದ್ದ. ಅವನನ್ನು ರಾಮ ಕೊಂದನು. ಬ್ರಾಹ್ಮಣರನ್ನು ಕೊಂದರೆ ಪಾಪಕ್ಕೆ ತುತ್ತಾಗುತ್ತಾನೆ ಎಂಬ ತ್ರೇತಾಯುಗದ ಕಲ್ಪನೆಯಾಗಿತ್ತು. ಈ ಶಾಪಕ್ಕೆ ರಾಮ ಬಲಿಯಾಗಿದ್ದ. ರಾವಣನ ಅತ್ಮ ರಾಮನ ಬೆನ್ನು ಬಿಡಲಿಲ್ಲವಂತೆ, 'ರಾವಣ, ರಾವಣ' ಎನ್ನುವ ಶಬ್ಧ ರಾಮನ ಬೆನ್ನು ಹತ್ತಿತಂತೆ, ರಾಮನಿಗೆ ಏನು ತೋಚದೆ ಚಿಂತಾಕ್ರಾಂತನಾಗಿ ಸಂಚಾರ ಮಾಡುತ್ತ ಸಾಗಿದನಂತೆ ಕೊನೆಗೆ ರಾವಣನ ಆತ್ಮ ಧ್ವನಿ ತನ್ನಿಂದ ದೂರ ಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಒಂದು ಉಪಾಯವನ್ನು ಕಂಡುಕೊಂಡನು. ಒಬ್ಬ ಋಷಿಯ ಹತ್ತಿರ ಹೋಗಿ ಆದ ಘಟನೆಯನ್ನು ತಿಳಿಸಿ. ಆದಕ್ಕೆ ಪರಿಹಾರವನ್ನು ಪಡೆದುಕೊಂಡನು. ಆಗ ಗುರು ರಾಮನಿಗೆ ಶುಭ್ರವಾದ ಬಿಳಿ ಪಾವಡ (ಬಟ್ಟೆ)ವನ್ನು ಕಿಲೆಣ್ಣೆಲ್ಲಿ ಅದ್ದಿ, ಸಂಚಾರ ಮಾಡುತ್ತ ಹೊರಡು.ಹೊರಟಿರುವ ಸ್ಥಳಗಳಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಾಗ ಅಲ್ಲಿ ಒಂದು ಲಿಂಗವನ್ನು ಸ್ಥಾಪನೆ ಮಾಡಿ, ಜೊತೆಗೆ ನೀರಿನ ಗುಂಡಾ (ಬುಗ್ಗೆ) ತೋಡಿ ಶುಭ್ರವಾದ ಬಿಳಿ ಬಟ್ಟೆಯನ್ನು ನೀರಿನ ಗುಂಡಾದಲ್ಲಿ ತೊಳೆಯುತ್ತ ಹೋಗು, ಯಾವ ಸ್ಥಳದಲ್ಲಿ ಕಿಲೆಣ್ಣೆಯಲ್ಲಿ ಅದಿದ್ದ ಬಟ್ಟೆ ಮೊದಲಿನಂತೆ ಬಿಳುಪಾಗಿ ಶುಭ್ರದಿಂದ ಕಾಣುವುದೋ ಅಲ್ಲಿ ಮಾತ್ರ'ರಾವಣ' ನ ಆತ್ಮ ನಿನ್ನಿಂದ ಮಾಯವಾಗುತ್ತದೆ ಎಂದು ಹೇಳಿದನಂತೆ.[೧೩೧]

ಗುರುವಿನ ಅಪ್ಪಣೆಯಂತೆ ಹೇಳಿದ ಕಾರ್ಯ ಅನುಸರಿಸಿಕೊಂಡು ಬಂದನಂತೆ. ಅಲ್ಲಿಂದ ಸಂಚಾರ ಮಾಡುತ್ತ ಹೊರಟನಂತೆ. ತನ್ನ ದೇಹ ದಣಿವಾದಾಗ ವಿಶ್ರಾಂತಿ ಪಡೆದಲ್ಲಿ ಲಿಂಗ ಪ್ರತಿಷ್ಠಾಪಿಸಿ, ನೀರಿನ ಗುಂಡಾ ತೋಡಿ, ಆ ನೀರಿನಲ್ಲಿ ಕಿಲೆಣ್ಣೆಯಲ್ಲಿ ಅದ್ದಿದ ಬಟ್ಟೆ ತೊಳೆಯುತ್ತಾ ನಡೆದನು. ಮುಂತಾದ ಸ್ಥಳಗಳಲ್ಲಿ ಸಂಚರಿಸುತ್ತಾ ಶ್ರದ್ಧೆಯಿಂದ ಪೂಜೆ ಮಾಡಿದರೂ, ಫಲಕೊಡಲಿಲ್ಲ. ಕೊನೆಗೆ ಕ್ಷೇತ್ರಫಲ ಸ್ಥಳದಲ್ಲಿ ಬಂದು ಲಿಂಗ ಸ್ಥಾಪನೆ ಮಾಡಿ, ನೀರಿನ ಗುಂಡಾ ತೋಡಿದನು ಆ ಬಟ್ಟೆ ಮೊದಲು ಇದ್ದ ಹಾಗೆ ಸ್ವಚ್ಛಗೊಳಿಸಲು ಶುಭ್ರವಾಯಿತಂತೆ. ಇಲ್ಲಿ ರಾಮ ಇದೇ ಸ್ಥಳದಲ್ಲಿ ಸುಖನಿದ್ರೆ ಮಾಡಿದನು. ಮುರುದಿವಸ ರಾಮ ಲಕ್ಷ್ಮಣನಿಗೆ ಹೇಳಿದನು. ಈ ಸ್ಥಳದಲ್ಲಿ ರಾವಣ ಇಲ್ಲೆ ''ಇಂದಸ್ಥಳ ನರಾವಣ''. ಆ ಸ್ಥಳದಲ್ಲಿ ರಾವಣ ಶಬ್ಧ ಆತ್ಮ ರಾಮನಿಂದ ಮಾಯವಾಯಿತಂತೆ. ನರಾವಣ ಆದುದರಿಂದ ಆ ಸ್ಥಳಕ್ಕೆ 'ನರೋಣ' ಎಂಬ ಹೆಸರು (ನ-ರಾವನ-ನರೋಣ) ಬಂದಿತಂತೆ. ಇಲ್ಲಿ ತಿಳಿಸುವ ಜನಪದರ ಮನೋಧರ್ಮ ನಡೆದ ಘಟನೆಯ ಕುರಿತು ಪೌರಾಣಿಕ ಐತಿಹ್ಯದಿಂದ ಕೇಳುಗರಿಗೆ ಒಂದು ರೀತಿಯಿಂದ ನಿಜವಾಗಿ ನಡೆದ ಸಂಗತಿಯೆಂಬ ಆತ್ಮಾ-ವಿಶ್ವಾಸ ಸಹಜವಾಗಿ ಮೂಡಿಸುತ್ತದೆ.ಈ ಗ್ರಾಮದ ಪಕ್ಕದ ಕ್ಷೇತ್ರಫಲ ಎಂಬ ಸ್ಥಳದಲ್ಲಿ ರಾಮ ತೋಡಿದ ನೀರಿನ ಗುಂಡಾ, ಲಿಂಗ ಈಗಲೂ ಅವುಗಳ ಕತೆಯನ್ನು ತಿಳಿಸಿಕೊಡುತ್ತದೆ. ಒಟ್ಟಾರೆ ಆ ಸಂಗತಿ ನಡೆದಿದೆಯೋ ಅಥವಾ ಇಲ್ಲವೋ ಮುಖ್ಯವಲ್ಲ. ಪೌರಾಣಿಕ ಐತಿಹ್ಯದ ನಿರೂಪಣೆ ಜನರಿಂದ ತಿಳಿದುಕೊಂಡಾಗ ಆ ಸ್ಥಳದ ಮೂಲ ಉತ್ಪತ್ತಿ ಮಾತ್ರ ಅರಿವು ಮಾಡಿಕೊಡುತ್ತದೆ. ಅದೊಂದು ಸ್ಥಳನಾಮ ಹಾಗೂ ಸ್ಥಳ ಐತಿಹ್ಯದಿಂದ ಜನಮನದಲ್ಲಿ ಸೊರೆಗೊಂಡಿರುವುದು ಮತ್ತು ಜನಪ್ರಿಯತೆಯಿಂದ ಪ್ರಸಾರಗೊಂಡಿರುವದಂತು ಮರೆಯಲಾಗದು.[೧೩೨]

ಕ್ಷೇತ್ರದ ಮಹಿಮೆ:-

ಅಗಸ್ತ್ಯ ಋಷಿಗಳು ಕ್ಷೇತ್ರಮಹಿಮೆ ಹೇಳತೊಡಗಿದರು. ಶ್ರೀ ರಾಮ ಸಕಲ ಜನರ ಹೃದಯ ಚಂದ್ರ ಚಕೋರ ನಿನಗೆ ಈ ಕ್ಷೇತ್ರದ ಮಹಿಮೆಯನ್ನು ಕುರಿತು ಹೇಳುವೆ ಕೇಳು. ಯಾರು ಭಕ್ತಿ ಭಾವದಿಂದ ಕೇಳುವರೋ ಅವರು ಭವ ಬಂಧನದಿಂದ ಬಿಡುಗಡೆ ಹೊಂದಿ ಸಂಪೂರ್ಣ ಮುಕ್ತರಾಗುವರು. ಪೂರ್ವ ಕಾಲದಲ್ಲಿ ನಾನು ದಕ್ಷಿಣ ಕಾಶಿಗೆ ಹೋಗಿ ಅಲ್ಲಿರುವ ವಿಶ್ವೇಶ್ವರನಿಂದ ಕಾಶಿಯ ಮಹಿಮೆಯನ್ನು ಕೇಳಿದೆನು. ಆದರೆ ಈ ಕಾಶಿಯನ್ನು ಬಿಟ್ಟು ನೀನು ಎಲ್ಲಿಯೂ ಹೋಗಬೇಡವೆಂದು ಮಹಾದೇವನು ಹೇಳಿದನು. ಆಗ ಎಲ್ಲ ಮಹರ್ಷಿಗಳು ಶಿವನ ಸಾಕ್ಷಾತ್ಕಾರಕ್ಕಾಗಿ ಬೇಡಿಕೊಂಡರು. ಆಗ ಪರಮೇಶ್ವರನು ಕುಂಭೋದ್ಭವನಾದ ಮುನಿ ಶ್ರೇಷ್ಠನೆ ನೀನು ದಕ್ಷಿಣ ಮಾರ್ಗವಾಗಿ ಹೋಗು. ಲೋಕಕಲ್ಯಾಣ ಮಾಡುವಂತಹ ಕಾಶಿಗಿಂತಲೂ ಸರ್ವ ಶ್ರೇಷ್ಠವಾಗಿರತಕ್ಕಂತಹ ಹೆಚ್ಚಿನ ಸ್ಥಾನ ಅಲ್ಲಿರುವುದು. ಇಲ್ಲಿರುವ ಪ್ರತಿಯೊಂದು ಕ್ಷೇತ್ರದ ನೀರಿನ ಗುಂಡಗಳು ಪವಿತ್ರ ತಮವಾದವು.[೧೩೩] ಇಲ್ಲಿಯೇ ಪ್ರಯಾಗ ತೀರ್ಥ, ನರಸಿಂಹ ತೀರ್ಥ, ಲಕ್ಷ್ಮೀತಿರ್ಥ, ತ್ರಿವೇಣಿ ಸಂಗಮ, ಭವಾನಿ ತೀರ್ಥ, ಇವೆಲ್ಲವುಗಳನ್ನು ಇಲ್ಲಿಯೇ ಕಾಣಬಹುದು. ಆದ್ದರಿಂದ ವಿಧಿವತ್ತಾಗಿ ವಿಶ್ವೇಶ್ವರನ ಪ್ರೀತಿಗಾಗಿ ನೂರಾರು ಅಶ್ವಮೇಧ ಯಾಗಗಳನ್ನು ಮಾಡುವುದರಿಂದ ಫಲ ಉಂಟಾಗುವುದು. ಅದಕ್ಕಿಂತ ಲಾಭವು ಇಲ್ಲಿ ಉಂಟಾಗುವುದು.

ರಾಮನು ಭವಾನಿ ತೀರ್ಥವನ್ನು ಭಕ್ತರ ಇಷ್ಟಾರ್ಥ ಪ್ರದಾಯಕವಾದುದ್ದು. ಈ ಭವಾನಿ ತೀರ್ಥವು ಸರ್ವರ ಭವವನ್ನು ನಾಶ ಮಾಡುವುದು. ಆದ್ದರಿಂದ ಎಲೈ ರಘುಕುಲ ಶ್ರೇಷ್ಟನೆ, ಪಾಪನಾಶಕ್ಕಾಗಿ ಭವಾನಿಯನ್ನು ಪೂಜಿಸು, ಇದೆ ನೋಡು ಇಂದ್ರ ತೀರ್ಥ. ಇದು ಸರ್ವಪಾಪ ನಾಶಕರವಾದುದ್ದು. ಇಲ್ಲಯೇ ಭಾಗೀರತಿ ಉತ್ತರಗಾಮಿಯಾಗಿ ಹೋಗುತ್ತಿರುವಳು. ಮಯೂರವಾಹನನಾದ ಸ್ವಾಮಿಯೂ ಇಲ್ಲಿಯೇ ವಾಸಿಸುತ್ತಿರುವನು.[೧೩೪] ಆದ್ದರಿಂದ ಆ ಪಾರ್ವತಿ ಪುತ್ರನನ್ನು ನೋಡು, ಇವನೇ ವಿಶ್ವೇಶ್ವರನು. ಇವನೇ ಭೈರವನು. ಸರ್ವ ವಿಘ್ನಗಳನ್ನು ನಾಶಮಾಡತಕ್ಕಂತಹ ದುಂಡಿರಾಜನು ಶೋಭಿಸುತ್ತಿರುವನು. ಈ ರೀತಿಯಾಗಿ ಈ ಸ್ಥಳವು ಸರ್ವೋತ್ಕೃಷ್ಟವಾದುದ್ದು. ಅಗಸ್ತನಿಂದ ಉದ್ಧಾರನಾದ ರಾಮನು ಅಗಸ್ತ್ಯನ ಪಾದಪೂಜೆಯನ್ನು ಮಾಡಿ, ಮಹಾದೇವನನ್ನು ಪೂಜಿಸಿ, ಸಹಸ್ರನಾಮಗಳಿಂದ ಕೊಂಡಾಡಿದನು, ಕುಣಿದಾಡಿದನು ತನ್ನನ್ನು ತಾನು ಮರೆತನು. ಹೇಳುವುದೇನು ಶಿವನೇ ತಾನಾದನು.

ಚಿಂಚನಸೂರು:-

ಈ ಊರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ದೊಡ್ಡ ಗ್ರಾಮ ಚಿಂಚನಸೂರ. ಪುರಾತನ ಕಾಲದಿಂದಲೂ ದೇವರು ಮತ್ತು ದಾನವರ ತಾಣವಾಗಿತ್ತೆಂದು ಹೇಳುತ್ತಾರೆ. ಈ ಗ್ರಾಮ ದೇವತೆಗಳಿಗೆ ಆಶ್ರಯ ನೀಡಿದ ಸ್ಥಳವಾಗಿದೆ. ಇಲ್ಲಿ ದೈವಿಸ್ತ್ರೀಯೂ ಅಸೂರನೊಬ್ಬನ ಕೈಗಳನ್ನು ಕತ್ತರಿಸಿ ಹಾಕಿದ್ದರಿಂದ ಆತನನ್ನು ಚೊಂಚ ಅಸೂರನ ಊರೆಂದು ಬಳಕೆಗೊಂಡಿತೆಂದು ಚುಂದೂರು-ಚಿಂಚನಸೂರ ಆಯಿತು. ಎಂದು ತಿಳಿದು ಬರುತ್ತದೆ, ಮೊದಲು ಈ ಗ್ರಾಮಕ್ಕೆ "ಶ್ರೋಣಿತಪುರ" ಎಂಬ ನಾಮದಿಂದ ರೂಢಿಯಲ್ಲಿತಂತೆ. ಬಾಣಾಸೂರನೆಂಬ ರಾಕ್ಷಸ ಈ ಗ್ರಾಮವು ತನ್ನ ತಪ್ಪಸ್ಸಿಗೆ ಸೂಕ್ತ ಸ್ಥಳವೆಂದು ತಿಳಿದು, ಇಲ್ಲಿಯೇ ತಪ್ಪಸ್ಸು ಮಾಡುತ್ತಾ ನೆಲೆಯೂರಿದನಂತೆ. ಬಾಣಾಸೂರನು ಮುಖ್ಯವಾಗಿ ಶಿವನನ್ನು ತನ್ನ ತಪ್ಪಸ್ಸಿನ ಮೂಲಕ ಒಲಿಸಿಕೊಂಡು ತನಗೆ ಸಹಸ್ರ ಹಸ್ತಕೊಡಬೇಕೆಂದು ಶಿವನಲ್ಲಿ ಮೊರೆಹೋದನಂತೆ.[೧೩೫]

ಕೇಳಿದ ನಂತರವೇ ಶಿವನು ಸಹಸ್ರಹಸ್ತಗಳನ್ನು ದಯಪಾಲಿಸಿದನಂತೆ, ಮುಂದೆ ಬಾಣಾಸೂರು ರಾಕ್ಷಸ ಅಸೂರಿಭಾವದಿಂದ ಲೋಕ ಕಂಠಕನಾಗಿ ಪರಿಣಮಿಸಿದನಂತೆ. ಆಗ ಶ್ರೀ ಕೃಷ್ಣನ ಮಗನಾದ ಪ್ರದ್ಯುಮ್ನನ ಬಾಣಸೂರನ ಸಹಸ್ರ ಹಸ್ತವನ್ನು ಕತ್ತಿರಿಸದನಂತೆ. ಆ ಕಾರಣದಿಂದ ಮೊದಲಿನ ಗ್ರಾಮ "ಶ್ರೋಣಿತಪುರ" ಹೋಗಿ ಚೊಂಚ ಅಸೂರನ (ಮೊಂಡುಗೈಯ) ಊರು ಇದಕ್ಕೆ ಚೊಂಚೂರು-ಚುಂಚೂರು ಎಂದು ಬಳಕೆಗೊಂಡು ರೂಢಿಯಲ್ಲಿ ಬಂದಿತಂತೆ. ಇದೊಂದು ಪೌರಾಣಿಕ ವ್ಯಕ್ತಿಯ ಐತಿಹ್ಯವಾಗಿ ರೂಪಗೊಂಡು ತನ್ನ ವಿಶಿಷ್ಟ ಘಟನೆಯಿಂದ ವ್ಯಕ್ತಿಯ ಚರಿತ್ರೆಯ ಮೂಲಕ ಸ್ಥಳಐತಿಹ್ಯವಾಗಿ ರೂಪಗೊಂಡಿರುವುದು ನಿಜಕ್ಕೂ ಅದ್ಭುತ ಸಂಗತಿಯೆಂದೇ ಹೇಳಬಹುದು.[೧೩೬]

ಧುತ್ತರಗಾಂವ:-

ಈ ಊರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಒಂದು ಚಿಕ್ಕ ಗ್ರಾಮ ಧುತ್ತರಗಾಂವ ಆಳಂದದಿಂದ ದಕ್ಷಿಣಕ್ಕೆ ೨೦.ಕಿ.ಮೀ. ಅಂತರದಲ್ಲಿರುವ ಈ ಗ್ರಾಮದಲ್ಲಿ ಮಹಾ ಶರಣನೊಬ್ಬ ತನ್ನ ವಿಶಿಷ್ಟ ಪವಾಡ ಶಕ್ತಿಯಿಂದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಪ್ರಸಿದ್ಧಿ ಹೊಂದಿದ ವ್ಯಕ್ತಿಯಾಗಿದ್ದರು. ಧುತ್ತರಗಾಂವ ನಾಮ ಅನ್ನುವ ಪೂರ್ವದಲ್ಲಿ ಮೊದಲು ಲಿಂಗಾಪೂರ ಪಟ್ಟಣವೆಂಬ ಹೆಸರಿನಿಂದ ಜನಪ್ರಿಯತೆ ಪಡೆದಿತ್ತು.[೧೩೭] ೧೫ನೇ ಶತಮಾನದಲ್ಲಿ ಮಹಾಸಾಧ್ವಿಗಳಾದ ಶ್ರೀ ಶಂಭುಲಿಂಗ ಮತ್ತು ಗೀರಿಜಾ ದೇವಿಯವರ ದಂಪತಿಗಳ ಉದರದಲ್ಲಿ ಜನಿಸಿದ ಮಗು ವೀರೇಶ ಮುಂದೆ ಈ ಭಾಗದ ಶ್ರೇಷ್ಠ ವ್ಯಕ್ತಿಯಾಗಿ ಕಂಬಾರ ಸಮುದಾಯದಲ್ಲಿ ಹುಟ್ಟಿ ತಮ್ಮ ಕಾಯಕವನ್ನು ಮುಂದುವರಿಸಿಕೊಂಡು ನಡೆದರು.[೧೩೮]

ಒಂದು ದಿವಸ ಶರಣ ವೀರೇಶನ ಗುಣ ಪರೀಕ್ಷೆ ಮಾಡಲು ಆತನ ಶಕ್ತಿಯನ್ನು ಅರಿಯಲು ಒಬ್ಬ ರೈತನು ಮುರಿದು ಹೋಗಿರುವ ಕೊಡಾ ಬೆಸೆದುಕೊಳ್ಳಲು ಇವರ ಬಳಿಗೆ ಬಂದನು. ಆ ಸಂದರ್ಭದಲ್ಲಿ ಶರಣರು ಸ್ನಾನ ಮಾಡುತ್ತಿದ್ದರು. ಬಂದಿರುವ ರೈತ ನಿಂತುಕೊಳ್ಳದೆ ಚಡಪಡಿಸತೊಡಗಿದನು. ಆಗ ವೀರೇಶ್ವರ ಶರಣರು ತಮ್ಮ ತಾಯಿಗೆ. ಅದೇ ಒದ್ದೆಯಾದ ಧೋತರದ ನೀರನ್ನೆ ಕೂಡದ ಮೇಲೆ ಹಿಂಡು ಎಂದು ಹೇಳಿ ಪೂಜೆ ಪುನಸ್ಕಾರ ಮಾಡುತ್ತ ಕುಳಿತರು.[೧೩೯] ತಾಯಿ ಮಗ ಹೇಳಿದಂತೆ ಒದ್ದೆಯಾದ ಧೋತರದ ನೀರನ್ನು ಕೊಡದ ಮೇಲೆ ಹಿಂಡಲು ಕೂಡ ಬೆಸೆದುಕೊಂಡಿತಂತೆ. ಈ ಪವಾಡ ಪುರುಷನ ಶಕ್ತಿಯಿಂದ ಲಿಂಗಪೂರ ಪಟ್ಟಣ ಹೋಗಿ ಧೋತರಗಾಂವ ಎಂದು ಹೆಸರುವಾಸಿಯಾಯಿತು.

ಶರಣರ ವಿಶಿಷ್ಟ ಮತ್ತು ಅದ್ಭುತ ಶಕ್ತಿಯ ಮೂಲಕ ರೈತನ ಸಮಸ್ಯೆಯನ್ನು ಬಗೆಹರಿಸಿ ತಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡರು. ಈಗ ಧುತ್ತರಗಾಂವವೆಂದು ಈ ಊರಿಗೆ ಕರೆಯಲಾಗುತ್ತದೆ. ವಿಶಿಷ್ಟ ಘಟನೆಯ ಮೂಲಕ ಹಲವಾರು ವರ್ಷದ ಚರಿತ್ರೆಯನ್ನು ನಮ್ಮ ಜನಪದರು ತಮ್ಮ ಮೌಖಿಕ ಕಂಠಸ್ಥ ಪರಂಪರೆಯ ಮೂಲಕ ತಮ್ಮ ಅಂತರಾಳದಲ್ಲಿ ಹುದುಗಿಸಿಟ್ಟುಕೊಂಡಿರುವ ನೈಜ ಸಂಗತಿಯೊಂದು ಇಂಥಹ ಸ್ಥಳ, ವ್ಯಕ್ತಿ, ಘಟನಾ ಐತಿಹ್ಯಗಳ ಮೂಲಕ ಬಳಕೆಗೊಂಡು ಜನಪ್ರಿಯವಾಗುತ್ತವೆ.[೧೪೦]

ಉತ್ರಾದಬಾದ:-

ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಒಂದು ಚಿಕ್ಕ ಗ್ರಾಮ ತಾಲೂಕಿನ ೧೨ ಕಿ.ಮೀ ಅಂತರದಲ್ಲಿರುವ ಈ ಗ್ರಾಮ ಐತಿಹಾಸಿಕವಾಗಿ ತುಂಬಾ ಹೆಸರುವಾಸಿಯಾಗಿದೆ. ಈ ಊರಿನಲ್ಲಿ ಒಂದು ಅದ್ಭುತ ಹಾಗೂ ರಮ್ಯವಾದ ಶಿವಾಲಯವಿದೆ. ಅದಕ್ಕೆ ಪಂಚಲಿಂಗೇಶ್ವರ ದೇವಾಲಯವೆಂದು ಕರೆಯುತ್ತಾರೆ. ದೇವಾಲಯದ ಒಳಗಡೆ ಒಂದು ನುಣುಪಾದ ಅತಿ ಸುಂದರವಾಗಿರುವ

ಲಿಂಗವಿದ್ದು, ಆ ಲಿಂಗದ ಮೇಲೆ ಮತ್ತೆ ಐದು ಚಿಕ್ಕ ಚಿಕ್ಕ ಲಿಂಗಗಳಿವೆ. ಈ ಐದು ಲಿಂಗಗಳಿಂದಾಗಿ ಈ ದೇವಾಲಯಕ್ಕೆ ಪಂಚಲಿಂಗೇಶ್ವರ ಎಂದು ಕರೆಯಲಾಗುತ್ತದೆ.ಹಿಂದೆ ಒಮ್ಮೆ ಈ ಗ್ರಾಮದ ಜನರು ಈ ಪಂಚಲಿಂಗವನ್ನು ಮಹಾರಾಷ್ಟ್ರದ ಧೈಟಣ ಎಂಬ ಗ್ರಾಮದಿಂದ ಎತ್ತಿಕೊಂಡು ತರುತ್ತಿರುವಾಗ ಆ ಸಂದರ್ಭದಲ್ಲಿ ನೋಡಿದ ಅಕ್ಕಲಕೋಟ ತಾಲೂಕಿನ 'ಶಿರವಾಳ' ಗ್ರಾಮದ ಪಾಟೀಲ ಮನೆತನದವರೊಬ್ಬರು ಎತ್ತಿಕೊಂಡು ಬರುವ ಸುಂದರವಾದ ಪಂಚಲಿಂಗವನ್ನು ನೋಡಿ ಬರುವ ಜನರಿಂದ ಜಗಳವಾಡಿ ಲಿಂಗವನ್ನ ಕಸಿದುಕೊಂಡು ತಮ್ಮ ಮನೆಯಲ್ಲಿ ತಂದು ಲಿಂಗಸ್ಥಾಪನೆ ಮಾಡಿದರಂತೆ.[೧೪೧]

ಅದೇ ರಾತ್ರಿ ಆ ಪಂಚಲಿಂಗದ ಪ್ರಣಮ ಸ್ವರೂಪಿಯಾದ ಶಿವನು ಆ ಗೌಡನ ಸ್ವಪ್ನದಲ್ಲಿ ಬಂದು "ನೀನು ಈ ಪಂಚಲಿಂಗ ಮನೆಯಲ್ಲಿ ಸ್ಥಿರವಾಗಿ ಇಟ್ಟುಕೊಂಡರೆ ಖಂಡಿತವಾಗಿಯು ನಿನ್ನ ವಂಶ ಸರ್ವನಾಶವಾಗುತ್ತದೆ." ಎಂಬ ಅಶರೀರ ವಾಣಿಯೊಂದು ಆತನ ಕನಸಿನಲ್ಲಿ ಬಂದು ಹೇಳಿತಂತೆ. ಗೌಡ ಇದನ್ನು ತಿಳಿದುಕೊಂಡು ಚಿಂತಾಕ್ರಾಂತನಾಗಿ ಆ ಸುಂದರವಾದ ಪಂಚಲಿಂಗವನ್ನು ರಾತ್ರೋರಾತ್ರಿ ತಂದು ಲಿಂಗಮ್ಮ ಅಡವಿಯಲ್ಲಿ ಪ್ರತಿಷ್ಠಾಪಿಸಿದ್ದರಿಂದ ರಾತ್ರೋರಾತ್ರಿ ಎತ್ತಿಕೊಂಡು ಬಂದ ಲಿಂಗ ರಾತ್ರಾ ಬದಲಾಗಿ ರೌತ್ರಬಾದ, ಕಾತ್ರಾಬಾದ ಸ್ಥಳ ನಾಮದಿಂದ ಜನಪ್ರಿಯಗೊಂಡಿತು. ಈ ಘಟನೆ ಹಿಂದೆ ಸಂಗತಿಯೊಂದು ಸ್ಥಳದ ಉಗಮಕ್ಕೆ ಹಾದಿಮಾಡಿಕೊಟ್ಟಿತು. ಇದೊಂದು ಸ್ಥಳವು ತುಂಬಾ ನಂಬಿಕೆಗೆ ಒಳಗಾಗುತ್ತದೆ. ಒಟ್ಟಾರೆ ಸ್ಥಳ ಐತಿಹ್ಯವಾಗಿ ಆ ಊರಿನ ಸ್ಥಳನಾಮ ತಿಳಿಸಿಕೊಡುವ ಪ್ರಯತ್ನವಂತು ಮೆಚ್ಚಿಕೊಳ್ಳಬೇಕಾಗಿದೆ.[೧೪೨]

<u>ಹಿತ್ತಲಶಿರೂರ:-</u>

ಈ ಊರು ಗುಲಬರ್ಗಾ ಜಿಲ್ಲಯ ಆಳಂದ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ ಹಿತ್ತಲಶಿರೂರ. ಆಳಂದದ ದಕ್ಷಿಣಕ್ಕೆ ೩೦ ಕಿ.ಮೀ. ಮತ್ತು ನಿಂಬರ್ಗಾದಿಂದ ೫.ಕಿ.ಮೀ ಅಂತರದಲ್ಲಿರುವ ಸುಮಾರು ಮೂರು ಸಾವಿರ ಜನಸಂಖೆವುಳ್ಳ ಈ ಗ್ರಾಮವು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದು ಪ್ರಸಿದ್ಧಿ ಹೊಂದಿದೆ. ಹಿತ್ತಲ ಶಬ್ಧದ ಅರ್ಥ ಮನೆಯ ಹಿಂದಿನ ಪ್ರದೇಶ ಅಥವಾ ಊರಿನ ಹಿಂದಿನ ಪ್ರದೇಶವೆಂದು ಅರ್ಥೈಯಿಸಿಕೊಳ್ಳಲಾಗುತ್ತದೆ. ಈ ಗ್ರಾಮದ ನಿಷ್ಪತ್ತಿಯ ಹಿಂದೆ ಮಹತ್ವದ ಒಂದು ಐತಿಹ್ಯ ಜನಪ್ರಿಯತೆ ಪಡಿದಿರುವುದು ತಿಳಿದು ಬರುತ್ತದೆ. ನಿಂಬರ್ಗಾ ಗ್ರಾಮದ ಅತ್ತೆ ಮನೆಯ ಸೊಸೆಯಾಗಿ ಬೆಳ್ಳಿನವರ ಮನೆತನದ ಶಿವದೇವಿಯೆಂಬುವಳು ಮುಗ್ಧ ಹೆಣ್ಣುಮಗಳು. ಅತ್ತೆ ಮನೆಯವರು ತುಂಬಾ ಕಷ್ಟದಿಂದ ಅವಳನ್ನು ನೋಡಿಕೊಳ್ಳುತ್ತಿದ್ದರು. ಹೇಳಿರುವ ಕೆಲಸ ಶ್ರದ್ಧೆಯಿಂದ ಮಾಡಿ ಮುಗಿಸುತ್ತಿದ್ದಳು. ಕುರಿ, ಧನಗಳನ್ನು ಕಾಯಲು ಅಡವಿಗೆ ಇವಳನ್ನು ಕಳಿಸಿಕೊಡುತ್ತಿದ್ದರು. ಅಲ್ಲೇ ಊರಿನ ಹಿತ್ತಲದಲ್ಲಿ ಕುರಿಹಟ್ಟಿಮಾಡಿ ಅದರಲ್ಲೇ ಮಲಗಿಸುವ ವ್ಯವಸ್ಥೆ ಮಾಡಿದ್ದರು. ಮನೆಯವರೆಲ್ಲರು ನಿಕೃಷ್ಟವಾಗಿ ಅವಳನ್ನು ನೋಡುತ್ತಿದ್ದರಂತೆ. ತಂಗಳ ಅನ್ನ, ರೊಟ್ಟಿ, ಪಲ್ಲ್ಯ ಕೊಟ್ಟು ಹರಿದುಹೋದ ಬಟ್ಟೆ, ಸೀರೆ ಕೊಡುತ್ತಿದ್ದರಂತೆ. ಹೀಗೆ ಅನೇಕ ಕಷ್ಟ, ಕಾರ್ಪಣ್ಯಗಳನ್ನು ಶಿವದೇವಿ ಸಹಿಸಿಕೊಂಡು ಕಾಲ ಕಳೆದಿದ್ದಾಳೆ.[೧೪೩]

ತಂಗಳ ಅನ್ನವನ್ನು ತಾನಿರುವ ಸ್ಥಳಕ್ಕೆ ತೆಗೆದುಕೊಂಡು ಹೋಗಿ, ಅಮಾರ್ಜಾಕೊಳ್ಳದಲ್ಲಿ ಜಳಕ ಮಾಡಿ ಬಿಂದಿಗೆಯಲ್ಲಿ ನೀರು ತುಂಬಿಕೊಂಡು, ಕಾಡು ಹೂವು, ಪತ್ರಿಗಳಿಂದ ಶಿವನ ಮೂರ್ತಿಗೆ ತಂಗಳ ಅನ್ನ ನೈವೇದ್ಯ ಅರ್ಪಿಸಿ, ತಾನು ಊಟಮಾಡುತ್ತಿದ್ದಳು. ತಂಗಳ ಅನ್ನ ತಿಂದರೂ ಗಟ್ಟಿಮುಟ್ಟನಿಂದ ದೇಹ ಚೆನ್ನಾಗಿ ವೃದ್ಧಿಯಾಗಿತ್ತು. ಮನೆಯವರೆಲ್ಲರು ಅವಳನ್ನು ಸಂಶಯಾಸ್ಪದಿಂದ ನೋಡತೊಡಗಿದರು. ಅತ್ತೆ ಹಿತ್ತಲದ ಹಟ್ಟಿಗೆ ಬಂದು ನೋಡಿದಾಗ ತಂಗಳ ಅನ್ನ ಆಗಲೇ ಮಾಡಿದ ಬಿಸಿ ಉಗಿ ಕಾಣಿಸಿತು, ನೋಡಿದಾಕ್ಷಣ ಅತ್ತೆಯ ಕಣ್ಣು ಕಾಣದೆ ಧಿಗ್ಭಮೆಗೊಂಡು ರೋಧಿಸಿತೊಡಗಿದಳಂತೆ. ಮತ್ತೆ ತನ್ನ ತಪ್ಪು

ಒಪ್ಪಿಕೊಂಡಾಗ ಕಣ್ಣು ಕಾಣಿಸಿದವಂತೆ, ಶಿವದೇವಿಗೆ ಮುಂದೆ ಮನೆಯವರೆಲ್ಲರೂ ಅಕ್ಕರೆಯಿಂದ ನೋಡ ತೊಡಗಿದರಂತೆ. ಒಂದು ದಿವಸ ಶಿವದೇವಿಗೆ ಅಗೋಚರವಾಣಿ ಕೇಳಿಸಿತಂತೆ. ಶಿವದೇವಿಯ ಭಕ್ತಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ ವರವನ್ನು ಕೇಳು ದಯಪಾಲಿಸುವೇ ಎಂದಾಗ ನನಗೆ ಯಾವುದು ಬೇಕಾಗಿಲ್ಲ. ತಾವು ಈ ಹಿತ್ತಲದಲ್ಲಿ ಬಂದು ವಾಸಮಾಡಿದರೆ ಸಾಕು ಎಂದಳು. ಶಿವದೇವಿ ಲೌಕಿಕ ದೃಷ್ಟಿಯಲ್ಲಿ ಹುಚ್ಚಿಯಾಗಿದ್ದರು, ಪಾರಮಾರ್ಥಿಕ ದೃಷ್ಟಿಯಿಂದ ತುಂಬಾ ಚುರುಕುವುಳ್ಳವಳಾಗಿದ್ದಳು. ಅವಳ ಬೇಡಿಕೆಯಂತೆ ಕುರಿಹಟ್ಟಿಯಲ್ಲಿ ಶಿವ ಬಂದು ವಾಸಿಸಿದನಂತೆ ಆ ಶಿವನೇ ಕಲ್ಲಿನಾಥ, ಕಲ್ಲಮೇಶ್ವರನೆಂದು ಹೇಳುತ್ತಾರೆ.[೧೪೪]

ಒಂದು ಬಮ್ಮನಕಾಯಿ ಬಸವಣ್ಣ, ಇನ್ನೊಂದು ಹಾಳಕಾಯಿ ಬಸವಣ್ಣ, ಊರು ಮಧ್ಯದಲ್ಲಿ ಹಿತಲಶಿರೂರ ಬಸವಣ್ಣ ಇಲ್ಲಿ ಕಾಣಬಹುದು. ಶಿವ ಆ ಹಿತ್ತಲ ಹಟ್ಟಿಯಲ್ಲಿ ಬಂದು ನೆಲೆಸಿರುವುದಕ್ಕೆ 'ಹಿತ್ತಲ ಶಿವನೂರು' ಎಂದು ಸ್ಥಳ ನಾಮವಾಗಿ ಮಾರ್ಪಟ್ಟಿದೆ. ತದನಂತರ ಜನರ ಬಳಕೆಯಲ್ಲಿ ಹಿತ್ತಲ ಶಿರೂರ ಆಗಿ ರೂಢಿಯಲ್ಲಿದೆ. ಇದು ಕಲ್ಪಿತ ಕಥೆನೋ ಅಥವಾ ನೈಜವಾಗಿ ನಡೆದ ಘಟನೆಯೋ ಒಟ್ಟಾರೆ ಇದೊಂದು ಅಲ್ಲಿನ ಕುರುಹುಗಳ ಮೂಲಕ ಸ್ಥಳ ಐತಿಹ್ಯವೆಂದು ಅಲ್ಲಿನ ಜನರು ಒಪ್ಪಿಕೊಳ್ಳುವುದಂತು ನಾವು ಅಲ್ಲಗಳೆಯುವ ಹಾಗಿಲ್ಲ.ಮುಗ್ಧ ಹೆಣ್ಣು ಮಗಳು ಶಿವದೇವಿ ಹುಚ್ಚಿಯೆಂದು ಅವಳನ್ನು ನಿಕೃಷ್ಟವಾಗಿ ಕಂಡು ಅವಳ ದೈವಿಶಕ್ತಿಯನ್ನು ಅರಿತುಕೊಂಡು ಮನೆಯವರೆಲ್ಲರೂ ಚೆನ್ನಾಗಿ ನೋಡತೊಡಗಿದರು.

ಶಿವನನ್ನು ತನ್ನ ಮುಗ್ಧಭಕ್ತಿಯಿಂದ ಪ್ರತ್ಯಕ್ಷವಾಗಿ ಶ್ರದ್ಧೆಯಿಂದ ಪಡೆದುಕೊಂಡು ಒಂದು ಅದ್ಭುತ ಸ್ಥಳವಾಗಿ ಮಾರ್ಪಡಿಸಿದ್ದು, ಎಲ್ಲಾ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರಳಾಗಿ ಅಚ್ಚಳಿಯದೆ ಶಿವದೇವಿಯ ನೆನಪುಗಳು ಶಾಶ್ವತವಾಗಿ ಜನರ ಅಂತರಾಳದಲ್ಲಿ ಉಳಿದುಕೊಂಡಿದೆ ಈ ಐತಿಹ್ಯದ ಮೂಲಕ ಅವಳ ಚರಿತ್ರೆಯನ್ನ ಜೀವಂತವಾಗಿ ಹಿಡಿದಿಡಲು ಸಾಧ್ಯವಾಗುತ್ತದೆ. ಶಿವದೇವಿ ತವರು ಮನೆಯಿಂದ ತೆರಳಿ ಗಂಡನ ಮನೆಗೆ ಬಂದು ಶ್ರೇಯಸ್ಸನ್ನು ಪಡೆದುಕೊಂಡಿರುವುದು ಅವಳ ವ್ಯಕ್ತಿತ್ವವನ್ನು ಇಮ್ಮಡಿಗೊಳಿಸುತ್ತದೆ. ಇದು ವ್ಯಕ್ತಿಯ ಐತಿಹ್ಯವಾಗಿದ್ದರು, ಒಂದು ಸ್ಥಳದ ನಿಷ್ಪತ್ತಿಯ ಕುರಿತು ವಿಶಿಷ್ಟ ಬಗೆಯ ಚರಿತ್ರೆಯನ್ನು ನಿರೂಪಿಸುವುದರಿಂದ ಅದನ್ನ ಸ್ಥಳದ ಐತಿಹ್ಯವೆಂದು ಸ್ವೀಕರಿಸಬೇಕಾಗುತ್ತದೆ.[೧೪೫]

<u>ನಾಗರಹಳ್ಳಿ:-</u>

ಈ ಊರಿನ ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಅಸಾಮಾನ್ಯ ಶಕ್ತಿಯಿಂದ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಪ್ರಸಿದ್ಧಿ ಪಡೆಯುತ್ತಾನೆ. ಆತನ ವ್ಯಕ್ತಿತ್ವವನ್ನು ಆದರ್ಶವಾಗಿಟ್ಟುಕೊಂಡು ಆ ಸ್ಥಳಕ್ಕೆ ಸ್ಥಳನಾಮವಾಗಿ ರೂಪಿಸಿಕೊಳ್ಳುತ್ತಾರೆ. ಅಂಥ ವ್ಯಕ್ತಿಯ ಹಿಂದೆ ಬಂದಿರುವುದು ಸರಳ, ಸಜ್ಜನಿಕೆಗೆ ಪಾತ್ರನಾಗಿ ಬಂದವರು ಪವಾಡ ಪುರುಷ ಅಜ್ಜಯ್ಯ. ಈತ ಪ್ರಾಣಿಗಳಿಗೆ ತುಂಬಾ ಪ್ರೀತಿಯಿಂದ ಕಾಣುತ್ತಿದ್ದನು. ಸದಾ ಕಾಡಿನಲ್ಲಿ ಜೀವಿಸುತ್ತಾ ಪ್ರಾಣಿ, ಪಶು, ಪಕ್ಷಿಗಳ ಮಧ್ಯೆ ಹರಟೆ ಹೊಡೆಯುತ್ತ ಕಾಲ ಕಳೆಯುತ್ತಿದ್ದನು.

ಅಜ್ಜಯ್ಯ ತುಂಬಾ ಮುಗ್ಧ ಸ್ವಭಾವದ ವ್ಯಕ್ತಿ. ಹಾಗೆ ದೇವರ ಧ್ಯಾನದಲ್ಲಿ ಸದಾ ಮುಳುಗುತ್ತಿದ್ದನು. ಶಿವನನ್ನು ಭಕ್ತಿ ಭಾವದಿಂದ ತಪಸ್ಸು ಕೈಗೊಳ್ಳುವಾಗ ಬೇರೆ ಕಡೆ ಆತನ ಚಿತ್ತ ಕಿಂಚಿತ್ತು ತಲ್ಲಣಗೊಳ್ಳುತ್ತಿರಲಿಲ್ಲ. ಅಂಥಹ ಶ್ರದ್ಧಾ, ನಿಷ್ಠೆಯ ವ್ಯಕ್ತಿ ಅಜ್ಜಯ್ಯನಾಗಿದ್ದನು. ಕಾಡಿನಿಂದ ಹೂವು, ಪತ್ರಿಗಳನ್ನು ತಂದು ಶಿವನಿಗೆ ಅರ್ಪಿಸುತ್ತಿದ್ದನು. ಯಾವುದೇ ತೊಂದರೆಯಾದರೂ ದೇವರಿಗೆ ಹೂವು ಪತ್ರಿ ತರುವುದು ಮರೆಯುತ್ತಿರಲಿಲ್ಲವಂತೆ ಅಷ್ಟು ದೇವರನ್ನು ಪ್ರೀತಿಯಿಂದ ನಂಬಿಕೊಂಡು ಬದುಕುತ್ತಿರುವುದು ಆತನ ವ್ಯಕ್ತಿತ್ವದ ಮನೋಭಾವನೆಯ ಮೂಲಕ ಅರಿವಾಗುತ್ತದೆ. ಅಜ್ಜಯ್ಯ ಬಡವರ ಮೇಲೆ ತುಂಬಾ ಕಾಳಜಿ ಹಾಗೂ ಅಷ್ಟೇ

ಅವರಿಗೆ ಸಹಾಯ ಸಹಕಾರ ನೀಡುತ್ತಿದ್ದನಂತೆ. ಕಾಡಿಗೆ ಹೋದಾಗ ಹಣ್ಣು, ಹಂಪಲ ತಂದು ಬಡವರಿಗೆ ಮೊದಲು ಅರ್ಪಿಸುತ್ತಿದ್ದರಂತೆ. ಕಾಡಿಗೆ ಹೋದಾಗ ಕಾಡುಪ್ರಾಣಿಗಳು ಅಜ್ಜಯ್ಯನ ಹತ್ತಿರ ಬಂದು ಭಯ, ಭಕ್ತಿಯಿಂದ ತಲೆಭಾಗಿ ಮನಃಪೂರ್ವಕವಾಗಿ ಸಲುಗೆಯಿಂದ ಜೊತೆಯಲ್ಲಿ ಓಡಾಡುತ್ತಿದ್ದರಂತೆ. ಶಿವನನ್ನು ಭಕ್ತಿಯಿಂದ ತಪ್ಪಸ್ಸು ಕೈಗೊಳ್ಳುವಾಗ ಕಾಡಿನಲ್ಲಿ ಎಲ್ಲಾ ಪ್ರಾಣಿಗಳು ಅಜ್ಜಯ್ಯನ ಹತ್ತಿರ ಬಂದು ಸುತ್ತ ಮುತ್ತ ನಾಗರಹಾವುಗಳು ಕೂಡಾ ಚೆಲ್ಲಾಟವಾಡುತ್ತಿದ್ದವಂತೆ.

ಆ ಸಂದರ್ಭದಲ್ಲಿ ಅಜ್ಜಯ್ಯನಿಗೆ ಲೋಕದ ಪರಿವೆ ಇರುತ್ತಿರಲಿಲ್ಲವಂತೆ. ಆತನ ಸುತ್ತಲೂ ನಾಗರ ಹಾವುಗಳು ಹೆಡೆ ತೆಗೆದು ಚೆಲ್ಲಾಟವಾಡುತ್ತಿದ್ದಾಗ ಸುತ್ತ ಮುತ್ತಲಿನ ಹಳ್ಳಿಯ ಜನರು ಬಂದು ನೋಡಿದಾಗ ದಿಗ್ಭ್ರಮೆಯಿಂದ ನಾಗರಹಾವುಗಳು ನೋಡಿ ಆ ಸ್ಥಳದಲ್ಲಿ ಹೆಚ್ಚಾಗಿ ಕಂಡಿರುವುದರಿಂದ ಆ ಸ್ಥಳಕ್ಕೆ 'ನಾಗರಹಾವುಗಳು ಊರು' ಎಂದು ಕರೆಯತೊಡಗಿದರಂತೆ. ಬರುಬರುತ್ತಾ ಜನರ ಮೌಖಿಕ ಕಂಠಸ್ಥ ಪರಂಪರೆಯಲ್ಲಿ ಮಾರ್ಪಾಡುಗೋಳ್ಳುತ್ತ ಸಾಗಿ ಕೊನೆಗೆ ನಾಗರಳ್ಳಿ ಎಂದಾಯಿತು ಎಂದು ಹೇಳುತ್ತಾರೆ.

ಅಜ್ಜಯ್ಯನು ಶ್ರದ್ಧಾ ಭಕ್ತಿಯಿಂದ ಶಿವನನ್ನು ತನ್ನ ಒಡಲದಲ್ಲಿಟ್ಟುಕೊಳ್ಳಲು ಹಗಲಿರುಳು ತಪ್ಪಸ್ಸು ಮಾಡಿ ಶಿವಲಿಂಗಕ್ಕಾಗಿ ತನ್ನ ತಾನು ಅರ್ಪಿಸಿಕೊಂಡು ಧ್ಯಾನದಲ್ಲಿ ಮುಳುಗಿ ಅಲ್ಲೇ ಲಿಂಗೈಕ್ಯನಾದನು. ಈಗಲೂ ಗದ್ದುಗೆಯ ಪಕ್ಕದಲ್ಲಿ ಒಂದು ದೊಡ್ಡ ಪ್ರಮಾಣದ ಆಲದ ಮರವಿದೆ. ಅದರಿಂದ ಅಜ್ಜಯ್ಯನ ಸಂಪೂರ್ಣ ಚರಿತ್ರೆ ತಿಳಿಸಿಕೊಡುತ್ತದೆ. ಪ್ರತಿವರ್ಷವು ಅಜ್ಜಯ್ಯನ ಜಾತ್ರೆ ತುಂಬಾ ವಿಜೃಂಭಣೆಯಿಂದ ಹಾಗೂ ಉತ್ಸಾಹದಿಂದ ಮಾಡುತ್ತಾರೆ. ಒಟ್ಟಾರೆ ಅಜ್ಜಯ್ಯನ ವಿಶಿಷ್ಟ ಶಕ್ತಿಯ ಮೂಲಕ ಆ ಗ್ರಾಮಕ್ಕೆ ಒಂದು ಜೀವಂತಿಕೆಯ ಶಕ್ತಿಯನ್ನು ನೀಡಿ ಪುಷ್ಠಿಕರಿಸಿದ ಖ್ಯಾತಿ ಸಲ್ಲುತ್ತದೆ. ಆತನ ಬದುಕಿನ ಸಮಗ್ರ ಚಿತ್ರಣವನ್ನು ಆ ವ್ಯಕ್ತಿಯ ಮಹಿಮೆಯ ಮೂಲಕ ಜನರಲ್ಲಿ ಆದರ್ಶಪ್ರಿಯವಾಗಿ ಶಾಶ್ವತವಾಗಿ ಉಳಿದು ಧಾರ್ಮಿಕನಾಯಕನಾಗುವುದರ ಜೊತೆಗೆ ಧಾರ್ಮಿಕ ಕ್ಷೇತ್ರವಾಗಿ ಪರಿಣಮಿಸಿದ್ದಾನೆ. ವ್ಯಕ್ತಿ ಮತ್ತು ಸ್ಥಳದ ನಿಷ್ಪತ್ತಿ ಜನಪದರ ಮಟ್ಟಿಗೆ ಇದೊಂದು ಮೌಖಿಕ ಘಟನೆಯಾಗಿ ಸ್ಥಳ ಐತಿಹ್ಯವಾಗಿ ಪ್ರಸಾರಗೊಂಡಿದೆ.[೧೪೬]

ಭೂಸನೂರು:-

ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಪ್ರಮುಖ ಸ್ಥಳವೇ ಭೂಸನೂರು. ಈ ಗ್ರಾಮವು ಐತಿಹಾಸಿಕ, ರಾಜಕೀಯ, ಚಾರಿತ್ರಿಕವಾಗಿ ತುಂಬಾ ವಿಶಿಷ್ಟತೆಯಿಂದ ಕೂಡಿದೆ. ಆಳಂದದಿಂದ ದಕ್ಷಿಣಕ್ಕೆ ೧೫ ಕಿ.ಮೀ. ಅಂತರದಲ್ಲಿರುವ ಸುಮಾರು ೬ ಸಾವಿರ ಜನಸಂಖ್ಯೆ ಹೊಂದಿರುವ ದೊಡ್ಡ ಗ್ರಾಮ ಸುತ್ತ ಮುತ್ತಲೂ ಹಚ್ಚು ಹಸಿರಿನಿಂದಕೂಡಿದ ಕಬ್ಬು ಈ ಊರಿನ ಪ್ರಮುಖ ಬೆಳೆಯಾಗಿದೆ. ಪ್ರಾಚೀನ ಕಾಲದಿಂದಲೂ ಈ ಗ್ರಾಮದಲ್ಲಿ ದೊಡ್ಡ ಪ್ರಮಾಣದಲ್ಲಿ ಗೋಲಾಕಾರದ ಹಳೆ ಬಾವಿಯಿದೆ. ಈ ಬಾವಿಯಲ್ಲಿಯೇ ಭೂಸಾದೇವಿಯ ಭವ್ಯ ಸುಂದರವಾಗಿರುವ ಮೂರ್ತಿ ಲಭಿಸಿದೆ. ಆ ಮೂರ್ತಿ ಇಂದಿಗೂ ಬೋಗಲಿಂಗೇಶ್ವರ ದೇವಾಲಯದಲ್ಲಿತ್ತು.

ಆದರೆ ಊರಿನ ಜನರು ಕೆಲವು ಮೂಢನಂಬಿಕೆಯಿಂದ ಭೂಸಾದೇವಿಯ ಮೂರ್ತಿ ಮನಃ ಆ ಬಾವಿಯಲ್ಲಿ ಹಾಕಿ ಮುಚ್ಚಿದ್ದಾರೆ. ಭೂಸಾದೇವಿಯ ಮೂರ್ತಿಯಿಂದಾಗಿ ಅಥವಾ ಭೂಸಾದೇವಿ ವಾಸಿಸಿರುವ ಸ್ಥಳವೆಂದು ಕಂಡುಕೊಂಡ ಮೊದಲು ಈ ಗ್ರಾಮಕ್ಕೆ "ಭೂಷಣಮರ"ವೆಂದು ರೂಢಿಯಲ್ಲಿತ್ತಂತೆ. ತದನಂತರ ಆಧುನೀಕರಣ ಪ್ರಭಾವದಿಂದಾಗಿ ಜನರ ಮೌಖಿಕ ಕಂಠಸ್ಥ ಪರಂಪರೆಯಲ್ಲಿ ಭಿನ್ನ ರೂಪತಾಳಿ ಪರಿವರ್ತನೆ ಪಡೆದುಕೊಂಡಿದೆ. ಒಟ್ಟಾರೆ ಭೂಸಾದೇವಿಯ ಮೂರ್ತಿ

ಲಭಿಸಿರುವುದರಿಂದ "ಭೂಷಪುರ" ಹೋಗಿ ಭೂಸನೂರ ಎಂಬ ಸ್ಥಳನಾಮವನ್ನು ಗಟ್ಟಿಯಾಗಿ ಜನರ ಅಂತರಾಳದಲ್ಲಿ ಶಾಶ್ವತವಾಗಿ ಉಳಿದುಕೊಂಡು ಜನಪ್ರಿಯತೆ ಪಡೆದಿದೆ.

ಭೂಸಾದೇವಿಯ ಮಹಿಮೆಯನ್ನು ಕುರಿತಂತೆ ಲಿಖಿತವಾಗಿ ಎಲ್ಲಿಯೂ ಉಲ್ಲೇಖ ದೊರೆತಿಲ್ಲ. ಮೌಖಿಕವಾಗಿ ಉಳಿದುಕೊಂಡು ಬಂದಿರುವ ಚರಿತ್ರೆ ಮೂಲ ಅವಳು ಶ್ರೇಷ್ಠ ದೈವಿ ಸ್ತ್ರೀಯಾಗಿ ಮೆರೆದಿರಬಹುದು. ಅಥವಾ ಗ್ರಾಮಕ್ಕೆ ತನ್ನ ಅಪೂರ್ವ ಸೇವೆ ಸಲ್ಲಿಸಿರಬಹುದು. ಆ ಕಾರಣದಿಂದ ಭೂಸಾದೇವಿಯನ್ನು ಸ್ಮರಿಸಿ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೆ ಇದು ವ್ಯಕ್ತಿಯ ಐತಿಹ್ಯವೆಂದು ಸ್ವೀಕರಿಸಿಕೊಳ್ಳಬಹುದಾದರೂ, ಪ್ರಧಾನವಾಗಿ ಸ್ಥಳದ ನಿಷ್ಪತ್ತಿ ತಿಳಿಸಿಕೊಟ್ಟಿರುವುದರಿಂದ ಸ್ಥಳ ಐತಿಹ್ಯವೆಂದು ಬಳಸಿಕೊಳ್ಳಬಹುದಾಗಿದೆ.[೧೪೭]

ದಂಡಗುಂಡ:-

ಬಸವಣ್ಣನಿಗೆ ಬಿಜ್ಜಳನ ಸೈನಿಕರು ಬೆನ್ನಟ್ಟಿ ಬರುವಾಗ ತನಗೆ ಬೆನ್ನಟ್ಟುತ್ತಿರುವ ದಂಡು (ಸೈನ್ಯ) ಗುಂಡು (ಕಲ್ಲು)ಗಳಾಗಲಿ ಎಂದು ಶಪಿಸಿದನಂತೆ. ಸೈನಿಕರೆಲ್ಲ ಗುಂಡುಗಳಾಗಿ ಸ್ಥಿರವಾಗಿ ನಿಂತರಂತೆ. ಆ ಸ್ಥಳವೇ ಈಗಿನ ದಂಡಗುಂಡವೆಂದು ಹೇಳುತ್ತಾರೆ. ಇಲ್ಲಿ ಬಸವಣ್ಣನ ತೀರ್ಥ ಕ್ಷೇತ್ರ ತುಂಬಾ ಪ್ರಸಿದ್ಧಿ ಪಡೆದಿದೆ.[೧೪೮]

ಕಲಕಂಬ:-

ಈ ಊರಿನಲ್ಲಿ ಇದ್ದ ಗಾಜಿನ ಕಂಬವು ಬಾಣತಿಯು ಹೊತ್ತು ಒಯಿದಳು ಇದು ಮುಂದೆ ಕಲ್ಲಿನ ಕಂಬವಾಗಿದೆ ಹೊತ್ತೊಯ್ದು ಹೆಣ್ಣಮಗಳ ಕಿರಿಬೆರಳೂ ಕಡಿದು ಬಿದ್ದಿತ್ತು. ಒಂದು ಹೊಲದಲ್ಲಿ ಕಿರುಬೆರಳು ಬಿದ್ದಿತ್ತು ಆದ್ದರಿಂದ ಆ ಹೊಲವನ್ನು ಕಂಬದ ಹೊಲ ಎಂದು ಕರೆಯಲಾಯಿತು. ಕಂಬದ ಹೊಲದಲ್ಲಿ ಗಾಜಿನ ಕಂಬ ಇತ್ತು ಎಂದು ಜನರು ಮಾಹಿತಿ ನೀಡಿದರು. ಈ ಕಲ್ಲಿನ ಕಂಬ ಇದ್ದುದ್ದರಿಂದ ಈ ಊರಿಗೆ ಕಲಕಂಬ ಎಂಬ ಹೆಸರು ಬಂದಿತು.

ಬೆನಕನಹಳ್ಳಿ:-

ಈ ಊರಲ್ಲಿ ಗಣೇಶ ಆಚರಣೆ ವಿಶೇಷವಾಗಿದೆ. ಎಲ್ಲಾ ಸಮುದಾಯದ ಜನರು ಭಾಗವಹಿಸುತ್ತಾರೆ. ಮಣ್ಣು ತರುವವರು ಕುರುಬ ಜನಾಂಗದವರು ಮೂರ್ತಿ ಮಾಡುವವರು ಬ್ರಾಹ್ಮಣ ಮನೆತನವದವರು. ಗಣೇಶನ ಮೂರ್ತಿ ಮಾಡುವಾಗ ಅದರಲ್ಲಿ ಯಾವುದೇ ಕೆಮಿಕಲ್ ಬಳಸುವುದಿಲ್ಲ. ಮೊದಲನೇ ದಿನ ಚಿಕ್ಕ ಗಣೇಶ ಮೂರ್ತಿ ಮಾಡುತ್ತಾರೆ. ಅಚರ ಮೇಲೆ ಮಣ್ಣು ಹೊಡೆದು ಮತ್ತೊಂದು ಮೂರ್ತಿಯನ್ನು ಮಾಡುತ್ತಾರೆ. ಒಟ್ಟಾರೆ ನಾಲ್ಕು ಚಿಕ್ಕ ಚಿಕ್ಕ ಗಣೇಶನ ಮೂರ್ತಿ ಮಾಡಿ ಐದನೇ ದಿನ ದೊಡ್ಡದಾದ ಗಣಪತಿಯನ್ನು ಮಾಡುತ್ತಾರೆ. ಈ ಗಣೇಶ ಉತ್ಸವವು ಅನಂತಿಶ್ವರ ರೆಡ್ಡೆ(ಶರಣಗೋಪಾಲ ರೆಡ್ಡಿ)ಯವರ ಮನೆಯಲ್ಲಿ ಈ ಬೆನಕ ಆಚರಣೆ ನಡೆಯುತ್ತದೆ. ಜೊತೆಗೆ ಗಣೇಶನ ವಿಸರ್ಜನೆಗೆ ಯಾವುದೇ ಆಡಂಬರ ಇರದೆ ಗಣೇಶನನ್ನು ಪಲ್ಲಕ್ಕಿತರ ಜನರೇ ಹೊತ್ತೊಯುತ್ತಾರೆ. ಗಣೇಶನನ್ನು ಕಬಲಿಗರ ಬಾವಿಯಲ್ಲಿ ವಿಸರ್ಜನೆ ಮಾಡುತ್ತಾರೆ. ಈ ಗಣೇಶನ ಉತ್ಸವ ಮತ್ತು ಆಚರಣೆ ಪ್ರಕೃತಿಗೆ ಯಾವುದೇ ತೊಂದರೆ ಉಂಟುಮಾಡುವುದಿಲ್ಲ. ಈ ಆಚರಣೆ ಇಂದಲೇ ಈ ಊರಿಗೆ ಬೆನಕನಹಳ್ಳಿ ಎಂದು ಕರೆದಿರಬಹುದು ಎನಿಸುತ್ತದೆ.

೪.೩ ಶಾಸನೋಕ್ತ ಸ್ಥಳನಾಮಗಳು:-

ಶಾಸನಗಳ ಮೂಲಕ ಪ್ರಾಚೀನ ಕಾಲದ ಧಾರ್ಮಿಕ ಚಲನ ವಲನಗಳು ತಿಳಿಯುತ್ತವೆ. ರಾಜರುಗಳ, ಜನತೆಯ ಧಾರ್ಮಿಕ ಸಮನ್ವಯತೆಯ ಭಾವವನ್ನು ತಿಳಿಸಲು ಶಾಸನಗಳು ಆಧಾರವಾಗುತ್ತವೆ. ಕನ್ನಡ ನಾಡಿನಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಧಾರ್ಮಿಕ ವಿವರಗಳಿಗೆ ಶಾಸನಗಳು ಮುಖವಾಣಿಯಂತೆ ನಿಂತು ಧಾರ್ಮಿಕ ಪರಿಚಯವನ್ನು ಒದಗಿಸುತ್ತವೆ. ಜೊತೆಗೆ ಶಾಸನಗಳಿಂದ ಒಂದು ಊರಿನ ಹೆಸರು ಶಾಸನಗಳಲ್ಲಿ ಯಾವರೀತಿ ಉಲ್ಲೇಖವಾಗಿದೆ ಮತ್ತು ಅದು ಆಧುನಿಕತೆಗೆ ಒಳಗಾಗಿ ಯಾವ ಬದಲಾವಣೆಯ ಸ್ವರೂಪವನ್ನು ಪಡೆದು ಕೊಂಡಿದೆ ಎಂಬ ವಿಷಯವನ್ನು ತಿಳಿದುಕೊಳ್ಳಬಹದು.[೧೪೯]

ಶಾಸನಗಳನ್ನು ಬಹುಮುಖ್ಯವಾಗಿ ಸಂಶೋಧಕರು ಇತಿಹಾಸದ ದಾಖಲೆಗಳೆಂದೇ ಭಾವಿಸಿರುವರು. ಇತಿಹಾಸವೆಂದರೆ ರಾಜರುಗಳ ಜೀವನ ವಿವರಗಳುಳ್ಳದ್ದೆ ಎಂಬಂತಾಗಿದೆ. ಶಾಸನಗಳು ಇತಿಹಾಸವನ್ನು ಬರೆಯುತ್ತವೆ; ಇತಿಹಾಸದಲ್ಲಿ ಬಿಟ್ಟು ಹೋದ ಭಾಗಗಳನ್ನು ಭರಿಸುತ್ತವೆ. ರಾಜ, ಮಹಾರಾಜರುಗಳ ವೈಭವವನ್ನು ಪುನರ್ ಸೃಷ್ಠಿಸಿ ನಮಗೆ ಕಾಣುವಂತೆ ಮಾಡುತ್ತವೆ. ಅರಮನೆ, ಅಂತಃಪುರ, ರಾಣಿಯರು, ರಾಜಕುಮಾರರು ಮುಂತಾದವರ ಬಗೆಗೆ ತಕ್ಕ ಮಟ್ಟಿಗೆಯಾದರೂ ಶಾಸನಗಳು ದಾಖಲಿಸದೆ ಇಲ್ಲ. ಶಾಸನಗಳು ಚರಿತ್ರೆಯ ಸೌದಕ್ಕೆ ಇರುವ ಕಿಂಡಿಗಳು.[೧೫೦]

ನಾಗಾಯಿ ಶಾಸನ:-

ನಾಗಾಯಿ ತಾ/ ಚಿತ್ತಾಪೂರ ಜಿ/ ಗುಲಬರ್ಗಾಈ ಸ್ಥಳದಲ್ಲಿ ಮಧುವಪರಸಲು ಘಟಿಕಾ ಸ್ಥಾನವನ್ನು ನಿರ್ಮಿಸಿರುವ ಸಂಗತಿಯ ನಾಗಾಯಿ ಶಾಸನದಿಂದ ತಿಳಿದು ಬರುತ್ತದೆ. 'ಮದುಸೂದನಾಲಯ''ರಾಮೇಶ್ವರಾಲಯ''ತ್ರೈ ಪುರುಷ ದೇವಾಲಯ''ರಾಮತೀರ್ಥ' ಇವೇ ಮೊದಲಾದವು ಈ ಘಟಿಕಾಸ್ಥಾನದ ಪರಿಸರದಲ್ಲೇ ನಿರ್ಮಿತವಾದ ಸಂಗತಿಯನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಮತ್ತೆ ನಾಗಾವಿಯನ್ನು ಶಾಸನದಲ್ಲಿ ಈ ರೀತಿಯಾಗಿ ಉಲ್ಲೇಖಿಸಲಾಗಿದೆ. ನಾಗಾಯಿ < ನಾಗವಾಪಿ ~ ನಾಗಾಯಿ ~ ನಾಗೈ (ಈಗ ನಾಗಾ ಯಲ್ಲಮ್ಮ ದೇವತೆಯಿಂದ ಇದು ಕ್ಷೇತ್ರವೆನ್ನಿಸಿದೆ.[೧೫೧]

ಆಲಂದೆ ಶಾಸನ:-

ಆಲಂದೆ ತಾ/ ಜಿ/ ಗುಲಬರ್ಗಾ ಈ ಶಾಸನವು ಚಾಳುಕ್ಯ ತ್ರಿಭುವನ ಮಲ್ಲ ವಿಕ್ರಮಾದಿತ್ಯನ ಕಾಲದ್ದಾಗಿದೆ.ಯುವರಾಜ ಮಲ್ಲಿಕಾರ್ಜುನನು ಆಲಂದೆ ಸಾಸಿರ ನಾಡಿನ ಅಧಿಪತಿ ಯಾಗಿದ್ದಾಗ ಅವನ ಕೈಕೆಳಗಿನ ಪೆರ್ಗಡೆ ದಂಡನಾಯಕ ನಾಚರಸ, ಹಾಗೂ ಸಾಮಂತ ಕಾಳಿದಾಸರು ಸ್ವಯಂಭೂ ಸೋಮೇಶ್ವರ ದೇವರಿಗೆ ಅಲ್ಲಿನ ಸ್ಥಾನಪತಿಗಳಿಂದ ಸರೋಶ್ವರ ಪಂಡಿತರಿಗೆ ಭೂಬಿ, ಮಾವಿನ ಅರವೆ ಹಾಗೂ ಮತ್ತಿತರ ಮಾರಾಟದ ಹಾಗೂ ಸುಂಕದ ವಸ್ತುಗಳನ್ನು ಧಾನ ಪರಿಹಾರವಾಗಿ ಧಾರೆಯೆರೆದು ಬಿಟ್ಟರು. ಈ ದತ್ತಿಯನ್ನು ಯುವರಾಜ ಮಲ್ಲಿಕಾರ್ಜುನನು ರಾಣಿ ಚಂದಲದೇವಿಯರ ಬಿನ್ನಪದ ಮೇರೆಗೆ ನೀಡಿದ ಸಂಗತಿಯೂ ಜೊತೆಗೆ "ಆಲನ್ದಾಪುರ" ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೧೫೨]

ಕೆಲ್ಲೂರು ಶಾಸನ:-

ಕೆಲ್ಲೂರು. ತಾ.ಜೇವರ್ಗಿ. ಜಿ. ಗುಲಬರ್ಗಾ ಈ ಶಾಸನವು ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ ಕಾಲದ್ದಾಗಿದೆ. ಅರಿಕೇಶ್ವರ ದೇವರಿಗೆ ಅಂಗ, ರಂಗ ಭೋಗಕ್ಕಾಗಿ ಕೆಂಭಾವಿ ಹಾಗೂ ನರಿಯುಂಬೊಳೆ ಎಪ್ಪತ್ತರ ಉಭಯ ಸ್ವಾಮ್ಯದ ಅಧಿಪತಿ

ಮಹಾ ಮಂಡಳೇಶ್ವರ ದೇವರಸರು ಹಾಗೂ ಸಮಸ್ತರು ಬಿಟ್ಟ ಭೂಮಿ. ಶಾಸನದಲ್ಲಿ ಈ ಊರಿನ ಹೆಸರು ಈ ಮುಂದಿನಂತೆ ದಾಖಲೆಯಾಗಿದೆ ಕೆಲವೂರು ~ ಕೆಲ್ಲೂರು. ಹಾಲುಗಡಲು~ಹಾಲಗಡಲಿ~ ಹಾಲಗಡ್ಲಿ. ಅವರವಾದಿ~ಅವರಾದಿ. ನರಿಯುಂಳೆ~ನರಬೋಳಿ.[೧೫೬]

ಕಾಳಗಿ ಶಾಸನ:-

ಕಾಳಗಿ. ತಾ. ಚಿತ್ತಾಪೂರ ಜಿ. ಗುಲಬರ್ಗಾ ಚಾಳುಕ್ಯ ವಿಕ್ರಮ ಅರಸನ ಕಾಲ ಕಾಲುಗೆಯು ಶ್ರೀ ಸ್ವಯಂಭೂ ಕಾಳೇಶ್ವರ ದೇವರ್ಗೆ ಅಂಗ ಭೋಗ, ರಂಗಭೋಗ ನೈವೇದ್ಯಕ್ಕೆ ಕರ್ಣಭೂಪನು ಕೊಟ್ಟದತ್ತಿ ಬಗ್ಗೆ ಮಾಹಿತಿ ನೀಡುತ್ತದೆ. ಶಾಸನದಲ್ಲಿ ಕಾಳಗಿಯ ಬಗ್ಗೆ ಈ ರೀತಿಯಾಗಿ ದಾಖಲಿಸಲಾಗಿದೆ ಕಾಳುಗೆ ~ ಕಾಳಿಗೆ ~ ಕಾಳ್ಗಿ.[೧೫೭]

ಶೇಡಂ ಶಾಸನ:-

ಶೇಡಂ ತಾ. ಜಿ.ಗುಲಬರ್ಗಾ ಈ ಶಾಸನ ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ ೬ನ ಕಾಲದ್ದಾಗಿದೆ. ಶಾಸನದಲ್ಲಿ ದತ್ತಿಯ ವಿವರಗಳಿಲ್ಲದೆ, ಕೇವಲ ಚಾಳುಕ್ಯ ವಂಶ ಹಾಗೂ ಅರಲು ಮೂನೂರರ ಅಧೀನದಲ್ಲಿದ್ದ ಸೇಡಿಂಬಪುರ ಕೋಟೆ ಹಾಗು ಅಲ್ಲಿನ ಮಹಾಜನರ ಪ್ರಶಂಸೆ ಮಾತ್ರ ವರ್ಣಿತವಾಗಿದೆ. ಶಾಸನದಲ್ಲಿ ಶೇಡಂಅನ್ನು ಸೇಡಿಂಬಪುರ ಕೋಟೆ, ಸೇಡಿಂಬದುರ್ಗಯೆಂದು ಉಲ್ಲೇಖಿಸಲಾಗಿದೆ.[೧೫೮]

ಎನಗುಂಟಿ ಶಾಸನ:-

ಎನಗುಂಟಿ ತಾ. ಜಿ. ಗುಲಬರ್ಗಾ ಕಾಲ ಚಾಳುಕ್ಯರ ೬ನೇ ವಿಕ್ರಮಾದಿತ್ಯ ಇದರಲ್ಲಿ ಎನಗುಂಟಿಯ ಅರಸು, ಸಮಸ್ತ ಪ್ರಜೆಗಳು ಊರ ನಡುವಿನ ಭೋಗೇಶ್ವರ ದೇವರ್ಗ್ಗೆ ಹಾಗೂ ಅರಲು ದೇವರ ಶ್ರೀಖಣ್ಣೆಯ ನೈವೇದ್ಯಕ್ಕೆ ಭೂಮಿ, ಅಂಗಡಿಗಳನ್ನಲ್ಲದೆ ಮಾರಾಟದ ವಸ್ತುಗಳ ಮೇಲಿನ ಧಾನ್ಯವನ್ನು ದತ್ತಿಯಾಗಿಸಿರುವುದು. ಶಾಸನದಲ್ಲಿ ಈ ಊರಿನ ಹೆಸರಿನ ಬಗ್ಗೆ ಈ ಮುಂದಿನಂತೆ ಉಲ್ಲೇಖಿಸಲಾಗಿದೆ ''ವೆಯನಗುಂಟಿ~ಯೆನಗುಂಟಿ, ಭಣ್ತವಾ ಅಗ್ರಹಾರ ಎನಗುಂಟಿಯ ನೂರಯಿಪ್ಪತ್ತಿರ್ಬರು ಎಂದಿದೆ.[೧೫೯]

ಹಲಕರ್ಟಿ ಶಾಸನ:-

ಹಲಕರ್ಟಿ ತಾ. ಚಿತ್ತಾಪುರ, ಜಿಲ್ಲೆ ಗುಲಬರ್ಗಾ ಚಾಳುಕ್ಯ ತ್ರೈಲೋಕ್ಯಮಲ್ಲನ ಕಾಲದಲ್ಲಿ ಈ ಶಾಸನ ಹೊರಡಿಸಲಾಗಿದೆ. ಆನೆಮರಸ ಮಹಾ ದಂಡನಾಯಕನು ಪಲ್ಲಕರಂಟೆ ಬಿಜ್ಜೇಶ್ವರ ದೇವರಿಗೆ ಬಿಟ್ಟ ಆಯ. ಅರಲು ೩೦೦ ಭತ್ತಗಾವೆ, ಪಂಚ ಮಠ>(ಡ/ಳ್ ಧ್ವನಿ ವ್ಯತ್ಯಯ.) (ವಾಳಿ=ವಾಡಿ) ಪ/ಹ್ (ಪಲ್ಲಕರಂಟೆ/ಹಲಕರಟೆ) ಎಂದು ಶಾಸನದಲ್ಲಿ ದಾಖಲಿಸಲಾಗಿದೆ.[೧೬೦]

ಹರಸೂರು ಶಾಸನ :-

ಹರಸೂರು ತಾ/ ಜಿ/ ಗುಲಬರ್ಗಾ ಕಳಚೂರಿ ರಾಯಮುರಾರಿ ಸೋವಿದೇವನ ಕಾಲದ್ದಾಗಿದೆ. ಈ ಶಾಸನದಲ್ಲಿ ಸ್ವಸ್ತ ಬಿರುದಾಂಕಿತನಾದ ರಾಯಮುರಾರಿ ಸೋವಿದೇವನ ಮಹಾದಂಡನಾಯಕ ಮಾಧವಯ್ಯ ನಾಯಕನು, ಆಲಂದೆಯ 'ಸೋಮನಾಥ ಲಬ್ದ ವರಪ್ರಸಾದ''ಮನ್ನೆಯಸಿಂಹ' ರಾಮರಸ ಹಾಗೂ ಮಹಾಮಂಡಲೇಶ್ವರ ವೀರ ಗೊಂಕರಸರೊಡನೆ

ಶಾಲೆಯ ಸೀಮಳದ (ಹರಸೂರು) ಶ್ರೀ ಭೋಗೇಶ್ವರ ದೇವರರಂಗ ಭೋಗಕ್ಕಾಗಿ ಗೊಂಕನೂರುಪ್ಪತ್ತರ ಬಳಿಯ ಅಂಕುಲಗೆಯನ್ನು ದತ್ತಿಯಾಗಿರಿಸಿದ್ದು. ಇಲ್ಲಿ ಶಾಲೆಯ ಸೀಮಳವೆ ಹರಸೂರು ಎಂದಾಗಿದೆ.[೯೧]

ಷೇಖ್‌ರೋಜಾ:-

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು ಮೊಹಲ್ಲಾ ಷೇಖ್ ರವ್ಜಾ ಮಸೀದಿಯ ಒಂದು ಬಿಡಿ ಕಲ್ಲಿನಲ್ಲಿದೆ. ಇದು ಮಸೀದಿಯ ನಿರ್ಮಾಣವನ್ನು ಆ. ಹಿ. ೭೮೧, ರಮ್ಜಾನ್ ತಿಂಗಳದಲ್ಲಿ ಎಂದರೆ ಕ್ರಿ.ಶ ೧೩೭೯, ಡಿಸೆಂಬರ್ ೧೧ ರಿಂದ ೧೩೮೦ ಜನವರಿ ೯ರ ಅವಧಿಯಲ್ಲಿ, ಮೊಹಮ್ಮದ್ ಷಾ೨ ರಾಜನ ಆಳ್ವಿಕೆಯಲ್ಲಿ ಮಲಿಖುಷ್ ಷರ್ಕ್ ಆಬಾಜಿ ಅವರಿಂದ ಮಾಡಿಸಲಾಯಿತು. ಬಡವಾಣೆಯ ಹೆಸರು ಈ ಶಾಸನದಲ್ಲಿ ಷೇಖ್ ರವ್ಜಾ ಎಂದು ನಮೂದಿಸಲಾಗಿದೆ ಈ ಮಸೀದಿ ಇರುವುದರಿಂದಲೇ ಇದಕ್ಕೆ ಷೇಖ ರೋಜಾ ಎಂದು ಹೆಸರು ಬಂದಿದೆ.[೯೨]

ಮದಿಯಾಳ ಶಾಸನ:-

ಈ ಗ್ರಾಮವು ತಾಲ್ಲುಕು ಕೇಂದ್ರವಾದ ಆಳಂದದಿಂದ ನೈರುತ್ಯಕ್ಕೆ ೩೧ ಕಿ.ಮಿ. ದೂರದಲ್ಲಿದ್ದು ಶಾಸನಗಳಲ್ಲಿ 'ಮಾಡಿಫಳ' ಅಗ್ರಹಾರ'ಮಾಡಿಫಳ' ಎಂದೇ ಉಲ್ಲೇಖಿತಗೊಂಡಿದೆ. ಈ ಊರು ಹಿಂದೆ ಆಲಂದೆ -೧೦೦೦ಕ್ಕೆ ಸೇರಿದ ಗೊಂಕ – ೧೨೦ರಲ್ಲಿತ್ತು. ಇಲ್ಲಿಂದ ಈವರೆಗೆ ಒಟ್ಟು ಎಂಟು ಶಿಲಾ ಶಾಸನಗಳು ವರದಿಯಾಗಿವೆ.[೯೩]

ಪಡಸಾವಳಿ ಶಾಸನ :-

ಪಡಸಾವಳಿ ಗ್ರಾಮವು ಆಳಂದದಿಂದ ಸುಮಾರು ೮ ಮೈಲಿ ಪಶ್ಚಿಮದಲ್ಲಿರುವ ಗ್ರಾಮ. ಪ್ರಾಚೀನ ಶಾಸನಗಳಲ್ಲಿ 'ಪಟ್ಟ ಸಾವಳಗೆ' ಎಂದು ಉಲ್ಲೇಖಗೊಂಡಿದೆ. ಪಡಸಾವಳಿ ಗ್ರಾಮದಲ್ಲಿರುವ ಕಲ್ಲೇಶ್ವರ ದೇವಾಲಯದ ಮುಂದೆ ಈ ಶಾಸನವು ನಿಲ್ಲಿಸಲಾಗಿದೆ. ಕಾಲ ೧೧೧೦ ಭಾಷೆ/ ಲಿಪಿ ಕನ್ನಡ. ಆಳ್ವಿಕೆ ಅರಸ ಚಾಳುಕ್ಯ ವಿಕ್ರಮಾದಿತ್ಯ ಶಾಸನ ವಿಷಯ. ಪ್ರಸಕ್ತ ಶಾಸನವು ಬಹಳ ಕಚ್ಚಾಗಿದೆ. ಅಲ್ಲಿರುವ ತೇದಿಯ ವಿವರ ಕ್ರಸ್ತಾಬ್ದ ೧೧೧೦ ರ ಫೆಬ್ರುವರಿ ೧೫ಕ್ಕೆ ಹೊಂದುತ್ತದೆ.[೯೪]

ತಡಕಲ್ ಶಾಸನಗಳು :-

ಈ ಗ್ರಾಮವು ತಾಲೂಕು ಕೇಂದ್ರವಾದ ಆಳಂದದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಪಿರಿಯ ತಡಕಲ್' ಎಂದೇ ಉಲ್ಲೇಖಿತಗೊಂಡಿರುವುದು. ಈ ಗ್ರಾಮದಲ್ಲಿ ಈ ವರೆಗೆ ನಾಲ್ಕು ಶಾಸನಗಳು ಸಿಕ್ಕಿವೆ. ತಡಕಲ್ ಊರ ನಡುವೆ ಇರುವ ಸಿದ್ದಪ್ಪ ಬಾಳಪ್ಪ ಸುತಾರರ ಮನೆಯ ಮುಂದೆ ಇರುವ ಖಂಡರಾಯನ ಮೂರ್ತಿಕಲ್ಲಿನ ಮೇಲೆ ಈ ಶಾಸನವಿದೆ. ಭಾಷೆ / ಲಿಪಿ ಕನ್ನಡ ಕಾಲ ೧೧-೧೨ ನೇಯ ಶತಮಾನ.[೯೫]

ರುದ್ರವಾಡಿ ಶಾಸನ:-

ತಾಲ್ಲೂಕು ಕೇಂದ್ರವಾದ ಆಳಂದದಿಂದ ೧೬ ಕಿ.ಮೀ. ದೂರದಲ್ಲಿದೆ ಈ ಗ್ರಾಮ, ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರ ರುದ್ರವಾಡಿ''ರುದ್ಧವಾಡಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಆಲಂದೆ ೧೦೦೦ಕ್ಕೆ ಸೇರಿದ್ದ ಮೊರಂಬ ೮೪ರ ಕಂಪಣಕ್ಕೆ ಒಳಪಟ್ಟಿದ್ದು ೫೦ ಮಹಾರಾಜರನ್ನು ಹೊಂದಿದ ಪ್ರಮುಖ ಅಗ್ರಹಾರವಾಗಿತ್ತು. ಶೈಕ್ಷಣಿಕ ಹಾಗೂ ಧಾರ್ಮಿಕ

ಕೇಂದ್ರವಾಗಿತ್ತು. ಸದ್ಯ ಇಲ್ಲಿ ಕಲ್ಯಾಣದ ಚಾಲುಕ್ಯ ಅರಸು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಎರಡು ಶಿಲಾಶಾಸನಗಳು ದೊರಕಿವೆ.[೧೬೬]

ಬೋಧನ ಶಾಸನ :-

ತಾಲ್ಲೂಕು ಕೇಂದ್ರವಾದ ಆಳಂದದಿಂದ ಈ ಗ್ರಾಮವು ಪೂರ್ವಕ್ಕೆ ಕಡಗಂಚಿ ಮಾರ್ಗವಾಗಿ ೩೫ ಕಿ. ಮೀ. ಗುಲಬರ್ಗಾದಿಂದ ವಾಯುವ್ಯಕ್ಕೆ ಚಿಂಚನಸೂರ ಮಾರ್ಗವಾಗಿ ೩೩ ಕಿ.ಮೀ. ದೂರದಲ್ಲಿ ಬೆಣ್ಣೆತೊರೆ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಗ್ರಾಮವಾಗಿದೆ. ಈ ಶಾಸನಗಳಲ್ಲಿ 'ಪಿರಿಯ ಬೋಧನ' ಎಂದು ಉಲ್ಲೇಖಿತಗೊಂಡಿರುವ ಈ ಗ್ರಾಮವು ಹಿಂದೆ ಕಲ್ಯಾಣ ಚಾಲುಕ್ಯ ದೊರೆಯಾದ ಆರನೆಯ ವಿಕ್ರಮಾದಿತ್ಯನ ರಾಣಿಯಾದ ಮಲಯವತಿ ದೇವಿಯ ಆಳ್ವಿಕೆ ಕಾಲದಲ್ಲಿ 'ಸರಸ್ವತಿ'ಪುರವಾಗಿತ್ತು. ಹಿಂದಿನ ಕಾಲದಲ್ಲಿ ಆಲಂದೆ ೧೦೦೦ ಕ್ಕೆ ಸೇರಿದ ಗೊಂಕ – ೧೨೦ರ ಕಂಪಣ ನರವಣಿ ೧೨ ರೊಳಗಿದ್ದ ಈ ಗ್ರಾಮದಲ್ಲಿ ಒಂದು ಶಿಲಾ ಶಾಸನವು ವರದಿಯಾಗಿದೆ.[೧೬೭]

ಕಡಗಂಚಿ ಶಾಸನ :-

ಈ ಗ್ರಾಮವು ತಾಲೂಕು ಕೇಂದ್ರವಾದ ಆಳಂದದಿಂದ ನೈರುತ್ಯಕ್ಕೆ ೧೫ ಕಿ.ಮೀ. ದೂರದಲ್ಲಿದ್ದು ಆಳಂದ ಗುಲಬರ್ಗಾ ರಸ್ತೆಯಲ್ಲಿದೆ. ಗುಲಬರ್ಗಾಕ್ಕೆ ಹೋಗುವ ರಾಜ್ಯ ಹೆದ್ದಾರಿಯ ಬಲಕ್ಕೆ ಅರ್ಧ ಕಿ. ಮೀ. ಅಂತರದಲ್ಲಿರುವ ಒಂದು ದೊಡ್ಡ ಗ್ರಾಮವಾಗಿದೆ. ರಾಜಕೀಯವಾಗಿ, ಸಮಾಜೀಕವಾಗಿ, ಆರ್ಥಿಕವಾಗಿ ಮುಂದುವರೆದ ಗ್ರಾಮವಾಗಿದೆ. ಈ ಗ್ರಾಮವು ಹಿಂದೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆಡಳಿತದ ಕಡೆಯ ಊರಾಗಿರುವುದರಿಂದ ಇದಕ್ಕೆ 'ಕಡಗಂಚಿ' ಎಂದು ಹೆಸರು ಬಂದಿದೆ ಎಂದು ಪ್ರತೀತಿ. ಪ್ರಾಚೀನ ಶಾಸನಗಳಲ್ಲಿ 'ಕಡಗಂಚಿ' ಎಂದೇ ಈ ಊರು ಉಲ್ಲೇಖಿತವಾಗಿದೆ.[೧೬೮] ಕಡಗಂಚಿ ಶಾಸನವು ಸದ್ಯ ಗುಲಬರ್ಗಾ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿದೆ. ಕಾಲ:೧೧೧೮ ಭಾಷೆ / ಲಿಪಿ / ಕನ್ನಡ / ಆಳ್ವಿಕೆ ಅರಸು ಮಹಾ ಮಂಡಳೇಶ್ವರ ಹೆಮ್ಮಡಿಯರಸನ ಕಾಲದ್ದಾಗಿದೆ ಇದು ದೆವಾಲಯಕ್ಕೆ ದಾನ ಬಿಟ್ಟ ವಿಷಯ ತಿಳಿಸುತ್ತದೆ.

ಅಂಕಲಗಿ :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪಶ್ಚಿಮಕ್ಕೆ ೩೦ ಕಿ. ಮೀ ದೂರದಲ್ಲಿ ಜೇವರ್ಗಿ-ಸಿಂಧಗಿ ರಸ್ತೆಯಲ್ಲಿ ಜೇರಟಗಿಯಿಂದ ಉತ್ತರಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿ ಭೀಮಾನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಂಕುಲಗೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅಗ್ರಹಾರವಾಗಿದ್ದು, ತರ್ದವಾಡಿ -೧೦೦೦ಕ್ಕೆ ಸೇರಿದ ಕಂಪಣ, ಅಂಕುಲಗೆ – ೫೦ರ ಮೊದಲ ಸ್ಥಳವಾಗಿ ರಾಜಕೀಯ ಮಹತ್ವ ಪಡೆದಿತ್ತು. ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಒಂದು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದ್ದರೆ, ಉಳಿದ ನಾಲ್ಕು ಸೇವುಣರ ಕಾಲದ್ದಾಗಿವೆ.[೧೬೯]

ಅ(ಆ)ಡಕಿ:-

ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯಕ್ಕೆ ೧೭ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ'ಅಡಕ್ಕಿ' ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಮಾರುತಿ ದೇವಾಲಯದ ಎರಡು ಕಂಬಗಳ ಮೇಲೆ ಇರುವ ಈ ಶಾಸನಗಳು ಸೀರೆಯ ಕಾಳಿಸೆಟ್ಟಿ ಹಾಗೂ ಕೊಪ್ಪದೇವ ಮಾಡಿಸಿದ ಜೈನ ಬಸದಿಗಳಿಗೆ ಬೇರೆ ಬೇರೆ ಕಾಲಗಳಲ್ಲಿ ನೀಡಿದ ದಾನ ಶಾಸನಗಳಾಗಿವೆ.[೧೭೦]

ಅತನೂರು :-

ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೧೪ ಕಿ. ಮೀ. ಗುಲಬರ್ಗಾದಿಂದ ನೈಋತ್ಯಕ್ಕೆ ೪೧ ಕಿ. ಮೀ. ದೂರದಲ್ಲಿ ಗುಲಬರ್ಗಾ ಅಫಜಲಪುರ ರಸ್ತೆಯಲ್ಲಿರುವ ಮಹತ್ವದ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಅತ್ತಿನೂರು-೮೦ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ – ೧೦೦೦ಕ್ಕೆ ಸೇರಿದ ಕಂಪಣವಾಗಿತ್ತು. ಎಂಭತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಒಂದು ಸುಮಾರು ೧೨ ನೇ ಶತಮಾನಕ್ಕೆ ಸೇರಿದ್ದು. ಬಾಚರಸನು ಪುಲ್ಲಿವಿಗೆ ಗ್ರಾಮದ ಸಿದ್ಧಾಯದಲ್ಲಿ ಸೊಡರೆಣ್ಣೆಗೆಂದು ಐದು ಪಣವನ್ನು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, ಉಳಿದ ಮೂರು, ಸುಮಾರು ೧೩ನೇ ಶತಮಾನಕ್ಕೆ ಸೇರಿದ ಜೈನ ಶಾಸನಗಳಾಗಿವೆ.[೧೭೧]

ಅಫಜಲಪುರ :-

ತಾಲೂಕು ಕೇಂದ್ರವಾಗಿದ್ದು, ಗುಲಬರ್ಗಾದಿಂದ ಪಶ್ಚಿಮಕ್ಕೆ ೫೫ ಕಿ. ಮೀ. ದೂರದಲ್ಲಿ, ಭೀಮಾ ನದಿಯ ಎಡದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ. ಬಿಜಾಪುರದ ಆದಿಲ ಷಾಹಿ ಸುಲ್ತಾನ ಇಮ್ಮಡಿ ಅಲಿ ಆದಿಲ್ ಷಾನ ಪ್ರಮುಖ ದಂಡನಾಯಕ ಅಫಜಲಖಾನನಿಂದಾಗಿ ಇದಕ್ಕೆ ಅಫಜಲಪುರ ಎಂಬ ಹೆಸರು ಬಂದಿದೆ. ಮುಂದೆ ನಿಜಾಮರ ಕಾಲದಲ್ಲಿ ಇದು ಪೈಗಾ ತಾಲೂಕಾಗಿತ್ತು ಆದರೆ ಇದು ಆದಿಲ್ ಷಾಹಿಗಳ ಆಳ್ವಿಕೆಗೆ ಒಳಪಡುವ ಮೊದಲೂ ಪ್ರಮುಖ ಸ್ಥಳವಾಗಿತ್ತೆಂದು ಹೇಳುವ ಶಾಸನ ಮಹಲ್ ಮಸೀದಿಯಲ್ಲಿದೆ. ಇದು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ೧೧೦೭ರಲ್ಲಿ ಯುವರಾಜ ಮಲ್ಲಿಕಾರ್ಜುನನ ಮಹಾಪ್ರಧಾನ ನಾಚಿಮ್ಮರಸ, ಮಹಾಮಂಡಳೇಶ್ವರ ಶಿಲಹಾರ ಡಂಕಾರಸ ಹಾಗೂ ಅವನ ರಾಣಿಯು ಸಂಯುಕ್ತವಾಗಿ ಅಲ್ಲಿಯ ತ್ರೈಕೂಟದ ರೇವಣೇಶ್ವರ ದೇವರ್ಗೆ ೧೦೦ ಮತ್ತು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತಾ ಸಾಂದರ್ಭಿಕವಾಗಿ ನಖರೇಶ್ವರ, ಕಾಳಪ್ರಿಯದೇವ ಹಾಗೂ ಬಸದಿಗಳನ್ನು ಉಲ್ಲೇಖಿಸುತ್ತ, ಬೀಚವಳ್ಳಿಯನ್ನು ಹೆಸರಿದೆ.[೧೭೨]

ಅಲ್ಲೂರು:-

ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ೪೦ ಕಿ.ಮೀದೂರದಲ್ಲಿದ್ದು, ಮುನ್ನೂರು ಹಳ್ಳಿಗಳನ್ನು ಒಳಗೊಂಡ ಆಡಳಿತ ವಿಭಾಗವಾಗಿ, ಪ್ರಾಚೀನ ಶಾಸನಗಳಲ್ಲಿ "ಅರಲು-೩೦೦", "ಅರಲೂರು ೩೦೦" ಎಂದೇ ಉಲ್ಲೇಖಿತಗೊಂಡಿದೆ ಈ ಊರು ಕೋಟೆ, ಅಗಸೆಗಳನ್ನು ಹೊಂದಿದೆ.[೧೭೩]

ಆಂದೋಲ :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಆಗ್ನೇಯಕ್ಕೆ ೧೨ ಕಿ. ಮೀ. ದೂರದಲ್ಲಿದೆ. ಇದು ೧೮೭೩ರಿಂದ ೧೯೫೬ರವರೆಗೆ ತಾಲೂಕು ಕೇಂದ್ರವಾಗಿತ್ತು ನಂತರ ತಾಲೂಕು ಕೇಂದ್ರವು ಆಂದೋಲದಿಂದ ಜೇವರ್ಗಿಗೆ ವರ್ಗಾಯಿಸಲ್ಪಟ್ಟಿತು.ಬೃಹತ್ ಶಿಲಾಯುಗದ ಸಮಾಧಿಗಳನ್ನು ಹೊಂದಿರುವ ಪ್ರಾಗೈತಿಹಾಸಿಕ ಮಹತ್ವದ ಈ ಊರು ಪ್ರಾಚೀನ ಶಾಸನಗಳಲ್ಲಿ 'ಆನೆದಲೆ''ಆಂದೆಲಾ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಇದು ನರಿಯಂಬೋಳ ೭೦ಕ್ಕೆ ಸೇರಿತ್ತು.[೧೭೪]

ಇಂಗಳಗಿ :-

ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೧೮ ಕಿ.ಮೀ. ವಾಡಿ ರೈಲ್ವೆ ಜಂಕ್ಷನ್‌ನಿಂದ ಪಶ್ಚಿಮಕ್ಕೆ ಆರು ಕಿ. ಮೀ. ದೂರದಲ್ಲಿ ಕಾಗಿಣಾ ನದಿಯ ಎಡ ದಂಡೆಯ ಮೆಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಇಂಗುಣಿಗೆ', 'ಯಿಂಗುಳಿಗೆ', 'ಯಿಂಗಿಣಿಗೆ' ಎಂದೆಲ್ಲಾ ಉಲ್ಲೇಖಗೊಂಡಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿದ್ದು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಮೂರು ಹಾಗೂ ಸೇವುಣರ ಎರಡು ಶಾಸನಗಳು ವರದಿಯಾಗಿವೆ.[೧೭೫]

ಇಜೇರಿ :-

ಈ ಊರು ಜೇವರ್ಗಿಯಿಂದ ನೈಋತ್ಯಕ್ಕೆ ೨೦ ಕಿ. ಮೀ ದೂರದಲ್ಲಿದ್ದು, ಪ್ರಾಗೈತಿಹಾಸಿಕ ಮಹತ್ವದ ಶಿಲಾವೃತ್ತಗಳನ್ನು ಹೊಂದಿದೆ. ಪ್ರಾಚೀನ ಶಾಸನಗಳಲ್ಲಿ 'ಇರಜೇರಿ' ಎಂದೇ ಉಲ್ಲೇಖಿತ ಗೊಂಡಿರುವ ಇದು ಹಿಂದೆ ನರಿಯಂಬೊಳೆ -೭೦ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮದಿತ್ಯನ ಆಳ್ವಿಕೆಗೆ ಸೇರಿದ್ದು. ಅಲವಮಲ್ಲದೇವನು ಶಂಕರನಾರಾಯಣ ದೇವರ ಸೇವೆಗೆ ಹಾಗೂ ಮಠಕ್ಕೆ ಸೇರಿದ ವಿದ್ಯಾರ್ಥಿಗಳ ಊಟ, ವಸತಿಗಳಿಗೆಂದು ಮಾಣಿಕೇಶ್ವರದ ಕೋಲಲ್ಲಿ ೩೦೦ ಮತ್ತರು ಹೊಲ, ಎರಡು ಮತ್ತರು ತೋಟ, ೫ ನಿವೇಶನ, ಒಂದು ಬಣಂಬೆ ನಿವೇಶನ ಹಾಗೂ ಒಂದು ಗಾಣವನ್ನು ಪರಮೇಶ್ವರ ದತ್ತಿಯಾಗಿ ಸ್ಥಾನಾಚಾರ್ಯ ಮಲ್ಲಿಕಾರ್ಜುನ ಪಂಡಿತರಿಗೆ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ.[೧೭೬]

ಎತ್ತಿಪೋತ ಜಲಪಾತ :-

ಈ ಜಲಪಾತವು ಚಿಂಚೋಳಿಯಿಂದ ಪೂರ್ವಕ್ಕೆ ಕೊಂಚಾವರಂ ಘಟ್ಟ ಶ್ರೇಣಿಯಲ್ಲಿರುವ ಒಂಟಿಚಿಂತದಿಂದ ಒಂದು ಕಿ.ಮೀ. ನಡೆದು ಹೋದರೆ ಸಿಗುತ್ತದೆ. ತೆಲುಗಿನಲ್ಲಿ ಎತಿಪೋತ ಎಂದರೆ ಮೇಲಿಂದ ಬೀಳುವುದು ಎಂದರ್ಥ. ಇಲ್ಲಿ ದಟ್ಟವಾದ ಅರಣ್ಯದ ನಡುವೆ ಜೋರಾಗಿ ಹರಿದು ಬರುವ ನೀರು ರಭಸದಿಂದ ಕೆಳಗೆ ಬೀಳುತ್ತದೆ. ಮಳೆಗಾಲದಲ್ಲಿ ತುಂಬಿ ಹರಿವ ಈ ಜಲಪಾತ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಆದರೆ ಈ ಸ್ಥಳವನ್ನು ತಲುಪುವುದೇ ಕಷ್ಟದ ಕೆಲಸವಾಗಿದ್ದು. ಇದು ಪ್ರವಾಸೋದ್ಯಮ ಕೇಂದ್ರವಾಗಿ ಬೆಳೆಯಲು ಪೂರಕವಾದ ಸೌಕರ್ಯಗಳು ಆಗಬೇಕಾಗಿದೆ.[೧೭೭]

ಕರ್ಜಗಿ :-

ಈ ಊರು ಅಫಜಲಪುರದಿಂದ ವಾಯವ್ಯಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಸಾಯಬ್ಬೆಯ ಕರಂಜಿಗೆ' ಎಂದೇ ಉಲ್ಲೇಖಿತಗೊಂಡುರವ ಈ ಊರು, ಹಿಂದೆ ಅಲಂದಾಪುರ-೧೦೦೦ಕ್ಕೆ ಸೇರಿದ ಮಹಾ ಮಣಿಯೂರು-೧೨ ಕಂಪಣಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಒಂದು ಶಾಸನ ವರದಿಯಾಗಿದೆ.[೧೭೮]

ಕಮ್ಮರವಾಡಿ :-

ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಕಮರಡಿ' ಎಂದೇ ದಾಖಲಾಗಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಹಾಗೂ ದೇವಗಿರಿ ಯಾದವರ ಕಾಲಕ್ಕೆ ಸೇರಿದ ಒಂದೊಂದು ಶಾಸನಗಳು ವರದಿಯಾಗಿವೆ.[೧೭೯]

ಕುಳಗೇರಿ :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೫೫ ಕಿ. ಮೀ., ಶಹಾಪುರದಿಂದ ೪೦ ಕಿ. ಮೀ., ಸಿಂಧಗಿಯಿಂದ ಆಗ್ನೇಯಕ್ಕೆ ೪೨ ಕಿ.ಮೀ. ದೂರದಲ್ಲಿ, ಸಿಂಧಗಿ ಶಹಾಪುರ ರಸ್ತೆಯಲ್ಲಿ ನಾರಹಳ್ಳಿ ತಾಂಡ ಅಡ್ಡರಸ್ತೆಯಿಂದ ನೈಋತ್ಯಕ್ಕೆ ಸುಮಾರು ನಾಲ್ಕು ಕಿ. ಮೀ. ಅಂತರದಲ್ಲಿರುವ ಚಾರಿತ್ರಿಕ ಊರಾಗಿದೆ. ಪೌರಾಣಿಕವಾಗಿ ಚಂದ್ರಹಾಸನ ರಾಜಧಾನಿ ಕುಂತಳಪುರ ಇದೆಂಬ ನಂಬಿಕೆ ಸ್ಥಳೀಕರಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಕುಳಿಲಂಗೆರೆ, ಕುಣಿಲಂಗೆರೆ, ಸರ್ವನಮಸ್ಯದ ಆಗ್ರಹಾರ ಕುಣಿಲಂಗೆರೆ, ಭತ್ತಾಗ್ರಾಮ ಕುಣಿಲಂಗೆರೆ ಎಂದೇ ಉಲ್ಲೇಖಿತಗೊಂಡಿದ್ದು, ಪ್ರಮುಖ ವಿದ್ಯಾಕೇಂದ್ರ ಹಾಗೂ ಮಹಾಘಟಿಕಾಸ್ಥಾನವಾಗಿದ್ದ ಈ ಊರು. ಹಿಂದೆ ಹಗರಟಗಿ – ೩೦೦ ಕ್ಕೆ ಸೇರಿತ್ತು.[೧೮೦]

ಕೊಂಡಗುಳಿ :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೬೦ ಕಿ. ಮೀ. ದೂರದಲ್ಲಿ ಶಹಾಪುರ-ಸಿಂಧಗಿ ರಸ್ತೆಯಲ್ಲಿ, ಯಂಕಂಚಿಯಿಂದ ನಾಲ್ಕು ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಊರಾಗಿದೆ. ಬಸವಪೂರ್ವ ಯುಗದ ಶಿವಶರಣ ವೀರಶೈವ ಕವಿ ಕೇಶಿರಾಜನು ಈ ಊರಿನವನೆಂಬ ಅಭಿಪ್ರಾಯವಿದೆ. ಆದರೆ ಡೋಣಿ ಕೊಂಡಗುಳಿಯೇ (ಸಿಂಧಗಿ ತಾ) ಕೇಶಿರಾಜನ ಊರೆಂಬುದು ಶಾಸನಾಧಾರಗಳಿಂದ ಸ್ಥಿರಪಟ್ಟಿದೆ. ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೧೬ರ ಶಾಸನವು ಇಲ್ಲಿಯ ಪ್ರಾಚೀನ ಸೋಮೇಶ್ವರ ದೇವಾಲಯದ ನವರಂಗದಲ್ಲಿದ್ದು, ಈ ಶಾಸನದಿಂದ ಹಲವಾರು ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಈ ಶಾಸನದಲ್ಲಿ 'ಚಿಕ್ಕಕೊಂಡಗುಳಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಹಗರಟಗಿ ೩೦೦ಕ್ಕೆ ಸೇರಿದ್ದು ಸಾಮಂತ ಬೈಸರಸ, ಹಂದಿಯರಸರು ಹಗರಟಗಿ-೩೦೦ ಅನ್ನು ಆಳುತ್ತಿದ್ದಾಗ, ಚಿಕ್ಕ ಕೊಂಡಗುಳಿಯ ಪ್ರಭು ಬಿಲ್ಲರಸನು ಅಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ, ದೇವರ ಸೇವೆಗೆ ಹಾಗೂ ಅದರ ಮಠದ ನಿರ್ವಹಣೆಗೆಂದು ೪೦ ಮತ್ತರು ಭೂಮಿ, ಒಂದು ಕೇರಿಯ ಆದಾಯ, ತಿಪ್ಪೆಸುಂಕದಲ್ಲೊಂದು ಭಾಗ, ಮಾರಾಟ ಸುಂಕ, ದಾನ ಬಿಟ್ಟ ವಿಷಯಗಳನ್ನು ತಿಳಿಸುತ್ತದೆ.[೧೮೧]

ಕೋಗನೂರು :-

ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೩೫ ಕಿ. ಮೀ. ದೂರದಲ್ಲಿ ಸ್ಟೇಷನ್ ಗಾಣಗಾಪುರದಿಂದ ನೈಋತ್ಯಕ್ಕೆ ಬಹಳ ಸಮೀಪದಲ್ಲಿದೆ, ಕಲ್ಯಾಣದ ಕ್ರಾಂತಿಯ ನಂತರ ಕೋಗಿಲ ಮಾರಾಯ ಹಾಗೂ ಅವನ ಹೆಂಡತಿ ಲಕ್ಷ್ಮೀಬಾಯಿ ಕಲ್ಯಾಣದಿಂದ ಇಲ್ಲಿಗೆ ಬಂದು ನೆಲೆಸಿ ಶರಣರ ವಚನಗಳನ್ನು ಸಾರುವ ಕಾಯಕದಲ್ಲಿ ತೊಡಗಿದ್ದ ಕಾರಣ ಇದಕ್ಕೆ ಕೋಗಿಲಮಾರಾಯ ಪಟ್ಟಣ ಎಂಬ ಹೆಸರು ಬಂದು ಮುಂದೆ ಅದೇ ಕೋಗನೂರು ಕಾಯಕದಲ್ಲಿ ತೊಡಗಿದ್ದ ಕಾರಣ ಇದಕ್ಕೆ ಕೋಗಿಲಮಾರಾಯ ಪಟ್ಟಣ ಎಂಬ ಹೆಸರು ಬಂದು ಮುಂದೆ ಅದೇ ಕೋಗನೂರು ಆಯಿತೆಂಬ ಐತಿಹ್ಯವಿದೆ.[೧೮೨]

ಕೋಳಕೂರು :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಉತ್ತರಕ್ಕೆ ಎಂಟು ಕಿ. ಮೀ. ದೂರದಲ್ಲಿ ಭೀಮಾನದಿಯ ಬಲದಂಡೆ ಮೇಲಿರುವ ಚಾರಿತ್ರಿಕ ಊರಾಗಿದೆ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ೧೧೮೦ ಶಾಸನ ಮಹಾಮಂಡಳೇಶ್ವರ ದೇವರಸರು ದಾನ ಬಿಟ್ಟ ಬಗ್ಗೆ ಹೇಳುತ್ತ ಸಾಂದರ್ಭಿಕವಾಗಿ ಮೂಲಸ್ಥಾನ, ವಿನಾಯಕ, ರೇವಣೇಶ್ವರ ಹಾಗೂ ಗ್ರಾಮೇಶ್ವರ ದೇವರುಗಳನ್ನು ಹೆಸರಿಸಿದರೆ, ಇನ್ನೊಂದು ಶಾಸನ (೧೨ನೇ ಶತಮಾನ) ಜಿನಾಲಯವೊಂದರ ಬಗ್ಗೆ ಹೇಳುತ್ತದೆ. ಊರಿಂದ ನಾಲ್ಕು ಕಿ. ಮೀ. ದೂರದಲ್ಲಿರುವ ಜೋಗಿ ಕೊಳ್ಳದಲ್ಲಿ ಶಾಸನವಿರುವ ಸುಮಾರು ನಾಲ್ಕು ಅಡಿಯ ಮಾಸ್ತಿ ಕಲ್ಲಿನಲ್ಲಿ ನಿಧನ ಹೊಂದಿದ ಪತಿಯ ಶವವಿರುವ ಚಿತೆಯನ್ನು ಪ್ರವೇಶಿಸಲು ಸಿದ್ಧಳಾಗಿ ಎತ್ತರದ ವೇದಿಕೆಯ ಮೇಲೆ, ಮುಂಚಾಚಿದ ಬಲಗೈಯಲ್ಲಿ ಮಾದಲಿಕ ಹಣ್ಣನ್ನುಹಿಡಿದುಕೊಂಡು ನಿಂತಿರುವ ಸತಿಯ ವಿಶಿಷ್ಟ ಕೆತ್ತನೆಯಿದ್ದು ಎತಿನ ಬಲಗೈಯನ್ನುಳ್ಳ ಸ್ತಂಭದ ಕೆತ್ತನೆಯಿದೆ. ಮಾಸ್ತಿಕಲ್ಲಿನ ಮೇಲೆ ಸುಮಾರು ೧೫೯೧ರ ಶಾಸನವಿದ್ದು. ಸತಿ ಹೋದ ಜಾಯನಬ್ಬೆ ಅರಸಿಯ ಬಗ್ಗೆ ಉಲ್ಲೇಖಿಸುತ್ತದೆ.[೧೮೩]

ಗಂವ್ಹಾರ :-

ತಾಲೂಕು ಕೇಂದ್ರವಾದ ಜೇವರ್ಗಿಯಿಂದ ದಕ್ಷಿಣಕ್ಕೆ ೨೦ ಕಿ. ಮೀ., ಜೇವರ್ಗಿ ಶಹಾಪುರ ರಸ್ತೆಯ ಚಿಗರಹಳ್ಳಿ ಕ್ರಾಸ್‌ನಿಂದ ಪೂರ್ವಕ್ಕೆ ಸುಮಾರು ನಾಲ್ಕು ಕಿ. ಮೀ. ದೂರದಲ್ಲಿದೆ. ಶಾಸನಗಳಲ್ಲಿ 'ಗವಹರ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಆಗ್ರಹಾರವಾಗಿದ್ದು, ಮಹಾಜನಗಳ ಆಡಳಿತದಲ್ಲಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಮಹಾಂಡಳೇಶ್ವರ ಅಲ್ಲಹುಲಿ ದೇವರಸಹ ಉಲ್ಲೇಖವನ್ನು ಹೊಂದಿರುವ ಶಾಸನವು ವರದಿಯಾಗಿದೆ. ಇಲ್ಲಿಯ ಅಮೃತೇಶ್ವರ ಗುಡಿಯಲ್ಲಿರುವ ಇದೊಂದು ದಾನ ಶಾಸನವಾಗಿದ್ದು ವಿಷಯ ಅಸ್ಪಷ್ಟವಾಗಿದೆ.[೧೮೪] ಶಾಸನದಲ್ಲಿ ಬಾಲಶಿಕ್ಷೆ ಉಲ್ಲೇಖವಿರುವುದರಿಂದ ವಿದ್ಯಾದಾನಕ್ಕಾಗಿ ನೀಡಿದ ದತ್ತಿ ಇದೆಂಬ ಅಂಶ ಗೊತ್ತಾಗುತ್ತದೆ.

ದುತ್ತರಗಾಂವ ಶಾಸನ :-

ತಾಲೂಕು ಕೇಂದ್ರವಾದ ಆಳಂದಿಂದ ದಕ್ಷಿಣಕ್ಕೆ ಸುಮಾರು ೨೦ ಕಿ. ಮೀ. ಅಂತರರದಲ್ಲಿರುವ ಈ ಗ್ರಾಮವು ಪುರಾತನ ಗ್ರಾಮವಾಗಿದೆ. ಈ ಊರಿಗೆ ಹಿಂದೆ 'ಲಿಂಗಾಪುರ' ಎಂದು ಹೆಸರು ಇತ್ತೆಂದು ತಿಳಿದು ಬರುತ್ತದೆ. ಸುಮಾರು ೧೨ನೇ ಶತಮಾನದಲ್ಲಿ ಇಲ್ಲಿ ಒಬ್ಬ ಶರಣರು ಬಾಳಿ ಬದುಕಿದ್ದರು. ಅವರ ಹೆಸರು ವರೇಶ ಶರಣರು. ದುತ್ತರಗಾಂವೆಯ ಊರ

ಮಧ್ಯದಲ್ಲಿರುವ ಭೋಗೇಶ್ವರ ದೇವಾಲಯದ ಗುಡಿಯ ಪಕ್ಕದ ಕಟ್ಟೆಯ ಮೇಲೆ ಶಿಲಾ ಶಾಸನವಿದೆ. ಭಾಷೆ/ಲಿಪಿ ಕನ್ನಡ. ಕಾಲ೩೧-೫-೧೧೧೯, ಆಳಿಕೆ / ಅರಸು: ಆರನೆಯ ವಿಕ್ರಮಾದಿತ್ಯ ಶಾಸನ ವಿಷಯ : ಈ ಶಾಸನವು ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಬಿರುದಾಂಕಿತನಾದ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ರಚಿತಗೊಂಡಿದ್ದು ಇದರ ಕಾಲವು ಚಾಳುಕ್ಯ ವಿಕ್ರಮವರ್ಷ ೩೩ನೆಯ ಸರ್ವಧಾರೆ ಸಂವತ್ಸರದ ಜೇಷ್ಠದಮವಾಸೆ ಬೃಹಸ್ಪತಿವಾರ ಸೂರ್ಯಗ್ರಹಣ ಎನ್ನುವ ಮಿತಿಯು೩೧-೫-೧೧೧೯ ದಿನಾಂಕಕ್ಕೆ ಸರಿ ಹೊಂದುತ್ತದೆ.[೧೮೫]

ಗುಲಬರ್ಗಾ(ಕಲ್ಬುರ್ಗಿ) :-

ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಉತ್ತರಕ್ಕೆ ರಸ್ತೆ ಮಾರ್ಗವಾಗಿ ೬೧೩ ಕಿ. ಮೀ., ರೈಲು ಮಾರ್ಗವಾಗಿ ೬೪೩ಕಿ. ಮೀ ದೂರದಲ್ಲಿರುವ ಚಾರಿತ್ರಿಕ ಜಿಲ್ಲಾ ಹಾಗೂ ವಿಭಾಗಿಯ ಕೇಂದ್ರವಾಗಿದ್ದು, ರಾಜ್ಯಹೆದ್ದಾರಿ ಸಂಖ್ಯೆ ಹತ್ತು ಹಾಗು ಹದಿನೆಂಟು ಇದರ ಮೂಲಕ ಹಾದುಹೋಗುತ್ತವೆ. ಶಾಸನಗಳಲ್ಲಿ ಕಲಂಬರಿಗೆ, ಕಲುಂಬರಿಗೆ, ಕಲುಬರಗೆ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ-೧೦೦೦ಕ್ಕೆ ಸೇರಿದ ಗೊಂಕ-೧೨೦ ಕಂಪಣಕ್ಕೆ ಒಳಪಟ್ಟಿದ್ದ ಒಂದು ಸಣ್ಣ ಪಟ್ಟಣವಾಗಿತ್ತು. ೧೩೪೭ರಿಂದ ೧೪೨೪ರವರೆಗೆ ಬಹುಮನಿ ಸಾಮ್ರಾಜ್ಯದ ರಾಜಧಾನಿಯಾಗಿದ್ದು, ಮುಂದೆ ೧೫೩೭ರ ವೇಳೆಗೆ ಕಲುಬರಿಗಿ ನಾಡಾಗಿ ರೂಪಿತಗೊಂಡ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಇದರಿಂದ ಗುಲಬರ್ಗಾದ ಪ್ರಾಚೀನ ರೂಪ ಕಲುಂಬರಿಗೆಯಾಗಿದ್ದು ಇದರ ನಿಷ್ಪತ್ತಿಯನ್ನು ಜನಾಂಗೀಯ ನೆಲೆಯಲ್ಲಿ ಗುರುತಿಸಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಅದರ ಮೂಲವನ್ನು ನಿಸರ್ಗದ ನೆಲೆಯಲ್ಲಿ ಗುರುತಿಸಬೇಕೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. 'ಗುಲಬರ್ಗಾ' ನಾಮಪದವು ಮುಸ್ಲಿಂ ಆಡಳಿತದಲ್ಲಿ ಕಲ್ಬುರ್ಗಿಗೆ ಪರ್ಯಾಯವಾಗಿ ಬಳಕೆಗೆ ಬಂದಿದ್ದು ಗುಲಚಂದನಿಗಾಗಲಿ, ಗುಲಾಬಿ ಹೂವಿಗಾಗಲಿ ಇದರ (ಗುಲಬರ್ಗಾ) ನಿಷ್ಪತ್ತಿಯನ್ನು ಗುರುತಿಸುವುದು ಆಧಾರರಹಿತವೆನಿಸುತ್ತದೆ. ಹೈದರಾಬಾದಿನ ನಿಜಾಮರ ಸರ್ಕಾರ ೧೮೬೩ರಲ್ಲಿ ಜಿಲ್ಲಾ ರಚನೆ (ಜಿಲ್ಲಾ ಬಂದಿ)ಯಲ್ಲಿ ತೊಡಗಿದಾಗ ಶೋರಾಪುರ (ಸುರಪುರ)ವು ಒಂಭತ್ತು ತಾಲೂಕುಗಳನ್ನೊಳಗೊಂಡ ಜಿಲ್ಲಾ ಕೇಂದ್ರವಾಗಿ ರೂಪಿತಗೊಂಡಿತ್ತು.[೧೮೬] ಅದರಲ್ಲಿ ಗುಲಬರ್ಗಾ ಕೂಡ ಒಂದು ತಾಲೂಕಾಗಿತ್ತು. ಆದರೆ ಮುಂದೆ ೧೮೭೩ರಲ್ಲಿ ಏಳು ತಾಲೂಕುಗಳನ್ನೊಳಗೊಂಡ ಪ್ರತ್ಯೇಕ ಜಿಲ್ಲೆಯಾಗಿ ಗುಲಬರ್ಗಾ ರೂಪಿತಗೊಂಡಿತು. ೧೯೫೬ರಲ್ಲಿ ಇದು ವಿಭಾಗೀಯ ಕೇಂದ್ರವೂ ಆಯಿತು.

ಗೊಬ್ಬೂರು(ಬಿ) :-

ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೩೪ ಕಿ. ಮೀ. ಗುಲಬರ್ಗಾದಿಂದ ನೈಋತ್ಯಕ್ಕೆ ೨೧ ಕಿ. ಮೀ ದೂರದಲ್ಲಿ ಗುಲಬರ್ಗಾ ಅಫಜಲಪುರ ರಸ್ತೆಯಲ್ಲಿರುವ ಚಾರಿತ್ರಿಕ ಊರಾಗಿದೆ. ಶಾಸನಗಳಲ್ಲಿ ಗೊಬ್ಬೂರು, ಸಂತೆಯ ಗೊಬ್ಬೂರು ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ ೧೦೦೦ಕ್ಕೆ ಸೇರಿದ ಗೊಂಕನಾಡೊಳಗಿದ್ದು ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮೂರು ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದ್ದು ಉಳಿದವು ಕಳಚೂರಿ ಅರಸರ ಕಾಲದ್ದಾಗಿವೆ.[೧೮೭]

ಚಿಣಮಗೇರಿ :-

ಈ ಊರು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಪಶ್ಚಿಮಕ್ಕೆ ೨೬ ಕಿ. ಮೀ. ಚೌಡಾಪುರ ಕ್ರಾಸ್‌ನಿಂದ ಸುಮಾರು ಎರಡೂವರೆ ಕಿ. ಮೀ. ದೂರದಲ್ಲಿ, ಚಿನ್ಮಳ್ಳಿ ರಸ್ತೆಯ ಬದಿಯಲ್ಲಿರುವ ಊರಾಗಿದೆ. ಶಾಸನಗಳಲ್ಲಿ 'ಚಿಣಬಗೇರ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅಲಂದೆ ೧೦೦೦ಕ್ಕೆ ಸೇರಿದ ಅತನೂರು-೮೦ ಕಂಪಣಕ್ಕೆ ಸೇರಿತು.[೧೮೮]

ಚಿತ್ತಾಪುರ :-

ಈ ಊರು ಹಿಂದೆ ೫೦ ಹಳ್ಳಿಗಳನ್ನು ಹೊಂದಿದ್ದ ಪೈಗಾ ಜಾಗೀರು ಕೇಂದ್ರವಾಗಿತ್ತು. ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ. ಚಿತ್ತಾಪುರ ರೈಲು ನಿಲ್ದಾಣದ ಮುಂದೆ ಇರುವ ಈ ಶಾಸನ, ರವಿದೇರಸ ಹಾಗೂ ಇತರೆ ಮೂವರು ಅಧಿಕಾರಿಗಳು ಪಾಳು ಬಿದ್ದಿದ್ದ ಘಟಾಂತಕಿ ಬಸದಿಯನ್ನು ದುರಸ್ಥಿ ಮಾಡಿ, ಆದಿ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಅಂಶವನ್ನು ತಿಳಿಸುತ್ತದೆ. ಊರಲ್ಲಿ ಚಿತಾವಲಿ ದರ್ಗಾದಿಂದಾಗಿ ಪ್ರಸಿದ್ಧವಾಗಿದೆ. ಈ ಚಿತಾವಲಿ ದರ್ಗಾದಿಂದಾಗಿ ಈ ತಾಲುಕಿಗೆ ಚಿತ್ತಾಪುರ ಎಂಬ ಹೆಸರು ಬಂದಿದೆ.[೧೮೯]

ಚಿನ್ನಳ್ಳಿ :-

ತಾಲೂಕು ಕೇಂದ್ರವಾದ ಅಫಜಲ್ ಪುರದಿಂದ ಆಗ್ನೇಯಕ್ಕೆ ೪೨ ಕಿ.ಮೀ. ಗುಲಬರ್ಗಾದಿಂದ ನೈಋತ್ಯಕ್ಕೆ ೫೩ ಕಿ. ಮೀ. ದೂರದಲ್ಲಿ ಭೀಮಾನದಿಯ ಎಡದಂಡೆಯ ಮೇಲಿರುವ ಮಹತ್ವದ ಧಾರ್ಮಿಕ ಕೇಂದ್ರವಾಗಿದೆ. ಶಾಸನಗಳಲ್ಲಿ 'ಚಿಲ್ಲಮಳೆ', 'ಚಿಲ್ಲಮೆಳೆ' ಎಂದೇ ಉಲ್ಲೇಖಗೊಂಡಿರುವ ಈ ಊರು ಹಿಂದೆ ಅಭಿನವ ಕೈಲಾಸವಾಗಿದ್ದು, ಶ್ರೀ ಶೈಲ ಮಲ್ಲಿಕಾರ್ಜುನನ ನಿವಾಸ ಸ್ಥಾನವೆಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಹಿಂದೆ ಅತ್ತಿನೂರು -೮ಂಕ್ಕೆ ಸೇರಿದ್ದ ಈ ಊರಿನಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ.[೧೯೦]

ಜೀವಣಗಿ :-

ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಈಶಾನ್ಯಕ್ಕೆ ೩೦ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಜೀವನಿಗೆ' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ ಈ ವರೆಗೆ ಮೂರು ಶಾಸನಗಳು ವರದಿಯಾಗಿವೆ.[೧೯೧]

ಹೊದಲ್ ಶಾಸನಗಳು :-

ಈ ಗ್ರಾಮವು ತಾಲ್ಲೂಕು ಕೇಂದ್ರವಾದ ಆಳಂದದಿಂದ ಪೂರ್ವಕ್ಕೆ ಕಡಗಂಚಿ ಮಾರ್ಗವಾಗಿ ೪೦ ಕಿ. ಮೀ. ಗುಲಬರ್ಗಾದಿಂದ ಉತ್ತರಕ್ಕೆ ಚಿಂಚನಸೂರ ಮಾರ್ಗವಾಗಿ ೩೨ ಕಿ. ಮೀ. ದೂರದಲ್ಲಿ ಬೆಣ್ಣೆತೊರೆ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಪೊಡಲ್', 'ಹೊಡಲ' ಎಂದೇ ಉಲ್ಲೇಖಿತಗೊಂಡಿರುವ ಈ ಸ್ಥಳವು ಹಿಂದೆ ಗೊಂಕ ೧೨೦ಕ್ಕೆ ಸೇರಿತ್ತು. ಇಲ್ಲಿ ಏಳು ಶಾಸನಗಳು ಕಂಡು ಬರುತ್ತವೆ. ಇವುಗಳಲ್ಲಿ ಕಳಚೂರಿಗಳ ನಾಲ್ಕು ಶಾಸನಗಳು. ಕಲ್ಯಾಣದ ಚಾಲುಕ್ಯರ ಎರಡು ಹಾಗೂ ದೇವಗಿರಿಯ ಸೇವುಣರ ಕಾಲದ ಒಂದು ಶಾಸನಗಳು ಸೇರಿವೆ ಆದರೂ ಇವೆಲ್ಲವು ಸುವ್ಯವಸ್ಥೆಯಲ್ಲಿಲ್ಲ ಆದುದ್ದರಿಂದ ಎರಡು ಶಾಸನಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಶಾಸನ ಹೊಡಲ ಗ್ರಾಮದ

ರಾಮಲಿಂಗ ದೇವಾಲಯದ ಒಳಗೆ ಕಾಣಬಹುದು. ಕಾಲ, ಸಂಕಮದೇವರ ಆಳ್ವಿಕೆಯ ೫ನೇಯ ವರುಷ ಸೂರ್ಯ-ಚಂದ್ರ-ಕುಳಿತ ಋಷಿ- ಧೂಪದಯ್ಯ – ಆಕಳು –ಕರು - ಸೂರ್ಯ ಇವುಗಳನ್ನು ಶಾಸನದಲ್ಲಿ ಕೆತ್ತಲಾಗಿದೆ.[೮೧]ಈ ಶಾಸನವು ದುಗ್ಗಣ ಹಾಗೂ ಅವನ ಮಗನಾದ ಬೊಮ್ಮರಸ ಹೊಡಲದ ಹಬ್ಬೇಶ್ವರ ರಾಮನಾಥ ಹಾಗೂ ಕೇಶವದೇವರಿಗಳಿಗೆಂದು ಭವ್ಯವಾದ ತ್ರಿಕೂಟದೇವಾಲಯವನ್ನು ನಿರ್ಮಿಸಿದ ವಿಷಯವನ್ನು ಉಲ್ಲೇಖಿಸುತ್ತ ಆ ದೇವರುಗಳಿಗೆ ಮಹಾ ಮಂಡಳೇಶ್ವರರಾದ ವೀರಗೊಂಕರಸ ಹಾಗೂ ಮಲ್ಲಿದೇವರಸರು ೨೦ ಮತ್ತರು ಭೂಮಿಯನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ತೆಂಗಳಿ :-

ಈ ಊರು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಈಶಾನ್ಯಕ್ಕೆ ಸುಮಾರು ೧೫ ಕಿ. ಮೀ. ದೂರದಲ್ಲಿ ಬೆಣ್ಣೆ ತೊರೆಯ ಎಡದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ.ಶಾಸನಗಳಲ್ಲಿ 'ಸರ್ವ ನಮಸ್ಯದಗ್ರಹಾರ ತೆಂಗುಳಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಎಪ್ಪತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ 'ಖಾಂಡವ ಮಂಡಲ' ಎಂದೇ ಈ ಪ್ರದೇಶವನ್ನು ಕರೆದಿರುವುದು ಗಮನಾರ್ಹವಾಗಿದೆ.[೧೯೨]

ದಂಡೋತಿ :-

ಈ ಊರು ತಾಲೂಕು ಕೇಂದ್ರವಾದ ಚಿತ್ತಾಪುರದಿಮದ ವಾಯವ್ಯಕ್ಕೆ ೧೨ ಕಿ. ಮೀ. ದೂರದಲ್ಲಿದೆ. ನೆರೆಯ ತಂಗಳಿಯ ೧೨ನೇ ಶತಮಾನದ ಶಾಸನದಲ್ಲಿ 'ದಂಡತ್ತಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿರುವ ಪ್ರಾಚೀನ ಜೈನ ಬಸದಿಯಿಂದಾಗಿ ಇದು ಮಹತ್ವ ಪಡೆದಿದೆ. ಪೂರ್ವಾಭಿಮುಖವಾಗಿರುವ ಈ ಬಸದಿಯು ತ್ರಿಕೂಟವಾಗಿದ್ದು ಪ್ರಧಾನ ಗರ್ಭಗೃಹಕಷ್ಟೇ ಅಂತರಾಳವಿದೆ. ಗರ್ಭಗೃಹದಲ್ಲಿ ಸ್ಥನಕ ಭಂಗಿಯಲ್ಲಿರುವ ಆಳೆತ್ತರದ ಪಾರ್ಶ್ವನಾಥನ ಭವ್ಯ ಶಿಲ್ಪವಿದ್ದು, ನವರಂ‌ಗದಲ್ಲಿ ತ್ರಿದಳ ಕಮಲದ ಛತ್ತಿದ್ದು ಭಾಗಶಃ ಹಾಳಾಗಿದೆ.[೧೯೩]

ದಿಗ್ಗಾಂವಿ :-

ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ೧೦ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ದೀರ್ಘವಿಗೆ', 'ಅಗ್ರಹಾರ ದೀರ್ಘವಿಗೆ', 'ದೀಗ್ಘವಿಗೆ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ ೩೦೦ ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿತ್ತು. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಅಗಸಿ ಬಳಿ ಇರುವ ಶಾಸನವು ಕಲ್ಯಾಣದ ಚಾಲುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲದ್ದಾಗಿದ್ದು, ಮಹಾಮಂಡಳೇಶ್ವರ ಬಮ್ಮಯ್ಯರಸ ಹಾಗೂ ಇತರರು ಸ್ವಯಂಭು ಸೋಮೇಶ್ವರ ದೇವರ ಪೂಜಾ ವಿಧಿಗೆಂದು ೧೦೫೩ರಲ್ಲಿ ೩೦೦ ಮತ್ತರು ಹೊಲ, ಆರು ಮತ್ತರು ತೋಟ, ಆರು ಮನೆ ನಿವೇಶನ ಹಾಗೂ ಎರಡು ಗಾಣಗಳನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ.[೧೯೪]

ನರಬೋಳಿ :-

ತಾಲುಕು ಕೇಂದ್ರವಾದ ಜೇವರ್ಗಿಯಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿ ಭೀಮಾ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ.ಶಾಸನಗಳಲ್ಲಿ 'ನರಿಯಂಬೊಳೆ೭೦''ನರಿಯಂಬೊಳ-೭೦', 'ನರಿಯುಂಬೊಳೆ-೭೦' ಎಂದೇ ಉಲ್ಲೇಖಿತಗೊಂಡಿರುವ ಈ ನರಬೋಳಿ ಊರು ಹಿಂದೆ ಎಪ್ಪತ್ತು ಹಳ್ಳಿಗಳ ಆಡಳಿತ ಘಟಕವಾಗಿತ್ತು.[೧೯೫]

ನಿಪ್ಪಾಣಿ :-

ಈ ಊರು ಚಿತ್ತಾಪುರದಿಮದ ವಾಯವ್ಯಕ್ಕೆ ಸುಮಾರು ೪೦ ಕಿ. ಮೀ. ಗುಲಬರ್ಗಾದಿಮದ ಈಶಾನ್ಯಕ್ಕೆ ೨೨ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಶಾಸನಗಳಲ್ಲಿ 'ಸುಪಾಣಿ' ಎಂದೇ ದಾಖಲಾಗಿರುವ ಈ ಊರಿಂದ ಜಗದೇಕಮಲ್ಲನ ಕಾಲಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ.[೧೯೬]

ಬಣಬಿ :-

ಚಿತ್ತಾಪುರದಿಮದ ವಾಯವ್ಯಕ್ಕೆ ೩೨ ಕಿ.ಮೀ. ಗುಲಬರ್ಗಾದಿಮದ ಈಶಾನ್ಯಕ್ಕೆ ೩೧ ಕಿ. ಮೀ. ದೂರದಲ್ಲಿ ಬೆಣ್ಣೆ ತೊರೆಯ ಎಡದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ ಶಾಸನಗಳಲ್ಲಿ 'ಭಣಮಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸೂಗೂರು-೭೦ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ಒಂದು ಶಾಸನ ವರದಿಯಾಗಿದೆ.[೧೯೭]

ಬಂದರವಾಡ :-

ಈ ಊರು ಅಫಜಲ್ ಪುರದಿಂದ ಪೂರ್ವಕ್ಕೆ ೩೦ ಕಿ.ಮೀ. ಗುಲಬರ್ಗಾದಿಂದ ನೈಋತ್ಯಕ್ಕೆ ೪೦ ಕಿ. ಮೀ. ದೂರದಲ್ಲಿ ಬೆಣ್ಣೆ ತೊರೆಯ ಎಡದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ. ಶಾಸನಗಳಲ್ಲಿ 'ಭಣಮಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸೂಗೂರು -೭೦ಕ್ಕೆ ಸೇರಿತ್ತು.[೧೯೮]

ಬಿಜ್ಜನಹಳ್ಳಿ :-

ಸೇಡಂನಿಂದ ವಾಯುವ್ಯಕ್ಕೆ ೧೨ ಕಿ. ಮೀ. ಮಳಖೇಡದಿಂದ ಈಶಾನ್ಯಕ್ಕೆ ನಾಲ್ಕು ಕಿ. ಮೀ. ದೂರದಲ್ಲಿ ಕಾಗಿಣಾ ನದಿಯ ಎಡ ದಂಡೆಯ ಮೇಲಿದ್ದು, ಇಲ್ಲಿರುವ ಹರಳಯ್ಯ ಕಲ್ಯಾಣಮ್ಮರ ಚಮ್ಮಾವುಗೆಗಳಿಂದಾಗಿ ಪ್ರಸಿದ್ಧವಾಗಿದೆ. ಶಿವಶರಣಪ್ಪ ಸೂಲಬಣ್ಣವರ್ ಅವರ ಮನೆಯಲ್ಲಿರುವ ಚಮ್ಮಾವುಗೆಯೇ ಬಸವಣ್ಣನವರಿಗೆ ಹರಳಯ್ಯ ದಂಪತಿಗಳು ನೀಡಿದ ಚಮ್ಮಾವುಗೆ ಎಂಬ ನಂಬಿಕೆ ಪ್ರಚಲಿತವಿದ್ದು. ಇಂದು ಆ ಮನೆಯನ್ನೇ ಗುಡಿಯನ್ನಾಗಿ ಮಾಡಿದ್ದಾರೆ. ಈ ಚಮ್ಮಾವುಗೆಗಳನ್ನು ಗಾಜಿನ ಪೆಟ್ಟಿಗೆಯಲ್ಲಿಟ್ಟು ಭಕ್ತರು ಪೂಜಿಸುತ್ತಾರೆ. ಉಳಿದಂತೆ ಊರಲ್ಲಿ ಗವಿ ಸಿದ್ದೇಶ್ವರ, ಬಸವಣ್ಣ, ಮಲ್ಲಿಕಾರ್ಜುನ, ಗಾಜಿನ ಪೆಟ್ಟಿಗೆಯಲ್ಲಿಟ್ಟು ಭಕ್ತರು ಪೂಜಿಸುತ್ತಾರೆ.[೧೯೯]

ಭಂಕೂರು :-

ಚಿತ್ತಾಪುರದಿಂದ ವಾಯುವ್ಯಕ್ಕೆ ೧೮ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದ್ದು, ಇದು ಮರ್ತೂರು ರೈಲು ನಿಲ್ದಾಣದಿಂದ ಪೂರ್ವಕ್ಕೆ ೫ ಕಿ. ಮೀ. ದೂರದಲ್ಲಿದೆ. ಶಾಸನಗಲ್ಲಿ 'ಬಮೂಕೂರು' ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ.[೨೦೦]

ಮಣ್ಣೂರು :-

ಈ ಊರು ತಾಲೂಕು ಕೇಂದ್ರವಾದ ಅಫಜಲ್ಪುರದಿಂದ ವಾಯವ್ಯಕ್ಕೆ ೩೧ ಕಿ. ಮೀ. ದೂರದಲ್ಲಿ ಭೀಮಾನದಿಯ ಎಡ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಧಾರ್ಮಿಕ ಕೇಂದ್ರವಾಗಿದೆ. ಶಾಸನಗಳಲ್ಲಿ ಮಣಿಯೂರು-೧೨ ಎಂದೇ

ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ-೧೦೦೦ಕ್ಕೆ ಸೇರಿದ್ದ ಅಣಂದೂರು ೩೦೦ ಕಂಪಣವಾಗಿದ್ದು ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿದೆ.[೨೦೧]

ಮಾಗಣಗೇರಿ :-

ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೪೫ ಕಿ. ಮೀ. ಸಿಂಧಗಿಯಿಂದ ಆಗ್ನೇಯ ೩೨ ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ'ಮಾಗಿಣಗೆರೆ' ಎಂದು ಉಲ್ಲೇಖಿತಗೊಂಡಿರುವ ಈ ಊರಿಂದ ಈವರಗೆ ಒಂದು ಶಾಸನವರದಿಯಾಗಿದೆ. ಅದು ಬಲಭೀಮರಾಯನ ಗುಡಿಯ ಸಭಾ ಮಂಟಪದಲ್ಲಿ ಸೇರಿರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟರಿಗೆ ಸಂಬಂಧಿಸಿದ ಏಳು ಸಾಲಿನ ಶಾಸನವೊಂದನ್ನು ಪತ್ತೆ ಹಚ್ಚಲಾಗಿದೆ.[೨೦೨]

ಮಾಶ್ಯಾಳ :-

ತಾಲೂಕು ಕೇಂದ್ರವಾದ ಅಫಜಲ್ ಪುರದಿಂದ ವಾಯುವ್ಯಕ್ಕೆ ೨೭ ಕಿ.ಮೀ. ದೂರದಲ್ಲಿರುವ ಗಡಿಗ್ರಾಮವಾಗಿದ್ದು ಕೇವಲ ಆರು ಕಿ. ಮೀ. ಅಂತರದಲ್ಲಿ ಮಹಾರಾಷ್ಟ್ರದ ಗಡಿಯಿದೆ. ಶಾಸನಗಳಲ್ಲಿ 'ಮಾಸಿವಳ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ -೧೦೦೦ಕ್ಕೆ ಒಳಪಟ್ಟಿದ್ದ ಅಣಂದೂರು -೩೦೦ಕ್ಕೆಸೇರಿದ ಸರ್ವನಮಸ್ಯದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಯಾಳಭಾವಿ ತೋಟದ ದೇಗುಲ (ಕೇಶವ)ದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೧೫ರ ಶಾಸನವು ಯುವರಾಜ ಮಲ್ಲಿಕಾರ್ಜುನನು ಅಲಂದೆ-೧೦೦೦ ವನ್ನಾಳುತ್ತಿದ್ದಾಗ ಮನೆವೆರ್ಗಡೆ ದಂಡನಾಯಕ ಗೋವಿಂದಮಯ್ಯನು ಮಾಸಿವಳದಲ್ಲಿ ನಿರ್ಮಿಸಿದ ಮಹಾದೇವ, ಕೇಶವ ಹಾಗೂ ಆದಿತ್ಯ ದೇವರುಗಳ ತ್ರಿಕೂಟ ದೇವಾಲಯದ ಪೂಜಾವಿಧಿಗೆಂದು ಗೋದಾವರಿ - ಬಂಜೇರಾ ಸಂಗಮದ ಕೂಡಲ ತೀರ್ಥದಲ್ಲಿ ಯುವರಾಜನು ಸಯಬ್ಬೆಯ ಕರ್ಜಗಿಯಲ್ಲಿ ಬೆಂಕೊಳ್ವನ ಕೋಲಲ್ಲಿ ೧೦೦ ಮತ್ತರು ಹೊಲ, ಒಂದು ಮತ್ತರು ತೋಟವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ.[೨೦೩]

ಮುಧೋಳ :-

ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯಕ್ಕೆ ೩೨ ಕಿ. ಮೀ. ದೂರದಲ್ಲಿದೆ. ಶಾಸನಗಲ್ಲಿ 'ಮುದವೊಲು' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಇವರೆಗೆ ರಾಷ್ಟ್ರಕೂಟ ಕನ್ನರದೇವನ ಕಾಲಕ್ಕೆ ಸೇರಿದ ಶಾಸನವೊಂದು ವರದಿಯಾಗಿದೆ. ಸುಮಾರು ೧೦ನೇ ಶತಮಾನಕ್ಕೆ ಸೇರಿದ ಈ ಶಾಸನವು ಇಲ್ಲಿಯ ರಾಮಲಿಂಗೇಶ್ವರ ಗುಡಿಯ ಕಂಬವೊಂದರ ಮೇಲಿದೆ.[೨೦೪]

ಯಡ್ರಾಮಿ :-

ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೫೦ ಕಿ.ಮೀ., ಸಿಂಧಗಿಯಿಂದ ಆಗ್ನೇಯಕ್ಕೆ ೩೫ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಶಾಸನಗಳಲ್ಲಿ 'ಎಳರಾವೆ','ಸರ್ವನಮಸ್ಯದ ದಕ್ಷಿಣ ವಾರಾಣಾಸಿ ಎಳರಾಮೆ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಸಗರ -೫೦೦ ಕ್ಕೆ ಸೇರಿದ್ದು ಎಳರಾಮೆ ೫೦ ರ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ.[೨೦೫]

ಹೊನಗುಂಟೆ :-

ಈ ಹೊನಗುಂಟೆ ಗ್ರಾಮದಿಂದ ದಕ್ಷಿಣಕ್ಕೆ ಸುಮಾರು ಎರಡು ಕಿ. ಮೀ. ದೂರದಲ್ಲಿ ಕಾಗಿಣಾ ನದಿಯು ಭೀಮಾ ನದಿಯೊಂದಿಗೆ ಸಂಗಮಿಸುತ್ತಿದ್ದು. ಆ ಸ್ಥಳದಲ್ಲಿ ಸಂಗಮೇಶ್ವರ ದೇವಾಲಯವಿದೆ. ಕಾಗಿಣಾದ ಆಚೆ ದಡದಲ್ಲಿರುವ ಈ ದೇವಾಲಯದ ಲಿಂಗವನ್ನು ಅಗಸ್ತ್ಯ ಋಷಿ ಪ್ರತಿಷ್ಠಾಪಿಸಿದರೆಂಬ ಐತಿಹ್ಯವಿದ್ದು, ಅಗಸ್ತ್ಯ ಆಶ್ರಮವಿದ್ದ ಪವಿತ್ರ ಸ್ಥಳವೆಂಬ ಸ್ಥಳೀಯ ನಂಬಿಕೆಯೂ ಇದೆ. ಶಾಸನಗಳಲ್ಲಿ, 'ಪೊನಗುಂಟೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ೧೨೦ ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿದ್ದು ಇಲ್ಲಿಂದ ಇವರೆಗೆ ಒಂದೇ ಶಾಸನ ವರದಿಯಾಗಿದೆ.[೨೦೬]

ಹಿರೇ ಝಳಕಿ :-

ತಾಲೂಕು ಕೇಂದ್ರವಾದ ಆಳಂದಿಂದ ನೈಋತ್ಯಕ್ಕೆ ೩೨ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಮಾವಿನ ಜಳಕಿ' ಒಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಯಾದವ ಕನ್ನರದೇವರ ಕಾಲಕ್ಕೆ ಸೇರಿದ ೧೨೫೪ಳ ಶಾಸನವು ವರದಿಯಾಗಿದೆ.ಇಲ್ಲಿಯ ಭೋಗೇಶ್ವರ ದೇವಾಲಯದಲ್ಲಿರುವ ಈ ಶಾಸನದಿಂದ ವಿಷಪ್ರಹಾರ ಭೋಗೇಶ್ವರ ದೇವರಿಗೆಂದು ಕಲಿಗೌಡನು[೬೨] ಆರು ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಹಾವು ಕಚ್ಚಿದವರನ್ನು ಇಲ್ಲಿಗೆ ಕರೆ ತಂದು ತೀರ್ಥ ನೀಡಿದರೆ ತತ್‌ಕ್ಷಣ ವಿಷ ಪರಿಹಾರವಾಗುವುದೆಂಬ ನಂಬಿಕೆ ಈಗಲೂ ರೂಢಿಯಲ್ಲಿದೆ.

ಶ್ರೀನಿವಾಸ ಸರಡಗಿ:-

ಈ ಊರು ಗುಲಬರ್ಗಾದಿಂದ ಪೂರ್ವಕ್ಕೆ ಸುಮಾರು ೧೫ ಕಿ. ಮೀ ದೂರದಲ್ಲಿರುವ ಚಾರಿತ್ರಿಕ ಕೇಂದ್ರವಾಗಿದೆ. ಶಾಸನಗಳಲ್ಲಿ 'ಸರವಡಿಗೆ', 'ಸರ್ವಡಿಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಗೊಂಕ-೧೨೦(೬೦)ಕ್ಕೆ ಸೇರಿದ ಕಂಪಣನಾಗಿದ್ದ ವಿಷಯ ದೇವಗಿರಿಯ ಯಾದವ ಅರಸ ರಾಮಚಂದ್ರನ ಕಾಲಕ್ಕೆ ಸೇರಿದ ೧೨೮೭ರ ಬೆಣ್ಣೂರು (ಚಿತ್ತಾಪುರ ತಾ) ಶಿಲಾಶಾಸನದಿಂದ ಗೊತ್ತಾಗುತ್ತದೆ. ಬಹುಶಃ ಇದು ಅರವತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ.[೨೦೭]

ಸುಲೇಪೇಟೆ :-

ಶಾಸನಗಳಲ್ಲಿ 'ಸುಲ್ಲಿಗ್ರಾಮ', 'ಮಹಾ ಅಗ್ರಾಹಾರ ಸುಲ್ಯಗ್ರಾಮ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಈಶ್ವರ ದೇವಾಲಯದಲ್ಲಿರುವ ಸುಲ್ಲಿಗ್ರಾಮ ಎಂಬ ಉಲ್ಲೇಖವಿದ್ದು ಹೆಚ್ಚಿನ ವಿವರಗಳು ಲಭಿಸುವುದಿಲ್ಲ.[೨೦೮]

ಹಂದರಕಿ :-

ಶಾಸನಗಳಲ್ಲಿ 'ಪಂದಿರ್ಕೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯ ಹಾಗೂ ಅವನ ಮಗ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳು ಲಭಿಸಿವೆ. ಈ ಶಾಸನಗಳಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದ ಎರಡೂ ಶಾಸನಗಳು ಲೋಕೇಶ್ವರ

ದೇವಾಲಯಕ್ಕೆ ಬಿಟ್ಟ ಅಂಶಗಳನ್ನು ಹೊಂದಿದ್ದರೆ, ಉಳಿದೆರಡು ಅದೇ ದೇವಾಲಯಕ್ಕೆ ಮೂರನೆಯ ಸೋಮೇಶ್ವರನ ಕಾಲದಲ್ಲಿ ಮತ್ತಷ್ಟು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತವೆ.[೨೦೯]

೪.೪ ನಂಬಿಕೆಗಳು :-

ನಂಬಿಕೆ, ಸಂಪ್ರದಾಯಗಳು ಜಾನಪದ ಬದುಕಿನೊಂದಿಗೆ ಹೊಂದಿಕೊಂಡಿರುವ ಬಹು ಮುಖ್ಯ ಅಂಶಗಳು. ನಂಬಿಕೆ, ಮಾನಸಿಕ ಸ್ಥಿತಿಯ ಒಂದು ಪದರಾದರೆ, ಸಂಪ್ರದಾಯ ನಂಬಿಕೆಯನ್ನೂ ಒಳಗೊಂಡಂತೆ, ಒಂದೊಂದು ಪ್ರದೇಶದ, ಒಂದೂಂದು ಜನಾಂಗದ ಜೀವನಕ್ರಮವಾಗುತ್ತದೆ. ನಂಬಿಕೆಗಿಂತಲೂ ಸಂಪ್ರದಾಯಕ್ಕೆ ಹೆಚ್ಚಿನ ವ್ಯಾಪ್ತಿಯಿದೆ, ಮಾನಸಿಕ ಸ್ತರದಲ್ಲಿ ಆಳವಾಗಿರುವ ನಂಬಿಕೆ ಕ್ರಮೇಣ ಸಾಂಸ್ಕೃತಿಕ ಆವರಣಕ್ಕೆ ಬಿದ್ದು ಸಾಮಾಜಿಕ ಚೌಕಟ್ಟನ್ನು ಪಡಿದು ಕ್ರಿಯಾಶೀಲವಾಗಿ ಆಚರಣೆಗಳಿಗೆ ಹಿಗ್ಗುತ್ತದೆ. ಆರ್. ಎಸ್. ಬಾಗ್ಸ್ ನಂಬಿಕೆಗಳನ್ನು ಸಾಹಿತ್ಯೇತರ ಗುಂಪಿಗೆ ಸೇರಸುತ್ತಾನೆ. ಬಾಗ್ಸ್‌ನ ಈ ಕ್ರಮ ತುಂಬ ಸಮಂಜಸವಾಗಿದೆ. ಮನುಷ್ಯ ಭಾವನೆ ಒಂದು ವಿಷಯಕ್ಕೆ ಗಟ್ಟಿಯಾಗಿ ಒಪ್ಪಿಸಿಕೊಂಡಾಗ ಅದು ನಂಬಿಕೆಯಾಗುತ್ತದೆ. ಒಂದು ವಿಷಯವನ್ನು ಇಲ್ಲಿಯೇ ಸ್ಪಷ್ಟಗೊಳಿಸಬೇಕು.[೨೧೦] ಈ ನಂಬಿಕೆ ಒಂದು ಪರಂಪರೆಯಿಂದ ಬಂದಿರಬಹುದುದಾದ ಸಾಧ್ಯತೆ ಹೆಚ್ಚು. ಈ ಪರಂಪರೆಯ ಮೂಲ, ಹೇಗೆ ಹುಟ್ಟಿತು ಎಂದು ಹೇಳುವುದು ತುಂಬ ಕಷ್ಟದ ಕೆಲಸ. ಆರತಿ ಮಾಡುವಾಗ ಕಳಸ ಬೀಳಬಾರದು ಎನ್ನುವುದು ಕನ್ನಡಿಗರ ಒಂದು ನಂಬಿಕೆ.

ಈ ನಂಬಿಕೆಯ ಪ್ರಾರಂಭದ ಮೂಲವನ್ನು ಗುರುತಿಸುವುದು ಖಂಡಿತವಾಗಿಯೂ ಸಾಧ್ಯವಿಲ್ಲ. ಮೊದಲಿಂದಲೂ ನಡೆದುಕೊಂಡು ಬಂದಿರುವ ಜನಪದ ನಂಬಿಕೆಗಳು ಸಾರ್ವತ್ರಿಕ ಮನ್ನಣೆ ಪಡೆಯುತ್ತವೆ.ಜಾನಪದ ವಲಯದಲ್ಲಿರುವುದು ಮೂಢನಂಬಿಕೆಯೊಂದೇ, ಅದು ಜನಪದರ ವಿಚಾರಶಕ್ತಿಗೆ ಕೆಲವು ಎಟುಕಲಾರದ ವಸ್ತು, ನಂಬಿಕೆಗಳು ಹುಟ್ಟುವಾಗ ವಿಚಾರಯೋಗ್ಯವಾಗಿಯೇ ಹುಟ್ಟಿರಬಹುದು. ಆದರೆ ಮುಂದಿನವರಿಗೆ ಅದು ಕೇವಲ ಹಿರಿಯರ ಮಾತಾಗಿ ಅನುಕರಣೆಯಾಗುತ್ತಾ ಅದರ ಹಿಂದಿರುವ ವಸ್ತುಸತ್ಯವನ್ನು ಮರೆ ಮಾಚುತ್ತದೆ.ಬದುಕಿನಷ್ಟೇ ಸಂಕೀರ್ಣವಾಗಿ ಹರಡಿಕೊಂಡಿರುವ ನಂಬಿಕೆಗಳನ್ನು ವರ್ಗೀಕರಿಸುವುದು ಪ್ರಯಾಸದ ಕೆಲಸ. ನಂಬಿಕೆಗಳನ್ನು ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕವೆಂದು ವಿಭಜಿಸುವುದುಂಟು. ಅದಕ್ಕಿಂತಲೂ ಅತಿಮಾನುಷ, ಸಾಂಸ್ಕೃತಿಕ ಮತ್ತು ವೈಯಕ್ತಿಕವೆಂದು ವರ್ಗೀಕರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಇದು ಒಂದು ರೀತಿ ಮಾನವ ವಿಕಾಸದ ಘಟ್ಟಗಳಲ್ಲಿ ನಡೆದಿರಬಹುದಾದ ಕ್ರಮವನ್ನು ತೋರಿಸುತ್ತದೆ.

೧. ಅತಿಮಾನುಷ ನಂಬಿಕೆಗಳು :-

ಆದಿಮಾನವ, ಪ್ರಕೃತಿಯೊಡ್ಡಿದ ವೈಚಿತ್ರ್ಯ, ಆತ ಆಘಾತಗಳಿಗೆ ಅಚ್ಚರಿ ಗೊಂಡು, ಭಯಗ್ರಸ್ಥನಾದ. ಈ ಪ್ರಕೃತಿ ಆತನ ಅಳವಿಗೆ ಮೀರಿದ್ದು. ಇದನ್ನು ನಿಯಂತ್ರಿಸುವ ಶಕ್ತಿ ಬೇರೊಂದಿವೆಯೆಂದು ಭಾವಿಸಿಕೊಂಡು ಆ ಶಕ್ತಿಯನ್ನು ತನ್ನ ರಕ್ಷಣೆಗೆ ನಂಬಿದ. ನಾಗರಿಕತೆ ಬೆಳೆದಂತೆ ಈ ನಂಬಿಕೆಯನ್ನೇ ಬೇರು ಮಾಡಿಕೊಂಡು ಧರ್ಮದ ಅವಿಷ್ಕಾರವಾಯಿತು. ಈ ಧರ್ಮ ಭಾವನೆಯ ಮಧ್ಯದಲ್ಲಿಯೂ ಅನೇಕ ಕಂಟಕಗಳನ್ನು ಉಂಟುಮಾಡುವ ಶಕ್ತಿಯನ್ನು ಭೂತಗಳೆಂದು ಕರೆದ. ಈ ಧರ್ಮದ ಬೇರಾದ ದೇವರು ಮತ್ತು ಭೂತಗಳಿಂದ ತನ್ನ ಬದುಕು ಏರಿಳಿತಗಳನ್ನು ಪಡೆಯುತ್ತದೆ ಎಂಬ ಅನಿಸಿಕೆಯ ಹಿನ್ನೆಲೆಯಲ್ಲಿ ನಂಬಿಕೆಗಳು ಬೆಳೆದು ಬಂದವು. ಯಾವುದೇ ಜನಪದ ನಂಬಿಕೆಗಳಿಗೆ ಅನ್ವಯಿಸುವ ಈ ಮಾತು ಕರ್ನಾಟಕ ಜಾನಪದ ನಂಬಿಕೆಗಳಿಗೂ ಅನ್ವಯಿಸುತ್ತದೆ.[೨೧೧]

ಗುಡಿಯಿಂದ ಬರುವಾಗ ಸ್ವಲ್ಪಹೊತ್ತು ಕುಳಿತು ಬರಬೇಕು ಎನ್ನುವುದು ಕರ್ನಾಟಕದುದ್ದಕ್ಕೂ ಇರುವ ಒಂದು ನಂಬಿಕೆ. ಮುಖ್ಯವಾಗಿ ಇಲ್ಲಿ ವ್ಯಕ್ತವಾಗಿರುವುದು ದೈವಶ್ರದ್ಧೆ. ಗುಡಿಯ ಆಚೆಗೆ ಇರುವುದು ಲೌಕಿಕ ಪ್ರಪಂಚ. ಇಲ್ಲಿ ಇರುವ ಇನ್ನಷ್ಟು ಹೊತ್ತು ದೇವಭಾವನೆಯನ್ನೇ ಗಟ್ಟಿಗೊಳಿಸಿಕೊಳ್ಳಬೇಕು ಎನ್ನುವ ಉದ್ದೇಶ ಇದರ ಹಿಂದಿದೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಒಬ್ಬ ಭಕ್ತನೋ ಭಕ್ತವೃಂದವೋ ಎಂದೋ ಒಮ್ಮೆ ಉಂಟುಮಾಡಿಕೊಂಡಿರುವ ರೂಢಿ 'ಕ್ವಾಡಿಗೆ ಕೆಮ್ಮು' ಹತ್ತಿದರೆ ಗುಲಗಂಜಿ ಕೊಪ್ಪ (ಬೆಳಗಾವಿ ಜಿಲ್ಲೆ)ದ ಮಾರುತಿ ದೇವರಿಗೆ ನಡೆದುಕೊಳ್ಳಬೇಕು. ಎನ್ನುವ ನಂಬಿಕೆ ಆ ಸುತ್ತು ಮುತ್ತಲಿನ ಪ್ರದೇಶದವರಿಗೆ ಮಾತ್ರ ಸೀಮಿತವಾಗಿದೆ. ಕರ್ನಾಟಕದ ಇನ್ನೊಂದು ಮೂಲೆಯಲ್ಲಿರುವವರು ಈ ಊರ ಹೆಸರೂ ಕೇಳಿರಲಿಕ್ಕಿಲ್ಲ. ಅವರು ತಮ್ಮ ಹೊಟ್ಟೆಕಡಿತಕ್ಕೋ, ಹಲ್ಲುಬೇನೆಗೋ, ಇಲಿ ಕಡಿತದ ನಂಬಿಗೋ, ಹಾವಿನ ವಿಷಕ್ಕೂ ತಮ್ಮ ಭಾಗದ ದೇವರನ್ನು ನಂಬುವುದುಂಟು. ಹಾವಿನ ವಿಷದ ಇಳಿತಕ್ಕೆ ಕರ್ನಾಟಕದ ತುಂಬ ಹಲವಾರು ಊರಗಳಲ್ಲಿ ಗುಡಿಗಳುಂಟು. ಹಾವು ಕಡಿಸಿಕೊಂಡ ವ್ಯಕ್ತಿಯನ್ನು ಆ ಗುಡಿಯಲ್ಲಿ ತಂದುಹಾಕಿ ದೇವರನ್ನು ಆಶ್ರಯಿಸುವುದು ಮೊದಲನೆಯ ಕೆಲಸ. ಇಲ್ಲಿಯೇ ಔಷಧೋಪಚಾರಗಳೂ ನಡೆಯುತ್ತವೆ. ಜುಟ್ಟು ಇರುವ ತೆಂಗಿನ ಕಾಯನ್ನೇ ದೇವರಿಗೆ ಒಡೆಯಬೇಕು ಎನ್ನುವುದೊಂದು ನಂಬಿಕೆ.[೨೧೩] ಕಾಯಿ ಒಡೆಯುವಾಗ ಹಿಡಿತಕ್ಕಾಗಿ ಮಾಡಿಕೊಂಡಿರುವ ಅನುಕೂಲ ಬಹುಶಃ ಇಲ್ಲಿ ನಂಬಿಕೆಯಾಗಿ ನಿಂತಿರುವುದು ಕೌತುಕದ ವಿಷಯ.

ಹುಣಸೆಗಿಡದಲ್ಲಿ ದೆವ್ವವಿರುವುದು, ಬಾಣಂತಿಯನ್ನು ಸುಡದಿದ್ದರೆ ದೆವ್ವವಾಗುತ್ತಾಳೆ ಎನ್ನುವುದು ಎರಡೂ ಭಯಮೂಲವಾದ ನಂಬಿಕೆಗಳೇ, ವಿಶಾಲವಾಗಿ ಬೆಳೆದಿರುವ ಹುಣಸೆಗಿಡ ರಾತ್ರಿಹೊತ್ತಿನಲ್ಲಿ ಅಕರಾಳ, ವಿಕರಾಳವಾಗಿ ಕಂಡು ಸಾಮಾನ್ಯ ವ್ಯಕ್ತಿಯ ಹುಟ್ಟು ಪ್ರವೃತ್ತಿಯಾದ ಭಯವನ್ನು ಜಾಗೃತ ಗೊಳಿಸುತ್ತದೆ. ಇಲ್ಲಿ ಕುತೂಹಲದ ವಿಷಯಗಳೆಂದರೆ ಬಹಳಷ್ಟು ದೆವ್ವಗಳಿಗೆ ಹುಣಸೆಗಿಡವೇ ವಾಸಸ್ಥಾನವಾಗುದು; ಎಂದೋ ಒಂದು ದಿನ ಬಹುಶಃ ಒಂದು ಆ ವೇಳೆಯಲ್ಲಿ ಪ್ರಾರಂಭಗೊಡ ಒಬ್ಬನ ನಂಬಿಕೆ ಸಾರ್ವತ್ರಿಕವಾಗಿರುವುದು. ತಾಯ್ತತನದ ಹಂಬಲವನ್ನಿರಿಸಿಕೊಂಡು ತೀರಿಕೊಳ್ಳುವ ಬಾಣಂತಿ ಖಂಡಿತವಾಗಿಯೂ ಅತೃಪ್ತಿಯ ಮೂಟೆಯಾಗಿರುತ್ತಾಳೆ. ದೆವ್ವವೆನ್ನುವುದು ಅತೃಪ್ತಾತ್ಮದ ಸಂಕೇತ ಎನ್ನುವುದಾದರೆ ಇದರ ವಿಶ್ಲೇಷಣೆಗೆ ಮನೋವಿಜ್ಞಾನಿಗಳ ನೆರವು ಅವಶ್ಯವೆನಿಸುತ್ತದೆ.[೨೧೪ &೧೫]

೨. ಸಾಂಸ್ಕೃತಿಕ ನಂಬಿಕೆಗಳು :-

ಸಾಮಾನ್ಯರಲ್ಲಿ ಬೇರೂರಿರುವ ಲೌಕಿಕ ಜೀವನಕ್ಕೆ ಸಂಬಂಧಪಟ್ಟ ನಂಬಿಕೆಗಳನ್ನು ಸಾಂಸ್ಕೃತಿಕ ನಂಬಿಕೆಗಳೆಂದು ವರ್ಗೀಕರಿಸಬಹುದು. ಕಾಡುಮನುಷ್ಯ ನಾಗರಿಕತೆಯನ್ನು ಬೆಳೆಸಿಕೊಳ್ಳುತ್ತ, ವಿಕಾಸದತ್ತ ಸಾಗಿದಂತೆಲ್ಲ ಕೆಲವು ಶಿಷ್ಟಾಚಾರ ಸಂಪ್ರದಾಯಗಳು ಅವನ ಜೀವನದಲ್ಲಿ ಬೆರೆತುಕೊಂಡವು. ಮೊದಮೊದಲು ಯಾವನೋ ಒಬ್ಬ ಪ್ರತಿಷ್ಠಿತ ವ್ಯಕ್ತಿ ಪ್ರಾರಂಭಿಸಿದ ಒಂದು ಶಿಷ್ಟ ನಡವಳಿಕೆ, ಒಂದು ಸಂಪ್ರದಾಯ ಮುಂದಿನವರಿಗೆ ಕೇವಲ ಒಂದು ನಂಬಿಕೆಯಾಗಿರಲು ಸಾಕು. ವ್ಯವಸಾಯ, ಬೇಟೆ ಮುಂತಾಗಿ ಹೊಟ್ಟೆಪಾಡಿಗೆ ಮಾಡಿಕೊಂಡು ಸುಖವಾಗಿರಬಹುದು ಎನ್ನುವ ಹೊತ್ತಿಗೆ ರೋಗರುಜಿ, ಸಾವಿನಂಥ ಅನೇಕ ಸಮಸ್ಯೆಗಳೂ, ಈ ವಿಷಯಗಳ ಸುತ್ತಲೂ ಅವನು ಬೆಳೆಸಿಕೊಂಡ ನಂಬಿಕೆಗಳು ದಟ್ಟವಾಗಿವೆ.

೧. ದೀಪ ಹತ್ತಿದಾಗ ಒಬ್ಬರಿಗೊಬ್ಬರು ನಮಸ್ಕಾರ ಅನ್ನಬೇಕು.

೨. ಯಾರಿಗಾದರೂ ಕಾಲು ಬಡಿದರೆ ತಿರುಗಿ ಅವರನ್ನು ಮುಟ್ಟಿ ನಮಸ್ಕರಿಸಬೇಕು.

೩. ಖಾಲಿ ತೊಟ್ಟಿಲು ತೂಗಿದರೆ ಕೂಸಿನ ಹೊಟ್ಟೆ ಕಡಿಯುತ್ತದೆ.

೪. ಕುದರೆಯ ನಾಲು ಸಿಕ್ಕರೆ ಮನೆಗೆ ತಂದು ಹೊಸ್ತಿಲಕ್ಕೆ ಬಡಿಯಬೇಕು.

ದೀಪ ಸೂರ್ಯ ದೇವನ ಸಂಕೇತವಾಗಿಯೋ, ಬದುಕಿನ ನಡೆಗೆ ಆಧಾರವಾಗಿರುವ ಬೆಳಕೆಂಬ ಪೂಜ್ಯ ಭಾವನೆಯೋ ಅಂತೂ ಅನೇಕ ಸಂಪ್ರದಾಯಗಳಿಗೆ ಮೂಲವಾಗಿರುವ ಈ ನಂಬಿಕೆ ನಮ್ಮ ಜಾನಪದ ಜೀವನವನ್ನು ಗಾಢವಾಗಿ ಪಸರಿಸಿದೆ. ಒಬ್ಬರಿಗೆ ಕಾಲು ಬಡಿದಾಗ ನಮಸ್ಕರಿಸಬೇಕು ಎನ್ನುವ ನಂಬಿಕೆ ಮನುಷ್ಯ ಸಂಬಂಧದ ಮಧ್ಯೆ ಇರುವ ಪೂಜ್ಯ ಭಾವನೆಯನ್ನು ಪುಷ್ಟೀಕರಿಸುತ್ತದೆ. ಪ್ರತಿಯೊಬ್ಬನ ದೇಹವೂ ಪರಮಾತ್ಮನ ವಾಸಸ್ಥಾನ ಎನ್ನುವ ಪ್ರಜ್ಞಾವಂತರ ನಂಬಿಕೆ ಜಾನಪದ ಆವರಣಕ್ಕೆ ಬರುವ ಹೊತ್ತಿಗೆ ಶಿಷ್ಟಾಚಾರದ ನಡವಳಿಕೆಯ ನಂಬಿಕೆಯಾಗಿದೆ. ಬರಿದಾದ ತೊಟ್ಟಿಲ ತೂಗುವುದೂ ಅಶಿಷ್ಟ ನಡವಳಿಕೆ. ಆದ್ದರಿಂದ ಸಾವಿನ ಭಾವದ ತೀಕ್ಷ್ಣತೆಯನ್ನು ಕಡಿಮೆ ಮಾಡಿಕೊಂಡು ಹೊಟ್ಟೆ ಕಡಿಯುತ್ತದೆ ತೂಗಬೇಡಿರಿ ಎನ್ನುವಮಟ್ಟಿಗೆ ಆ ಭಾವವನ್ನು ಇಳಿಸಿಕೊಂಡಿರುವುದು ಇದರ ಹಿಂದಿರುವ ಸತ್ಯ. ಬಾಗಿಲಿಗೆ, ಸಿಕ್ಕ ಕುದುರೆ ನಾಲನ್ನು ಬಡಿಯಬೇಕು ಎನ್ನುವ ನಂಬಿಕೆಗೆ ಹಿನ್ನೆಲೆ ಯಾಕೆ ಬಂದಿತೋ ಶೋಧಸಬೇಕಾದ ಅಂಶ. ಸಿಡಿಲು ಹೊಡೆಯುವಾಗ ಕಬ್ಬಿಣದ ಸಲಾಕೆ ಹಾರೆಗಳನ್ನು ತಂದು ಹೊಸ್ತಿಲ ಬಳಿ ಇಡುವುದುಂಟು. ಇದು ವೈಜ್ಞಾನಿಕವಾಗಿಯೂ ಸಮರ್ಥಿಸಿಕೊಳ್ಳಬಹುದಾದ ನಂಬಿಕೆ. ಕಬ್ಬಿಣದ್ದೇ ಆದ ನಾಲೂ ಕೂಡ ಸಿಡಿಲು ನಿರೋಧಕವಾಗಬಹುದು. ಆದರೆ ಅದು ಕುದುರೆಯದೇ ಆಗಿರಬೇಕಾದುದು ಏಕೆ ಎಂಬುವುದು ವಿಚಾರಾರ್ಹ.[೨೧೬]

ಮನುಷ್ಯ ತನ್ನ ನಿತ್ಯದ ಅನುಭವಗಳಿಂದ ಶುಭವಲ್ಲದ ಕೆಲವು ಘಟನಾವಳಿಗಳಿಂದ ಅನೇಕ ನಿಷೇಧಗಳನ್ನು ಮಾಡಿಕೊಂಡ. ಈ ನಿಷೇಧಗಳೂ ನಂಬಿಕೆಗಳೇ. ಇಂಥ ನಿಷೇಧಗಳು ಕರ್ನಾಟಕದ ಎಲ್ಲ ಭಾಗಗಳಲ್ಲೂ ಇವೆ.

೧. ಮಂಗಲಕಾರ್ಯಗಳಲ್ಲಿ ವಿಧವೆ ಭಾಗವಹಿಸಬಾರದು.

೨. ಸಂಜೆಯ ಹೊತ್ತಿನಲ್ಲಿ ಕಸಗೂಡಿಸಬಾರದು.

೩. ರಾಶಿ ಮಾಡುವಾಗ ಕಣದಲ್ಲಿ ಜೋರಾಗಿ ಮಾತನಾಡಬಾರದು

೪. ಪಿತೃ ಪಕ್ಷದ ದಿನ ರಂಗೋಲಿ ಹಾಕಬಾರದು,

೫. ಒಲೆಯನ್ನು ಒದೆಯಬಾರದು.

೬. ಖಾಲಿ ತೊಟ್ಟಿಲನ್ನು ಇಡಬಾರದು.

ಈ ಮೇಲಿನವುಗಳಲ್ಲಿ ವೈಜ್ಞಾನಿಕ ಸತ್ಯವಲ್ಲದ ಕುರುಡು ನಂಬಿಕೆಗಳು ಕೆಲವಿವೆ. ಈ ನಿಟ್ಟಿನಲ್ಲಿ ಜಾನಪದರ ವಿವೇಚನೆ ಓದುವುದಿಲ್ಲ. ಪರಂಪರಾಗತವಾಗಿ ಇವು ಬಹಿಷ್ಕೃತವಾದ ವಿಷಯಗಳು ಅಷ್ಟೇ. ಇಂಥ ನಿಷೇಧಗಳು ಜಾನಪದ ಬದುಕಿನ ಬಹುಭಾಗವನ್ನು ವ್ಯಾಪಿಸಿವೆ. ಒಂದೇ ನಿಷೇಧ, ವೈಯಕ್ತಿಕ, ಕೌಟುಂಬಿಕ, ಪ್ರಾದೇಶಿಕ ಮಟ್ಟದ ವ್ಯಾಪ್ತಿಯನ್ನು ಹೇಗೆ ಪಡೆಯಬಹುದೆಂಬದನ್ನು ಕ್ಷೌರದ ಉದಾಹರಣೆಯಿಂದ ಸ್ಪಷ್ಟ ಪಡಿಸಬಹುದು. ಹುಟ್ಟಿದ ದಿವಸ ಕ್ಷೌರ ಮಾಡಿಸಬಾರದು

ಎನ್ನುವುದು ವೈಯಕ್ತಿಕ ನಂಬಿಕೆಯಾದರೆ. ಕುಲದೇವತೆಯ ವಾರದಂದು ಕ್ಷೌರ ಮಾಡಿಸಬಾರದೆನ್ನುವುದು ಕೆಲವು ಕುಟುಂಬಗಳ ನಂಬಿಕೆ. ಅಮಾವಾಸ್ಯೆಯ ದಿವಸ ಕ್ಷೌರ ಮಾಡಿಸಬಾರದೆನ್ನುವುದು ಕರ್ನಾಟಕದ ತುಂಬ ಹರಡಿಕೊಂಡಿರುವ ಸಾರ್ವತ್ರಿಕ ನಂಬಿಕೆ. ಈ ನಿಷೇಧ ಮುಖ್ಯವಾಗಿ ಎರಡು ಭಾವನೆಗಳೊಂದಿಗೆ ಬೆಸೆದುಕೊಂಡಿದೆ. ಒಂದು ಕ್ಷೌರವೆನ್ನುವುದು ಅಪವಿತ್ರ ಎನ್ನುವ ಭಾವನೆ, ಎರಡು ದೇವರ ಬಗೆಗಿರುವ ಪೂಜ್ಯ ಭಾವನೆ.[೨೧೭]

ಒಲೆಯನ್ನು ಒದೆಯಬಾರದು ಎನ್ನುವದರ ಅರ್ಥ ಒಲೆಯ ಮೇಲೆ ಅನ್ನ ಅಥವಾ ಆಹಾರವನ್ನು ತಯಾರಿಸುತ್ತವೆ ಈಗ ಎಲ್ಲರ ಮನೆಯಲ್ಲಿ ಗ್ಯಾಸ್ ಸಿಲಿಂಡರಗಳಾಗಿವೆ ಮೊದಲು ಒಲೆಯಿಂದಲೇ ಆಹಾರ ತಯಾರಾಗುತ್ತಿತ್ತು. ಈ ಒಲೆಯನ್ನು ಒದ್ದರೇ ಬಿದ್ದು ಹಾಳಾಗಿ ಹೋರುತ್ತದೆ. ಮರುದಿನ ಆಹಾರ ತಯಾರಿಸಲು ತೊಂದರೆಯಾಗುತ್ತದೆ. ಎಂದು ಅದಕ್ಕೆ ಒಲೆಯಲ್ಲಿ ಲಕ್ಷ್ಮೀ ದೇವತೆ ಇರುತ್ತಾಳೆಂದು ಹೆಳುತ್ತಾರೆ. ಒಲೆಗೆ ದೈವಿ ಸ್ವರೂಪವನ್ನು ನೀಡಿದ್ದಾರೆ. ಅದನ್ನು ಹಾಳು ಮಾಡದ ಹಾಗೇ ಕಾಪಾಡಲಾಗಿದೆ. ರಾತ್ರಿ ಹೊತ್ತು ಕಸ ಚೆಲ್ಲಬಾರದು ಎನ್ನುವದರ ಹಿನ್ನೆಲೆ ಭಾರತೀಯರಾದ ನಾವುಗಳು ಹೆದರುವುದು ಕೆವಲ ಎರಡಕ್ಕೆ ಒಂದು ದೇವ್ವಕ್ಕೆ ಎರಡನೆಯದು ದೇವರಿಗೆ. ಹೀಗೆ ಈ ಮೆಲಕಾಣಿಸಿದ ವಿಷಯಕ್ಕೆ ಸಂಬಂಧಿಸಿದ ಹಾಗೆ ಹೆಳುವುದಾದರೆ ಮೊದಲು ರಾತ್ರಿ ಹೊತ್ತಿನಲ್ಲಿ ವಿದ್ಯುತ್ ಇರುತ್ತಿರಲಿಲ್ಲ. ಮೌಲ್ಯಯುತವಾದ ವಸ್ತುವೆನಾದರು ಬಿದ್ದರೇ ಅದನ್ನು ಹಾಗೆ ಕಸಗುಡಿಸಿ ಹೊರಹಾಕಿದರೇ ಅದನ್ನು ಕಳೆದುಕೊಳ್ಳತ್ತಿದ್ದರು. ಆದರಿಂದ ಅದಕ್ಕೆ ದೇವರ ಕಲ್ಪನೆ ಕೊಟ್ಟು ಕಸ ಹೊರ ಹಾಕುವುದರಿಂದ ಲಕ್ಷ್ಮೀ ಹೊರಹಾಕಿದಂತಾಗುತ್ತದೆ ಎಂಬುದು ಜನರ ವಾಡಿಕೆ ಅದನ್ನು ಈ ರೀತಿಯಾಗಿ ಹೇಳಿ ತಡೆಯುವ ಕಲ್ಪನೆ ಬೆಳೆಯಿತು.

ಶಕುನಗಳು : ಜಾನಪದರಲ್ಲಿ ಬೇರುಬಿಟ್ಟ ನಂಬಿಕೆಗಳ ಒಂದು ಮುಖ್ಯ ಕವಲೆಂದರೆ ಶಕುನಗಳು. ಮನುಷ್ಯ ಬದುಕಿಗೆ ಎಷ್ಟೇ ಪ್ರಾಮಾಣಿಕನಾಗಿರುತ್ತೇನೆ ಎಂದರೂ ನಿತ್ಯ ಜೀವನದ ಸಾಮಾನ್ಯ ಮಟ್ಟದಲ್ಲಿಯೂ ಉಂಟಾಗುವ ಅಡೆತಡೆಗಳಿಗೆ ಆತ ತಲೆಕೆಡಿಸಿಕೊಳ್ಳುವಂತಾಯಿತು. ಕೈಕೊಳ್ಳುವ ಕೆಲಸ ತಾನು ಕಾರಣವಲ್ಲದೆ ಪೂರೈಸದೇ ಹೋದಾಗ ಅವನು ಈ ಮಧ್ಯೆ ಜರುಗಿದ ಅನೇಕ ಘಟನೆಗಳನ್ನು ಅನುಮಾನಿಸುವಂತಾಯಿತು. ಈ ಅನುಮಾನ ಮುಂದುವರಿದಿರುವಾಗಲೇ ಅಂಥವೇ ಘಟನೆಗಳು ಪದೇ ಪದೇ ಜರುಗಿ ಅದಕ್ಕನುಗುಣವಾಗಿ ಫಲಾಫಲಗಳು ಎದುರಾದಾಗ ಶಕುನಗಳು ನಿರ್ಮಾಣಗೊಂಡವು. ಶಕುನಗಳು ಭವಿಷ್ಯದ ಶುಭಾಅಶುಭಗಳಿಗೆ ದಿಕ್ಸೂಚಿಯೆನಿಸುತ್ತದೆ. ಶಕುನಗಳಿಂದ ಮನಸ್ಸು ಸುಚಲಿತವಾಗುತ್ತದೆ. ಅದು ಆಯಾ ನಂಬಿಕೆಗಳಿಗನುಗುಣವಾಗಿ ಪ್ರಸನ್ನಗೊಳ್ಳುತ್ತದೆ. ಯಾವುದೇ ಕೆಲಸಕ್ಕೆ ಹೊರಟಾಗ ತುಂಬಿದಕೊಡ ಎದುರಾದರೆ ಶುಭ, ಬರಿಗೊಡ ಎದುರಾದರೆ ಅಶುಭ. ಈ ನಂಬಿಕೆಯನ್ನು ಬೆಂಬಲಿಸಿ ಉಂಟಾಗುವ ಕ್ರಿಯಾಸ್ವರೂಪದಲ್ಲಿಯೂ ಭಿನ್ನತೆಯುಂಟಾಗುತ್ತದೆ. ಶಕುನ ಒಳ್ಳೆಯದಿದ್ದರೆ ಕೆಲಸದ ಪೂರೈಕೆಗೆ ಮನೋಬಲ ಬೆಳೆಯುತ್ತದೆ.[೨೧೮] ಅಶುಭವಿದ್ದರೆ ಪ್ರಯಾಣವನ್ನೇ ನಿಲ್ಲಿಸಿಬಿಡಬಹುದು. ಪ್ರಯಾಣದ ಅನಿವಾರ್ಯತೆಯಿಂದಾಗಿ ಮುಂದುವರಿದರೆ ಅಸ್ಥಿರ ಮನಸ್ಸು ಕೆಲಸದುದ್ದಕ್ಕೂ ಒಂದು ಮೂಲೆಯಲ್ಲಿ ಕುಟುಕುತ್ತಲೇ ಇರುತ್ತದೆ. ಆರತಿ ಮಾಡುವಾಗ ಸೆರಗು ಸುಡಬಾರದದು. ಚಕ್ಕಡಿ ಹೂಡಿದಾಗ ನೊಗ ಮುರಿಯಬಾರದು, ಪ್ರಯಾಣ ಮಾಡುವಾಗ ಸೂಳೆ ಎದುರು ಬರಬೇಕು ಇವು ಮತ್ತೆ ಕೆಲವು ಇಂಥ ಶಕುನಗಳು.

ಕನಸುಗಳೂ ಜನಪದರ ಪಾಲಿಗೆ ಒಂದರ್ಥದಲ್ಲಿ ಶಕುನಗಳೇ. ಯಾಕೆಂದರೆ ಕಾಣುವ ಕನಸಿನೊಂದಿಗೆ ಅವರು ಭವಷ್ಯತ್ತಿನ ಶುಭಾಅಶುಭಗಳನ್ನು ಪಟ್ಟಿಮಾಡುತ್ತಾರೆ. ಮೊದಮೊದಲು ಕನಸುಗಳಿಗೆ ಭಾಷ್ಯ ಹೇಳುವವರು ಮಾಟ ಮಂತ್ರಗಾರರಿದ್ದಿರಬೇಕು. ಅವರಿಂದ ಪ್ರಾರಂಭಗೊಂಡ ಹೇಳಿಕೆಗಳೇ ಗಟ್ಟಿಯಾಗುತ್ತ ಅವನ್ನೇ ಸಾಮಾನ್ಯರೇ ಹೇಳುವಂತಾಯಿತು.

ನಿಜಜೀವದಲ್ಲಿ ಕೆಟ್ಟದ್ದೆಂದು ಪರಿಗಣಿಸಲ್ಪಡುವುದು ಕನಸಿನಲ್ಲಿ ಬಂದರೆ ಅದು ಶುಭವಾಗಿ ಪರಿಣಮಿಸುತ್ತದೆ. ಎನ್ನುವುದು ಸಾಮಾನ್ಯ ನಂಬಿಕೆ. ಕನಸಿನಲ್ಲಿ ಹಾವು ಬಂದರೆ ಒಳ್ಳೆಯದು. ಹೆಣ ಬಂದರೆ ಒಳ್ಳೆಯದು, ಅತ್ತರೆ ಒಳ್ಳೆಯದು. ಇದಕ್ಕೆ ವಿರುದ್ಧವಾಗಿ ನಿಜಜೀವನದಲ್ಲಿ ಒಳ್ಳೆಯದೆನಿಸುವುದು ಕನಸಿನಲ್ಲಿ ಬಂದರೆ ಅದು ಅಶುಭವಂತೆ. ಕನಸಿನಲ್ಲಿ ಹೂಮುಡಿಯಬಾರದು, ಚಿಲ್ಲರೆ ಹಣ ಸಿಗಬಾರದು, ಬಹಳ ಜನ ಕೂಡಿ ಊಟ ಮಾಡಬಾರದು ಎನ್ನುವವು ಇಂಥ ನಂಬಿಕೆಗಳು. ನಸುಕಿನಲ್ಲಿ ಬೀಳುವ ಕನಸು ನಿಜವಾಗುತ್ತದೆನ್ನುವುದು ಬೇರೊಂದು ನಂಬಿಕೆ. ಕನಸುಗಳ ಸತ್ಯಾಸತ್ಯತೆಯನ್ನು ವಿಶ್ಲೇಷಿಸುವುದು ಕಷ್ಟ. ಕನಸುಗಳಿಗೆ ಅರ್ಥ ಹುಡುಕುತ್ತಿರುವ ಮನೋವಿಜ್ಞಾನಿಗಳು ಮುಂಬರುವ ದಿನಗಳಲ್ಲಿ ಕನಸುಗಳ ಬೆನ್ನು ಪದರಾಗಿ ಬರುವ ನಂಬಿಕೆಗಳಿಗೆ ವಿರಣೆ ನೀಡಬಹುದು.[೨೧೯]

೩. ವೈಯಕ್ತಿಕ ನಂಬಿಕೆಗಳು :-

ಜಗತ್ತಿನಾದ್ಯಂತ ನಂಬಿಕೆಗಳ ವಿಷಯದಲ್ಲಿರುವ ವೈಯಕ್ತಿಕ ಪರಿಮಿತಿ ಕರ್ನಾಟಕದ ಜನರಿಗೂ ಉಂಟು. ಅನೇಕರಿಗೆ ತಮ್ಮ ತಮ್ಮ ಹುಟ್ಟಿದ ವಾರ ಶುಭವೆನಿಸುವುದು ಸಾಮಾನ್ಯ ಹಾಗೆಯೇ ಜ್ಯೋತಿಷಿಯೊಬ್ಬನ ಮಾತನ್ನು ನಂಬಿ ವಾರದ ಒಂದೋ ಎರಡೋ ದಿನಗಳನ್ನು ತನ್ನ ಪಾಲಿಗೆ ಅಶುಭವೆಂದೂ ಭಾವಿಸುವುದುಂಟು. ಒಬ್ಬನಿಗೆ ಒಂಭತ್ತು ಶುಭಸಂಖ್ಯೆಯಾದರೆ ಇನ್ನೊಬ್ಬನಿಗೆ ಏಳು ಅದೃಷ್ಟದ ಸಂಖ್ಯೆಯಾಗಬಹುದು. ತನಗೆ ಯಾವುದೋ ಒಂದು ವಿಷಯದಲ್ಲಿ ಯಶಸ್ಸನ್ನು ತಂದುಕೊಟ್ಟ, ಒಂದು ವಸ್ತು ವನ್ನು ಶುಭವಸ್ತುವನ್ನಾಗಿ ಜೀವನಪರ್ಯಂತ ತನ್ನ ಹತ್ತಿರ ಅದನ್ನು ಜೋಪಾನವಾಗಿ ಇರಿಸಿಕೊಳ್ಳಬಹುದು. ಮನೆಗೆ ಬರುವ ಸೊಸೆ ಅತ್ತೆಗೆ ಶುಭವನ್ನು ತಂದರೆ ಮಾವನಿಗೆ ಅಶುಭವನ್ನು ತರಬಹುದು ಅದು ಅವರವರ ವೈಯಕ್ತಿಕ ನಂಬಿಕೆ.

ಇಂಥವು ಎಷ್ಟೇ ವೈಯಕ್ತಿಕ ನಂಬಿಕೆಗಳೆಂದರೂ ಸಾರ್ವತ್ರಿಕ ನಂಬಿಕೆಯ ಮೂಲಭೂತಗುಣ ಇದರಲ್ಲಿ ಇದ್ದೇ ಇರುತ್ತದೆ. ಶುಭಾಅಶುಭಗಳಿಗೆ ವ್ಯಕ್ತಿ ವೈಯಕ್ತಿಕವಾಗಿ ಯಾವ ದಿನವನ್ನೇ ನಂಬಿರಲಿ, ವಾರದ ಒಂದೊಂದು ದಿನವೂ ಶುಭಾಶುಭಗಳನ್ನು ಹೊತ್ತು ತರಬಲ್ಲದೆಂಬಂದು ಜನಸಾಮಾನ್ಯರ ಸಾರ್ವತ್ರಿಕ ಮೂಲಭೂತ ನಂಬಿಕೆ. ಸಂಖ್ಯೆಗಳು ವಿಷಯದಲ್ಲಿಯೂ ಅಷ್ಟೇ. ಸಂಖ್ಯೆಗಳು ಮನುಷ್ಯನಿಗೆ ಅದೃಷ್ಟವನ್ನೂ ತರಬಹುದು.[೨೨೦] ಅನಿಷ್ಟವನ್ನೂ ಉಂಟುಮಾಡಬಹುದು ಎಂಬುದನ್ನು ಪ್ರಪಂಚಾದ್ಯಂತ ಅನೇಕ ದೇಶಗಳು ನಂಬುವಂತೆ ಕರ್ನಾಟಕದ ಜನರೂ ನಂಬುತ್ತಾರೆ. ಹೀಗೆಯೇ ಸೊಸೆಯ ಕಾಲ್ಗುಣ ಮನೆತನದ ಏಳಿಳಿತಕ್ಕೆ ಕಾರಣವಾಗಬಹುದು ಎನ್ನುವ ಸಾಮೂಹಿಕ ನಂಬಿಕೆ ಆಕಸ್ಮಿಕ ಘಟನಾವಳಿಗಳನ್ನನುಸರಿಸಿ ವೈಯಕ್ತಿಕವಾಗಬಹುದು.

ಜಾನಪದ ನಂಬಿಕೆಗಳನ್ನು ವೈಜ್ಞಾನಿಕ ಮತ್ತು ಅವೈಜ್ಞಾನಿಕ ನಂಬಿಕೆಗಳೆಂದು ವೈಚಾರಿಕ ವಿಶ್ಲೇಷಣೆಯಿಂದ ಗುರುತಿಸುವುದು ಸಾಧ್ಯವಿದೆ. ಜಾನಪದ ನಂಬಿಕೆ ಮೂಲತಃ ಇಂಥ ತಾರ್ಕಿಕ ಶಿಶುವಲ್ಲ. ಜಾನಪದರು ತಲೆತಲಾಂತರಗಳಿಂದ ಬದುಕಿನ ಮೌಲ್ಯಗಳೆಂಬಂತೆ ಹಿರಿಯರಿಂದ ಇವನ್ನು ಸ್ವೀಕರಿಸಿದರು. ಆದ್ದರಿಂದ ಈ ನಂಬಿಕೆಗಳು ವೈಜ್ಞಾನಿಕ ಅವೈಜ್ಞಾನಿಕವೆಂದು ಜಾನಪದ ಮನೋಮಟ್ಟದಲ್ಲಿ ಪ್ರಥಃಕರಣ ಗೊಂಡು ಸ್ವೀಕರಿಸಿಸಲ್ಪಟ್ಟವುಗಳಲ್ಲ. ಈ ಪ್ರಥಃಕರಣ ಜಾನಪದ ಅಭ್ಯಾಸಿಗೆ ಸೇರಿದ್ದು.

ರಾತ್ರಿಯಲ್ಲಿ ಕಿರುಚುತ್ತ ಹಾರುವ ಟಿಂವಕ್ಕಿ ಸಾವನ್ನು ಸಾರುತ್ತದೆನ್ನುವುದು ಜಾನಪದ ನಂಬಿಕೆ. ಕಾಗೆ ತಲೆಯ ಮೇಲೆ ಹಾರಿದರೂ ಸಾವು ಸಮೀಪಿಸುತ್ತಿದಂತೆ ತಮ್ಮ ಪಾಡಿಗೆ ತಾವು ಕಿರುಚುವ, ಹಾರುವ ಟಿಂವಕ್ಕಿ, ಕಾಗೆಗಳು ಮರಣವನ್ನು ಹೇಗೆ ತಂದಾವು ? ಅಂಗೈ ಕಡಿದರೆ ಹಣಸಿಗುತ್ತದೆ. ಅಂಗಾಲು ತುರಿಸಿದರೆ ಪ್ರಯಾಣ. ಕರಿನಾಲಿಗೆಯವರ ಮಾತು ನಿಜವಾಗುತ್ತದೆ.

ಎಂಬಂತಹ ನಂಬಿಕೆಗಳೂ ಕಾರ್ಯಕಾರಣ ಸಂಬಂಧವನ್ನು ಪಡೆದಿಲ್ಲ. ಎಲ್ಲಿಯೋ ಒಂದೆರಡು ಕಾಕತಾಳೀಯವಾಗಿ ಹೊಂದಿದಾಗ ಇದು ಸತ್ಯವೇ ಎನ್ನುವ ಭ್ರಮೆ ಜಾನಪದರನ್ನೂ ಆವರಿಸಿ ನಂಬಿಕೆ ಮುಂದುವರಿಯುತ್ತದೆ.

ಒಂದೊಂದು ನಂಬಿಕೆಯ ಹಿಂದೆ ಕಲ್ಪಕಥೆಯನ್ನು ಜೋಡಿಸಿರುವುದೂ ಅವೈಜ್ಞಾನಿಕವೇ. ಉತ್ತರಕ್ಕೆ ಮುಖಮಾಡಿ ಮಲಗಬಾರದು ಎನ್ನುವುದಕ್ಕೆ ಪೌರಾಣಿಕ ಕಥೆಯೊಂದರ ಹಿನ್ನೆಲೆಯಿದೆ. ಪಾರ್ವತಿದೇವಿ ಮೂರ್ತಿಯೊಂದನ್ನು ಕಾವಲಿರಿಸಿ ಸ್ನಾನಮಾಡುತ್ತಿದ್ದಳು. ಹೊರಗಿನಿಂದ ಬಂದ ಶಿವನನ್ನು ಇವನು ತಡೆದಾಗ ಕೋಪಗೊಂಡ ಶಿವ ಮೂರ್ತಿಯ ಶಿರಚ್ಛೇದನ ಮಾಡಿದ. ಪಾರ್ವತಿ ತನ್ನ ಕುಮಾರ ನನ್ನು ಬದುಕಿಸಿಕೊಡಲು ಅಂಗಲಾಚಿದಳು. ಶಿವನು ಉತ್ತರಕ್ಕೆ ತಲೆಯಿಟ್ಟು ಮಲಗಿದ ಮನುಷ್ಯನ ತಲೆಯನ್ನೋ ಪ್ರಾಣಿಯ ತಲೆಯನ್ನೋ ಕಡಿದು ತಂದು ಮುಂಡಕ್ಕೆ ಸೇರಿಸಲು ತನ್ನ ಗಣಗಳಿಗೆ ಹೇಳಿದ. ಉತ್ತರಕ್ಕೆ ಮುಖಮಾಡಿಮಲಗಿದ ಮನುಷ್ಯ ಸಿಗದೆ ಹೋದಾಗ ಈ ದಿಕ್ಕಿಗೆ ಮುಖಮಾಡಿ ಮಲಗಿದ ಆನೆಯ ಸೊಂಡಿಲನ್ನೇ ಕತ್ತರಿಸಿ ಈ ಮೂರ್ತಿಗೆ ಹಚ್ಚಲಾಗಿ ಅವನು 'ಗಜವದನ'ನಾಗಿ ಮೇಲೆದ್ದ ಈಗ ಪ್ರಸ್ತುತ ನಂಬಿಕೆಯ ಹಿನ್ನೆಲೆಯಿಷ್ಟೇ ಉತ್ತರಕ್ಕೆ ತಲೆಗೊಟ್ಟು ಮಲಗಿದರೆ ಆನೆಗೆ ಬಂದಗತಿ ತಮಗೂ ಬಂದೀತೆನ್ನುವುದು. ಇಂಥ ಕಲ್ಪಕಥೆಗಳು ನಮ್ಮ ಜನಪದರಲ್ಲಿ ಹೇರಳವಾಗಿದೆ.[೨೨೧] ವೈಜ್ಞಾನಿಕ ಸತ್ಯವನ್ನು ಗರ್ಭೀಕರಿಸಿಕೊಂಡ ಜಾನಪದ ನಂಬಿಕೆಗಳು ನಮ್ಮಲ್ಲಿ ಸಾಕಷ್ಟಿದೆ.

೧. ರಾತ್ರಿ ಹೊತ್ತು ಕಸ ಚೆಲ್ಲಬಾರದು.

೨.ಕಂಬವನ್ನು ಕಾಲಿನಿಂದ ಒದೆಯಬಾರದು.

೩.ನಿಚ್ಚಣಿಕೆಯ ಬುಡದಲ್ಲಿ ಹಾಯಬಾರದು.

೪.ದೀಪ ಆರಿದ ಮೇಲೆ ಊಟ ಮಾಡಬಾರದು.

ಕಸದಲ್ಲಿ ಬೆಲೆಬಾಳುವ ವಸ್ತು ಇರಬಹುದು. ರಾತ್ರಿ ಹೊತ್ತು ಅದು ಕಾಣುವುದಿಲ್ಲ. ಅದ್ದರಿಂದ ಚೆಲ್ಲಕೂಡದು. ಕಂಬದ ಮೇಲೆ ಮಾಳಿಗೆ ನಿಂತಿರುತ್ತದೆ. ಹುಳ ತಿಂದು ನೀರು ಕುಡಿದ ಕಂಬದ ಕಟ್ಟಿಗೆ ನೀಸ್ಸತ್ವವಾಗಿರಬಹುದು. ಒದ್ದದ್ದೇ ಒಂದು ನೆವವಾಗಿ ಅಪಘಾತ ಉಂಟಾಗಬಹುದು. ಹೀಗೆಯೇ ಉಳಿದ ನಂಬಿಕೆಗಳನ್ನು ತೀರ ಸಹಜವಾಗಿ ವೈಜ್ಞಾನಿಕವಾಗಿ ಸಮರ್ಥಿಸಿಕೊಳ್ಳ ಬಹುದು.[೨೨೨]

ಜಾನಪದ ವೈದ್ಯ ವೈಜ್ಞಾನಿಕ ಸತ್ಯದ ನೆಲೆಯಲ್ಲಿಯೇ ಪ್ರಾರಂಭಗೊಂಡು ಬೆಳೆದು ಬಂದದ್ದು. ಇಂದು ಜಾನಪದ ವೈದ್ಯವನ್ನು ಜಾನಪದ ನಂಬಿಕೆಗಳಿಂದ ಬೇರ್ಪಡಿಸಲಾಗುತ್ತದೆ. ವೈದ್ಯನ ಸಹಾಯವಿಲ್ಲದೇ ಒಂದೊಂದು ರೋಗಕ್ಕೆ ಬಳಸುವ ಮದ್ದು. ಮಾಡುವ ಚಿಕಿತ್ಸೆ ಕೇವಲ ರೂಢಿ ನಂಬಿಕೆ. ಈ ಮದ್ದು ಅಥವಾ ಚಿಕಿತ್ಸೆಯಿಂದ ರೋಗಿಯಲ್ಲಿ ಉಂಟಾಗುವ ಪ್ರತಿಕ್ರಿಯೆ ಅವರಿಗೆ ತಿಳಿಯುವ ವಿಷಯವಲ್ಲ. ಇಲ್ಲಿ ಪ್ರತಿಕ್ರಿಯೆಗಿಂತಲೂ ಪರಿಣಾಮ ಮಾತ್ರ ಗ್ರಾಹ್ಯ.

೧. ಎತ್ತಿಗೆ ಕಾಲಬ್ಯಾನಿ ಬಂದರ ಕಾಯ್ದ ಮಣ್ಣಾಗ ನಿಂದರಿಸಬೇಕು.

೨. ಅಜವಾನ ತಿಂದರ ಹೊಟ್ಟೆ ಕಡಿತ ನಿಲ್ಲತಾದ.

೩. ತಲೆನೋವು ಬಂದಾಗ ಬಳೆಯ ಚೂರನ್ನು ದೀಪದಲ್ಲಿ ಬಿಸಿಮಾಡಿ ಹಣೆಯ ಎರಡು ಪಕ್ಕಕ್ಕೂ ಚುಟಿಕೆ ಹಾಕಿದರೆ ತಕ್ಷಣ ನಿಂತು ಹೋಗುತ್ತದೆ.

೪. ಆನೆಯ ಲದ್ದಿಯನ್ನು ತುಳಿದರೆ ಮುಂದೆ ಕಾಲಿಗೆ ಸಂಬಂಧವಾದ ಯಾವ ರೋಗವೂ ಬರುವುದಿಲ್ಲ.

ಅನೇಕ ಸಲ ಸ್ವಾರ್ಥ ಸಾಧನೆಗೆ ಪುರೋಹಿತ ವರ್ಗದವರು, ಮಂತ್ರವಾದಿಗಳು ಔಷಧಿಯನ್ನು ದೇವರ ಹೆಸರಿನಲ್ಲಿ ಕೊಡುವುದುಂಟು. ತೆಗೆದುಕೊಂಡ ವ್ಯಕ್ತಿ ಕೇವಲ ಅದನ್ನು ನಂಬಿಕೆಯಿಂದ ಸ್ವೀಕರಿಸುತ್ತಾನೆ. ತರುವಾಯ ರೋಗಿ ಗುಣಮುಖವಾಗುವದು ಔಷಧಿಯಿಂದಲೇ ಅದರೂ ಅದು ಪೂಜಾರಿಕೊಟ್ಟ ದೇವರ ಪ್ರಸಾದದಿಂದ ಎನ್ನುವುದು ಕೇವಲ ನಂಬಿಕೆ. ಆಧುನಿಕ ವಿಚಾರವಂತರು ಇದರ ಶೋಷಣೆ ಕುರಿತಂತೆ ಎಷ್ಟೆ ತಲೆ ಕೆಡಿಸಿಕೊಂಡರೂ ಜನಪದರ ಇಂಥ ನಂಬಿಕೆಗಳನ್ನು ಬೇರುಸಮೇತ ಕಿತ್ತೆಸೆಯುವುದು ಪ್ರಯಾಸದ ಕೇಲಸ.[೨೨೩]

ಒಂದೇ ನಂಬಿಕೆ ಪ್ರದೇಶಕ್ಕನುಗುಣವಾಗಿ ಭಿನ್ನ ಫಲವನ್ನು ಕೊಡಬಹುದು. ಒಲೆ ನಕ್ಕರೆ ನೆಂಟರು ಬರುತ್ತಾರೆ. ಎನ್ನುವುದು ದಕ್ಷಿಣ ಕರ್ನಾಟಕದ ನಂಬಿಕೆಯಾದರೆ, ಒಲೆ ನಕ್ಕರೆ ಜಗಳ ಆಗುತ್ತೆ. ಎನ್ನುವುದು ಉತ್ತರ ಕರ್ನಾಟಕದ ನಂಬಿಕೆ. ಒಂದೇ ಅಂಕಿ ಪ್ರಾದೇಶಿಕವಾಗಿ ಶುಭವೂ ಆಗಬಹುದು, ಅಶುಭವೂ ಆಗಬಹುದು. ಸಂಖ್ಯೆ ಮೂರನ್ನು ಕೆಲವು ಕಡೆಗೆ ಶುಭವೆನ್ನುತ್ತಾರೆ ಉತ್ತರ ಕರ್ನಾಟಕದಲ್ಲಿ ಮೂರು ಅಶುಭ ಸಂಖ್ಯೆ ಎನಿಸುತ್ತದೆ. ದೇವಸ್ಥಾನದಾಗ ಕಾಯಿ ಒಡೆಯುವಾಗ ತೊಟ್ಟಿಲುಗಾಯಿಯಾದರೆ ಗಂಡು ಮಗು ಆಗುತ್ತದೆ.[೨೨೪] ಎನ್ನುವ ದಕ್ಷಿಣ ಕರ್ನಾಟಕದ ನಂಬಿಕೆಯಲ್ಲಿ ಶುಭವು ಗಂಡುಮಗುವಿನ ಜನನಕ್ಕೆ ಮಾತ್ರ ಸೀಮಿತವಾಗಿದೆ.

೪. ಮಾಟ– ಮಂತ್ರ :-

ಮಾಟ ಮಂತ್ರಗಳು ನಂಬಿಕೆಯಡಿಯಲ್ಲಿಯೇ ಸೇರುತ್ತವೆ. ಸಾಮಾನ್ಯರಲ್ಲಿ ನೆಲೆನಿಂತ ದೇವಭಯ ಮತ್ತು ಭೂತಭಯಗಳನ್ನು, ಮಂತ್ರವಾದಿಗಳು ಚೆನ್ನಾಗಿ ಉಪಯೋಗಿಸಿಕೊಂಡರು. "ಮಾಟ ವಿಜ್ಞಾನಕ್ಕಿಂತಲೂ ಪ್ರಾಚೀನವಾದದು. ದೋಷ ವಿಮುಕ್ತವಾದ ಅಥವಾ ದೋಷಪೂರ್ಣವಾದ ತರ್ಕ ಅದರ ಪ್ರಮುಖ ಲಕ್ಷಣ. ತಾರ್ಕಿಕ ಪ್ರಜ್ಞೆ ಒಂದಲ್ಲ ಒಂದು ರೀತಿಯಲ್ಲಿ ಆದಿಮಾನವರಲ್ಲಿಯೂ ಇತ್ತು. ಅದು ಮಾನವ ಸಹಜವಾದ ಗುಣ ಎಂಬುದಂತೂ ಸತ್ಯ. ಆದ್ದರಿಂದ ವಿಜ್ಞಾನಕ್ಕೆ ಮಾಟವೇ ಮೂಲ ಅದು ಪ್ರೇರಕ ಅಥವಾ ಸ್ಫೂರ್ತಿ ಶಕ್ತಿಯೆಂದು ಧಾರಾಳವಾಗಿ ಹೇಳಬಹುದು. ಮಾಟಕ್ಕೆ ವೈಜ್ಞಾನಿಕ ತಳಹದಿಯಿದ್ದರೂ ಈ ವೈಜ್ಞಾನಿಕ ಕಾರ್ಯಕಲಾಪಗಳ ಹಿನ್ನೆಲೆ ಮಾತ್ರ ಸಾಮಾನ್ಯರಿಗೆ ಗೊತ್ತಾಗಲಾರದಂತೆ ನಡೆಯುವುದೇ ಮಾಟದ ವಿಶೇಷತೆ. ನಿಂಬೆಹಣ್ಣು, ಸೂಜಿ, ಕೇರು ಮುಂತಾದವುಗಳು ಜಾನಪದರಿಗೆ ಕೇವಲ ಕುತೂಹಲದ ಅಥವಾ ಭಯದ ವಸ್ತುಗಳು. ಇವುಗಳ ಕ್ರಿಯೆಯ ಗುಟ್ಟು ಉಳಿದವರಿಗೆ ಗೊತ್ತಿರದಾಗ ಜನಸಾಮಾನ್ಯರ ಪಾಲಿಗೆ ಮಾಟವೆನಿಸುತ್ತದೆ. ಸ್ವತಃ ಮಂತ್ರವಾದಿಗೇ ತನ್ನ ಮಾಟದ ಹಿಂದಿರುವ ವೈಜ್ಞಾನಿಕ ಸತ್ಯ ಎಷ್ಟು ಗೊತ್ತುಂಟೊ ! ಅದು ಗುರುವಿನಿಂದ ಕೇವಲ ಒಂದು ನಂಬಿಕೆಯಾಗಿ ಈ ಮಾಟಗಾರನಿಗೆ ಬಂದಿರಬಹುದು. ಕಾಲಕ್ರಮೇಣ ತನ್ನ ಮಾಟಕ್ಕೆ ವೈಜ್ಞಾನಿಕ ತಳಹದಿಯಿದೆ ಎಂದು ಗೊತ್ತಾದ ಮೇಲೂ ಅವನು ಸ್ವಾರ್ಥಕ್ಕಾಗಿ ಗುಟ್ಟನ್ನು ಬಹಿರಂಗಪಡಿಸಲಿಕ್ಕಿಲ್ಲ.[೨೨೫]

ಮಂತ್ರವಾದಿಯ ಮಂತ್ರ ಪ್ರಭಾವವೋ ಔಷಧಿಯ ಪ್ರಭಾವವೋ ಮಂತ್ರವಾದಿಯು ಔಷಧಿಯ ಅಥವಾ ಉಪಕರಣದ ಪ್ರಭಾವವೋ ಮಂತ್ರವಾದಿಯ ಕಾರ್ಯ ಕ್ಷೇತ್ರ ಏನೇ ಇರಲಿ, ಜಾನಪದರಿಗೆ ಮಾತ್ರ ಅದು ನಂಬಿಕೆ, ಹೀಗಾಗಿ ಮಾಟದ ಹೆಸರಿನಲ್ಲಿ ಅಥವಾ ದೇವರ ಹೆಸರಿನಲ್ಲಿ ಒಂದು ಲಿಂಬೆಹಣ್ಣು ಮಂತ್ರವಾದಿಯ ಕೈಯಲ್ಲಿರುವವರಿಗೆ ಅದು ಕೇವಲ ಮಾಟದ ವಸ್ತು ಅದನ್ನು

ತಂದು ಮನೆಯಲ್ಲಿ ನೇತುಹಾಕುವುದು ಅಥವಾ ಕೊರಳಲ್ಲಿ ಕಟ್ಟಿ ಕೊಳ್ಳುವುದು ನಂಬಿಕೆ ಅದನ್ನು ನೇರವಾಗಿ ಔಷಧಿಗಳಲ್ಲಿ ಒಂದೆಂದು ಪರಿಗಣಿಸುವುದು ಜಾನಪದ ವೈದ್ಯ. ಮಾಟವನ್ನು ಸಾದೃಶ್ಯ ಮೂಲ ಮತ್ತು ಸಂಸರ್ಗಮೂಲ ಎಂದು ಎರಡು ಭಾಗವಾಗಿ ವಿಭಜಿಸುವುದುಂಟು, "ಪರಸ್ಪರ ಹೋಲುವ ವಸ್ತುಗಳು ಒಂದೇ ಎಂಬ ಭಾವನೆ ಸಾದೃಶ್ಯ ಮೂಲ ಮಾಟದ ರಹಸ್ಯ; ಒಮ್ಮೆ ಸಾಹಸಚರ್ಯ ಸಂಬಂಧ ಹೊಂದಿರುವ ವಸ್ತುಗಳು ಸದಾ ಅದೇ ಸಂಬಂಧ ಹೊಂದಿರುತ್ತವೆನ್ನುವವಾದ ಸಂಸರ್ಗ ಮೂಲ ಮಾಟದ ಗುಟ್ಟು".[೨೨೬]

ಕಾಲ ಉರುಳಿದಂತೆ ನಂಬಿಕೆಗಳು ಹೊಸ ಹೊಸ ಪರಿಸರಕ್ಕೆ ಹೊಂದಿಕೊಂಡು ಹುಟ್ಟುತ್ತಲೇ ಇವೆ. ವಿಜ್ಞಾನ ಎಷ್ಟೇ ಬೆಳೆದಿದೆ ಎಂದರೂ ಮನುಷ್ಯನಲ್ಲಿ ವೈಚಾರಿಕತೆ ಎಷ್ಟೇ ತುಂಬಿದೆಯೆಂದರೂ ನಂಬಿಕೆಗಳು ಹುಟ್ಟುತ್ತಿರುವುದು ವಿಪರ್ಯಾಸವೆನಿಸಿದರೂ ವಾಸ್ತವ ಸತ್ಯ. ಕನಸಿನಲ್ಲಿ ಬಸ್ಸು, ರೈಲು ಪ್ರಯಾಣ ಕಂಡರೆ ಯಾರದ್ದಾದರೂ ಶವ ಸಂಸ್ಕಾರಕ್ಕೆ ಪ್ರಯಾಣ ಬೆಳೆಸಬೇಕಾಗುತ್ತದೆ. ಎನ್ನುವ ನಂಬಿಕೆಯಾಗಲಿ, ಬೀಡಿ, ಸಿಗರೇಟು ದೇವರ ದೀಪಕ್ಕೆ ಹಿಡಿದು ಹೊತ್ತಿಸ್ಕೋಬಾರದು ಎನ್ನುವ ನಿಷೇಧವಾಗಲಿ ತೀರ ಇತ್ತೀಚಿನ ಬೆಳವಣಿಗೆಗಳು. ಇಂದಿಗೂ ಅನೇಕ ಪಟ್ಟಣಗಳಲ್ಲಿ ಭವಿಷ್ಯಕಾರರು ತುಂಬಿಕೊಂಡಿದ್ದಾರೆ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು, ಚುನಾವಣೆಗೆ ನಿಂತ ಹುರಿಯಾಳುಗಳು, ಮದುವೆಗೆ ಹಾತೊರೆಯುವ ಪ್ರೇಮಿಗಳು ಈ ಭವಿಷ್ಯಕಾರರ ಧೋರಣೆಗಳತ್ತ ದೌಡಾಯಿಸುತ್ತಲೇ ಇದ್ದಾರೆ.[೨೨೭]

ಜನಪದ ನಂಬಿಕೆಗಳನ್ನು ಈ ಕೆಳಗಿನ ವಿಧಗಳಲ್ಲಿ ಕಾಣಬಹುದಾಗಿದೆ.

೧. ಸಾಮಾನ್ಯ ನಂಬಿಕೆಗಳು
೨. ವಾಸ್ತವ(ವೈಜ್ಞಾನಿಕ) ನಂಬಿಕೆಗಳು
೩. ಮೂಢ ನಂಬಿಕೆಗಳು
೪. ಧಾರ್ಮಿಕ ನಂಬಿಕೆಗಳು
೫. ಪೌರಾಣಿಕ ನಂಬಿಕೆಗಳು
೬. ಐತಿಹಾಸಿಕ ನಂಬಿಕೆಗಳು
೭. ಸಾಮಾಜಿಕ ನಂಬಿಕೆಗಳು
೮. ಅತಿಮಾನುಷ ನಂಬಿಕೆಗಳು
೯. ಮಾನುಷ ನಂಬಿಕೆಗಳು
೧೦. ಅಂಗಾಂಗಗಳಿಗೆ ಸಂಬಂಧಿಸಿದ ನಂಬಿಕೆಗಳು
೧೧. ಜನಪದ ವೈದ್ಯ ಮತ್ತು ನಂಬಿಕೆ
೧೨. ಆಭರಣ ಮತ್ತು ನಂಬಿಕೆಗಳು
೧೩. ಪ್ರಕೃತಿ ಮತ್ತು ನಂಬಿಕೆಗಳು
೧೪. ಪ್ರಾಣಿ ಪಕ್ಷಿ ಸಂಬಂಧ ನಂಬಿಕೆಗಳು
೧೫. ಕೌಟುಂಬಿಕ ಮತ್ತು ನೀತಿಪ್ರಧಾನ ನಂಬಿಕೆಗಳು
೧೬. ಕೃಷಿ ನಂಬಿಕೆಗಳು.

೧. ಸಾಮಾನ್ಯ ನಂಬಿಕೆಗಳು :-

ಸಾಮಾನ್ಯ ನಂಬಿಕೆಗಳಲ್ಲಿ ಮೂಢ ನಂಬಿಕೆಯು ಇಲ್ಲ; ವೈಜ್ಞಾನಿಕ ಆಧಾರವು ಇಲ್ಲ. ಕೇವಲ ನಂಬಿಕೆಗಾಗಿ ನಂಬಿಕೆ ಇರುವಂಥವುಗಳು ಉದಾ: ಯಾವುದೇ ಕೆಲಸ ಕಾರ್ಯಗಳಿಗೆ ಹೋಗುವಾಗ ಬೆಕ್ಕು ಅಡ್ಡ ಬಂದರೆ ಕೆಲಸ ಆಗುವುದಿಲ್ಲ ಎಂಬ ನಂಬಿಕೆ. ಅದರಲ್ಲೂ ಕಪ್ಪು ಬಣ್ಣದ ಬೆಕ್ಕು ಅಡ್ಡ ಬಂದರಂತೂ ಕೆಲಸ ಆಗುವುದೇ ಇಲ್ಲ ಎಂಬುದು. ಎಷ್ಟೋ ಸಲ ಕಾಕತಾಳೀಯವೆಂಬಂತೆ ಕೆಲಸ ಆಗದೆ ಇದ್ದಾಗ "ನೋಡು ಬೆಕ್ಕು, ಅಡ್ಡ ಬಂದಿತ್ತು ಹೀಗಾಯಿತು" ಎಂದು ಮಾತನಾಡುತ್ತೇವೆ. ಆದರೆ ಹಲವಾರು ಸಲ ಬೆಕ್ಕು ಅಡ್ಡ ಹೋದರೂ ಹೋದ ಕೆಲಸಗಳು ಆಗುತ್ತವೆ. ಆವಾಗ ಈ ಕುರಿತು ಚಿಂತಿಸುವುದಿಲ್ಲ. ಕೆಲವರು ಬಲದಿಂದ ಎಡಕ್ಕೆ, ಹೋಗಬಾರದು, ಎಡದಿಂದ ಬಲಕ್ಕೆ ಹೋಗಬಾರದು, ಅಥವಾ ಎದುರಿಗೆ ಬರಬಾರದು ಎಂಬಿತ್ಯಾದಿ ನಂಬಿಕೆಗಳನ್ನು ಹೇಳುತ್ತಾರೆ. ಈ ರೀತಿ ಅಡ್ಡ ಬಂದರೆ ಸ್ವಲ್ಪ ಹೊತ್ತು, ಕೂತು ಹೋಗಬೇಕು.[೨೨೮] ಇಲ್ಲವೆ ಸ್ವಲ್ಪ ಹಿಂದೆ ಬಂದು ಹೋಗಬೇಕು ಎಂಬ ಪರಿಹಾರಗಳನ್ನು ಹೇಳುತ್ತಾರೆ. ಬೆಕ್ಕು, ಅಡ್ಡ ಅಥವಾ ಎದುರಿಗೆ ಬರುತ್ತಿದ್ದು ಇದ್ದಕ್ಕಿದ್ದಂತೆ ಹಿಂದಕ್ಕೆ ಹೋರಟು ಹೋದರೆ ಬರುವ ವಿಘ್ನಗಳೆಲ್ಲ ದೂರ ಹೋದಂತೆ ಎಂಬ ನಂಬಿಕೆಯೂ ಇದೆ.

ಇದೇ ರೀತಿ ಕಾಗೆ ನೆತ್ತಿ ಬಡಿದರೆ ಕೆಡುಕಾಗುತ್ತದೆ ಎಂಬ ನಂಬಿಕೆ ಇದೆ. ಕಾಗೆ ಯಾವಾಗ ನೆತ್ತಿ ಬಡಿಯುತ್ತದೆಂದರೆ ಕೈಯಲ್ಲಿ ತಿನ್ನುವ ಪದಾರ್ಥ (ರೊಟ್ಟಿ, ಚಪಾತಿ) ಇದ್ದರೆ ಅದನ್ನು ತೆಗೆದುಕೊಂಡು ಹೋಗಬೇಕೆಂಬ ಕಾರಣಕ್ಕೆ ಭರ್ರನೆ ಬಂದು ಬಡಿಯುತ್ತದೆ. ಹೊರತು ಕಾಗೆಗೆ ನೆತ್ತಿ ಬಡಿಯಬೇಕೆಂಬ ಉದ್ದೇಶವಿಲ್ಲ. ಜೊತೆಗೆ ಕಾಗೆ ಮನೆ ಹೊಕ್ಕರೆ ಅಪಶಕುನ ಎಂಬ ನಂಬಿಕೆ; ಕಾಗೆಗಳು ಮನೆಯ ಒಳಗೆ ಬರುವುದೇ ಇಲ್ಲ. ಮನೆಯ ಅಕ್ಕ ಪಕ್ಕದಲ್ಲಿ ಅವುಗಳು ತಿನ್ನುವ ಪದಾರ್ಥ, ಮುಸುರೆ ಮೊದಲಾಗಿ ತಿನ್ನುತ್ತ ಇರುವಾಗ ಸಹಜವಾಗಿ ಹಾರಿ ಬಂದರೆ ಬರಬಹುದು. ಇಲ್ಲವೆ ಗಾಬರಿಯಲ್ಲಿ ಇದ್ದಕ್ಕಿದಂತೆ ಬರಬಹುದು. ಬಂದರು ತಕ್ಷಣ ಹೊರಟು ಹೋಗುತ್ತವೆ.[೨೨೯] ಕಾಗೆ ಕಪ್ಪಾಗಿರುವುದರಿಂದ ಕಪ್ಪು ತಿರಸ್ಕಾರದ ಬಣ್ಣ ಎಂಬ ನಂಬಿಕೆ ಇದೆ. ಹಾಗಾಗಿ ಅದು ಅಪಶಕುನ ಎಂಬ ನಂಬಿಕೆ ಬೆಳೆದಿದೆ.

ಇದೇ ಕಾಗೆ ನೆಂಟರು ಬರುವ ಸಂದೇಶ ಸಾರುವುದು ಆಗಿದೆ. ಇದು ಒದರಿದರೆ ನೆಂಟರು ಬರುತ್ತಾರೆ ಎಂಬ ನಂಬಿಕೆ ಇದೆ. ಕಾಗೆ ಒದರುವುದಕ್ಕೂ ನೆಂಟರು ಬರಲಿಕ್ಕು ಕೂಡಿದ ಯಾವುದೋ ಒಂದು ಸಂದರ್ಭವಿರಬಹುದು. ಅದು ನಂಬಿಕೆಯಾಗಿ ಬೆಳೆದು ಬಂದಿದೆ. ಕಾಗೆಗಳು ಮನೆ ಹತ್ತಿರದ ಮರದ ಮೇಲೆ ಮನೆ ಕಟ್ಟಿಕೊಂಡಿದ್ದರೆ ದಿನಾಲೂ ಮನೆ ಮೇಲೆ ಕೂತು ಒದರುತ್ತವೆ. ಹಾಗೆಂದು ದಿನಾಲೂ ನೆಂಟರು ಬಂದಿರುತ್ತಾರೆಯೆ ? ಇಲ್ಲ. ಎಷ್ಟೋ ನಂಬಿಕೆಗಳಿಗೆ ಅದು "ಕಾಕತಾಳೀಯ" ಎಂದು ಮಾತನಾಡುವಲ್ಲಿ ಕಾಗೆಯೇ ಪರಿಹಾರವಾಗಿದೆ. ಏಕೆಂದರೆ "ಕಾಗೆ ಕೂಡಲಿಕ್ಕು, ಟೊಂಗೆ ಮುರಿಯಲಿಕ್ಕು" ಸರಿಹೋಯ್ತು. ಹಾಗೆಂದು ಕಾಗೆಯ ಭಾರಕ್ಕೆ ಟೊಂಗೆ ಮುರಿಯುತ್ತದೆಯೇ ? ಎಂಬುವುದು.ಹಲ್ಲಿ ಒದರಿದರೆ ಅಪಶಕುನ ಎನ್ನುವ ನಂಬಿಕೆ ಉಳ್ಳವರಿದ್ದಾರೆ. ಕೆಲವರು ಒಮ್ಮೆ ಒದರಿದರೆ ಅಪಶಕುನ ಎರಡು ಸಲ ಒದರಿದರೆ ಏನು ಇಲ್ಲ ಎನ್ನುತ್ತಾರೆ. ಕೆಲವರು ಮಾಡನಾಡುವಾಗ ಅವರ ಮಾತಿಗೆ ಹಲ್ಲಿ ಒದರುವುದಕ್ಕೂ ಒಂದೇ ಸಮಯ ಕೂಡಿದರೆ "ನೋಡು ನಾನ್ಹೇಳಿದ್ದೆ ಸರಿ. ನಾನು ಹೇಳಿದಾಗಲೆ ಹಲ್ಲಿ ಲೊಚಗುಟ್ಟಿತು" ಎಂದು ತಮ್ಮ ಮಾತು ಸಮರ್ಥಿಸಿಕೊಳ್ಳುತ್ತಾರೆ.[೨೩೦]

ಗೂಗಿ ಒದರಿದರೆ ಕೆಡುಕು ಎಂಬ ನಂಬಿಕೆಗಳಿವೆ. ಹಾಗೆಂದು ಗೂಗಿ ಒದರದೆ ಇರಲಿಕ್ಕಾಗುತ್ತದೆಯೇ ? ಗೂಗಿ ಒದರುವುದೆ ರಾತ್ರಿ ಸಂದರ್ಭದಲ್ಲಿ ಇದರಿಂದಾಗಿ ಕೆಲವರು ಮಕ್ಕಳಿಗೆ ''ಗೂಗಿ ಒಳ್ಳೊ ಕಡಿಗೆ ತಗೊಂಡು ಹೋಯ್ತಾ ನೋಡು'' (ಗೂಗಿ ಒದರುವ ಕಡೆಗೆ ತೆಗೆದುಕೊಂಡು ಹೋಗುತ್ತೇನೆ ನೋಡು) ಎಂದು ಹೆದರಿಸಿ ಸುಮ್ಮನಾಗಿಸುವ ಪರಿಯೂ ಇದೆ.ದಾರಿಯಲ್ಲಿ ಹೋಗುವಾಗ ತುಂಬಿದ ಕೊಡ ತೆಗೆದುಕೊಂಡು ಬಂದರೆ ಒಳ್ಳೆಯದು, ಖಾಲಿ ಕೊಡ ಬಂದರೆ ಕೆಡಕು ಎಂಬ ನಂಬಿಕೆ. ಬಹುಶಃ ತುಂಬಿದ ಕೊಡದ ಸಂಕೇತ ಸದಾ ಕಾರ್ಯಗಳು ತುಂಬಿ ಸಾಗಲಿ, ಮನೆ ತುಂಬಿರಲಿ, ಎಂಬುದು ಖಾಲಿ ಕೊಡ ಬಂದರೆ ಕೆಲಸವೆಲ್ಲ ಖಾಲಿ ಆದಂತೆಯೇ ಎಂಬುದಾಗಿದೆ. ಹೀಗಾಗಿ ಇದು ಮೂಢವೂ ಅಲ್ಲ ಇದಕ್ಕೆ ವೈಜ್ಞಾನಿಕ ಆಧಾರವೂ ಇಲ್ಲ.

೨. ವಾಸ್ತವ (ವೈಜ್ಞಾನಿಕ) ನಂಬಿಕೆಗಳು :-

ವಾಸ್ತವ ನಂಬಿಕೆಗಳೆಂದರೆ ಬದುಕಿನ ಒಂದಿಲ್ಲೊಂದು ಸಂದರ್ಭಗಳಲ್ಲಿ ಅನಿವಾರ್ಯತೆ ಹಾಗೂ ಅವಶ್ಯಕತೆಗಳಿಗೆ ಹೊಂದಿಕೊಂಡಿರುವಂಥವುಗಳು. ಅಷ್ಟೇ ಅಲ್ಲ ನೇರ ಮಾತಿನ ಹಿನ್ನೆಲೆಯಲ್ಲಿ ಹೇಳಿದರೆ ಮಾತಿನ ಪರಿಣಾಮಕ್ಕಿಂತ ನಂಬಿಕೆಯ ಹಿನ್ನೆಲೆಯಲ್ಲಿ ಹೇಳಿದರೆ ಕಟ್ಟು ನಿಟ್ಟಾಗಿ ಪಾಲನೆ ಮಾಡುತ್ತಾರೆಂಬ ಒಳಗುಟ್ಟು ಅಡಗಿದೆ. ಉದಾ: ಊಟ ನೀಡುವಾಗ ಒಮ್ಮೆ ನೀಡಬಾರದು ಎಂಬ ನಂಬಿಕೆ. ವಾಸ್ತವದಲ್ಲಿ ಸಾಕು ಅಂದರು ಕೂಡ ಇನ್ನು ಒಂದೆರಡು ತುತ್ತು ಊಟ ಮಾಡಲಿ ಎನ್ನುವ ದೃಷಿಯಿಂದ ಮತ್ತೊಂದು ಅರ್ಧ ಚಮಚ ಬಡಿಸುವುದಾಗಿದೆ.ಮೂರು ಸಂಜೆ ಹೊತ್ತು ಮಲಗಬಾರದು ಎನ್ನುವುದು. ಮೂರು ಸಂಜೆ ಹೊತ್ತು ಎಂದರೆ ೪ ಮತ್ತು ೫ ಗಂಟೆಯ ಸಮಯ. ಸಾಮಾನ್ಯವಾಗಿ ಕೆಲವರು ಮಧ್ಯಾಹ್ನ ೨ ರಿಂದ ೩ರ ವರೆಗೆ ಮಲಗಿಏಳುತ್ತಾರೆ. ಆದರೆ ತೀರಾ ಸಾಯಂಕಾಲ ಮಲಗಿ ರಾತ್ರಿ ೭-೮ ಘಂಟೆಗೆ ಎದ್ದರೆ ಪುನಃ ರಾತ್ರಿಗೆ ಬೇಗ ನಿದ್ರೆ ಬರುವುದಿಲ್ಲ. ಎನ್ನುವ ಸತ್ಯ ಒಂದಾದರೆ ಬೆಳಿಗ್ಗೆ ೫ ರಿಂದ ೬ ಗಂಟೆ, ಸಂಜೆ ೫-೬ ಗಂಟೆ ವಾಯುವಿಹಾರಕ್ಕೆ ತಕ್ಕುದಾದ ಸಮಯ.[೨೩೧] ಈ ಸಮಯಗಳಲ್ಲಿ ಮನುಷ್ಯ ಮಲಗುವವನು ರೋಗಿ, ಓಡಾಡುವವನು ನಿರೋಗಿ ಎಂಬ ವೈಜ್ಞಾನಿಕ ಸತ್ಯವು ಇದೆ.

ಮಜ್ಜಿಗೆ ಕುಡಿಯುವಾಗ ನಿಂತು ಕುಡಿಯಬಾರದು ಹಾಗೆ ಕುಡಿದರೆ ಹಾಲುಕೊಡುವ ಆಕಳು ಅಥವಾ ಎಮ್ಮೆ ಒದ್ದು ಹೋಗುತ್ತದೆ (ಅಂದರೆ: ಹಾಲು ಕೊಡುವುದು ನಿಲ್ಲಿಸಿ ಬಿಡುತ್ತದೆ) ಎಂಬುದು. ಮಜ್ಜಿಗೆ ಅಷ್ಟೇ ಅಲ್ಲ ಯಾವುದೇ ಪಾನೀಯ ನೀರು ಕೂಡ ನಿಂತು ಕುಡಿಯಬಾರದು ಏಕೆಂದರೆ ನಿಂತು ಕುಡಿಯುವುದರಿಂದ ನೇರವಾಗಿ ಕರುಳಿಗೆ ತಾಗುತ್ತವೆ. ಕೂತು ಕುಡಿದರೆ ನಿಧಾನವಾಗಿ ಹೊಟ್ಟೆಯಲ್ಲಿ ಹೋಗುತ್ತವೆ ಎಂಬುದು ವೈಜ್ಞಾನಿಕ ಸತ್ಯ. ಆದರೆ ನೇರವಾಗಿ ಈ ರೀತಿ ಹೇಳಿದರೆ ನೀನು ಕುಡಿಯುವ ಮಜ್ಜಿಗೆ, ಹಾಲು ನಿಂತು ಕುಡಿದರೆ ಹಾಲು ಕೊಡುವ ಆಕಳು ಅಥವಾ ಎಮ್ಮ ಹಾಲು ಕೊಡದೆ ಇದ್ದಾಗ ಗತಿ ಏನು? ಎಂಬ ಹೆದರಿಕೆಯ ಹಿನ್ನೆಲೆಯಲ್ಲಿ ಹೇಳುತ್ತಾರೆ.

ಸ್ನಾನ ಮಾಡಿ ಬರುವಾಗ ನೀರು ಕಾಯಿಸುವ ಹಂಡೆಯಲ್ಲಿ ಒಂದು ಕೊಡ ನೀರು ಹಾಕಿ ಬರಬೇಕು ಇಲ್ಲದಿದ್ದರೆ ಸ್ನಾನ ಮಾಡಿರುವುದು ವ್ಯರ್ಥ ಎನ್ನುವುದು. ಬಚ್ಚಲ ಮನೆಯಲ್ಲಿ ಒಲೆ ಉರಿಯುತ್ತ ಹಂಡೆಯಲ್ಲಿ ನೀರು ಕಾಯುತ್ತಿರುವಾಗ ಸ್ನಾನ ಮಾಡಿದವರೆಲ್ಲ ಹಾಗೆ ಬಂದರೆ ಮುಂದಿನವರಿಗೆ ಸ್ನಾನಕ್ಕೆ ನೀರಿರುವುದಿಲ್ಲ. ಹಾಗಾಗಿ ತಾನು ಸ್ನಾನ ಮಾಡಿ ಖಾಲಿ ಆದಷ್ಟು ನೀರು ಹಾಕಿದರೆ ಮುಂದಿನವರಿಗೆ ನೀರು ಕಾಯುತಿರುತ್ತವೆ ಎನ್ನುವುದು.

ಮದುವೆ ಸಂದರ್ಭದಲ್ಲಿ ಬೇಳೆ-ಕಾಳು-ಅಕ್ಕಿ ಆರಿಸುವಾಗ ಅವುಗಳು ತಿಂದರೆ ತಿಂದವರ ಮದುವೆಯಲ್ಲಿ ಮಳೆ ಬರುತ್ತದೆ. ಮದುವೆಯೆಲ್ಲ ಹಾಳಾಗುತ್ತದೆ ಎಂಬ ನಂಬಿಕೆ. ಮಳೆ ಬರುವಂತಿದ್ದರೆ ಮಳೆಗಾಲ ಕಡಿಮೆ ಆಗುವ ಇಂದಿನ ದಿನಗಳಲ್ಲಿ

ಬೇಕಂತಲೆ ಆರಿಸುವ ಕಾಳು ತಿಂದು ಮದುವೆ ಆಗುವಾಗ ಮಳೆ ಬರಿಸುಬಹುದಿತ್ತು. ಆದರೆ ಈ ಮೊದಲೆ ಹೇಳಿದಂತೆ ನಂಬಿಕೆಯ ಅರ್ಥಗಳೆಲ್ಲ ಬೇರೆಯೇ ಆಗಿದ್ದು ಹೇಳುವ ಪರಿ ಮಾತ್ರ ಹೆದರಿಕೆ ಹಾಗೂ ಮುಂದಾಗುವ ತೊಂದರೆಗೆ ಸಂಕೇತಗಳಾಗಿವೆ. ಬಹುಶಃ ಕೆಡಿಸಿಕೊಳ್ಳುವುದೇಕೆ ? ಎಂಬುದಕ್ಕಾಗಿ ಪೂರ್ವಜರು ಹುಡುಕಿರುವ ಸರಳ ಉಪಾಯಗಳಾಗಿವೆ.[೨೩೨]

ಹೆಣ್ಣು ಮಕ್ಕಳು ಸಿಕ್ಕವರ ಜೊತೆಯಲ್ಲಿ ತಮಾಷೆ ಮಾಡಬಾರದು ಎಂದು ಹೆಣ್ಣು ಗಂಡು ಸಮಾನ ಎನ್ನುವ ವಾದದಲ್ಲಿ ಯಾವುದಕ್ಕೆ ಸಮಾನತೆ ಇರಬೇಕು ಎನ್ನುವಲ್ಲಿ ಎಡುವುತ್ತಿದ್ದೇವೆ. ಊಟ, ಬಟ್ಟೆ, ಶಿಕ್ಷಣ ಮೊದಲಾದಲೆಲ್ಲ ಸಮಾನತೆ ಇರಲಿ. ಮೇಲಿನ ನಂಬಿಕೆಯಲ್ಲಿ ಪೂರ್ವಜರಿಂದ ಬೆಳೆದು ಬಂದ ಸಿದ್ಧಾಂತವೆಂದರೆ ಸಿಕ್ಕವರ ಸಂಗಡ ಹೆಣ್ಣು ಮಕ್ಕಳು ನಗೆ ಆಡುತ್ತಿದ್ದರೆ ಸಲುಗೆ ಹೆಚ್ಚಾಗಿ ದಾರಿ ತಪ್ಪುವ ಸಾಧ್ಯತೆಗಳಿರುತ್ತದೆ. ಆದ್ದರಿಂದ ತಲೆ ತುಂಬ ಸೆರಗು ಹೊದ್ದು ಕೊಂಡು ಕಾಣುವವರಿಗೆ ಚಂಚಲತೆ ಆಗದಂತೆ ಸೌಮ್ಯವಾಗಿ ಇರಬೇಕು ಎನ್ನುವುದಾಗಿದೆ. ಆದರೆ ಹೆಣ್ಣು ಮುಟ್ಟಾದಾಗ ಅಡುಗೆ ಮನೆ ಪ್ರವೇಶಿಸಬಾರದು, ಮಕ್ಕಳು ಹತ್ತಿರ ಹೋಗಬಾರದು ಎಂಬ ನಂಬಿಕೆಯಲ್ಲೂ ಸತ್ಯಾಂಶವಿದೆ. ರಜಸ್ವಲೆ ಸೂಕ್ಷ್ಮಾಣುಗಳಿಂದ ರೋಗಾಣುಗಳು ಅಂಟಬಹುದು ಆದ್ದರಿಂದ ೩ ದಿವಸಗಳವರೆಗೆ ಹೊರಗಿರಬೇಕು ಎಂಬುದು ಹಾಗೆಂದು ಮನೆಯಿಂದ ಪೂರ್ಣ ಹೊರಗಿರಬೇಕೆಂಬುದಲ್ಲ.

ಶ್ರಾವಣದಲ್ಲಿ ಗಂಡ ಹೆಂಡತಿ ಕೂಡಬಾರದು ಎಂಬ ನಂಬಿಕೆ. ಕೂಡಿದರೆ ದೇವರಿಗೆ ಒಪ್ಪುವುದಿಲ್ಲ ಹಾಗಾಗಿ ಶ್ರಾವಣ ಮಾಸ ಪಾಲಿಸಬೇಕು ಎನ್ನುವುದು. ದೇವರಿಗೆ ಒಪ್ಪಿಗೆವಾಗುತ್ತದೊ ಬಿಡುತ್ತದೊ ಆದರೆ ಹೆಣ್ಣು ಗರ್ಭವತಿ ಆಗಿ ಬಾಣಂತನ ಆಗುವುದು ಎಪ್ರಿಲ್ ಮೇ ತಿಂಗಳಲ್ಲಿ. ಆವಾಗ ಬಾಣಂತಿಗೆ ಕಾವು ಕೊಡುವುದು ಬಿಸಿ ನೀರು ಸ್ನಾನ ಮಾಡಿಸುವುದು ಬೇಸಿಗೆ ಕಾಲವಾದ್ದರಿಂದ ಇನ್ನೂ ಕಷ್ಟ ಎನ್ನುವ ಸಿದ್ಧಾಂತ ಅಡಿಗಿದೆ. ಎಷ್ಟೋ ನಾಟಿ ಔಷಧಿಗಳು ನಮ್ಮಲ್ಲಿಯೇ ಇವೆ. ಹಾವು, ಚೇಳು ಕಡಿದಾಗ ಇಂದಿಗೂ ಜನರು ಆಸ್ಪತ್ರೆಗೆ ಹೋಗದೆ ಗಿಡಮೂಲಿಕೆ ಔಷಧಿ ಕೊಡುವವರಲ್ಲಿ ಹೋಗುತ್ತಾರೆ. ಇಂಥ ಔಷಧಿಗಳು ನಮ್ಮ ಅಕ್ಕ ಪಕ್ಕದಲ್ಲಿದ್ದರೂ ನಮಗೆ ಗೊತ್ತಿಲ್ಲ. ಏಕೆಂದರೆ ಬಲ್ಲವರು ಹೇಳುವುದಿಲ್ಲ ಹೇಳಿದರೆ ಅದರ ಗುಣಕಡಿಮೆ ಆಗುತ್ತದೆ ಎನ್ನುತ್ತಾರೆ. ಔಷಧಿ ಗುಣ ಕಡಿಮೆ ಆಗುವುದಿಲ್ಲ. ಆದರೆ ಅದರ ಮಹತ್ವ ಇಲ್ಲದಂತಾಗುತ್ತದೆ.[೨೩೩]

೩. ಮೂಢ ನಂಬಿಕೆಗಳು :-

ಮೂಢ ನಂಬಿಕೆಗಳು ಹೆಸರೆ ಸೂಚಿಸುವಂತೆ ಮುರ್ಖವಾದದ ನಂಬಿಕೆಗಳು, ತಿಳುವಳಿಕೆ ಇಲ್ಲದ ನಂಬಿಕೆಗಳು, ಅರ್ಥವಿಲ್ಲದ ನಂಬಿಕೆಗಳು ಎಂದರ್ಥ; ಹಾಗೆಂದು ಎಲ್ಲವೂ ಮೂಢ ನಂಬಿಕೆಗಳೆಂದು ಹೇಳಲಾಗದು. ಇವುಗಳಲ್ಲಿ ಮೊದಲು ಯಾವುದೊ ಅರ್ಥದಲ್ಲಿ ಮಾಡಿದ ಕಾರ್ಯ ಮುಂದೆ ಅದನ್ನು ಅರಿಯದೆ ಪಾಲಿಸಿಕೊಂಡು ಬರುವುದು. ಇನ್ನೊಂದು ಅರ್ಥವಿದೆಯೋ ಇಲ್ಲವೊ ಸದ್ಯದಲ್ಲಿ ಮಾತ್ರ ಯಾವುದೇ ಹಿನ್ನೆಲೆಯಲ್ಲಿ ನೋಡಿದರೂ ಅದಕ್ಕೆ, ಅರ್ಥ ಇರುವುದಿಲ್ಲ. ೧. ಅರ್ಥವಿದ್ದು ಕಳೆದುಕೊಂಡಿದ್ದು, ೨.ಅರ್ಥವಿಲ್ಲದ್ದು, ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ. ಇವುಗಳು ಉದಾಹರಣೆಗೆ ಕೆಲವೊಂದು ಈ ಕೆಳಗಿನಂತೆ ಕಾಣಬಹುದಾಗಿದೆ.

ಒಂದು ಪ್ರಸಿದ್ಧವಾದ ನಂಬಿಕೆ ಬೆಕ್ಕನ್ನು ಕಟ್ಟಿ ಪೂಜೆ ಮಾಡುತ್ತಿದ್ದರೆಂಬ ವಿಷಯ ಗೊತ್ತಿದ್ದವರೊಬ್ಬರು ವಿಶೇಷ ಪೂಜೆ ಮಾಡುವಾಗ ಅಕ್ಕ ಪಕ್ಕದವರ ಮನೆಗೆ ಹೋಗಿ ಒಂದು ಬೆಕ್ಕು ತೆಗೆದುಕೊಂಡು ಬಂದು ಒಂದು ಕಂಬಕ್ಕೆ ಕಟ್ಟಿಯೇ ಪೂಜೆ ಮಾಡುತ್ತಿದ್ದರು. ಇದರ ಪೂರ್ವಾಪರ ಕುರಿತು ಚಿಂತಿಸಿದಲ್ಲಿ ಇವರ ಪೂರ್ವಜರೊಬ್ಬರು ಬೆಕ್ಕು ಸಾಕಿಕೊಂಡಿದ್ದರು. ಅದು ಇವರ

ಪ್ರೀತಿಯ ಬೆಕ್ಕು. ಹೀಗಾಗಿ ಪೂಜೆ ಮಾಡುವಾಗ ಪೂಜಾ ಪದಾರ್ಥಗಳಾದ ಪಂಚಾಮೃತ ಮೊದಲಾಗಿ ಚೆಲ್ಲಬಹುದು ಹಾಗೂ ಪೂಜೆಯ ಏಕಾಗ್ರತೆಗೆ ಭಂಗ ತರಬಹುದೆಂದು ಒಂದು ಕಂಬಕ್ಕೆ ಕಟ್ಟಿಯೇ ಪೂಜೆ ಮಾಡುತ್ತಿದ್ದರು.

ಇದರಂತೆಯೇ ಹಾಲು ಹಿಂಡುವಾಗ ಆಕಳ ಕಾಲು ಕಟ್ಟಿ ಹಿಂಡುತ್ತಿದ್ದರು. ಏಕೆಂದು ಕೇಳಿದರೆ ಹಾಲು ಹಿಂಡುವಾಗ ಕಾಲುಕಟ್ಟಿಯೇ ಹಿಂಡಬೇಕು, ಎಂದು ಹೇಳಿದರು. ವಾಸ್ತವದಲ್ಲಿ ಹೊಡೆಯುತ್ತವೆ. ಹೀಗಾಗಿ ಒದೆಯುವುದನ್ನು ತಪ್ಪಿಸಿಕೊಳ್ಳಲು ಕಾಲು ಕಟ್ಟಿ ಹಾಲು ಹಿಂಡುತ್ತಾರೆ. ಇಂತಹ ದೃಶ್ಯ ಮೂಕ ಪ್ರೇಕ್ಷಕರಾಗಿ ನೋಡಿದವರು. ಮುಂದೆ ಅದನ್ನೆ ಪಾಲನೆ ಮಾಡುತ್ತ ನಂಬಿಕೆಯಾಗಿ ಸೃಷ್ಟಿಸುತ್ತಾರೆ. ಹೀಗಾಗಿ ಇದು ಮೂಢ ನಂಬಿಕೆಯಾಗುತ್ತದೆ.[೨೩೪]

ವಿಧವೆ ಎದುರಿಗೆ ಬಂದರೆ ಅಪಶಕುನ ಎಂಬ ನಂಬಿಕೆ ಇದೆ. ಮೊದಲು ಪತಿ ಸತ್ತರೆ ಸತಿ ತಲೆಬೋಳಿಸಿಕೊಳ್ಳುವ ಪದ್ಧತಿ ಇತ್ತು. ಹಾಗಾಗಿ ತಲೆ ಬೋಳಿಸಿಕೊಂಡ ಹೆಣ್ಣುಮಗಳು ನೋಡಲು ಅಸಹ್ಯವಾಗಿ ಕಾಣುವಳು ಅಷ್ಟನ್ನು ಬಿಟ್ಟರೆ ಅವಳು ಯಾವ ಪಾಪವೂ ಮಾಡಿರುವುದಿಲ್ಲ. ಹೀಗೆ ಅಸಮಾನತೆಯಿಂದ, ಅಪಮಾನದಿಂದ ಕೂಡಿದ ಈ ನಂಬಿಕೆ ಮೂಢನಂಬಿಕೆಯೇ ಆಗಿದೆ. ಇದರಂತೆ ಎದ್ದಾಗ ಯಾರ ಮುಖ ನೋಡಿದೇನೊ ಏನೊ? ಕೆಲಸನೇ ಆಗಿಲ್ಲ ಎನ್ನುವುದು. ಹೀಗೆ ನೂರಾರು ನಂಬಿಕೆಗಳನ್ನು ಹೆಸರಿಸುತ್ತ ಹೋಗಬಹುದು.[೨೩೫]

'ನಂಬಿಕೆ' ಮನುಷ್ಯನ ಜೀವನದಲ್ಲಿ ಆದಿಯಿಂದಲೂ ಹಾಸುಹೊಕ್ಕಾಗಿದೆ. ಎಷ್ಟೋ ಸಲ ಇದು ಜನಪದರ ಜೀವನಕ್ರಮವನ್ನೇ ನಿರ್ದೇಶಿಸುತ್ತದೆ. ಕೆಲವೊಮ್ಮೆ ತಪ್ಪು ಅಭಿಪ್ರಾಯಗಳಿಂದ ವ್ಯಕ್ತಿಯ ಅಂತರ್ಗತದಲ್ಲಿ ಅಡಗಿ, ಅಂಧಕಾರವನ್ನು ಉಂಟು ಮಾಡಿ ಮೂಢನಂಬಿಕೆಯಾಗಿಯೂ ಕೆಲಸ ನಿರ್ವಹಿಸುತ್ತದೆ. ಮನುಷ್ಯನ ಮಾನಸಿಕ ಮೌಲ್ಯ, ಅಭಿವೃದ್ಧಿ ಸಂಪೂರ್ಣವಾಗಿ ಕುಸಿದಾಗ, ಜ್ಞಾನಸಂಪತ್ತು ನಶ್ವರವಾದಾಗ ನಂಬಿಕೆ ವಿಜೃಂಭಿಸುತ್ತದೆ.

೪. ಧಾರ್ಮಿಕ ನಂಬಿಕೆಗಳು :-

ಇದು ಮನುಷ್ಯನ ಮನಸ್ಸಿನೊಳಗಿನ ಭಯದಿಂದ ಹುಟ್ಟಿದ್ದು. ಪ್ರಕೃತಿಯ ವಿಕೋಪಗಳಾದ ಪ್ರವಾಹ, ಬರ, ಚಂಡಮಾರುತ, ಅತಿವೃಷ್ಟಿ, ಮುಂತಾದುವುಗಳಿಂದ ಕಂಗೆಟ್ಟ ಮಾನವ ಅಗೋಚರ ಶಕ್ತಿಯೊಂದನ್ನು ಆರಾಧಿಸುತ್ತ ನಂಬಿಕೆಯ ಹುಟ್ಟಿಗೆ ಕಾರಣಕರ್ತನಾದ. ದೇವಾಲಯ ಕಟ್ಟಿಸಿದರೆ ಅಷ್ಟಫಲಗಳು ದೊರೆಯುತ್ತವೆ. ದೇವರನ್ನು ಪೂಜಿಸಿದರೆ ಮಾನಸಿಕ ಶಾಂತಿ, ತೃಪ್ತಿ ಸಿಗುವುದರೊಂದಿಗೆ ಸಂತೋಷದಿಂದ ಬದುಕು ಸಾಗುತ್ತದೆ. ಹರಿಕಥೆ ಶ್ರವಣದಿಂದ, ವಾಚನದಿಂದ ಯಥೇಚ್ಚ ಸಿರಿ ಸಂಪತ್ತು ಲಭಿಸುತ್ತವೆ.[೨೩೬] ದಾನ ಧರ್ಮಗಳನ್ನು ಮಾಡಿದರೆ ಮನೆತನಕ್ಕೆ ಯಾವುದೇ ತೊಂದರೆಯೂ ಸಂಭವಿಸುವುದಿಲ್ಲ. ಗುಣಪೂರಿತ ಮುತ್ತುಗಳನ್ನು ಮನೆಯಲ್ಲಿ ಇಟ್ಟುಕೊಂಡರೆ ಇಡೀ ಕುಟುಂಬ ಸುಖ-ಸಮೃದ್ಧಿಯಿಂದ ಇರುತ್ತದೆ. ಬಡಬಗ್ಗರಿಗೆ ಉಳ್ಳವರು ಚಿನ್ನದ ತಾಳಿಯೊಂದಿಗೆ ಬೆಳ್ಳಿಕಾಲುಂಗುರಗಳನ್ನು ಮದುವೆ ಸಮಯದಲ್ಲಿ ಮಾಡಿಸಿಕೊಟ್ಟರೆ, ಮಾಡಿಸಿ ಕೊಟ್ಟವರಿಗೆ ಮುತ್ತೈದೆತನ ದೀರ್ಘಕಾಲ ಲಭಿಸುತ್ತದೆ. ವಿವಾಹಿತ ಸ್ತ್ರೀ ಗೌರಿಹಬ್ಬದ ದಿನ ಮುತ್ತೈದೆಯರಿಗೆ ಬಾಗಿನ ಅರ್ಪಿಸಿದರೆ, ಸಂಸಾರದಲ್ಲಿ ಯಾವುದೇ ತಾಪತ್ರಯಗಳು ಬರುವುದಿಲ್ಲ. ಯಾವುದೇ ಹಬ್ಬ ಮಾಡಿದಾಗ ನಾಲ್ಕಾರು ಜನ ಹಿತೈಷಿಗಳನ್ನು ಕರೆದು ಊಟ ಹಾಕಿದರೆ, ಅವರ ಎಂಜಲೆಗಳನ್ನು ಎತ್ತಿದ ಪುಣ್ಯ ಲಭಿಸುತ್ತದೆ. ಈ ರೀತಿಯ ಧಾರ್ಮಿಕ ನಂಬಿಕೆಗಳು ಜನಪದ ಸಮಾಜದ ಭಾಗವಾಗಿವೆ.

೫. ಪೌರಾಣಿಕ ನಂಬಿಕೆಗಳು :-

ಇವು ಮಾನವನ ಅಂತರಂಗದಲ್ಲಿ ಅಡಗಿವೆ. ಬಹುಕಾಲದಿಂದಲೂ ಅವರೊಂದಿಗೆ ಉಳಿದು, ಬೆಳೆದು ಬಂದಿವೆ. ಪ್ರಾಚೀನ ಕಾಲದಿಂದಲೂ ಇರುವ ನಂಬಿಕೆಗಳನ್ನು ನಿರಾಕರಿಸುವುದು, ನಿಷೇಧಿಸುವುದು ಅಷ್ಟು ಸುಲಭವಲ್ಲ. ವಿವಾಹಿತ ಗಂಡು ರಾಮನಂತೆ ಏಕಪತ್ನಿ ವ್ರತಸ್ಥನಾಗಿರಬೇಕು. ಹೆಣ್ಣು ಸೀತೆಯಂತೆ ಸಾಧ್ವಿಯಾಗಿ, ಕಷ್ಟ-ನಷ್ಟ ಸಹಿಷ್ಣುವಾಗಬೇಕು. ದೇವತೆಗಳ ಮತ್ತು ಮಹಾರಾಜರ ಬಿಟ್ಟು ಬೇರೆ ಯಾರು ಸೊಂಟದಿಂದ ಕೆಳಗೆ ಒಡವೆಗಳನ್ನು ಧರಿಸಬಾರದು. ಏಕೆಂದರೆ ಆಭರಣಗಳು ಲಕ್ಷ್ಮಿಗೆ ಸಮಾನ. ಶ್ರೀ ಕೃಷ್ಣನನ್ನು ಪದ್ಮರಾಗಗಳಿಂದ ಪೂಜಿಸಿದವನು ಮುಂದಿನ ಜನ್ಮದಲ್ಲಿ ಚಕ್ರವರ್ತಿಯಾಗಿ ಹುಟ್ಟುತ್ತಾನೆ. ಹನುಮಂತನ ತಾಯಿತವನ್ನು ಮಕ್ಕಳ ರಕ್ಷಣೆ, ಬಲ ಮತ್ತು ಧೈರ್ಯದ ಸಲುವಾಗಿ ಬಳಸುವರು. ಚಿನ್ನದ ಹೂಗಳಿಂದ ಒಂದು ತಿಂಗಳ ಕಾಲ ದೇವರನ್ನು ಪೂಜಿಸಿದರೆ, ಪೂಜಿಸಿದವರು ಐಶ್ವರ್ಯ ಹೊಂದಿ ಮೋಕ್ಷವನ್ನು ಪಡೆಯಬಹುದು. ಮಾಣಿಕ್ಯದ ಹರುಳನ್ನು ಧರಿಸಿದರೆ ದೈವೀಶಕ್ತಿಗಳು ಬಂದು ನೆಲೆಸಿ ಸಮಾಜದ ಜನರಿಂದ ಆದರ, ಗೌರವ ದೊರೆಯುತ್ತದೆ. ಹವಳದಿಂದ ಯಾವುದೇ ದೇವರನ್ನು ಪೂಜಿಸಿದರೂ ಮೂರುಲೋಕವನ್ನು ಗೆಲ್ಲಬಹುದು. ಸಣ್ಣ ಹರಳುಗಳಿಂದ ದೇವರನ್ನು ಪೂಜಿಸಿದರೆ ರಾಜನಾಗಿ ಹುಟ್ಟಬಹುದು.[೨೩೭] ಪಚ್ಚೆಯನ್ನು ದೇವರಿಗೆ ಸಮರ್ಪಿಸಿದರೆ ಆತ್ಮಜ್ಞಾನ ಉಂಟಾಗುತ್ತದೆ. ವಜ್ರದಿಂದ ದೇವರನ್ನು ಪೂಜಿಸಿದರೆ ಮುಕ್ತಿ ಪ್ರಾಪ್ತಿಯಾಗುತ್ತದೆ.

೬. ಐತಿಹಾಸಿಕ ನಂಬಿಕೆಗಳು :-

ಪ್ರಾಚೀನ ಕಾಲದಿಂದಲೂ ಇವು ನಮ್ಮ ಜನರ ಜೀವನದಲ್ಲಿ ಬದಲಾವಣೆ ತಂದಿವೆ ಎನ್ನಬಹುದು. ಚಾರಿತ್ರಿಕ ನಂಬಿಕೆಗಳಿಂದ ಜನರು ಜಾಗೃತರಾಗಿರುವುದು ಕಂಡುಬರುತ್ತದೆ. ರಾಜ ಮನೆತನಗಳಲ್ಲಿ ಸ್ತ್ರೀಯರು ತೊಡುವ ಕಾಲುಂಗರ ಚಿನ್ನದ್ದೇ ಆಗಿರಬೇಕು. ಏಕೆಂದರೆ ಅರಸಗಿತ್ತಿಯರು ಚಿನ್ನವನ್ನು ಮೆಟ್ಟಿ ನಡೆದರೆ ರಾಜ್ಯಲಕ್ಷ್ಮೀ, ಕೋಶಲಕ್ಷ್ಮೀ ತಮ್ಮಲ್ಲೇ ಉಳಿಯುವಳೆಂಬ ನಂಬಿಕೆ ಇದೆ. ರಾಜರು ಕೆಂಪು ಮತ್ತು ಹಳದಿ ವಜ್ರಗಳನ್ನು ಧರಿಸಬೇಕು. ರಾಜ ಮಹಾರಾಜರುಗಳು ಊಟದ ಸಮಯದಲ್ಲಿ ತಮ್ಮ ದೇಹವನ್ನು ವಜ್ರಕಾಯ ಮಾಡಿಕೊಳ್ಳಲು ಅತಿ ಸೂಕ್ಷ್ಮವಾದ ಚಿನ್ನದ ತಗಡನ್ನು ಸೇವಿಸಿ ಜೀರ್ಣಿಸಿಕೊಳ್ಳುತ್ತಿದ್ದರು. ಇದರಿಂದ ಅವರ ಶಕ್ತಿ, ಬಾಹುಬಲ ದ್ವಿಗುಣವಾಗುತ್ತಿತ್ತು.[೨೩೮]

೭. ಸಾಮಾಜಿಕ ನಂಬಿಕೆಗಳು :-

ಇವು ಮನುಷ್ಯನ ಅಂತರಂಗದಲ್ಲಿ ಸಹಜವಾಗಿಯೇ ಉತ್ಪತ್ತಿಯಾಗುತ್ತವೆ. ಬಹಳ ಹಿಂದೆ ಮಾಂತ್ರಿಕ ಗುಣವುಳ್ಳ ವಸ್ತುಗಳಲ್ಲಿ ಮನುಷ್ಯನ ಒಡವೆಗಳ ಮೂಲೋತ್ಪತ್ತಿ ಇದೆ ಎಂದು ನಂಬಲಾಗಿತ್ತು. ಇಷ್ಟಾರ್ಥಗಳ ಸಿದ್ಧಿಗಾಗಿ ಮಾಂತ್ರಿಕ ಉಂಗುರಗಳನ್ನು ಜನರು ಧರಿಸುವರು. ಸ್ತ್ರೀ ವಶೀಕರಣ, ಸಂತಾನಪ್ರಾಪ್ತಿ, ಸಂಪತ್ತುಗಳನ್ನು ಗಳಿಸಿ ಸುಖ ಜೀವನ ನಡೆಸಲು ಇಚ್ಚಿಸುವರು. ಮಂತ್ರದ ಉಂಗುರಗಳನ್ನು ಹಾಕಿಕೊಳ್ಳುವುದು. ಹುಚ್ಚು ಹಿಡಿದವರ ಕೈಗೆ ಮಂತ್ರಿಸಿದ ಕಬ್ಬಿಣದ ಬಳೆಗಳನ್ನು ಹಾಕುತ್ತಾರೆ. ಹುಲಿಯುಗುರು ಅಥವಾ ಅದರ ಮೀಸೆ, ಆನೆಯ ಕೂದಲನ್ನು ತಾಯಿತದೊಳಗೆ ಸೇರಿಸಿ ಕುತ್ತಿಗೆಗೆ ಇಲ್ಲವೆ ತೋಳಿಗೆ ಕಟ್ಟಿಕೊಂಡರೆ ಧೈರ್ಯ ಬರುತ್ತದೆ. ಶುಭಕಾರ್ಯಕ್ಕೆ ಹೊರಟಾಗ ಬಳೆಗಾರ ಎದುರಾದರೆ ಒಳ್ಳೆಯದು.[೨೩೯] ಮುಖದ ಮೇಲೆ ಮೊಡವೆಗಳಿದ್ದರೆ ಅವುಗಳ ನಿವಾರಣೆಗಾಗಿ ಬಲಗೈನ ಮಧ್ಯದ ಬೆರಳಿಗೆ ತಾಮ್ರದ ಉಂಗುರ ಹಾಕಿಕೊಳ್ಳುತ್ತಾರೆ. ಮಾಂಗಲ್ಯಕ್ಕೆ ಬೆಲೆ ಕೊಟ್ಟವಳು ಗಂಡನಿಗೂ ಬೆಲೆ ಕೊಡುತ್ತಾಳೆ. ಮಕ್ಕಳಿಗೆ ಸನ್ನಿ ಹಿಡಿದರೆ ಬಳೆಗಾಜು ಅಥವಾ ಎಕ್ಕಡದ ಚೂರು ಇಲ್ಲವೆ ಮಾಂಗಲ್ಯದ

ತುದಿಯನ್ನು ನಂದಾದೀಪದಲ್ಲಿ ಕಾಯಿಸಿ ಚಿಟಿಕಿ ಹಾಕಿದರೆ ವಾಸಿಯಾಗುತ್ತದೆ. ಬಳೆ ತೊಡಿಸಿ ಕೊಂಡಾದ ಮೇಲೆ ಮಲ್ಹಾರಕ್ಕೆ ನಮಸ್ಕರಿಸಿದರೆ ಒಳ್ಳೆಯದಾಗುತ್ತದೆ. ಎಳೆ ಮಕ್ಕಳಿಗೆ ರಚ್ಚೆ ತಾಳಿ ಕಟ್ಟಿದರೆ ರಗಳೆ ಮಾಡುವುದಿಲ್ಲ.

೮. ಅತಿಮಾನುಷ ನಂಬಿಕೆ :-

ಮನುಷ್ಯನಿಗೆ ದೇವರ ಬಗ್ಗೆ ನಂಬಿಕೆ ಇರುವಂತೆ ದೆವ್ವಗಳ ಬಗ್ಗೆಯೂ ಭಯಭಕ್ತಿ ಇದೆ. ಮಧ್ಯರಾತ್ರಿ, ಹುಣ್ಣಿಮೆ ಮತ್ತು ಅಮಾವಾಸ್ಯೆ ದಿನಗಳಲ್ಲಿ ದೆವ್ವಗಳು ಸಂಚರಿಸುತ್ತವೆ. ಆತ್ಮಹತ್ಯೆ, ಅಕಾಲಿಕ ಮರಣ, ಅಪಘಾತಕ್ಕೀಡಾದವರು ದೆವ್ವ, ಭೂತಗಳಾಗುತ್ತಾರೆಂದು ನಂಬಲಾಗಿದೆ. ದೆವ್ವಗಳು ಹಸಿಮೈ ಬಾಣಂತಿ, ಮುಟ್ಟಾದ ಹೆಂಗಸರು ಎದುರಾದರೆ, ಅವರ ಮೈಯೊಳಗೆ ಪ್ರವೇಶಿಸಿ ಅವರ ಸಾವಿಗೆ ಕಾರಣವಾಗುತ್ತವೆ. ಮಟ ಮಟ ಮಧ್ಯಾಹ್ನ ಹುಣಸೇ ಮರದಡಿಯಲ್ಲಿ ಬರಬಾರದು. ರಾತ್ರಿ ಹೊತ್ತು ನಾಯಿಗಳು ವಿಚಿತ್ರವಾಗಿ ಕೂಗಿದರೆ, ಅವುಗಳ ಕಣ್ಣಿಗೆ ದೆವ್ವ ಕಂಡಿದೆ ಎಂದೇ ಅರ್ಥ. ಜುಟ್ಟಿಲ್ಲದ ತೆಂಗಿನ ಕಾಯನ್ನು ದೇವರಿಗೆ ಒಡೆಯಬಾರದು.[೨೪೦] ಕಂದುಬಣ್ಣದ ಹವಳ ದುಷ್ಟಶಕ್ತಿಗಳಿಗೆ ಇಷ್ಟವಾದುದರಿಂದ ಅದನ್ನು ಧರಿಸಬಾರದು. ಮೂರನೇ ಮದುವೆ ಮಾಡಿಕೊಳ್ಳವರು ಮೊದಲು ಎಕ್ಕೆಯ ಗಿಡಕ್ಕೆ ತಾಳಿಕಟ್ಟಿ ಅನಂತರ ಹೆಣ್ಣಿಗೆ ಕಟ್ಟಬೇಕು.

೯.ಮಾನುಷ ನಂಬಿಕೆಗಳು :-

ಜನನ-ಮರಣ, ಹಬ್ಬ-ಹರಿದಿನ, ಕುಟುಂಬ, ನಿದ್ರೆ-ಕನಸು, ಕಾಲ-ಪಲ್ಲಟ, ಬಂಜೆತನ ಮದುವೆ, ಹೆಣ್ಣು – ಗಂಡು, ವಾರಗಳು, ಹೆತ್ತವರು – ಒಡಹುಟ್ಟಿದವರ ವಿಷಯಗಳು ಇಲ್ಲಿ ಪ್ರಮುಖವಾಗುತ್ತವೆ.

ಜನನ :-

ನವರತ್ನಗಳನ್ನು ಹೆಂಗಸರು ಕನಸಿನಲ್ಲಿ ಕಂಡರೆ ಸಂತಾನಲಾಭ. ಬಸುರಿ ಹೆಂಗಸು ಒಡವೆಗೆ ಆಸೆಪಡಬಾರದು. ಬಾಣಂತಿ ಮೂರು ತಿಂಗಳವರೆಗೆ ಹೂ, ಕುಂಕುಮ ಇಡಬಾರದು. ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ಅವಕ್ಕೆ ಮೂಗು ಚುಚ್ಚಿ, ಮುರ ಹಾಕುವರು, ಮಕ್ಕಳು ಹುಟ್ಟಿದ ಕೂಡಲೇ ನಾಲಿಗೆಗೆ ಚಿನ್ನ ಸೋಕಿಸುವ ಪದ್ಧತಿ ಇದೆ. ಮಕ್ಕಳಿಗೆ ಸಂದು ಆದರೆ ಬೆಳ್ಳಿ ಕಡ್ಡಿಯಲ್ಲಿ ಸುಡುಹಾಕಿದರೆ ಅದು ನಿವಾರಣೆಯಾಗುತ್ತದೆ.[೨೪೧] ಮುರ ಚುಚ್ಚದಿದ್ದರೆ ಮಗುವಿಗೆ ಚೇಳು - ಹಾವು ಕಡಿಯುವ ಸಂಭವವಿದೆ. ಹೆಣದ ಮೇಲೆ ಎಸೆವ ತಾಮ್ರದ ಕಾಸನ್ನು ಹೆಕ್ಕಿ ತಂದು ಅದನ್ನು ಮಕ್ಕಳ ಕೊರಳಿಗೆ ಸರ ಮಾಡಿಸಿ ಹಾಕಿದರೆ, ಅವರಿಗೆ ಯಾವುದೇ ಪೀಡೆ ಪಿಶಾಚಿಗಳ ಕಾಟ ಇರುವುದಿಲ್ಲ.

ಮರಣ :-

ವ್ಯಕ್ತಿ ಸಾಯುವ ಸ್ಥಿತಿಯಲ್ಲಿದ್ದು ಹಿಂಸೆ ಪಡುತ್ತಿದ್ದರೆ. ಚಿನ್ನವನ್ನು ನೀರಿನಲ್ಲಿ ಸ್ವಲ್ಪವೇ ತೇದು ಆ ನೀರನ್ನು ಕುಡಿಸಿದರೆ ಅವರು ನೆಮ್ಮದಿಯಿಂದ ಸಾಯುವರು. ವಜ್ರದ ಹರಳು ಮೈಮೇಲಿದ್ದರೆ ಸಾಕು ನೋವು ಸಂಭವಿಸುವುದಿಲ್ಲ. ಸತ್ತ ಹೆಣ್ಣಿನ ಮಂಗಳ ಸೂತ್ರವನ್ನು ಅಂತ್ಯಕರ್ಮ ಮಾಡಿದವರು ಅದನ್ನು ಕರಗಿಸಿ ಉಂಗುರ ಮಾಡಿಸಿ ಹಾಕಿಕೊಂಡರೆ ದೀರ್ಘಾಯುಷಿಗಳಾಗುವರು. ಹರಕೆಯ ಮಗು ಹುಟ್ಟಿದೊಡನೆ ಅದಕ್ಕೆ ಮುರ ಹಾಕಿ ಸಾಯುವವರೆಗೂ ತೆಗೆಯುವುದಿಲ್ಲ.

ಹಬ್ಬ-ಹರಿದಿನ :-

ಹಬ್ಬ ಹರಿದಿನ ಇರುವಾಗ ಮಕ್ಕಳನ್ನು ಹೊಡೆಯಬಾರದು. ಹಬ್ಬದ ದಿನ ಕೈಯಲ್ಲಿಯ ಬಳೆ ಒಡೆಯುವುದು, ತಲೆಯಿಂದ ಹೂಕಿತ್ತು ಬೀಳುವುದು ಅಶುಭ. ಹಬ್ಬದ ದಿನಗಳಲ್ಲಿ ಹೆಂಗಸು ಮುಟ್ಟಾದರೆ, ಆಕೆ ಆ ಕಾರ್ಯದಲ್ಲಿ ಅನಿವಾರ್ಯವಾಗಿ ಭಾಗಿಯಾಗಲೇ ಬೇಕಾಗಿದ್ದಲ್ಲಿ ಚಿನ್ನ ಬೆಳ್ಳಿಯ ಪುಟ್ಟ ಚೊಂಬುಗಳನ್ನು ದಾನ ನೀಡುವುದರದಿಂದ ಸೂತಕವನ್ನು ಕಳೆದುಕೊಳ್ಳಬಹುದು.

ಕುಟುಂಬ:-

ಗಂಡನ ತಾಳಿಯ ಜೊತೆಗೆ, ತಾಯಿ ಮನೆಯ ದೇವರ ತಾಳಿಯನ್ನು ಹಾಕಿಕೊಂಡರೆ ಶ್ರೇಯಸ್ಸು, ತಾಳಿ ಬಿಚ್ಚಿದಾಗ ಹೊಸಲು ದಾಟಬಾರದು. ಪಂಚರತ್ನಗಳು, ಪಂಚಶೀಲಗಳನ್ನು ಕಾಯುತ್ತವೆ. ಬಳೆ ತೊಡಿಸಿಕೊಳ್ಳುವಾಗ ಚೊಚ್ಚಲ ಮಕ್ಕಳು ಪಕ್ಕದಲ್ಲಿ ಬಂದು ಕುಳಿತರೆ ಬಳೆ ಒಡೆದು ಹೋಗುತ್ತವೆ. ಮದುವೆಗೆ ಮುಂಚೆ ಹೆಣ್ಣು ಮಕ್ಕಳು ಕಂಬಳಿ ತೊಡಬಾರದು. ಮೂಗುತಿ, ಮಂಗಳಸೂತ್ರ, ಕಡಗ, ಕಾಲುಂಗರ, ಕುಂಕುಮಗಳು ಹೆಣ್ಣಿಗೆ ಸೌಭಾಗ್ಯದ ಸಂಕೇತಗಳು. 'ಹರಿನೀಲ' ಎಂಬ ಒಡವೆ ಧರಿಸಿದರೆ ಕುಟುಂಬದಲ್ಲಿ ಸುಖ-ಸಮೃದ್ಧಿ ಸಿಗುತ್ತವೆ. ಪರಪುರುಷರಿಗೆ ಹಾಕಿದ ಹೂವಿನ ಹಾರವನ್ನು ಸಂಬಂಧವಿಲ್ಲದ ಮುತ್ತೈದೆಯವರು ಮುಡಿದುಕೊಳ್ಳಬಾರದು. ಗುಣಪೂರಿತ ಮುತ್ತುಗಳನ್ನು ಮನೆಯಲ್ಲಿ ಇಟ್ಟುಕೊಂಡರೆ ಇಡೀ ಕುಟುಂಬದಲ್ಲಿ ಶಾಂತಿ ನೆಮ್ಮದಿ ನೆಲೆಸಿರುತ್ತದೆ.

ನಿದ್ರೆ ಕನಸು :-

ತೊಲೆಯ ಕೆಳಗೆ ಮಲಗಿದರೆ ಕನಸುಗಳು ಜಾಸ್ತಿ, ಕನಸಿನಲ್ಲಿ ನೀರು ಬೆಂಕಿಯಂತಹ ಪಂಚಭೂತಗಳನ್ನು ಕಾಣಬಾರದು. ಕನಸಿನಲ್ಲಿ ಭಾರೀ ಭೋಜನ ಉಂಡರೆ ಮಾರನೆದಿನ ಹತ್ತಿರದ ನೆಂಟರು ಸಾಯುತ್ತಾರೆ. ಸತ್ತ ಹಿರಿಯರು / ಬದುಕಿರುವ ಹಿರಿಯರು ಕನಸಿನಲ್ಲಿ ಕಾಣಿಸಿಕೊಂಡು ವಜ್ರ ಕೊಟ್ಟರೆ ಐಶ್ವರ್ಯ ಹೆಚ್ಚುತ್ತದೆ. ಕನಸಿನಲ್ಲಿ ಮದುವೆಯಾದಂತೆ ಕಂಡರೆ ಅಂತಹವರ ಮದುವೆ ತುಂಬಾ ತಡವಾಗುತ್ತದೆ. ಮಲಗುವಾಗ ಎಡ ಮಗ್ಗಲಲ್ಲೂ, ಏಳುವಾಗ ಬಲಮಗ್ಗುಲಲ್ಲೂ ಏಳಬೇಕು. ಅಂಗಾತ ಮಲಗಿದರೆ ಕೆಟ್ಟ ಕನಸುಗಳು ಹೆಚ್ಚಾಗಿ ಬೀಳುತ್ತವೆ. ಹಾಸಿಗೆಯ ಮೇಲೆ ಮಲಗುವುದಕ್ಕಿಂತ ಚಾಪೆಯ ಮೇಲೆ ಮಲಗಿದರೆ ಆರೋಗ್ಯ ಸರಿಯಾಗಿರುತ್ತದೆ.[೨೪೨]

ಕಾಲ / ಪಲ್ಲಟ :-

ಕಾಲಕಾಲಕ್ಕೆ ಮಳೆ ಬರಬೇಕು ಇಳೆ ನಗಬೇಕು. ಕಾಲಕ್ಕೆ ಕಾಯಲಾರದವನು ಏತಕ್ಕೂ ಕಾಯಲಾರ. ಒಳ್ಳೇ ಕಾಲ ಬಂದಾಗ ಜೀವನವೇ ಬದಲಾಗುತ್ತದೆ. ಬದುಕಿನಲ್ಲಿ ಕೆಟ್ಟ ಕಾಲ ಬಂದಾಗ ಕುಗ್ಗದೆ ಧೈರ್ಯವಾಗಿ ಎದುರಿಸಿ ನಿಂತರೆ ಅದೇ ಒಳ್ಳೆಯ ಕಾಲವಾಗುತ್ತದೆ. ಕಾಲಾಯತಸ್ಮೈ ನಮಃ ನಾವು ಕಾಲವನ್ನು ಕಾಯಬಹುದು. ಆದರೆ ಕಾಲವೆಂದೂ ನಮ್ಮನ್ನು ಕಾಯುವುದಿಲ್ಲ. ಕಾಲದಿಂದ ಕಾಲಕ್ಕೆ ಬದಲಾಗುವ ದಿನಚರಿಗೆ ನಮ್ಮನ್ನು ಒಗ್ಗಿಸಿಕೊಳ್ಳಬೇಕು. ಕಾಲಕ್ಕೆ ಎಂತಹವರನ್ನಾದರೂ ನಿಯಂತ್ರಿಸುವ, ಬುದ್ಧಿ ಕಲಿಸುವ ಸಾಮರ್ಥ್ಯ ಇರುತ್ತದೆ.

ಬಂಜೆತನ :-

ಮುಷ್ಪರಾಗವನ್ನು ಬಂಜೆಯರು ಸದಾಕಾಲ ಧರಿಸಿದರೆ ಮಕ್ಕಳಾಗುತ್ತವೆ. ಮಕ್ಕಳೇ ಆಗದಿದ್ದ ಮಹಿಳೆಗೆ ಹೆಳವರನ್ನು ಕರೆಯಿಸಿ, ಅವಳು ಹೊಕ್ಕಳಿನ ಸುತ್ತ ಚಿನ್ನದ ಅಥವಾ ಬೆಳ್ಳಿಯ ಸೂಡನ್ನು ಹಾಕಿಸುತ್ತಾರೆ. ಬಂಜೆಯಾದವಳ ಕೈಗೆ ಮಕ್ಕಳನ್ನು ಕೊಡಬಾರದು. ಬಂಜೆಯಾದವಳು ಭಿಕ್ಷೆ ಹಾಕಲು ಯೋಗ್ಯಳಲ್ಲ ಎಂಬಂತೆ ಅವಳನ್ನು ಚಿತ್ರಿಸಿ, ಮಾನಸಿಕ ಹಿಂಸೆಗೆ ಕಾರಣವಾಗುತ್ತಾರೆ.

ಮದುವೆ :-

ಮದುವೆ ಗಂಡು ಅರಿಶಿಣ ಮೈಯಲ್ಲಿ ಅಥವಾ ಕಂಕಣ ಕಟ್ಟಿದ ಮೇಲೆ ಹೊರಗಡೆ ತಿರುಗಬಾರದು. ತಿರುಗಿದರೆ ಅಪಾಯ. ಮದುವೆಯಾದ ಹೆಂಗಸರು ಹಣೆಗೆ ಕುಂಕುಮ ಇಟ್ಟುಕೊಳ್ಳುವಾಗ ತಾಳಿಗೂ ಇಟ್ಟುಕೊಂಡರೆ ಶ್ರೇಯಸ್ಸಾಗುತ್ತದೆ. ಮದುವೆ ಮನೆಯಲ್ಲಿ ಕಂಕಣ ಬಾಸಿಂಗಗಳನ್ನು ಕಟ್ಟುವವನು ಸೋದರ ಮಾವ. ಮದುವೆ ಗಂಡು ಕೆಲವೆಡೆ ದೇವರ ತಾಳಿ ಧರಿಸುತ್ತಾನೆ. ಮದುವೆಯಾದವರು ಮೂಗು ಬೊಟ್ಟು ಕಾಲುಂಗರಗಳಿಲ್ಲದೆ ಇರಬಾರದು.

ಹೆಣ್ಣು-ಗಂಡು:-

ವಿಧವೆಯರು ಒಡವೆಗಳನ್ನು ಧರಿಸಬಾರದು. ಹಸಿರು ಬಳೆಗಳನ್ನು ಗರ್ಭಿಣಿ ಸ್ತ್ರೀಯರಿಗೆ ತೊಡಿಸಿದರೆ ಒಳ್ಳೆಯದಾಗುತ್ತದೆ. ಹೆಂಗಸರು ದದ್ದು ಬಳೆ ತೊಟ್ಟುಕೊಂಡರೆ ಗಂಡನಿಗೆ ಕೇಡು. ಹೆಣ್ಣು ತಗ್ಗಿ ಬಗ್ಗಿ ಬಾಳಬೇಕು. ಗಂಡು ಹಿರಿಯರು ಹಾಕಿದ ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾನೆ. ಗಂಡಾಗುಂಡಿ ಮಾಡಿಯಾದರೂ ಗಂಡನ ಜೊತೆಗೆ ಬಾಳಬೇಕು ಹೆಣ್ಣು ಗಂಡು ಸಂಸಾರದ ಎರಡು ಕಣ್ಣುಗಳು.

ವಾರಗಳು :-

ಸೋಮವಾರ ಸೊಸೆಯನ್ನು ತೌರಿಗೆ ಕಳುಹಿಸಬಾರದು, ಮಂಗಳವಾರ ಮಂಡೆ ಮೇಲೆ ನೀರಾಕಿಸಿಕೊಳ್ಳಬಾರದು, ಬುಧವಾರ ಪುಣ್ಯವನ್ನು ಸಂಪಾದಿಸುವ ವಾರ, ಗುರುವಾರ ದೇವರನ್ನು ಪೂಜಿಸುವುದರೊಂದಿಗೆ, ಮಡಿಯನ್ನು ಮಾಡಬಹುದು. ಶುಕ್ರವಾರ ಲಕ್ಷ್ಮೀದೇವಿಯ ವಾರ ಅಂದು ಕಾಸನ್ನು ಯಾರಿಗೂ ಕೊಡಬಾರದು. ಮೈಮೇಲೆ ಹಾಕಿದ ಒಡವೆಯನ್ನು ತೆಗೆಯಬಾರದು, ಮಗಳನ್ನು ಈ ದಿನದಂದು ಮದುವೆ ಮಾಡಿಕೊಡಬಾರದು, ಶನಿವಾರ ಮೈಮೇಲೆ ಬಟ್ಟೆ ಹಾಕಿಕೊಂಡರೆ ಮತ್ತೆ ಹೊಸ ಬಟ್ಟೆ ಸಿಗುವುದಿಲ್ಲ. ಭಾನುವಾರ ಭೈರವೇಶ್ವರನ ವಾರ. ಭಯ ಭಕ್ತಿಯಿಂದ ಇರಬೇಕಾಗುತ್ತದೆ.

ಒಡಹುಟ್ಟಿದವರು :-

ಅಣ್ಣ ಅತ್ತಿಗೆ ಬರುವ ತನಕ. ತಮ್ಮ ತಾಯಿ ಇರುವ ತನಕ, ಒಡೆದು ಹೋದ ಬಳೆಗಳನ್ನು ಹಾಕಿಕೊಳ್ಳಬಾರದು. ಅದರಿಂದ ಒಡ ಹುಟ್ಟಿದವರಿಗೆ ಕೇಡಾಗುತ್ತದೆ. ಯಾವುದೇ ಸಂಬಂಧ ಕಳೆದು ಹೋಗಬಹುದು. ಆದರೆ ಒಡಹುಟ್ಟಿನ ಬಾಂಧವ್ಯ ಸಾಯುವವರೆಗೂ ಇರುವಂತಹುದು. ಅಣ್ಣನಾಸೆಗೆ ತಂಗಿ ಅವಮಾನಕ್ಕೆ ಈಡಾದಳಂತೆ.[೨೪೩]

೧೦. ಅಂಗಾಂಗಗಳಿಗೆ ಸಂಬಂಧಿಸಿದ ನಂಬಿಕೆಗಳು :-

ಗಂಡಸರಿಗೆ ಬಲಗಣ್ಣು, ಹೆಂಗಸರಿಗೆ ಎಡಗಣ್ಣು ಅದುರಿದರೆ ಒಳ್ಳೆಯದು. ಕಣ್ಣಿನ ಹುಬ್ಬು ಕುಣಿದರೆ ಅಶುಭ. ಆ ಸಮಯದಲ್ಲಿ ಮನೆ ದೇವರನ್ನು ನೆನೆದು ಮೂರು ಬಾರಿ ಬೆರಳಿಂದ ಹುಬ್ಬನ್ನು ಸವರಿದರೆ ಅದು ಇಲ್ಲವಾಗುತ್ತದೆ. ಮಾಲುಗಣ್ಣು ಅದೃಷ್ಟದ ಸಂಕೇತ. ಮೆಳ್ಳಗಣ್ಣು ಮನೆಗೆ ಕೇಡನ್ನು ತರುತ್ತದೆ. ಆರು ಬೆರಳಿದ್ದರೆ ಪುಣ್ಯ ಬರುತ್ತದೆ. ತಲೆ ದಪ್ಪವಾಗಿದ್ದರೆ ಬುದ್ಧಿವಂತ, ತಲೆ ಸಣ್ಣಗಿದ್ದರೆ ಸ್ವಾರ್ಥಿ. ಕಾಫಿ ಬಣ್ಣದ ಮಚ್ಚೆ ಹೆಣ್ಣಿಗೆ ಎಡಭಾಗದಲ್ಲಿ ಗಂಡಿಗೆ ಬಲಭಾಗದಲ್ಲಿದ್ದರೆ ಶುಭ. ತೋಳು / ಅಂಗೈನಲ್ಲಿ ಗರುಡ ಮಚ್ಚೆ ಇದ್ದರೆ ವಿಷಜಂತುಗಳು ಕಚ್ಚುವುದಿಲ್ಲ. ತುಂಬು ಹಸ್ತಪಾದ ಹೆಣ್ಣಿಗಿದ್ದರೆ ಅಂತಹ ಮನೆಯಲ್ಲಿ ಲಕ್ಷ್ಮೀ ತಾಂಡವವಾಡುತ್ತಾಳೆ. ಅಂಕುಡೊಂಕು ಹಲ್ಲಿದ್ದವರು ನಂಬಿಕೆಗೆ ಅರ್ಹರಲ್ಲ. ಎಡವಿದ ಕಾಲೇ ಮತ್ತೆ ಮತ್ತೆ ಎಡವುತ್ತದೆ. ಗಂಡಿಗೆ ಬಲಗೈ, ಹೆಣ್ಣಿಗೆ ಎಡಗೈ ಕಡಿದರೆ ಧನಲಾಭ.[೨೪೪] ಹೆಣ್ಣಿಗೆ ಬಲಗೈ, ಗಂಡಿಗೆ ಎಡಗೈ, ಕಡಿದರೆ ಧನನಷ್ಟ, ಅಂಗಾಲುಗಳು ಕಡಿದರೆ ಜಗಳ ಜಾಸ್ತಿ, ಎಡಭುಜ ಅದುರಿದರೆ ಒಳ್ಳೆಯದು, ಬಲಭುಜ ಅದುರಿದರೆ ಸಂಭೋಗ ಸುಖ.

ತಲೆಯ ಮೇಲೆ ಕೈಯಿಟ್ಟರೆ ಚಿಂತೆ, ಸಾವಾಗಿದೆ ಎಂದರ್ಥ, ಬೆರಳುಗಳ ನೆಟಿಗೆ ಮುರಿದರೆ ತಂದೆ/ತಾಯಿ ಸಾಯುತ್ತಾರೆ. ಹೆಂಗಸರ ಮೈಮೇಲೆ ಕೂದಲಿದ್ದರೆ, ಅಂತಹವರಿಗೆ ಅಸಾಧ್ಯ ಧೈರ್ಯ, ಭೋಗಕ್ಕೆ ಒಂದೇ ಗಂಡು ಸಾಕಾಗುವುದಿಲ್ಲ. ಏನೇ ಕೆಟ್ಟ ಕೆಲಸ ಮಾಡಿದರೂ ಅದನ್ನು ಸಮರ್ಥಿಸಿಕೊಳ್ಳುವರು. ಹೆಣ್ಣಿಗೆ ಮೂಗನ್ನು ಚುಚ್ಚಿಸುವಾಗ ಅವರ ಬಳಿ ಕೊಬ್ಬರಿ ತೆಗೆದುಕೊಂಡು ಹೋಗಿ ನೀವಾಳಿಸಿ ಮುರಿದರೆ ಮೂಗು ಚುಚ್ಚುವಾಗ ನೋವಾಗುವುದಿಲ್ಲ.

೧೧. ಜನಪದ ವೈದ್ಯ ಮತ್ತು ನಂಬಿಕೆ :-

ಇದು ಮನುಷ್ಯನ ಜೀವನ ಕ್ರಮವನ್ನೆ ಬದಲಿಸುವಂತಹುದು. ಅಜೀರ್ಣದಿಂದ ಹೊಟ್ಟೆ ಉಬ್ಬರಸಿಕೊಂಡರೆ. ನೋವು ಕಾಣಿಸಿದರೆ. ಬೆಚ್ಚನೆಯ ಬೂದಿಯನ್ನು ಆ ನೋವಿರುವ ಜಾಗಕ್ಕೆ ಲೇಪಿಸಿ. ಮೂರು ಚಿಟಿಕೆ ಬೂದಿಯನ್ನುನುಂಗಿದರೆ ಕ್ರಮೇಣ ಅದು ವಾಸಿಯಾಗುತ್ತದೆ. ಕಣ್ಣು ಉಷ್ಣದಿಂದ ಉರಿಯುತ್ತಿದ್ದರೆ ನೆತ್ತಿಗೆ ಹರಳೆಣ್ಣೆ ಹಾಕಿ ತಟ್ಟಬೇಕು. ಕೆಮ್ಮು, ನಾಯಿಕೆಮ್ಮು ಏನಾದರೂ ಬಂದರೆ ನವಿಲುಗರಿಯನ್ನು ಎಣ್ಣೆ ದೀಪದಲ್ಲಿ ಸುಟ್ಟು ಅದರ ಬೂದಿಯನ್ನು ಜೇನು ತುಪ್ಪದೊಂದಿಗೆ ಕಲಸಿ ತಿನ್ನಬೇಕು. ಇಲ್ಲ ವಾದರೆ ಒಂದು ವೀಳ್ಯದೆಲೆ ೨ ಹರಳುಪ್ಪು, ೧ ಲವಂಗವನ್ನು ಸೇರಿಸಿ ಅದರ ರಸವನ್ನು ನಿಧಾನಕ್ಕೆ ಸವಿಯುತ್ತಿದ್ದರೆ, ಎಂತಹ ಕೆಮ್ಮಾದರೂ ತಹಬದಿಗೆ ಬರುತ್ತದೆ.

ಕಾಲು ಉಳುಕಿದರೆ ಕೈಯೆಣ್ಣೆ ಹಾಕಿ ನೀವಬೇಕು. ಕಿಬ್ಬೊಟ್ಟೆಯಲ್ಲಿ ಸಣ್ಣನೆ ನೋವಾದರೆ ಒಕ್ಕುಳಿಗೆ ಕೈಯ್ಯೆಣ್ಣೆಯನ್ನು ಕಾಯಿಸಿ, ಆರಿಸಿ ಹುಯ್ಯಬೇಕು. ತಲೆ ಸುತ್ತು ಬಂದರೆ ಜೀರಿಗೆ, ಹಸಿಶುಂಠಿ, ಕೆಂಪು ಕಲ್ಲು ಸಕ್ಕರೆಯನ್ನು ಒಟ್ಟಿಗೆ ಸೇರಿಸಿ ಗಸಗಸ ಅಗಿದು ತಿನ್ನಬೇಕು.[೨೪೫] ಒಣ ಹಣ್ಣುಗಳು ಆರೋಗ್ಯದಲ್ಲಿ ತಂಪನ್ನು ಕಾಯ್ದಿಡುತ್ತವೆ. ತಾಮ್ರದ ನೀರು ಮೈಮೇಲೆ ಬಿದ್ದರೆ ಚರ್ಮರೋಗ ಬರುವುದಿಲ್ಲ. ಗಂಟಲಲ್ಲಿ ಹುಣ್ಣಾದರೆ, ಗಂಟಲು ನೋವಾದರೆ ಉಪ್ಪಿನ ಹರಳಿನೊಂದಿಗೆ ಒಂದೆರಡು ಕಾಳು ಮೆಣಸನ್ನು ಅಗಿದು ನುಂಗಿ, ಬಿಸಿನೀರಿನಲ್ಲಿ ಗಂಟಲನ್ನು ಮುಕ್ಕಳಿಸಿದರೆ ಅದು ತಹಬದಿಗೆ ಬರುತ್ತದೆ. ಮಜ್ಜಿಗೆ ಸೇವಿಸದಿದ್ದವರು ಸೇವಿಸಬೇಕಾಗಿ ಬಂದಾಗ ಅದಕ್ಕೆ ಈರುಳ್ಳಿ, ಕೊತ್ತಂಬರಿಸೊಪ್ಪು, ಹಸಿಶುಂಠಿ, ಬೆಳ್ಳುಳ್ಳಿ, ಇಂಗು ಹಸಿ ಕರಿಬೇವಿನ ಸೊಪ್ಪು ಹಾಕಿ ಕುಡಿದರೆ ಯಾವುದೇ ವ್ಯತಿರಿಕ್ತ ಪರಿಣಾಮ ಕಂಡುಬರುವುದಿಲ್ಲ. ವಾತರೋಗ ಕೀಲುರೋಗದಿಂದ ಪಾರಾಗಲು ಚಿನ್ನದ ಉಂಗುರ ಧರಿಸಬೇಕು.

೧೨. ಆಭರಣ ಮತ್ತು ನಂಬಿಕೆ :-

ಆಭರಣಗಳು ಮನುಷ್ಯನ ಆಪತ್ಬಾಂದವಗಳಾಗಿವೆ. ಅವು ಕೇವಲ ಸೌಂದರ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಆರೋಗ್ಯ ವರ್ಧಕದಂತೆ ಕೆಲಸ ಮಾಡಿರುವುದನ್ನು ಕಾಣಬಹುದು. ಒಡವೆಗಳನ್ನು ಧರಿಸಿದಾಗ ಅವು ಕಪ್ಪಾದರೆ, ಅದನ್ನು ಧರಿಸಿದವರ ನಡೆ ಸರಿಯಾಗಿಲ್ಲವೆನ್ನಲಾಗಿದೆ. ಕಿವಿಯೊಡವೆಗಳು ಮರ್ಮಸ್ಥಾನದಲ್ಲಿ ಉದ್ಭವಿಸುವ ರೋಗಗಳನ್ನು ನಿವಾರಿಸಿ, ವಾತ, ಪಿತ್ತ, ಶ್ಲೇಷ್ಮಗಳಿಂದ ಉಂಟಾಗುವ ದೋಷಗಳನ್ನು ನಾಶ ಮಾಡುತ್ತವೆ. ಮೂಗುತಿ ಉಸಿರಾಟವನ್ನು ಸಮತೋಲನವಾಗಿ ಕಾಯ್ದುಕೊಳ್ಳುತ್ತದೆ. ಕುತ್ತಿಗೆ ಒಡವೆಗಳು ಧರಿಸುವ ವ್ಯಕ್ತಿಗೆ ಯಾವುದೇ ದೋಷವಿದ್ದರೂ ಪರಿಹರಿಸಿ, ವಾಯುದೋಷವನ್ನು ನಿವಾರಿಸಿ, ಮಾನವನಿಗೆ ಆಯುರಾಭಿವೃದ್ಧಿಯನ್ನು ಉಂಟು ಮಾಡುತ್ತವೆ. ಕಡಗಗಳು ಕೈ, ಕಾಲಿನ ನರನಾಡಿಗಳನ್ನು ಪ್ರಚೋದಿಸಿ, ರಕ್ತ ಚಲನೆಯನ್ನು ಹೆಚ್ಚು ಮಾಡುತ್ತವೆ.[೨೪೭] ಅಲ್ಲದೆ ಅವನ್ನು ಧರಿಸುವುದರಿಂದ ಅವು ಸೊಂಟದ ಭಾಗಗಳಿಗೆ ಬಲ ನೀಡುವುದರೊಂದಿಗೆ, ಜನನೇಂದ್ರಿಯಗಳ ಆರೋಗ್ಯವನ್ನು ಕಾಪಾಡುತ್ತವೆ. ಗೋಮೇಧಿಕ ಹರಳನ್ನು ಹೃದಯದ ಮೇಲೆ ಇಟ್ಟುಕೊಂಡರೆ ಬಾಯಾರಿಕೆ ನಿವಾರಣೆಯಾಗುತ್ತದೆ. ಚಿನ್ನದ ಪುಡಿಯ ನಿತ್ಯಪ್ರಯೋಗ ಹೃದಯ ರೋಗವನ್ನು ತಡೆಗಟ್ಟುವುದು. ಜೀವಸಹಿತವಿದ್ದಾಗ ಚಿನ್ನದಿಂದ ಮಾಡಿಸಿದ ಒಡವೆಗಳನ್ನು ಬಾಯಿಗೆ ಹಾಕಬಾರದು. ಸೊಂಟಕ್ಕೆ ಉಡುದಾರ ಹಾಕದಿದ್ದರೆ ಹೊಟ್ಟೆಯಲ್ಲಿ ಹುಳು ಹೆಚ್ಚಾಗುತ್ತವೆ. ತಾಮ್ರದ ಬಳೆ ನರವೃದ್ಧಿಗೆ ಒಳ್ಳೆಯದು. ಸುವರ್ಣಭಸ್ಮ ದೇಹದ ಯೌವನವನ್ನು ಕಾಪಾಡುವುದು.

೧೩. ಪ್ರಕೃತಿ ಮತ್ತು ನಂಬಿಕೆ :-

ನಿಸರ್ಗ ಮನುಷ್ಯನ ಜೊತೆ ಜೊತೆಯಲ್ಲೇ ಇರುವಂತಹದು. ಏಕೆಂದರೆ ಪ್ರಕೃತಿಯ ಕೈಕೂಸು ಮಾನವ. ಎಳೆ ಬಿಸಿಲು ಮೈಗೆ ಹಿತ, ಮುದ ನೀಡುತ್ತದೆ. ಮಧ್ಯಾಹ್ನದ ಬಿಸಿಲು ಮೈಗೆ ಒಳ್ಳೆಯದಲ್ಲ. ಮಳೆಗಾಲದ ಆರಂಭದಲ್ಲಿ ಆಲಿಕಲ್ಲೇನಾದರೂ ಬಿದ್ದರೆ ಆ ವರ್ಷ ಸಕಾಲದಲ್ಲಿ ಮಳೆಯಾಗುತ್ತದೆ. ರಾತ್ರಿಯ ಹೊತ್ತು ಹಸಿಗೆ ಕೈ ಹಾಕಬಾರದು. ದೇವಕಣಗಿಲೆ ಮರದ ಹಾಲು ಪತ್ತುಬುಂಡೆ (ಅರೆಕೂದಲು)ಗೆ ಹಾಕುತ್ತಾರೆ.[೨೪೮] ಹಾವನ್ನು, ಕಪ್ಪೆಯನ್ನು ಕೊಂದರೆ ಪಾಪತಟ್ಟಿ, ವಂಶದಲ್ಲಿ ಮೂಕರು, ಕಿವುಡರಾದ ಮಕ್ಕಳು ಜನಿಸುತ್ತಾರೆ. ಕಪ್ಪೆ ವಟಗುಟ್ಟಿದರೆ ಮಳೆಯಾಗುತ್ತದೆ. ಹಿಮಜಾಸ್ತಿ ಬಿದ್ದರೆ ಉರಿಬಿಸಿಲು ಜಾಸ್ತಿ, ರಾತ್ರಿಯ ಮಳೆ ಬೇಗನೆ ನಿಲ್ಲುವುದಿಲ್ಲ. ಜೇನುಹುಟ್ಟನ್ನು ಜಾಣ್ಮೆಯಿಂದ ಕೀಳಬೇಕು. ಆಲದ ಮರಕ್ಕೆ ನೂರು ವರ್ಷ ಆಯಸ್ಸು, ವೀಳ್ಯದೆಲೆಯನ್ನು ರಾತ್ರಿ ಹೊತ್ತು ಕೀಳಬಾರದು. ನಂದಿಬಟ್ಟಲು ಹೂವಿನಲ್ಲಿ ಮಾಡುವ ಕಪ್ಪು ಕಣ್ಣಿಗೆ ತಂಪು. ನಾರಿರುವ ತರಕಾರಿ ಶರೀರದಲ್ಲಿಯ ಕೊಬ್ಬಿನ ಅಂಶಗಳನ್ನು ಕರಗಿಸುತ್ತದೆ.

೧೪ ಪ್ರಾಣಿ ಪಕ್ಷಿ ಸಂಬಂಧ ಮತ್ತು ನಂಬಿಕೆಗಳು :-

ಇರುವೆ ಗೂಡಿಗೆ ಅಕ್ಕಿ, ಬೆಲ್ಲ ಹಾಕಿದರೆ ಪುಣ್ಯ ಬರುತ್ತದೆ. ಕರಿ ಇರುವೆ ಗೂಡಿಗೆ ಪ್ರಾಪ್ತ ವಯಸ್ಕರು ಸಕ್ಕರೆ / ಬಿಳಿ ಎಳ್ಳು ಹಾಕಿದರೆ ಬೇಗನೆ ಮದುವೆಯಾಗುತ್ತದೆ. ಮನೆಯೊಳಗೆ ಕಡಜ ಗೂಡು ಕಟ್ಟಿದರೆ ಸಂತಾನಲಾಭ. ಅದು ಒಂದು ಗೂಡು ಕಟ್ಟಿದರೆ ಗಂಡು ಮಗು, ಎರಡು ಗೂಡು ಕಟ್ಟಿದರೆ ಹೆಣ್ಣು ಮಗುವಾಗುತ್ತದೆ. ಪಕ್ಷಿಗಳು ಮನೆಯೊಳಗೆ ಗೂಡು ಕಟ್ಟಬಾರದು. ನಾಯಿ ನಾರಾಯಣನಾದ್ದರಿಂದ ಅದನ್ನು ಕಾಲಲ್ಲಿ ಒದೆಯಬಾರದು. ಕೋತಿ ಕೊಂದ, ತಿಂದ ಪಾಪ ತಿತ್ತಿ (ತಿರುಪತಿ) ಹೊಕ್ಕರು ಬಿಡದು. ಹಸುವಿಗೆ ಮೇವು ಹಾಕಿ, ಪೂಜಿಸಿದರೆ ಪುಣ್ಯ ಉಂಟಾಗುವುದು. ಯಾವುದೇ ಪ್ರಾಣಿಯನ್ನು ಕಸಬರಿಕೆಯಿಂದ ಹೊಡೆದರೆ

ಹೊಡೆದ ಕೈಗೆ ಲಕ್ವ ಹೊಡೆಯುತ್ತದೆ. ಪಾರಿವಾಳವನ್ನು ಮನೆಯಲ್ಲಿ ಸಾಕಿದರೆ ಆ ಮನೆ ಏಳಿಗೆ ಹೊಂದುವುದಿಲ್ಲ. ಮಾತಾಡುವ ಅರಗಿಣಿ ಪ್ರಣಯ ಪಕ್ಷಿಗಳನ್ನು ಒಂಟೊಂಟಿ ಸಾಕಬಾರದು.[೨೪೮] ಸಾಕಿದರೆ ಅವು ಬದುಕಲಾರವು. ಗರುಡ ಮನೆಯ ಮೇಲೆ ವಾರಗಟ್ಟಲೆ ಒಂದೇ ಸುಮನೆ ಹಾರಾಡುತ್ತಿದ್ದರೆ, ನಾವು ದೂರದೂರಿಗೆ ಪ್ರಯಾಣ ಬೆಳೆಸುತ್ತೇವೆ. ನವಿಲು ಗರಿಯನ್ನು ಮನೆಯಲ್ಲಿಟ್ಟುಕೊಂಡರೆ ಒಳ್ಳೆಯದಾಗುತ್ತದೆ. ಕಾಗೆ ಮನೆಯೊಳಗೆ ನುಗ್ಗಿದ್ದರೆ ಆ ಮನೆಗೆ ಕೆಡುಕಾಗುತ್ತದೆ. ಕಾಗೆ ತಲೆ ಸ್ಪರ್ಶಿಸಿ ಹಾರಿದರೆ ತಂದೆ ತಾಯಿಗೆ ಕಂಟಕ. ಮನೆ ಮುಂದೆ ಒಂಟಿ ಕಾಗೆ ಕೂಗಿದರೆ ಯಾರಾದರೂ ನೆಂಟರು ಬರುವ ಸೂಚನೆ. ಮನೆಯ ಮೇಲ್ಗಡೆ / ಹಿಂಬದಿಯಲ್ಲಿ ಕಾಗೆ ತನ್ನ ಇಡೀ ಸಮೂಹದೊಂದಿಗೆ ಅರಚುತ್ತಿದ್ದರೆ. ಸಮೀಪದಲ್ಲೇ ಯಾರಾದರೂ ಸಾಯುತ್ತಾರೆ. ಕೋತಿ, ಆನೆ, ಹಸುವನ್ನು ಕೊಲ್ಲಬಾರದು. ಹುಲಿ ಮೀಸೆ, ಆನೆ ಬಾಲದ ಕೂದಲನ್ನು ಉಂಗುರ ಮಾಡಿಸಿ ಹಾಕಿಕೊಂಡರೆ ಯಾವುದೇ ಸಂದರ್ಭ ಸನ್ನಿವೇಶಗಳಲ್ಲೂ ಎದೆಗುಂದುವುದಿಲ್ಲ.

೧೫. ಕೌಟುಂಬಿಕ ಮತ್ತು ನೀತಿಪ್ರಧಾನ ನಂಬಿಕೆಗಳು :-

ಊಟವನ್ನು ಊಟದ ತಟ್ಟೆಯನ್ನು ಕಾಲಿನಿಂದ ಒದೆಯಬಾರದು. ಎಂಜಲು ತಟ್ಟೆಯನ್ನು ದಾಟಿದರೆ ಕಾಲುಧೂಳಾಗುತ್ತದೆ. ಉಣ್ಣುವಾಗ ತುತ್ತು ಕೆಳಗೆ ಬಿದ್ದರೆ ಯಾರಾದರೂ ನೆಂಟರು ಮನೆಗೆ ಬರುತ್ತಾರೆ. ತುತ್ತನ್ನು ತೂಕ ಮಾಡಿ ಉಣ್ಣಬಾರದು. ಒಬ್ಬರ ಎಂಜಲನ್ನು ಮತ್ತೊಬ್ಬರು ತಿನ್ನಬಾರದು. ಮಾಂಸವನ್ನು ಕದ್ದು ತಿನ್ನಬಾರದು ಮತ್ತು ಅವಿತಿಡಬಾರದು. ಇಟ್ಟರೆ ಅಂತಹವರಿಗೆ ತೊನ್ನಾಗುತ್ತದೆ. ಎಣ್ಣೆ / ಮುಖಸಿಂಡರಿಸದೆ, ನಗು ನಗುತ್ತಾ ಮಾಡಿದರೆ, ಉಂಡ ಊಟ ಮೈಗೆ ಹತ್ತುತ್ತದೆ. ಊಟ ಮಾಡಿದ ಮೇಲೆ ನೆಲಕ್ಕೆ ಕೈಯೂರಿ ಮೇಲೆದ್ದರೆ ತಿಂದದ್ದೆಲ್ಲ ಭೂಮಿಗೆ ಸೇರುತ್ತದೆ. ಉಂಡ ನಂತರ ಮೈ ಮುರಿಯಬಾರದು. ವರ್ಷ ತುಂಬುವ ತನಕ ಅಳಿಯನಿಗೆ ಮುದ್ದೆ ಕೊಡಬಾರದು. ಅಳಿಯನ ಎಂಜಲು ತಟ್ಟೆಯಲ್ಲಿ ಅತ್ತೆ ಕೈಯೂರಬಾರದು. ಉಂಡ ಮನಗೆ ಎರಡು ಬಗೆಯಬಾರದು. ಉಪ್ಪು ಕೊಟ್ಟವನನ್ನು ಮುಪ್ಪಿನವರೆಗೂ ನೆನೆಯಭೇಕು. ಹಸಿದವರನ್ನು ನೆರಳಿಗೆ ಕರೆದು ಊಟ ಮಾಡಿಸಬೇಕು. ತುಂಬಿದ ಕೆರೆ, ಮನೆ ಬಡಿಯಬಾರದು. ತಾಯಿ ಮಗುವುನ್ನು ಬೇರೆ ಮಾಡಬಾರದು.[೨೪೯]

೧೬. ಕೃಷಿ ನಂಬಿಕೆಗಳು :-

ನಂಬಿಕೆಗಳು ಒಕ್ಕಲಿಗರ ಜೀವನದಲ್ಲಿ ಅಸಾಧಾರಣ ಪಾತ್ರ ವಹಿಸಿವೆ. ಜೀವನಕ್ಕೆ ಉಸಿರಾಟ ಎಷ್ಟು ಅವಶ್ಯಕವೋ, ನಂಬಿಕೆಗಳೂ ಅಷ್ಟೇ ಅವಶ್ಯಕ. ಹೀಗಾಗಿ ಅವು ಎಂದೂ ಬತ್ತದ ಗುಪ್ತಗಾಮಿನಿಗಳಾಗಿ ಹರಿಯುತ್ತಿವೆ. ರೈತರ ಜೀವನವನ್ನು ರೂಪಿಸುವಲ್ಲಿ, ಅವರ ಸಂಸ್ಕೃತಿಯನ್ನು ಪೋಷಿಸುವಲ್ಲಿ, ಅವರ ಸಮಾಜವನ್ನು ರಕ್ಷಣೆ ಮಾಡುವಲ್ಲಿ ನಂಬಿಕೆಗಳು ಬಹು ಮುಖ್ಯವಾದ ಕಾರ್ಯ ನಿರ್ವಹಿಸಿವೆ. ಒಕ್ಕಲಿಗರ ಬದುಕಿನಲ್ಲಿ ನಂಬಿಕೆಗಳು ಸುಖ ಶಾಂತಿ ನೆಮ್ಮದಿಗಳನ್ನುಂಟು ಮಾಡಿವೆ. ಇದಕ್ಕೆ ಕಾರಣ ಅವು ಒಕ್ಕಲಿಗರ ಮಾನಸಿಕ ನೆಮ್ಮದಿಯನ್ನು ನೀಡಿ ಸದಾಕಾಲ ಲವಲವಿಕೆಯಿಂದ, ಸಂತೋಷದಿಂದ ಇಟ್ಟವೆ. ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಲು ಮತ್ತು ಅದನ್ನು ರಕ್ಷಿಸಲು ಅಲಿಖಿತ ಶಾಸನಗಳಾಗಿ ಅವು ಕೆಲಸ ಮಾಡಿವೆ. ಎಷ್ಟೋ ವೇಳೆ ಕಾಯ್ದೆ ಕಾನೂನುಗಳು ಮಾಡದ ಕೆಲಸವನ್ನು ಅವು ಪರಿಣಾಮಕಾರಿಯಾಗಿ ಮಾಡಿವೆ.

ಮಾನವನ ಹುಟ್ಟು, ಸಾವು, ಮದುವೆ, ಮುಂಜಿ, ಹಬ್ಬ, ಹರಿದಿನ, ಮಾಡುವ ಉದ್ಯೋಗ ಮುಂತಾದವುಗಳ ಕುರಿತನಂಬಿಕೆಗಳು ಹುಲುಸಾಗಿ ಬೆಳೆದಿವೆ. ಅದರಲ್ಲಿ ಕೃಷಿ ಕುರಿತಾದ ನಂಬಿಕೆಗಳು ಸಾಕಷ್ಟು. ಎತ್ತು, ಭೂಮಿ, ಮಳೆ, ಗಾಳಿ

ಕುರಿತಾದ ನಂಬಿಕೆಗಳು, ಹೊಲ ಹದ ಮಾಡುವಾಗಿನ ನಂಬಿಕೆಗಳು, ಬಿತ್ತುವಾಗಿನ ನಂಬಿಕೆಗಳು, ಕಳೆ ತಗೆಯುವಾಗಿನ ಎಡೆ ಹೊಡೆಯುವಾಗಿನ ನಂಬಿಕೆಗಳು, ಬೆಳೆ ಕುರಿತಾದ ನಂಬಿಕೆಗಳು, ಬೆಳೆ ಕೊಯ್ಯುವಾಗಿನ ನಂಬಿಕೆಗಳು, ಹಂತಿಯ ಕುರಿತಾದ ನಂಬಿಕೆಗಳನ್ನು, ರಾಶಿಯನ್ನು ಹಗೆಗೆ ಹಾಕುವಾಗಿನ ನಂಬಿಕೆಗಳು, ಕೃಷಿ ಉಪಕರಣಗಳ ಕುರಿತಾದ ನಂಬಿಕೆಗಳು ಎಂದು ವಿಭಾಗಿಸಬಹುದು. ಮತ್ತೆ ಇವುಗಳಲ್ಲಿ ಕೆಲವು ಉಪವಿಭಾಗಗಳನ್ನು ಕಲ್ಪಿಸಬಹುದು.[೨೫೦] ಉದಾ: ಹಂತಿಯ ಕುರಿತಾದ ನಂಬಿಕೆಗಳನ್ನು ೧. ಕಣ ಮಾಡುವಾಗಿನ ನಂಬಿಕೆಗಳು, ೨.ತೆನೆ ಮುರಿಯುವಾಗಿನ ನಂಬಿಕೆಗಳು, ೩. ಹಂತಿ ಉಪಕರಣಗಳ ಕುರಿತಾದ ನಂಬಿಕೆಗಳು, ೪.ಹಂತಿ ಕಟ್ಟುವಾಗಿನ ನಂಬಿಕೆಗಳು, ೫. ಹಂತಿ ಬಿಡುವಾಗಿನ ನಂಬಿಕೆಗಳು, ೬. ಹಂತಿ ಬಿಟ್ಟ ಮೇಲಿನ ನಂಬಿಕೆಗಳು ೭. ರಾಶಿಯ ಕುರಿತಾದ ನಂಬಿಕೆಗಳು ಹೀಗೆ ವರ್ಗೀಕರಿಸುತ್ತ ಹೋದರೆ ಕೃಷಿ ಕುರಿತಾದ ನಂಬಿಕೆಗಳ ಹರವು ಎಷ್ಟಿದೆ ಎಂಬುದು ಅರಿವಾಗುತ್ತದೆ. ಒಕ್ಕಲಿಗನ ಉದ್ಯೋಗವೇ ನಂಬಿಕಗಳ ಆಗರವಾಗಿದೆ.[೨೫೧] ಎನ್ನುವುದು ಸ್ಪಷ್ಟವಾಗುತ್ತದೆ. ಉದಾ: ಇಲ್ಲಿ ಕೆಲವು ಕೃಷಿ ನಂಬಿಕೆಗಳನ್ನು ನೋಡಬಹುದು. ೧.ಉಗಾದಿ ಪಾಡ್ಡೆ ದಿವಸ ಹರಗುವ ಮೂರ್ತ ಮಾಡಬೇಕು. ೨. ಕರಿ ಎತ್ತನ್ನು ಬಿತ್ತುವ ಮೊದಲ ದಿವಸ ಕೂರಿಗೆಗೆ ಹೂಡಬಾರದು, ೩. ಹಂತಿ ಬಿಡುವಾಗ ಕೊನೆ ಎತ್ತಿನ ಸೆಗಣಿಯಿಂದ ಭೂದನನ್ನು ಮಾಡಬೇಕು, ೪. ಬೆಳೆ ಬೆಳೆದು ನಿಂತಾಗ ಚೆರಗ ಚೆಲ್ಲಬೇಕು, ೫. ರಾಶಿಯಲ್ಲಿ ಮೊದಲು ಸ್ವಾಮಿಗಳಿಗೆ ಮಠಗಳಿಗೆ ದಾನ ಮಾಡಬೇಕು, ೬.ಹಂತಿ ಹೊಡೆಯುವಾಗ ಮೇಟಿ ಸಡಿಲಾದರೆ, ಇಲ್ಲಾ ಮುರಿದರೆ ಮನೆ ಯಜಮಾನನಿಗೆ ತೊಂದರೆಯಾಗುತ್ತದೆ. ಇಲ್ಲವೆ ಸಾಯುತ್ತಾನೆ ಮುಂತಾದವು. ಇಂದು ಕೃಷಿಯ ಕಾರ್ಯವು ಹೆಚ್ಚಾಗಿ ಯಂತ್ರಗಳಿಂದ ಆಗುತ್ತಿರುವದರಿಂದ ಅನೇಕ ನಂಬಿಕೆಗಳು ಮಾಯವಾಗುತ್ತವೆ. ಇದಕ್ಕೆಲ್ಲ ಕಾರಣ ವಿಜ್ಞಾನ ನಾಗರಿಕತೆ ಎಂದು ಹೇಳಬಹುದು.

೪.೫ ಕೆರೆ-ಕುಂಟೆ, ಬಾವಿಗಳಿಗೆ ಸಂಬಂಧಿಸಿದ ಐತಿಹ್ಯಗಳು :-

ಪುತ್ರಾಪೇಕ್ಷೆಗಾಗಿ ಶಿಷ್ಟ ಪರಂಪರೆಯಲ್ಲಿ ಪೂಜೆ ಆರಾಧನೆ ಆಚರಣೆಗಳಲ್ಲದೆ ಹೋಮ, ಹವನ, ಯಜ್ಞ-ಯಾಗ ತಪಸ್ಸುಗಳನ್ನು ಮಾಡಿದ ನಿದರ್ಶನಗಳಿವೆ. ಆದರೆ ಇವುಗಳ ಹಿನ್ನೆಲೆಯಾಗಿ ಸಂತಾನಾಪೇಕ್ಷೆಯ ಬಯಕೆ ಹಾಗೂ ಆ ಮೂಲಕ ಮೋಕ್ಷದ ಹಂಬಲ ಕೆಲಸ ಮಾಡುತ್ತದೆ. ಜನಪದರು ಜನೋಪಯೋಗಿ ಕೆಲಸವನ್ನು ಕೈಗೊಂಡು ಪಾಪಗಳನ್ನು ಪರಿಹರಿಸಿಕೊಳ್ಳಲು ಹವಣಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮಕ್ಕಳಿಲ್ಲದವರು ಕೆರೆಕಟ್ಟಿ, ಬಾವಿ ಕುಂಟೆಗಳನ್ನು ಸಂತಾನಾಪೇಕ್ಷೆಯ ಉದ್ದೇಶವಾಗಿ ಎಲ್ಲಿಯೂ ನಿರ್ಮಿಸಲಿಲ್ಲ. ಬದಲಿಗೆ ಇಂಥ ನಿರ್ಮಾಣಗಳ ಭದ್ರತೆಗಾಗಿ ತಮ್ಮ ಮನೆಯ ಹೆಣ್ಣು ಮಕ್ಕಳನ್ನು, ಬಸರಿ, ಬಾಣಂತಿಯರನ್ನು ಬಲಿಕೊಟ್ಟ ನಿದರ್ಶನಗಳಿವೆ. ಗೌರಿಬಿದನೂರು ತಾ. ಕಾಚಮಾಚೇನಹಳ್ಳೀಯ ಚಿಕ್ಕನಂಜಪ್ಪನ ಕುಂಟೆಯೂ ಆತನಿಗೆ ಮಕ್ಕಳಿಲ್ಲದ ಕಾರಣಕ್ಕಾಗಿ ಕಟ್ಟಿಸಿದ್ದು. ಹಾಗೆಯೇ ವೇದಲವೇಣಿಯಲ್ಲ ಗಾಳೆಮ್ಮನೆಂಬ ಮಹಿಳೆ ತನಗೆ ಮಕ್ಕಳಿಲ್ಲದ ಕಾರಣಕ್ಕಾಗಿ ದನ ಕರುಗಳ ನೀರಿನ ವ್ಯವಸ್ಥೆಗೆಂದು ಕುಂಟೆಯನ್ನು ಕಟ್ಟಿಸಿದಳು. ಮಳೆಗಾಲ ಮುಗಿಯುತ್ತಿದ್ದಂತೆ ದನ ಕರುಗಳಿಗೆ ಕುಡಿಯುವ ನೀರನ್ನು ಒದಗಿಸಲು ಕುಂಟೆಗಳನ್ನು ಆಶ್ರಯಿಸಬೇಕಾಗುತ್ತದೆ. ಏಕೆಂದರೆ ಜಿಲ್ಲೆಯಲ್ಲಿ ನದಿ ಹಳ್ಳಗಳು ಮಳೆಗಾಳದಲ್ಲಿ ಮಾತ್ರ ಹರಿದು ಬತ್ತಿ ಹೋಗುತ್ತವೆ. ಕೃಷಿಯ ಅವಶ್ಯಕತೆಗಳಿಗೆ ಕೆರೆಗಳನ್ನು ಆಶ್ರಯಿಸಿದಂತೆ ದಿಣ್ಣೆಯ ಪ್ರದೇಶದಲ್ಲಿ ಮೇಯುವ ದನಗಳ ನೀರಿನ ಅವಶ್ಯಕತೆಗಾಗಿ ಕುಂಟೆಗಳನ್ನು ನಿರ್ಮಿಸಿರುತ್ತಾರೆ.[೨೫೨] ದನ ಕರುಗಳಿಗೆ ಬೇಸಿಗೆಯಲ್ಲಿ ನೀರಿನ ಕೊರತೆಯಾಗುವುದರಿಮದ ಈ ಮೂಲಕ ಆಶ್ರಯ ಒದಗಿಸಿ ಪುಣ್ಯ ಪಡೆದುಕೊಳ್ಳಬೇಕೆಂಬ ಹಂಬಲ 'ಕುಂಟೆ'ಗಳ ನಿರ್ಮಾಣದ ಹಿಂದಿನ ಆಶಯವಾಗಿರುತ್ತದೆ. ಮಕ್ಕಳಿಲ್ಲದವರಿಗೆ ಮೋಕ್ಷವಿರುವುದಿಲ್ಲವೆಂಬ ನಂಬಿಕೆಯಿದೆ. ಜನಪದರಲ್ಲಿ

ಸಂತಾನರಹಿತರು ಬಾವಿಯನ್ನು ತೋಡಿಸುವುದು ಇಲ್ಲವೇ ಕುಂಟೆಯನ್ನು ಕಟ್ಟಿಸುವುದು ಇತ್ಯಾದಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಮೂಲಕ ಮೋಕ್ಷಕ್ಕೆ ಸಲ್ಲುತ್ತಾರೆಂದು ಭರವಸೆಯ ನಂಬಿಕೆ ಇಂಥಲ್ಲಿ ಭದ್ರಗೊಂಡಿರುತ್ತದೆ.

ಕೆರೆಗೆ ಹಾರ :-

ಇದು ಬಹಳ ವಿಶಿಷ್ಟವಾದ ಕನ್ನಡ ಕಥನಗೀತೆ. ಈ ಗೀತೆಯನ್ನು ಓದುತ್ತಾ ಹೋದಂತೆ, ಓದುಗನಿಗೆ ಒಂದು ವಿನೂತನ ಅನುಭವವಾಗುತ್ತದೆ. ಈ ಗೀತೆಯಲ್ಲಿ ಸುಮಾರು ೧೨೦ ಸಾಲುಗಳಿವೆ. ಈ ಕಥನದಲ್ಲಿ ಮುಖ್ಯವಾಗಿ ಮೂರು ವಿಷಯಗಳಿವೆ.

೧. ಹೆಣ್ಣೊಬ್ಬಳ ತ್ಯಾಗ - ಬಲಿದಾನ

೨. ಹಿರಿಯರ ಸಮಾಜ ಕಲ್ಯಾಣ ಕೆಲಸಕ್ಕೆ ಒತ್ತಾಸೆಯಾದ ಮಾನಿನಿ

೩. ಊರ ಹಿತಕ್ಕಾಗಿ ಅರ್ಪಿತಗೊಂಡ ಪತ್ನಿಗಾಗಿ, ಪ್ರಾಣಾರ್ಪಣೆಗೈದ ಪತಿಯ ತ್ಯಾಗದ ಹಿರಿಮೆ

'ಕೆರೆಗೆ ಹಾರ'ದ ಕಥೆ ಈ ರೀತಿಯಲ್ಲಿದೆ. ಕಲ್ಲನಕೇರಿಯ ಮಲ್ಲನಗೌಡ, ಜನರ ಹಿತಕ್ಕಾಗಿ, ಊರಿನ ಕ್ಷೇಮಕ್ಕಾಗಿ ಕೆರೆಯೊಂದನ್ನು ಕಟ್ಟಿಸುವನು. ಆದರೆ ಆ ಕೆರೆಯಲ್ಲಿ ಸ್ವಲ್ಪವೂ ನೀರು ಬರುವುದೇ ಇಲ್ಲ. ಇದರಿಂದ ಮನನೊಂದ, ಬೇಸರಗೊಂಡ ಗೌಡ, ಜೋಯಿಸರ ಬಳಿ ಹೋಗಿ ಶಾಸ್ತ್ರ ಕೇಳುವನು. ಜೋಯಿಸರು ಹೊತ್ತಿಗೆ ತೆಗೆದು ಲೆಕ್ಕಾಚಾರ ಮಾಡಿ – ಇದಕ್ಕೆ ದೇವರಕಾಟ. ದೆವ್ವದ ಕಾಟ ಯಾವುದೂ ಇಲ್ಲ. ಆದರೆ ಕೆರೆ ಒಂದು ಬಲಿಯನ್ನು ಕೇಳುತ್ತಿದೆ. ಅದಕ್ಕೆ ನಿಮ್ಮ ಮನೆತನದ ಹಿರಿಯ ಸೊಸೆ ಮಲ್ಲವ್ವನನ್ನು ಹಾರವಾಗಿ ಕೊಡಬೇಕು. ಆಕೆಯನ್ನು ಕೆರೆಗೆ ಹಾರವಾಗಿ ಕೊಟ್ಟರೆ ಕೆರೆಯಲ್ಲಿ ಖಂಡಿತ ನೀರು ಬರುತ್ತದೆ ಎನ್ನುವನು. ಗೌಡನ ಮನೆಯಲ್ಲಿ ಎಲ್ಲರೂ ಆಲೋಚನೆ ಮಾಡಿ, ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ, ಮನೆತನದ ಹಿರಿಯ ಸಂತತಿ ಮುಂದುವರಿಯುವುದು ಬೇಡವೆ ಎಂದುಕೊಳ್ಳುತ್ತಾರೆ. ಹೇಗಾದರೂ ಮಾಡಿ ಬಲಿಯನ್ನಂತೂ ಕೊಡಲೇಬೇಕು.[೨೫೩] ಇಲ್ಲವಾದರೆ ಮಾಡಬೇಕೆಂದಿರುವ ಧರ್ಮಕಾರ್ಯ ಅರ್ಧದಲ್ಲೇ ನಿಂತು ಹೋಗುತ್ತದೆ. ಆದುದರಿಂದ ಕಡೆ ಸೊಸೆ ಭಾಗೀರಥಿಯನ್ನ ಹಾರವಾಗಿ ಕೊಡಬೇಕೆಂದು ಮನೆಯೊಳಗೆ ಮಾತಾಗುವುದು.

ಹಿರಿಯರ ಈ ನಿರ್ಧಾರ ಭಾಗೀರಥಿಗೆ ತಿಳಿದರೂ ಎಲ್ಲಿಯೂ ಪ್ರತಿಭಟಿಸುವುದಿಲ್ಲ. ತನ್ನ ಮನದ ಬೇಗುದಿಯನ್ನು ಯಾರ ಮುಂದೆಯೂ ತೋರ್ಪಡಿಸಿಕೊಳ್ಳುವುದಿಲ್ಲ. ಆದರೆ ಕಡೆಯದಾಗಿ ತನ್ನ ಹೆತ್ತವರು, ಒಡಹುಟ್ಟು, ಬಂಧು, ಬಳಗ ಮತ್ತು ಗೆಳತಿಯರನ್ನು ಕಂಡು ಬರಲು ಅತ್ತೆಯ ಅನುಮತಿ ಕೇಳುತ್ತಾಳೆ. ಆಗ ಅತ್ತೆ, ಸರ್ರನೆ ಹೋಗವ್ವ, ಭರ್ರನೆ ಬಾರವ್ವ, ಎಂದು ಕಳುಹಿಸುವಳು. ಭಾಗೀರಥಿ ತೌರಿಗೆ ಬಂದಾಗ ಮುಖ ಬಾಡಿರುತ್ತದೆ. ಕಂಗಳಲ್ಲಿ ಕಂಬನಿ ಒಸರುತ್ತಿರುತ್ತದೆ. ಹೆತ್ತವರಿಗೆ ಭಾಗೀರಥಿ 'ನಮ್ಮತ್ತೆ ವಿಷಯವೇನೆಂಬುದೇ ತಿಳಿಯದ ಅಮಾಯಕಿ ಎಂದು ಭಾಗೀರಥಿ ತನ್ನ ತಂದೆಗೆ ಹೇಳುವಳು ಆದರೆ ತಂದೆ 'ಇಟ್ಟರೆ ಇಡಲೇಳು ಹೊಲಮನಿ ಕೊಡ್ತೀನಿ' ಎಂದಾಗ, ಭಾಗೀರಥಿ ವಿಷಾದದಿಂದ 'ಹೊಲಮನಿ ಒಯ್ದು ಹೊಳೆದಂಡೆಗ್ಹಾಕಪ್ಪ' ಎಂದ್ಹೇಳಿ ತಾಯಿ ಬಳಿಗೆ ಬರುವಳು. ವಿಷಯ ತಿಳಿದ ತಾಯಿ 'ವಾಲೆ ಜೋಡು ಕೊಡ್ತೀನಿ' ಎನ್ನುವಳು.

ಭಾಗೀರಥಿ ಅಸಹಾಯಕತೆಯಿಂದ 'ವಾಲೀಯ ಜೋಡೊಯ್ದು ಒಲಿಯಾಗ ಹಾಕ್ವ' ಎಂದು ನುಡಿದು, ಅಕ್ಕನ ಹತ್ತಿರ ಬಂದಾಗ ಅವಳಕ್ಕ ನಿನ್ನೊಂದಿಗಿರಲು ನನ್ನ ಮಕ್ಕಳನ್ನು ಕರೆದೊಯ್ಯಿ ಎನ್ನುವಳು. ಭಾಗೀರಥಿಗೆ ತೌರಿನಲ್ಲಿ ಶಾಂತಿ ಸಮಾಧಾನ ಸಿಗದೆ ಗೆಳತಿಯ ಬಳಿ ಬಂದು ಮನಸಾರೆ ಅಳುತ್ತಾಳೆ. ಆಗ ಗೆಳತಿ 'ಎಂದಿಲ್ಲದ ಭಾಗೀರಥಿ ಇಂದ್ಯಾಕ ಈ ಅಳುವು' ಎಂದು

ಕೇಳುವಳು. ಆದಕ್ಕೆ ಭಾಗೀರಥಿ ಅಂಜುತ್ತಾ, ಅಳುಕುತ್ತಾ, ಆತ್ಮೀಯ ಗೆಳತಿಯ ಬಳಿ ಮನಬಿಚ್ಚಿ ನೇರವಾಗಿ 'ನಮ್ಮತ್ತೆ, ನಮ್ಮಾವ ನನ್ನ ಕೆರೆಗ್ಹಾರ ಕೊಡ್ತಾರಂತೆ' ಎನ್ನುವಳು. ಆ ಗೆಳತಿಗೆ ತನ್ನ ಗೆಳತಿಯ ಜೀವಕ್ಕಿಂತ ಊರಿನ ಹಿತ, ಲೋಕಕಲ್ಯಾಣ, ಜನಸೇವೆ ಅಧಿಕವೆನಿಸಿ, ಭಾಗೀರಥಿಯನ್ನು ಪ್ರೀತಿಯಿಂದ ಸಮಾಧಾನ ಪಡಿಸುತ್ತಾ 'ಕೊಟ್ಟರೆ ಕೊಡಲೇಳು, ಇಟ್ಹಾಂಗ ಇರಬೇಕು'ಎನ್ನುತ್ತಾಳೆ.[೨೫೪] ಆಗ ಭಾಗೀರಥಿಗೆ ಅಧ್ಯೆರ್ಯ ಹೋಗಿ ಆ ಜಾಗದಲ್ಲಿ ಆತ್ಮವಿಶ್ವಾಸ ತಾನಾಗಿಯೇ ಮೂಡುತ್ತದೆ. ಅವಳ ಮನದ ಹೊಯ್ದಾಟ ಅಲ್ಲಿಗೆ ನಿಲ್ಲುತ್ತದೆ. ತನ್ನ ಬಲಿದಾನಕ್ಕೆ ಹೃದಯವನ್ನು ಕಲ್ಲು ಮಾಡಿಕೊಂಡ ಭಾಗೀರಥಿ ಅವ್ವನ ಮನೆಗೆ ಸರ್‍ರನೆ ಹೋಗಿ, ಭರ್‍ರನೆ ಬರುತ್ತಾಳೆ.

ಮನೆಯಲ್ಲಿ ಗಂಗೆಯ ಪೂಜೆಗಾಗಿ ಸಕಲ ಸಿದ್ಧತೆಯ ಏರ್ಪಾಡುಗಳು ನಡೆಯುವಾಗ, ಜೀವನ್ಮುಖಿಯಾದ ಭಾಗೀರದಿ ತನ್ನ ಹೃದಯವನ್ನು ಕಲ್ಲು ಮಾಡಿಕೊಂಡಿದ್ದರೂ ಸಹ ಮುಂಬರಲಿರುವ ತನ್ನ ಸಾವನ್ನು ನೆನೆದು ಅಳುತ್ತಾಳೆ. ಅವಳ ಮನೋಬೇಗುದಿ ಅತ್ತೆ, ಮಾವನಿಗೆ ಅರಿವಾದರೂ, ಅವಳನ್ನು ನೇರವಾಗಿ ಏನನ್ನು ಕೇಳಲಾರರು. ಸಾಯುವ ದಿನ ಕೂಡ ಭಾಗೀರಥಿ ಮನೆಯಲ್ಲಿ ನಿತ್ಯ ಕೈಂಕರ್ಯಕ್ಕೆ ನೆರವಾಗುತ್ತಳೆ. ಅನ್ನ, ಬ್ಯಾಳಿಯನ್ನು ಮಾಡಿಡುತ್ತಾಳೆ. ಅಂದು ಮನೆಯಲ್ಲಿ ದೊಡ್ಡ ಹಬ್ಬದ ಅಡುಗೆ ಸಿದ್ಧವಾಗುತ್ತದೆ. ಸ್ನಾನಕ್ಕಾಗಿ ಹತ್ತು ಕೊಪ್ಪನಿಗೆ ನೀರು ಉಕ್ಕಿ ಮಳ್ಳುತ್ತದೆ. ಮನೆಯ ಹಿರಿಯರು, ಮನೆಯ ಸೊಸೆಯರಿಗೆಲ್ಲ. ಸ್ನಾನ ಮಾಡಲು ಹೇಳಿದಾಗ, ಅವರೆಲ್ಲ ಮಡಿಯಾದರೆ ಎಲ್ಲಿ ಗಂಗೆ ನಮ್ಮನ್ನೆಲ್ಲ ಸೆಳೆದೊಯ್ಯುವಳೊ ಎಂದು ಹೆದರಿ ಯರೊಬ್ಬರೂ ಸ್ನಾನ ಮಾಡುವುದಿಲ್ಲ. ಕಡೆಗೆ ಅತ್ತೆ ಭಾಗೀರಥಿಯನ್ನು ಕರೆದು ಸಣ್ಣಸೊಸೆ ಭಾಗವ್ವ ನೀನರೆ ಜಳಕ ಮಾಡೆ ಎಂದಾಗ.

'ಸಣ್ಣ ಸೋಸೆ ಭಾಗೀರಥಿ ಜಳಕ ಮಾಡ್ಯಾಳು' ಜಳಕವಾದ ಮೇಲೆ ಬಯಲಿನಂತೆ ಬರಡಾಗಿದ್ದ ಕೆರೆಯ ಅಂಗಳದಲ್ಲಿ ಪೂಜಾವಿಧಿ ನಡೆದು ನೈವೇದ್ಯ, ಪ್ರಸಾದ ವಿನಿಮಯ ಎಲ್ಲವೂ ಆಗುತ್ತದೆ. ಊಟವಾದ ಮೇಲೆ ಬಂದಿದ್ದವರೆಲ್ಲ. ಪಾತ್ರೆ ಪದಾರ್ಥಗಳನ್ನು ಕಟ್ಟಿಕೊಳ್ಳುವಾಗ, ಒಂದು ಬಂಗಾರದ ಬಟ್ಟಲನ್ನು ಉದ್ದೇಶಪೂರ್ವಕವಾಗಿ ಮರೆತು ಮರಳುವರು. ಸೊಸೆಯಂದಿರಿಗೆ ಅತ್ತೆ 'ಗಂಗವ್ವ ನೀಹೋಗ, ಗೌರವ್ವ ನೀ ಹೋಗ' ಎಂದು ಹೇಳಿದಾಗ, ಹಿರಿಯ ಸೊಸೆಯರೆಲ್ಲ ಒಲ್ಲೆ ಎನ್ನುವರು. ಆಗ ಅತ್ತೆ ಸಣ್ಣಸೊಸಿ ಭಾಗೀರಥಿ ನೀ ತರ ಹೋಗವ್ವ ಎಂದಾಗ, 'ಸಣ್ಣಸೊಸಿ ಭಾಗೀರಥಿ ಬಿರಿಬಿರಿ ನಡೆದಾಳು'.

ಬಿರಿಬಿರಿ ಹೋದಾಳು ಬಂಗಾರ ಬಟ್ಲ ತಗೊಂಡಳು ! ಅದನ್ನು ಭಾಗೀರಥಿ ಕೈಲಿ ಹಿಡಿದಂತೆಯೇ ಕೆರೆಗೆ ಹಾರವಾಗುತ್ತಾಳೆ. ಗಂಗೆ ಈ ಮುಗ್ಧ, ನಿಷ್ಠೆಯ ಮಾನಿನಿಯನ್ನು ಮೃದುವಾಗಿ ತನ್ನೊಡಲಿಗೆ ಸೇರಿಸಿಕೊಳ್ಳುತ್ತಾಳೆ. ಭಾಗೀರಥಿಯ ಸಾವಿಗೆ ಗೀತೆ ಕೊನೆಗೊಳ್ಳುವುದಿಲ್ಲ.[೨೫೫] ಬದಲಾಗಿಮುಂದುವರೆಯುತ್ತದೆ. ಇಷ್ಟೆಲ್ಲ ಆಗುವಾಗ ಭಾಗೀರಥಿಯ ಗಂಡ ಮಾದೇವರಾಯ ಊರಿನಲ್ಲಿರುವುದಿಲ್ಲ. ದೂರದ ದಂಡಿನಲ್ಲಿರುತ್ತಾನೆ. ದಂಡಿನಲ್ಲಿದ್ದವನು ಮಡದಿ ವಿಷಯವಾಗಿ ದುಸ್ವಪ್ನವೊಂದನ್ನು ಕಾಣುತ್ತಾನೆ.'ಸೆಲ್ಯ ಸುಟ್ಹಾಂಗಾತು ಕೋಲು ಮುರಿದ್ಹಂಗಾತು'ಕಟ್ಟಿಸಿದ ಮಹಲೆಲ್ಲ ತಟ್ಟನೆ ಬಿದ್ಹಂಗಾತು. ಒಡನೆಯೇ ಮಾದೇವರಾಯ ಬತ್ತಲೆ ಕುದುರೆ ಹತ್ತಿ ಮನೆಗೆ ಧಾವಿಸಿ ಬರುತ್ತಾನೆ. ಗ್ರಾಮೀಣ ಸಮಾಜದಲ್ಲಿ ಹೊರಗಿನಿಂದ ಮನೆಗೆ ಬಂದ ಗಂಡನಿಗೆ ಕೈಕಾಲು ತೊಳೆಯಲು ಮಡದಿಯಾದವಳು ನೀರು ಕೊಡುವಂತೆ ಹೇಳುತ್ತಾಳೆ. ಆಗ ಮಾದೇವರಾಯನ ಆತಂಕ ಇಮ್ಮಡಿಸಿ, ಪತ್ನಿ ಎಲ್ಲೆಂದು ಕೇಳುವನು. ತಾಯಿ ತವರಿಗೆ ಹೋಗಿದ್ದಾಳೆ ಎಂದು ಹುಸಿ ನುಡಿವಳು. ಮಾದೇವರಾಯ,

ಮಡದಿಯ ಕಾಣಲೇಬೇಕೆಂಬ ತವಕದಿಂದ ಆತುರಾತುರವಾಗಿ ಅತ್ತೆ ಮನೆಗೆ ಬರುವನು. ಅಲ್ಲಿ ಅತ್ತೆ ತನ್ನ ಹಿರಿಯ ಹೆಣ್ಣು ಮಕ್ಕಳಿಗೆ ನೀರು ತಂದು ಕೊಡುವಂತೆ ಹೇಳುವಳು. ಆಗ ಮಾದೇವರಾಯ ನನ್ನ ಸತಿ ಎಲ್ಲಿ ಎಂದು ಕೇಳಿದಾಗ, ಭಾಗೀರಥಿಯ ತಾಯಿ 'ನಿನ್ನ ಮಡದಿ ಗೆಳತಿ ಮನಗೆ ಹೋಗ್ಯಾಳಪ್ಪ' ಎನ್ನುವಳು. ಸರಿ ಆಗಿಂದಾಗಲೇ ಮಾದೇವರಾಯ ಬತ್ತಲೆಕುದುರಿ ಹತ್ತಿ ಗೆಳತಿ ಮನೆಗೆ ಬಂದು, ಹೆಂಡತಿ ಎಲ್ಲೆಂದು ಕೇಳಿದಾಗ, ಆ ಗೆಳತಿ ಧೈರ್ಯ ತಂದಕೊಂಡು ಸರಳವಾಗಿ.[೨೫೬]

'ನಿನ್ನ ಮಡದಿ ಭಾಗೀರಥಿಯ ಏನು ಹೇಳಲಿ ಸೂರಿ ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತೆ'. ಎಂದು ನೇರವಾಗಿ ಹೇಳುತ್ತಾಳೆ. ಆದರಿಂದ ಹತಾಶಗೊಂಡ ಮಾದೇವರಾಯ ಅಂತರ್ಮುಖಿಯಾಗುವನು. ಅವನ ಎದಿಯಲ್ಲಿ ನೋವಿನ ದಳ್ಳುರಿ ಧಗಧಗಿಸುತ್ತದೆ. ಒಂದು ಕ್ಷಣ ಅವನಿಗೆ ಏನು ಮಾಡಲೂ ತೋಚುವುದಿಲ್ಲ. ಪತ್ನಿಯ ಸಾವಿಗೆ ಯಾರನ್ನು ದೂರುವುದು, ಏನನ್ನು ಮಾಡುವುದು ಎಂಬುದು ತಿಳಿಯದೇ, ವಿರಹದಿಂದ, ಪತ್ನಿಯ ಅಗಲಿಕೆಯಿಂದ ಹುಚ್ಚನಂತಾಗುತ್ತಾನೆ. ಗೀತೆಯ ಅಂತ್ಯ ಹೃದಯ ವಿದ್ರಾವಕವಾದುದು. ಮಾದೇವರಾಯ ಪತ್ನಿಸತ್ತ ಕೆರೆಯ ಬಳಿಗೆ ಧಾವಿಸಿ ಬರುತ್ತಾನೆ. ಅಷ್ಟೊತ್ತಿಗೆ ಅವನ ಮನದ್ರವಿಸಿ ಹೋಗುತ್ತದೆ.

ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು

ಸಿಗಲಾರದ ಸತಿ ನೀನು ನನಬಿಟ್ಟು ಎಲ್ಲಿ ಹೋದೆ

ಮುನ್ನೂರು ವರಹಾ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ

ಮುತ್ತನೋಲೆ ಇಟಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ

ಎಂದು ಪ್ರಲಾಪಿಸುತ್ತಾ, ಜರ್ಝರಿತ ಮನಃಸ್ಥಿತಿಗೆ ಸಿಲುಕಿ ಅಳುತ್ತಳುತ್ತಲೇ ಕೆರೆಗೆ ಹಾರವಾಗುತ್ತಾನೆ. ಗೀತೆಯ ಪ್ರತಿ ದೃಶ್ಯವೂ ಕಣ್ಣಿಗೆ ಕಟ್ಟುವಂತೆ ಕಂಡು, ಓದುಗರ ಮೈ ಮನವನ್ನು ಅರ್ದ್ರಗೊಳಿಸುತ್ತವೆ. ಸಾಮಾನ್ಯವಾಗಿ ಜನಪದ ಕಥನಗೀತೆಗಳಲ್ಲಿ ಗಂಡಸತ್ತಾಗ ಹೆಂಡತಿ 'ಸಹಗಮನ' ಮಾಡುವುದು ಸಂಪ್ರದಾಯ. ಆದರೆ ಹೆಂಡತಿಗಾಗಿ, ಅವಳ ಮೇಲಿನ ಪ್ರೀತಿಗಾಗಿ ತನ್ನನ್ನೇ ತಾನು ಕೊಂದುಕೊಳ್ಳುವ 'ಪತಿಸಂತತಿ' ಬಹಳ ವಿರಳವಾದುದು. ಈ ಗೀತೆಯ ಸೊಗಸು ಮಹಾಕೃತಿಯ ಸಾಲಿಗೆ ನಿಲ್ಲುವಂತಹದು. ಭಾಗೀರಥಿಯ ಮನೋಭೂಮಿಕೆ, ಮನೋದಾರ್ಢ್ಯ ದಂಗುಬಡಿಸುತ್ತದೆ. ಮಾದೇವರಾಯನ ಪತ್ನಿ ಪ್ರೇಮ ಸ್ಮರಣೀಯವಾದುದು. ಒಟ್ಟಿನಲ್ಲಿ 'ಕೆರೆಗೆ ಹಾರ' ಗೀತೆ ಒಂದು ವಿಶಿಷ್ಟವಾದ ಗೀತೆ ಎಂಬುದರಲ್ಲಿ ಎರಡು ಮಾತಿಲ್ಲ.

೪.೬ ಐತಿಹ್ಯ-ಪುರಾಣ-ಚರಿತ್ರೆಗಳ ಅಂತರ ಸಂಬಂಧಗಳ ವಿಶ್ಲೇಷಣೆ

ಐತಿಹ್ಯಗಳನ್ನು ಆರಂಭದಲ್ಲಿ ಮೂಲತಃ ಧಾರ್ಮಿಕ ಕಥೆ, ಪುರಾಣಗಳಿಗೆ ಆರೋಪಿಸಿ ನೋಡಲಾಗುತ್ತಿತ್ತು ಎಂಬುದನ್ನು ಈ ಹಿಂದೆ ಗಮನಿಸಿದ್ದೇವೆ. ಅಂದರೆ ಕ್ರೈಸ್ತ ಸಾಧುಗಳ ಜೀವನ ಕಥೆಗಳನ್ನು ಚರ್ಚ್‌ಗಳಲ್ಲಿ ಪಾದ್ರಿಗಳು ಪಠಿಸುತ್ತಿದ್ದರು. ಹೀಗಾಗಿ ಐತಿಹ್ಯಗಳ ಹುಟ್ಟಿನ ಮೂಲ ಉದ್ದೇಶ ಧರ್ಮಪ್ರಸಾರ ಅಥವಾ ಧಾರ್ಮಿಕಕ್ಕೆ ಮಾತ್ರ ಸೀಮಿತವಾಗಿತ್ತು. ಬದಲಾದ ಸಾಮಾಜಿಕ ವ್ಯವಸ್ಥೆಯಿಂದಾಗಿ ೧೯-೨೦ ನೇ ಶತಮಾನದ ಹೊತ್ತಿಗೆ ಧಾರ್ಮಿಕ

ಆವರಣ ಕಳಚಿ, ಸಾಂಸ್ಕೃತಿಕ ಆಯಾಮಗಳೊಂದಿಗೆ, ಪರಂಪರೆಯಿಂದ ಬಂದದ್ದು ಎಂಬ ಅರ್ಥವನ್ನು ಐತಿಹ್ಯ ಪಡೆದುಕೊಂಡಿತು. ಐತಿಹ್ಯದ ಅರ್ಥ ವ್ಯಾಪ್ತಿ ವಿಸ್ತಾರಗೊಂಡಂತೆ ಹುಟ್ಟಿನ ಹರವು ಕೂಡ ವಿಶಾಲಗೊಂಡಿತು.

ಐತಿಹ್ಯಕ್ಕೆ ಭೌತಿಕ ಆಕರದ ಸಾಕ್ಷಿ ಹೃದಯವಿದ್ದಂತೆ. ವ್ಯಕ್ತಿಯೋರ್ವನ ಅಸಾಮಾನ್ಯತೆಗಳ ಮತ್ತು ಪ್ರಕೃತಿಯಲ್ಲಿಯ ಅದ್ಭುತ ವೈಚಿತ್ರ್ಯಗಳನ್ನು ಸಂರಕ್ಷಿಸುವ, ಇತರರಿಗೂ ಆ ವಿಸ್ಮಯ ತಿಳಿಸುವ ಹಾಗೂ ಪೌರಾಣಿಕ ವ್ಯಕ್ತಿಗಳನ್ನು ಅಥವಾ ಘಟನೆಗಳನ್ನು ತಮ್ಮ ಊರಿನ ಪರಿಸರ ಅಥವಾ ವ್ಯಕ್ತಿ ಮಹಿಮೆ ಅಥವಾ ಕುಲಕ್ಕೆ ಶ್ರೇಷ್ಠತ್ವವನ್ನು ಆರೋಪಿಸಿಕೊಳ್ಳುವ ನಿಟ್ಟಿನಲ್ಲಿ ಐತಿಹ್ಯಗಳು ಹುಟ್ಟು ಪಡೆಯುತ್ತವೆ. ಆಗ ಐತಿಹ್ಯಗಳು ಪುರಾಣಗಳಾಗುತ್ತವೆ. ಎಂಬ ಅಭಿಪ್ರಾಯದ ಬದಲು, ಐತಿಹ್ಯಗಳಲ್ಲಿ ಇತಿಹಾಸ, ಚರಿತ್ರೆ ಮುಂತಾದ ಅಂಶಗಳಿರುವಂತೆ, ಪೌರಾಣಿಕ ಅಂಶಗಳೂ ಇರುತ್ತವೆ ಎಂದು ಹೇಳಬೇಕಾಗುತ್ತದೆ. ಎನ್ನುವ ಮಾತು ಐತಿಹ್ಯದ ಪೌರಾಣಿಕ ಪ್ರಜ್ಞೆಯನ್ನು ಸೂಚಿಸುತ್ತದೆ.

ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ನಿಜಾಂಶವೊಂದನ್ನು ಸಾಂಪ್ರದಾಯಿಕ ಮೂಲವಸ್ತುಗೊಡನೆ ಕಲಾತ್ಮಕವಾಗಿ ಹೆಣೆಯಲ್ಪಟ್ಟಿರುತ್ತದೆ. ಹೀಗಾಗಿ ಐತಿಹ್ಯ ಇತಿಹಾಸದಿಂದ ಬಹುದೂ ಸಾಗಿರುತ್ತದೆ. ಹಾಗೆಂದು ಅದು ಪೂರ್ತಿಕಲ್ಪಿತ ದಂತಕಥೆಯೂ ಅಲ್ಲ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ.

ಈ ಪ್ರಭಾವವೇ ಪರಿಣಾಮವಾಗಿ ಅವರಲ್ಲೋಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿಬಿಡುತ್ತಾನೆ. ಆ ಪರಿಸ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ಒಂದು ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ.[೨೫೭] ಇದರಿಂದಾಗಿ ಐತಿಹ್ಯದಲ್ಲಿನ ಚಾರಿತ್ರಿಕ ವಿಷಯಗಳು ಲಿಖಿತ ಮಾಧ್ಯಮಗಳಿಗಿಂತ ಭಿನ್ನ ಸ್ವರೂಪವನ್ನು ತಾಳುತ್ತವೆ. ಲಿಖಿತ ಮಾಧ್ಯಮಗಳು ಪ್ರತಿಪಾದಿಸುವ ವಿಷಯದ ವಸ್ತುನಿಷ್ಠತೆಗೂ ಮೌಖಿಕ ಪರಂಪರೆಯಲ್ಲಿ ದೊರೆಯುವ ಐತಿಹ್ಯದ ವಸ್ತುನಿಷ್ಠತೆಯ ವಿಷಯಗಳಿಗೂ ಕೆಲವೊಮ್ಮೆ ಹೊಂದಾಣಿಕೆ ಕಂಡು ಬರುವುದಿಲ್ಲ. ಐತಿಹ್ಯ ಸಮಕಾಲೀನ ಸಾಂಸ್ಕೃತಿಕ ಆಯಾಮಗಳನ್ನು ಪುನರ್‌ಸೃಷ್ಟಿಯ ಸಂದರ್ಭದಲ್ಲಿ ಪಡೆದುಕೊಂಡರು ಕೂಡ, ಅದರ ವಾಸ್ತವ ಘಟನೆಯೊಂದು ತಳಪ್ರಮಾಣದಲ್ಲಿ ರೂಪಾಂತರಗೊಳ್ಳದೇ ಮರೆಮಾಚಿಕೊಂಡು ಬೆಳೆದು ಬಂದಿರುತ್ತದೆ. ಹೀಗಾಗಿ ಐತಿಹಾಸಿಕ ಘಟನೆಯೊಂದು ಕಂಠಸ್ಥ ಪರಂಪರೆಯೊಂದರಲ್ಲಿ ಮೊದಲು ಕಿವಿಮಾತು ಆಗಿ, ಬಳಿಕ ವದಂತಿ ಯಾಗಿ, ಅನಂತರ ಐತಿಹ್ಯ ವಾಗಿ ಕೊನೆಯಲ್ಲಿ ಒಂದು ಪುರಾಣ ವೇ ಆಗಿ ಪರಿವರ್ತನೆಗೊಳ್ಳುತ್ತದೆ ಎಂಬುದನ್ನು ಗಮನಿಸಿದರೆ ಕಂಠಸ್ಥ ಪರಂಪರೆಯ ನೈಜ ಘಟನೆಯೊಂದು ಹಲವು ಹಂತಗಳಲ್ಲಿ ಬೆಳೆದು ಕೊನೆಗೆ ಪೌರಾಣೀಕ ಅಂಶಗಳಿಂದಾಗಿ ಪುರಾಣದ ಸ್ವರೂಪವನ್ನು ಪಡೆದುಕೊಳ್ಳುತ್ತದೆ.[೨೫೮] ಇಲ್ಲಿ ಜನಪದರಿಗೆ ಐತಿಹ್ಯವೇ ಇತಿಹಾಸವಾಗುವುದು.

ಮೌಖಿಕ ಇತಿಹಾಸವು ಜನಪದರ ದೃಷ್ಟಿಯಲ್ಲಿ ನೈಜ ಘಟನೆಗಳ ನಿರೂಪಣೆಯಾದರೆ, ಪುರಾಣ ಪವಿತ್ರವೆಂದು ನಂಬಿದ ಸತ್ಯಕಥನವಾಗಿರುತ್ತದೆ. ಹೀಗಾಗಿ ಐತಿಹ್ಯ ಪುರಾಣವಾಗಿ ಪರಿವರ್ತನೆಗೊಳ್ಳುವುದಿಲ್ಲ. ನೈಜ ಘಟನೆಗಳಲ್ಲಿನ ಕಲಾತ್ಮಕ ಅಥವಾ ಕಾಲ್ಪನಿಕತೆಯ ಅಂಶಗಳು ಯಾವುದೋ ಒಂದು ಕಾಲದ ಮೌಲ್ಯಗಳನ್ನು ಸಮಕಾಲಿನ ಬದುಕಿಗೆ ಪ್ರಸ್ತುತ ಗೊಳಿಸುವ, ಸಾಕ್ಷಾತ್ಕರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹುಟ್ಟನ್ನು ಪಡೆದುಕೊಳ್ಳುತ್ತವೆ. ಇಂಥ ಸಂದರ್ಭದಲ್ಲಿ

ಚಾರಿತ್ರಿಕ ಸಂಗತಿಯೊಂದು ಕಲ್ಪನೆಯಲ್ಲಿ ಹೇಗೆ ಬೇಕೋ ಹಾಗೆ ರೂಪು ತಳೆಯುತ್ತದೆ. ನಿರೂಪಕನ ಅಥವಾ ನಿರೂಪಕನ ವರ್ಗವೊಂದು ನಿಜಜೀವನದಲ್ಲಿ ಅನುಭವಿಸದೇ ಇದ್ದ ಆಸೆಗಳ ಪೂರೈಕೆಯ ಪರಿಣಾಮಕಾರಿ ಅಬಿವ್ಯಕ್ತಿಯೇ[೨೫೯] ಐತಿಹ್ಯಗಳು ಎನ್ನುವಲ್ಲಿ ಐತಿಹ್ಯದ ಹುಟ್ಟನ್ನು ಗ್ರಹಿಸಬಹುದಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿನ ನಂಬಿಕೆ-ಸಂಪ್ರದಾಯ-ಆಚರಣೆ ಮುಂತಾದವುಗಳಲ್ಲಿನ ಅಸಮಾನತೆಯನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಕೆಳಸ್ತರದ ಜನಸಮುದಾಯಗಳಿಂದ ಸಂಸ್ಕೃತಿಯ ಜಡತ್ವವನ್ನು ವಿರೋಧಿಸುವ ಹಿನ್ನಲೆಯಲ್ಲಿ ಐತಿಹಗಳು ಹುಟ್ಟಿಕೊಂಡಿರಲು ಸಾಕು. ಇಲ್ಲವೆ ವ್ಯವಸ್ಥೆಯ ಯಥಾಸ್ಥಿತಿಯನ್ನು ಸಮರ್ದಿಸಲು ಮೇಲುಸ್ತರದ ಜನರಿಂದ ಸ್ಕೃತಿಯ ಸ್ಥಿರೀಕರಣ ಪ್ರಕ್ರಿಯೆಯಲ್ಲಿ ಐತಿಹ್ಯಗಳು ಹುಟ್ಟನ್ನು ಪಡೆದುಕೊಳ್ಳುತ್ತವೆ. ಹೀಗೆ ಒಂದು ಕಾಲದ ವರ್ತಮಾನದ ಅವಶ್ಯಕತೆಗಳಿಗೆ ಅನುಗುಣವಾಗಿ ಹುಟ್ಟಿ ಬೆಳೆದ ಐತಿಹ್ಯವೊಂದು, ಅನಂತರ ತಾನು ಹುಟ್ಟಿ ಬೆಳೆದ ಪರಿಸರವನ್ನೇ ನಿಯಂತ್ರಿಸುವಷ್ಟು ಪ್ರಬಲವಾಗಿ ಬೆಳೆಯಬಹುದು. ಆ ಮೂಲಕ ಸಮಾಜದ ಆರ್ದಿಕ ರಚನೆಯಲ್ಲಿ ಮಾರ್ಪಾಡುಗಳಾಗದಂತೆ ತಡೆಗೋಡೆಯಾಗಬಹುದು. ಚರಿತ್ರೆಯ ಕೊಡುಗೆಯಾದ ಐತಿಹ್ಯಗಳು ಮುಂದೆ ಚರಿತ್ರೆಯ ನೆಲೆಗಳೂ ಆಗಿಬಿಡಬಹುದು.[೨೬೦]

ಐತಿಹ್ಯ ಮತ್ತು ಇತಿಹಾಸ ಇವೆರಡು ಹಿಂದೆ ಯಾವುದೋ ಒಂದು ಕಾಲದಲ್ಲಿ ಘಟಿಸಿರುವ ಘಟನೆಗಳನ್ನು ದಾಖಲಿಸಿಕೊಂಡಿರುವಂಥವುಗಳು. ಅಕ್ಷರ ಬಲ್ಲವರಿಂದ ನಡೆದ ಘಟನೆಯನ್ನು ಲಿಖಿತ ರೂಪ ಪಡೆದುಕೊಂಡದ್ದು ಇತಿಹಾಸ ವೆಂದು ಕರೆಸಿಕೊಂಡರೆ, ಅಕ್ಷರ ಬಾರದವರು ನಡೆದ ಘಟನೆಯನ್ನು ಕಲಾತ್ಮಕವಾಗಿ ಮೌಖಿಕ ರೂಪದಲ್ಲಿಯೇ ಹಿಡಿದಿಟ್ಟದ್ದುಕೊಂಡು ಬಂದದ್ದು ಐತಿಹ್ಯ ಎಂಬ ಅರ್ಥ ಪಡೆದುಕೊಂಡಿದೆ. ಇದು ತೋಂಡಿ ಸಂಪ್ರದಾಯದಲ್ಲಿ ಹರಿದು ಬಂದರೂ ಘಟನಾ ವಿಷಯಗಳೊಂದಿಗೆ ತಳಕುಹಾಕಿಕೊಂಡಿರುವುದರಿಂದ ಐತಿಹ್ಯದ ರೂಪ ಪಡೆದುಕೊಳ್ಳುತ್ತದೆ. ಇತಿಹಾಸ ಲಿಖಿತ ಇತಿಹಾಸವಾದರೆ, ಐತಿಹ್ಯ ಮೌಖಿಕ ಇತಿಹಾಸವಾಗಿದೆ.[೨೬೧]

ಪುರಾಣ ಶಬ್ದದ ಅರ್ಥ ಪುರಾತನವಾದ ಕಥೆಗಳು ಎಂದು ಪುರಾಣಂ ಆಖ್ಯಾನಂ ಎಂಬ ಮಾತು ಪ್ರಸಿದ್ಧವಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಪುರಾಣ ಎಂಬ ಶಬ್ದಕ್ಕೆ ಪುರಾತನವಾದ ಎಂಬ ಅರ್ಥ ಇರುವುದು ಸರಿಯಷ್ಟೆ. ಇಂಥ ನಿರ್ವಚನಗಳು ಕಾಣಿಸಿಕೊಳ್ಳು ಪ್ರಾಯಶಃ ಪುರಾಣಗಳು ಅತ್ಯಂತ ಪ್ರಾಚೀನವಾದುವೆಂಬ ಕಾರಣದಿಂದಲೇ ಪುರಾಣಗಲ್ಲಿ ಪ್ರಾಚೀನವಾದ ಆಖ್ಯಾಯಿಕೆಗಳಿಗೆ, ವಿಶೇಷವಾದ ಮಹತ್ವ ಇದ್ದೇ ಇದೆ. ವಿಜ್ಞಾನ ಪೂರ್ವಯುಗದ ವಿಜ್ಞಾನ ಪುರಾಣ ಎನ್ನುವ ಪರಿಕಲ್ಪನೆ ಪುರಾಣದ ಬಗೆಗೆ ಇದೆ. ಪುರಾಣ ಅತಿಪ್ರಾಚೀನವಾದುದನ್ನು ಹೇಳುವಂಥದ್ದು ಮತ್ತು ಸರ್ವಶ್ರೇಷ್ಟವೂ ಆಗಿರುವಂಥದ್ದು. ಹೀಗಾಗಿ ಜನಪದರು ತಮ್ಮ ಸುತ್ತ ಮುತ್ತಲಿನಲ್ಲಿ ನಡೆದ ಘಟನೆಗಳಿಗೆ ಪುರಾಣ ಪಾತ್ರಗಳನ್ನು ಆರೋಪಿಸಿ ಐತಿಹ್ಯಗಳನ್ನು ನಿರೂಪಿಸುತ್ತಾರೆ. ಹೀಗೆ ಆರೋಪಿಸಿಕೊಳ್ಳುವುದರ ಹಿಂದೆ ನಾನಾ ಉದ್ದೇಶಗಳಿರುವುದನ್ನು ಕಾಣೂತ್ತೇವೆ. ಈ ಹಿನ್ನಲೆಯಲ್ಲಿ ಐತಿಹ್ಯವು ಪುರಾಣದೊಂದಿಗೆ ಅಂತರ ಸಂಬಂಧದ ಎಳೆಗಳನ್ನು ಹೊಂದಿದೆ.[೨೬೨]

ಪುರಾಣವು ಇಂದೂ ನಿನ್ನೆಯದಲ್ಲ. ಅದಕ್ಕೆ ಹಲವಾರು ವರ್ಷಗಳ ಚರಿತ್ರೆವಿದೆ. ಮೌಖಿಕವಾಗಿ ಧರ್ಮ-ದೇವರುಗಳ ಕುರಿತು ಹೇಳುವ ಮಾತು ದೈವತ್ವದಿಂದ ಜನಮನದಲ್ಲಿ ಶಾಶ್ವತವಾಗಿ ಉಳಿದು, ಪ್ರಚಾರಗೊಳ್ಳುತ್ತ ಸಾಗಿದೆ. ಹಾಗೆ ಐತಿಹ್ಯವು ಕೂಡಾ ಅಲ್ಲಿನ ಕುರುಹುಗಳ ಮೂಲಕ ವ್ಯಕ್ತಪಡಿಸುತ್ತ ನಡೆದವು. ಇವರೆಡೂ ಜನಪದ ಮೂಲದಿಂದ

ಹುಟ್ಟು ಪಡೆದು ವಿವಿಧ ಮುಖಗಳಲ್ಲಿ ಬೆಳವಣಿಗೆ ಹೊಂದುತ್ತಾ ಸಾಗಿವೆ. ವಿವರಣೆ ಮತ್ತು ವ್ಯಾಪ್ತಿಯ ದೃಷ್ಟಿಯಿಂದ ಐತಿಹ್ಯಗಳು ಪುರಾಣಕ್ಕಿಂತ ಕಿರಿದು. ಬಹುಮಟ್ಟಿಗೆ ಅವು ಒಂದು ನಿರ್ಧಿಷ್ಟ ಜಾತಿ ಬುಡಕಟ್ಟುಗಳಿಗೆ ಬದ್ಧವಾಗಿರುತ್ತವೆ. ಇಂಥ ಐತಿಹ್ಯಗಳು ತಮ್ಮ ಸೀಮಿತ ವಲಯವನ್ನು ಭೇದಿಸಿಕೊಂಡು ಹೊರ ಪ್ರಪಂಚಕ್ಕೆ ಕಾಲಿರಿಸಿದೊಡನೆ, ಅವುಗಳ ಅರ್ಥವಂತಿಕೆಯು ಬಹಳ ತೀವ್ರವಾದ ಸವಾಲುಗಳನ್ನು ಎದುರಿಸುತ್ತದೆ. ಆನಾಂಗ ಬದ್ದತೆಯಿಂದ ತನ್ನನ್ನು ಬಿಸಿಕೊಂಡ ಐತಿಹ್ಯಗಳು ವಿಶಾಲವಾದ ಕ್ಷೇತ್ರದಲ್ಲಿ ಬದುಕುಳಿಯಬೇಕಾದರೆ ಸಾರ್ವಜನಿಕರಿಗೆ ಇಷ್ಟವಾಗುವ ರೀತಿಯಲ್ಲಿ ತನ್ನ ಮೌಲ್ಯವನ್ನು ವಿನಿಯೋಗಿಸಿಕೊಳ್ಳಬೇಕು. ಕೇವಲ ಸ್ವಂತೀಕೆಯ ಪ್ರತೀಕಗಳನ್ನು ಬದಲಾಯಿಸಿಕೊಂಡು ಸಾರ್ವತ್ರಿಕ ಪ್ರತೀಕಗಳಿಗೆ ಮೈಒಡ್ಡಿ ನಿಲ್ಲಬೇಕಾಗುತ್ತದೆ.

ಈ ಸಾರ್ವತ್ರಿಕೀಕರಣವು ಮೂರು ರೀತಿಯಲ್ಲಿ ಸಾಧಿತವಾಗುತ್ತದೆ. ಮೊದಲನೆಯದು ಸ್ಥಳದ ಬದ್ಧತೆಯನ್ನು ಮೀರುವುದು, ಎರಡನೆಯದು ವ್ಯಕ್ತಿ ನಿಷ್ಠತೆಯನ್ನು ಮೀರುವುದು ಮತ್ತು ಕೊನೆಯದು ಕಾಲದ ಬದ್ಧತೆಯನ್ನು ಮೀರುವುದ. ಈ ನಿಟ್ಟಿನಲ್ಲಿ ಐತಿಹ್ಯಗಳು ಬಯಸುವ ಭೌತಿಕ ಆಧಾರಗಳನ್ನು ಪುರಾಣಗಳು ಬಯಸುವುದಿಲ್ಲ. ಐತಿಹ್ಯಗಳಿಗಿಂತ ಪುರಾಣಗಳನ್ನು ಜನರು ಹೆಚ್ಚು ಗಂಭೀರವಾಗಿ ಸ್ವೀಕರಿಸುತ್ತಾರೆ. ಎಷ್ಟೋ ಬಾರಿ ಧಾರ್ಮಿಕ, ಗಾಂಭೀರ್ಯದಿಂದಲೂ ಸ್ವೀಕರಿಸುತ್ತಾರೆ. ಪುರಾಣಗಳು ಎಲ್ಲ ಬದ್ಧತೆಯನ್ನು ಮೀರಬಯಸುತ್ತಾ ಸಾರ್ವತ್ರಿಕವಾಗುವುದರತ್ತ ಮುಖ ಮಾಡುವುದರಿಂದ ಹಾಗೆ ಆಗುವುದು ಸಹಜ. ಇವೆಲ್ಲಕ್ಕಿಂತ ಮಿಗಿಲಾಗಿ ಪುರಾಣಗಳು ಮತಾಚರಣೆಯಲ್ಲಿ ಪುನರ್ ಸೃಷ್ಟಿ ಹೊಂದುತ್ತವೆ. ಐತಿಹ್ಯಗಳಿಗೆ ಅಂತಹ ಅವಕಾಶವಿಲ್ಲ. ಹಾಗೆ ನೋಡಿದರೆ ಜನಪದ ಪುರಾಣಗಳ ಅತ್ಯಂತ ಪ್ರಮುಖವಾದ ಒಂದು ಗುಣವೆಂದರೆ ಅವು ಮತಾಚರಣೆಯೊಂದಿಗೆ ಸಂಬಂಧ ಹೊಂದಿರುವುದೇ ಆಗಿದೆ.[೨೬೩]

ಈ ಸಂದರ್ಭದಲ್ಲಿ ಪುರಾಣ, ದಂತಕಥೆ, ಐತಿಹ್ಯಗಳನ್ನು ಕುರಿತು ಸುಸಾಗ್‌ಲ್ಯಾಂಗರ್ ಉದ್ಧರಿಸುವ ವಾಕ್ಯಗಳು ಗಮನಾರ್ಹವಾಗಿದೆ. "Myth, legend and fairy tale differ from one another in origin and purpose. Myth is primitive philosophy, the simplest presentational form of thought, a series of attempts to understand the wold, to explain life and death, Fate and Nature, Gods and Cutts. Legend is primitive history naively formulated in terms of love and hate, unconsciously transformed and simplified but fairty tale has spring from and serves no motive but entertainment"[264]ಪುರಾಣ, ದಂತಕಥೆ ಮತ್ತು ಐತಿಹ್ಯಗಳ ಕುರಿತು ಸ್ಪಷ್ಟ ಹಾಗೂ ಸಮಗ್ರ ಚಿತ್ರಣ ಮಾಡಿಕೊಟ್ಟಿದ್ದಾರೆ. ಪುರಾಣವು ವಿಧಿಯಾಚರಣೆಯ ಪರಿಣಾಮದಿಂದ ಮೂಡಿದ್ದು, ಅದರ ಒಂದು ಭಾಗ, ಆದರೆ ಐತಿಹ್ಯ ಹಾಗಲ್ಲ. ಐತಿಹ್ಯ ಒಂದು ಸ್ಥಳದಲ್ಲಿ ಮೂಡುತ್ತದೆ. ಅಂದರೆ ಅದು ಸ್ಥಳಗಬದ್ಧ, ಕಾಲಬದ್ಧ, ಪುರಾಣಕ್ಕೆ ಈ ನಿರ್ಬಂಧಗಳಿಲ್ಲ ಅದು ಕಾಲಾತೀತ. ಸ್ಥಳೇತಿಹಾಸ ಕೆಲಕಾಲನಂತರ ಐತಿಹ್ಯವಾಗಬಹುದು. ಪುರಾಣವೂ ಸ್ಥಳೈತಿಹ್ಯವಾಗಿ ಪರಿವರ್ತಿತವಾಗಬಹುದು.

ಐತಿಹ್ಯ ಮತ್ತು ಪುರಾಣಗಳಲ್ಲಿ ನಂಬಿಕೆ ಪ್ರಮುಖವಾಗಿ ಬಳಕೆಯಾಗುತ್ತದೆ. ಹಾಗೆ ಕಾಲವು ಕೂಡಾ ಪ್ರಾಚೀನ ಗತಕಾಲದಿಂದ ಕೂಡಿದ್ದರೆ, ಐತಿಹ್ಯಗಳಲ್ಲಿ ಇತ್ತೀಚಿನ ಗತಕಾಲದಿಂದ ಪರಿವರ್ತನೆ ಹೊಂದಿರುತ್ತದೆ. ಪುರಾಣವು ಬಳಕೆಗೊಳ್ಳುವಾಗ ಪೂರ್ವಕಾಲದ ಚಿತ್ರಣವನ್ನು ಕೊಡುತ್ತಾರೆ. ಆದರೆ ಐತಿಹ್ಯಗಳಲ್ಲಿ ವಾಸ್ತವ ಬದುಕಿಗೆ ಹತ್ತಿರವಾಗಿರುತ್ತದೆ. ಪುರಾಣವು ಮಾನವೇತರ ಸಂಪರ್ಕವಿದ್ದರೆ, ಐತಿಹ್ಯದಲ್ಲಿ ಮಾನವನ ಪಾತ್ರ ಪ್ರಮುಖವಾಗಿರುತ್ತದೆ. ಪುರಾಣ ಮತ್ತು ಐತಿಹ್ಯಗಳು ಜನಪದರ ಮೌಲ್ಯಗಳಾಗಿ ಬೆಳೆದು, ಸಮಾಜವನ್ನು ನಿಯಂತ್ರಿಸುವಷ್ಟು ಶಕ್ತಿಯನ್ನು ಪಡೆದುಕೊಂಡಿವೆ. ಹಾಗೆ ಚರಿತ್ರೆ ಕ್ಷೇತ್ರದಲ್ಲಿ ಇವುಗಳ ಪಾತ್ರ ತುಂಬಾ ಉಪಯುಕ್ತತೆಯಿಂದ ಸಮ್ಮಿಲನಗೊಂಡಿದೆ.[೨೬೫]

ಪ್ರಕೃತಿಯ ರಹಸ್ಯವನ್ನು, ಜೀವನಾಂತರಂಗವನ್ನು ವಿವರಿಸಲು ನಮ್ಮಲ್ಲಿ ಮೊದಲು ವೇದಗಳು ಹುಟ್ಟಿಕೊಂಡರೆ ವೇದಗಳಾಂತರಂಗವನ್ನು ವಿವರಿಸಲು ಆಗಮಗಳು, ಉಪನಿಷತ್ತುಗಳು ಹುಟ್ಟಿಕೊಂಡವು. ಆನಜೀವನವನ್ನು ನಿಯಂತ್ರಿಸಲು ರೂಪಿಸಲು, ಉಪನಿಷತ್ತುಗಳಿಂದ ಶಾಸ್ತ್ರಗಳನ್ನು ರಚಿಸಿದಂತೆ, ಜನಸಾಮಾನ್ಯರಿಗೆ ಶಾಸ್ತ್ರಗಳು ಸುಲಭವಾಗಿ ಅರ್ಥವಾಗಲು ಕಥಾರೂಪದಲ್ಲಿ ಹೇಳಲು ಪುರಾಣಗಳನ್ನು ಸೃಷ್ಟಿಸಲಾಯಿತು.

ಪುರಾಣಗಳಲ್ಲಿ ಪ್ರಕಾರಗಳು:-

ಚಲಿಸುವುದು ನಿಂತಾಗ ಅದರ ಸುತ್ತ ಅನೇಕ ಕಥೆಗಳು ಹುಟ್ಟಿಕೊಳ್ಳುವುವು. ಹೀಗೆ ಹುಟ್ಟಿಕೊಂಡ ಕಥೆಗಳನ್ನು ನಾವು ಆದಿ ಕಾಲದಲ್ಲೂ, ಐತಿಹಾಸಿಕ ಕಾಲದಲ್ಲೂ ಮತ್ತು ಆಧುನಿಕ ಕಾಲದಲ್ಲೂ ನೋಡುತ್ತೇವೆ. ಅದಕ್ಕಾಗಿ ಪುರಾಣಗಳನ್ನು ಮೂರು ಬಗೆಯಾಗಿ ಮಾಡಬಹುದು.

ಅ. ಆದಿ ಪುರಾಣ

ಆದಿಕಾಲದಲ್ಲಿ ಪ್ರಕೃತಿಯ ರಹಸ್ಯಗಳು ಅರ್ಥವಾಗದಾದಾಗ ಆ ಜನ ತಮಗೆ ತೋಚಿದಂತೆ ಅವುಗಳಿಗೆ ಒಂದೊಂದು ಅರ್ಥ ಹಚ್ಚಿ ರಂಜಕ ಕಥೆ ಕಟ್ಟಿ ಹೇಳೂತ್ತ ಬಂದದ್ದೆ ಆದಿಪುರಾಣ ಎನಿಸಿಕೊಳ್ಳುವುದ.

ಉದಾ:

೧. ಸೂರ್ಯ ಚಂದ್ರರು ಅಣ್ಣ ತಮ್ಮಂದಿರು. ರಾಹು ಕೇತು ಅವರ ವೈರಿಗಳು.

೨. ನಕ್ಷತ್ರಗಳು ಸತ್ತವರ ಕಣ್ಣುಗಳು

೩. ಭೂಮಿಯನ್ನು ಹೊತ್ತು ನಿಂತವನು ಆದಿಶೇಷ.

೪. ಬ್ರಹ್ಮ ವಿಷ್ಣು ರುದ್ರರು ಅಣ್ಣ ತಮ್ಮಂದಿರು ಅವರು ಉತ್ಪತ್ತಿ, ಪಾಲನೆ, ಸಂಹಾರ ಗುಣವುಳ್ಳವರು.

೫. ದೇವಾಧಿದೇವತೆಗಳು ಬಂಧು ಬಳಗದವರು ಸ್ವರ್ಗದಲ್ಲಿ ದೇವತೆಗಳು, ಮರ್ತ್ಯದಲ್ಲಿ ಮನುಷ್ಯರಯ, ಪಾತಾಳದಲ್ಲಿ ಸರ್ಪಕುಲದವರು ಇರುವರು. ಹೀಗೆ ಹೀಗೆ ಮುಂತಾದವು.

ಆದಿಜನರು ಪ್ರಕೃತಿಯ ರಹಸ್ಯವನ್ನರಿಯದೆ ಇಂಥ ಪುರಾಣ ಕಥೆಗಳನ್ನು ಸೃಷ್ಟಿ ಸಿರುವರೆಂಬುದು ಅಷ್ಟೊಂದು ಸಮಂಜಸವಲ್ಲದ ಮಾತು. ಅವರು ಕಲ್ಪಿಸಿದವುಗಳು ಕೆಲವು ವೈದಿಕ ಶಾಹಿಯಲ್ಲಿ ದೃಢವಾದ ನಂಬುಗೆ ಉಂಟುಮಾಡಲು, ವೈಯಕ್ತಿಕವಾದ ಭಕ್ತಿ, ಶ್ರದ್ಧೆ ವಿಷಯಗಳನ್ನು ಸಾರ್ವತ್ರಿಕಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರತಿ ರಹಸ್ಯ ವಸ್ತುವಿನ ಸುತ್ತ ಕಥೆಕಟ್ಟಿದ್ದೆ ಪ್ರತಿ ಕಾಲದಲ್ಲೂ ಜನಸಾಮಾನ್ಯರ ಸುಲಿಗೆಗೆ ಕಾರಣವಾಯಿತು. ಏಕೆಂದರೆ ರಾಜಾ ಪ್ರತ್ಯಕ್ಷಃ ದೇವತಾ ಎಂದಂತೆ ದೇವರ ಕುರಿತು ಪ್ರಶ್ನಿಸುವಂತಿಲ್ಲ ಎಂಬ ಹೇಳಿಕೆ ನೀಡಿ ಇಲ್ಲದ ಕಥೆ ಕಟ್ಟಿ ಪ್ರಶ್ನಿಸುವವರಿಗೆ ನಾಸ್ತಿಕರೆಂದು, ಆರಾಧಿಸುವವರಿಗೆ ಆಸ್ತಿಕರೆಂದು ಭಯದ ಬೀಜ ಬಿತ್ತಿದಂತೆ ಪುರಾಣಗಳ ಬೇರುಗಳು ಜನಜೀವನ ಭೂಮಿ ಉದ್ದಗಲ ಆಳಕ್ಕೂ ಹರಡಿಕೊಂಡವು.

ಬ. ಚಾರಿತ್ರಿಕ ಪುರಾಣ

ಸಾಮಾನ್ಯವಾಗಿ ಪುರಾಣವೆಂದರೆ ದಿನಾಂಕವಿರಲಾರದ್ದು ಹಿಂದಿನದ್ದು ಎನ್ನುವರು. ಆದರೆ ಚರಿತ್ರೆ ಕಾಲದಲ್ಲೂ ಹಲವಾರು ಪುರಾಣ ಸಂಗತಿಗಳು ಹುಟ್ಟಿ ಕೊಂಡದ್ದು ವೀರಗಲ್ಲು, ಮಾಸ್ತಿಕಲ್ಲು ಮತ್ತು ಕೆಲವು ಶಿಲ್ಪಕಲಾ ಗುಡಿಗಳನ್ನು ನೋಡಿದಾಗ ಅನುಭವಕ್ಕೆ ಬರುವುದು. ಇತಿಹಾಸದ ಮೂಲಸಂಗತಿಗಳು ಮರೆ ಯಾದಾಗ ಜನ ತಮಗೆ ತೋಚಿದಂತೆ ಆ ಸಂಗತಿಗಳ ಸುತ್ತ ಕಥೆಕಟ್ಟಿದ್ದೆ ಅವು ಬಾಯಿಂದ ಬಾಯಿಗೆ ಬಂದದ್ದೆ ಚಾರಿತ್ರಿಕ ಪುರಾಣವೆನಿಸುವುದು.

ಉದಾ:

ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಮಾಲಗ್ತಿ ಎಂಬ ಗ್ರಾಮವಿದೆ. ಅದಕ್ಕೊಂದು ಕೋಟೆ ಗೋಡೆಯಿದೆ. ಈ ಊರು ಮಳಖೇಡದ ರಾಷ್ಟ್ರಕೂಟದರಸರ ಮನೆತನಕ್ಕೆ ಸೇರಿರುವಂಥದ್ದು. ಈ ಊರಿಗೆ ಈ ಹೆಸರು ಹೇ ಬಂತೆಂದು ಕೇಳೀದರೆ ಜನರು ಒಂದು ಕಥೆ ಹೇಳೂವರು. ಈ ಊರನ್ನು ನೋಡಿಕೊಳ್ಳುತ್ತಿದ್ದ ಒಬ್ಬ ಅಧಿಕಾರಿಯ ಮನೆಗೆ ಒಬ್ಬ ಹೂರಾರತಿ (ಮಾಲೆಗಿತ್ತಿ) ನಿತ್ಯ ಹೂ ತಂದುಕೊಟ್ಟು ಹೋಗುತ್ತಿದ್ದಳು.[೨೬೬] ಅವಳುತಮ್ಮ ಮನೆಗೆ ಮಾಡಿದ ಸೇವೆಗಾಗಿ ಆ ಅಧಿಕಾರಿಯು ಈ ಊರಿಗೆ ಮಾಲೆಗಿತ್ತಿ ಎಂದು ಆ ಹೂಗಾರತಿಯ ಹೆಸರಿಟ್ಟನಂತೆ. ಆ ಹೆಸರು ಬರುಬರುತ್ತ ಜನರ ಬಾಯಿಯಲ್ಲಿ ಮೇಲುಕೆಳಗಾಗಿ ಮಾಲಗತ್ತಿಯಾಯಿತೆಂದು ಹೇಳುವರು. ಗಿ ಹೋಗಿ ಗ ಆದದ್ದು ಲೆ ದೊಳಗಿನ ಎ ಹೋದದ್ದು ಭಾಷಾಶಾಸ್ತ್ರದ ದೃಷ್ಟಿಯಿಂದ ಸರಿಯನ್ನಬಹುದಾದರೂ ಅಧಿಕಾರಿಯ ಕಥೆ ಆದುದಕ್ಕೆ ಯಾವುದೇ ದಾಖಲೆಗಳಿಲ್ಲ.

ಕ. ಆಧುನಿಕ ಪುರಾಣ

ಅತೀರಂಜಿಸಿ ಹೇಳುವ ಕಲೆಗಾರಿಕೆ ಆದಿಮ, ಚಾರಿತ್ರಿಕ ಜನರಿಗಷ್ಟೆ ಸೀಮಿತ ವಾಗಿಲ್ಲ. ಇದು ಆಧುನಿಕ ಜನರಿಗೂ ಅಂಟಿಕೊಂಡಿದೆ. ಇಲ್ಲದ್ದನ್ನು ಉದ್ದುದ್ದ ಮಾಡಿ ಬೆಳೆಸಿ ಹೇಳಿ ಸಂತೋಷಪಡುವುದು ಮಾನವನ ಸ್ವಭಾವವಾಗಿದೆ. ಮೋಹನ ದಾಸ ಕರಮಚಂದ ಗಾಂಧಿಯವರು ಹುಟ್ಟಿದ್ದಕ್ಕೆ ಸತ್ತದ್ದಕ್ಕೆ ದಾಖಲೆಗಳಿರುವಾಗ ಅವನೊಬ್ಬ ಅವತಾರ ಪುರುಷ, ದೈವಿಶಕ್ತಿ ಎಂದು ಈಗಾಗಲೇ ಚಿತ್ರಿಸುತ್ತ ಹೊರಟಿರುವುದು ಆಧುನಿಕ ಪುರಾಣವನ್ನು ಸೂಚಿಸುವುದು. ದೇವರ ಬಗ್ಗೆ ಮಾತಾಡದಿದ್ದ ಬುದ್ಧನಿಗೆ ದೇವರ ಅವತಾರ ಸಾಲಿನಲ್ಲಿ ನಿಲ್ಲಿಸಿದಂತೆ ಮನುಸ್ಮೃತಿಯನ್ನು ಸುಟ್ಟುಹಾಕಿದ ಡಾ.ಬಿ.ಆರ್.ಅಂಬೇಡಕರರಿಗೆ ಆಧುನಿಕ ಮನು ಎಂದು ಹೇಳುವುದು ಪುರಾಣ ಹೊಸೆಯುವುದೇ

ಆಗಿದೆ. ಪಟ್ಟಣದವರಿಗಿಂತ ಹಳ್ಳಿ ಜನ ಇಂದಿಗೂ ಹೇಗೆ ಪುರಾಣ ಪ್ರಪಂಚದಲ್ಲಿ ಬದುಕುತ್ತಿದ್ದಾರೆನ್ನಲಿಕ್ಕೆ ಗುಲಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಹಾಬಾದ ಅಡವಿಯಲ್ಲಿ ನಡೆದ ಘಟನೆಯನ್ನು ಅಲ್ಲಿಯ ಜನ ಹೇಗೆ ಪುರಾಣಮಾಡಿಬಿಟ್ಟಿರುವ ರೆಂಬುದು ನೋಡಿರಿ.

ಈ ಘಟನೆ ೧೯೬೦ರಲ್ಲಿ ಸಂಭವಿಸಿದ್ದು. ಬೀದರ ಜಿಲ್ಲೆಯ ಕಡೆಯ ಲಮಾಣಿ ದಂಪತಿಗಳು ಹೊಟ್ಟೆ ಬದುಕುವ ಸಲುವಾಗಿ ತಮ್ಮ ಐದು ವುಷದ ಮಗಳೊಂದಿಗೆ ಶಹಾಬಾದ ಕಡೆಗೆ ಬಂದರು. ಆಗ ಸುಗ್ಗಿಯ ಕಾಲ. ಜೋಳಕೊಯ್ದು ಎಲ್ಲಾ ಕಡೆ ರಾಶಿ ನಡೆದಿದ್ದವು. ಒಂದು ಹೊದಲ್ಲಿ ತಮ್ಮ ಐದು ವರುಷದ ಕೂಸಿಗೆ ಕೂಡಿಸಿ ಹೊಲದಲ್ಲಿ ಬಿದ್ದಿದ್ದ ಹೆಕ್ಕಲು ತೆನಿ ಆರಿಸಲು ಹೊರಟಾಗ ಒಂದು ತೋಲ ಬಂತು. ಆ ಕೂಸನ್ನೆತ್ತಿಕೊಂಡು ದೂರ ಒಯ್ದು ತಿಂದು ಆ ಕೂಸಿನ ಬಟ್ಟೆ ಬಳೆಗಳನ್ನು ಅಲ್ಲಿಯೇ ಬಿಟ್ಟು ಹೋಯಿತು. ನಡೆದ ಘಟನೆ ಇಷ್ಟು. ಆದರೆ ಆ ಲಮಾಣಿ ಜನ ಕಟ್ಟಿದ ಕಥೆಯೆ ಬೇರೆ.[267] ಆ ದಂಪತಿಗಳು ಎಷ್ಟು ಹುಡುಕಿದರೂ ಆ ಕೂಸು ಸಿಗಲಿಲ್ಲ. ರಾತ್ರಿ ಹೊತ್ತು ಆ ಕೂಸು ತಾಯಿ ತಂದೆಗಳ ಕನಸಿನಲ್ಲಿ ಬಂತು. ತಾನು ಹಳಿ ಶಹಾಬಾದದ ಸಮೀಪ ಇರುವ ಹೊಲದ ಬೇವಿನ ಗಿಡದ ಕೆಳಗೆ ಐಕ್ಯವಾಗಿರುವುದಾಗಿಯೂ ಅಲ್ಲಿ ತನ್ನ ಗುರುತಿಗಾಗಿ ಬಂಗಡಿ (ಬಳೆ) ಚೋಲಿ (ಕುಬುಸ) ಇರುವುದಾಗಿ ತಿಳಿಸಿತು. ಅಲ್ಲಿ ಗುಡಿ ಕಟ್ಟಿಸಿ ಅದರೊಳಗೆ ತನ್ನದೊಂದು. ಮೂರ್ತಿ ಮಾಡಿಕೊಟ್ಟು ವರುಷ ಸುಗ್ಗಿಕಾಲದಲ್ಲಿ ಜಾತ್ರೆ ಮಾಡಿದರೆ ಲಮಾಣಿ ಜನಾಂಗಕ್ಕೆ ಸುಖವಾಗುವುದಾಗಿ ಹೇಳಿತಂತೆ. ಆದರಂತೆ ಹೋಗಿ ನೋಡಲಾಗಿ ಆ ಅಡವಿಯ ಬೇವಿನಮರ ಇರುವ ಹೊಲದಲ್ಲಿ ಬಾಂಗಡಿ, ಚೋಲಿ, ಗಗ್ಗರಿ ಇದ್ದವು. ಆ ಕೂಸು ಹೇಳಿದಂತೆ ಅಲ್ಲೊಂದು ಗುಡಿ ಕಟ್ಟಿಸಿ ಅದರೊಳಗೆ ಆ ಕೂಸಿನ ಮೂರ್ತಿ ಮಾಡಿಟ್ಟು ಆ ಗುಡಿಗೆ ರಮಣಿಬಾಯಿ ಎಂದು ಹೆಸರಿಟ್ಟು ಪ್ರತಿವರುಷ ತಪ್ಪದೇ ಸುಗ್ಗಿ ಕಾಲದಲ್ಲಿ ಜಾತ್ರೆ ಮಾಡುತ್ತಿರುವರು. ರಮಣಿಬಾಯಿಯ ಜಾತ್ರೆ ಮಾಡುವವರಿಗೆ ಕಲ್ಯಾಣವಾಗುವುದೆಂದು ಇಡೀ ಗುಲಬರ್ಗ ವಿಭಾಗದ ಲಮಾಣಿಗಳು ಹೇಳುವರು.

ಪುರಾಣದ ಪ್ರಭಾವ:

ಪುರಾನದ ಪ್ರಭಾವ ಜನಮ್ಮ ಜೀವನದ ಮೇಲೆ ಆದದ್ದು, ಆಗುತ್ತಿರುವುದು ನೋಡಿದಾಗ ನಮಗೆ ಅತ್ಯಾಶ್ಚರ್ಯವೆನಿಸುವುದು ಪುರಾಣದಲ್ಲಿ ಉಕ್ತವಾದ ಸಂಗತಿಗಳು ತಮ್ಮಲ್ಲಿಯೇ ಆಗಿವೆ ಎನ್ನುವಂತೆ ಪ್ತಿ ಊರಿನ ಜನರು ಹೇಳುವರು. ರಾಮ ತಮ್ಮ ಊರಿನ ಮೇಲೆ ಹಾದು ಹೋಗುವಾಗ ಪೂಜಿಸಿದ ಲಿಂಗವೇ ರಾಮಲಿಂಗೇಶ್ವರ ಎಂದು ರಾಯಚೂರಿನ ಜನ ಹೇಳಿದರೆ ಹಿಡಿಂಬೆ ಇದ್ದ ಊರೇ ಈಗ ಸೇಡಮ ಆಗಿರುವುದೆಂದು ಗುಲಬರ್ಗಾ ಜಿಲ್ಲೆಯ ಸೇಡಮ ಜನ ಹೇಳುವರು. ಪುರಾಣದಲ್ಲಿ ಉಕ್ತವಾದ ಸಂಗತಿಗಳು ತಮ್ಮಲ್ಲಿ ಜರುಗಿವೆ ಎಂಬಂತೆ ಕೆಲವರು ಹೇಳಿದರೆ ಇನ್ನೂ ಕೆಲವರು ಉದ್ಭವವಾದ ವಸ್ತುಗಳಿಗೆ ಪೌರಾಣಿಕ ಸಂಗತಿಗಳನ್ನು ಸೇರಸುವರು.

ರಾಯಚೂರು ನಗರದ ಮಾವಿನಕೆರೆಯ ಕಡೆಗೆ ಈ ಹಿಂದೆ ಹೂಳಿ ಹೋಗಿದ್ದ ಹನುಮಾನ ಮೂರ್ತಿ ನೆಲ ತೋಡುತ್ತಿರುವಾಗ ಸಿಕ್ಕಿದ್ದಕ್ಕೆ ಆವನಿಗೆ ಪಾತಾಳ ವೀರ ಹನುಮಾನ ಎಂದು ಕರೆಯುವರು. ನಮ್ಮ ಜೀವನದ ಮೇಲೆ ಇಂದಿಗೂ ಪುರಾಣದ ಪ್ರಭಾವ ದಟ್ಟವಾಗಿ ಇರುವುದನ್ನು ಕೆಲವು ಹೆಸರು ನೋಡಿದಾಗ ಗೊತ್ತಾಗುವುದು.

ಉದಾ:

ಜನ ಹೆಸರು : ರಾಮ, ಲಕ್ಷ್ಮಣ, ಸೀತೆ, ಧರ್ಮ, ಅರ್ಜುನ, ಭೀಮ

ದನಗಳ ಹೆಸರು : ಗೌರಿ, ಗಂಗೆ, ಪಾರ್ವತಿ, ಕಾಳಿ, ಕರ್ಣ, ಭೀಮ

ಊರುಗಳ ಹೆಸರು : ಧರ್ಮಾಪುರ, ಪಾಂಡವಪುರ, ಹನುಮನಹಳ್ಳಿ, ರಾಮಪುರ

ಹೊಲಗಳ ಹೆಸರು : ಗಂಗಿ ಹೊಲ, ಮರಗಮ್ಮನ ಹೊಲ, ಗಣಪತಿ ಹೊಲ

ಮನೆಗಳ ಹೆಸರು : ಸೀತಾ ನಿಲಯ, ರಾಮ ಸದನ, ಸರಸ್ವತಿ ನಿಲಯ, ಚಂದ್ರ ಸದನ[೨೬೮]

ಈ ರೀತಿಯಾಗಿ ಐತಿಹ್ಯ, ಚರಿತ್ರೆ, ಮತ್ತು ಪುರಾಣಗಳು ಒಂದಕೊಂದು ಪೂರಕವಾದ ವಿಷಯಗಳಾಗಿವೆ ಒಂದನ್ನ ಹೊರತು ಪಡಿಸಿ ಮತ್ತೊಂದನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ ಎಂಬುದನ್ನು ತಿಳಿದು ಬರುತ್ತದೆ.

೪.೨. ಕಲಬುರಗಿಯ ಶರಣಬಸವೇಶ್ವರರು ಮತ್ತು ಖಾಜಾಬಂದೇನವಾಜರು

ಕಲಬುರಗಿ ಶರಣಬಸವೇಶ್ವರರು

ಶರಣ ಬಸವನ ಜನನ:-

ಶ್ರೀ ಶಾಲಿವಾಹನ ಶಕೆ ೧೬೬೮ ಪುಷ್ಯಮಾಸ ಕೃಷ್ಣಪಕ್ಷ ಸೋಮವಾರ ಶುಭದಿನದಂದು ಶರಣಬಸವನ ಜನನವಾಯಿತು. ಮಗುವಿನ ಜನನದಿಂದಾಗಿ ಆದಯ್ಯನವರ ಆಪ್ತರಿಗೆ ಹಾಗೂ ಪುರಜನರಿಗೆ ಎಲ್ಲಿಲ್ಲದ ಆನಂದ ಉಕ್ಕಿ ಸಂತಸದ ಸವಿಗನಸಿನ ಸಾಮ್ರಾಜ್ಯದಲ್ಲಿ ತೇಲಾಡಿದರು. ದೇವಗಣ ಸಂತಸದಿಂದ ಪುಷ್ಪವೃಷ್ಟಿ ಸುರಿಸಿದರು. ಮನದಿಚ್ಛೆಯಂತೆ ಆದಯ್ಯನವರು ಊರಿನ ಗುಡಿಯಲ್ಲಿ ದೀಪೋತ್ಸವ ಜರುಗುಸಿದರು.

ದಾನ ಧರ್ಮಕ್ಕಂತೂ ಕೊರತೆಯಿಲ್ಲದಾಯಿತು. ಬೇಡುವದಂತೂ ಗೊತ್ತಿಲ್ಲದ ಈ ಶರಣ ಮನೆತನದವರ ಸಂಪ್ರದಾಯದಲ್ಲಿ ಬೇಡು ಈ ಶಬ್ದದ ವಿರುದ್ಧ ಮಾಲಿಕೆಯಲ್ಲಿದ್ದ ಕೊಡು ಈ ಶಬ್ದಕ್ಕೆ ಕೊನೆಯಿಲ್ಲದಾಯಿತು. ನಿತ್ಯ ನಿಯಮದಂತೆ ಗುಡಿ-ಗುಂಡಾರಗಳು ದೀಪೋತ್ಸವದಿಂದ ಬೆಳಗಿದರೆ, ಜಂಗಮ ಮನೆತನದವರು ಮನದಣಿಯುವಂತೆ ಕೇಳಿ ಏನೆಲ್ಲ ಕೊಂಡು ಒಯ್ದು ದಾನ ದಕ್ಷಿಣೆಗಳಿಂದ ವರ್ಷಾರು ತಿಂಗಳಗಳವರೆಗೆ ಉಪಜೀವನದ ಉತ್ಪನ್ನ ದೊರಕಿಸಿಕೊಂಡರು. ಆದಯ್ಯಪ್ಪನವರಲ್ಲಿ ಮತಬೇದವಿಲ್ಲ. ಅನ್ಯಮತೀಯರಿರೂ ಸಹ ಪರಿಪರಿಯ ದಾನಕೊಟ್ಟರು. ಸಂಗಮ್ಮನ ಉದರದಿಂದ ಜನಿಸಿದ ಕಂದನ ಕರುಣೆಯಿಂದ ಅರಳಗುಂಡಿಯ ಪುರವೆಲ್ಲ ಸಂತಸದ ಕಡಲಲ್ಲಿ ಈಸುತ್ತಿತ್ತು.

ಕೂಸಿನ ಜನನವಾಗಿ ಹದಿಮೂರು ದಿನಗಳು ಕಳೆದವು. ಹವಿಮೂರು ದಿನಗಳಲ್ಲಿಯೇ ಹಲವಾರು ಲೀಲೆಗಳನ್ನು ತೋರಿದ ನಂದಿಯ ಲೀಲಾ ವಿನೋದ ಕಾಣುವದಕ್ಕಾಗಿ, ಶಿವನು ಜಂಗಮ ವೇಷದಲ್ಲಿ ಅರಳುಗುಂಡಿಯ ಆದಯ್ಯನವರ ಜಂಗಮರ ಆರಾಧನೆಯಲ್ಲಿ ಸಿಗುವ ಸವಿಗೂಳನ್ನು ಸವಿದು ಸಂತಸದಿಂದ ಕಂಡ ಶರಣಬಸವನಿಗೆ ಜನಗದಲ್ಲಿ ಹಿರಿಯ ಶರಣನಾಗಿ ಮೆರೆಯಲೆಂದು, ಮಾನವರ ಮೌಢ್ಯ ಜೀವನಕ್ಕೆ ದಾರಿದೀಪವಾಗಲೆಂದು ಆಶೀರ್ವದಿಸಿ ಬಂದನು. ಆದಯ್ಯನವರು ತಮ್ಮನ ತಳೊದರೆಯ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೆ ಹೆಸರಿಟ್ಟು ತೊಟ್ಟಿಲೊಳಿಟ್ಟು ವೀರಶೈವ ಧರ್ಮದ ಪ್ರಕಾರ ಲಿಂಗದೀಕ್ಷೆಯನ್ನು ಕೊಟ್ಟು ಸಕಲ ಕಾರ್ಯದಲ್ಲಿ ಸನ್ನದ್ಧರಾದರು.

ಕೂಸಿನ ತೊಟ್ಟಿಲ ಕಾರಣದ ಸುದ್ದಿಯನ್ನು ಕೇಳಿ, ನೆರೆಹೊರೆಯ ಗ್ರಾಮಗಳಿಂದ ಆದಯ್ಯಪ್ಪನವರಿಗೆ ಬೇಕಾದವರೆಲ್ಲರೂ ಅರಳುಗುಂಡಿಯ ಗ್ರಾಮಕ್ಕೆ ಬಂದರು ಮತ್ತು ಗ್ರಾಮದ ಹಿರಿ-ಕಿರಿಯರೆಲ್ಲರೂ ತೊಟ್ಟಿಲ ಕಾರ್ಯಕ್ಕೆ ಸೇರಿದರು. ಹದಿಮೂರು ದಿನಗಳವರೆಗೆ ತೋರಿದ ಕೂಸಿನ ಬಾಲ ಲೀಲೆಗಳನ್ನು ಕಂಡು ಅರಳುಗುಂಡಿಯ ಅನೇಕ ನಾರಿಯರು ಅಚ್ಚರಿಗೊಂಡರು. ಅಲ್ಲದೇ ಸಂಗಾಂಬೆಯು ತನ್ನ ಕರುಳ ಕುಡಿಯನ್ನು ಅಕ್ಕ ಮುಡಿಯವ್ವನ ಉಡಿಯಲ್ಲಿ ಹಾಕಲು ಒಪ್ಪಿದ್ದನ್ನು ಕೇಳಿ ಸಂಗಮ್ಮನ ಔದಾರ್ಯ, ನಿಸ್ವಾರ್ಥ ಪ್ರೀತಿಯನ್ನು ಕೇಳಿ ಬೆರಗಾದರು. ಈಗ ತೊಟ್ಟಿಲ ಕಾರಣಕ್ಕೆಂದು ಬಂದ ನಾರಿ ವಾರಿಜಾಕ್ಷಿಯರು, ಸಂತಸದಿಂದ ಕಂದನಿಗೆ ಹೆಸರಿಡಲು ಬಂದ ಹಿರಿಯ ಮುತ್ತೈದೆಯರು ಆನಂದಿಂದ ಮುಂದಾದರು[೨೬].

ಈ ಸಂಭ್ರಮದ ಸಮಯದಲ್ಲಿ ಸಂಗಮ್ಮನು ಅಕ್ಕ ಮುಡಿಯವ್ವನನ್ನು ಕರೆದು, ತನ್ನೊಡಲು ಮತ್ತು ಆವಳ ಉಡಿಯಲ್ಲಿ ಹಾಕಲು ಮುಂದಾದಳು. ಆದರೂ ತನ್ನ ಪತಿ ಏನೆಂದುಕೊಳ್ಳುವನೋ ಎಂದು ಸಂಶಯದ ದೃಷ್ಟಿಯಿಂದ ನೋಡಿದಳು ಪತಿಯ ಮುಖವನ್ನು, ಆದರೆ ಗಂಡನ ಮುಖದಲ್ಲಿ ಯಾದವ ಪ್ರತೀಕಾರದ ಛಾಯೇ ಕಾಣದಿರಲು, ಆತನ ಒಪ್ಪಿಗೆ ಇದೆ ಎಂದು ತಿಳಿದು ಕೂಸನ್ನು ಅಕ್ಕ ಮುಡಿಯವ್ವನಿಗೆ ಕೊಟ್ಟಳು. ಇದನ್ನು ಕಂಡ ಹಿರಿಯರು ಆನಂದದಿಂದ, ಸಂಗಮ್ಮಾ ನಿನ್ನೀ ಉದಾರ ಗುಣಕ್ಕೆ ಮೆಚ್ಚಿ ಶಿವಮಹಾದೇವ ಮುಕ್ಕಣ್ಣ ಹರನು ವರಷ ತುಂಬುವದರೊಳಗಾಗಿ ಮತ್ತೋರ್ವ ಕಂದನನ್ನು ಕರುಣಿಸುತ್ತಾರೆ, ಎಂದು ಹರಸಿ ಆಶೀರ್ವದಿಸಿದರು.

ಬಸುರಿನ ಲಕ್ಷಣವನ್ನೇ ಅರಿಯದ ಮುಡಿಯವ್ವನ ಕುಚದ್ವಯಗಳಲ್ಲಿ ಹಾಲ್ಕಡಲು ಉಕ್ಕಿ ಕಂದ ಶರಣಬಸವನ ಪೋಷಣೆಯ ಆಹಾರ ಚಿಮ್ಮಿ ಪಡೆದ ತಾಯಿಯ ಪುತ್ರ ಪ್ರೇಮದ ಪ್ರತೀಕವನ್ನು ಸಿದ್ಧಗೊಳಿಸಿ ಶರಣಬಸವನು ತನ್ನ ಹುಟ್ಟಿನ ಹದಿಮೂರನೇ ದಿನದಲ್ಲಿ ಅಗಮ್ಯ ಅಗೋಚರವಾದ ಲೀಲೆಯನ್ನು ತೋರಿದನು. ಕೂಡಿದ ಹೆಂಗಳೆಯರಿಗೆ ಶರಣ ಬಸವನ ಪವಾಡವೇ ಇದು ಎಂದು ತಿಳಿದು ಮಗುವಿನ ಬಗ್ಗೆ ಮಮತೆ, ಹೆಮ್ಮೆಗಳು ಏಕ ಕಾಲಕ್ಕೆ ಉದ್ಭವಿಸಿದವು. ಆಗ ಕೂಡಿದವರೆಲ್ಲರೂ ಮಗುವನ್ನು ಪುಣ್ಯ ಪ್ರಸಾದ, ಶರಣಬಸವನ ತೊಟ್ಟಿಲ ಕಾರಣದ ಸವಿಗಳನ್ನುಂಡು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಶರಣಬಸವನಿಗೆ ಲಿಂಗದೀಕ್ಷೆ:

ಹರಸಮೂಹದವರ ಅಭಿಮಾನದ ಕುವರನಾಗಿ, ಶರಣಬಸವನೀಗ ಬೆಳೆದು ಹನ್ನೆರಡು ವರ್ಷದ ಬಾಲಕನಾದನು. ಸಕಲ ಪುರಜನರ ಮೆಚ್ಚುಗೆಯನ್ನು ಗಳಿಸುವಂತಾದನು. ಅಂತೇ-ಆದಯ್ಯನವರು ವೀರಶೈವ ಧರ್ಮದ ಪ್ರಕಾರ ಶರಣಬಸವನಿಗೆ ಲಿಂಗದೀಕ್ಷಾ ಸಂಸ್ಕಾರ ದೊರೆಯಲೆಂದು ಕುಲ ಗುರುಗಳಾದ ಕಲಕೇರಿ ಹಿರಿಯ ಮಠಾಧ್ಯಕ್ಷರಾದ ಮರುಳಸಿದ್ಧ ದೇವರನ್ನು ಕರೆದುಕೊಂಡು ಬಂದರು. ವೀರಶೈವ ಮತದ ತತ್ವದಂತೆ ಮರುಳಸಿದ್ಧ ದೇವರು ಶರಣ ಬಸವನಿಗೆ ಲಿಂಗದೀಕ್ಷೆಯನ್ನಿತ್ತು ದೀಕ್ಷಾ ಗುರುಗಳೆನಿಸುತ್ತ ಗುರು ಧರ್ಮದಂತೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ವೀರಶೈವ ಧರ್ಮದ ಮಹತ್ ತತ್ವಗಳು, ದೀಕ್ಷೆ ಹೊಂದಿದ ಪ್ರತಿಯೋರ್ವ ವೀರಶೈವ ಪಾಲಿಸತಕ್ಕ ಕರ್ತವ್ಯ. ವೀರಶೈವ ಧರ್ಮದ ಆಚಾರ, ನಡತೆ, ಎಲ್ಲ ತಿರುಳಿನ ಗುರಿ ತಿಳಿಸಿ ವಿವರವಾದ ಬೋಧೆ ಮಾಡಿದರು. ಗುರುಕಾಣಿಕೆ ಎಂದು ಗುರುವಾಕ್ಯ ಪಾಲನೆಯ ವಚನ ಪಡೆದು ಶರಣ ಬಸವನನ್ನು ಹರಸಿ

ಆಶೀರ್ವದಿಸಿದರು ಮತ್ತು ಶರಣಬಸವಾ ಲಿಂಗಾಂಗ ಸಾಮರಸ್ಯದ ತತ್ವಜ್ಞಾನವನ್ನು ಸಂಪೂರ್ಣ ರೂಪಿಸಿ, ಅರಗಿಸಿಕೊಂಡು ಲೋಕಹಿತಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ ವೀರಶೈವ ಮತೋದ್ಧಾರ ಮಾಡುವವನಾಗೆಂದು ಬೋಧಿಸಿದರು[೨೭೦].

ಹೀಗೆ ಶರಣಬಸವನು ಗುರು ಮರುಳಾರಾಧ್ಯರು ಸಕಲ ರೀತಿಯ ಬೋಧ ಕೊಟ್ಟು ತಮ್ಮ ಗುರುಸ್ಥಲದ ಸಾರ್ಥಕತೆಯನ್ನು ಸಾಧಿಸಿದರು ಮತ್ತು ಶರಣಬಸವನ ಬಾಳಿನ ಬುನಾದಿಯನ್ನು ಭದ್ರಗೊಳಿಸಲು ಸುಭದ್ರ ಮನದಿಂದ ಸಜ್ಜಾದರು. ಆಗಿಹೋದ ಹಲವಾರು ಹಿರಿಯ ಶರಣರ ಮಹಿಮಾ ಪುರುಷರ ತತ್ವ ಸಂಪತ್ತನ್ನು ಶರಣಬಸವನ ತಲೆಯಲ್ಲಿ ತುಂಬಿ, ಅನನ್ಯಯ ಲೀಲಾ ಮಹಿಮೆಯನ್ನು ವರ್ಣಿಸಿದರು. ಈಗ ಶರಣಬಸವನು ಇಹಪರ ಸೌಖ್ಯಾನಂದ ಬೀರುವ ಗುರುವಚನಗಳನ್ನು ಕೇಳಿ, ಅವುಗಳನ್ನು ಪಾಲಿಸುತ್ತ ಶರಣ ಮಾರ್ಗದ ಗುರಿ ತಿಳಿದು, ಅರಿತು, ಅರಗಿಸಿಕೊಂಡು ಪ್ರಾಪ್ತ ವಯಸ್ಸಿನವನಾದನು. ಕ್ರಿಯಾಚರಣೆಯ ಸಂಪತ್ತು ಭರಿತವಾಯಿತು. ಬದುಕಿನ ಬುನಾದಿಯನ್ನು ಭದ್ರಗೊಳಿಸುವ ಪ್ರೌಢತೆ ಪ್ರಾಪ್ತವಾಯಿತು. ಮರುಳಸಿದ್ಧ ದೇವರು ಸಮಯ ಸಂದರ್ಭಗಳನ್ನರಿತು ಶರಣನನ್ನು ಕೆಣಕಿ, ಶರಣಬಸವಾ ನೀನೀಗ ಸಾಕಷ್ಟು ಪ್ರೌಢನಾದೆ, ಸಂಸಾರ ಭಾರ ನಿರ್ವಹಿಸುವ ತಿಳುವಳಿಕೆಯುಳ್ಳವನಾದೆ.

ಅಲ್ಲದೇ ಪಿತೃ ಋಣವನ್ನು ತೀರಿಸುವ ಗುರುತರವಾದ ಸಂಸಾರದ ಹೊಣೆಯುಳ್ಳವನಾದೆ ಆದ್ದರಿಂದ ಸಂಸಾರ ಪಿಡಿದು ಸತಿವ್ರತವನ್ನಾರಿಸುವ ನಿಜ ಸಂಸಾರಿತನಾಗ ಬೇಕೆಂದು ಹೇಳಿದರು. ಆಗ ಶರಣ ಬಸವನು ಗುರುಗಳಿಗೆ ಕರಜೋಡಿಸಿ, ಸಂಸಾರಿ ಎಂದೊಡೆ ಅಂಜುವದೀ ಮನ, ಅಳುಕುವದೀಮನ, ಏಕಯ್ಯ ತಂದೆ ಈ ಬಂಧನ ಬೇಡಯ್ಯ ಬೇಡವೆಂದು ಸಂಸಾರಿಯಾಗಲು ನಿರಾಕರಿಸಿದನು. ಆಗ ಮರುಳಸಿದ್ಧ ಗುರುಗಳು, ಸಂಸಾರಿಗಳನೇಕರ ಉದಾಹರಣೆ ಕೊಟ್ಟು, ವಶಿಷ್ಠ, ಅತ್ರಿ, ಮಹಾಋಷಿಗಳು ಸಂಸಾರದಿಂದಲೇ ತಪಸ್ಸಿದ್ಧಿಯನ್ನು ಹೊಂದಲಿಲ್ಲವೇ ? ಎಂದು ಪರಿಪರಿಯಾಗಿ ಬೋಧಿಸಿದರು. ಆದಯ್ಯನವರಿಗೆ ಮಾಶಾಲ ಗ್ರಾಮದ ಭಾವಿಮನೆ ಶಾಂತ ಲಿಂಗಪ್ಪನವರ ಮಗಳು ಸುಲಕ್ಷಣ ಸಂಪತ್ತಿನ ಒಡತಿ, ಸದ್ಗುಣ ಭರಿತ ಕುಸುಮ, ಶರಣಮಾರ್ಗದ ಗುರು ಸಾಧನೆಗೆ ದಾರಿ ದೀಪವೆನಿಸುವ ನಾರಿರತ್ನ. ನಮ್ಮ ಶರಣ ಬಸವನಿಗೆ ಸರಿ ಎನಿಸುವ ಕನ್ಯಾಮಣಿ ಎಂದು ಶರಣನ ಭಾವಿ ಪತ್ನಿಯ ಗುಣ ವರ್ಣನೆ ಮಾಡಿ ಕೊನೆಗೊಮ್ಮೆ ಮದುವೆಯಾಗಲು ಶರಣಬಸವನನ್ನು ಒಪ್ಪಿಸಿದರು.

ಶರಣಬಸವೇಶ್ವರರ ಪವಾಡಗಳು:

ಹಿಪ್ಪರಿಗೆ ಬಿಲ್ವವನದಲ್ಲಿ ಕಳ್ಳರಿಗೆ ದ್ರವ್ಯ ದೊರಕಿಸಿದ್ದು:

ಶರಣಬಸವನು ನಿತ್ಯ ನೇಮದಂತೆ ಪತ್ರಿ ಪುಷ್ಪಾದಿಗಳನ್ನು ತರಲಿಕ್ಕೆ ಹಿಪ್ಪರಿಗೆಯ ಬಿಲ್ವನಕ್ಕೆ ಬಂದನು ಬಿಲ್ವವನದಲ್ಲಿ ಪತ್ರಿ ಪುಷ್ಪಗಳನ್ನು ಎತ್ತಿಕೊಂಡು ಲಿಂಗಪೂಜೆಗಾಗಿ ಗುರುಚರರ ಪಾಪೂಜೆಗಾಗಿ ನಸುಕಿನಲ್ಲಿ ಬ್ರಾಹ್ಮಿ ಮೂಹೂರ್ತದಲ್ಲಿ ಸಂತಸದಿಂದ ಹೊರಟಿದ್ದನು. ಆಗ ಕಳ್ಳರಗುಂಪು ಇವರನ್ನು ತಡೆದು ನಿಲ್ಲಿಸಿ ಶರಣಬಸವಾ ನೀನು ಗಳಿಸಿಟ್ಟ ಹಣವನ್ನು ತರಿಸಿಕೊಟ್ಟರೆ ಸರಿ ಇಲ್ಲವಾದರೆ ನಿನ್ನ ಹರಣ ಹಾರುವದರಲ್ಲಿ ಸಂದೇಹವಿಲ್ಲ, ಹೇಳು ಏನೆನ್ನುವಿ ಎಂದು ದಿಟ್ಟತನದಿಂದ ಎಟ್ಟೆ ಮಾತುಗಳನ್ನು ಸುರಿಸಹತ್ತಿದರು. ಆಗ ಶರಣಬಸವನು ನಸುನಗೆ ಮೊಳಗಿದನು. ಆಗ ಕಳ್ಳರು, ಪ್ರಾಣಕ್ಕೆ ಅಪಾಯವೆಂದು ತಿಳಿದರೂ ನಗು ಹೊರಸೂಸುವ ಈತನ ಧೈರ್ಯವನ್ನು ಕಂಡು ಬೆರಗಾದರು. ಮತ್ತೆ ಮುಂದಾಗಿ ಏಕೆ ಶರಣಬಸಪ್ಪಾ ನಮ್ಮ ಆಶೆಯಂತೆ ನೀನು ಗಳಿಸಿದ ಸಂಪತ್ತು ನಮಗೆ ತಂದು ಮುಟ್ಟಿಸಬೇಕು.

ಇಲ್ಲವಾದರೆ ಮುಂದಕ್ಕೆ ಬಿಡಲಾರೆವು ಎಂದು ಹಟಹಿಡಿದರು. ನೀನು ವಚನಕೊಟ್ಟು ಹಣ ತೆಗೆದುಕೊಂಡು ಬರುವವನಾಗು, ವಚನ ಕೊಡವವರೆಗೆ ಬಿಡಲಾರೆವು ಎಂದು ಅಡ್ಡನಿಂತರು. ಮೊದಲೇ ಆಯುಧ ಪ್ರಾಣಿಗಳಾದ ಕರಾಳ ಮುಖದ ಕುಲಗೇಡಿ ಕಳ್ಳರ ಮಾತಿಗೆ ಶರಣಬಸವನು ಅಯ್ಯಾ ನಿಮಗೆ ಹಣವು ಇಂದೇ ಇಲ್ಲೇ ಇದೇ ಸ್ಥಾನದಲ್ಲಿ ಸಿಗುವದೆಂದು ತಿಳಿಯಿರಿ. ಈ ಮಾತು ಶಿವನಾಣೆಗೂ ಹುಸಿಯಲ್ಲ ದಿಟವೆಂದು ನಂಬಿರಿ ಎಂದು ಹೇಳಿ, ತನ್ನ ಪಾಲಿನ ಕರ್ತವ್ಯ ಶಿವನಿಂದ ಸಾಗಬೇಕಾಗಿದೆ. ಎನ್ನುತ್ತ ಮನೆಗೆ ಬಂದನು. ಇತ್ತ ಕಳ್ಳರು ಶರಣಬಸವನ ಚರಿತ್ರೆಯನ್ನು ಮೊದಲೇ ತಿಳಿದುಕೊಂಡಿದ್ದರು. ಅದಕ್ಕಾಗಿ ಅವರಿಗೆ ಶರಣಬಸವರ ಮೇಲೆ ಬಲವಾದ ನಂಬಿಗೆ ಇತ್ತು, ಇಂದೇ ಹಣ ದೊರೆಯುವದೆಂದು ಹೇಳಿ, ಮಾತುಕೊಟ್ಟಂತೆ ಮನೆಗೆ ಹಣ ತರಲು ಹೋಗಿದ್ದಾನೆ.

ಆ ಶರಣ ಕೊಟ್ಟ ಮಾತಿಗೆ ತಪ್ಪುವನಲ್ಲವೆಂದು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಅದರಲ್ಲಿ ಒಬ್ಬ ಕಳ್ಳ ಮಹಾಶಯನು ಶರಣಬಸವನು ತಂದುಕೊಡುವ ಆ ಹಣದ ಸಂಗ್ರಹವನ್ನು ಕೆಲವು ಕಾಲ ಇಲ್ಲಿಯೇ ಹುಗಿದಿಟ್ಟು ಮುಂದೆ ಸಮಯ ಬಂದಾಗ ಎಲ್ಲರೂ ಹಂಚಿಕೊಂಡರಾಯಿತು ಎಂದು ನುಡಿದನು[೨೭೧]. ಅವನ ನುಡಿ ಎಲ್ಲರಿಗೂ ಸರಿ ಎನಿಸಿ, ಹಾಗಾದರೆ ಸಂಪತ್ತು ಹೊಳಿದುವದಕ್ಕೆ ಇಲ್ಲೇ ಒಂದು ತಗ್ಗು ತೆಗೆದು ಬಿಡಬೇಕೆಂದು ಕುಣಿಯನ್ನು ತೋಡುವವರಾದರು. ಕಳ್ಳರು ತೆಗೆಯುತ್ತಿದ್ದ ಕುಣಿಯಲ್ಲಿ ಹಿಂದೆ ಯಾರೋ ಪುಣ್ಯಾತ್ಮರು ಹೂಳಿಟ್ಟ ದ್ರವ್ಯದ ರಾಶಿಯೇ ಕಂಗೊಳಿಸುತ್ತಿತ್ತು ಅತುಲ ಸಂಪತ್ತಿನ ಆ ರಾಶಿಯನ್ನು ಕಂಡ ಕಳ್ಳರು ಬೆರಗಾದರು.

ಅದನ್ನು ಮುಟ್ಟಿ ಮೇಲೆತ್ತಿ ತೆಗೆಯುವಷ್ಟರಲ್ಲಿ ಅವರೆಲ್ಲರ ಮನಸ್ಸೆ ಪರಿವರ್ತನೆ ಹೊಂದಿದವು. ಮನದಲ್ಲಿ ಇಲ್ಲಿಯವರೆಗೆ ಆಳವಾಗಿ ಅವಿತುಕೊಂಡಿದ್ದ ಧನ ಮದದ ಮಾಯೆ ತನ್ನ ತಾನೇ ಸರಿದು ಶುಭ್ರ ಮನದ ಶಾಂತ ಸ್ವಭಾವದ, ಧಾರ್ಮಿಕ ಬುದ್ಧಿಯ ಪ್ರತಿಛಾಯೇ ಮುತ್ತಿಕೊಂಡಿತು. ಇದೆಲ್ಲವೂ ಶರಣರ ಮಹಿಮೆ. ಆಗಾಧ ಲೀಲೆ ಎಂದು ಭಾವಿಸಿ, ಈ ಮಹಿಮಾ ಪೂರ್ಣ ನಿಧಿಯನ್ನು ನಾವು ಉಪಯೋಗಿಸಿ ಕೊಳ್ಳುವದರಿಂದ ನಮ್ಮ ವಂಶವೇ ನಾಶ ಹೊಂದುವದರಲ್ಲಿ ಸಂದೇಹ ವಿಲ್ಲವೆಂದು ತಿಳಿದುಕೊಂಡರು. ಯಮ ಯಾತೆ ಅನುಭವಿಸುವ ಪ್ರಸಂಗವೂ ವಂಶಪರಂಪರೆ ಬಿಟ್ಟಿದ್ದಲ್ಲವೆಂದು ಅರಿತುಕೊಂಡರು ಶರಣರಿಗೆ ವಂಚನೆ ಮಾಡಿದ ಪಾಪವು ಎಷ್ಟು ಜನ್ಮದಲ್ಲಿ ತೀರಿಸಿದರೂ ಸವೆಯದು, ಆ ಪಾಪವು ನಮ್ಮ ಪದರಿನಲ್ಲಿಯೇ ಬೀಳುವದಲ್ಲಾ ಎಂದು ತರ್ಕಿಸಿದರು. ಈ ಶ್ರೀನಿಧಿಗೆ ಶರಣು ಶರಣು ಎಂದು ಪದೇ ಪದೇ ನಮಸ್ಕಾರ ಮಾಡಿದರು ಬಳಿಕ ಎಲ್ಲರೂ ಪೂರ್ವಾಪರ ವಿಚಾರ ಮಾಡುತ್ತ ಕೊನೆಗೊಮ್ಮೆ ಅದರಲ್ಲಿಯೇ ಬುದ್ಧಿವಂತನಾಗಿದ್ದ ಕಳ್ಳರ ಹಿರಿಯನು ಈ ದ್ರವ್ಯರಾಶಿಯನ್ನು ಶರಣಬಸವರ ಸನ್ನಿಧಿಗೆ ತೆಗೆದುಕೊಂಡು ಹೋಗಿ ಮುಟ್ಟಿಸಿ ಬರುವದು ಒಳಿತೆಂದು ಹೇಳಿದನು. ಆ ಕಳ್ಳರ ಹಿರಿಯನ ನುಡಿ ಸರ್ವರಿಗೂ ಸರಿ ಎನಿಸಿ ದ್ರವ್ಯದ ರಾಶಿಯನ್ನು ಹೊತ್ತುಕೊಂಡು ಕಳ್ಳರು ಶರಣಬಸವನ ಮನೆಗೆ ಬಂದರು.

ಮನೆಗೆ ಬಂದ ಕಳ್ಳರು ಶರಣಬಸವನ ಪಾದಗಳ ಮೇಲೆ ಬಿದ್ದು ಅನನ್ಯ ಭಕ್ತಿ ಭಾವದಿಂದ ಬೇಡಿಕೊಳ್ಳವರು. ಅಯ್ಯಾ ಶರಣಶ್ರೇಷ್ಠ, ಘನ ಶರಣಾ ಮಹಿಮಾಶಾಲಿ, ಮಹಾದೇವ ಪ್ರಿಯಾ, ಲೀಲಾಮೂರ್ತಿ ಎನಿಸಿದ ತಂದೆಯೇ ಈ ಧನವನ್ನು ಮುಟ್ಟಿ ಕೆಟ್ಟನಾದರೂ ಈ ಐಶ್ವರ್ಯದ ಆಶೆಯಲ್ಲಿ ತಮ್ಮನ್ನು ತಡೆದು ನಿಲ್ಲಿಸಿ. ಪಾಪದ ಹೊರೆಯನ್ನು ಹೊತ್ತುಕೊಂಡಿರುವೆವು. ಕಾರಣ ನಿನ್ನ ಮಹಿಮೆಯನ್ನರಿಯದೇ ಮಾಡಿದ ಅಪರಾಧವನ್ನು ಕ್ಷಮಿಸಿ, ನಿನ್ನ ಈ ದ್ರವ್ಯ

ಸಂಪತ್ತನ್ನು ಪಡೆದುಕೊಂಡು ನಮ್ಮ ಜನ್ಮವನ್ನು ಪಾವನಗೊಳಿಸಲು ಪಾಪಾತ್ಮರ ಅಪರಾಧವನ್ನು ಕ್ಷಮಿಸು ಎಂದು ದ್ರವ್ಯವನ್ನು ಶರಣಬಸವರ ಬಳಿಯಲ್ಲಿ ಸುರುವಿದರು[೨೨೨].

ಆಗ ಶರಣಬಸವರು ಅಯ್ಯಾ ಕಳ್ಳ ಶ್ರೇಷ್ಠರೇ ಈ ಹಣವನ್ನು ಹರನು ನಿಮಗಾಗಿ, ನಿಮ್ಮ ಬಾಳಿನ ಅಭ್ಯುದಯಕ್ಕಾಗಿ ಅನುಗ್ರಹಿಸಿದ್ದಾನೆ. ಇದನ್ನು ನೀವೆಲ್ಲರೂ ತೆಗೆದುಕೊಂಡು ಇಹದಲ್ಲಿ ಸುಖ ಪಡೆಯಿರಿ, ನಾನು ನಿಮಗೆ ಹಣ ಕೊಡುತ್ತೇನೆ ಎಂದು ಹೇ ಬಂದದ್ದಕ್ಕಾಗಿ ಶಿವಶಂಕರನು ನನ್ನಿಂದ ನಿಮಗೆ ಮುಟ್ಟಬೇಕಾದ ಋಣವನ್ನು ತಾನು ಮುಟ್ಟಿಸಿದ್ದಾನೆ. ಅಂತೂ ನಿಮಗೆ ಮಾತುಕೊಟ್ಟ ಪ್ರಕಾರ ಶಿವನು ನನ್ನನ್ನು ರುಣಮುಕ್ತನನ್ನಾಗಿ ಮಾಡಿರುವನು. ತೆಗೆದುಕೊಂಡು ಹೋಗಿರಿ ಎಂದು ಹೇಳಿದರು. ಆಗ ಕಳ್ಳರು ಕೊನೆಗೆ ಹರನಿಂದ ದೊರೆತ ಈ ದ್ರವ್ಯದ ರಾಶಿ ಹರನ ಕಾರ್ಯಕ್ಕೆ ಸಲ್ಲಲಿ ಎಂದು ಹೇಳಿ ದಾಸೋಹ ಕಾರ್ಯಕ್ಕೆ ಒಪ್ಪಿಸಿದರು. ಜನ್ಮತ: ಕಳ್ಳ ವೃತ್ತಿಯಿಂದ ಬಿಡುಗಡೆ ಹೊಂದಿದರು. ಅವರ ದುರಿತ ಪಟಲವು ಹರಿದು, ಸನ್ಮಾರ್ಗವನ್ನರಿತು ಪುಣ್ಯದ ತೇಜಸ್ಸು ಮೂಡಿಬಂದಿತು. ಶರಣಬಸವರು ಆಶೀರ್ವಾದ ಅಂತ:ಕರುಣೆಯ ಪ್ರತಿಫಲವೆಂದು ಎಲ್ಲರೂ ಸನ್ಮಾರ್ಗದಲ್ಲಿ ಬಾಳುವವರಾದರು.

ಕಡಕೋಳ ಮಡಿವಾಳಪ್ಪನಿಗೆ ಶಿವದೀಕ್ಷೆ:

ಶರನಬಸವರು ಸೌಖ್ಯಾನಂದ ಸಾಮ್ರಾಜ್ಯದ ಶಿವಭಕ್ತಿ ಪಟ್ಟವನ್ನು ಹಿಡಿದು ಶಿವತತ್ವವನ್ನು ಅರಿತು, ಶಿವನ ಮೆಚ್ಚುಗೆಯ ನಿಜಾನಂದದಲ್ಲಿ ಬಾಳಿಕೊಂಡಿದ್ದರು. ಹೀಗಿರಲು ಬಿದನೂರಿನ ಮಲ್ಲಿಕಾರ್ಜುನಗೌಡರು ತಮ್ಮ ಊರ ಸಮಾಜದವರ ದೃಷ್ಟಿಯಲ್ಲಿ ಅಲ್ಲದ ಕಾರ್ಯಾಚರಣೆಯಿಂದ ಹುಟ್ಟಿದವನೆಂದು ತಿರಸ್ಕರಿಸಲ್ಪಟ್ಟ ಮಡಿವಾಳಪ್ಪನನ್ನು ಶರಣಬಸವರ ಹತ್ತಿರ ಕರೆದು ಕೊಂಡು ಬಂದರು. ಮಲ್ಲಿಕಾರ್ಜುನಪ್ಪ ಗೌಡರು ಕರೆತಂದ ಮಡಿವಾಳಪ್ಪನ ಬಗ್ಗೆ ಜನತೆಯಲ್ಲಿ ಉದ್ಭವಿಸಿದ ಊಹೆಯಿಂದ ಅವನ ಜೀವನವೇ ಅಧ:ಪತನ ಹೊಂದುವ ಸ್ಥಿತಿಬಂದು, ವೈರಾಗ್ಯ ಸೀಮೆಯಲ್ಲಿ ಕಾಲಿಟ್ಟು ಘನ ಚರಿತೆಯ ಚಿನ್ಮಯ ಮೂರ್ತಿಯಾಗಬೇಕಿದ್ದ ಮಡಿವಾಳಪ್ಪನು ಜೀವನದಲ್ಲಿ ಬೇಸರಗೊಂಡಿದ್ದನು.

ಬಿದನೂರಿನಲ್ಲಿ ಹುಟ್ಟಿದ ಮಡಿವಾಳಪ್ಪನವರು ಗಾಣಿಗರ ಮತದವರು ಈತನ ತಾಯಿಯಾದ ಗಂಗಮ್ಮ ಮಹಾ ಶಿವಭಕ್ತೆ, ಕೂಲಿ ಕುಂಬಳಿ ಮಾಡಿ ಶಿವ ಮೆಚ್ಚುವ ರೀತಿ ಬಾಳಿಕೊಂಡಿದ್ದಳು. ಈ ಮಹಾತಾಯಿ ರಚಿಸಿದ ಹಲವಾರು ತತ್ವಪದಗಳ ಅಂಕಿತದಲ್ಲಿ ಧರೆಯೊಳು ಬಿದನೂರ ವಿರುಪಾಕ್ಷಿ ಎಂಬ ಉಲ್ಲೇಖ ಉಂಟು, ಅಂದಮೇಲೆ ಈ ಸಾಧ್ವಿಯ ಗುರುತರ ಜೀವನದ ಹೊಂದಾಣಿಕೆಗೆ ಗುರುವಾಗಿ ಹರನಾಗಿ ವಿರುಪಾದಕ್ಷಿ ಎನ್ನುವರಿರಬೇಕು.

ಇಂತಹ ತತ್ವ ಸಂಪನ್ನ ತಾಯಿಯ ಗರ್ಭಸಂಜಾತನಾದ ಮಡಿವಾಳಪ್ಪ ಚಿಣಮ ಗೇರಿಗುಡ್ಡ ದೊಡೆಯರಾದ ಮಹಾಂತ ಸ್ವಾಮಿಗಳವರ ವರಪ್ರಸಾದದಿಂದ ಹುಟ್ಟಿದವನು, ವರವನಿತ್ತ ಗುರು ಮಹಾಂತಸ್ವಾಮಿಗಳ ಬಿದನೂರಿಗೆ ಆಗಮಿಸಿ ತಮ್ಮವರ ಪ್ರಸಾದವೆಂದು ಹುಟ್ಟಿದ ಮಗುವಿಗೆ ಮಡಿವಾಳಪ್ಪನೆಂದು ಹೆಸರಿಟ್ಟು ತಮ್ಮ ಗುಡ್ಡದ ಮಠಕ್ಕೆ ತಂದುಬಿಡುವಂತೆ ತಾಯಿಯನ್ನು ಒಪ್ಪಿಸಿದರು[೨೨೩].

ಮಹಾಂತಸ್ವಾಮಿಗಳ ಅಮರವಾಣಿಯಂತೆ ಕುಮಾರ ಮಡಿವಾಳಪ್ಪನು ಬಿದಗಿಯ ಚಂದ್ರನಂತೆ ಬೆಳೆಯ ಹತ್ತಿದನು. ತಾಯಿಯಾದ ಗಂಗಮ್ಮನು ತನ್ನ ಮಗನು ವಿದ್ಯಾವಂತನಾಗಲಿ ಬುದ್ಧಿವಂತನಾಗಲಿ ಎಂದು ಶಾಲೆಗೆ ಕಳಿಸುತ್ತಿದ್ದಳು. ಆದರೆ ಮಗು ಮಡಿವಾಳಪ್ಪನ ಶಾಲಯ ವಾತಾವರಣದಲ್ಲಿ ಶಿವಭಾವದಿಂದ ರಂಜಿಸುವವನಾದನು.

ಈಗ ಮಡಿವಾಳನಿಗೆ ಹನ್ನೊಂದು ವರ್ಷ ವಯಸ್ಸು ಗಂಗಮ್ಮನು ಹಿಂದೆ ಚಿಣಮಗೇರಿ ಸ್ವಾಮಿಗಳು ಹೇಳಿದ ಪ್ರಕಾರ ಮಗನನ್ನು ತಂದು ಗುರುಗಳ ಪಾದಕ್ಕೆ ಅರ್ಪಿಸಬೇಕೆಂದು ಚಿಣಮಗೇರಿಗುಡ್ಡಕ್ಕೆ ಬಂದಳು. ಆದರೆ ದುರ್ದೈವದಿಂದ ಆ ಮಹಾಸ್ವಾಮಿಗಳು ಲಿಂಗೈಕ್ಯರಾಗಿದ್ದರು. ಅವರ ಸ್ಥಾನದಲ್ಲಿ ಷ.ಬ್ರ.ಗುರುಬಸವದೇವರು ಅಧಿಕಾರ ಪೀಠದಲ್ಲಿದ್ದರು. ತಾಯಿಯಾದ ಗಂಗಮ್ಮನು ಮಗ ಮಡಿವಾಳಪ್ಪನಿಗೆ ಮಹೇಶ್ವರ ದೀಕ್ಷಾ ಸಂಸ್ಕಾರ ಕೊಟ್ಟು ಉಪದೇಶ ಮಾಡಬೇಕೆಂದು ಗುರುಬಸವ ದೇವರಲ್ಲಿ ಬೇಡಿಕೊಂಡಳು. ಆದರ ಸ್ವಾಮಿಗಳು ಮೃಡಮೂರ್ತಿ ಎನಿಸಿದ ಮಹಾಂತ ಸ್ವಾಮಿಗಳವರ ಪ್ರಸಾದದಿಂದ ಹುಟ್ಟಿದ ಈತನಿಗೆ ಅವರಿಂದಲೇ ಉದ್ಧಾರವಾಗಬೇಕಾಗಿದೆ. ಗಟ್ಟಿ ಮನಸ್ಸಿನಿಂದ ನಿಶ್ಚಲಭಕ್ತಿಯಿಂದ ಪರಹಿತಾರ್ಥಂದು ಶರೀರಂ ಎಂದು ಮನಮುಟ್ಟಿ ದುಡಿಯಲು ಹೇಳಿದರು. ಆದರೆ ಮಡಿವಾಳಪ್ಪನಿಗೆ ಸಂಸ್ಕಾರ ದೊರೆಯಲಿಲ್ಲ. ಷ.ಬ್ರ.ಗುರುಬಸವ ಸ್ವಾಮಿಗಳ ಆಶೀರ್ವಚನದಂತೆ ಮಹಾಂತ ಸ್ವಾಮಿಗಳ ಒಲಮೆಗಾಗಿ, ಶಿವಸಾಕ್ಷಾತ್ಕಾರಕ್ಕಾಗಿ ದುಡಿಯಹತ್ತದನು.

ಹನ್ನೆರಡರ ಹಾಲು ಹರೆಯದ ಬಾಲಕ ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಹಾಕಿ ದಣುವಿನ ಅಣುವಿನಲ್ಲಿ ಸಿಲುಕದೇ ಸ್ವಾಮಿ ಸೇವಾಕಾರ್ಯದಲ್ಲಿ ತೊಡಗಿದನು. ಗುಡ್ಡದಲ್ಲಿ ಬರ ಹೋಗುವ ಸಾಧು ಸತ್ಪುರುಷರ ಸೇವೆ, ದಾಸೋಹಕ್ಕೆ ಅಣಿ ಮಾಡುವದು, ಇಷ್ಟಲಿಂಗ ಪೂಜೆಯಲ್ಲಿ ಸಂತುಷ್ಟನಾಗಿ ಕಾಲ ಕಳೆಯುತ್ತಿರುವನು. ಒಂದು ದಿನ ಮಲಗಿ ನಿದ್ರಿಸುತ್ತಿರುವ ಸಮಯದಲ್ಲಿ, ನಿದ್ರೆ ಎಂದರೇನದು ಕನಸಿನಲ್ಲಿ ಮಹಾಂತ ಸ್ವಾಮಿಗಳು ಕನಸಿನಲ್ಲಿ ಕಂಡು ಅವನ ಮನದಾಸೆಯಂತೆ, ಮೃದು ವಚನಗಳಿಂದ ಮಗು ಮಡಿವಾಳ ಚಿಂತಿಸದಿರು ಭಯಪಡಬೇಡ, ನಿನಗೆ ಗುರುವಿನ ಅನುಗ್ರಹ ದೊರೆಯುವ ಕಾಲ ದೂರಿಲ್ಲ. ನಿನ್ನ ಸಂಗಡ ನಾನು ಸದಾ ಇರುತ್ತೇನೆ. ನೀನು ನಾಳೆಯೇ ಅರಗುಂಡಿಯಲ್ಲಿರುವ ಕರುಣಾಕರ ಮೂರ್ತಿ ಶರಣಬಸವರ ಸನ್ನಿಧಿಗೆ ತೆರಳು, ಅವರು ನಿನಗೆ ಲಿಂಗದೀಕ್ಷೆಯನ್ನು ಕೊಡಿಸಿ ಪುನೀತನನ್ನಾಗಿ ಮಾಡುವರು ಎಂದು ಹೇಳಿ ಮಯಾವಾದರು[೨೭೪].

ಗುರು ಮಹಾಂತಸ್ವಾಮಿಗಳು ಕನಸಿನಲ್ಲಿ ಅಪ್ಪಣೆ ಕೂಡಿಸಿದಂತೆ ಮಡಿವಾಳಪ್ಪನು ಲಿಂಗದೀಕ್ಷೆ ಹೊಂದುವ ಅಪೇಕ್ಷೆಯಿಂದ ಮಲ್ಲಿಕಾರ್ಜುನಪ್ಪ ಗೌಡರೊಡನೆ ಅರಳಗುಂಡಿಯ ಶರಣರಡಿಗೆ ಬಂದರು. ಮಲ್ಲಿಕಾರ್ಜುನಗೌಡರು ಅರಳಗುಂಡಿಗೆ ಬಂದು ಶರಣರನ್ನು ಕಂಡು ಅನನ್ಯ ಭಕ್ತಿ ಭಾವದಿಂದ ತಂದೇ, ಇದು ತಿಪ್ಪೆಯಲ್ಲಿ ಹುಟ್ಟಿದ ಗಿಡ ಇದರ ಪತ್ರಿಗಳು ಪೂಜೆಗೆ ಯೋಗ್ಯವಾಗಬಲ್ಲವೇ ಎಂದು ಕೇಳಿದನು. ಆಗ ಶರಣರು ಒಳಗಿನ ತಿಳಿಗಣ್ಣು ತೆರೆದು ಎಲ್ಲವನ್ನು ಅರಿತು ಅಭಯವಾಣಿಯಿಂದ ಮಲ್ಲಿಕಾರ್ಜುನಪ್ಪನವರೇ ಗುರುದ್ರೋಹಿ ಎನಿಸಿದ್ದ ಚಂದ್ರನನ್ನೇ ಶಿವನು ಮನ್ನಿಸಿ ಮುಂದಲೆಯಲ್ಲಿ ಇರಿಸಿಕೊಂಡಿದ್ದಾನೆ. ಅಂದಾಗ ಮಡಿವಾಳಪ್ಪನು ಆ ತಪ್ಪನ್ನು ಮಾಡಿದವನಲ್ಲ ಅದಕ್ಕೂ ಘನವಾದುದೇ ಇವನ ಅಪರಾಧ ? ನಮ್ಮ ನಿಮ್ಮ ದೃಷಿಯಲ್ಲಿ ಜನನದ ಕಾರಣಕ್ಕೆ ಮಹತ್ವವಿರಬಹುದು. ಆದರೆ ಹುಟ್ಟಿಸುವ ಶಿವನ ದೃಷ್ಟಿಯಲ್ಲಿ ಜನನಕ್ಕೆ ಬೆಲೆ ಇಲ್ಲ. ಸದ್ಭಕ್ತಿಗೆ, ಸದಾಚಾರಣೆಗೆ ಸದ್ಗುಣಭರಿತ ಜೀವಿಗೆ ಬೆಲೆ ಇದ್ದೇ ಇದೆ. ಅಂದಾಗ ಮಡಿವಾಳಪ್ಪನಿಗೆ ಶಿವದೀಕ್ಷೆ ದೊರೆಯಲೇಬೇಕು ಎಂದರು.

ಶರಣರು ಹಳೇಪೇಟೆಯ ಬಸಯ್ಯನವರೆಂಬುರನ್ನು ಕರೆದು ಮಡಿವಾಳಪ್ಪನಿಗೆ ಶಿವದೀಕ್ಷೆ ಕೊಡುವಂತೆ ಹೇಳಿದರು. ಬಸಯ್ಯನವರಾದರೂ ಸಾಮಾನ್ಯ ಚರಮೂರ್ತಿಗಳು. ಮಡಿವಾಳಪ್ಪನ ಹುಟ್ಟಿನ ಹಿನ್ನೆಲೆಯನ್ನು ಹಲವಾರು ಜನರಿಂದ ಕೇಳಿ ತಿಳಿದುಕೊಂಡಿದ್ದರು. ತಂದೆಯ ಹೆಸರನ್ನು ಗುರುತಿಸದ ಈತನಿಗೆ ಶಿವ ಸಂಸ್ಕಾರ ದೊರೆಯುವದೆಂತು ಮೇಲಾಗಿ ಬಿದನೂರ ಜನತೆಯ ದೃಷ್ಟಿಲ್ಲಿ ಮಡಿವಾಳನ ಜನನ ಸಲ್ಲದ ರೀತಿಯಲ್ಲಿ ಆಗಿರುವದೆಂದು ಕೇಳಿದ್ದೇವೆ. ಅಂತೇ ಇಲ್ಲಿಯವರೆಗೆ ಈತನಿಗೆ ಅಯ್ಯಾಚಾರವಾಗಿಲ್ಲವೆಂದು ನಮ್ಮಿಂದ ಇದು ಆಗದ ಮಾತು ಎಂದು ಖಂಡಿತವಾಗಿ ನುಡಿದುಬಿಟ್ಟರು.ಶರಣಬಸಪ್ಪನವರು ಮಡಿವಾಳಪ್ಪನನ್ನು ಸಂತೈಸಿ ಏನೇ ಬಂದರೂ ಯಾವ ತೊಂದರೆಗೀಡಾದರೂ ನಿನಗೆ ಶಿವದೀಕ್ಷೆ ಕೊಡಿಸುವದುನಮ್ಮ ಪಾಲಿನ ಜವಬ್ದಾರಿ ಎಂದು ಹೇಳಿದರು. ಜವಬ್ದಾರಿ ಹೊತ್ತ ಶರಣಬಸಪ್ಪನವರು ಅಷ್ಟಕ್ಕೆ ಸುಮ್ಮನಾಗದೇ ಗುರು ಮರುಳಸಿದ್ದ ದೇವರಿಂದ ಮಡಿವಾಳಪ್ಪನಿಗೆ ಶಿವದೀಕ್ಷೆ ಕೊಡಿಸಿದರು. ಈ ಸುದ್ದಿಯು ಗಾಳಿಯಂತೆ ಬಹು ಬೇಗನೆ ಸುತ್ತೆಲ್ಲ ಪಸರಿಸಿ ಗ್ರಾಮದಲ್ಲಿ ಮನೆ ಮಾತಾಯಿತು. ಊರಿನ ಅನೇಕರು ಶರಣಬಸಪ್ಪನವರಿಗೂ ಹಾಗೂ ಮಡಿವಾಳಪ್ಪನಿಗೂ ಬಹಿಷ್ಕಾರ ಹಾಕಿದರು.

ಅಲ್ಲದೇ ಬಹಿಷ್ಕಾರ ದೊಡನೆ ಹಲವಾರು ತರದಿಂದ ತೊಂದರೆ ತಂದರು. ಹಳೇಪೇಟೆ ಬಸಯ್ಯನಿಂದ ಪ್ರೇರೇಪಿತರಾದ ಕುಹಕಿಗಳು ಗ್ರಾಮಾಧಿಕಾರಿಯಾದ ಮಲ್ಲನಗೌಡ ಆದಿಯಾಗಿ ಬಹಿಷ್ಕಾರ ಪ್ರಕರಣವನ್ನು ಮುಂದುವರೆಸಿದರು. ಆದರೆ ಕುರುಡನು ಸೂರ್ಯ ಆ ಚಂದ್ರರ ತೋಲೋರಾಶಿಗೆ ಬಹಿಷ್ಕಾರ ಹಾಕಿದಂತೆ ತಾವೇ ಅವಹೇಳನ ಹೊಂದಿದರು, ಮಡಿವಾಳಪ್ಪನ ಆತ್ಮತೇಜಸ್ಸು ಶರಣಬಸಪ್ಪನವರ ದಿವ್ಯ ಧರ್ಮ ಪ್ರಭೆಯ ಮುಂದೆ ಹೊನ್ನಿ ಹುಳಗಳ ಸೆಣಸಾಟವಾಯಿತು. ಅವರೆಲ್ಲರ ಅನ್ಯಾಯದ ಜಾತಿ ಮತ್ಸರದ ಕಾದಾಟ ಮುಂದೆ ಮಡಿವಾಳಪ್ಪನವರು ಶಿವದೀಕ್ಷೆಯನ್ನು ಹೊಂದಿ ಆತ್ಮ ಜ್ಞಾನವನ್ನು ಸಂಪಾದಿಸುತ್ತ ಶ್ರೀಶೈಲದವರೆಗೆ ಹೋಗಿ ತಪಸ್ಸಿದ್ಧಿಯನ್ನು ಹೊಂದಿ ಮತ್ತೊಮ್ಮೆ ಶರಣರ ದಿವ್ಯ ಸನ್ನಿಧಿಗೆ ಬರಲು ಅವಕಾಶವನ್ನಿತ್ತಿತು[೨೭೫].

ಸಾಲ ತಂದು ಜಂಗಮ ಪುತ್ರನ ಮದುವೆ ಮಾಡಿಸಿದ್ದು ಹಾಗೂ ಶಿವನಿಂದ ಆ ಸಾಲ ಮುಟ್ಟಿದ್ದು:

ಶರಣರ ಸರಳ ಜೀವನದ ಕಾಲ ಸರಿಯುತ್ತ ಬಂದತಂತೆ ಕಾಲ ಧರ್ಮಕ್ಕೆ ತಕ್ಕಂತೆ ಕಾಲದ ಮೂಲವೇ ಬದಲಾಗುತ್ತ ಬಂತು ಒಮ್ಮೆ ಓರ್ವ ಚರಮೂರ್ತಿಯು(ಜಂಗಮ) ಶರಣಬಸವಪ್ಪನವರಲ್ಲಿ ಬಂದು ಮುಂಬರುವ ವೈಶಾಖ ಮಾಸದಲ್ಲಿ ಮಗನ ಮದುವೆ ಮಾಡಬೇಕೆಂದು ತೀರ್ಮಾನಿಸಿದ್ದೇನೆ, ಅದಕ್ಕಾಗಿ ನನಗೆ ಸಾವಿರ ರೂಪಾಯಿ ಬೇಕಾಗಿದೆ, ಎಂದು ನಮ್ರತೆಯ ನಲು ನುಡಿಯಲು ಕೇಳಿದನು.

ಆದರೆ ಆಗ ದುರ್ದೈವದಿಂದ ಶರಣರೇ ದಾಸೋಹಕ್ಕಾಗಿ ಸಾಲ ಮಾಡುವ ಪ್ರಸಂಗ ಪ್ರಾಪ್ತವಾಗಿತ್ತು. ಇಂತಹ ಸ್ಥಿತಿಯಲ್ಲಿ ಜಂಗಮಾರ್ಯನ ಬೇಡಿಕೆಯೊಂದು ಕೂಡಿ ಶರಣಬಸಪ್ಪನವರು ಅನಿವಾರ್ಯವಾಗಿ ಸಾಲ ತರಲು ಮನಸ್ಸು ಮಾಡಿದರು. ಸಾಲ ತರಬೇಕೆಂದ ಶರಣರು ಜಂಗಮನನ್ನು ಸಂಗಡ ಕರೆದುಕೊಂಡು ದೇವನೂರ ಮೊರಟಗಿ ಗಿರಿಮಲ್ಲಪ್ಪನ ಹತ್ತಿರ ಬಂದು ಗಿರಿಮಲ್ಲಪ್ಪ ಸಾಹುಕಾರರೇ ನಮಗೆ ಎರಡುವರೆ ಸಾವಿರ ಹಣ ಸಾಲ ಕೊಡಬೇಕೆಂದು ಕೇಳಿದ್ದಲ್ಲದೇ ಪಾಪ ಜಂಗಮ ಪುತ್ರನ ಮದುವೆಯಂಥ ಮಂಗಲಮಯ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ಕೇಳಿದರು.

ಆಗ ಗಿರಿಮಲ್ಲಪ್ಪ ಸಾಹುಕಾರನು ಹಣಕೊಡಲು ಒಪ್ಪಿಕೊಂಡನಾದರು ತಿರುಗಿ ತಾವು ಕೊಟ್ಟ ಹಣ ಬರುವದು ಯಾವಾಗ್ಗೆ ಎಂದು ಮರು ಪ್ರಶ್ನೆ ಮಾಡಿದನು. ಆಗ ಶರಣರು ನಿಶ್ಚಲ ಮನದಿಂದ ನಿರ್ವಿಕಾರ ಬುದ್ಧಿಯಿಂದ ಶಿವನ ಮೇಲೆ ಅಚಲವಾದ ಭಕ್ತಿ ವಿಶ್ವಾಸಗಳನ್ನಿಟ್ಟು, ಗಿರಿಮಲ್ಲಣ್ಣನವರ ಶಿವನ ಅನುಕೂಲ ಮಾಡಿದ ದಿನದಂದು ತಪ್ಪದೇ ತಮ್ಮ ಸಾಲವನ್ನು ಮುಟ್ಟಿಸುತ್ತೇನೆ ಎಂದು ಹೇಳಿದರು. ಆಗ ಗಿರಿಮಲ್ಲಣ್ಣನು ಹಾಗೆಂದು ನೀವು ಎರಡುವರೇ ಸಾವಿರ ಹಣದ ಸಾಲ ಪತ್ರವನ್ನು ಬರೆದುಕೊಟ್ಟು ಒಯ್ಯಬಹುದೆಂದು ತಿಳಿದ್ದಲ್ಲದೆ. ಮುಂದೆ ಸಾಲದ ವಸೂಲಿಗಾಗಿ ನಾವು ಈ ಜಂಗಮನನ್ನು ಹುಡುಕುತ್ತಾ ಹೋಗುವದು ಸಾಧ್ಯವಿಲ್ಲ. ಕಾರಣ ಮಾತುಕೊಟ್ಟು ಬರೆದುಕೊಟ್ಟ ಪ್ರಕಾರ ಹಣದ ವಸೂಲಿ ನಿಮ್ಮಿಂದಲೇ ಆಗಬೇಕು. ನಾನು ನಿಮ್ಮನ್ನೇ ಕೇಳುವವನೆಂದು ನಿಷ್ಠುರವಾಗಿ ನುಡಿದು ಬಿಟ್ಟನು[೨೨೬].

ಆಗ ಶರಣಬಸಪ್ಪನವರು ಗಿರಿಮಲ್ಲಪ್ಪನ ಕರಾರನ್ನು ಒಪ್ಪಿಕೊಂಡು ಸಾಲ ಪಡೆದುಕೊಂಡು ತಂದು ಜಂಮನ ಮಗನ ಮದುವೆ ಮಾಡಿದರು ಹಾಗೂ ದಾಸೋಹ ಕಾರ್ಯವನ್ನು ಮುಂದುವರೆಸಿದರು. ಹೀಗೆ ಕಾಲ ಕಳೆದು ಹೋಯಿತು. ಮುಂದೊಂದು ದಿನ ಗಿರಿಮಲ್ಲಪ್ಪ ತನ್ನ ಸಾಲವನ್ನು ಪಡೆಯಲು ರಾಮಜಿ ದಾದನನ್ನು ಶರಣಬಸಪ್ಪರಲ್ಲಿಗೆ ಕಳುಹಿಸಿದನು. ರಾಮಜಿ ದಾದನು ಶರಣಬಸಪ್ಪರಲ್ಲಿಗೆ ಬಂದು ಸಾಲ ಕೇಳಲಾರಂಬಿಸಿದನು. ಆಗ ಶರಣಬಸಪ್ಪನವರು ಸಾಲ ಮರಳಿ ಕೊಡುವ ಪರಸ್ಥಿತಿಯಲ್ಲಿ ಇರಲಿಲ್ಲ. ಆದರೂ ಕೇಳದ ದಾದ ನೀವು ಸಾಲ ಕೊಡುವವರೆಗೆ ನಾನು ಇಲ್ಲಿಂದ ಕದಡುವದಿಲ್ಲ ಎಂದು ಹೇಳಿ ಅಲ್ಲಿಯೇ ಕುಳಿತು ಬಿಟ್ಟನು. ಶಿವನು ಮೊರೆ ಹೋದ ಶರಣಬಸಪ್ಪನವರು ಇವನ ಅಛಲ ಭಕ್ತಿಗೆ ಮೊರೆಹೋಗಿ ಶಿವನು ಜಂಗಮನ ವೇಶ ಧರಿಸಿ ಗಿರಿಮಲ್ಲಪ್ಪನಲ್ಲಿಗೆ ಬಂದು ಆತ ತೆಗೆದುಕೊಂಡಿದ ಸಾಲವನ್ನು ಮರಳಿಸಿ ಕ್ಷಣದಲ್ಲಿ ಅದೃಶ್ಯಗೊಂಡನು. ಈ ಘಟನೆಯಿಂದ ಆಘಾತಗೊಳಗಾದ ಗಿರಿಮಲ್ಲಪ್ಪ ಇತ್ತ ಶರಣಬಸಪ್ಪ ಬರೆದು ಕೊಟ್ಟ ಸಾಲ ಪತ್ರ ಹಾಗೆ ಇದೆ. ಸಾಲ ಮಾತ್ರ ಪಾವತಿಸಿದ್ದಾರೆ ಎಂದು ಮನಗಂಡ ಇವನು. ಇದು ಶರಣಬಸಪ್ಪನವರ ಅಛಲ ಭಕ್ತಿಯ ಫಲವೆಂದು ಅರಿತು ಗಿರಿಮಲ್ಲಪ್ಪನು ಆ ಸಾಲ ಪತ್ರವನ್ನು ತೆಗೆದುಕೊಂಡು ಬಂದು ಶರಣಬಸಪ್ಪನವರಲ್ಲಿ ಪರಿ ಪರಿಯಾಗಿ ನಡೆದ ಘಟನೆಯನ್ನು ವಿವರಿಸಿದನು. ಇದನ್ನು ಅರಿತ ರಾಮಜಿ ದಾದ ಅವರು ಶರಣಬಸಪ್ಪನವರ ಶಕ್ತಿಯನ್ನು ಅರಿತು ಅವರ ದಾಸಾನುದಾಸನಾಗಿ ಅವರಲ್ಲಿಯೇ ಉಳಿದುಕೊಂಡನು.

ಬಂದೇನವಾಜರ ದರಗಾದಲ್ಲಿ ಶರಣರು:

ಬಂದೇನವಾಜರ ದರಗಾ ಪ್ರತಿಷ್ಠೆ ಪ್ರತಿಭೆಗಳಿಂದ ಸುತ್ತಿನ ಮುಸಲ್ಮಾನ ಬಂಧುಗಳ ಆಕರ್ಷಣೆಯ ಪವಿತ್ರ ಸ್ಥಳವಾಗಿರುವದು. ಸುತ್ತಲಿನ ಮುಸಲ್ಮಾನ ಬಂಧುಗಳ ಆಕರ್ಷಣೆಯ ಪವಿತ್ರ ಸ್ಥಳವಾಗಿರುವದು. ಅನ್ಯ ಮತದವರು ಸಹ ಬಂದೇನವಾಜರ ದರಗಾಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದರು. ಜಾತಿ, ಮತ, ಪಂಥ, ಕುಲ ಭೇದವನ್ನೇ ಮರೆತು ಸರ್ವ ಮತದವರೂ ಅನನ್ಯ ಭಕ್ತಿ ಶ್ರದ್ಧಾಭಾವನೆಗಳಿಂದ ನಡೆದುಕೊಳ್ಳುತ್ತಿದ್ದರು. ಪ್ರತಿವರ್ಷದ ಪದ್ಧತಿಯಂತೆ ಬಂದೇನವಾಜರ ಉರುಸಿನ ಉತ್ಸವ ಜರಗುವದು. ಬಂದೇನವಾಜರ ದರಗಾದ ಆ ವೈಭವ, ಆ ಸಡಗರದ ಉತ್ಸವ ನೋಡಲೆಂದು ದೂರ ದೂರದ ನೆರೆ ರಾಜ್ಯಗಳಿಂದ ಭಕ್ತರು ಬಂದು ಸೇರಿದರು. ಆ ಸಮೂಹವನ್ನು ನೋಡಿದರೆ ಲಕ್ಷಕ್ಕೂ ಮಿಕ್ಕಿದ ಭಕ್ತರು ಕಿಕ್ಕಿರಿದು ಸೇರಿ ಉತ್ಸವದಲ್ಲಿ ಭಾಗವಹಿಸುವದಕ್ಕಾಗಿ ಶರಣಬಸವೇಶ್ವರರು ತಮ್ಮ ನೆಚ್ಚಿನ ಭಕ್ತ ಬಳಗವನ್ನು ಕರೆದುಕೊಂಡು ದರಗಾದತ್ತ ಬಂದರು[೨೨೭].

ಶರಣಬಸವೇಶ್ವರರು ದರಗಾದ ಹೆಬ್ಬಾಗಿಲಿಗೆ ಬರುತ್ತಿರಲು, ಜಾತಿ ಮತ್ಸರದ ಮುಲ್ಲಾಗಳು ಒಳಗೆ ಬಂದೇನವಾಜನ ಗದ್ದುಗೆಗೆ ಗಂಧಲೇಪನ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಮುಖ್ಯಸ್ಥನೊಬ್ಬನು ಶರಣಬಸವೇಶ್ವರರು ಒಳಗೆ ಬರುತ್ತಿರುವದನ್ನು ಕಂಡು ಮುಂದಾಗಿ ಹೋಗಿ ಶರಣರು ಒಳಗೆ ಗದ್ದುಗೆಯ ಬಳಿಯಲ್ಲಿ ಬರಬಾರದೆಂದು ಬಾಗಿಲದತ್ತ ಸರ ಸರನೇ ನಡೆದು ಕದವ ನಿಕ್ಕಿ ತನ್ ಜಾತಿ ಮತ್ಸರದ ಪ್ರದರ್ಶನಗೈದು, ಗಂಧಲೇಪ ಕಾರ್ಯದಲ್ಲಿ ತೊಡಗಿದನು. ಆಗ ಶರಣರು ಹೆಬ್ಬಾಗಿಲ ಬಳಿಯಲ್ಲಿ ಭಕ್ತರೊಡಗೂಡಿ ನಿಂತು ನಸು ನಗುತ್ತ, ಏಕಯ್ಯ ಬಂದೇನವಾಜ ಮಬ್ಬು ಮುಸುಕಿತೇ, ಜಾತಿ ದ್ವೇಷದ ಝಳ ನಿನಗೂ ತಾಕಿದೆಯೋ, ಹಿರಿ-ಕಿರಿದು ಭಾವನೆ ಆವರಿಸತೆ, ದ್ವೇಷಸೂಯೆಗಳ ಹೊಟ್ಟುರಿಯಿಂದ ಕಣ್ಣು ಮುಚ್ಚಿದೆ ಏನು ? ಎಂದು ನುಡಿದರು.

ಶರಣರ ಈ ಮಾತಿನಿಂದ ಮುಚ್ಚಿದ ಕದಗಳು ತನ್ನಿಂದ ತಾನೆ ತೆರೆದು ಶರಣರು ಒಳಗೆ ನಡೆದರು ಒಳಗಡೆ ಗಂಧದ ಲೆಪನ ಕಾರ್ಯ ನಡೆಯುತ್ತಲೆ ಇತ್ತು ಆದರೆ ಒಂದು ಕಡೆ ಗಂಧ ಲೇಪನ ಆಗಿರಲಿಲ್ಲ ಅದನ್ನು ಶರಣರು ಒಬ್ಬ ಮುಸ್ಲಿಂ ಪುರುಷನನ್ನು ತೊರಿಸಿ ಲೆಪಿಸಿದರು. ಯಾವ ವ್ಯಕ್ತಿ ಮುಚ್ಚಿದ ಕದಗಳು ಜೊತೆಗೆ ಭದ್ರವಾಗಿ ಅಗಳಿ ಹಾಕಿದನ್ನು ನೆನಪಿಸಿಕೊಂಡನು. ಶರಣರ ಈ ಮಹಾತ್ಮೆಯನ್ನು ಕಂಡು ಮುಸ್ಲಿಂ ಭಾಂದವರು ಶರಣರನ್ನು ಹಾರ ತುರಾಯಿಗಳಿಂದ ಅವರನ್ನು ಸನ್ಮಾನಿಸಿದರು. ಜೊತೆಗೆ ಮುಸ್ಲಿಂ ಭಾಂದವರು ಶರಣರ ನಿಲಯದಿಂದ ಶ್ರೀಗಂಧ ತಂದು ಬಂದೇ ನವಾಜರ ಗದ್ದುಗೆಗೆ ತಂದು ಲೇಪನ ಕಾರ್ಯಕ್ಕೆ ಬಳಸಿಕೊಳ್ಳುತ್ತೇವೆಂದು ಮಾತುಕೊಟ್ಟು ಸಡಗರದಿಂದ ಶರಣಬಸವೇಶ್ವರರನ್ನು ಹಾಡಿ ಹೊಗಳಿ ಬೀಳ್ಕೊಟ್ಟರು[೨೭೮].

ಕಲಬುರಗಿಯ ಖಾಜಾ ಬಂದೇನವಾಜರು

ಖಾಜಾ ಬಂದೇನವಾಜರ ಜನನ:

ಇವರ ಜನ್ಮವು ೭೨೧/೧೩೨೧ ರಲ್ಲಿ ದೆಹಲಿಯಲ್ಲಿ ಆಯಿತು. ಇವರ ತಂದೆಯವರಾಗಿದ್ದ ಸಯ್ಯದ್ ಯೂಸುಫ್ ಹುಸೇನಿ ಉರ್ಫ್ ಸಯ್ಯದ್ ರಾಜ ಇವರು ಖ್ವಾಜಾ ನಿಜಾಮುದ್ದೀನ್ ಔಲಿಯಾ ಇವರ ಭಕ್ತರಾಗಿದ್ದರು. ಹಜ್ರತ್ ಖ್ವಾಜಾ ಬಂದೇನವಾಜ್ ಗೇಸುದರಾಜರು ನಾಲ್ಕನೇ ವಯಸ್ಸಿನಲ್ಲಿ ಸುಲ್ತಾನ್ ಮಹ್ಮದ್ ತುಘಲಕ್ನ ಆಳ್ವಿಕೆಯಲ್ಲಿ ಅವನ ರಾಜಧಾನಿ ದೆಹಲಿಯಿಂದ ದೇವಗಿರಿ ಸ್ಥಳಾಂತರಗೊಂಡ ಹಿನ್ನಲೆಯಲ್ಲಿ ದೇವಗಿರಿಗೆ ಬಂದು ನೆಲೆಸಿದರು. ಗೇಸುದರಾಜ್ರು ಹತ್ತು ವರ್ಷದವರಿದ್ದಾಗ ಅವರ ತಂದೆಯವರ ನಿಧನವಾಯಿತು. ಇವರ ಮಾವನವರಾದ ಸಯ್ಯದ್ ಇಬ್ರಾಹಿಂ ಮಸ್ತಫಯವರು ದೌಲತಾಬಾದಿನ ಒಂದು ಪ್ರಾಂತ್ರಯ ಸುಬೇದಾರರಾಗಿದ್ದರು. ತಂದೆಯ ನಿಧನದ ನಂತರ. ಇವರ ತಾಯಿಯವರಿಗೆ ಸೋದರನ ಜತೆ ಮನಸ್ತಾಪ ಉಂಟಾದ ಕಾರಣ, ಇದರಿಮದ ದು:ಖಿತಗೊಂಡು ದೌಲತಾಬಾದಿನ ವಾಸ್ತವ್ಯ ತ್ಯಜೀಸಿ ಮಕ್ಕಳ ಜತೆ ದೆಹಲಿಗೆ ವಾಪಸ್ಸಾದರು. ದೆಹಲಿ ತಲುಪಿದ ನಂತರ ಹಜ್ರತ್ ಗೇಸುದರಾಜ್ ಅವರು ಸುಲ್ತಾನ್ ಖುತುಬುದ್ದೀನ್ ಜಾಮೀಯಾ ಮಸೀದೆಗೆ ಶುಕ್ರವಾದ ಪ್ರರ್ಥನೆಗಾಗಿ ಹೋಗಿದ್ದರು. ಇಲ್ಲ ಅವರು ನಾಸಿರುದ್ದೀನ್ ಚಿರಾಗ್ ದೆಹಲ್ವಿಯವರ ಕಾಂತಿಯುಕ್ತ ವ್ಯಕ್ತಿತ್ವದಿಮದ ಪ್ರಭಾವಿತರಾಗಿ ೧೬ ರಜ್ಜಬ್ ೭೩೬ ರಲ್ಲಿ ತಮ್ಮ ಅಣ್ಣ ಸಯ್ಯದ್ ಚಂದನ್ ಜೊತೆ ಹಜ್ರತ್ ನಾಸೀರುದ್ದೀನ್ ಚಿರಾಗ್ ದೆಹಲ್ವಿಯರ ಹಸ್ತದ ಮೇಲೆ ದೀಕ್ಷೆ (ಬಯತ್) ಪಡೆದರು.[೨೭೯]

ಬಂದೇನವಾಜರ ದಾಂಪತ್ಯ ಜೀವನ:

ಸಯ್ಯದ್ ಮಹ್ಮದ್ ಹುಸೇನಿ ಗೇಸುದರಾಜ್‌ರವರು ತಮ್ಮ ನಲವತ್ತನೆ ವಯಸ್ಸಿನಲ್ಲಿ ಸಯ್ಯದ್ ಅಹ್ಮದ್ ಬಿನ್ ಮೌಲಾನಾ ಜಮಾಲುದ್ದೀನ್ ಮಗ್ರೀಬಿಯವರ ಪುತ್ರಿ ಬೀಬೀ ರಜಾ ಖಾತೂನ್ ಹಬಾಲಾ ಅವರನ್ನು ನಿಕಾ: ಮೂಲಕ ಪತ್ನಿಯಾಗಿ ಸ್ವೀಕರಿಸಿದ್ದರು. ಇವರಿಂದ ಗೇಸುದರಾಜ್ರಿಗೆ ಇಬ್ಬರು ಪುತ್ರರಾದ ಹಜ್ರತ್ ಸಯ್ಯದ್ ಹುಸೇನಿ ಉರ್ಫ್ ಸಯ್ಯದ್ ಅಜಗರ್ ಹುಸೇನಿಯರು ಹಾಗೂ ಮೂವರು ಪುತ್ರಿಯರು ಜನಿಸಿದರು. ಪುತ್ರರಿಬ್ಬರೂ ಪ್ರಚಂಡ ಜ್ಞಾನಿಗಳಾಗಿದ್ದರು.[೨೮೦]

ಬಂದೇನವಾಜರು ಕಂಡಂತೆ ಗುಲಬರ್ಗಾ:

ಗುಲಬರ್ಗಾ ಎಂಬ ಹೆಸರಿನ ನಂಟು ಗೇಸುದರಾಜ್ ಅವರ ಬದುಕಿನೊಂದಿಗೆ ಹೇಗೆ ಸಂಬಂಧ ಹೊಂದಿದೆ ಎಂಬುದನ್ನು ಗೇಸುದರಾಜ್‌ರ ಅನುಯಾಯಿಯೊಬ್ಬರಿಂದ ಕೇಳಿದ್ದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಇದಕ್ಕೆ ಯಾವುದೆ ಐತಿಹಾಸಿಕ ಆಧಾರಗಳು ಇಲ್ಲವೆಂದು ಸ್ಪಷ್ಟಪಡಿಸುತ್ತಿದ್ದೇನೆ. ಬಹಮನಿ ಸಾಮ್ರಜ್ಯದ ಸಂಸ್ಥಾಪಕನಾದ ಬಾದಶಹಾ ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನಿ ತನ್ನ ಪೀಠರೋಹಣದ ಬಳಿಕ, ಈಗಿನ ಗುಲಬರ್ಗಾವನ್ನು (ಅ)ಹಸನಾಬಾದ ಎಂದು ನಾಮಕರಣ ಮಾಡಿ, ಗುಲಬರ್ಗಾ ಹಸನಾಬದನ್ನು ತನ್ನ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಿ, ಅದು ತನ್ನ ಸೌಭಾಗ್ಯ ಹಾಗೂ ಶ್ರೇಯೋಭಿವೃದ್ಧಿ ಸ್ಥಾನವೆಂದು ಭಾವಿಸಿದ್ದನು. ಆದರೆ ಫೇರೋಜ್ ಶಾಹನ ಆದಮಂತ್ರಣದ ಮೇರೆಗೆ ಗುಲಬರ್ಗಾದ ಹೊರವಲಯದಲ್ಲಿ ಬಂದು ನೆಲೆಸಿದಾಗ, ಸೂಫಿ ಚಿಂತನೆಯ ಗುಶನ್ (ತೋಟ)ವನ್ನಾಗಿಸಿದ ಜುನೈದಿ ಪರಂಪರೆಯನ್ನು ಸ್ಮರಿಸಿ, ಅದರ ಗುಲ್ ನ ಪುಷ್ಪ ಸುಗಂಧ ಹಸನಾಬಾದ-ಗುಲಬರ್ಗಾ ಆಗಿದೆ.

ಇದು ಸಮಸ್ತ ದಖನ್ನಿನಲ್ಲಿ ಪಸರಿಸಿದೆಯೆಂದು ಜುನೈದಿ ಸೂಫಿ ಪರಂಪರೆಯ ಶೇಖ್ ಮಹ್ಮದ್ ರುಕ್ನುದ್ದೀನ್ (೬೭೦//೧೨೭೧–೧೩೮೦) ದರ್ಗಾ ಪರಿಸರಕ್ಕ ಈ ಪ್ರದೇಶ ಸೂಫಿ ಚಿಂತನೆಯ ಗುಲಬರ್ಗಾ ಎಂದು ಉದ್ಗರಿಸದರೆಂದು ಹೇಳಲಾಗುತ್ತಿದೆ. ಆಗ (ಅ) ಹಸನಾಬಾದ-ಗುಲಬರ್ಗಾವಾಗಿದ್ದ, ಗುಲಬರ್ಗಾವು ಶಾಶ್ವತವಾಗಿ ಗುಲಬರ್ಗಾ ಎಂದು ಪ್ರಚಲಿತವಾಯಿತು. ಸೂಫಿ ಚಿಂತನೆಯಲ್ಲಿ ಗುಲ್, ಗುಲಶನ್, ಹಾಗೂ ಗುಲಬರ್ಗಾಗಳಿಗೆ ವಿಶೇಷ ಮಹತ್ವವಿದೆ.[೨೮೧]

ಖಾನ್‌ಖಾ ಹಾಗೂ ಜಮಾತ್ ಖಾನಾಗಳು:

ಖಾನ್ ಖಾ ಎಂದರೆ ಸೂಫಿಕೇಂದ್ರಗಳು. ಒಬ್ಬ ಧನಿಕ ಕ್ರೈಸ್ತನು ಬೇಟೆಯಾಡಲು ಹೋಗುತ್ತಿದ್ದನು. ದಾರಿಯಲ್ಲಿ ಇಬ್ಬರು ದರ್ವೇಷರನ್ನು ಕಂಡರು. ಇಬ್ಬರು ಅತೀ ಪ್ರೀತಿಯಿಂದ ಭೇಟಿಯಾಗಿ, ನೆಲದ ಮೇಲೆ ಕುಳಿತರು, ಇಬ್ಬರೂ ತಮ್ಮ ಬಳಿ ಇದ್ದ ಊಟವನ್ನು ಪರಸ್ಪರ ಹಂಚಿಕೊಂಡು, ಅತಿ ಪ್ರೇಮ ಭಾವದಿಂದ ಭೋಜನ ಮಾಡಿದರು. ವಿದಾಯದ ಸಮಯದ ಬಂದಾಗ ಅತೀವ ಪ್ರೀತಿಗೌರವದಿಂದ ಬೇರೆಯಾಗಿ ಹೊರಟರು. ಅವರ ಅನನ್ಯ ಪ್ರೇಮಭಾವದಿಂದ ಆ ಕ್ರೈಸ್ತ ಧನಿಕನು ಪ್ರಭಾವಿತನಾದನು. ಒಬ್ಬ ದರ್ವೇಶನನ್ನು ಕರೆದು, ಆ ಇನ್ನೊಬ್ಬ ದರ್ವೇಶ್

ಯಾರೆಂದು ಕೇಳಿದನು. ಅವನು ತನಗೆ ಗೊತ್ತಿಲ್ಲವೆಂದು ನುಡಿದನು. ಆ ಧನಿಕನು ನಿನಗೆ ಅವನೇನು ಆಗಬೇಕೆಂದು ಕೇಳೀದನು. ದರ್ವೇಶನೂ ಯಾವ ಸಂಬಂಧವನ್ನು ಹೊಂದಿಲ್ಲವೆಂದು ನುಡಿದನು. ಆಗ ಅವನು ಅಪರಿಚಿತನ ಜೊತೆ ಈ ರೀತಿಯ ಪ್ರೇಮ ಗೌರವ ಏಕೆಂದು ಕೇಳಿದನು. ಆಗ ಆ ದರ್ವೇಶನು ನುಡಿದನು ಇದು ನಮ್ಮ ನಡೆಯಾಗಿದೆ ಎಂದು ನುಡೆದನು. ಇಂತಹ ಸರ್ವ ಪ್ರೇಮಭಾವದ ಮತವೇ ಸೂಫಿ ಮತವಾಗಿದೆ.

ಇವರ ಪ್ರೇಮಭಾವವನ್ನು ಕಂಡ ಆ ಕ್ರೈಸ್ತ ಧನಿಕನ ಅತ್ಯಂತ ಪ್ರಭಾವಿತನಾಗಿ, ನೀವು ಎಲ್ಲಿ ವಾಸಿಸುತ್ತೀರಿ ಎಂದು ವಿಚಾರಿಸಿದನು ಆಗ ಆ ದರ್ವೇಷ್ ನಮಗೆ ಯಾವುದೇ ಮನೆ ಇಲ್ಲ ಎಂದು ನುಡಿದನು ಇದನ್ನು ಕೇಳಿದ ಕ್ರೈಸ್ತ ಧನಿಕನಿಗೆ ಆ ದರ್ವೇಷ್‌ಗಾಗಿ ಒಂದು ವಾಸದ ಮನೆ ಕಟ್ಟಿಸಿದನು. ಅದೇ ಖಾನ್‌ಖಾ ಅರ್ಥಾತ್ ಸೂಫಮಠ ಎಂದು ಕರೆಯಲ್ಪಟ್ಟಿತು. ಹೀಗಾಗಿ ಸೂಫಿ ಸಂಪ್ರದಾಯದ ಒಂದು ಅಂಗವಾಗಿರುವ ಖಾನ್‌ಖಾವು ಪ್ರಥಮವಾಗಿ ಒಬ್ಬ ಕ್ರೈಸ್ತನಿಂದ ನಿರ್ಮಿಸಲ್ಪಟ್ಟಿತು.

ಎಲ್ಲ ಸೂಫಿ ಪರಂಪರೆಯ ಸೂಫಿಗಳು ತಮ್ಮ ಖಾನ್‌ಖಾಗಳನ್ನು ನಿರ್ದಿಷ್ಟ ಪ್ರದೇಶಗಳಲ್ಲಿ ಸ್ಥಾಪಿಸಿ, ಅವು ಕೇವಲ ಸೂಫಿ ಗುರುಗಳ ಹಾಗೂ ಅನುಯಾಯಿಗಳ ಆಶ್ರಯ ತಾಣಗಳಾಗಿರದೆ,, ಜ್ಞಾನಪ್ರಸಾರ ಅಥವಾ ತಮ್ಮ ತಮ್ಮ ವಿಶಿಷ್ಟ ಪರಂಪರೆಗಳ ಚಿಂತನೆಯ ಪ್ರಸಾರ ಹಾಗೂ ಕಲಿಕೆಯ ಸ್ಥಾನಗಳ ರೂಪ ಪಡೆದು, ಅಧ್ಯಾತ್ಮಿಕ ಚಿಂತನೆಯ ಕೇಂದ್ರವಾಗಿದ್ದವು. ಪ್ರಾರಂಭದಲ್ಲಿ ಉತ್ತರ ಭಾರತದಲ್ಲಿ ತುಂಬಾ ವ್ಯವಸ್ಥಿತವಾದ ಮುಸ್ಲಿಂ ಸುಲ್ತಾನರ ಸಾಮ್ರಾಜ್ಯವಿದ್ದ ಕಾರಣ, ಅಷ್ಟೇ ವ್ಯವಸ್ಥಿತ ಸೂಫಿ ಸಮೂಹವು ಇತ್ತು. ಈ ಸುವ್ಯವಸ್ಥಿತ ಸೂಫಿ ಸಮೂಹವು ಅತ್ಯಧಿಕವಾಗಿ ತಮ್ಮ ವ್ಯವಸ್ಥಿತವಾದ ಖಾನ್‌ಖಾ ಗಳ ಜಾಲವನ್ನೇ ಹೊಂದಿತು. ತಮ್ಮ ಪರಂಪರೆಯ ಮೂಲ ಸಿದ್ಧಾಂತಕ್ಕೆ ಅನುರೂಪವಾಗಿ ಸುಹರ್ ವರ್ದಿಯಾ ಪರಂಪರೆ ಅಧಿಕವಾಗಿ ಹಾಗೂ ಜುನ್ಯೆದಿಯಾ ಹಾಗೂ ಚಿಶ್ತಿಯಾ ಪರಂಪರೆಗಳು ಸ್ವಲ್ಪಮಟ್ಟಿಗೆ ಪ್ರಾರಂಭದಲ್ಲಿ ತಮ್ಮ ಖಾನ್‌ಖಾಗಳ ನಿರ್ವಹಣೆಗೆ ಸಾಮ್ರಾಜ್ಯದಿಂದ ದೂರವಿರುವ ನಿಲುವನ್ನು ತಾಳಿದ್ದರು. ಈ ಹಿನ್ನೆಲೆಯಲ್ಲಿ ದೆಹಲಿಯ ಶೇಖ್ ನಿಜಾಮುದ್ದೀನ್‌ರವರ ಔಲಿಯಾ ಅವರ ಖಾನ್‌ಖಾ ಹಾಗೂ ನಸೀರುದ್ದಿನ್ ಚಿರಾಗ್ ದೆಹಲ್ವಿಯವರ ಖಾನ್‌ಖಾಗಳು ಜ್ಞಾನ ಪ್ರಸಾರದಲ್ಲಿ, ತಮ್ಮ ಸಿದ್ಧಾಂತ ಪ್ರಸಾರ ಹಾಗೂ ಆತಿಥ್ಯದಲ್ಲಿ ಜತೆಜತೆಗೆ ಜನಸಾಮಾನ್ಯರ ಜೊತೆ ಮುಕ್ತವಾಗಿ ಬೆರೆಯುವ ಕೇಂದ್ರಗಳಾಗಿದ್ದು, ವಿಶಾಲ ದೃಷ್ಟಿಕೋನದ ಸ್ವರೂಪ ಪಡೆದಿದ್ದವು.[೨೮೨] ಈ ಖಾನ್‌ಖಾಗಳು ಕೇವಲ ಸ್ಥಳೀಯರಿಗೆ ಮಾತ್ರ ಸೀಮಿತವಾಗಿರದೆ ಇಡೇ ವಿಶ್ವದ ಇತರ ಕೇಂದ್ರಗಳ ಜತೆ ಸಂಬಂಧ ಹೊದಿ, ಜ್ಞಾನ, ಕಲೆ, ಸಾಹಿತ್ಯ ಹಾಗೂ ತಾತ್ವಿಕ ಭಿನ್ನಮತಗಳಿದ್ದರೂ, ಆಧ್ಯಾತ್ಮದ ಪರಸ್ಪರ ವಿನಿಮಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದ್ದು ಚರಿತ್ರಾರ್ಹವಾಗಿದೆ.

ಸ್ಥಳೀಯವಾಗಿಯಂತೂ ಈ ಖಾನ್‌ಖಾಗಳು ಜನಸಾಮಾನ್ಯರ ಧಾರ್ಮಿಕ ಶ್ರದ್ದೆಯ ಕೇಂದ್ರಗಳಾದ ಹಿನ್ನಲೆಯಲ್ಲಿ ಸದಾ ಅನುಯಾಯಿ ಸಮುದಾಯದಿಂದ ತುಂಬಿರುತ್ತಿದ್ದವು. ಆದರೆ ಇದಕ್ಕಿಂತಲೂ ಮಿಗಿಲಾಗಿ ಆ ಕಾಲದ ಬಾದಶಹಾರು ಈ ಖಾನ್‌ಖಾಗಳಿಗೆ ಭೇಟಿ ನೀಡುವುದು, ಆಧ್ಯಾತ್ಮಿಕವಾಗಿ ತಮ್ಮ ಸಾಮ್ರಾಜ್ಯಕ್ಕೆ ಶುಭಕಾರಿಯೆಂದು ಭಾವಿಸುತ್ತಿದ್ದರು. ಅವು ಅಪಾರ ಜನ ಸಮುದಾಯದ ಧಾರ್ಮಿಕ ಶ್ರದ್ದೆ ಹಾಗೂ ಮನ್ನಣೆ ಸ್ಥಾನ ಪಡೆದಿದ್ದ ಕಿಆರಣ, ಜನಸಾಮಾನ್ಯರ ವಿಶ್ವಾಸ ಪ್ರಾಪ್ತಿಗಾಗಿ ರಾಜಕೀಯ ಉದ್ದೇಶಗಳಿಗಾಗಿಯೂ ಬಾದಶಹಾರು ಈ

ಖಾನ್‌ಖಾಗಳಿಗೆ ಸ್ವತಃ ಬಂದು, ಸೂಫಿಗಳ ಆರ್ಶೀವಾದ ಪಡೆಯುಇವಂತಾಗಿತ್ತು. ಈ ಹಿನ್ನಲೆಯಲ್ಲಿ ನಿಜಾಮುದ್ದೀನ್ ಔಲಿಯಾ ಅವರು ಖಾನ್‌ಖಾಗೆ ಸುಲ್ತಾನ್ ಮಹ್ಮದ್ ಬಿನ್ ತುಘಲಕ್‌ನ ಭೇಟಿಯನ್ನು ಉಲ್ಲೇಖಿಸಬಹುದು.

ಬಂದೇನವಾಜರ ಪವಾಡಗಳು:

೧. ಶೇಖ್ ಕೋಚಕ್ ಅವರ ತಮ್ಮ ಮನೆಯ ಬಾಗಿಲು ಎಷ್ಟು ಚಿಕ್ಕದಿರಿಸಿಕೊಂಡಿದ್ದರಿಂದ, ಬರುವ ಪ್ರತಿಯೊಬ್ಬರು ತುಂಬಾ ಬಗ್ಗಿ ಬರಬೇಕಾಗಿತ್ತು. ಬಗ್ಗ ಹೊಗಬೇಕಾಗಿತ್ತು. ಒಂದು ಸಲ ಗೇಸುದರಾಜರು ಶೇಖ್ ಕೋಚಕ್ರನ್ನು ಭೇಟಿಯಾಗಲು ಹೋದಾಗ ಬಾಗಿಲು ತನ್ನಿಂದ ತಾನೆ ಎತ್ತರವಾಯಿತು. ಶೇಖ್ ಕೋಚಕ್‌ರೂ ಗೇಸುದರಾಜರ ಉನ್ನತವಾದ ಹಂತವನ್ನು ಕಂಡು ಉದ್ಧರಿಸಿದರು- ಸಯ್ಯದ್ ಮಹ್ಮದರಿಗೆ ಈ ಬಾಗಿಲೂ ಚಿಕ್ಕದು. ೨. ಮಿಯಾ ಕಮ್ಮುವನ್ನು ಸುಲ್ತಾನನು ಕೊಲೆಮಾಡಿಸಿದ್ದನು. ಹಜ್ರತ್ ಗೇಸುದರಾಜರು ಸಮೀಪ ಹೋಗಿ ಅವನ ಗಾಯದ ಮೇಲೆ ಕೈ ಇಟ್ಟಾಗ, ಅವನು ಎದ್ದು ಕುಳಿತನು. ಯಾವುದೇ ಗೊಂದಲವಾಗದಿರಲೆಂದು ಗೇಸುದರಾಜರು ಅವನನ್ನು ಮತ್ತೆ ಮಲಗಿಸಿದರು.

೩. ಹಜ್ರತ್ ಗೇಸುದರಾಜರು ಐದು ಹೊತ್ತಿನ ಫರ್ಜ್(ಕಡ್ಡಾಯ) ನಮಾಜನ್ನು ಮಕ್ಕಾದಲ್ಲಿ ಮಾಡಿದ್ದರು. ಮತ್ತೆ ಫರ್ಜ್ ನಮಾಜದ ವೇಶೆ ಖಾನ್‌ಖಾ ದಲ್ಲಿ ಹಾಜರಿತುತಿದ್ದರು.[೨೮೩] ಒಂದು ದಿನ ಒಬ್ಬ ವೃದ್ಧವ್ಯಕ್ತಿ ಹಜ್ರತ್ ರ ಬಳಿ ಬಂದನು. ಭೂಮಿಯನ್ನು ಚುಂಬಿಸಿದನು ಹಜ್ರತ್ ಗೇಸುದರಾಜರು ಅವನನ್ನು ಕುಳಿತಕೊಳ್ಳು ಸೂಚಿಸದರು. ಅವನು ಕುಳಿತುಕೊಂಡನು. ಆಗ ಅವನು ನಾನು ನಿಮ್ಮನ್ನು ಹಜ್ ಸಮಯದಲ್ಲಿ ಕಾಬಾದ ಪ್ರದಕ್ಷಿಣೆಯನ್ನು ಮಾಡುವುದನ್ನು ನೋಡಿದ್ದೇನೆ. ಹಜ್ರತ್ ಗೇಸುದರಾಜರು ನುಡಿದರು, ಹೇ ಸಂತಪುರಷನೇ ಕಾಬಾ ನಮ್ಮ ಬಾಗಿಲಿನ ಎದುರಿದೆ. ಪುರಷನೇ ಬಯಸುವಿಯಾದರೆ ನೋಡು, ಒಂದು ರೆಪ್ಪೆ ಅಲಿಗಾಡಿಸುವ ಸಮಯದಲ್ಲಿ ಪೂರ್ವದಿಮದ ಪಶ್ಚಿಮದವರೆಗೆ ಸುತ್ತಾಡಿ ಮತ್ತೆ ನಾವು ತಮ್ಮ ಸ್ವಸ್ಥಾನಕ್ಕೆ ಬರುತ್ತೇವೆ. ಆಗ ವೃದ್ಧನು ಕಣ್ಣು ರೆಪ್ಪೆ ಅಲುಗಾಡಿಸಿದನು. ಆಗ ತನ್ನನ್ನು ಮತ್ತು ಹಜ್ರತ್ ಗೇಸುದರಾಜರನ್ನು ಪೂರ್ವದಲ್ಲಿ ಕಮಡನು. ಮತ್ತೆ ಕಣ್ಣು ರೆಪ್ಪೆಯನ್ನು ಅಲುಗಾಡಿಸಲು ಸೂಚಿಸಿದರು. ಕಣ್ಣುರೆಪ್ಪೆ ಅಲುಗಾಡಿಸಿದಾಗ ತನ್ನನ್ನು ಮತ್ತೆ ಗೇಸುದರಾಜರನ್ನು ಪಶದಚಮದಲ್ಲಿ ಕಂಡನು. ತದನಂತರ ತನ್ನನ್ನು ಮತ್ತು ಗೇಸುದರಾಜರನ್ನು ಸ್ವಸ್ಥಾನದಲ್ಲಿ ಕಂಡನು. ಆ ವೃದ್ಧನು ಭೂಮಿಯನ್ನು ಚುಂಬಿಸಿ, ದೀಕ್ಷೆ ತೆಗೆದುಕೊಂಡು ಹೊರಟನು.

೪. ಸಯ್ಯದ್ ಮಹ್ಮದ್ ಹುಸೇನಿ ಗೇಸುದರಾಜರು ಹನ್ನೆರೆಡು ವರ್ಷದವರಾಗಿದ್ದಾಗ, ಅವರು ವುಜೂ (ಪ್ರಾರ್ಥನೆಯ ಮೊದಲು ನೀರಿನಿಂದ ಕೈಕಾಲು ತೊಳೆದುಕೊಳ್ಳುವುದು) ಮಾಡವ ಲೋಟೆಯ (ಮೂತಿಯ ಪಾತ್ರೆ) ಮೇಲೆ ಒಂದು ಕಾಗೆ ಬಹಿರ್ದೆಸೆ ಮಾಡಿತು. ಅವರು ಅದರ ಕಡೆ ದಿಟ್ಟಿಸಿ ನೋಡಿದರು. ಆಗ ಕಾಗೆಯ ತಲೆ, ಅದರ ಕಾಲುಗಳು ಹಾಗೂ ಒಂದೊಂದು ಅಂಗವು ಮೇರೆಯಾಗಿ ಅವರ ಮುಂದೆ ಬಿದ್ದವು. ಇದನ್ನು ಕಂಡು ಅಲ್ಲಿ ಇದ್ದ, ಹಜ್ರತ್ ಗೇಸುದರಾಜರ ತಾಯಿ ನುಡಿದರು. ನೀನು ಇದೇನು ಮಾಡಿದ್ದಿಯಾ?

ಆಗ ಗೇಸುದರಾಜರ ತಾಯಿ ನುಡಿದರು. ಅಮ್ಮಾ ಅದು ನನ್ನ ಜತೆ ಅಸಭ್ಯವಾಗಿ ವರ್ತಿಸಿತು. ಆಗ ಅವರ ತಾಯಿ ನುಡಿದರು. ಇತ್ತೀಚೆಗೆ ನೀನು ವಿಚಿತ್ರವಾಗಿ ವರ್ತಿಸುತ್ತಿದ್ದಿಯಾ ? ಯಾರಾದರೂ ನಿನ್ನ ಜತೆ ಅಸಭ್ಯವಾಗಿ ವರ್ತಿಸಿದರೆ,

ನೀನು ಹೀಗೆಯೇ ಮಾಡುವಿಯಾ? ಎಂದು ಪ್ರಶ್ನಿಸಿದರು. ಇದನ್ನು ಕೇಳಿ ಗೇಸುದರಾಜರು ಮಂದಹಾಸ ಬೀರಿದರು. ಆಗ ಮತ್ತೆ ಆಗು ಎಂದು ನುಡಿದರು. ಈ ಶಬ್ದಗಳು ಇನ್ನು ಬಾಯಿಯಿಂದ ಹೊರಬರುವಷ್ಟರಲ್ಲೇ ಅದು ಮತ್ತೆ ಅದಾಗು ಎಂದು ನುಡಿದಾಗ ತನ್ನ ಮೂಲ ರೂಪ ಪಡೆದು ಹಾರಿ ಹೋಯಿತು.

೫. ದೆಹಲಿಯಲ್ಲಿ ಒಬ್ಬ ರಾಜಕುಮಾರನಿದ್ದನು. ಹಜ್ರತ್ ಬಂದೇನವಾಜರ ಅನುಯಾಯಿಯಾದನು. ತದನಂತರ ಅವನು ಬೇರೆ ಸ್ಥಳಕ್ಕೆ ಹೊರಟು ಹೋದನು. ಅಲ್ಲಿ ಅವನು ಅನೈತಿಕ ಹಾಗೂ ಧರ್ಮ ವಿರೋಧಿ ಚಟುವಟಿಕೆಗಳಲ್ಲಿ ನಿರತನಾದನು. ಇದರಿಂದ ರೋಗಗ್ರಸ್ತನಾಗಿ ನಿಧನ ಹೊಂದಿದನು. ಅವನ ನಿಧನದ ವಾರ್ತೆಯನ್ನು ಜನರು ಬಂದೇನವಾಜರಿಗೆ ತಲುಪಿಸಿದರು. ಬಂದೇನವಾಜರು ನುಡಿದರು. ಅವನು ನನ್ನ ಸುಮ್ಮುಖದಲ್ಲಿ ಪ್ರಾಯಶ್ಚಿತ್ತ ಮಾಡಿ ಹೋಗಿದ್ದನು. ಆದರ ಮೇಲೆ ಏಕೆ ಸ್ಥಿರವಾಗಿರಲಿಲ್ಲ.[೨೮೪] ಬಂದೇನವಾಜರ ತಾಯಿಯವರು ನುಡಿದರು ನೀನು ಅವನಿಗೆ ಮೃತ್ಯುವಿನ ಶಾಪದ ಪ್ರಾರ್ಥನೆ ಯಾಕೆ ಮಾಡಿದೆ. ಬಂದೇನವಾಜರು ನುಡಿದರು ಅಮ್ಮಾ, ಅವನು ನನ್ನ ಸಮ್ಮುಖ ಪ್ರಾಯಶ್ಚಿತ್ತ ಮಾಡಿ ಹೋಗಿದ್ದನು. ಅಲ್ಲಿ ಹೋಗಿ ವಾಗ್ದಾನ ಮುರಿದನು. ಅವನು ತನ್ನ ವಾಗ್ದಾನದ ಬಗ್ಗೆ ಸ್ಥಿರವಾಗಿರದಿದ್ದರೆ ಆಗ ನಾನೇನೂ ಮಾಡಲಿ ತಾಯಿಯವರು ನುಡಿದರು ಹೇ ಸಯ್ಯದ್ ಮಹ್ಮದ್! ನಿನ್ನ ಅನುಯಾಯಿಯಾಗುವುದು ಹಾಗೂ ನಿನ್ನ ಶಾಪದಿಂದ ಸಾಯುವುದು, ಇದು ತೀರಾ ವಿಚಿತ್ರವಾಗಿದೆ. ಇದರ ನಂತರ ಬಂದೇನವಾಜರು ನುಡಿದರು, ಇಂದಿನಿಂದ ನಾನು ಇತರರಿಗೆ ಶಿಷ್ಯತ್ವದ ಬಯತ್ ನೀಡುವ ಕಾರ್ಯವನ್ನು ತ್ಯಜಿಸುತ್ತೇನೆ. ಹಜ್ರತ್ ಬಂದೇ ನವಾಜರು ಆರು ತಿಂಗಳು ಯಾರನ್ನೂ ಮುರೀದ್‌ನಾಗಿ ದೀಕ್ಷೆ ನೀಡಲಿಲ್ಲ ಹಾಗೂ ಸಮಾ ಗೋಷ್ಠಿಯಲ್ಲೂ ಭಾಗವಹಿಸಿಲಿಲ್ಲ.

೬. ದೆಹಲಿಯಿಂದ ಬರುವಾಗ ಹಜ್ರತ್ ಖ್ವಾಜಾ ಬಂದೇನವಾಜರು ಗುಲಬರ್ಗಾದ ಸಮೀಪ, ಚಿಂಚೋಳಿ ಎಂಬ ಗ್ರಾಮದಲ್ಲಿ ತಂಗಿ, ಗುಲಬರ್ಗಾ ಪ್ರವೇಶಿಸಲು ಬಯಸಿದರು. ಗುಲಬರ್ಗಾದ ಸಮಸ್ತ ಪ್ರತಿಷ್ಠಿತರು ಹಾಗೂ ಜನಸಾಮಾನ್ಯರು, ಕುಶಲಕರ್ಮಿಗಳು ಬಂದೇನವಾರನ್ನು ಭೇಟಿಯಾಗಲು ಧಾವಿಸಿದರು. ಅನೇಕ ಪ್ರತಿಷ್ಠಿತರು ಹಾಗೂ ಗಣ್ಯರು ಬಂದೇನವಾಜರ ಪಾದಕ್ಕೆ ಎರಗಿದರು. ಆದರೆ ಬಡಪಾಯಿ ಕುಲಕರ್ಮಿಗಳಿಗೆ ಅವರ ಸಮೀಪ ಹೋಗಿ ಪಾದಸ್ಪರ್ಶ ಮಾಡುವುದು ದುಸ್ಸಾಧ್ಯವಾಯಿತು. ಈ ಎಲ್ಲ ಜನರು ತಮ್ಮ ತಮ್ಮ ಗುಂಪುಗಳನ್ನು ನಿರ್ಮಿಸಿಕೊಂಡು, ಬಂದೇನವಾಜರು ಕುಳಿತಿರುವ ಪಲ್ಲಕ್ಕಿಯು ಅರಣ್ಯದ ಆ ದಾರಿಯಲ್ಲಿ ಸಾಗಿದರೆ, ಅವರ ಪಾದಸ್ಪರ್ಶ ಮಾಡಬಹುದೆಂಬ ಆಶಾಭಾವನೆಯಿಂದ ನಿಂತಿದ್ದರು. ಅವರಲ್ಲಿ ಒಂದು ಬಿಲ್ಲುಗಾರರ ಸಮೂಹವೂ ಇದ್ದಿತು. ಅವರೂ ಸಹ ಒಂದು ಕಡೆ ನಿಂತಿದ್ದರು. ಆ ಬಿಲ್ಲುಗಾರರ ಸಮೂಹದ ಮುಖ್ಯಸ್ಥ ಮೌಲಾನಾ ದಾವೂದ್ ಎಂಬವರಾಗಿದ್ದರು. ಮೌಲಾನಾ ದವೂದ್ ಅವರು ಮನದಲ್ಲಿ ಬಂದೇನವಾಜರ ಮುರೀದ್ ಆಗುವ ಇಚ್ಛೆಯಾಗುವ ಸ್ಥಿರನಿರ್ಧಾರ ಮಾಡಿದರು. ಅದೇ ಕ್ಷಣ ಬಂದೇನವಾಜರ ದೃಷ್ಟಿಯು ಅವರ ಗುಂಪಿನ ಮೇಲೆ ಬಿದ್ದಿತು. ಬಿಲ್ಲುಗಾರರ ಸಮೂಹವನ್ನು ಕಂಡು, ತಮ್ಮ ಕೈಯಿಂದ ಅವರ ಕಡೆ ಸಂಜ್ಞೆ ಮಾಡಿದರು ಆಗ ಬಿಲ್ಲುಗಾರರ ಸಮೂಹವು ಇವರ ಕಡೆ ತಮ್ಮ ಗಮನವನ್ನು ಕೇಂದ್ರೀಕರಿಸಿತು. ಬಂದೇನವಾಜರು ತಮ್ಮ ಸೇವಕನೊಬ್ಬನನ್ನು ಕರೆದು, ಆ ಸಮೂಹದಲ್ಲಿರುವ ಒಬ್ಬ ತರುಣನನ್ನು ತೋರಿಸಿ, ಅವನನ್ನು ತಾನು ಹೋದ ಕಡೆ, ಜತೆಯಲ್ಲಿ ಬರಲು ತಿಳಿಸುವಂತೆ ಹೇಳಿದರು. ತಾವು ಅವನನ್ನು ತಮ್ಮ ಮುರೀದ್ ನನ್ನಾಗಿ ಮಾಡಿಕೊಳ್ಳುವುದಾಗಿ ತಿಳಿಸಲು ಸೂಚಿಸಿದರು.

ಇದನ್ನು ಕೇಳಿದ ತಕ್ಷಣ ದಾವೂದ್ ತಮ್ಮ ತಲೆಯನ್ನು ಭೂಮಿಗೆ ಬಾಗಿಸಿದರು.[285] ಇದರಿಂದಾಗಿ ಬಂದೇನವಾಜರಲ್ಲಿ ಅವನ ಶ್ರದ್ಧೆ ದೃಢವಾಯಿತು. ಬಂದೇನವಾಜರು ವಿಶ್ರಾಮತಿ ಪಡೆದ ನಂತರ ಮೌಲಾನಾ ದಾವೂದ್ ಅವರ ಬಳಿ ಹೋದರು. ಬಂದೇನವಾಜರು ಅವರನ್ನು ತಮ್ಮ ಅನುಯಾಯಿಯಾಗಿ ಸ್ವೀಕರಿಸಿ, ಅದಕ್ಕೆ ಸಂಬಂಧಿಸಿದ ಸೂಫಿ ವಿಧಿವಿಧಾನ ಸಂಪೂರ್ಣಗೊಳಿಸಿದರು. ಈ ವಿಧಿವಿಧಾನದ ಕಾರ್ಯಚರಣೆಯ ಬಳಿಕ ಮಧ್ಯೆ ಉದ್ದನೆಯ ಗಡ್ಡಧಾರಿ, ಎತ್ತರದ ನಿಲುವಿನ, ನೀಳ ತಲೆಕೂದಲಿನ ಒಬ್ಬ ತೇಜ ಪುರಷ ಆಗಮಿಸಿದರು. ಅವರು ತಮ್ಮ ಕೈಯಿಂದು ನಾಲ್ಕು ಮಾವಿನ ಹಣ್ಣುಗಳನ್ನು ಮೌಲಾನಾ ದಾವೂದ್ ಕೈಯಲ್ಲಿಟ್ಟು ಇದನ್ನು ಹಜ್ರತ್ ಖ್ವಾಜಾ ಬಂದೇನವಾಜರಿಗೆ ನೀಡುವಂತೆ ನುಡಿದರು. ಮಾವಿನ ಋತುವಿರದ ಈ ಸಮಯದಲ್ಲಿ ಮಾವಿನ ಹಣ್ಣುಗಳು ಹೇಗೆ ಬಂದವು ಎಂದು ಮೌಲಾನಾ ದಾವೂದರು ಆಶ್ಚರ್ಯಚಕಿತರಾಗಿ, ಈ ಹಣ್ಣನ್ನು ಕೊಟ್ಟು ಹೋದವರು ಯಾರು? ಎಂಬುದು? ಅವರು ಆ ಹಣ್ಣನ್ನು ಒಯ್ದು, ಬಂದೇನವಾಜರ ಸಮಕ್ಷಮ ಇಟ್ಟರು. ಆಗ ಬಂದೇನವಾಜರು ನುಡಿದರು ಹೇ ದಾವೂದ್, ನಿಮಗೆ ತಿಳಿದಿದಿಯೇ? ಆ ವ್ಯಕ್ತಿ ಯಾರೆಂದು? ಅವರು ಖ್ವಾಜಾ ಖಿಜರ್ (ಅಮೃತಪಾನ ಮಾಡಿದ್ದರೆಂಬ ಪ್ರಸಿದ್ಧ ಪ್ರವಾದಿ) ಆಗಿದ್ದರು. ಅವರು ನಿಮ್ಮನ್ನು ಈ ರೂಪದಲ್ಲಿ ದರ್ಶನ ನೀಡಿ, ಮಾಯವಾದರು.

೭. ಸಯ್ಯದ್ ಮಹಮೂದ್ ವಾಯಿಜ್ ಎಂಬವವರು ಒಬ್ಬ ಪರಿಪೂರ್ಣ ಧಾರ್ಮಿಕ ಮಹಾ ಪುರಷರಾಗಿದ್ದರು, ವಾಯಿಜ್ ಎಂದರೆ ಪ್ರವಚನ ನೀಡುವವರು. ಅವರ ಪ್ರವಚನಗಳು ಜನರನ್ನು ಅತ್ಯಂತ ಪ್ರಭಾವಿತಗೊಳಿಸುತ್ತಿದ್ದವು. ಅವರ ಪ್ರವಚನ ಕೇಳಿ ಹಲವರು ತಮ್ಮ ಬಟ್ಟೆಗಳನ್ನು ಹರಿದುಕೊಳ್ಳುತ್ತಿದ್ದರು. ಕೆಲವರು ಪ್ರವಚನ ಗೋಷ್ಠಿಯಲ್ಲಿ ಪ್ರವಚನ ಕೇಳಿ ಪ್ರಜ್ಞಾಹೀನರಾಗಿದ್ದರೆ, ಇನ್ನೂ ಕೆಲವರು ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದರು. ಖ್ವಾಜಾ ಬಂದೇನವಾಜರ ಸಮ್ಮುಖ ಜನರು (ಸಿಜ್ದಾ) ಸಾಷ್ಟಾಂಗ ಪ್ರಣಾಮಮಾಡುತ್ತಿದರೆಂದು ಅವರು ಕೇಳಿ ತಿಳಿದುಕೊಂಡರು. ಇದನ್ನು ನೋಡಲು ಸಯ್ಯದ್ ಮಹಮೂದ್ ಹಜ್ರತ್ ಬಂದೇನವಾಜರ ಸಮ್ಮುಖ ಹಾಜರಾಗಿ, ಸ್ವಯಂ ಸಾಷ್ಟಾಂಗ ಪ್ರಣಾಮಮಾಡುತ್ತಾ ಆರಾಧ್ಯ (ಮಾಬೂದ್-ಅಂದರೆ ಆರಾಧನೆಗೆ) ಅರ್ಹನು ಎಂದು ನುಡಿಯ ಹತ್ತಿದರು. ಖ್ವಾಜಾ ಬಂದೇನವಾಜರು ತಡೆದು, ನುಡಿದರು ಖುಂದ್‌ಮೀರರೇ, ಈ ರೀತಿ ಮಾಡಬೇಡಿ, ದೇವರನ್ನು ಮಾತ್ರ ಆರಾಧ್ಯ ಎಂದು ನುಡಿಯಿರಿ ಎಂದು ಹೇಳೀದರು ಅವರು ಸ್ವಲ್ಪ ದಿನ ಬಂದೇನವಾಜರು ಸೂಫಿ ಸಾನಿಧ್ಯದಲ್ಲಿ ಉಳಿದರು. ಹೊರಡುವಾಗ ಖಿಲಾಫತ್ (ಉತ್ತಾರಾಧಿಕಾರತ್ವ) ನೀಡುವಂತೆ ಕೋರಿದರು ಹಜ್ರತ್ ಖ್ವಾಜಾ ಬಂದೇನವಾಜರು ಖಿಲಾಫತ್ ನೀಡಲು ನಿರಾಕರಿಸಿದರು.[286] ಆದರೆ ತಾವು ದಿನಾಲೂ ನಮಾಜ್ ಮಾಡುತ್ತಿದ್ದ ಚಾಪೆಯನ್ನು (ಜಾನಿಮಾಜ್) ಅವರಿಗೆ ಕೊಡುಗೆಯಾಗಿ ನೀಡಿದರು. ಸಯ್ಯದ್ ಮಹಮೂದ್ ವಾಯಿಜ್ ಅವರು ಆ ಜಾನಿಮಾಜನ್ನು ತಮ್ಮ ಹೆಗಲಿಗೆ ಹಾಕಿಕೊಂಡು ಇದೇ ನನ್ನ ಖಿಲಾಫತ್ ಎಂದು ಆನಂದತುಂದಿಲರಾಗಿ ನಡೆದರು. ಬಂದೇ ನವಾಜ್ ಗೇಸುದರಾಜರು ಶ್ರೇಷ್ಠ ಮಟ್ಟದ ಕವಿಗಳು ಹಾಗೂ ಲೇಖಕರಾಗಿದ್ದರು. ಇವರು ಅರಬಿ, ಫಾರ್ಸಿ ಹಾಗೂ ದಖನಿ ಭಾಷೆಗಳಲ್ಲಿ ಮೂರು ವಿಭಿನ್ನ ಕಾಲ ಘಟ್ಟ ಹಾಗೂ ಪ್ರದೇಶಗಳಲ್ಲಿ ಕೃತಿ ರಚನೆ ಮಾಡಿದ್ದಾರೆ.[೨೮೭]

ಅಡಿ ಟಿಪ್ಪಣಿಗಳು :-

೧. ವೀರಣ್ಣ, ೧೯೯೪: ವದಂತಿ, ಪವಾಡ, ದಂತಕಥೆ ಜನಪದ ಸಾಹಿತ್ಯ ದರ್ಶನ ಭಾಗ-೧೫ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಅದೇ ಪುಟ-೨೦

೩. ಲಿ.ಶ್ರೀ ವೀರತಪಸ್ವಿ ಮುನೀಂದ್ರ ಶಿವಾಚಾರ್ಯ ಚರಿತ್ರೆ: ಹೀರು.ಬಿ.ಜಾದವ ಪುಟ-೪,೮

೪. ಅದೇ ಪುಟ-೧೧

೫. ಅದೇ ಪುಟ-೧೨

೬. ಅದೇ ಪುಟ-೧೬,೧೭

೭. ಅದೇ ಪುಟ-೧೯

೮. ಶ್ರೀ. ವೀರಭ್ರದೇಶ್ವರ ದೇವರ ಪದ್ಯಾವಳಿ ಹಾಗೂ ಬಿರುದಾವಳಿ ಮತ್ತು ಭಕ್ತಿಗೀತೆಗಳು: ಮಲ್ಲಿಕಾರ್ಜುನಪ್ಪಾ ಸಿದ್ದಪ್ಪಾ ಮೂಜಾರಿ ಪುಟ-೬

೯. ಭರತನೂರ ಶ್ರೀ ಗುರುನಂಜೇಶ್ವರರು- ಲಠ್ಠೆ ಎಂ.ಎಸ್. ಪುಟ-೬

೧೦. ಅದೇ ಪುಟ-೯

೧೧. ಅದೇ ಪುಟ-೮೭

೧೨. ತಪೋನಿಧಿ(ಸ್ಮರಣ ಸಂಚಿಕೆ) ವಿಜಯಕುಮಾರ ಜಿ.ಪರುತೆ ಪುಟ-೪೧

೧೩. ಅದೇ ಪುಟ-೪೩

೧೪. ತನಾರತಿ ಸಂಪಾದಕರು ಪೂಜಾರ ಪುಟ-೨೪

೧೫. ಇಜೇರಿಯ ಶರಣ ಖ್ವಾಜಾ ಅಮೀನುದ್ದೀನರ ಚರಿತ್ರೆ, ರಸೂಸಸಾಹೇಬ. ಬಾಗವಾನ ಕಾದಗಲ್ಲ.ಬಿ ಪುಟ-೫೫

೧೬. ಅದೇ ಪುಟ-೫೮

೧೭. ಅದೇ ಪುಟ-೫೮

೧೮. ಅದೇ ಪುಟ-೬೨

೧೯. ಅದೇ ಪುಟ-೬೩

೨೦. ಅದೇ ಪುಟ-೬೫

೨೧. ಅದೇ ಪುಟ-೬೬

೨೨. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ) ಪುಟ-೭೦

೨೩. ಇಜೇರಿಯ ಶರಣ ಖ್ವಾಜಾ ಅಮಿನುದ್ದೀನರ ಚರಿತ್ರೆ, ರಸೂಲ ಸಾಹೇಬ, ಬಾಗವಾನ ಕಂದಗಲ್ಲ ಬಿ ಪುಟ-೭೨,೭೩,೭೪

೨೪. ಅದೇ ಪುಟ-೭೫

೨೫. ಅದೇ ಪುಟ-೭೭

೨೬. ಅದೇ ಪುಟ-೭೭

೨೭. ಅದೇ ಪುಟ-೭೮

೨೮. ಅದೇ ಪುಟ-೭೯

೨೯. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೦. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೧. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೨. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೩. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೪. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೫. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೬. ಕ್ಷೇತ್ರಕಾರ್ಯದಲ್ಲಿ ಹೇಳಿದವರು ಸೈಯದ್ ಇಸ್ಮಾಯಿಲ್ ಹುಸೇನ್ ಇಜೇರಿ ದರ್ಗಾದ ಮುತವಲಿ(ಪೀಠಾಧಿಪತಿ)

೩೭. ಇಜೇರಿಯ ಶರಣ ಖ್ವಾಜಾ ಅಮಿನುದ್ದೀನರ ಚರಿತ್ರೆ, ರಸೂಲ ಸಹೇಬ, ಬಾಗವಾನ ಕಂದಗಲ್ಲ.ಬಿ ಪುಟ-೮೮.

೩೮. ಅದೇ ಪುಟ-೯೦

೩೯. ಅದೇ ಪುಟ-೯೪

೪೦. ಅದೇ ಪುಟ-೯೫

೪೧. ಅದೇ ಪುಟ-೯೫

೪೨. ಶ್ರೀ ಗುರು ಚೆನ್ನವೃಷಬೇಂದ್ರರ ವೃತಾಚರಣೆ, ಗುಂಡಪ್ಪ. ಆರ್. ಕುಂಬಾರ ಪುಟ-೧೭

೪೩. ಅದೇ ಪುಟ-೨೧

೪೪. ಅದೇ ಪುಟ-೨೨

೪೫. ಅದೇ ಪುಟ-೨೩

೪೬. ಅದೇ ಪುಟ-೨೫

೪೭. ಅದೇ ಪುಟ-೨೭

೪೮. ವಿಶ್ವ ಚೇತನ ವಿಶ್ವರಾಧ್ಯರು, ಸಂ.ಶ್ರೀ. ಗುಂಡಪ್ಪ ಕುಂಬಾರ ಮತ್ತು ಶ್ರೀ ಜಗದೀಶ ಚಲವಾದಿ ಪುಟ-೧೪೭

೪೯. ಅದೇ ಪುಟ-೧೪೮

೫೦. ಅದೇ ಪುಟ-೧೪೯

೫೧. ತನ್ನ ತಾನು ತಿಳಿದ ಮೇಲೆ, ಮೀನಾಕ್ಷಿ ಬಾಳಿ ಪುಟ-೪

೫೨. ಅದೇ ಪುಟ-೫

೫೩. ಹೈದ್ರಾಬಾದ ಕನ್ನಡ ಪ್ರದೇಶದ ವೀರಶೈವ ಧಾರ್ಮಿಕ ಸಾಹಿತ್ಯ ಪರಿಸರ ಹಾಗೂ ಪ್ರೇರಣೆಯ ಹಿನ್ನೆಲೆಯಲ್ಲಿ ಶ್ರೀ ಶರಣಬಸವೇಶ್ವರರು ಒಂದು ಅಧ್ಯಯನ, ಹೀರೆಮಠ.ಎಸ್.ಎಮ್., ಪುಟ-೪೦೩

೫೪. ಜಾನಪದ ಸಾಹಿತ್ಯ ದರ್ಶನ ಭಾಗ, ಬಾಣದ ಎಸ್. ಎಸ್, ಪುಟ-೫೫

೫೫. ಅನುಭಾವಿ ಕವಿ ಕಡಕೋಳ ಮಡಿವಾಳಪ್ಪ, ಲಿಂಗಣ್ಣ ಸಂತ್ಯಂ ಪೇಟೆ (ಲೇ), ಪುಟ-೧೧

೫೬. ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರ ವಚನಗಳು, ಲಠ್ಠೆ. ಎಮ್.ಎಸ್.(ಸಂ), ಪುಟ-೧೨

೫೭. ಅದೇ ಪುಟ-೧೬೯

೫೮. ತನ್ನ ತಾನು ತಿಳಿದ ಮೇಲೆ, ಮೀನಾಕ್ಷಿ ಬಾಳಿ ಪುಟ ಸಂ-೪೪

೫೯. ಅದೇ ಪುಟ-೪೫

೬೦. ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರ ವಚನಗಳು, ಲಠ್ಠೆ.ಎಮ್.ಎಸ್.(ಸಂ), ಪುಟ-೧೨

೬೧. ಅದೇ ಪುಟ-೯೩

೬೨. ತನ್ನ ತಾನು ತಿಳಿದ ಮೇಲೆ, ಮಿನಾಕ್ಷಿ ಬಾಳಿ, ಪುಟ-೩೯೦

೬೩. ಅದೇ ಪುಟ-೩೯೧

೬೪. ಅದೇ ಪುಟ-೩೯೩

೬೫. ಅದೇ ಪುಟ-೩೯೪

೬೬. ಅದೇ ಪುಟ-೩೯೫

೬೭. ಅಹ್ಮಮದ್ ಫರುಖಿಲ್ ಮುಯಿನ, ಪವಿತ್ರ ಖುರಾನ್ ಆಯ್ದುಸೂಕ್ತಿಗಳು ಪುಟ- ೯೭

೬೮. ಕ್ಷೇತ್ರಕಾರ್ಯದಲ್ಲಿ ಜಲಾಲರ ವಂಶಸ್ಥರ ಹೇಳಿದರು ಹೈದ್ರಾಬಾದ ನಿಜಾಮನು ಕಂಚಿನ ಪಟ್ಟಿಕೆಯಲ್ಲಿ ಹುಕಂ ನಾಮೆ ಮತ್ತು ಕುರ್ಚಿನಿಡಿದರ ಬಗ್ಗೆ ಹೇಳಿದರು.

೬೯. ತನ್ನ ತಾನು ತಿಳಿದ ಮೇಲೆ ಮೀನಾಕ್ಷಿ ಬಾಳಿ ಪುಟ-೩೯೬,೩೯೭

೭೦. ಕಡಕೋಳ ಮಡಿವಾಳಪ್ಪನವರ ತತ್ವಜ್ಞಾನ ಪದಗಳು-(ಸಂ) ಮಲ್ಲಿಕಾರ್ಜುನ ಕಡಕೋಳ ಪುಟ-೧೦೩

೭೧. ಕಾಮಧೇನು, ಆಲ್ದಾಳ.ಎಲ್.ಬಿ.ಕೆ. ಪುಟ-೫

೭೨. ಅದೇ ಪುಟ-೬

೭೩. ಅದೇ ಪುಟ-೯

೭೪. ಅದೇ ಪುಟ-೧೦

೭೫. ಕ್ಷೇತ್ರಕಾರ್ಯದಲ್ಲಿ ಹೇಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೭೬. ಕ್ಷೇತ್ರಕಾರ್ಯದಲ್ಲಿ ಹೇಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೭೭. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೭೮. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೭೯. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೦. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೧. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೨. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೩. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೪. ಕ್ಷೇತ್ರಕಾರ್ಯದಲ್ಲಿ ಹೆಳಿದವರು, ಮಳೇಂದ್ರ ಮಠದ, ಪೀಠಾಧಿಪತಿ ಶ್ರೀ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಅಫಜಲಪುರ.

೮೫. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪೂಜಾರಿ(ಅರ್ಚಕ) ಘತರಗಿ

೮೬. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪೂಜಾರಿ(ಅರ್ಚಕ) ಘತರಗಿ

೮೭. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪೂಜಾರಿ(ಅರ್ಚಕ) ಘತರಗಿ

೮೮. ಶ್ರೀ ಭಾಗ್ಯವಂತಿದೇವಿ ಚರಿತ್ರೆ, ಶ್ರೀ ಸಿದ್ಧೇಶ್ವರ ಶಾಸ್ತ್ರಿಗಳು ತೆಲ್ಲೂರ ಪುಟ-೨೬

೮೯. ಅದೇ ಪುಟ-೨೮

೯೦. ಅದೇ ಪುಟ-೩೦

೯೧. ಅದೇ ಪುಟ-೩೨

೯೨. ಅದೇ ಪುಟ-೩೪

೯೩. ಅದೇ ಪುಟ-೩೫

೯೪. ಅದೇ ಪುಟ-೩೯

೯೫. ಅದೇ ಪುಟ-೪೧

೯೬. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪುಜಾರಿ (ಅರ್ಚಕ) ಘತರಗಿ

೯೭. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪುಜಾರಿ (ಅರ್ಚಕ) ಘತರಗಿ

೯೮. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪುಜಾರಿ (ಅರ್ಚಕ) ಫತರಗಿ

೯೯. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪುಜಾರಿ (ಅರ್ಚಕ) ಫತರಗಿ

೧೦೦. ಕ್ಷೇತ್ರ ಕಾರ್ಯದಲ್ಲಿ ಹೇಳಿದವರು, ಮಲ್ಲಿಕಾರ್ಜುನ್ ಪುಜಾರಿ (ಅರ್ಚಕ) ಫತರಗಿ

೧೦೧. ಶ್ರೀ ಭಾಗ್ಯವಂತಿ ದೇವಿ ಚರಿತ್ರೆ, ಶ್ರೀ ಸಿದ್ದೇಶ್ವರ ಶಾಸ್ತ್ರಿಗಳು ತೆಲ್ಲೂರ ಪುಟ-೫೫

೧೦೨. ಅದೇ ಪುಟ-೫೬

೧೦೩. ಅದೇ ಪುಟ-೬೫

೧೦೪. ಅದೇ ಪುಟ-೬೬

೧೦೫. ಅದೇ ಪುಟ-೬೬

೧೦೬. ಕಲ್ಪತರು (ಸಂ) ಮೋನಪ್ಪ ಸೂತಾರ, ಪುಟ-೪೪

೧೦೭. ಅದೇ ಪುಟ-೪೧,೪೩

೧೦೮. ಅದೇ ಪುಟ-೭೪,೭೫.

೧೦೯. ಆನಂದ ಸಿಂದನ ಮಡು, ವಯಸ್ಸು-೪೦, ಉದ್ಯೋಗ-ಅತಿಥಿ ಉಪನ್ಯಾಸಕರು, ಊರು-ಸಿಂದನ ಮಡು

೧೧೦. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು: ಲಕ್ಷ್ಮೀದೇವಿ ಎಲ್. ಪುಟ ಸಂಖೆ – ೮೩

೧೧೧. ಅದೇ ಪುಟ ಸ– ೮೪

೧೧೨. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ ರಾಯಚೂರು ಜಿಲ್ಲೆಯ ಐತಿಹ್ಯಗಳು: ಅರಳಿಹಳ್ಳ ಗಿರೇಗೌಡ ಪು.ಸ – ೨೫೦

೧೧೩. ಅದೇ ಪು – ೨೫೦

೧೧೪. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ: (ಸಂ) ಖಂಡೋಬಾ.ಪಿ.ಕೆ ಪು.ಸ – ೪೪೪

೧೧೫. ಅದೇ ಪುಟ – ೪೪೫

೧೧೬. ಅದೇ ಪುಟ – ೪೪೫

೧೧೭. ಅದೇ ಪುಟ – ೪೪೫

೧೧೮. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ: (ಸಂ) ಖಂಡೋಬಾ.ಪಿ.ಕೆ ಪು.ಸ – ೪೪೬

೧೧೯. ಅದೇ ಪುಟ – ೪೪೬

೧೨೦. ಅದೇ ಪುಟ – ೪೪೬

೧೨೧. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ: (ಸಂ) ಖಂಡೋಬಾ.ಪಿ.ಕೆ ಪು.ಸ – ೪೪೭

೧೨೨. ಅದೇ ಪುಟ – ೪೪೭

೧೨೩. ಅದೇ ಪುಟ – ೪೪೭

೧೨೪. ಅದೇ ಪುಟ – ೪೪೭

೧೨೫. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು: ಸುಬ್ಬಣ್ಣ ರೈ ಪುಟ ಸ – ೪೨

೧೨೬. ಅದೇ ಪುಟ – ೪೩ & ೪೫

೧೨೭. ಅದೇ ಪುಟ – ೪೫

೧೨೮. ಅದೇ ಪುಟ – ೪೫

೧೨೯. ಅದೇ ಪುಟ – ೪೬

೧೩೦. ಕ್ಷೇತ್ರಕಾರ್ಯದಲ್ಲಿ ಮಾಹಿತಿನಿಡಿದವರು, ರೇವಣಸಿದಪ್ಪ ಬುಕ್ಕಾ ಊರು - ನರೋಣಾ, ವಯಸ್ಸು – ೭೦, ಉದ್ಯೋಗ - ವ್ಯವಸಾಯ, ತಾಲೂಕಾ-ಆಳಂದ ಜಿ-ಗುಲಬರ್ಗಾ

೧೩೧. ಅದೇ

೧೩೨. ಮಹಾಂತಯ್ಯ ಊರು-ನರೋಣಾ ತಾ-ಆಳಂದ ಜಿ-ಗುಲಬರ್ಗಾ ಉದ್ಯೋಗ- ಪ್ರಧಾನ ಅಚರ್ಕರು ಕ್ಷೇಮಲಿಂಗೇಶ್ವರ ದೇವಸ್ಥಾನ

೧೩೩. ಅದೇ

೧೩೪. ಶ್ರೀ ಕ್ಷೇಮಲಿಂಗೇಶ್ವರ ಮಹಿಮೆ ಲೇಖಕರು-ಪೂಜ್ಯ ಶ್ರೀ ಗುರು ಮಹಾಂತ ಮಹಾ ಸ್ವಾಮಿಗಳು ಶ್ರೀ ಮಹಾಂತೇಶ್ವರ ಮಠ, ಸುಕ್ಷೇತ್ರ ನರೋಣಾ ಪು.ಸ-೩

೧೩೫. ಅದೇ ಪು.ಸ-೪

೧೩೬. ಅದೇ ಪು.ಸ-೫

೧೩೭. ಶ್ರೀಶೈಲ ತಂದೆ ಜಟೆಪ್ಪ ಮಾವಿನ ವಯಸ್ಸು-೪೦, ಊರು-ಚಿಂಚನಸೂರ, ಉದ್ಯೋಗ- ಪಂಚಾಯತಿ ಮೆಂಬರ

೧೩೮. ದೂಳಪ್ಪ ತಂದೆ ಖೂಬಣಕರ್ ವಯಸ್ಸು-೫೨, ಉದ್ಯೋಗ-ವ್ಯವಸಾಯ,

೧೩೯. ಶರಣಗೌಡ. ಬಿ. ಮಾಲಿಪಾಟೀಲ ಊರು-ಧುತ್ತರಗಾಂವ, ವಯಸ್ಸು-೬೨, ಉದ್ಯೋಗ-ವ್ಯವಸಾಯ

೧೪೦. ಅದೇ

೧೪೧. ಮೃತುಂಜಯ ಹಿರೇಮಠ ಊರು-ಧುತರಗಾಂ, ತಾ-ಆಳಂದ, ಜಿ-ಗುಲಬರ್ಗಾ, ವಯಸ್ಸು-೬೧, ಉದ್ಯೋಗ-ಜ್ಯೋತಿಷಿ

೧೪೨. ಅದೇ

೧೪೩. ಶಿವಲಿಂಗಪ್ಪ ಊರು-ಕತ್ರಾಬಾದ, ತಾ-ಆಳಂದ, ಜಿ-ಗುಲಬರ್ಗಾ, ವಯಸ್ಸು-೬೦, ಉದ್ಯೋಗ-ವ್ಯವಸಾಯ

೧೪೪. ಅದೇ

೧೪೫. ಸಿದ್ದಯ್ಯ ಸ್ವಾಮಿ ಊರು-ಹಿತ್ತಲಶಿರೂರ, ವಯಸ್ಸು-೬೧, ಉದ್ಯೋಗ-ವ್ಯವಸಾಯ, ತಾ-ಆಳಂದ, ಜಿ-ಗುಲಬರ್ಗಾ

೧೪೬. ಅದೇ

೧೪೭. ಮಹಾದೇವಪ್ಪ ಪೂಜಾರಿ(ಹೂಗಾರ) ಊರು-ಹಿತ್ತಲಶಿರೂರ, ವಯಸ್ಸು-೬೦, ಉದ್ಯೋಗ-ವ್ಯವಸಾಯ, ತಾ-ಆಳಂದ, ಜಿ-ಗುಲಬರ್ಗಾ

೧೪೮. ಶಾಂತಲಿಂಗಪ್ಪ ಊರು-ನಾಗರಹಳ್ಳಿ, ವಯಸ್ಸು-೫೨, ಉದ್ಯೋಗ-ವ್ಯವಸಾಯ, ತಾ-ಜೇವರಗಿ, ಜಿ-ಗುಲಬರ್ಗಾ

೧೪೯. ಬಾಬುರಾವ ಪಾಟೀಲ ಊರು-ಭೊಸನೂರು, ವಯಸ್ಸು-೬೨, ಉದ್ಯೋಗ-ವ್ಯವಸಾಯ.

೧೫೦. ಬಸವರಾಜ ಊರು-ದಂಡಗುಂಡ, ವಯಸ್ಸು-೪೫, ಉದ್ಯೋಗ-ವ್ಯವಸಾಯ

೧೫೧. ಶಾಸನಾನು ಸಂಧಾನ: ಹಿರೇಮಠ.ಎಸ್.ಎಂ. ಪುಟ ಸ-೩೨

೧೫೨. ಅದೇ ಪುಟ ಸ-೩೩

೧೫೩. ಹೈದ್ರಾಬಾದ ಕರ್ನಾಟಕ ಭಾರದ ಕನ್ನಡ ಶಿಲಾ ಶಾಸನಗಳು-ಶಿವಾನಂದ.ವಿ. ಪುಟ-೧೪

೧೫೪. ಅದೇ ಪುಟ-೨೭

೧೫೫. ಅದೇ ಪುಟ-೭೦

೧೫೬. ಅದೇ ಪುಟ-೭೧

೧೫೭. ಅದೇ ಪುಟ-೮೩ & ೧೩೫

೧೫೮. ಅದೇ ಪುಟ-೧೨೧

೧೫೯. ಅದೇ ಪುಟ-೧೭೭

೧೬೦. ಅದೇ ಪುಟ-೧೯೦ &೨೧೯

೧೬೧. ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು – ಯಾಸಿನ ಖದೊಸಿ ಎಂ. ಸೀತಾರಾಮ ಜಾಗಿರದಾರ ಪುಟ ಸ-೧೬೩

೧೬೨. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ ಆಳಂದ ತಾಲೂಕಿನ ಶಾಸನಗಳು ಸಾಂಸ್ಕೃತಿಕ ಅಧ್ಯಯನ - ಶರಣಪ್ಪ ಸಿದ್ರಾಮಪ್ಪ ಚಕ್ರವರ್ತಿ ಪುಟ ಸ-೮೯

೧೬೩. ಅದೇ ಪುಟ-೯೫

೧೬೪. ಅದೇ ಪುಟ-೯೬

೧೬೫. ಅದೇ ಪುಟ-೯೭

೧೬೬. ಕಲಬುರಗಿ ಜಿಲ್ಲೆಯ ಶಾಸನಗಳು, ಸಂಪಾದಕರು-ಹನುಮಾಕ್ಷಿಗೊಗಿ ಪುಟ ಸ-೧೦೧

೧೬೭. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೪೫

೧೬೮. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೬೭೫

೧೬೯. ಅದೇ ಪುಟ-೬೭೫

೧೭೦. ಅದೇ ಪುಟ-೬೭೮

೧೭೧. ಅದೇ ಪುಟ-೬೭೯

೧೭೨. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೬೮೧

೧೭೩. ಅದೇ ಪುಟ-೬೮೧

೧೭೪. ಅದೇ ಪುಟ-೬೮೪

೧೭೫. ಅದೇ ಪುಟ-೬೮೫

೧೭೬. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೬೮೭

೧೭೭. ಅದೇ ಪುಟ-೬೯೧

೧೭೮. ಅದೇ ಪುಟ-೬೯೩

೧೭೯. ಅದೇ ಪುಟ-೬೯೭

೧೮೦. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೭೦೩

೧೮೧. ಅದೇ ಪುಟ-೭೦೬

೧೮೨. ಅದೇ ಪುಟ-೭೦೮

೧೮೩. ಅದೇ ಪುಟ-೭೦೮

೧೮೪. ಅನುಶಾಸನ, ಸಂಪಾದಕರು ಹನುಮಾಕ್ಷಿಗೂಗಿ ಪು ಸ-೪೨

೧೮೫. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ್-ಪಾಟೀಲ ಎಂ.ಬಿ ಪುಟ ಸ-೭೧೦

೧೮೬. ಅದೇ ಪುಟ-೭೧೫

೧೮೭. ಅದೇ ಪುಟ-೭೧೦

೧೮೮. ಅದೇ ಪುಟ-೭೨೦

೧೮೯. ಅದೇ ಪುಟ-೭೨೧

೧೯೦. ಹೈದ್ರಾಬಾದ ಕರ್ನಾಟಕ ಕನ್ನಡ ಶಿಲಾ ಶಾನಗಳು ಸಂಪಾದಕರು: ಶಿವಾನಂದ.ವಿ ಪುಟ ಸ-೪೫

೧೯೧. ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ: ಪಾಟೀಲ ಎಂ.ಬಿ ಪುಟ ಸ-೭೨೬

೧೯೨. ಅದೇ ಪುಟ-೭೨೭

೧೯೩. ಅದೇ ಪುಟ-೭೨೮

೧೯೪. ಅದೇ ಪುಟ-೭೩೩

೧೯೫. ಅದೇ ಪುಟ-೭೩೭

೧೯೬. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೭೪೩

೧೯೭. ಅದೇ ಪುಟ-೭೪೩

೧೯೮. ಅದೇ ಪುಟ-೭೪೪

೧೯೯. ಅದೇ ಪುಟ-೭೪೬

೨೦೦. ಗುಲಬರ್ಗಾ ಜಿಲ್ಲೆಯ ಗ್ಯಾಸೇಟಿಯರ - ಪಾಟೀಲ ಎಂ.ಬಿ. ಪುಟ ಸ-೭೪೮

೨೦೧. ಅದೇ ಪುಟ-೭೫೩

೨೦೨. ಅದೇ ಪುಟ-೭೫೫

೨೦೩. ಅದೇ ಪುಟ-೭೬೨

೨೦೪. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ ಸಂಪಾದಕರು-ಪಾಟೀಲ ಎಂ. ಬಿ. ಪುಟ ಸ-೭೬೪

೨೦೫. ಅದೇ ಪುಟ-೮೦೩

೨೦೬. ಅದೇ ಪುಟ-೭೯೯

೨೦೭. ಅದೇ ಪುಟ-೭೮೦

೨೦೮. ಅದೇ ಪುಟ-೭೮೭

೨೦೯. ಅದೇ ಪುಟ-೭೯೪

೨೧೦. ಅದೇ ಪುಟ-೭೯೪

೨೧೧. ಕರ್ನಾಟಕ ಜಾನಪದ; ಪರಮಶಿವಯ್ಯ. ಜಿ.ಶಂ. ಪುಟ ಸ-೩೧೫

೨೧೨. ಅದೇ ಪುಟ-೩೧೬

೨೧೩. ಅದೇ ಪುಟ-೩೧೬

೨೧೪. ಅದೇ ಪುಟ-೩೧೭

೨೧೫. ದಕ್ಷಿಣ ಭಾರತೀಯ ಜಾನಪದ ಕೋಶ; ಮುರಿಗೆಪ್ಪ.ಎ ಪುಟ ಸ-೫೭೦

೨೧೬. ಕರ್ನಾಟಕ ಜಾನಪದ; ಪರಮಶಿವಯ್ಯ ಜಿ.ಶಂ. ಪುಟ ಸ-೩೧೮

೨೧೭. ಅದೇ ಪುಟ-೩೧೯

೨೧೮. ಅದೇ ಪುಟ-೩೨೦

೨೧೯. ಅದೇ ಪುಟ-೩೨೦

೨೨೦. ದಕ್ಷಿಣ ಭಾರತೀಯ ಜಾನಪದ ಕೋಶ; ಮುರಿಗೆಪ್ಪ.ಎ ಪುಟ ಸ-೫೭೦

೨೨೧. ಉತ್ತರ ಕರ್ನಾಟಕ ಜನಪದ ನಂಬಿಕೆಗಳು-೫

೨೨೨. ನಮ್ಮ ಸುತ್ತಿನ ನಂಬಿಕೆಗಳು-೫೧

೨೨೩. ನಮ್ಮ ಜನಪದ ನಂಬಿಕೆಗಳು-೬೬ & ೬೭

೨೨೪. ಕರ್ನಾಟಕದ ಜಾನಪದ ಪರಮಶಿವಯ್ಯ ಜಿ.ಶಂ ಪುಟ ಸ-೩೨೪

೨೨೫. ಅದೇ ಪುಟ-೩೨೫

೨೨೬. ಅದೇ ಪುಟ-೩೨೫

೨೨೭. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ ಸಂಪಾದಕರು- ಖಂಡೋಬಾ.ಪಿ.ಕೆ ಪುಟ ಸ-೧೯೩

೨೨೮. ಅದೇ ಪುಟ-೧೯೩

೨೨೯. ಅದೇ ಪುಟ-೧೯೩

೨೩೦. ಅದೇ ಪುಟ-೧೯೩

೨೩೧. ಅದೇ ಪುಟ-೧೯೪

೨೩೨. ಅದೇ ಪುಟ-೧೯೪

೨೩೩. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ ಸಂಪಾದಕರು- ಖಂಡೋಬಾ.ಪಿ.ಕೆ ಪುಟ ಸ--೧೯೪

೨೩೪. ಅದೇ ಪುಟ-೧೯೫

೨೩೫. ಅದೇ ಪುಟ-೧೯೬

೨೩೬. ದಕ್ಷಿಣ ಭಾರತೀಯ ಜಾನಪದ ಕೋಶ; ಮುರಿಗೆಪ್ಪ. ಎ. ಪುಟ ಸ- ೫೮೯

೨೩೭. ಅದೇ ಪುಟ-೫೮೯

೨೩೮. ಅದೇ ಪುಟ-೫೮೯

೨೩೯. ಅದೇ ಪುಟ-೫೭೦

೨೪೦. ಅದೇ ಪುಟ-೫೭೦

೨೪೧. ಕರ್ನಾಟಕದ ಜಾನಪದ; ಪರಮ ಶಿವಯ್ಯ ಪುಟ ಸ- ೩೨೬

೨೪೨. ಅದೇ ಪುಟ-೩೨೫

೨೪೩. ದಕ್ಷಿಣ ಭಾರತೀಯ ಜಾನಪದ ಕೋಶ; ಮುರಿಗೆಪ್ಪ. ಎ ಪುಟ ಸ-೫೭೦

೨೪೪. ಅದೇ ಪುಟ-೫೭೧

೨೪೫. ಅದೇ ಪುಟ-೫೭೨

೨೪೬. ಅದೇ ಪುಟ-೫೭೨

೨೪೭. ಭಾರತೀಯ ಜಾನಪದ ಕೋಶ; ಮುರಿಗೆಪ್ಪ. ಎ ಪುಟ ಸ-೫೭೨

೨೪೮. ಅದೇ ಪುಟ-೫೭೨

೨೪೯. ಅದೇ ಪುಟ-೫೭೩

೨೫೦. ಹೈದ್ರಾಬಾದ ಕರ್ನಾಟಕದ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ ಪಿ.ಕೆ. ಪುಟ ಸ-೭೩ & ೭೪

೨೫೧. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು; ಲಕ್ಷ್ಮೀದೇವಿ. ಎಲ್ ಪುಟ ಸ-೧೨೬

೨೫೨. ಅದೇ ಪುಟ-೧೨೬

೨೫೩. ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ-೧ ಪ್ರ.ಸಂ.-ಮುರಿಗೆಪ್ಪ.ಎ ಪುಟ ಸ-೨೧೦

೨೫೪. ಅದೇ ಪುಟ-೨೧೦

೨೫೫. ಅದೇ ಪುಟ-೨೧೧

೨೫೬. ಅದೇ ಪುಟ-೨೧೧

೨೫೮. ಸಾರಸ-ವಸಂತಕುಮಾರ ತಾಳ್ತಜೆ, ಪುಟ–೧೨೧

೨೫೯. ವಿವೇಕ ರೈ- ಅನ್ಮಯಿಕ ಜಾನಪದ ಪುಟ–೯೧,೯೨

೨೬೦. ಪುರುಷೋತ್ತಮ ಬಿಳಿಮಲೆ ಕರಾವಳಿ ಜಾನಪದ ಪುಟ–೭೬

೨೬೧. ಪುರುಷೋತ್ತಮ ಬಿಳಿಮಲೆ ಕರಾವಳಿ ಜಾನಪದ ಪುಟ–೭೯,೮೦

೨೬೨. ಅರಳಿ ಹಳ್ಳಿ ಗಿರಿ ಗೌಡ-ಅಪ್ರಕಟಿತ ರಾಯಚೂರು ಜಿಲ್ಲೆಯ ಐತಿಹ್ಯಗಳು ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ ಪುಟ–೩೧

೨೬೩. ಪುರುಷೋತ್ತಮ ಬಿಳಿಮಲೆ ಕರಾವಳಿ ಜಾನಪದ ಪುಟ–೨೧೮

೨೬೪. ಅರಳಿ ಹಳ್ಳಿ ಗಿರಿ ಗೌಡ-ಅಪ್ರಕಟಿತ ರಾಯಚೂರು ಜಿಲ್ಲೆಯ ಐತಿಹ್ಯಗಳು ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ ಪುಟ–೩೧

೨೬೫. ಪುರುಷೋತ್ತಮ ಬಿಳಿಮಲೆ ಕರಾವಳಿ ಜಾನಪದ ಪುಟ–೨೧೯

೨೬೬. ಕೃಷ್ಣಯ್ಯ.ಎಂ.ಎಚ್-ಪುಟ–೧೪

೨೬೭. ಬಾಳಿ- ಅಪ್ರಕಟಿತ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ ಪುಟ–೪೦,೪೧

೨೬೮. ಶಿವಕುಮಾರ ಸ್ವಾಮಿ.ಸಿ.ಎಸ್.-ಕರ್ನಾಟಕ ಜಾತ್ರೆಗಳು ಪುಟ–೧೭೭,೭೮

೨೬೯. ಶಿವಕುಮಾರ ಸ್ವಾಮಿ.ಸಿ.ಎಸ್.-ಕರ್ನಾಟಕ ಜಾತ್ರೆಗಳು ಪುಟ–೧೭೯

೨೬೯. ಶರಣಬಸವೇಶ್ವರ ಚರಿತ್ರೆ (ಪವಾಡಗಳ ಸಹಿತ)-ವೀರಪ್ಪ ಸಿದ್ದಪ್ಪ ಸಾಗರ. ಪುಟ–೧೩

೨೭೦. ಶರಣಬಸವೇಶ್ವರ ಚರಿತ್ರೆ (ಪವಾಡಗಳ ಸಹಿತ)-ವೀರಪ್ಪ ಸಿದ್ದಪ್ಪ ಸಾಗರ. ಪುಟ–೨೫

೨೭೧. ಶರಣಬಸವೇಶ್ವರ ಚರಿತ್ರೆ (ಪವಾಡಗಳ ಸಹಿತ)-ವೀರಪ್ಪ ಸಿದ್ದಪ್ಪ ಸಾಗರ. ಪುಟ–೪೪

೨೭೨. ಶರಣಬಸವೇಶ್ವರ ಚರಿತ್ರೆ (ಪವಾಡಗಳ ಸಹಿತ)-ವೀರಪ್ಪ ಸಿದ್ದಪ್ಪ ಸಾಗರ. ಪುಟ ೪೬,೪೭

೨೭೩. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೪೮

೨೭೪. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೪೯

೨೭೫. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೫೦

೨೭೬. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೫೩

೨೭೭. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೭೮

೨೭೮. ಶ್ರೀ ಶರಣಬಸವೇಶ್ವರರ ಲೀಲಾಮೃತ-ಬಸವರಾಜು.ಎಲ್.ಪುಟ–೭೯

೨೭೯. ಖಾಜಾ ಬಂದಾ ನವಾಜ ಜಯಶ್ರೀ ದಂಡೆ ಪುಟ–೨೩

೨೮೦. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೨೯

೨೮೧. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೪೮

೨೮೨. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೫೩,೫೪,೫೫

೨೮೩. ಖಾಜಾ ಬಂದಾ ನವಾಜ ಜಯಶ್ರೀ ದಂಡೆ ಪುಟ–೩೪

೨೮೪. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೬೮,೬೯

೨೮೫. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೭೩

೨೮೬. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೭೪,೭೫

೨೮೭. ಪ್ರೇಮ, ಸೂಫಿ ಬಂದೇ ನವಾಜ್, ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ ಪುಟ–೭೮,೭೯

ಅಧ್ಯಾಯ-೫ ಗುಲ್ಬರ್ಗಾ ಜಿಲ್ಲೆಯ ವ್ಯಕ್ತಿ ಪ್ರಧಾನ ಮತ್ತು ಘಟನಾ ಪ್ರಧಾನ ಐತಿಹ್ಯಗಳು

೫.೧ ಗ್ರಾಮ ದೇವತೆಗಳು

೫.೨ ವ್ಯಕ್ತಿ ಪ್ರಧಾನ ಐತಿಹ್ಯಗಳು

೫.೩ ಘಟನಾ ಪ್ರಧಾನ ಐತಿಹ್ಯಗಳು

೫.೪ ದೈವ ಸಂಬಂಧಿ ಐತಿಹ್ಯಗಳು

೫.೫ ಕುಲ ಮೂಲ ಸಂಬಂಧಿ ಐತಿಹ್ಯಗಳು

ಅಧ್ಯಾಯ-೫

ಗುಲ್ಬರ್ಗಾ ಜಿಲ್ಲೆಯ ವ್ಯಕ್ತಿ ಪ್ರಧಾನ ಮತ್ತು ಘಟನಾ ಪ್ರಧಾನ ಐತಿಹ್ಯಗಳು

೫.೧ ಗ್ರಾಮ ದೇವತೆಗಳು:-

ಗರ್ಭ ಧರಿಸುವ ಮತ್ತು ಮಕ್ಕಳಿಗೆ ಜನ್ಮ ನೀಡುವ ಶಕ್ತಿಪಡೆದ ಹೆಣ್ಣು ಫಲವಂತಿಕೆಯ ಪ್ರತೀಕವಾಗಿ ಎಲ್ಲರ ಗೌರವಕ್ಕೆ ಪಾತ್ರಳಾಗಿದ್ದಳು. ಹುಟ್ಟಿಗೆ ಕಾರಣಳಾದ ಹೆಣ್ಣನ್ನು ಪೂಜಿಸುವ ಪರಿಪಾಠವೂ ಆರಂಭದಲ್ಲಿ ಎಲ್ಲೆಡೆ ವ್ಯಾಪಿಸಿತ್ತು. ಗರ್ಭಧಾರಕ ಶಕ್ತಿ ಪಡೆದ ಭೂಮಿ, ಅದರಲ್ಲಿ ಬೆಳೆಯುವ ಸಮೃದ್ಧ ಫಸಲು ಹಾಗೂ ಆ ಫಸಲನ್ನು ಜವಬ್ದಾರಿಯಿಂದ ಕಾಯ್ದುಕೊಂಡ ಸ್ತ್ರೀ ಭೂಮಿಗೆ ಸಮಾನಳಾಗಿ ಆರಾಧಿಸಲ್ಪಟ್ಟ ಮೊದಲ ಹಂತದ ಸಾಂಸ್ಕೃತಿಕ ವಿಕಸನದಿಂದಲೇ ನಮ್ಮ ಹಲವು ಸ್ತ್ರೀ ದೇವತೆಗಳ ಉಗಮವಾಗಿದೆ. ಅದರಲ್ಲಿ ಗ್ರಾಮದೇವತೆ ಕೂಡ ಒಬ್ಬಳಾಗಿದ್ದಾಳೆ.

ಗ್ರಾಮ ದೇವತೆಯ ಪರಿಕಲ್ಪನೆ:-

ಮಾನವ ಸಂಸ್ಕೃತಿ ಮತ್ತು ನಾಗರಿಕತೆಗಳ ಬೆಳವಣಿಗೆಯಲ್ಲಿ ಕೃಷಿಯ ಪ್ರಬುದ್ಧ ತನ್ಮೂಲಕ ಮಾನವನು ತನ್ನ ಸ್ಥಿರ ನೆಲೆಯನ್ನು ಗ್ರಾಮಗಳಲ್ಲಿ ಏರ್ಪಡಿಸಿಕೊಂಡು ವ್ಯವಸ್ಥಿತವಾಗಿ ಗ್ರಾಮಜೀವನ ಪ್ರಾರಂಭಿಸಿದ್ದು ಅತ್ಯಂತ ಮಹತ್ವದ ಘಟ್ಟವೆನಿಸುತ್ತದೆ. ಮಾನವ ಕುಟುಂಬಗಳ ಸಾಮೂಹಿಕ ನೆಲೆಯೇ ಗ್ರಾಮ ಕುಟುಂಬದ ಸದಸ್ಯರ ಹಿತವನ್ನನುಲಕ್ಷಿಸಿ ಗೃಹಕೃತ್ಯದ ಎಲ್ಲ ಭಾರವನ್ನು ಮಾತೃದೇವತೆಯೆಂದು ಭಾವಿಸಲಾಯಿತು. ಅನಂತರದಲ್ಲಿ ದುಷ್ಟರನ್ನು ನಿಗ್ರಹಿಸಿ ಆಪತ್ತುಗಳನ್ನು ನಿವಾರಿಸಿ ಕಾಪಾಡುವವಳೂ ಹೆಣ್ಣೆಂದು ಅವಳನ್ನು ಶಕ್ತಿದೇವತೆಯಾಗಿ ಭಾವಿಸಲಾಯಿತು.[೧] ಮುಂದೆ ಈ ಮಾತೃದೇವತೆಯನ್ನೂ ಶಕ್ತಿದೇವತೆಯನ್ನೂ ಗ್ರಾಮವನ್ನು ಕಾಪಾಡುವ, ಗ್ರಾಮದ ಜನರನ್ನು ಸದಾಕಾಲವೂ ರಕ್ಷಿಸುವ ಊರ ತಾಯಿಯನ್ನೂ 'ಗ್ರಾಮದೇವತೆ' ಎಂದು ಕರೆಯಲಾಯಿತು.

ಆ ಮುಂದಿನ ಹಂತದಲ್ಲಿ ಜನರ ರಕ್ಷಣೆ ಪಾಲನೆ ಮಾಡಿ ಅವರ ಇಷ್ಟಾರ್ಥಗಳನ್ನು ನೀಡುವ ಸೌಮ್ಯದೇವತೆಗಳನ್ನು ಶಿಷ್ಟದೇವತೆಗಳೆಂದು ಮತ್ತು ಆಯುಧಪ್ರಾಣಿಯಾಗಿ ದುಷ್ಟರನ್ನು ನಿಗ್ರಹಿಸುವ, ಭಯಂಕರ ರೂಪದಿಂದಿರುವ ದೇವತೆಗಳನ್ನು ಉಗ್ರ, ಕ್ಷುದ್ರದೇವತೆಗಳೆಂದು, ಶಕ್ತಿದೇವತೆಗಳೆಂದು ಗ್ರಾಮದೇವತೆಗಳನ್ನು ವರ್ಗೀಕರಿಸಲಾಯಿತು. ಪ್ರತಿಯೊಂದು ಗ್ರಾಮದಲ್ಲಿಯೂ ಒಬ್ಬ ಗ್ರಾಮದೇವತೆಯನ್ನು ಕಲ್ಪಿಸಲಾಯಿತು.

ಗ್ರಾಮ ದೇವತೆಯ ಉಗಮ ಮತ್ತು ವೈವಿಧ್ಯತೆ:-

ಮನುಷ್ಯ ಆಲೋಚನಾ ಶಕ್ತಿಯಿರುವ ಹಾಗೂ ಉತ್ಕೃಷ್ಟವಾದ, ಮೃದುವಾದ, ಹೃದಯ ಮತ್ತು ಮನಸ್ಸು ಪಡೆದ ಉನ್ನತ ಪ್ರಾಣಿ, ಅಂದಮೇಲೆ ಜಗತ್ತಿನ ಸ್ಪಂದನಕ್ಕೆ ಸದಾ ತನ್ನನ್ನು ಒಡ್ಡಿಕೊಂಡವನು. ಗಾಳಿ, ಮಳೆ, ಬಿಸಿಲು, ಬೆಳದಿಂಗಳ ಬಗ್ಗೆ ಸಾವಿರಾರು ವರ್ಷ ತಲೆಕೆಡಿಸಿಕೊಂಡ ಇವನು ತನ್ನನ್ನು ಮೀರಿದ ಅತೀತ ಶಕ್ತಿಯ ಇರುವನ್ನು ಕಲ್ಪಿಸಿಕೊಂಡವನು. ಮನುಕುಲದ ಇತಿಹಾಸ ಇಂದು ನಿನ್ನೆಯದಲ್ಲ. ಯುಗಯುಗಾಂತರಗಳ ಪರಂಪರೆಯನ್ನು ಪಡೆದದ್ದು. ಉನ್ನತಿ ಅವನತಿಗಳನ್ನು ಕಂಡು ಉಂಡದ್ದು. ಇದುವರೆಗಿನ ಮನುಷ್ಯ ಜೀವನದ ಐದು ಹಂತಗಳನ್ನು ಹೀಗೆ ಗುರ್ತಿಸಬಹುದು-೧. ಆಹಾರ ಸಂಗ್ರಹಣೆ ಯುಗ, ೨. ಬೇಟೆಯ ಯುಗ, ೩. ಪಶುಪಾಲನೆ ಮತ್ತು ಕೃಷಿ ಹಂತಗಳಿಗೂ ನಮ್ಮ ದೇವತೆಗಳ ಉಗಮಕ್ಕೂ ಸಂಬಂಧವಿದೆ. ಬಹುಶಃ ಮೊದಲಿಗೆ

ತನ್ನೆದುರಿಗೆ ವಾಸ್ತವಾಗಿ ಗೋಚರಿಸುತ್ತಿದ್ದ ಪ್ರಕೃತಿಯ ವಿವಿಧ ಮಜಲುಗಳ ಬಗ್ಗೆ ಮಾರುಹೋಗಿದ್ದ ಮನುಷ್ಯ ಬರಬರುತ್ತಾ ತನ್ನ ಸುತ್ತಣ ಆಶ್ಚರ್ಯಗಳಿಗೆ ರೂಪ ಕೊಡಲು ಪ್ರಯತ್ನಿಸಿದ್ದು ಈ ಹಂತಗಳಲ್ಲಿ.[೨] ಆದರಲ್ಲಿಯೂ ಗ್ರಾಮದೇವತೆಗಳ ಉಗಮವಾದದ್ದು ಕೃಷಿ ಹಂತದಲ್ಲಿಯೇ. ಕೃಷಿಯ ಉಪಯುಕ್ತತೆ ಗೊತ್ತಾದ ನಂತರ ಒಂದು ಕಡೆ ನೆಲೆಯೂರಿ ಜೀವಿಸುವುದು ಅನಿವಾರ್ಯವಾಯಿತು.

ಕೃಷಿ ಸ್ತ್ರೀಯ ಅನ್ವೇಷಣೆ ಎಂದು ಹೇಳುತ್ತಾರೆ. ಕೃಷಿಯನ್ನು ಕಂಡು ಹಿಡಿದವಳು ಸ್ತ್ರೀ. ಪುರುಷ ಬೇಟೆಗೋ ಪಶುಪಾಲನೆಗೋ ಹೊರಗೆ ಹೋದಾಗ ಸ್ತ್ರೀಯ ಆಸಕ್ತಿ ಭೂಮಿಯ ಕಡೆ ವಾಲಿತು. ಕೃಷಿಗೂ ಸ್ತ್ರೀಗೂ ಉಂಟಾದ ಈ ಸಂಬಂಧ ಭೂಮಿಗೂ ಸ್ತ್ರೀಗೂ ಹೋಲಿಕೆ ಕೊಟ್ಟಿತು. ಸ್ತ್ರೀಯ ಗರ್ಭಧಾರಣ ಸೃಷ್ಟಿ ಭೂಮಿಯ ಸಸ್ಯಧಾರಣ ಸೃಷ್ಟಿಗೆ ಸಮನಾಗಿ ಇದು ಪುರುಷರ ಮೇಲೆ ಪ್ರಭಾವ ಬೀರಿತು. ಈ ಹಿನ್ನೆಲೆಯಲ್ಲಿ ಅನೇಕ ಆಚರಣೆ ಮತ್ತು ಪುರಾಣಗಳು ಹುಟ್ಟಿಕೊಂಡವು ಆಚರಣೆಗಳಲ್ಲಿ ಸ್ತ್ರೀಯೇ ಪ್ರಧಾನವಾದಳು. ಹೀಗಾಗಿ ಕೃಷಿ ಹಂತದಲ್ಲಿ ಸ್ತ್ರೀ ಪ್ರಧಾನ ವಾಗುತ್ತಾ ಹೋದಳು. ಈ ಪ್ರಾಧಾನ್ಯತೆಯಿಂದಾಗಿ ಮಗಳಿಂದ ಮಗಳಿಗೆ ಆಸ್ತಿಯ ವರ್ಗಾವಣೆ ಆಗುತ್ತಾ ಹೋಯಿತು.[೩]

ಈ ಮಹತ್ವದ ಹಂತದಲ್ಲಿಯೇ ಸ್ತ್ರೀ ದೇವತೆಗಳ ಉಗಮವೂ ಆಗಿರಬಹುದು. ಬಹುತೇಕ ದ್ರಾವಿಡ ಬುಡಕಟ್ಟುಗಳು ಸ್ತ್ರೀಪ್ರಧಾನ ಕುಟುಂಬಗಳಾಗಿಯೇ ಇದ್ದುದು ಅಥವಾ ಇವತ್ತಿಗೂ ಪಳಿಯುಳಿಕೆಯಾಗಿ ಇರುವುದು ಈ ವಾದವನ್ನು ಪುಷ್ಟೀಕರಿಸಬಹುದು. ಆದರೆ ಆರ್ಯರ ಪ್ರಭಾವದ ನಂತರ ಪುರುಷ ಪ್ರಧಾನ ಕುಟುಂಬಗಳಾಗಿ ಪರಿವರ್ತಿತವಾಗತೊಡಗಿದ ಮೇಲೆ ಸ್ತ್ರೀ ದೇವತೆಗಳ ಮಹತ್ವ ಕಡಿಮೆಯಾಗುತ್ತಾ ಬಂದು ಗ್ರಾಮದೇತೆಗಳ ಬದಲಾಗಿ ಶಿಷ್ಟದೇವತೆಗಳ ಪ್ರಭಾವ ಹೆಚ್ಚುತ್ತಾ ಹೋಯಿತು.

ಈಗ ಕರ್ನಾಟಕದಲ್ಲಿ ನೂರಾರು ಗ್ರಾಮದೇವತೆಗಳಿವೆ. ಅಂದರೆ, ಈ ಎಲ್ಲ ದೇವತೆಗಳೂ ಮೇಲೆ ನಿರೂಪಿಸಿದ ರೀತಿಯಲ್ಲೇ ಉಗಮವಾಗಿದೆ ಎಂದು ಭಾವಿಸ ಬೇಕಾಗಿಲ್ಲ. ನಮ್ಮ ಇಡೀ ದೇಶದ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ರೂಪು ಗೊಂಡ ದೇವತೆಗಳೂ ಇವೆ. ನಮ್ಮ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಂಡು ಬರುವ 'ಮಾಸ್ತಮ್ಮ'ಗಳು ಮಹಾಸತಿಯರಾದ ತ್ಯಾಗಜೀವಿ ಮಹಿಳೆಯರ ನೆನಪಿನ ಆಕೃತಿಗಳು. ಮಾರಮ್ಮನ ಹಿನ್ನೆಲೆಯೂ ಇದೇ ರೀತಿಯದು. ದಲಿತ ವರ್ಗದ ಹೆಣ್ಣು ಉತ್ತಮ ಜಾತಿಯ ಪುರುಷನನ್ನು ವರಿಸಿದ ತಪ್ಪಿಗಾಗಿ ಅಗ್ನಿಗೆ ಆಹುತಿಯಾಗಬೇಕಾಗುತ್ತಿತ್ತು. ಈ ಪುರಾಣದ ಹಿನ್ನೆಲೆಯನ್ನು ಪಡೆದೇ ಅನೇಕ 'ಮಾರಮ್ಮ'ಗಳ ಹಬ್ಬ, ಆಚರಣೆಗಳು ಇಂದಿಗೂ ರೂಢಿಯಲ್ಲಿವೆ.

ಪ್ರಾಚೀನ ಮಾನವರು ತಮಗೆ ಎದುರಾಗುತ್ತಿದ್ದ ಕಂಠಕಗಳನ್ನು ಪರಿಹರಿಸಿಕೊಳ್ಳಲೂ ದೇವತೆಗಳನ್ನು ಸೃಷ್ಟಿಸಿದ್ದಾರೆ. ಸಾಮಾಜಿಕವಾಗಿ ಬರುತ್ತಿದ್ದ ರೋಗರುಜಿನಗಳಿಗೆ ಇಡೀ ಊರಿಗೆ ಊರೇ ತುತ್ತಾಗುತ್ತಿದ್ದ ಕಾಲದಲ್ಲಿ ದುಷ್ಟಶಕ್ತಿಯೇ ಇದಕ್ಕೆ ಕಾರಣವೆಂದು ಭಾವಿಸಿ ಆ ಶಕ್ತಿಗೆ ತಮ್ಮ ಕಲ್ಪನೆಯ ಅನೇಕ ರೂಪಗಳನ್ನು ಕೊಟ್ಟು ಪೂಜಿಸಿರುವ ಅನೇಕ ಬಗೆಯ ದೇವತೆಗಳೂ ಉಂಟು. ಅನಂತರ ಜಗತ್ತಿನ ಸೃಷ್ಟಿ ಆದಿಶಕ್ತಿಯಿಂದ ಎನ್ನುವ ವಾದ ಮೊದಲಾಯಿತು. ಶಕ್ತಿಯೇ ಸರ್ವಸ್ವ. ಜಗತ್ತನ್ನು ನಿಯಂತ್ರಿಸುವವಳೇ ಅವಳು ಎನ್ನುವ ಕಲ್ಪನೆಯ ಶಕ್ತಿದೇವತೆಯರೂ ಉಂಟು.

ಜನಪದರ ಗ್ರಾಮದೇವತೆಗಳು:-

ಎಲ್ಲಮ್ಮ, ದುರ್ಗಮ್ಮ, ಚೌಡಮ್ಮ, ಮರಗಮ್ಮ, ಪಾಲಕಮ್ಮ, ದ್ಯಾವಮ್ಮ ಹಾಗೂ ಮಸ್ಸೆಮ್ಮ, ಮಾಪುರತಾಯಿ, ಭಾಗಮ್ಮ, ಮಾಳಮ್ಮ, ಬೀರಮ್ಮ, ಗಂಗಮ್ಮ, ಗುಡ್ಡದಮ್ಮ, ಹಳ್ಳದಮ್ಮ, ಮಾರಮ್ಮ, ಬನದಮ್ಮ ಮತ್ತು ಮರದಮ್ಮ.[೪]

ಗಂಡು ದೇವರುಗಳು:-

ಗಂಡು ದೇವತೆಗಳ ಸೃಷ್ಟಿ ಬೇಟೆ ಮತ್ತು ಪಶುಪಾಲನೆಯ ಹಂತದಲ್ಲಿಯೇ ಆಯಿತೆಂದೂ, ಹೆಣ್ಣು ಮತ್ತು ಗಂಡು ದೇವತೆಗಳ ಸೃಷ್ಟಿ ಒಟ್ಟಿಗೇ ಆಗಿರಬೇಕೆಂದು ಊಹೆ ಮಾಡಲಾಗಿದೆ. ಉದಾಹರಣೆಗೆ ಬ್ಯಾಟರಾಯ (ಬೇಟೆರಾಯ) ಬೇಟೆ ಹಂತದ ದೇವರೆಂದೂ, ಬೀರಪ್ಪ(ಪ್ರಮುಖವಾಗಿ ಕುರುಬರ ದೇವತೆ) ಪಶುಸಂಗೋಪನೆ ಹಂತದ ದೇವರೆಂದೂ ಊಹಿಸಲಾಗಿದೆ. ಹೀಗೇಯೇ ಮಾದಪ್ಪ, ಭೈರವ, ಜುಂಜಪ್ಪ, ಭರಪ್ಪ, ಸಿದ್ದಪ್ಪ, ಜಟ್ಟಿಗ, ಇಗ್ಗು ತಪ್ಪ ಮುಂತಾದ ಅನೇಕ ಗಂಡು ದೇವತೆಗಳು ಕರ್ನಾಟಕದಾದ್ಯಂತ ಇವೆ. ಆದರೂ ಹೆಣ್ಣು ದೇವತೆಗಳ ಸಂಖ್ಯೆಗೆ ಹೋಲಿಸಿದರೆ ಗಂಡು ದೇವತೆಗಳು ಬಹಳ ಕಡಿಮೆ. ದ್ರಾವಿಡ ಸಂಸ್ಕೃತಿಯ ಮೇಲೆ ಆರ್ಯ ಸಂಸ್ಕೃತಿಯ ಒತ್ತಡ ಬಿದ್ದ ಮೇಲೆ ಇದೇ ದೇವತೆಗಳು ಮಹದೇಶ್ವರ, ಭೈರವೇಶ್ವರ, ಸಿದ್ಧೇಶ್ವರ ಇತ್ಯಾದಿಯಾಗಿ ಸೃಷ್ಟೀಕರಣಗೊಂಡಿರುವುದನ್ನು ನಾವು ಗಮನಿಸಬಹುದು.[೫] ಹಾಗೆಯೇ ಚೌಡಮ್ಮ ಚೌಡೇಶ್ವರಿ ಆಗಿಯೂ ಮಾರಮ್ಮ ಮಹೇಶ್ವರಿಯಾಗಿಯೂ ಚಾಮುಂಡಿ ಚಾಮುಂಡೇಶ್ವರಿಯಾಗಿಯೂ ಬದಲಾಗಿದೆ. ವಿಧವಿಧವಾದ ವಿಗ್ರಹಗಳ ಕೆತ್ತನೆಯೂ ಕ್ರಮೇಣ ರೂಢಿಯಲ್ಲಿ ಬಂದಿತು.

ಗ್ರಾಮದೇವತೆಗಳ ಗುಣಲಕ್ಷಣಗಳು:-

ಬುಡಕಟ್ಟು ಜನಾಂಗಗಳ ಶಕ್ತಿದೇವತೆಗಳನ್ನೇ ಗ್ರಾಮದೇವತೆ ಮಾಡಿ ಪೂಜಿಸತೊಡಗಿದರು. ಎಲ್ಲಮ್ಮನನ್ನೂ, ದ್ಯಾಮವ್ವ (ದ್ಯಾವಮ್ಮ) ನನ್ನೂ ಸಾಮಾನ್ಯವಾಗಿ ಎಲ್ಲ ಜನರೂ ಪೂಜಿಸುತ್ತಾರೆ. ಎಲ್ಲಮ್ಮ ತಳವಾರರ, ಮರಗಮ್ಮ ಪಂಚಮರ, ದ್ಯಾವಮ್ಮ ಕಬ್ಬಲಿಗರ, ಪಾಲಕಮ್ಮ ವಾಲೀಕಾರರ, ಚೌಡಮ್ಮ ದೇವಾಂಗ ಅಥವಾ ನೇಕಾರ (ಹಟಗಾರ)ರ, ಕಾಳಮ್ಮ ಪಂಚಾಳರ, ಬೀರಮ್ಮ ಮತ್ತು ಮಾಳಮ್ಮ ಕುರುಬರ, ಗಂಗಮ್ಮ ಅಂಬಿಗರ, ಮರದಮ್ಮ ಕೊರವರ, ಬನದಮ್ಮ ಬೇಡರ, ಹಳ್ಳದಮ್ಮ ಅಗಸರ ಹಾಗೂ ಗುಡ್ಡದಮ್ಮ ಒಡ್ಡರ ಮತ್ತು ವೀರನಾಗರ ದೇವತೆಗಳಾಗಿವೆ.

ಈ ದೇವತೆಗಳಲ್ಲಿ ಕಾಳಮ್ಮ ಮತ್ತು ಚೌಡಮ್ಮ ಶಿಷ್ಟ, ಗ್ರಾಮದೇವತೆಗಳು ಹಾಗೂ ಎಲ್ಲಮ್ಮ, ಮರಗಮ್ಮ, ದುರುಗಮ್ಮ, ದ್ಯಾವಮ್ಮ ಮತ್ತು ಪಾಲಕಮ್ಮ ಪರಿಶಿಷ್ಟ ಗ್ರಾಮದೇವತೆಗಳು ಎಂದು ಪರಿಗಣಿಸಲ್ಪಟ್ಟಿದ್ದಾರೆ. ಶಿಷ್ಟದೇವತೆಗಳಲ್ಲಿ ಕಾಳಮ್ಮಅಕ್ಕ, ಚೌಡಮ್ಮ ತಂಗಿ, ಪರಿಷ್ಟದೇವತೆಗಳಲ್ಲಿ ದ್ಯಾವಮ್ಮ ಹಿರಿಯಕ್ಕ, ಅವಳ ತಂಗಿಯರು ಕ್ರಮವಾಗಿ ಮರಗಮ್ಮ, ದುಗಮ್ಮ, ಪಾಲಕಮ್ಮ, ಒಂದು ರೀತಿಯಲ್ಲಿ ಈ ಗ್ರಾಮದೇವತೆಗಳು ಸಪ್ತ ಮಾತೃಕೆಯರಿಂದ ಒಡಮೂಡಿದ ಸಪ್ತ ಸೋದರಿಯರಾಗಿದ್ದಾರೆ.[೬]

ಮರ, ಕಲ್ಲು, ನೀರು, ಮುಂತಾದ ಅಮೂರ್ತಗಳು ಮೂರ್ತರೂಪ ತಳೆದಾಗ ಗ್ರಾಮದೇವತೆಗಳೆಂದು ಭಾವಿಸಲ್ಪಡುತ್ತವೆ. ಉದಾಹರಣೆಗೆ, ಮರ < ಮರದಮ್ಮ, ಮರಗಮ್ಮ : ನೀರು < ಗಂಗಮ್ಮ : ದೈವ < ದೈವಮ್ಮ, ದ್ಯಾವಮ್ಮ (ದ್ಯಾವಮ್ಮ) ದುರ್ಗ < ದುರ್ಗಮ್ಮ, ಇತ್ಯಾದಿ. ಕಾಳಮ್ಮ, ಚೌಡಮ್ಮ, ಎಲ್ಲಮ್ಮ, ದುರಗಮ್ಮ ಈ ಗ್ರಾಮದೇವತೆಗಳಿಗೆ ಪೌರಾಣಿ ಮತ್ತು ಚಾರಿತ್ರಿಕ ಹಿನ್ನೆಲೆಯೂ ಇದ್ದು ಮೂರ್ತರೂಪದ ದೇವತೆಗಳೆನಿಸಿವೆ. ಗ್ರಾಮದೇವತೆಗಳ ಉಪಾಸಕರಾದ ಜನಪದರು

ಭೂತಪ್ರೇತಗಳಿಗೆ ಹೆದರುವರು. ಭೂತಪ್ರೇತಗಳನ್ನೇ ಗ್ರಾಮದೇವತೆಗಳೆಂದು ಭಾವಿಸಿ ಪೂಜಿಸುವರು. ಬುಡಕಟ್ಟು ಜನಾಂಗಗಳಲ್ಲಿ ಪಶುಪ್ರಾಣಿಗಳನ್ನೂ ಕುಲದೇವತೆಗಳಾಗಿ ಪೂಜಿಸುತ್ತಾರೆ.[೭] ಕುಲದೇವತೆಗಳಾದ ಪ್ರಾಣಿಗಳನ್ನು ಬಲಿಕೊಡುವುದಿಲ್ಲ. ಮತ್ತು ಬಲಿಕೊಡುವ ಪ್ರಾಣಿಗಳು ಕುಲದೇವತೆಗಳಾಗುವುದಿಲ್ಲ.

ಶಿಷ್ಟ ದೇವತೆಗಳ ಸಂಕೇತಗಳು ಚಂದ್ರ < ಸಮ್ಮೃಧಿ : ಕುಂಕುಮ < ಸಂಪತ್ತು : ಕಾಳಮ್ಮ< ಬೀಜ, ಕತ್ತಲೆ : ಚೌಡಮ್ಮ< ಚೇಳು, ಚಾವಡಿ. ಪರಿಶಿಷ್ಟ ದೇವತೆಗಳ ಸಂಕೇತಗಳು ಭಂಡಾರ < ಫಲೋತ್ಪತ್ತಿ, ಕೊಡ < ಗರ್ಭ, ಕೋಣ, ಕುರಿ, ಕೋಳಿ < ಗುಲಾಮರು. ವಿಕೃತಿ ಸಂಕೇತವಾಗಿ ಎಲ್ಲಮ್ಮನ ಯೋನಿಪೂಜೆ, ವ್ಯಭಿಚಾರದ ಸಂಕೇತವಾಗಿ ಮಾತಂಗಿಯ ಪೂಜೆ ನಡೆಸುವರು.[೮]

ಗ್ರಾಮ ದೇವತೆಗಳಿಗೆ ಸಂಬಂದಿಸಿದಂತೆ ಜನಪದರ ಹಾಡುಗಳು:-

೧. ದ್ಯಾವಮ್ಮನ ಹಾಡುಗಳು:-

ಉತ್ತರ ಕರ್ನಾಟಕದಲ್ಲಿ ಸಪ್ತಮಾತೃಕೆಯರಲ್ಲಿ ದ್ಯಾವಮ್ಮ ಹಳ್ಳಿಗಳ ಮುಖ್ಯ ಗ್ರಾಮದೇವತೆ. ಉಳಿದವರು ಆಕೆಯ ತಂಗಿಯರು. ಈ ಕೆಳಗಿನ ಹಾಡಿನಲ್ಲಿ ದ್ಯಾವಮ್ಮ ತಾನೆ ಊರೊಳಗಿನ ಜನರ ಮನೆಗೆ ಹೋಗಿ ಪೂಜಾದ ಸಾಮಾನು ತರಲು ಕಳಿಸುವುದು, ಆಕೆ ಶ್ರೀ ಸಾಮಾನ್ಯರ ಮನುಷ್ಯಳೆಂಬುದು ಗೊತ್ತಾಗುವುದು.

ಬಡಿಗ್ಯಾರ ಓಣಿಗೆ ಹೋಗ್ಯಾಳ ನಮ ದ್ಯಾಮವ್ವ
ಬಡಿಗ್ಯಾರ ಅಣ್ಣನ್ನ ಕರಸ್ಯಾಳ
ಬಡಿಗ್ಯಾರ ಅಣ್ಣನ್ನ ಕರಿಸಿ ಕೇಳುತಾಳ
ಉದಿಯಾಕ ಬಂಡಿ ಬರಬೇಕ
ಕುಂಬಾರ ಓಣಿಗೆ ಹೋಗ್ಯಾಳ ನಮ ದ್ಯಾಮವ್ವ
ಕುಂಬಾರ ಅಣ್ಣನ್ನ ಕರಸ್ಯಾಳ
ಕುಂಬಾರ ಅಣ್ಣನ್ನು ಕರಿಸಿ ಕೇಳುತಾಳ
ಉದಿಯಾಕ ಮಗಿ ಬರಬೇಕ [೯]

೨. ಮರಗಮ್ಮನ ಹಾಡುಗಳು:-

ದ್ಯಾವಮ್ಮ ಊರ ಒಳಗಿದ್ದರೆ ಮರಗಮ್ಮ ಊರ ಹೋಗಿರುವಳು. ಇವರಿಬ್ಬರೂ ಸೇರಿ ಊರಕಾಯುವರು. ಗಾಳಿಯಿಂದ ರಕ್ಷಿಸುವವಳು.ರೋಗ ರುಜಿನ ಸಾವು ನೋವುಗಳನ್ನು ತಪ್ಪಿಸುವವಳು. ಮರಗಮ್ಮ ನಾಲವಾರದ ಸಿದ್ದಣ್ಣಗೌಡನಿಗೆ ಜಾಗ ಕೊಡಲು ಕೇಳುವ ಈ ಹಾಡು ತುಂಬ ಆತ್ಮೀಯವಾಗಿ ಬಂದಿದೆ.

ಬಾಳಿಯ ಈ ಹಣ್ಣು ಬಲಗೈಯಾಗ್ಹಿಡಕೊಂಡು ಬಾಗೋಡಿ ಗುಡ್ಡ ಇಳದಾಳ ।ಎನಗುಡಿ ಕಾಜಿನಕಂಭ ।

ಬಾಗೋಡಿ ಈ ಗುಡ್ಡ ಇಳಿಯುತ ಕೇಳ್ಯಾಳ ಈ ಊರಗೌಡನ ಹೆಸೇನ । ಎನಗುಡಿ ।

ಈ ಊರ ಗೌಡನ ಹೆಸರು ಸಿದ್ದಣ್ಣಗೌಡ ಜಾಗಕೊಡು ನನಗ ಅರಗಳಿಗೆ। ಎನಗುಡಿ

ಜಾಗವ ಕೊಡಲಾರೆ ಜನದ ಹರಲಿ ಹೊರಲಾರೆ ಹೊಡಿತಾಯಿ ಬಂಡಿ ಹೊರಿಯಾಕ। ಎನಗುಡಿ।

ಬಂಡಿಯ ಹೊಡಿಲಾಕ ರಂಡೆಲ್ಲ ಮುಂಡೆಲ್ಲ ಗುಂಡೀಗೆ ಸೀಳಿ ರಗತಾವು। ಎನಗುಡಿ।

ಗುಂಡಿಗಿಯು ಸೀಳಿ ರಗತಾವು ತಕ್ಕಂಡು ಬಂಡಿಗಿ ಚಳಿಯ ಕೊಡುವೇನ। ಎನಗುಡಿ। [೧೦]

೩. ಕಾಳಮ್ಮನ ಹಾಡುಗಳು:-

ಗ್ರಾಮೀಣ ಬದುಕಿನಲ್ಲಿ ಕೃಷಿ ಮುಖ್ಯ ಉದ್ಯೋಗ, ಒಕ್ಕಲತನಕ್ಕೆ ಬೇಕಾಗುವ ಕೂರಿಗೆ, ನೇಗಿಲು, ದಿಂಡು, ತಾಳ, ಹಲಗಿ, ಬಂಡಿ, ನೆಟ್ಟಲಗಿ ಮಾಡಿಕೊಡುವವರು – ಕಟ್ಟಿಗೆ ಸಮಾನುಗಳನ್ನು ಮಾಡುವವರು ಬಡಿಗೇರು. ಕಾಳಮ್ಮ ಈ ಜನರ ಆರಾಧ್ಯ ದೇವತೆ ಬಡಿಗೇರರ ಇತರ ಪಂಗಡದವರಾದ ಅಕ್ಕಸಾಲಿಗ, ಕಂಬಾರ, ಕಂಚಗಾರರು ಈ ದೇವತೆಯ ಭಕ್ತರು.

ಒಳಕೋಟಿ ಒಳಗ್ಹಾಳ ಹೊರಕೋಟಿ ಹೊರಗ್ಹಾಳ

ಕೀಲ್ಯಾದ ಅಗಸಿ ಕೆಳಗ್ಹಾಳ

ಕೀಲ್ಯಾದ ಅಗಸಿ ಕೆಳಗ್ಹಾಳ ಕಾಳಮ್ಮ

ಬಂಡೀಲಿ ಏರಿ ಬರುತಾಳ

ಬಂಡೀಲಿ ಏರಿ ಬರುತಾಳ ಕಾಳಮ್ಮ

ನಾಲ್ಕು ಬಾಜಾರ ತಿರುಗ್ಯಾಳ [೧೧]

೪. ಚೌಡಮ್ಮನ ಹಾಡುಗಳು:-

ಹಳ್ಳಿ ಜನರು ಉಡಲು ತೊಡಲು ಬೇಕಾಗುವ ಬಟ್ಟೆ ಮಾಡಿಕೊಡುವವರು ಹಟಗಾರರು, ನೇಕಾರರು, ದೇವಾಂಗದವರು. ಈ ಜನರು ಆರಾಧಿಸುವ ದೇವತೆ ಚೌಡಮ್ಮನಾಗಿದ್ದಾಳೆ. ಈಕೆಯ ಗುಡಿಯ ಮುಂದೆ ಆಕೆಯ ಭಕ್ತರೆಲ್ಲ ಸೇರಿ ಆಕೆಯ ಗುಣಗಾನ ಮಾಡುತ್ತ ಕೋಲು ಹಾಕುವರು.

ಶರಣೆನ್ನಿರಯ್ಯ ಶರಣೆನ್ನಿರೊ ತಾಯ್ತಂದೆ ಪಾದಕ್ಕೆ ಶರಣೆನ್ನಿರೊ

ಶರಣೆನ್ನಿರಯ್ಯ ಶರಣೆನ್ನಿರೊ ಈ ಊರ ಚೌಡಮ್ಮಗೆ ಶರಣೆನ್ನಿರೊ

ಬುಡಕಟ್ಟಿನವರದು ಒಂದು ಗುಂಪಿನ ಸಮಾಜವಾದರೆ ಗ್ರಾಮೀಣರದು ಹಲವು ಗುಂಪುಗಳಿಂದ ಕೂಡಿದ ಸಮಾಜ. ಬುಡಕಟ್ಟಿನ ಜನಕ್ಕೆ ಕ್ರೂರಪ್ರಾಣಿಗಳು ಸಾಕುಪ್ರಾಣಿಗಳಾಗುತ್ತಿದ್ದಂತೆ ಅವರಲ್ಲಿ ಪಶುಪಾಲನಾ ವೃತ್ತಿ ಬೆಳೆಯುತ್ತಿದ್ದಂತೆ, ಬೇಟೆಗಳು ಸಿಗದಾದಾಗ ಧಾನ್ಯಗಳನ್ನು ಬಿತ್ತಿ ಬದುಕು ಸಾಗಿಸಬೇಕೆಂಬ ವಿಚಾರ ಬರುತ್ತಿದ್ದಂತೆ, ಎಲ್ಲರ ಅವಶ್ಯಕತೆಯೂ ಒಂದೆ ಎಂಬುದು ಗೊತ್ತಾದಂತೆ ಗ್ರಾಮಗಳ ರಚನೆ ಆರಂಭಗೊಂಡಿತು. ಗುಂಪುಗಳು ಸೇರಿ ಗ್ರಾಮಗಳಾದವು.

ಬುಡಕಟ್ಟಿನಲ್ಲಿ ಪಶುಪಕ್ಷಿ ಪ್ರಾಣಿಗಳಂತಿರುತ್ತಿದ್ದ ಮನುಷ್ಯ ಇಲ್ಲಿ ಸಾಮೂಹಿಕನಾಗಿ ಇರಬೇಕಾಯಿತು. ತನ್ನ ಮನಸ್ಸಿಗೆ ಬಂದಂತೆ ಇರುವುದು ಅಸಾಧ್ಯವಾಯಿತು. ಒಂದೊಂದು ಬುಡಕಟ್ಟಿನವರು ಒಂದೊಂದು ಕೇರಿಗಳಾದವು. ಐದು ಬೆರಳುಗಳು

ಒಂದು ಕೆಲಸಕ್ಕೆ ಒಂದಕ್ಕೊಂದು ಸಹಕಾರ ನೀಡುವಂತೆ ಎಲ್ಲ ಬುಡಕಟ್ಟಿನವರ ಕೇರಿಗಳು ಊರಿನ ಹಿತದೃಷ್ಟಿಯಿಂದ ಸರ್ವರ ಏಳಿಗೆಗಾಗಿ ಕೂಡಿ ಇರುವ, ಕೂಡಿ ದುಡಿಯುವ, ಕೂಡಿ ಉಣ್ಣುವ, ಕೂಡಿ ಅನ್ಯೋನ್ಯವಾಗಿರುವ, ವಿಚಾರ ಅನುಭವ ಎಲ್ಲರಿಗೂ ಬರತೊಡಗಿತು.[೧೨] ಬೆಳಗಾದರೆ ಗ್ರಾಮದಲ್ಲಿ ಒಬ್ಬರ ಮಾರಿ ಒಬ್ಬರು ನೋಡಬೇಕಾಗಿರುವಾಗ ಸೌಹಾರ್ದತೆಯಿಂದ, ಸೌಖ್ಯತೆಯಿಂದ ನ್ಯಾಯ ನೀತಿ, ಸಜ್ಜನಿಕೆಯಿಂದ ಎಲ್ಲರೂ ವರ್ತಿಸಲು ಆರಂಭಿಸಿದರು. ಯಾರಾದರೂ ಹೆಚ್ಚು ಕಡಿಮೆ ನಡಕೊಂಡರೆ ಗ್ರಾಮದೇವತೆಯ ಗುಡಿಯಲ್ಲಿ ಪಂಚಾಯತಿ ಸೇರಿಸಿ ದೇವಿಗೆ ಮುಟ್ಟಿಸಿ ಬಾಯಿ ತೊಳೆದುಕೊಂಡು ಇರುವಂತೆ ತಪ್ಪಿತಸ್ಥನಿಗೆ ತಿಳಿಸುತ್ತಿದ್ದರು. ದೇವಿಯೇ ಸರ್ವರ ರಕ್ಷಕಳು, ಶಿಕ್ಷಕಳು ಅವಳಿಗೆ ಮೀರಿ ನಡೆಯುವುದು ಯಾರು ಮಾಡುತ್ತಿರಲಿಲ್ಲ.

ದೇವತೆಯರ ವಿಧಗಳು ಮತ್ತು ರೂಪಗಳು:-

೧. ರುದ್ರದೇವತೆಯರು, ೨.ಸೌಮ್ಯದೇವತೆಯರು ಹಾಗೂ ೩. ಶಕ್ತಿದೇವತೆಯರು ಎಂದು ವಿಂಗಡಿಸ ಬಹುದಾದರೂ, ಈ ಎಲ್ಲ ದೇವತೆಯರ ಹಿನ್ನೆಲೆಯು ಐತಿಹ್ಯ, ಪುರಾಣ, ನಂಬಿಕೆ ಮತ್ತು ಆಚರಣೆಗಳನ್ನು ಗಮನಿಸುತ್ತಾ ಹೋದಂತೆ ವಿಂಗಡಣೆ ಮಾಡುವುದೇ ತಪ್ಪಾಗುತ್ತದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮಲೆನಾಡು ಹಾಗೂ ಕರಾವಳಿ ಆಯಾ ಪ್ರದೇಶದ ಜನಜೀವನ ಹಾಗೂ ಪ್ರಾಕೃತಿಕ ವೈವಿಧ್ಯದ ಹಿನ್ನೆಲೆಯಲ್ಲಿ ಅನೇಕ ರೀತಿಯ ದೇವತೆಗಳ ಸೃಷ್ಟಿಯನ್ನು ನಾವು ಕಾಣಬಹುದು. ಉದಾಹರಣೆಗೆ ಮಂಕಮ್ಮ (ಕಂಕು), ಹುಚ್ಚಮ್ಮ (ಹುಚ್ಚ), ಪಳೇಕಮ್ಮ (ಪ್ಲೇಗು), ಕುಕ್ಕಲಮ್ಮ (ನಾಯಿಕೆಮ್ಮು), ಮುಳ್ಳುಕಟ್ಟಮ್ಮ (ದೆವ್ವಬಿಡಿಸುವುದು), ಕಾಳಮ್ಮ, ಉರಿಮಾರಮ್ಮ, ಚೌಡಮ್ಮ, ಪಟಲದಮ್ಮ (ಉಗ್ರ ರೂಪ), ಮಸಣಮ್ಮ(ಸ್ಮಶಾನ), ಗಂಗಮ್ಮ(ನೀರು), ಕಂಬದಮ್ಮ (ಕಂಬ), ದಂಡಮ್ಮ (ದಂಡಿನ ಅಮ್ಮ), ಗುಡ್ಡದಮ್ಮ (ಗುಡ್ಡ) ಗಡಿಮಾರಿ (ಗಡಿಕಾಯುವ ದೇವತೆ) ಗಿಡದಮ್ಮ (ಕಾಡಿನ ದೇವತೆ) ಇತ್ಯಾದಿ. ಮಾರಮ್ಮಗಳಲ್ಲಿಯೇ ಅನೇಕ ವಿಧಗಳು ಉಂಟು. ಕಲ್ಲುಮಾರಮ್ಮ, ಕೋಟೆಮಾರಮ್ಮ, ಓಣಿ ಮಾರಮ್ಮ ಇತ್ಯಾದಿ ಊರಿನ ಹೆಸರಿನ ದೇವತೆಗಳೂ ಉಂಟು, ಕನಸಿನ ಮೂಲದ ದೇವತೆಗಳೂ ಉಂಟು.[೧೩] ವರ್ಣಸಂಕರದ ಹಿನ್ನೆಲೆಯ ಮಾರಮ್ಮನ ಬೇರೆ ಬೇರೆ ರೂಪಗಳೂ ಉಂಟು, ಸತಿ ಪದ್ಧತಿಯ ಹಿನ್ನೆಲೆಯ ಮಾಸ್ತಮ್ಮನೂ ಉಂಟು.

ಇನ್ನು ದೇವತೆಯರ ರೂಪಗಳು ಹೇಗಿರುತ್ತವೆಂದರೆ ಅದೂ ವೈವಿಧ್ಯತೆಯ, ಹುತ್ತವನ್ನೇ ಇಂಥ ದೇವತೆ ಎಂದು ಪೂಜಿಸುವುದು, ಮೂರು ಕಲ್ಲು ಇಟ್ಟು ಕುಂಕುಮ ಹಚ್ಚಿ ಇಂಥ ದೇವತೆ ಎಂದು ಪೂಜಿಸುವುದು, ಮರದರೆಂಬೆ(ಕಂಬ)ನೆಟ್ಟು ಆ ದೇವತೆಯ ಹೆಸರನ್ನು ಆರೋಪಿಸಿ ಪೂಜಿಸುವುದು ಮರವನ್ನೇ ದೇವರನ್ನಾಗಿ ಪೂಜಿಸಿವುದು. ಇದು ಪ್ರಾಚೀನ ರೀತಿ, ಇತ್ತೀಚಿನವರೆಗೂ ಅನೇಕಾನೇಕ ಗ್ರಾಮದೇವತೆಗಳ ರೂಪವೇ ಇದಾಗಿತ್ತು. ಇತ್ತೀಚೆಗೆ ವಿಗ್ರಹಗಳ ರೂಪ ಈ ದೇವತೆಗಳಿಗೂ ಬರುತ್ತಿದೆ.[೧೪] ಬಹುತೇಕ ಚಾಮುಂಡಿ ಮತ್ತು ಕಾಳಿಕಾಮೂರ್ತಿಗಳ ರೂಪವನ್ನು ಉಳಿದೆಲ್ಲ ಹೆಣ್ಣು ದೇವತೆಯರಿಗೂ ಆರೊಪಿಸಲಾಗುತ್ತಿದೆ. ಜನಪ್ರಿಯ ಕ್ಯಾಲೆಂಡರ್‌ಗಳ ಲಕ್ಷ್ಮಿ, ಪಾರ್ವತಿಯರ ರೂಪಗಳನ್ನು ನಮ್ಮ ಗ್ರಾಮದೇವತೆಯರು ಎರವಲು ಪಡೆಯುತ್ತಿದ್ದಾರೆ.

ಗ್ರಾಮ ದೇವತೆಯ ಆಚರಣೆ ಮತ್ತು ಆರಾಧನೆಗಳು:-

ದೇವರುಗಳನ್ನು ಪೂಜಿಸುವ ವಿಧಾನಗಳು ನೂರಾರು, ಸಾಮಾನ್ಯವಾಗಿ ಹೆಣ್ಣು ದೇವತೆಗಳಿಗೆ ಮಂಗಳವಾರ ಮತ್ತು ಶುಕ್ರವಾರ ಪೂಜೆ ನಡೆದರೆ ಗಂಡು ದೇವತೆಗಳಿಗೆ ಭಾನುವಾರ, ಸೋಮವಾರ ಹಾಗೂ ಶನಿವಾರ ಪೂಜೆ ನಡೆಯುತ್ತದೆ. ಈ

ವಾರಗಳ ಕಟ್ಟುಪಾಡು ಕೂಡ ಇತ್ತೀಚಿನ ಬೆಳವಣಿಗೆಯೇ ಇರಬಹುದು. ಏಕೆಂದರೆ ಪ್ರಾಚೀನ ಕಾಲದಲ್ಲಿ ನಮ್ಮ ಗ್ರಾಮದೇತೆಗಳಿಗೆ ಗುಡಿಗೋಪುರಗಳಾಗಲೀ, ಹಾದು ಹೋಗಬೇಕಾದ ಪೌಳಿ, ಹೆಬ್ಬಾಗಿಲುಗಳಾಗಲೀ ಇರಲಿಲ್ಲ. ಅನೇಕ ಹಳ್ಳಿಗಳ ಗ್ರಾಮ ದೇವತೆಗಳಿಗೆ ಇಂದಿಗೂ ಬಾಗಿಲುಗಳಿಲ್ಲ. ಗುಡಿಸಲೇ ಇವೆ. ಯಾರು ಯಾವಾಗ ಬೇಕಾದರೂ ಪೂಜೆ ಮಾಡುವ ಮುಕ್ತ ವಾತಾವರಣವೂ ಹಿಂದೆ ಇತ್ತು. ಮಲೆನಾಡು ಹಾಗೂ ಕರಾವಳಿಯ ಅನೇಕ ಗಿರಿಜನರ ದೇವತೆಗಳು ಇವತ್ತಿಗೂ ಬಯಲಿನಲ್ಲಿಯೇ ಇವೆ. ಮರವೋ ಬಂಡೆಯೋ ಆಶ್ರಯತಾಣಗಳು.[೧೫] ಗುಡಿಗಳು ಊರಾಚೆಗಿನ ಬಯಲಿನಲ್ಲಿಯೋ, ಮರದ ತೋಪಿನಲ್ಲಿಯೋ ಇರುವುದನ್ನು ಬಯಲು ಸೀಮೆಯಲ್ಲಿಯೂ ನಾವು ಕಾಣಬಹುದು.

ಇವೆಲ್ಲ ಅಂದಿನ ದೇವರುಗಳು ಅತ್ಯಂತ ಮುಕ್ತವಾಗಿದ್ದವು ಎಂಬುದನ್ನು ಸಾಬೀತು ಪಡಿಸುತ್ತವೆ. ಆರ್ಯರ ಆಕ್ರಮಣದ ನಂತರ ಈ ಎಲ್ಲ ಕಟ್ಟುಪಾಡುಗಳು ಹಾಗೂ ತಾರತಮ್ಯ ಹುಟ್ಟಿಕೊಂಡಂತೆ ಕಾಣುತ್ತದೆ. ಅಸ್ಪೃಶ್ಯತೆಯ ಕಾರಣಕ್ಕಾಗಿ ಅನೇಕರು ಇಂದಿಗೂ ಕೆಲವು ಗುಡಿಗಳಿಂದ ಆಚೆ ಇರಬೇಕಾದ ಪರಿಸ್ಥಿತಿ ಇಂದೂ ಇದೆ. ದೇವರುಗಳನ್ನು ಕೂಡ ಕೆಲವೇ ಜಾತಿ ಅಥವಾ ವರ್ಗದ ಸ್ವತ್ತನ್ನಾಗಿ ಮಾಡಿಕೊಂಡ ಕ್ರೂರ ವ್ಯವಸ್ಥೆ ಇದೀಗ ಕೈಗಾರಿಕಾ ಹಂತದಲ್ಲಿ ಮತ್ತೆ ಬದಲಾವಣೆ ಪಡೆಯುವ ಆಶಯ ಹೊಂದಿದೆ. ಇನ್ನು ಗ್ರಾಮದೇವತೆಗಳಿಗೆ ಸಂಬಧಿಸಿದ ಆಚರಣೆ ಮತ್ತು ಆರಾಧನೆಗಳನ್ನು ಪರಿಶೀಲಿಸಹೊರಟರೆ ಅನೇಕ ವಿಸ್ಮಯಕಾರಿ ಅಂಶಗಳು ನಮ್ಮ ಮುಂದೆ ಬರುತ್ತವೆ. ಪ್ರತಿಯೊಂದು ದೇವರಿಗೂ ವರ್ಷಕ್ಕೊಂದು ಹಬ್ಬ ಜರಗುತ್ತದೆ. ಇಡೀ ವರ್ಷದಲ್ಲಿ ನಡೆಯುವ ಸಾಮಾನ್ಯ ಪೂಜೆ ಜೊತೆಗೆ ಹಬ್ಬದ ಸಂದರ್ಭದಲ್ಲಿ ವಿಶೇಷ ಆರಾಧನೆ ನಡೆಯುತ್ತದೆ.[೧೬] ಈ ಆರಾಧನೆಯ ಭಾಗವಾಗಿ ಅನೇಕ ಆಚರಣೆಗಳು ಬರುತ್ತವೆ.

ಹಬ್ಬಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ ನಡೆಯುತ್ತವೆ. ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳು ಎಲ್ಲ ದುಡಿಯುವ ವರ್ಗಕ್ಕೂ ವಿಶ್ರಾಂತಿಯ ತಿಂಗಳುಗಳು. ಸುಗ್ಗಿಯ ದವಸಧಾನ್ಯಗಳು ಮನೆ ತುಂಬಿರುತ್ತವೆ. ಒಂದು ದಿನದ ಹಬ್ಬದಿಂದ ೮ ದಿನದ ಹಬ್ಬದವರೆಗೆ ನಿಗದಿತ ಅವಧಿಯಲ್ಲಿ ನಡೆಯುತ್ತವೆ. ಕೆಲವು ಹಬ್ಬಗಳನ್ನು ಒಂದೇ ಗ್ರಾಮದವರು ಪ್ರತ್ಯೇಕವಾಗಿ ಆಚರಿಸದರೆ, ಮತ್ತೆ ಕೆಲವು ಹಬ್ಬಗಳನ್ನು ಹತ್ತಾರು ಗ್ರಾಮಗಳವರು ಒಟ್ಟಿಗೆ ಸೇರಿ ಆಚರಿಸುತ್ತಾರೆ. ಕೆಲವು ಹಬ್ಬಗಳಲ್ಲಿ ನಾಲ್ಕಾರು ದೇವರುಗಳು ಕೂಡುವುದೂ ಉಂಟು. ವರ್ಷವಿಡೀ ದುಡಿದ ಜನ ಈ ಸಂದರ್ಭದಲ್ಲಿ ಒಟ್ಟಾರೆ ಕಲೆತು ಹಾಡಿ, ಕುಣಿದು, ದಣಿವಾರಿಸಿಕೊಂಡು ನಲಿಯುತ್ತಾರೆ. ಹರಕೆ ಹೊತ್ತವರು ಕಠಿಣ ವ್ರತಗಳಿಗೆ ತಮ್ಮನ್ನು ತಾವೇ ಒಪ್ಪಿಸಿಕೊಂಡು ಶಿಕ್ಷೆಯನ್ನು ಅನುಭವಿಸುತ್ತಾರೆ. ನಮ್ಮ ಗ್ರಾಮದೇವತೆಯ ಹಬ್ಬಗಳಲ್ಲಿ ಆಚರಿಸುವ ನಾನಾ ಆಚರಣೆಗಳನ್ನು ಈ ಮುಂದಿನಂತೆ ನೋಡಬಹುದು.

ಸಾಮಾಜಿಕ ಆಚರಣೆಗಳು:-

ಆರತಿ, ಕೊಂಡ-ಬಂಡಿ, ಮಡೆ, ತೇರು, ಪರ ಜಾತ್ರೆ, ಉತ್ಸವ ಇತ್ಯಾದಿ.

ವೈಯಕ್ತಿಕ ಆಚರಣೆಗಳು (ಸೇವೆಗಳು):-

ಸಿಡಿ ಆಡುವುದು, ಗಾವು ಸಿಗಿಯುವುದು, ಬಾಯಿಬೀಗ ಹಾಕಿಕೊಳ್ಳುವುದು, ಚಾವುಟಿಸೇವೆ, ಬೆತ್ತಲೆಸೇವೆ, ಬೇವಿನುಡುಗೆ ಸೇವೆ, ಹಿಂಗಾರಸೇವೆ, ಮಡಿಸೇವೆ, ಉರುಳುಸೇವೆ, ಅಲಗುಸೇವೆ, ಮುಳ್ಳಾವಿಗೆಸೇವೆ ಇತ್ಯಾದಿ. ಸಾಮಾಜಿಕ ಆಚರಣೆಗಳು ಜನಸಮುದಾಯದ ವಿಧಿಗಳು. ತಂಬಿಟ್ಟು ಮಾಡಿ, ಅದರಲ್ಲಿಯೇ ಗುಳಿಮಾಡಿ ಎಣ್ಣೆಬಿಟ್ಟು ಬತ್ತಿಯ ದೀಪ ಹೊತ್ತಿಸಿ, ದೀಪದ ಸುತ್ತ ಹೂ ಅಥವಾ ಅಡಿಕೆ ಹೊಂಬಾಳೆಯ ಅಲಂಕಾರ ಮಾಡಿ ಮಿಂಚುವ ಆರತಿಯನ್ನು ಹೊತ್ತು ಪ್ರತಿ

ಮನೆಯ ಹೆಣ್ಣುಮಕ್ಕಳು ದೇವಸ್ಥಾನಕ್ಕೆ ಬಂದು ಪೂಜೆ ಮಾಡಿಸುವುದು ಆರತಿ ಇದು ಬಯಲುಸೀಮೆ ಹೆಣ್ಣು ಮಕ್ಕಳ ಆಚರಣೆ ಕೂಡ. ಕೊಂಡ ಬಂಡಿ ಬಹುತೇಕ ಗಂಡಸರ ಆಚರಣೆ ಹಾಗೂ ಶಕ್ತಿಸಾಮರ್ಥ್ಯ ಪ್ರದರ್ಶನದ ಆಚರಣೆಯೂ ಹೌದು. ಒಟ್ಟುಮಾಡಿದ ಟನ್‌ಗಟ್ಟಲೆ ಸೌದೆಗಳನ್ನು ಉರಿಸಿ ನಿಗಿನಿಗಿ ಕೆಂಡದಲ್ಲಿ ದೇವರ ಪ್ರತಿಮೆ ಹೊತ್ತು ಹಾಯುವ ರೋಮಾಂಚನಕಾರಿ ಆಚರಣೆಯೇ ಕೊಂಡ, ಬೇರೆ ಬೇರೆ ಊರುಗಳ ಹತ್ತಾರು ದೇವತೆಗಳನ್ನು ಒಟ್ಟಾಗಿ ಸೇರಿಸುವುದು. ಗಂಡು ದೇವರಿಗೂ ಹೆಣ್ಣು ದೇವರಿಗೂ ಮದುವೆ ಮಾಡಿಸುವುದು, ದೇವರುಗಳಲ್ಲಿಯೇ ಅಕ್ಕತಂಗಿಯರ ಸಂಬಂಧ ಕಲ್ಪಿಸುವುದು. ಹೀಗೆ ಹತ್ತಾರು ಊರುಗಳ ಜನ ಒಟ್ಟಿಗೇ ಸೇರಿದಾಗ ಜಾತ್ರೆ ನಡೆಯುವುದು ಅತ್ಯಂತ ಸಹಜ, ಬೆಂಡು, ಬತ್ತಾಸು, ಮಿಠಾಯಿಗಳ ಸುಗ್ಗಿ ಒಂದು ಕಡೆಯಾದರೆ, ಬಳೆ, ಟೇಪು, ಬಣ್ಣದ ಬಟ್ಟೆಗಳ ಸಂಭ್ರಮ ಮತ್ತೊಂದು ಕಡೆ ಇದೇ ಸಂದರ್ಭದಲ್ಲಿ ತೇರು ಪಲ್ಲಕಿ ಅಥವಾ ಉತ್ಸವಗಳು ಅತ್ಯಂತ ರಂಜಕವಾಗಿ ಇರುತ್ತವೆ.[೧೭] ಈ ಎಲ್ಲ ಸಂಭ್ರಮಗಳು ಗ್ರಾಮ ದೇವತೆ ಹಬ್ಬಗಳ ಒಂದು ಮುಖವಾದರೆ, ಬಲಿ, ಸಿಡಿ, ಪಾವಾಡವಂಥ ಕ್ರೂರ ಆಚರಣೆಗಳದು ಇನ್ನೊಂದು ಮುಖ. ಬೆನ್ನಿನ ನರಕ್ಕೆ ಕಬ್ಬಿಣದ ಕೊಂಡಿ ಸಿಕ್ಕಿಸಿ, ಮೇಲೆತ್ತಿ ಗಿರಿಗಿರಿ ತಿರುಗಿಸುವ, ಮೊಣಕಾಲು ಮೀನುಖಂಡಕ್ಕೆ ಗೂಟ ಹೊಡೆಯುವ, ಅಂಗೈಗೆ ಕಬ್ಬಿಣದ ಪಂಚಾರತಿ ಚುಚ್ಚುವ, ಬಾಯಿಗೆ ಮಾತನಾಡದಂತೆ ಬೆಳ್ಳಿಯ ಬೀಗ ಹಾಕುವ, ಚಾವುಟಿಯಿಂದ ಹೊಡೆದುಕೊಳ್ಳುವ ಅಪಾಯಕಾರಿ ಹರಕೆಗಳು ನಡುಕಹುಟ್ಟಿಸುತ್ತವೆ. ಸಂಪೂರ್ಣ ಬೆತ್ತಲಾಗಿ ದೇವತೆಯ ಗುಡಿ ಸುತ್ತ ಪರ್ಯಟನೆ ನಡೆಸುವ ಆಚರಣೆಗಳೂ ಉಂಟು.

ಈ ಎಲ್ಲ ಆಚರಣೆಗಳ ಹಿಂದೆ ಮನುಷ್ಯ ಚಿಕ್ಕವನು, ಅಸಹಾಯಕ ಎನ್ನುವ ಭಾವನೆಯಿದೆ. ತನ್ನ ನಿತ್ಯಜೀವನದಲ್ಲಿ ಮಾಡುವ ಅನೇಕಾನೇಕ ತಪ್ಪುಗಳ ಪಾಪ ಪ್ರಜ್ಞೆ ಇದೆ. ಈ ಪಾಪಪ್ರಜ್ಞೆಯಿಂದ ಮುಕ್ತಗೊಳ್ಳುವ ತವಕದಲ್ಲಿ ಕಠಿಣ ಆಚರಣೆಗಳಿಗೂ ಮನುಷ್ಯ ತನ್ನನ್ನು ತಾನು ಒಪ್ಪಿಸಿಕೊಳ್ಳುತ್ತಾನೆ. ಅಲ್ಲದೆ ಇಡೀ ಸಮೂಹ ಇಂಥ ಆಚರಣೆಗಳಿಗೆ ತಮ್ಮನ್ನು ಒಪ್ಪಿಸಿಕೊಂಡಾಗ ಇದು ಬೇಡದ ಯಾವುದೋ ಮನಸ್ಸು ದೂರವಿರಬೇಕೆಂದುಕೊಂಡರೂ ಹಾಗಿರಲು ಬಿಡುವುದಿಲ್ಲ. ಹೀಗಾಗಿ ಜನ ಇಂಥ ಸಮಯದಲ್ಲಿ ಸಾಮೂಹಿಕ ಭಾವಾವೇಶಕ್ಕೆ ಒಳಗಾಗಬೇಕಾಗುತ್ತದೆ.

ಇನ್ನು ದೇವರ ಹೆಸರಿನಲ್ಲಿ ಬಸವಿ ಬಿಡುವ, ಜೋಗತಿ ದೀಕ್ಷೆ ಕೊಡುವ, ದೇವ ದಾಸಿಯರನ್ನಾಗಿಸುವ ಸಮಾಜಕಂಠಕ ಆಚರಣೆಗಳು ನಮ್ಮಲ್ಲಿ ಆಗುತ್ತಿವೆ. ಆಗಿ ಹೋಗಿವೆ. ದೇವದಾಸಿಯರ ಆಚರಣೆ ಇತ್ತೀಚಿನವರೆಗೂ ಸುದ್ದಿಯಲ್ಲಿದ್ದುದನ್ನು ನಾವು ಕಂಡಿದ್ದೇವೆ. ಹೀಗೆಯೇ ದೇವರ ಹೆಸರಿನಲ್ಲಿ ಗಂಡಸರು ಜೋಗಪ್ಪಗಳಾಗುವ, ಪುರವಂತರಾಗುವ ಬೇರೆ ಬೇರೆ ರೀತಿಯ ವೃತ್ತಿಗಾಯಕರಾಗುವ ಸಂಪ್ರದಾಯಗಳು ನಡೆದು ಬಂದಿವೆ.

ಹಾಡು ಕತೆಗಳು:-

ನಮ್ಮ ಕರ್ನಾಟಕ ಜಾನಪದ ವಿವಿಧ ವೈವಿಧ್ಯಗಳಿಗೆ ತುಂಬ ಹೆಸರಾದದ್ದು. ವರ್ಣರಂಜಿತ ಕಲೆಗಳು, ಸುಶ್ರಾವ ಗೀತೆಗಳು, ಹಲವು ಜನಪದ ನಾಟಕ ಪ್ರಕಾರಗಳು ನಮ್ಮನ್ನೂ ಸೂರೆಗೊಳ್ಳುತ್ತವೆ. ಗ್ರಾಮದೇವತೆಯರ ಆಚರಣೆ ಹಿನ್ನೆಲೆಯಲ್ಲಿ ಸೋಮನ ಕುಣಿತ, ಪೂಜಾ ಕುಣಿತ, ಮಾರಿ ಕುಣಿತ, ವೀರ ಮಕ್ಕಳ ಕುಣಿತ, ಪಟಾಕುಣಿತ, ನಂದಿಕಂಬ ಕುಣಿತ, ಡೊಳ್ಳು ಕುಣಿತ ಮುಂತಾದ ನೃತ್ಯಪ್ರಕಾರಗಳು ರೂಪುಗೊಂಡಿವೆ. ಮಲೆಮಹದೇಶ್ವರ, ಮಂಟೆಸ್ವಾಮಿ, ಮೈಲಾರಲಿಂಗ ದೇವರುಗಳ ಬಗ್ಗೆ ಜನಪದ ಮಹಾಕಾವ್ಯಗಳೇ ರಚಿತವಾಗಿವೆ. ಹಲವಾರು ಗ್ರಾಮದೇವತೆಗಳ ಬಗ್ಗೆಯಂತೂ ಸಾವಿರಾರು ತ್ರಿಪದಿಗಳು ರಚಿತವಾಗಿವೆ.

ರಾಗಿಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡು

ಬಲ್ಲಂತ ಜಾಣರು ಬರಕೊಳ್ಳಿ : ನಮ್ಮ ಹಾಡ

ಬಳ್ಳ ತಕ್ಕೊಂಡು ಅಳಕೊಳ್ಳಿ

ಈ ತ್ರಿಪದಿ ನಮ್ಮ ಜನಪದ ಸಂಸ್ಕೃತಿಯಲ್ಲಿ ಅಸಂಖ್ಯಾತ ಹಾಡುಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ನಂಜನಗೂಡಿನ ನಂಜುಂಡ – ಚಾಮುಂಡಿ, ಮೈಲಾರಲಿಂಗ-ಮಾಳವ್ವ, ಮೇಲುಕೋಟೆಯ ಚೆನ್ನಿಗರಾಯ-ವರನಂದಿ ಮುಂತಾದ ದೇವತಾ ಪ್ರಣಯಗಳು ನಮ್ಮ ಜನಪದ ಸಾಹಿತ್ಯ ಲೋಕದ ಅತ್ಯಂತ ರಸವತ್ತಾದ ಲೀಲೆಗಳು.[೧೮]

ಗ್ರಾಮದೇವತೆಯ ಚರಿತ್ರೆ:-

ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವನ ಸಂಸ್ಕೃತಿಯ ಇತಿಹಾಸದಲ್ಲಿ ದೇವ-ದೇವತೆಗಳ ಕಲ್ಪನೆ ರೋಚಕವಾದುದು. ಇಂಥ ಮುಗ್ಧ ಮನಸ್ಸಿನ ಆದಿ ಮಾನವನಿಗೆ ಪ್ರಕೃತಿಯೇ ಸರ್ವಸ್ವವಾಗಿತ್ತು. ಸುರ್ಯೋದಯ, ಸೂರ್ಯಾಸ್ತ, ಚಂದ್ರ, ನಕ್ಷತ್ರ, ಮೋಡ, ಮುಗಿಲು, ಗುಡುಗು, ಸಿಡಿಲು ಮುಂತಾದ ನಿಸರ್ಗದ ರಹಸ್ಯಗಳಿಗೆ ನಿಬ್ಬೆರಗಾದ ಈತನ ಬುದ್ಧಿಗೆ ಮತ್ತು ಕಣ್ಣಿಗೆ ನಿಲುಕದ ಅದೆಷ್ಟೋ ಅದ್ಭುತಗಳು, ಭಯಮೂಲವಾದ ಅವನ ತರ್ಕ, ವಿತರ್ಕಗಳಿಗೆ ಹೊಳಮ ತೋರಿದವು. ಅಜ್ಞಾತವಾದ ವಸ್ತುಗಳ ಬಗೆಗಿನ ಜಿಜ್ಞಾಸೆಯೇ ದೇವರ ಕಲ್ಪನೆಯ ಅದಮ್ಯ ಶಕ್ತಿಯ ಅರಿವನ್ನು ಮೂಡಿಸಿತು. ಆಗ ಸೃಷ್ಟಿಯ ಗೋಚರಾಗೋಚರ ವಸ್ತುಗಳೆಲ್ಲವೂ ಅವನಿಗೆ ಉಪಾಸನಾಯೋಗ್ಯ ದೇವತೆಗಳೆನಿಸಿಕೊಂಡವು.[೧೯] ಹೀಗೆ ಅನೇಕ ದೇವತೆಗಳ ಅಸ್ತಿತ್ವವಾಗಿ ಸಮಾಜದ ಸ್ವಾಸ್ಥ್ಯವನ್ನು ಉಳಿಸಲಿಕ್ಕೆಂದು ಅನೇಕ ಕಟ್ಟುಪಾಡುಗಳು ರೂಢಿಗತವಾಗಿ ಬೆಳೆದು ಬಂದವು. ಹೀಗೆ ನೈತಿಕ ಪ್ರಜ್ಞೆ, ನಂಬಿಕೆ, ಪುರಾಣ ಪ್ರಜ್ಞೆ, ಎಲ್ಲವುಗಳ ಹಿನ್ನೆಲೆಯಲ್ಲಿ ಹಬ್ಬ, ಹರಿದಿನ, ಜಾತ್ರೆ ಮುಂತಾದವುಗಳು ಪ್ರಾರಂಭವಾದವು.

ಈ ಗ್ರಾಮದೇವತೆಗಳಲ್ಲಿ ಪ್ರಮುಖವಾಗಿ ಅಂಕಾಲಮ್ಮ, ಅಂತರಗಟ್ಟಮ್ಮ, ಅಟ್ಟಿಲಕ್ಕಮ್ಮ, ಉತ್ತನಹಳ್ಳಿಮಾರಿ, ಉತ್ತರಹಳ್ಳಿ, ಉರುಕಾತಿ, ಎಲ್ಲಮ್ಮ, ಏಳು ಮಂದ್ಯಮ್ಮ, ಐತ್ಗಮ್ಮ, ಕಟ್ಟೆಮಾರಮ್ಮ, ಕಣ್ಣೂರಹಳ್ಳಿಯಮ್ಮ, ಕತ್ತಿಮಾರಮ್ಮ, ಕನಕದುರ್ಗ, ಕಬ್ಬಾಳಮ್ಮ, ಕರಗದಮ್ಮ, ಕರುಳ ಕೆಲ್ಲದೇವಮ್ಮ, ಕಲ್ಲೂರ ಮಲ್ಲುಗದೇವಿ, ಕಾಟೇರಮ್ಮ, ಕಾಲರದಮ್ಮ, ಕಾಳಮ್ಮದೇವಿ, ಕಿಕ್ಕೇರಿಯಮ್ಮ, ಕಿವುಡ್ಮಾರಿ, ಕುಂಡ್ಮಾರಿ, ಕುರಿ ಪಟ್ಲಮ್ಮ, ಕೊಡಗಿನ ಮಮ್ಮಾಯಿ, ಕೋಲಾರಮ್ಮ, ಗಂಗಮ್ಮ, ಗಾಳಿಯಮ್ಮ, ಗುಡ್ಡದಮ್ಮ, ಗುರು ಮುತ್ಯಾಲಮ್ಮ, ಚಿಕುದೇವಿ, ಚಿಲ್ಲಾಯಿ, ಚೌಡಿ, ಚೌಡೇಶ್ವರಿ, ದಂಡಿನ ಮಾರಿ, ದಡಾರಮ್ಮ, ದುರುಗಮ್ಮ, ದುರ್ಗೆ, ದೂರದ ದುಬ್ಬಮ್ಮ, ದೊಡ್ಡಮ್ಮ, ದ್ರೌಪದಮ್ಮ, ನರಡಮ್ಮ, ನಲ್ಲಾತ್ತಾಳ್, ಪಟಾಲಮ್ಮ, ಪಳಕ್ಷಮ್ಮ, ಪಳೇಕಮ್ಮ, ಪಿರಿಯಾಪಟ್ಟಣದ ಉರಿಮಸ್ಲಿ, ಪ್ಲೇಗಮ್ಮ, ಬಲಮಂಕಾಳಿ, ಬಾಚಳ್ಳಿ ಅಮ್ಮ, ಬಾಣಂತಮ್ಮ, ಬಿಸಲಾಳಿಯಮ್ಮ ಬೆಟ್ಟದ ಚಾಮುಂಡಿ, ಬೆಟ್ಟದ ಚಿಕ್ಕಮ್ಮ, ಬೆಟ್ಟಳ್ಳಿಮಾರಮ್ಮ, ಮದ್ದೂರಮ್ಮ, ಮಹೇಶ್ವರಮ್ಮ, ಮಾಕಳ್ಳಿ ಮಾಮಾರಿ, ಮಾರಿಯಮ್ಮ, ಮಾಸ್ತಮ್ಮ, ಮಾಹೇಶ್ವರಮ್ಮ, ಮುತ್ಯಾಲಮ್ಮ, ಮೂಗೂರು ತಿಬ್ಬಾದೇವಿ, ಮೊಗಯಮ್ಮ, ಸತ್ಯಮ್ಮ, ಸಪ್ತಮಾತೃಕೆ, ಸಪ್ಪಲಮ್ಮ, ಸವಾರಮ್ಮ, ಸಿಡುಬಮ್ಮ, ಸೀತಾಳಮ್ಮ, ಸುಗ್ಗಲಮ್ಮ, ಸೊಲ್ಲಾಪುರದಮ್ಮ, ಹಾಸನದಮ್ಮ, ಹೊನ್ನಾದೇವಿ ಹೀಗೆ ಅನೇಕ ದೇವತೆಗಳನ್ನು ಕಾಣಬಹುದು.[೨೦]

ಗ್ರಾಮದೇವತೆ ಮಾನವ ಅನಾಗರಿಕನಾಗಿದ್ದಾಗ ಅಮೂರ್ತಳಾಗಿ ಶಕ್ತಿ ರೂಪದಲ್ಲಿ, ಅರೆನಾಗರಿಕನಾಗಿದ್ದಾಗ ಮೂರ್ತಳಾಗಿ ಸಪ್ತ ಮಾತೃಕೆಯರ ರೂಪದಲ್ಲಿ, ನಾಗರಿಕನಾದಾಗ ಐತಿಹಾಸಿಕತೆಯ ಸಂದರ್ಭದಲ್ಲಿ ಲೋಕದೇವತೆಯ ರೂಪದಲ್ಲಿ, ಆಧುನಿಕ ಕಾಲದಲ್ಲಿ ವ್ಯಕ್ತಿ ದೇವತೆಯ ರೂಪದಲ್ಲಿ ಕಾಣಿಸಿಕೊಂಡದ್ದು ಆಕೆಯ ಚರಿತ್ರೆ ಹೇಳುವುದು.

ಗ್ರಾಮದೇವತೆಗಳು

ಅನಾಗರಿಕ ಸ್ಥಿತಿಯಲ್ಲಿ
ಅಮೂರ್ತಗಳು ಶಕ್ತಿ ರೂಪದಲ್ಲಿ
ಮರ, ಮಣ್ಣು ನೀರು, ಕಲ್ಲು
ಬೇಟೆಯಾಡುವಾಗ

ಅರೆನಾಗರಿಕ ಸ್ಥಿತಿಯಲ್ಲಿ
ಮೂರ್ತಗಳು ಸಪ್ತಮಾತೃಕೆಯರ ರೂಪದಲ್ಲಿ
ಗೊಂಬೆಗಳು ಕೃಷಿ ಕಾಲದಲ್ಲಿ

ನಾಗರಿಕ ಸ್ಥಿತಿಯಲ್ಲಿ
ಚಾರಿತ್ರಿಕ ಸಂದರ್ಭದಲ್ಲಿ
ಲೋಕದೇವತೆ ರೂಪದಲ್ಲಿ
ಮೂರ್ತಿಗಳು
ಆಧುನಿಕ ಕಾಲದಲ್ಲಿ
ವ್ಯಕ್ತಿ ದೇವತೆಗಳ ರೂಪದಲ್ಲಿ

ಮಧುರ ಕವಿ ಹೇಳಿದ ಮಾತು 'ಡುಂಡುಚಿಯೆ......ಬೀದಿವರಿಯೇ ಬೀರನ ಕಥೆಯೆ' ಎಂದು ಹೇಳಿದ್ದು ಈಗ ಸತ್ಯವಾಗಿ ಉಳಿದಿಲ್ಲ. ಇದರ ಮೇಲಿಂದಲೇ ವಿಶ್ವದ ಬೆಳವಣಿಗೆ ಎಂಬ ಸತ್ಯ ಎಲ್ಲರೂ ಕಂಡು ಕೊಂಡಿದ್ದಾರೆ. ಈ ಗ್ರಾಮದೇವತೆಗಳ ಕೊಡುಗೆ ಕಲೆ ಸಾಹಿತ್ಯ ಸಮಾನ ಸಂಸ್ಕೃತಿಗೆ ಅಪಾರವಾಗಿದೆ. ಆ ಕೊಡುಗೆ ಸಕಲಶಾಸ್ತ್ರಗಳ ಕಲೆ, ಸಾಹಿತ್ಯ, ಸಮಾಜ, ಸಂಸ್ಕೃತಿಯ ಗಂಗೋತ್ರಿಯಾಗಿದೆ.[೨೧]

ಅ) ಅನಾಗರಿಕ ಕಾಲದಲ್ಲಿ

ಕಲೆ ಮೂರು ಪ್ರಕಾರ ಹೊಂದಿತ್ತು

೧) ವಾದ್ಯ ೨) ಕುಣಿತ ೩) ಹಾಡು

೧) ವಾದ್ಯ ಮೂರು ರೂಪದಲ್ಲಿ ಇತ್ತು

೧) ಕಲ್ಲು (೨) ಮಣ್ಣು (೩) ಕಟ್ಟಿಗೆ

ವಾದ್ಯ

ಕಲ್ಲು ಜಾಂಗಟಿ ತಾಳ

ಮಣ್ಣು ಮಡಕೆ ಘಟವಾದ್ಯ

ಕಟ್ಟಿಗೆ ಕೋಲು

೨) ಕುಣಿತ

೧) ಪಶು ಕುಣಿತ (೨) ಪಕ್ಷಿ ಕುಣಿತ (೩) ಕ್ರೂರಪ್ರಾಣಿ ಕುಣಿತ

ಕುಣಿತ

ಪಶು ಕುಣಿತ ಆಕಳು ಎತ್ತು | **ಪಕ್ಷಿ ಕುಣಿತ ನವಿಲು** | **ಕ್ರೂರ ಪ್ರಾಣಿ ಹುಲಿ,**

ಸಿಂಹ, ಕರಡಿ

೨) ಹಾಡು

೧) ದೇವರ ಹಾಡು (೨) ಬೇಟೆ ಹಾಡು (೩) ಹೆಣ್ಣುಮಕ್ಕಳ ಹಾಡು

ಹಾಡುಗಳು

ದೇವರ ಹಾಡು | **ಬೇಟೆ ಹಾಡು** | **ಹೆಣ್ಣುಮಕ್ಕಳ ಹಾಡು**

ಆಗ ಮನುಷ್ಯನಿಗೆ ಎರಡೇ ಹಸಿವುಗಳಿದ್ದವು. ಹೊರಗಿನ ಹಸಿವು ಹೊಟ್ಟೆ ಹಸಿವು. ಒಳಗಿನ ಹಸಿವು ಕಾಮ, ಇವೆರಡನ್ನು ಈಡೇರಿಸಲು ಅವರು ದೇವರಿಗೆ ಬೇಡಿಕೊಳ್ಳುತ್ತಿದ್ದರು. ನಮಗೆ ದೇವರ ಹಾಡಾಗಲಿ, ಬೇಟೆಯ ಹಾಡಾಗಲಿ ಸಿಕ್ಕಿಲ್ಲ. ಹೆಣ್ಣುಮಕ್ಕಳ ಹಾಡುಗಳು, ಸಿಕ್ಕಿವೆ. ವೆರಿಯರ್ ಎಲ್ವಿನ್ ಅವರು ಮಧ್ಯಪ್ರದೇಶ ಆದಿವಾಸಿಗಳಲ್ಲಿದ್ದು ಅವರ ಹೆಣ್ಣನ್ನು ಮಾಡಿಕೊಂಡು ಅವರ ಮನುಷ್ಯರೇ ಆಗಿ ಅವರ ಹಾಡು ಸಂಗ್ರಹಿಸಿದ್ದಾರೆ. ಅದರಲ್ಲಿ ಹೆಣ್ಣುಮಕ್ಕಳ ಹಾಡುಗಳು ಸಿಗುವವು. ಅದರಲ್ಲಿ ಅವರು ತಮ್ಮ ಗಂಡಂದಿರ ಗುಣ ಸ್ವಭಾವಗಳ ಬಗ್ಗೆ ಹೇಳುವರು.[೨೨] ಅವರು ಬೇಟಿಯಾಡಿ ಅದರ ಮಾಂಸ ಉಂಡು ಅದರ ಚರ್ಮ ಸುತ್ತಿಕೊಂಡು ಬದುಕು ಸಾಗಿಸುವಾಗ ಅದರ ಚರ್ಮದಿಂದ ವಾದ್ಯಗಳು ಮಾಡುವ ಸಾಧ್ಯತೆಯು ಹೆಚ್ಚಿವೆ. ಗ್ರಾಮ ಬದುಕಿನಲ್ಲಿ ಕಾಣುವ ಹಲಗೆ, ಡೊಳ್ಳು, ಡೋಲುಗಳ ಮೂಲ ರೂಪ ಬುಡಕಟ್ಟಿನಿಂದಲೇ ಬಂದಿದೆ ಎಂದೆನ್ನಿಸುವದು.

ಬ) ಅರೆನಾಗರಿಕ ಕಾಲದಲ್ಲಿ

ವಾದ್ಯಗಳು

ತಂತಿವಾದ್ಯ ಏಕಧಾರಿ | **ಇಲ್ಲ** | **ಚರ್ಮವಾದ್ಯ ಹಲಗೆ ಡೊಳ್ಳು**

ಕುಣಿತಗಳು

ದೇವಿ ಕುಣಿತ ಮರಗಮ್ಮನ ಕುಣಿತ,	**ಹಬ್ಬದ ಕುಣಿತ**	**ಪ್ರಾಣಿಕುಣಿತ**
ಕಾಳಮ್ಮನ ಕುಣಿತ, ಚೌಡಮ್ಮನ ಕುಣಿತ	ಹೋಳಿ ಕುಣಿತ	

ಹಾಡು

ದೇವಿಹಾಡು	**ಮದುವೆ ಹಾಡು**	**ಹಬ್ಬದ ಹಾಡು**	**ಮನೆಕೆಲಸದ ಹಾಡು**	**ಕೆಲಸದ ಹಾಡು**
ಕಾಳಮ್ಮ, ಚೌಡಮ್ಮ, ಎಲ್ಲಮ್ಮ, ಮರಗಮ್ಮ, ದುರಗಮ್ಮ, ದ್ಯಾವಮ್ಮ	ಹೆಣ್ಣಿನ ಹಾಡು, ಗಂಡಿನ ಹಾಡು	ಅಮವಾಸ್ಯೆ ಹಾಡು, ಹುಣ್ಣಿಮೆ ಹಾಡು	ಬೀಸುವ ಹಾಡು, ಕುಟ್ಟುವ ಹಾಡು	ಗೊಬ್ಬರದ ಹಾಡು ರಾಶಿ ಹಾಡು

ಅನಾಗರಿಕ ಕಾಲದ ವಾದ್ಯ, ಕುಣಿತ, ಹಾಡುಗಳು ಸಿಗುವುದು ಅಪರೂಪವಾದರೂ ಅರೆ ನಾಗರಿಕ ಸಮಾಜದ ಗ್ರಾಮೀಣ ಜೀವನದ ವಾದ್ಯ ಕುಣಿತ ಹಾಡುಗಳು ಸಿಗುವವು. ಹೊರಗೆಷ್ಟೇ ಮನುಷ್ಯ ಅತ್ಯಾಧುನಿಕವಾಗಿ ವೇಷಭೂಷಣ, ಅಲಂಕಾರ, ವೈಜ್ಞಾನಿಕ ವಸ್ತುಗಳನ್ನು ಹೊಂದಿದ್ದರೂ ಒಳಗಡೆ ಮಾತ್ರ ಅವನಿನ್ನೂ ನೂರಕ್ಕೂ ನೂರು ಗ್ರಾಮೀಣದವನಾಗಿದ್ದಾನೆ. ನೂರಕ್ಕೆ ಐವತ್ತು ಆದಿವಾಸಿ ಜನಾಂಗದವರಾಗಿದ್ದಾನೆ. ಇನ್ನೂ ಆ ಕಾಲದ ಗುಣ, ಸ್ವಭಾವ, ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಪ್ರಸಂಗಗಳು ಬಂದಾಗ ಇಲ್ಲವೆ ತಲೆದೋರಿದಾಗ. ಗ್ರಾಮೀಣ ಕಾಲದಲ್ಲಿ ಹುಟ್ಟಿ ಬೆಳೆದ ಕಲೆಗಳ ಅಂಗಗಳಾದ ವಾದ್ಯ, ಕುಣಿತ, ಹಾಡುಗಳ ಒಂದೊಂದು ವಿಷಯದ ಮೇಲೆ ಮಹಾ ಪ್ರಬಂಧಗಳು ಬರೆಯುವಷ್ಟು ವಸ್ತುಸಾಮಗ್ರಿಗಳಿವೆ.[೨೩] ಸಂಶೋಧನೆ ಬಯಸುವವು. ಆಯಾ ಜನಾಂಗದಲ್ಲಿ ಆಯಾ ಜನಾಂಗದವನಾದಾಗ ವೇರಿಯರ್ ಎಲ್ವಿನ್‌ನಂತೆ ಅಲ್ಲೆ ವಾಸಿಸಿ, ಬಾಳಿ ಬದುಕಿದಾಗ ಮಾತ್ರ ಆಯಾ ಜನಾಂಗದ ನಿಜವಾದ ಕಲೆ ಸಾಹಿತ್ಯ ಸಮಾಜ ಸಂಸ್ಕೃತಿ ಕುರಿತು ಸತ್ಯದ ಬೆಳಕು ಚೆಲ್ಲಲು ಸಾಧ್ಯವಾಗುವುದು

ಪ್ರಾಚೀನವಾದ ಭೂಮಿ ಪೂಜೆ ಅಥವಾ ಮಾತೃ ಪೂಜೆಗಳು ಸ್ಪಷ್ಟವಾಗಿ ಫಲವಂತಿಕೆಯ ಸಂಕೇತಗಳಾಗಿ ಗ್ರಾಮದೇವತೆಯ ನೆಲೆಯಲ್ಲಿ ಆರಾಧನೆಗೊಳ್ಳುತ್ತವೆ. ಹೀಗೆ ಕೃಷಿಯು ಆರಂಭದ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಗಮನಾರ್ಹವಾಗಿ ಬದಲಾವಣೆ ಮಾಡಿತಲ್ಲದೆ, ಅನೇಕ ಸ್ತ್ರೀ ದೇವತೆಗಳ ಹುಟ್ಟಿಗೆ ಕಾರಣವಾಯಿತು. ಪ್ರಪಂಚದ ಎಲ್ಲ ದೇವರುಗಳು ಶಕ್ತಿಯ ಸೃಷ್ಟಿಯೆಂಬ ನಂಬಿಕೆ ಬೆಳೆದು 'ಶಕ್ತಿ' ಚಿರಕನ್ಯೆಯೆಂದೂ ಗರ್ಭಧರಿಸದೆಯೇ ದೇವರುಗಳನ್ನು, ಜನಸಮುದಾಯವನ್ನು ಸೃಷ್ಟಿಸಿದಳೆಂದೂ ಪುರಾಣ ಕಥೆಗಳು ಹುಟ್ಟಿದವು. ಇಂಥ ಪುರಾಣಗಳಲ್ಲಿ ಋತುಮಾನ ಬದಲಾವಣೆಗೆ ಸಂಬಂಧಿಸಿ ಪುರಾಣಗಳು, ವಿಶಿಷ್ಟ ನೈಸರ್ಗಿಕ ಸಂದರ್ಭಗಳನ್ನು ಕುರಿತ ಪುರಾಣಗಳು, ನಿಸರ್ಗದ ಹುಟ್ಟನ್ನು ಕುರಿತ ಪುರಾಣಗಳು, ದೇವತೆಗಳ ಹುಟ್ಟನ್ನು ಕುರಿತ ಪುರಾಣಗಲು, ಪ್ರಾಣಿ ಮತ್ತು ಮನುಷ್ಯರ ಹುಟ್ಟನ್ನು ಕುರಿತ ಪುರಾಣಗಳು, ರೂಪಾಂತರ ಕುರಿತ ಪುರಾಣಗಳು, ಸಾಂಸ್ಕೃತಿಕ ನಾಯಕರು, ಸಂಸಾರ ಮತ್ತು ದೇಶಗಳ ಸೃಷ್ಟಿ ಕುರಿತ ಪುರಾಣಗಳು ಸಾಮಾಜಿಕ ಸಂಸ್ಥೆಗಳು ಮತ್ತು ಅನ್ವೇಷಣೆಗಳನ್ನು ಕುರಿತ ಪುರಾಣಗಳು, ಸಾವಿನ ಅನಂತರದ ವಿಚಾರ ಕುರಿತ ಪುರಾಣಗಳು, ಚಾರಿತ್ರಿಕ ಘಟನೆಗಳ ಕುರಿತ ಪುರಾಣಗಳು ಹಾಗೂ ಇತರೆ ಪುರಾಣಗಳು ಎಂದು ವಿಂಗಡಿಸಿ ಕೊಳ್ಳಬಹುದು.[೨೪]

ಕ) ನಾಗರಿಕ ಕಾಲದಲ್ಲಿ:-

ಬುಡಕಟ್ಟಿನ ಬದುಕು ಪಶುಪಾಲನೆಗೆ, ಪಶುಪಾಲನಾ ಬದುಕು ಗ್ರಾಮೀಣ ಬದುಕಿಗೆ, ಕಾರಣವಾದಂತೆ ಗ್ರಾಮೀಣ ಬದುಕು ನಾಗರೀಕ ಬದುಕಿಗೆ ಕಾರಣವಾಯಿತು. ಗ್ರಾಮದಲ್ಲಿದ್ದವನು ಉಳಿದವರಿಗಿಂತ ಹೆಚ್ಚಿನ ಧನಧಾನ್ಯ ಸಂಪತ್ತು ಸಂಪಾದಿಸಿದಂತೆ ಊಳಿಗಮಾನ್ಯದವನಾಗಿದ್ದನು. ಈ ಊಳಿಗಮಾನ್ಯದವನೆ ಹತ್ತೂರಿಗೆ ಕೊಡುಕೊಳ್ಳುವ ವ್ಯವಹಾರ ನಡೆಸಿದಾಗ ಆ ಮಂಡಲದೊಡೆಯನಾದನು. ಹೀಗೆ ಹತ್ತಿಪ್ಪತ್ತು ಮಂಡಲಗಳ ಒಡೆಯನಾದವನೆ ರಾಜನಾದನು. ಹೀಗೆ ರಾಜನಾದವನು ತನ್ನ ಆಡಳಿತಕ್ಕಾಗಿ, ರಕ್ಷಣೆಗಾಗಿ, ಕೋಟೆ ಕಟ್ಟಿಕೊಂಡು, ಸೇನೆ ಇಟ್ಟುಕೊಂಡು, ಮಂತ್ರಿ, ಪುರೋಹಿತ, ರಾಜಪರಿವಾರದವರೊಂದಿಗೆ ಜೀವನ ಸಾಗಿಸುತ್ತ ನಡೆದಂತೆ ಜನತೆಯ ಏಳಿಗೆಗಾಗಿ ಕ್ರಮಗಳು ಕೈಕೊಂಡಂತೆ ತನ್ನ ರಾಜ್ಯ ವಿಸ್ತರಿಸುತ್ತ ಸಾಮ್ರಾಟನೆನಿಸಿಕೊಂಡಂತೆ ದೇಶದಲ್ಲಿ ಹಲವಾರು ಬದಲಾವಣೆಗಳು ಆರಂಭವಾದವು. ಸಮಾಜದ ಒಳಿತಿಗಾಗಿ ಕಾರ್ಯವಿಭಜನಾ ದೃಷ್ಟಿಯಿಂದ ಬಂದ ಚಾತುರ್ವರ್ಣ್ಯಗಳು ಆರಂಭದಲ್ಲಿ ಒಳಿತಿಗಾಗಿಯೇ ಇದ್ದವು. ಬ್ರಾಹ್ಮಣನ ಕೆಲಸ ಶಿಕ್ಷಣ ನೀಡುವುದು, ಕ್ಷತ್ರಿಯನ ಕೆಲಸ ದೇಶ ರಕ್ಷಿಸುವದು. ವೈಶ್ಯನ ಕೆಲಸ ವ್ಯಾಪಾರ ಮಾಡುವುದು, ಶೂದ್ರನ ಕೆಲಸ ಸೇವೆ ಮಾಡಿಕೊಂಡು ಇರುವುದು. ಇದರಿಂದ ಒಂದು ಬಗೆಯ ಹೊಸ ವಾತಾವರಣ ಉಂಟಾಯಿತು. ನಾಗರಿಕ ಲಕ್ಷಣಗಳು ಕಾಣಿಸಿಕೊಂಡವು, ಇತಿಹಾಸ ಆರಂಭವಾಯಿತು. ಕಲೆ, ಸಾಹಿತ್ಯ, ಸಮಾಜ ಸಂಸ್ಕೃತಿಯ ಬಾಯಿ ತೆರೆಯಿತು.[೨೫]

ವಾದ್ಯಗಳು

- **ತಂತಿವಾದ್ಯ** — ಸಿತಾರ್, ವೀಣೆ ತಂಬೂರಿ
- **ಕೊಂಬು, ಕಹಳೆ, ಕೊಳಲು**
- **ಕಂಚುವಾದ್ಯ ತಾಳ ಜಾಂಗಟೆ**
- **ಬಾಜಿ,ಸನಾದಿ,ಶಹನಾಯಿ**
- **ಚರ್ಮವಾದ್ಯ** — ಮದ್ದಲಿಡೋಲುಚೌಡಿಕೆ

ಕುಣಿತಗಳು

- **ದೇವಿ ಹಾಡು** — ಎಲ್ಲಮ್ಮನ ಕುಣಿತ, ದುರಗಮ್ಮನ ಕುಣಿತ, ಮರಗಮ್ಮನ ಕುಣಿತ
- **ಹಬ್ಬದ ಕುಣಿತ ದೀಪಾವಳಿ** — ದಸರ, ಉಗಾದಿ, ನಾಗರಪಂಚಮಿ, ಹೋಳಿಹುಣ್ಣಿಮೆ
- **ಪ್ರಾಣಿ ಕುಣಿತ** — ಕುದುರೆ ಕುಣಿತ, ಕರಡಿ ಕುಣಿತ, ಬಸವನ ಕುಣಿತ
- **ಇಲ್ಲ**
- **ಇಲ್ಲ**

ಹಾಡುಗಳು

- **ದೇವಿ ಹಾಡು** — ಎಲ್ಲಮ್ಮನ ಹಾಡು, ದುರಗಮ್ಮನ ಹಾಡು, ಹುಲಿಗೆಮ್ಮನ ಮತ್ತು ಮಾಪುರ ತಾಯಿಹಾಡು
- **ರಾಜರಾಣಿಯರ ಹಾಡು** — ವೀರರ ಹಾಡು, ಮಾಸ್ತಿ ಹೋದವರ ಹಾಡು, ದಾನದತ್ತಿ ನೀಡಿದವರ ಹಾಡು
- **ಹಬ್ಬದ ಹಾಡು** — ದೀಪಾವಳಿ ಹಾಡು, ನವಮಿ ಹಾಡು
- **ಕೆಲಸದ ಹಾಡು** — ದೇವಾಲಯದ ಹಾಡು, ಕೋಟೆ ಹಾಡು ಕೆರೆಹಾಡು, ಕೆರೆಹಾಡು
- **ಇಲ್ಲ**

ಸಪ್ತ ಮಾತೃಕೆಯಲ್ಲಿ ಬರುವ ಎಲ್ಲಮ್ಮ, ದುರ್ಗಮ್ಮರು ಐತಿಹಾಸಿಕ ಕಾಲದ ದೇವತೆಗಳೆಂದು ಅವರ ಸನ್ನಿವೇಶ, ಸಂದರ್ಭಗಳಿಂದ ತಿಳಿದು ಬರುವುದು. ಎಲ್ಲಮ್ಮ ಹೆಚ್ಚು ಪ್ರಚಾರಕ್ಕೆ ಬಂದದ್ದು ಸವದತ್ತಿ ಕಟ್ಟಿದ ಕಾಲದಲ್ಲಿ. ಅಂಬಾ ಭವಾನಿ ಪ್ರಸಿದ್ಧಿ ಹೊಂದಿದ್ದು ಛತ್ರಪತಿ ಶಿವಾಜಿ ಮಹಾರಾಜರ ಕಾಲದಲ್ಲಿ. ದುರ್ಗಮ್ಮ ಪ್ರಸಿದ್ಧಿಗೆ ಬಂದದ್ದು ದುರ್ಗಗಳು, ಕೋಟೆಗಳು ಕಾಣಿಸಿಕೊಂಡ ಬಳಿಕ. ಹೀಗಾಗಿ ಮರಗಮ್ಮ, ಪಾಲಕಮ್ಮ, ಕಾಳಮ್ಮ, ಚೌಡಮ್ಮ, ದ್ಯಾವಮ್ಮರು ಗ್ರಾಮೀಣ ಕಾಲದವರಾದರೆ ಎಲ್ಲಮ್ಮ ದುರ್ಗಮ್ಮರು ಐತಿಹಾಸಿಕ ಕಾಲದ ಜನಪದ ದೇವತೆಗಳಾಗುವರು.[೨೬]

ದೇವತೆಗೆ ಸಂಬಂಧಿಸಿದ ಐತಿಹ್ಯವನ್ನು ವ್ಯಕ್ತಿ ಪ್ರಧಾನ, ಸ್ಥಳ ಪ್ರದಾನ, ಘಟನಾ ಪ್ರಧಾನ, ಐತಿಹ್ಯಗಳೆಂದು ವರ್ಗೀಕರಿಸಬಹುದು. ಈ ದೇವತೆಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ಸೂಕ್ಷ್ಮವಾಗಿ ಧಾರ್ಮಿಕ, ಗೃಹ, ಔದ್ಯೋಗ್ಯಿಕ, ಪ್ರಾಣಿ, ಜ್ಯೋತಿಷ್ಯಾತ್ಮಕ, ಐತಿಹ್ಯಾತ್ಮಕ, ವೈದ್ಯಕೀಯ, ನೈಸರ್ಗಿಕ, ಮಂತ್ರ ಸಂಬಂಧಿ ಮತ್ತು ಸಂಕೀರ್ಣ ನಂಬಿಕೆಗಳೆಂದು ವಿಭಾಗಿಸಬಹುದು. ಇಂತಹ ಗ್ರಾಮದೇತೆಗಳ ಆಚರಣೆಗಳಲ್ಲಿ ಪ್ರಮುಖವಾಗಿ ಕಂಬ ಜಾತ್ರೆ, ತಂಪು ದೇವರ ಜಾತ್ರೆ, ಎಡೆ ಹಾಕುವುದು, ದೀಪಗಳು, ಅಗ್ನಿಕೊಂಡ, ಬಲಿಯಾಚರಣೆ, ಸಿಡಿ, ಪಲ್ಲಕ್ಕಿ, ಬಾಯಿಬೀಗ, ದ್ವಾಪರ, ಕಿವಿ ಚುಚ್ಚುವುದು, ದನಗಳ ಜಾತ್ರೆ, ಗಾವು ಸಿಗಿಯುವುದು, ಘಟಿಪೂಜೆ, ಹಸಿಕರಗಚಾರಣೆ, ಪೊಂಗಲುಸೇವೆ, ನಡೆನುಡಿ, ಅಲಗುಸೇವೆ, ಛಡಿಸೇವೆ, ಏಳುಸುತ್ತಿನ ಕೋಟೆ ಅನ್ನ ಸಂತರ್ಪಣೆ, ಉಟ್ಲು ಕಾಯಿ, ಉಟ್ಟಕ್ಕೆ ಕೂಡಿಸುವುದು, ಉರುಳುಸೇವೆ, ಮಡಿಲಕ್ಕಿ ಕಟ್ಟುವುದು, ಕಿಚ್ಚು ಹಾಯಿಸುವುದು, ಮೀಸಲು ಮಾಡುವುದು, ಅಂಬುಹಾಕುವುದು, ಹಣ್ಣು ಕಾಯಿ ಮಾಡಿಸುವುದು, ಕಂಬ ಕೀಳುವುದು, ಸಾಗು ಹಾಕುವುದು, ಮತ್ತು ಮರಿಹಬ್ಬಗಳನ್ನು ಕಾಣಬಹುದು.[೨೭] ಈ ಸಂದರ್ಭದಲ್ಲಿ ಅನೇಕ ಬಗೆಯ ಕಲಾಪ್ರಕಾರಗಳು ಮತ್ತು ಇತರ ಸೇವೆಗಳು ತಾಯಿಯ ಸೇವಾರ್ಥವಾಗಿ ನೆರವೇರುತ್ತವೆ. ಅವುಗಳಲ್ಲಿ ಪ್ರಮುಖವಾದವು : ಅಖಂಡದೀಪದಾರತಿ, ಬೆತ್ತಲೆ ಸೇವೆ, ಎಲ್ಲಮ್ಮನ ಕುಣಿತ, ಕರಡಿ ಮಜಲು, ಕಲ್ಯಾಣೋತ್ಸವ, ಕೋಲೆ ಬಸವನಾಟ, ಗರುಡ ವಾಹನೋತ್ಸವ, ಡೊಳ್ಳು ಕುಣಿತ, ತಂಬಿಟ್ಟಿನಾರತಿ, ದನಗಳ ಜಾತ್ರೆ, ದಿಂಡುರುಳು ಸೇವೆ, ಧೂಳಮರಿ ಸೇವೆ, ಧ್ವಜಾರೋಹಣ, ನಿತ್ಯಹೋಮ, ಪಟಾಕುಣಿತ, ಪಟ್ಟಕ್ಕೆ ಕೂಡಿಸುವುದು, ಪೂಲಂಗಿಸೇವೆ, ಅಭಿಷೇಕ, ಅರವಂಟಿಕೆಯಂತಹ ಸೇವೆಗಳು ದೇವರಿಗೆ ಸಲ್ಲುತ್ತವೆ.

ಇದಲ್ಲದೆ ಬಲಿಹರಣ, ಬಾಯಿಸಿಡಿ, ಬ್ರಹ್ಮ ರಥೋತ್ಸವ, ಮಂಟಪ್ಪಡಿ ಸೇವೆ, ಮಡಿಲಕ್ಕಿ, ಮೀಸಲು ಮಾಡುವುದು, ಮುಡಿಪು ಕಟ್ಟುವುದು, ಮುತ್ತಿನ ಪಲ್ಲಕ್ಕಿ, ಮೆಟ್ಟಿಲು ತೆಂಗಿನಕಾಯಿ, ರಕ್ಷಾ ಬಂಧನ, ರುದ್ರನಾಲಿಗೆ, ಸಿಡಿಕಂಬ, ಸೋಮನ ಕುಣಿತ, ಹುಟ್ಟಿದ ಮನೆ ನಡೆಸುವುದು, ಹುಲಿವೇಷ, ಹೂ ಪಲ್ಲಕ್ಕಿ, ಹೆಜ್ಜೆ ನಮಸ್ಕಾರ ಮುಂತಾದವುಗಳನ್ನು ಇಲ್ಲಿ ಸೇವೆಯ ರೂಪದಲ್ಲಿ ಕಾಣಬಹುದು. ಗ್ರಾಮದೇವತೆಗಳನ್ನು ಕುಲದೇವತೆ. ಗೃಹದೇವತೆ, ಸ್ಥಾನದೇವತೆ, ಇಷ್ಟದೇವತೆ, ಪ್ರಾಣರಕ್ಷಣಾ ದೇವತೆ, ಎಂದು ವಿಂಗಡಿಸಬಹುದು. ಸಪ್ತ ಮಾತೃಕೆಯರನ್ನು ಗ್ರಾಮದೇವತೆಗಳ ಸ್ಥಾನದಲ್ಲಿ ಗುರುತಿಸುವ ಕೆಲಸ ಅನೇಕ ವಿದ್ವಾಂಸರು ನಡೆಸಿದ್ದಾರೆ.[೨೮] ಇವುಗಳನ್ನು ಕ್ರಮವಾಗಿ ಬ್ರಾಹ್ಮಿ, ಮಹೇಶ್ವರಿ, ಕುಮಾರಿ, ವೈಷ್ಣವಿ, ವಾರಾಹಿ, ನಾರಸಿಂಹಿ ಮತ್ತು ಇಂದ್ರಾಣಿ ಎಂದು ಗುರುತಿಸಬಹುದು ಇವರೆಲ್ಲರೂ ಬ್ರಹ್ಮ, ಈಶ್ವರ, ಕುಮಾರ (ಸ್ಕಂದ), ವಿಷ್ಣು, ವರಾಹ, ನರಸಿಂಹ ಮತ್ತು ಇಂದ್ರನ ಶಕ್ತಿಯ ಅಂಶ, ಇವರು ದೇವರ ಸ್ತ್ರೀರೂಪಗಳೆಂದು ಗುರುತಿಸಿ ಕೊಂಡಿದ್ದಾರೆ. ಈಗಲೂ ಯೋಗಿನಿ, ಯೋಗದೇಶ್ವರಿ, ಕುಮಾರಿ ಪೂಜೆಗಳು ಅನೇಕ ದೇವಾಲಯಗಳಲ್ಲಿ ನಡೆಯುತ್ತವೆ. ಕನ್ನೆಯ ರೂಪದಲ್ಲಿ ಇರುವ ಮಾತೃಸ್ವರೂಪಿ ದೇವತೆಗಳನ್ನು ಕುಮಾರಿ ಪೂಜೆಯಲ್ಲಿ ಆರಾಧಿಸುತ್ತಾರೆ.

ಈ ಗ್ರಾಮದೇವತೆಗಳನ್ನು ಸ್ತ್ರೀ ಮತ್ತು ಪುರುಷ ದೇವತೆಗಳ ಹಿನ್ನೆಲೆಯಲ್ಲೂ ಗುರುತಿಸುತ್ತಾರೆ. ಈ ಸ್ತ್ರೀ ದೇವತೆಗಳಲ್ಲಿ ಸೌಮ್ಯ ಸ್ವಭಾವಕ್ಕಿಂತ ಉಗ್ರ ಸ್ವಬಾವದ ದೇವತೆಗಳೇ ಹೆಚ್ಚು. ಈ ಉಗ್ರ ದೇವತೆಗಳು ಶಕ್ತಿ ದೇವತೆಗಳೆಂದು, ಶಕ್ತಿ ದೇವತೆಗಳು ಶಿವನಿಗೆ ಸಂಬಂಧಿಸಿದವೆಂದು ವಿದ್ವಾಂಸರು ಪರಿಗಣಿಸುತ್ತಾರೆ. ಶೈವ ಧರ್ಮದಲ್ಲಿ ಕಾಣಿಸಿಕೊಳ್ಳುವ ಒಳ ಪ್ರಭೇದಗಳು ಇದಕ್ಕೆ ಕಾರಣ. ಶಾಕ್ತ, ಭೈರವ, ಕಾಪಾಲಿಕ ಮೊದಲಾದವರು ತಮ್ಮ ತಂತ್ರ ಮಂತ್ರಗಳಿಂದ ಜನರನ್ನು ಆಕರ್ಷಿಸಿ, ದೇವತೆಗಳ ಹೆಸರಿನಲ್ಲಿ ಇವರು ಸೇವೆ ಸಲ್ಲಿಸುತ್ತಾರೆ. ಹಲವು ವಿದ್ವಾಂಸರು ಕಾಳಾಮುಖರೂ, ಕಾಪಾಲಿಕರು ಒಂದೇ ಎಂದು ಹೇಳುತ್ತಾರೆ ಇದಕ್ಕೆ ಯಾವ ಆಧಾರವೂ ಇಲ್ಲ. ಕಾಪಾಲಿಕರು ಸಂಪೂರ್ಣವಾಗಿ ವಾಮಾಚಾರ ಪಂಥವಾದರೆ, ಕಾಳಾಮುಖರು ಶುದ್ಧ ಸಾತ್ವಿಕ ಆಚರಣೆಗಳ ಪಂಥ. ಇವರು ಪಾಶುಪತ ಲಾಕುಲವರ್ಗಕ್ಕೆ ಸೇರಿದವರೆಂಬುದು ಸ್ಪಷ್ಟವಾಗಿದೆ.[೨೯] ಈ ಗ್ರಾಮದೇವತೆಗಳ ಹಿನ್ನೆಲೆಯಲ್ಲಿ ಅನೇಕ ವಿಧಿ ನಿಷೇಧಗಳನ್ನು ಕಾಣುತ್ತೇವೆ. ಅವುಗಳನ್ನು ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ವಿಧಿ, ನಿಷೇಧಗಳಿಂದ ಗುರುತಿಸಿ ಗ್ರಾಮದೇವತೆಗಳ ಅಧ್ಯಯನವನ್ನು ನಡೆಸಬಹುದು, ಗ್ರಾಮದೇವತೆಯ ಸ್ವರೂಪವೆಂದು ಲಜ್ಜಾ ಗೌರಿಯನ್ನು ಕರ್ನಾಟಕದಲ್ಲಿ ಪೂಜಿಸುವುದಿದೆ. ಅಂತೆಯೇ ಬೆತ್ತಲೆ ಬೈರವನನ್ನೂ ಪೂಜಿಸುತ್ತಾರೆ.

ಗ್ರಾಮದೇವತೆ ನೆಲೆಗೊಂಡ ಪುರಾಣಗಳು:-

ಗ್ರಾಮಗಳಲ್ಲಿ ನೆಲೆಗೊಳ್ಳುವ ಗ್ರಾಮದೇವತೆಗಳ ವಿಧಾನ ಕುತೂಹಲಕಾರಿಯಾದುದಾಗಿದೆ. ಇದರ ಪೂರ್ವಸ್ಥಿತಿ ಜನತೆಯ ಸಂಕಷ್ಟದ ಕಾಲ ಎನ್ನಬಹುದು. ಅಥವಾ ಅವರು ದೇವರನ್ನು ಉಪೇಕ್ಷೆ ಮಾಡಿದ ಸಂದರ್ಭ ಇರಬಹುದು. ಇಲ್ಲವೇ ಬದುಕಲು ದೈವದ ಅಗತ್ಯವನ್ನು ಮನಗಾಣದ ಮಾನಸಿಕ ಹಂತ ಎನ್ನಬಹುದು. ಇಂಥ ಸಂದರ್ಭದಲ್ಲಿ ಯಾವುದೇ ಒಂದು ಗ್ರಾಮಕ್ಕೆ ದೇವತೆಯ ಪ್ರವೇಶವಾಗುತ್ತದೆ. ಊರಿಗೆ ಈ ದೇವತೆಯದು ಮಾಂತ್ರಿಕ ಆಗಮನ ಎನ್ನಬಹುದು. ಬಹಳ ಸಂದರ್ಭಗಳಲ್ಲಿ ಭಕ್ತರನ್ನು ದೇವತೆಯೇ ಸಂಪರ್ಕಿಸುವುದು ಇಲ್ಲಿನ ಸಾಮಾನ್ಯ ಅಂಶ. ದೇವತೆ ಭಕ್ತರಿಗೆ ನೆರವಾಗುವ ಬಯಕೆಯನ್ನು ವ್ಯಕ್ತಪಡಿಸುತ್ತದೆ.[೩೦] ಆ ಕಾರಣಕ್ಕಾಗಿ ತನ್ನ ಆರಾಧನೆಯನ್ನು ಮಾಡಬೇಕೆಂದೂ ಕೇಳಿಕೊಳ್ಳುತ್ತದೆ. ಭಕ್ತರು ಇದಕ್ಕೆ ಒಡಂಬಟ್ಟು ದೇವತೆಯನ್ನು ತಮ್ಮ ಗ್ರಾಮದಲ್ಲಿ ಪ್ರತಿಷ್ಠಾಪನೆ ಮಾಡುತ್ತಾರೆ. ದೇವತೆ ಭಕ್ತರನ್ನು ಕನಸಿನಲ್ಲಿ ಕಂಡು ಮಾತನಾಡಬಹುದು. ಇಲ್ಲವೇ ಆಶ್ಚರ್ಯಕರವಾದ ಸಂರ್ಧವನ್ನು ಈ ಉದ್ದೇಶಕ್ಕಾಗಿಯೇ ಸೃಷ್ಟಿಸಿ ತಿಳಿವಳಿಕೆಯನ್ನು ಕೊಡಬಹುದು. ಈ ಸಂಬಂಧದಲ್ಲಿ ಕೆಲವು ಪುರಾಣ ಕತೆಗಳನ್ನು ಅವಲೋಕಿಸಬಹುದು.

ಬೆಂಗಳೂರಿನ ಅಣ್ಣಮ್ಮದೇವಿ ನೆಲೆಗೊಂಡ ಹಿನ್ನೆಲೆ:-

ಗ್ರಾಮದೇವತೆಗಳು ಬೆಂಗಳೂರಿನ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ನೆಲೆಗೊಳ್ಳುವ ವಿಧಾನ ಕುತೂಹಲಕಾರಿಯಾಗಿದೆ. ಬೆಂಗಳೂರಿನ ಅಣ್ಣಮ್ಮ ನೆಲೆಗೊಂಡ ಕತೆ ವಿಶಿಷ್ಟವಾಗಿದೆ. ೫೦೦ ವರ್ಷಗಳ ಹಿಂದೆ ಗಾಣಿಗರು ಎಣ್ಣೆ ವ್ಯಾಪಾರ ಮಾಡುತ್ತಿದ್ದರಂತೆ. ಹೀಗೆ ಒಂದು ದಿನ ವ್ಯಾಪಾರಕ್ಕೆ ಬಂದತ ಒಬ್ಬ ವ್ಯಕ್ತಿ ಮರದ ಕೆಳಗೆ ಮಲಗಿದ್ದನು. ದೇವತೆ ಕನಸಿನಲ್ಲಿ ಬಂದು ನಾನು ಅಣ್ಣಮ್ಮ ಇಲ್ಲಿ ನೆಲೆಸಿದ್ದೀನಿ, ನನ್ನನ್ನ ನೀವು ಪೂಜಿಸಿ ನಿಮ್ಮ ವ್ಯಾಪಾರ ವೃದ್ಧಿಯಾಗುತ್ತದೆ ಎಂದು ಹೇಳಿತಂತೆ. ಆಗ ಎದ್ದು ನೋಡಿದಾಗ ಮರದ ಕೆಳಗೆ ವಿಗ್ರಹವಿತ್ತಂತೆ. ಅಲ್ಲಿ ದೇವತೆಯನ್ನ ಪ್ರತಿಷ್ಠಾಪಿಸಿ ದೇವಸ್ಥಾನವನ್ನ ಕಟ್ಟಿ ಪೂಜಿಸಿದರು.[೩೧]

ಕೆಂಪೆಗೌಡ ನಗರದ ಕೆಂಪಮ್ಮದೇವಿ ನೆಲೆಗೊಂಡ ಹಿನ್ನೆಲೆ:-

ಕೆಂಪೆಗೌಡ ನಗರದ ಕೆಂಪಮ್ಮದೇವಿ ನೆಲೆಗೊಂಡ ಕಥೆ, ಕೆಂಪೆಗೌಡ ಈ ಬೆಟ್ಟದ ಪಕ್ಕದಲ್ಲಿ ಕೆರೆಯನ್ನ ಕಟ್ಟಿಸಿದ ಮೇಲೆ ಕೆರೆಗೆ ನೀರು ಬಂದಿರಲಿಲ್ಲ. ಆಗ ಕೆರೆಗೆ ತನ್ನ ಸೊಸೆಯಾದ ಕೆಂಪಮ್ಮನನ್ನು ಬಲಿಕೊಟ್ಟ ನಂತರ ಕೆರೆಗೆ ನೀರು ಬಂತು ಆಮೇಲೆ ಕೆಂಪಮ್ಮ ಅಲ್ಲೆ ಪಕ್ಕದಲ್ಲಿ ದೇವತೆಯಾಗಿ ನೆಲೆಗೊಂಡು ಕೆಂಪೆಗೌಡನ ಕನಸಿನಲ್ಲಿ ಬಂದು ನಾನು ಕೆಂಪಮ್ಮ ಕೆರೆಯ ಪಕ್ಕದಲ್ಲಿ ನೆಲಸಿದ್ದೀನಿ ನನಗೆ ಗುಡಿ ಕಟ್ಟಿಸಿ ಪೂಜಿಸಿ ಎಂದು ಕೇಳಿಕೊಂಡಾಗ ಕೆರೆಯ ಪಕ್ಕದಲ್ಲಿ ಕೆಂಪಮ್ಮನ ಗುಡಿಕಟ್ಟಿಸಿ ಪೂಜಿಸಿದರು.[೩೨]

ಮಾರಮ್ಮನ ಪುರಾಣ:-

ಮಾರಮ್ಮ ಸಾಮಾನ್ಯವಾಗಿ ದಕ್ಷಿಣ ಬಾರತದ ಎಲ್ಲ ಪ್ರದೇಶಗಳಲ್ಲಿ ಪೂಜಿಸಲ್ಪಡುತ್ತಿರುವ ದೇವತೆ. ಕರ್ನಾಟಕದಲ್ಲಿ ಈ ಮಾರಮ್ಮನನ್ನು ಕುರಿತಂತೆ ಕತೆಗಳು ಎಲ್ಲ ಕಡೆ ಪ್ರಚಾರದಲ್ಲಿವೆ. ಈ ಕತೆಗಳ ವಿವರಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಒಟ್ಟು ಮಾದರಿ ಒಂದೇ ರೀತಿಯದು. ಅಸಾದಿಗಳು ಗ್ರಾಮ ದೇವತೆಯ ಹಬ್ಬದಲ್ಲಿ ಮಾರಮ್ಮನ ಕಥೆಯನ್ನು ವಿಸ್ತಾರವಾಗಿ ಹೇಳುತ್ತಾರೆ. ಚೌಡಿಕೆ, ವಾದ್ಯದೊಂದಿಗೆ ಅವರು ಹಾಡುವ ಈ ಕಾವ್ಯ ಚಂಪೂ ಪ್ರಕಾರದ್ದು. ಗ್ರಾಮ ದೇವತೆ ಕುರಿತ ಈ ಪುರಾಣ ಕತೆ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಹಿಂದೆ ವೇದಬ್ರಹ್ಮನ ಮಗಳು ಸತ್ಯಶ್ರೀ ಬಾಲಗೌರಿಯಂಥವಳು, ಇವಳು ಬ್ರಾಹ್ಮಣ ಜಾತಿಗೆ ಸೇರಿದಂತವರು. ಬ್ರಾಹ್ಮಣ ಜಾತಿಯಲ್ಲಿ ಮಕ್ಕಳು ಮದುವೆ ಮುಂಚೆ ಋತುಮತಿ ಆಗದ್ದಿದ್ರೆ ಕಣ್ಣುಕಟ್ಟಿ ಕಾಡಿಗೆ ಬಿಡಬೇಕಾಗಿತ್ತು. ಆದ್ದರಿಂದ ಅವರ ಹೆಣ್ಣು ಮಕ್ಕಳಿಗೆ ಏಳೆಂಟು ವರ್ಷಕ್ಕೆ ಮೊದಲೇ ಲಗ್ನ ಮಾಡಿಬಿಡಬೇಕಾಗಿತ್ತು. ಈ ವೇದಬ್ರಹ್ಮನ ಮಗಳು ಸತ್ಯಶ್ರೀ ಋತುಮತಿಯಾಗ್ಬಟ್ಳು. ತಂದೆಯಾದ ವೇದಬ್ರಹ್ಮ ಹ್ಯಾಗಪ್ಪಾ ನನ್ನ ಮಗಳ್ನ ಕಣ್ಣ್ ಕಟ್ಟಿ ಕಾಡಿಗೆ ಬಿಡೋದು. ಒಬ್ಬಳೇ ಮಗಳು ಅಂತ ಮಗಳ್ನ ಮನೇಲೆ ಇಟ್ಕಂಡ್ ಬಿಟ್ಟ.

ಹೆಜ್ಜಲು ರಾಜ ಪಟ್ಟಣದಲ್ಲಿ ಏಕೇದ (ಮಾದಿಗ) ಜಾತಿಯಲ್ಲಿ ಒಬ್ಬ ಕದಿರಪ್ಪ ಅಂತ ಕದಿರೆ ನರಸಿಂಹಸ್ವಾಮಿ ಒಕ್ಕಲು. ಅವನ ಹೆಂಡ್ತಿ ಕದಿರಮ್ಮ ಅಂತ. ಇವರಿಗೆ ಹನ್ನೆರಡು ವರ್ಷಕ್ಕೆ ಒಂದು ಗಂಡು ಮಗ ಹುಟ್ಟಿಬಿಟ್ಟ. ಇವರ ಹೆಸರು ಕದಿರಪ್ಪ ಅಂತ. ಚೆನ್ನಾಗಿ ಸಾಕಿದ್ರು. ತಾಯಿಗೆ ಒಂದು ಭ್ರಮೆ ಬಂತು. ಇದೇ ಪ್ರಕಾರವಾಗಿ ನಾವು ಗೌಡರ ಮನೆಯಲ್ಲಿ ಜೀತ ಮಾಡ್ಕೊಂಡು, ಎಮ್ಮೆ ಕಾದ್ಕಂಡು ಇದ್ರೆ ಹ್ಯಾಗೆ ಬದ್ಕಾದು ? ನನ್ನ ಮಗನಿಗೆ ಒಬ್ಬನಿಗಾದ್ರು ವಿದ್ಯಾಬುದ್ಧಿ ಕಲ್ಸಿ ಮುಂದಕ್ತರಬೇಕು. ಅಂತ ಒಬ್ಬ ಗೌಡನ ಮನೆಯಲ್ಲಿ ಜೀತಕ್ಕೆ ಇದ್ದು, ಮಗನನ್ನು ಓದ್ಲೋದಕ್ಕೆ ಶಾಲೆಗೆ ಸೇರಿಸಿದ್ರು ಆ ಹಿಂದಿನ ಕಾಲದಲ್ಲಿ ಹರಿಜನ ಜಾತಿಯವರನ್ನ ಬ್ರಾಹ್ಮಣ ಹತ್ತಿರಕ್ಕೆ ಸೇರಿಸ್ಕೊತ್ತಿರಲಿಲ್ಲ; ಮುಟ್ಟುತ್ತಿರಲಿಲ್ಲ. ಅವರ ಮಕ್ಕಳಿಗೆ ಮರಳ ಮೇಲೆ ಕಡ್ಡೀಲಿ ಬರೆದು ತೋರಿಸಿ, ವಿದ್ಯಾಭ್ಯಾಸ ಕಲಿಸ್ತಾ ಇದ್ದರು.[೩೩] ಆಗ ನಾರಾಯಣ ಇವನ ಆತ್ಮದಲ್ಲಿ ಸೇರ್ಕಂಡು, ನಾರಾಯಣನ ತಂತ್ರದ ಮುಖಾಂತರ ಇವನ ಮನಸ್ಸಿನಲ್ಲಿ ಏನು ನನ್ನ ಜೊತೇವ್ರೆಲ್ಲ ಒಳಗೆ ಓದ್ತಾರೆ, ನಾನು ಹೊರಗೆ ಕೂತಿರಬೇಕು ಎಂದು. ನಾಳೆಯಿಂದ ನನ್ನ ಆತ್ಮದಲ್ಲಿ ಯಾವ ವಿದ್ಯಾ ಬರ್ತದೋ ಆ ವಿದ್ಯಾವನ್ನು ಕಲೀಬೇಕು. ಪಾಠಶಾಲೆಗೆ ಹೋಗ್‌ಬಾರ್ದು ಎಂದು ಇವನ ಅಂತರ್ಯದಲ್ಲಿ ಹುಟ್ಟಿತು. ಪ್ರತಿದಿನ ಮನೆಯಲ್ಲಿ ಊಟ ಮಾಡಿ ಶಾಲೆಗೆ ಹೋಗ್ತಿನಿ ಅಂಥ ಮಧ್ಯ ದಾರಿಯಲ್ಲಿ ಮಾದರ ಓಣಿಯಲ್ಲಿ ಹೊಂಗೆ ಮರದ ನೆರಳಲ್ಲಿ ಕೂತ್ಕಂಡು, ವಿಷ್ಣು ಹುಟ್ಟಿದ್ದು, ಆದಿಶೇಷ, ಕೂರ್ಮ, ಬಸವಣ್ಣ ಹುಟ್ಟಿದಂಥ ಪುರಾಣಗಳ್ನೆಲ್ಲ ಬರೀತಾ ಇದ್ದ.

ಇವನ ಜೊತೆ ಶಾಲೆಗೆ ಹೋಗ್ತಕ್ಕಂಥ ಹುಡುಗ್ರು ಬಂದು ಇವನ ತಾಯಿಗೆ ಚಾಡಿ ಹೇಳ್ಬಿಟ್ರು. "ಅಮ್ಮಾ ಯಾತಕ್ಕೆ ನಿನ್ನ ಮಗನನ್ನ ವೃಥಾ ಓದುಸ್ತೀಯಾ ? ಅವ್ನು ವಿದ್ಯಾಭ್ಯಾಸ ಕಲಿಯೋದೂ ಇಲ್ಲ. ನೀನೇನೋ ಗೌಡ್ರ ಮನೀಗ್ ಹೋಗ್ತೀಯಾ, ಕಷ್ಟ

ಬೀಳ್ತೀಯಾ, ಮುದ್ದೆ ತರ್ತೀಯಾ, ಮಗನಿಗ್ ಇಡ್ತೀಯಾ, ಸಂತೋಷ್ದಾಗ್ ಊಟ ಮಾಡ್ತಾನೆ, ಹಾಯಾಗಿ ಹೋಗಿ ತಂಪಾದ ಹೊಂಗೆ ಮರದ ನೆರಳಲ್ಲಿ ಮನಗಿದ್ದು ಬರ್ತಾನೆ. ಇಸ್ಕೋಲ್‌ಗ್ಹೋಗಿದ್ದೆ ಕಣವ್ವಾ ಅಂತ. ನಿನಗೆಷ್ಟೋ ಭ್ರಮೆ. ನನ ಮಗ ಇಸ್ಕೋಲ್‌ಗ್ಹೋಗಿದ್ದಾ, ಓದ್ಕಂಡ್ ಬಂದಾ ಅಂತ. ನಿನ್ನ ಮಗ ಓದೋದಿಲ್ಲ''. ಅಂತ ಚಾಡಿ ಹೇಳಿದ್ರು.

''ಅಯ್ಯೋ, ನಾವಿಷ್ಟು ಕಷ್ಟ ಪರಿಪಟ್ಟ. ಬೆಳಗ್ಗಿನ್ ಜಾವಕ್ಕೆ ಹೋದ್ರೆ ಎಮ್ಮೆ ಲದ್ದೀನ ನನ ಮೂಗಿನ ಕೆಳಗಿನತನ್ಕ ಸುರಿಸಿಕೊಂಡ್ ಹೊತ್ತು ನನ್ನ ಮಗನಿಗೆ ಕಲಿಸಬೇಕೊಂತ್ಲೇಳಿ, ಇಷ್ಟ ಕಷ್ಟ ಪಟ್ರೋ ನನ್ನ ಮಗ ಬುದ್ಧಿ ಕಲೀಲಿಲ್ವಲ್ಲಾ'' ಅಂತ ತಾಯಿಗೆ ಕೋಪ ಬಂದು ಮಗನಿಗೆ ಹೊಡೆದ್ ಬಿಟ್ಲೂ.[೩೪] ಹಾಗೆ ಹೊಡದ ಮೇಲೆ ತಾಯಿನೆ ನನ್ನ ಜೊತೆಗಾರರ ಎದುರೇ ಹೊಡೆದುಬಿಟ್ಲು. ಎಚಿದು ಹೇಳಿ ತಾಯಿ, ತಂದೆ ನೆರಳು ಬಿಟ್ಟು, ಊರು ಬಿಟ್ಟು, ಉತ್ತರ ದೇಶಕ್ಕೆ ಹೊರಟು ಹೋಗುತ್ತಾನೆ. ಹೀಗೆ ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಒಂದು ಪಂಚಕಲ್ಯಾಣಿಯನ್ನು ಕಾಣುತ್ತಾನೆ. ಅದರೊಳಗೆ ತ್ರಿಮೂರ್ತಿಗಳು ಸ್ನಾನ ಮಾಡುತ್ತಿರುತ್ತಾರೆ. ಅವರು ಸ್ನಾನ ಮಾಡುವ ವಿಧಾನವನ್ನು ಚೆನ್ನಾಗಿ ಗಮನಿಸಿದ ಕದಿರಪ್ಪ ಅವರಿಗಿಂತ ಚೆನ್ನಾಗಿ ಅದೇ ಕಲ್ಯಾಣಿಯಲ್ಲಿ ಸ್ನಾನ ಮಾಡುತ್ತಾನೆ. ಇವನು ಮಡಿಯಾಗುವ ರೀತಿಯನ್ನು ಕಂಡು ದೇವತೆಗಳು ಜಲಜಲನೆ ಬೆವತುಹೋಗುತ್ತಾರೆ. ತ್ರಿಮೂರ್ತಿಗಳು ಕದಿರಪ್ಪನನ್ನು ಜಾತಿ ಯಾವುದೆಂದು ಕೇಳುವರು. ಆಗ ಕದಿರಪ್ಪ ತನ್ನ ತಂದೆ ಕರಿಯಂಭಟ್ಟರೆಂದೂ, ತಾಯಿ ಶೇಷಮ್ಮನವರೆಂದೂ ಹೇಳುವನು. ತಾನು ವೆಂಕಂಭಟ್ಟನೆಂದೂ ತಿಳಿಸುತ್ತಾನೆ. ಗೊಂದಲಕ್ಕೆ ಒಳಗಾದ ತ್ರಿಮೂರ್ತಿಗಳು ಇವನ ಬೆಡಗು ಯಾವುದೆಂದು ಕೇಳುವರು. ಆಗ ಕದಿರಪ್ಪ '' ಹಾವನಾಡುದ, ಗೋವನಾಡು, ಮುರುಕು ನಾಡು, ಇರೋಟಿ ಸಾಕಿ ಅಡ್ಡಗಂಧ ಬ್ರಾಹ್ಮಣರು'' ಎಂದು ಹೇಳುವನು. ಕದಿರಪ್ಪನ ಮಾತಿನಲ್ಲಿ ವಿಶ್ವಾಸವನ್ನು ತಳೆದ ತ್ರಿಮೂರ್ತಿಗಳು ಸಂತೋಷಗೊಳ್ಳುವರು. ಆಗ ವಿಷ್ಣುವು ಬ್ರಹ್ಮನನ್ನು ಕುರಿತು '' ಇಂಥ ದೊಡ್ಡೋರ ಮಗನಿಗೆ ನಿನ್ನ ಮಗಳಾದ ಸತ್ಯಶ್ರೀ ಬಾಲಗೌರಿಯನ್ನು ಕೊಟ್ಟು ಲಗ್ನ ಮಾಡು'' ಎಂದು ಹೇಳುವನು. ಬ್ರಹ್ಮನು ಈ ಮಾತಿಗೆ ಒಪ್ಪುನು. ಬ್ರಹ್ಮನು ಈ ಮಾತನ್ನು ತನ್ನ ಮಗಳಿಗೆ ತಿಳಿಸಿದಾಗ ಆಕೆ: ಬಂದಕಾಯ ಬಂದಂಗೆ ಒಳಗೆ ಕರಕೋಬಾರದು.[೩೫] ಆದರ ಗೋತ್ರ, ಜಾತಿ, ನೀತಿ ಯಾವುದೆಂದು ತಿಳಿದು ಲಗ್ನವಾಗುತ್ತೇನೆ'' ಎಂದಳು. ಬ್ರಹ್ಮ ಕದಿರಪ್ಪನನ್ನು ಮನೆಯಲ್ಲಿಯೇ ಉಳಿಸಿಕೊಂಡು ಕಾಮಧೇನುವನ್ನು ಕಾಯುವ ಕೆಲಸಕ್ಕೆ ಹಚ್ಚುತ್ತಾನೆ. ಆಗ ಕದಿರಪ್ಪ ಕಾಮಧೇನುವಿನ ಹಾಲಿಗೆ ಹಂಚಿಕಡ್ಡಿಯನ್ನು ಅದ್ದಿ, ಮುತ್ತುಗದ ಎಲೆಯ ಮೇಲೆ ನೇದಾಂವನ್ನೆಲ್ಲ ಬರೆಯುತ್ತಾನೆ. ನಿತ್ಯವೂ ಬರೆದದ್ದನ್ನು ಹಸುವಿಗೆ ಗೊಂತಿನಲ್ಲಿ(ಕೊಟ್ಟಿಗೆಯಲ್ಲಿ) ಇಡುತ್ತಿರುತ್ತಾನೆ.

ಹಬ್ಬ ಬಂದಾಗ ಆತಿಗಳಿಗೆ ಊಟವನ್ನು ಬಡಿಸಲು ಬ್ರಹ್ಮನಿಗೆ ಎಲೆ ಸಿಗುವುದಿಲ್ಲ. ಆತನು ವಿಷ್ಣುವಿನ ಹತ್ತಿರ ಹೋಗಿ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾನೆ. ವಿಷ್ಣು ''ನಿಮ್ಮ ಮನೆಯಲ್ಲಿರುವವನು ಜಾತಿವಂತನಾದರೆ ಊಟದ ಎಲೆಯನ್ನು ಹಸುವಿನ ಗೊಂತಿನಲ್ಲಿ ಇಟ್ಟಿರುತ್ತಾನೆ ಹೋಗಿ ನೋಡು'' ಎನ್ನುತ್ತಾನೆ. ಬ್ರಹ್ಮ ನೋಡಿದಾಗ ಎಲೆಯ ಪಿಂಡಿ ದೊರೆಯುತ್ತದೆ. ತ್ರಿಮೂರ್ತಿಗಳೂ, ಸತ್ಯಶ್ರೀ ಬಾಲಗೌರಿಯೂ ಅಲ್ಲಿಗೆ ಬರುತ್ತಾರೆ. ಎಲೆಯ ಕಟ್ಟನ್ನು ಬಿಚ್ಚಿದಾಗ ವೇದಾಂತವನ್ನು ವೆಂಕಂಭಟ್ಟ ಬರೆದಿರುವುದನ್ನು ಕಂಡು ವಿಸ್ಮಯಗೊಳ್ಳುತ್ತಾರೆ.ಇಂತಹವನನ್ನು ಮನೆಯಲ್ಲಿ ಜೀತಕ್ಕಿಟ್ಟುಕೊಳ್ಳುವುದು ಸೂಕ್ತವಲ್ಲವೆಂದು ತಿಳಿದು ಪುರೋಹಿತರಲ್ಲಿಗೆ ಬರುತ್ತಾರೆ. ''ಹೆಣ್ಣ ಜಾತಿಯಾಗಲೀ, ಗಂಡ ಜಾತಿಯಾಗಲೀ, ಮರ್ಮವ ಬಿಟ್ಟು ಕೊಡದೆ ಲಗ್ನವನ್ನು ನಿಶ್ಚಯಿಸಬೇಕು'' ಎಂದು ವಿಷ್ಣು ಪುರೋಹಿತರಿಗೆ ಹೇಳುತ್ತಾನೆ. ವೆಂಕಂಭಟ್ಟ ಮತ್ತು ಸತ್ಯಶ್ರೀ ಬಾಲಗೌರಿಯ ವಿವಾಹವಾಗಿ

ಬ್ರಹ್ಮನು ಕಂದಗಿರಿ ಪಟ್ಟಣವನ್ನು ಮಗಳ ಹೆಸರಿಗೆ ಬರೆದು ಗಂಡನ ಜೊತೆಯಲ್ಲಿ ಕಳುಹಿಸಿಕೊಟ್ಟ. ಗೌರಿ, ವಿಷ್ಣುವಿಗೆ ನಮಸ್ಕರಿಸುವಾಗ ಅವಳ ಮಡಿಲಿನ ಕರ್ಪೂರ, ವೀಳ್ಯೆ ಬಿದ್ದು ಹೋಗುತ್ತದೆ.[೩೬] ಬೆಕ್ಕು ಅಡ್ಡ ಬರುತ್ತದೆ. ಬ್ರಹ್ಮ ಇದನ್ನು ಕಂಡು ಆತಂಕಪಟ್ಟಾಗ ಗಂಜಿಸೀರೆಯಾದ್ದರಿಂದ ಕರ್ಪೂರ, ವೀಳ್ಯೆ ಬಿದ್ದುಹೋಯಿತೆಂದೂ, ಅಗಲಿಕೆಯ ಸಂಕಟದಿಂದ ಬೆಕ್ಕು ಬಂದಿತೆಂದೂ ವಿಷ್ಣು ಸಮಾಧಾನ ಹೇಳುತ್ತಾನೆ. ವೆಂಕಂಭಟ್ಟ ಮತ್ತು ಬಾಲಗೌರಿಗೆ ಐವರು ಮಕ್ಕಳಾಗುತ್ತಾರೆ.

ತನ್ನ ಮೊಮ್ಮಕ್ಕಳಿಗೆ ವಿದ್ಯೆ ಕಲಿಸಲೆಂದು ಬ್ರಹ್ಮ ಉಪಾಧ್ಯಾಯರನ್ನು ಕಳುಹಿಸುತ್ತಾನೆ. ಗುರುಗಳು ಕಲಿಸಿದ್ದನ್ನು ಹುಡುಗರು ಕಲಿಯಲಿಲ್ಲ. ಹುಡುಗರು ಚಪ್ಪಲಿಯ ಅಟ್ಟೆ, ಜತ್ತಿಗೆ, ಬರ್ಗೋಲು, ಮಿಣಿಹಗ್ಗ, ಕಟ್ಟೆ ಬಾವಿಯನ್ನು ಬರೆಯುತ್ತಾರೆ. ಗುರುಗಳು ಆಶ್ಚರ್ಯಪಡುತ್ತಾರೆ. ಹೊಡೆದು, ಬಡಿದು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಕದಿರಪ್ಪನ ತಾಯಿ ಕದಿರಪ್ಪನನ್ನು ಹುಡುಕುತ್ತಾ ಬರುತ್ತಾಳೆ. ತ್ರಿಮೂರ್ತಿಗಳು ಸ್ನಾನ ಮಾಡುತ್ತಿದ್ದ ಪಂಚಕಲ್ಯಾಣಿಯಲ್ಲಿ ಆಕೆ ಮಗನನ್ನು ಗುರುತಿಸುತ್ತಾಳೆ. ಆಗ ಕದಿರಪ್ಪ ತಾಯಿಗೆ ಹೊಸ ಬಟ್ಟೆ ತೊಡಿಸಿ, ತಲೆ ಬೋಳಿಸಿ, ಮೂಗಿಯಂತಿರಬೇಕೆಂದು ಹೇಳಿ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಅತ್ತೆಯನ್ನು ಬಾಲಗೌರಿಯು ಆನಂದಿಂದ ಸತ್ಕರಿಸುತ್ತಾಳೆ. ಊಟ ಮಾಡುವಾಗ ತಾಯಿಗೆ ಇರುಸು ಮುರುಸಾಗಿ ಮಗನನ್ನು ಕುರಿತು "ಇದ್ಯಾಕಲೇ ನನ್ಮಗನೆ ಕದರ ತುಪ್ಪದ ಎಂಜಲಿಗೋಸ್ಕರವಾಗಿ ಈ ಬ್ರಾಹ್ಮಣರ ಮನೆ ಒಳಗೆ ಎಂಜಲು ತಿಂದ್ಕಂಡು ಬಿದ್ಕಂಡಿದ್ದೀಯಲ್ಲ" ಎಂದಳು.

ಈ ಮಾತುಗಳನ್ನು ಕೇಳಿಸಿಕೊಂಡ ಸತ್ಯಶ್ರೀ ಬಾಲಗೌರಿಗೆ ತನ್ನ ಗಂಡನ ಜಾತಿ ಯಾವುದೆಂದು ಗೊತ್ತಾಯಿತು. ತನ್ನ ಮನೆಗೆ ಬೆಂಕಿ ಇಟ್ಟಳು. ತನ್ನ ಗಂಡನಿಗೆ ಕೋಣವೇಗೌಡನ ಸರಳೆಮ್ಮೆ ಗರ್ಭದಲ್ಲಿ ಕೋಣವಾಗಿ ಹುಟ್ಟುವಂತೆಯೂ ತಾನು ಗ್ರಾಮದೇವತೆಯಾಗಿ ಆ ಕೋಣವನ್ನು ಬಲಿ ತೆಗೆದುಕೊಳುವುದಾಗಿಯೂ ಶಾಪ ಕೊಟ್ಟಳು.[೩೭] ಹಿರಿಯ ಮಗನನ್ನು ಅಸಾದಿ ಅಗುವಂತೆಯೂ, ಉಳಿದ ನಾಲ್ಕು ಮಕ್ಕಳನ್ನು ಗ್ರಾಮದೇವತೆಯ ಹಬ್ಬದಲ್ಲಿ ಬಲಿಮರಿಗಳಾಗುವಂತೆಯೂ, ತನ್ನ ಅತ್ತೆಯು ಗೋರಿ ಕಂಬವಾಗಿ ಹುಟ್ಟುವಂತೆಯೂ ಶಾಪಕೊಟ್ಟು ತಾನು ಸಜೀವ ದಹನವಾದಳು.

ಕದಿರಪ್ಪ ಕೊಣವೇಗೌಡನ ಸರಳೆಮ್ಮೆ ಗರ್ಭದಲ್ಲಿ ಕೋಣನಾಗಿ ಜನಿಸಿದನು. ಬಾಲಗೌರಿ ಗ್ರಾಮದೇವತೆಯಾಗಿ ಜನಸಿ ಕೋಣವನ್ನು ತನಗೊಪ್ಪಿಸುವಂತೆ ಗೌಡನನ್ನು ಕೇಳಿದಳು. ಕೊಣವೇಗೌಡನು ನಿರಾಕರಿಸಿದಾಗ ಅವನಿಗೆ ನಾನಾ ಬಗೆಯ ಸಂಕಟಗಳನ್ನು ತಂದೊಡ್ಡಿದಳು. ಬೆಳಿಗ್ಗೆ ಮತ್ತು ಸಂಜೆಯಲ್ಲಿ ಈ ಕೋಣನನ್ನು ಆರಾಧಿಸುತ್ತಿದ್ದ ಕೊಣವೇಗೌಡ ಕೊನೆಗೆ ಕೋಣವನ್ನು ಕೊಡಲೊಪ್ಪಿದನು. ಕೋಣವನ್ನು ಸಮುದ್ರ ತೀರದಲ್ಲಿ ಬಿಟ್ಟರು.[೩೮] ಕಡಲ ತಡಿಯಲ್ಲಿ ಕೋಣವನ್ನು ಕಂಡು ಭೀತರಾದ ದೇವತೆಗಳು ಸಮುದ್ರದ ಬಳಿ ಸುಳಿಯಲು ಹೆದರಿದರು. ಅವರು ಮೂರು ತಿಂಗಳಾದರೂ ಸ್ನಾನ ಮಾಡಲಿಲ್ಲ. ಸ್ನಾನಕ್ಕಾಗಿ ಅಲ್ಲಿಗೆ ಬಂದಿದ್ದ ತ್ರಿಮೂರ್ತಿಗಳು ಈ ಕೋಣದ ಜೊತೆಗೆ ಘೋರ ಕಾಳಗ ಮಾಡಿದರು. ಕೋಣನ ಹಲ್ಲೆಯಿಂದ ತಪ್ಪಿಸಿಕೊಂಡು ನಾರಾಯಣ ಗ್ರಾಮದೇವತೆಗೆ ಪತ್ರ ಬರೆದು ಕಳುಹಿಸುತ್ತಾನೆ. "ಈಗ ಬೆಳೆದು ದೊಡ್ಡವನಾಗಿರುವ ಈ ಕೋಣ ನಿಮ್ಮ ಏಳು ಜನ ಅಕ್ಕ ತಂಗಿಯರಿಗೂ ಗಂಡನಾಗಬೇಕೆಂದು ಸಮುದ್ರ ತೀರದಲ್ಲಿ ಮೆರೆಯುತ್ತಿದ್ದಾನೆ" ಎಂದು ನಾರಾಯಣ ಬರೆದದ್ದನ್ನು ಓದಿದ ಗ್ರಾಮದೇವತೆ ನನಗೆ ಜಾತಿಯನ್ನು ಸುಳ್ಳು ಹೇಳಿ ಮೋಸ ಮಾಡಿದ್ದಲ್ಲದೆ, ನನ್ನ ಏಳು ಜನ ಅಕ್ಕ ತಂಗಿಯರಿಗೂ ಮೋಸ ಮಾಡಬೇಕೆಂದಿರುವೆಯಾ ಎಂದು ಹೇಳಿ ಕೋಣವನ್ನು ಇನ್ನೆಂಟು ದಿನಕ್ಕೆ ಬಲಿತೆಗೆದುಕೊಳಲ್ಲು

ಸಿದ್ಧವಾಗುವಳು. ಕೆಳಜಾತಿಯ ಹುಡುಗನೊಬ್ಬ ತನ್ನ ಸಾಮಾಜಿಕ ಸ್ಥಾನಮಾನವನ್ನು ಎತ್ತಿರಿಸಿಕೊಳ್ಳಲು ಮಾಡಿದ ಪ್ರಯತ್ನ ಮತ್ತು ಸಾಹಸವೇ ಗ್ರಾಮದೇವತೆಯ ಪುರಾಣದ ಮೂಲ ಆಶಯವಾಗಿದೆ.[೩೯]

ಕುಣಿತ:-

ಎಲ್ಲಮ್ಮನ ಮುಂದೆ ಅಥವಾ ಅವಳ ಹೆಸರಿನಲ್ಲಿ ಕುಣಿಯುವುದನ್ನು ಅವಳ ಭಕ್ತರು 'ಕುಣಿತ' ಎಂದು ಕರೆಯದೆ, 'ಆಡುವುದು' ಎಂದು ಕರೆಯುತ್ತಾರೆ. ಜೋಗ ಬೇಡುವುದನ್ನು 'ಜೋಗಾಡುವುದು' ಎಂದು ಕರೆಯುತ್ತಾರೆ. ಏಕೆಂದರೆ ಜೋಗ ಬೇಡುವುದು ಕೇವಲ ತಮ್ಮ ಹೊಟ್ಟೆ ಹೊರಕೊಳ್ಳುವ ಕೆಲಸ ಎಂದು ಭಾವಿಸದೆ, ಅದು ಎಲ್ಲಮ್ಮನ ಸೇವೆ ಎಂಬ ಭಾವನೆಯಿದೆ; ಹೀಗಾಗಿ ಕುಣಿಯುವಲ್ಲಿಯೂ ಕೂಡ 'ಅವಳಿಗೆ ಸಲ್ಲಿಸುವ ಸೇವೆ' ಎಂಬ ಭಾವನೆಯಿದ್ದು.[೪೦] ಕುಣಿಯುವಾಗ ಎಲ್ಲಮ್ಮ ತಮ್ಮ ದೇಹದಲ್ಲಿ ಸಂಚಾರ ಮಾಡುವಳೆಂದು ಬಗೆಯುವ ಜನ. ತಾವು ಕುಣಿಯುವುದು ಕೂಡ ಎಲ್ಲಮ್ಮನ ಒಂದು ಬಗೆಯ 'ಲೀಲೆ' ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

ಬಾರ್ಕಿಚೌಡಿಕೆಯ ತಾಳಗತ್ತಿನೊಂದಿಗೆ ಹೆಜ್ಜೆ ಹಾಕುವುದೇ ಸುಮಾರಾಗಿ ಇಲ್ಲಿಯ ಕುಣಿತವಾಗಿದೆ. ವಿಶೇಷವಾದ ಕುಣಿತವೇನೂ ಇಲ್ಲಿ ಕಂಡುಬರುವುದಿಲ್ಲ. ಗಂಡು ಜೋಗತಿಯರ ಕುಣಿತವನ್ನು ಗಮನಿಸಿದರೆ ಹೆಣ್ಣಿನ ಹಾವಭಾವಗಳನ್ನು ಅನುಕರಣೆ ಮಾಡುತ್ತ, ನಿಂತಲ್ಲಿಯೇ ಹೆಜ್ಜೆ ಹಾಕುತ್ತ. ಹುಬ್ಬೇರಿಸುತ್ತ, ಸೀರೆ ಸರಿಪಡಿಸುತ್ತ, ಕೈಬೀಸಿ ನಡೆಯುವ ನಟನೆ ಮಾಡುವುದನ್ನು ನೋಡಿದರೆ ತಮ್ಮ ಸವಾರಿ ಏಳುಕೊಳ್ಳದ ಕಡೆಗೆ ಎಂಬ ಭಾವವನ್ನೇ ವ್ಯಕ್ತಪಡಿಸುತ್ತಾರೇನೋ ಏನಿಸುತ್ತದೆ. ಹೆಣ್ಣುಮಕ್ಕಳು ಕೂಡ ಎಲ್ಲಮ್ಮ ಧಾವಿಸುವ ಭಾವವನ್ನೇ ವ್ಯಕ್ತಗೊಳಿಸುವ ಕುಣಿತವನ್ನೇ ಕುಣಿಯುತ್ತಿರುತ್ತಾರೆ.[೪೧]

ಏನಿದ್ದರೂ ಇದೊಂದು 'ಕಲೆ' ಎಂದು ಪರಿಗಣಿಸುವಲ್ಲಿ ನನ್ನ ಮನಸ್ಸಂತೂ ಒಪ್ಪುತ್ತಿಲ್ಲ. ಕಲೆಯ ಮುಖ್ಯ ಉದ್ದೇಶ ನೋಡುವವರ ಮನಸ್ಸಿನ ಮೇಲೆ ಆಹ್ಲಾದ ಕರವಾದ ಪರಿಣಾಮವನ್ನು ಬೀರುವುದು. ನಮ್ಮ ಜನಪದ ಪಂಡಿತರು ಪುರವಂತರ ಕುಣಿತ, ಎಲ್ಲಮ್ಮನ ಕುಣಿತಗಳು ಪ್ರೇಕ್ಷಕರ ಮನಸ್ಸಿನ ಮೇಲೆ ಬೀರಬಹುದಾದ ಪರಿಣಾಮದ ಕಡೆ ಗಮನ ಹರಿಸುತ್ತಿಲ್ಲ. ಪುರವಂತರು ರೋಷಾವೇಶದಿಂದ ಕುಣಿಯುತ್ತ, ದೇಹದ ಅಂಗಾಂಗಗಳಲ್ಲಿ ಮೊಳೆಗಳನ್ನು ಚುಚ್ಚಿ ಕೊಳ್ಳುವ ದೃಶ್ಯವಂತೂ ನೋಡುವವರ ಮನಸ್ಸಿಗೆ ಹಿಂಸೆಯನ್ನು ಕೊಡುವ ಒಂದು ನೋಟವಾಗಿದೆ.[೪೨] ಎಲ್ಲಮ್ಮನ ಕುಣಿತ ಕೂಡ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆಯೇ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ. ಅದಕ್ಕಾಗಿ ಇವನ್ನು ಕಲೆಗಳೆಂದು ಪರಿಭಾವಿಸಿ ಪ್ರೋತ್ಸಾಹಿಸುವಲ್ಲಿ ಆರೋಗ್ಯಕರ ಲಕ್ಷಣ ಕಾಣಿಸುವುದಿಲ್ಲವೇನೋ ಎಂದೆನಿಸುತ್ತದೆ.

ಪ್ರಪಂಚ ಎನ್ನುವ ಪದವೇ ಪಂಚಭೂತಗಳಾದ ನೀರು, ಗಾಳಿ, ಬೆಳಕು, ಭೂಮಿ ಆಕಾಶಗಳಿಂದ ಆವರಿಸಲ್ಪಟ್ಟಿರುವುದು. ಇಂತಹ ಪ್ರಾಕೃತಿಕ ಸಂಪತ್ತನ್ನು ಅನುಭವಿಸಲು ಲಕ್ಷಾಂತರ ಜೀವಿಗಳು ಸೃಷ್ಟಿಯಾಗಿವೆ. ಅವುಗಳನ್ನೇ ಜೀವಜಂತುಗಳು, ಸಸ್ತನಿಗಳು, ಮೃಗ, ಪಕ್ಷಿಗಳು, ನರ, ವಾನರರೆಂದು ಕರೆಯುವುದು. ಒಂದೊಂದು ಜೀವಿಯೂ ಒಂದೊಂದು ತೆರನಾದ ವಾಸ್ತವ್ಯವನ್ನು ಕಂಡುಕೊಳ್ಳುತ್ತದೆ.[೪೩] ಮೀನು ನೀರಿನಲ್ಲಿಯೂ ಹಕ್ಕಿ ಪಕ್ಷಿ ತಾವೇ ರಚಿಸಿಕೊಂಡ ಗೂಡಿನಲ್ಲಿಯೂ ಕೀಟಾದಿಗಳು ಅವುಗಳ ಸಾಮರ್ಥ್ಯಕ್ಕನುಗುಣವಾದ ಸಸ್ಯ ಸಂಪತ್ತನ್ನಾಶ್ರಯಿಸಿ ಜೀವಿಸುವುದು ಋತುಚಕ್ರಕ್ಕನುಗುಣವಾಗಿ ನಡೆದೆ ಇದೆ. ಇರುವಲ್ಲಿ ಬುದ್ಧಿಪ್ರಧಾನತೆ ಇರುವ ಮಾನವನ ಬದುಕು ಬಹು ಎತ್ತರದಲ್ಲಿ ನಿಲ್ಲುತ್ತದೆ. ಆದ ಬದುಕಿಗೆ ಬಹುವಿಸ್ತಾರವಾದ ಸಂಸ್ಕೃತಿ, ಚರಿತ್ರೆ, ಪರಂಪರೆಗಳೂ ಜೀವನದುದ್ದಕ್ಕೂ ಪ್ರವಹಿಸುವ ನದಿಯಂತೆ ಹರಿದು ಬರುತ್ತಲೇ ಇರುತ್ತವೆ.

ಗ್ರಾಮ:-

ಹಳ್ಳಿ, ಪಳ್ಳಿ, ಊರು, ಗಾಂವ್, ಕಸಬಾ, ಖೇಡಾ ಎಂದು ಭಾರತದ ಬೇರೆಬೇರೆ ಕಡೆಗಳಲ್ಲಿ ಪರಿಚಿತವಾಗಿರುವ ಸಮುದಾಯ. 'ಭರತ' ಇವನ್ನು ಬ್ರಾಹ್ಮಣಾದಿ ವರ್ಣಗಳಿಂದ ಕೂಡಿದ, ಪ್ರಕಾರ ಕಂದಕಗಳಿಲ್ಲದ ಬಹುಜನವಸತಿಗಳೆಂದು ಹೇಳಿದ್ದಾನೆ. ಇವನ್ನು ಸಾಮಾನ್ಯವಾಗಿ ಶಾಶ್ವತವಾದ, ಗಾತ್ರದಲ್ಲಿ ಚಿಕ್ಕದಾದ, ಮುಖ್ಯವಾಗಿ ಭೂ ವ್ಯವಸಾಯವುಳ್ಳ ಹತ್ತಿರ ಹತ್ತಿರ ವಾಸಿಸುವ ಕೆಲವು ಕುಟುಂಬಗಳಿರುವ ಪ್ರಾಥಮಿಕ ಸಂಬಂಧಗಳು ಪ್ರಧಾನವಾಗಿರುವ ನೆಲೆಗಳೆಂದು ಕರೆಯಬಹುದು.[೬೬] ಈ ಭೌತಿಕ ಹಾಗೂ ಸಾಮಾಜಿಕ ಆಧಾರಗಳ ಮೇಲಿಂದ ಗ್ರಾಮಗಳನ್ನು ಅಲೆಮಾರಿಗಳ ತಂಡಗಳಿಂದ, ಚದುರಿದ ಕೊಪ್ಪಲು ಅಥವಾ ಪಾಳಯಗಳಿಂದ, ಉಪನಗರ ಹಾಗೂ ಮಹಾನಗರಗಳಿಂದ ವಿಂಗಡಿಸುವುದು ಸಾಧ್ಯ.

ಬೇಟೆಯಾಡುವುದು, ಗೆಡ್ಡೆ ಗೆಣಸು ಸಂಗ್ರಹಿಸುವುದು, ಮೀನು ಹಿಡಿಯುವುದು ಇನ್ನೂ ಮುಂತಾದ ಆಹಾರ ಸಂಪಾದನೆಯ ಮಾರ್ಗಗಳನ್ನು ಅನುಸರಿಸುತ್ತಿದ್ದ ಪ್ರಾಚೀನರು ಆಹಾರಾನ್ವೇಷಣೆಯಲ್ಲಿ ದೂರ ದೂರ ಅಲೆಯುತ್ತಿದ್ದರು. ಪ್ರಾಣಿಗಳನ್ನು ಪಳಗಿಸಲು ಕಲಿತ ಅವರು ಮುಂದೆ ಕೃಷಿಯನ್ನು ಅವಲಂಬಿಸಿದಾಗ ಮಾನವ ವಿಕಾಸದಲ್ಲಿ ಒಂದು ದೊಡ್ಡ ಹೆಜ್ಜೆ ಇಟ್ಟಂತಾಯಿತು. ಈ ಕ್ರಾಂತಿ ಕ್ರಿ.ಪೂ. ಹತ್ತು ಸಾವಿರದ ಸುಮಾರಿನ ನವಶಿಲಾಯುಗದಿಂದ ಆರಂಭವಾಯಿತು. ಕಾಲದ ದೃಷ್ಟಿಯಿಂದ ಚರಿತ್ರೆಯಲ್ಲಿ ಹೇಳುವಂತೆ.

ಕ್ರಿ.ಪೂ. ೭೫೦ರ ಸುಮಾರಿಗೆ ಇರಾಕಿನಲ್ಲಿ ಸ್ಥಾಪಿತವಾದ ಗ್ರಾಮಗಳು ಪ್ರಾಚೀನವಾದವು.ಮಾನವರನ್ನೊಳಗೊಂಡ ಶಾಶ್ವತವಾದ ಕೃಷಿಕ ಸಮುದಾಯಗಳನ್ನು ನಿಜವಾದ ಗ್ರಾಮಗಳೆನ್ನಬಹುದು. ಇಂಥ ಗ್ರಾಮಗಳ ಅಧ್ಯಯನವನ್ನು ಒಲುಫ್‌ಸೆನ್ ಡೆನ್ಮಾರ್ಕಿನ ಗ್ರಾಮಗಳ ಬಗೆಗೆ ಅಭ್ಯಾಸ ನಡೆಸಿದ್ದಾನೆ.[೬೭] ನಮ್ಮ ಗ್ರಾಮಗಳು ರಷ್ಯಾದ ಮಿರ್, ಜರ್ಮನಿಯ ಮಾರ್ಕ್, ಇಂಗ್ಲೆಂಡಿನ ವಿಲೇಜ್, ಡೆನ್ಮಾರ್ಕಿನ ಹಳ್ಳಿ, ಮೆಕ್ಸಿಕೋದಾ ಗ್ರಾಮ ಇತ್ಯಾದಿಯನ್ನು ಹೋಲುತ್ತವೆ. ಅವುಗಳ ರಚನೆ ಭಾರತೀಯ ಮಾದರಿಯಲ್ಲಿರಬಹುದು.

ಮಾಸ್ತಿ ಸಂಬಂಧದ ದೇವತೆಗಳು:-

ಮಾಸ್ತಿದೇವತೆಗಳು ಮೂಲದಲ್ಲಿ ಮಹಾಸತಿ ಎನಿಸಿಕೊಂಡವರು. ಗಂಡನ ಸಾವಿನ ಸುದ್ದಿಯನ್ನು ಕೇಳುತ್ತಲೆ ತಮ್ಮ ಸಾವಿಗೆ ಸಿದ್ಧತೆ ಮಾಡಿಕೊಂಡು ಅಗ್ನಿಪ್ರವೇಶ ಮಾಡುವುದು ಒಂದು ಬಗೆಯಾದರೆ, ಊರಿನ ಒಳಿತಿಗಾಗಿ ತಮ್ಮನ್ನೇ ತಾವು ಬಲಿಕೊಡುವುದು ಇನ್ನೊಂದು ರೀತಿ ಗಂಡ ಬದುಕಿದ್ದೂ, ಆತನು ದೂರದಲ್ಲೋ ಅಸಹಾಯಕನಾಗಿಯೋ ಇದ್ದಾಗ ತನ್ನ ಶೀಲ ಕೆಡಿಸಲು ಬಂದವನನ್ನು ಕೊಂದು ತಾನು ಅಗ್ನಿಪ್ರವೇಶ ಮಾಡುವ ವಿಧಾನವೂ ಉಂಟು. ಗಂಡನಿಲ್ಲದೆ ಬದುಕಲು ಅಸಾಧ್ಯ ಎಂಬ ಮನೋಧರ್ಮ ಇಲ್ಲಿ ಪ್ರಬಲವಾದ, ಮಾನಾಪಹರಣದ ನಂತರ ಬದುಕು ಅಸಹನೀಯ ಎಂಬ ತಿಳಿವಳಿಕೆ ಹೆಣ್ಣನ್ನು ಮಾಸ್ತಿಯಾಗಲು ಪ್ರೇರೇಪಿಸಬಹುದು. ಹಾಗೆಯೇ ಹಿರಿಯರು ಮತ್ತು ಸಂಬಂಧಿಗಳ ಬಲವಂತವೂ ಪ್ರಭಾವ ಬೀರುತ್ತದೆ.[೬೮] ಹೀಗೆ ಒಂದು ಹೆಣ್ಣು ಮಾಸ್ತಿಯಾಗಲು ಹಲವಾರು ಕಾರಣಗಳಿವೆ. ಮಾರಮ್ಮನೂ ಒಂದು ಬಗೆಯ ಮಾಸ್ತಿಯೇ ಆಗಿದ್ದಾಳೆ. ಆಕೆ ಗಂಡನನ್ನು ಕೊಂದು ಅಗ್ನಿಪ್ರವೇಶ ಮಾಡುತ್ತಾಳೆ. ವೈವಾಹಿಕ ಜೀವನದಲ್ಲಿ ದುರಂತವು ಗಂಡನ ಸಾವಿನ ಮೂಲಕ ಅಥವಾ ತನ್ನ ಬಲಿಯನ್ನೇ ಸಮಾಜ ಬೇಡುವುದರ ಮೂಲಕ ಸಂಭವಿಸುತ್ತದೆ. ಹೀಗೆ ಸಮಾಜ ವ್ಯವಸ್ಥೆಯ ಬಲಿಪಶುವಾದ ಗಂಡನನ್ನು ಕೂಡಿಕೊಳ್ಳುವ ದಟ್ಟವಾದ ಬಯಕೆ ಆಕೆಯನ್ನು ಮಾಸ್ತಿಯಾಗಲು ಉತ್ತೇಜಿಸಬಹುದು.

ಪೋತುರಾಜನ ಕುಣಿತ (ದುರುಗಾ ಮುರುಗಿ):-

ಉತ್ತರ ಕರ್ನಾಟಕ ಭಾಗದಲ್ಲಿ 'ದುರುಗ ಮುರುಗಿ'ಯವರೆಂದೂ ಮುರುಗಮ್ಮನಾಡಿಸುವವರು ಎಂದೂ ದಕ್ಷಿಣ ಕರ್ನಾಟಕದಲ್ಲಿ ಉರು ಮಾರಿಯಮ್ಮ ಅಥವಾ ಕೊಲ್ಲಾಪುರದಮ್ಮ ಎಂದೂ ವಿವಿಧ ಹೆಸರುಗಳಲ್ಲಿ ಕರೆಯಲಾಗುವ ಈ ಕಲೆ ತುಂಬ ವಿಶಿಷ್ಟವಾದದ್ದು ಯಾಕೆ ಎಂದರೆ ಮಾರಮ್ಮನ ರೂಪದ ಈ ದೇವತೆ ಒಂದು ಕಡೆ ನೆಲೆ ನಿಲ್ಲುವವಳಲ್ಲ, ಊರೂರು ಸುತ್ತುವವಳು, 'ದುರುಗ ಮುರುಗಿಯವರು' ಅಥವಾ 'ಮರಗಮ್ಮದವರು' ಎಂದೇ ಕರೆಯಲಾಗುವ ಒಂದು ವಿಶೇಷ ಜನಾಂಗ ತಮ್ಮ ದೇವತೆಯನ್ನು ಪೆಟ್ಟಿಗೆಯಲ್ಲಿಟ್ಟು, ಅದನ್ನು ಹೊತ್ತುಕೊಂಡು ಊರಾಡುತ್ತಾರೆ. ಊರಾಡುವ ಸಂದರ್ಭದಲ್ಲಿ ಪೆಟ್ಟಿಗೆಯನ್ನು ಹೊತ್ತು 'ಉರುಮೆ' ಅಥವಾ ವಾದ್ಯದ ಬಡಿತಕ್ಕೆ ತಕ್ಕಂತೆ ಕುಣಿಯುವುದಲ್ಲದೆ, ಪೋತುರಾಜನ ವೇಷ ಹಾಗೂ ಸೋಮನ ಮುಖವಾಡದ ಪ್ರದರ್ಶನ ಕೂಡ ನೀಡುತ್ತಾರೆ. ಇವರಲ್ಲಿ ಪೆಟ್ಟಿಗೆ ದುರುಗಮುರುಗಿಯವರು ಹಾಗೂ ಬುಟ್ಟಿ ದುರುಗಮುರುಗಿಯವರೆಂದು ಎರಡು ವಿಧ, ಬುಟ್ಟಿ ದುರುಗಮುರುಗಿಯವರು ಬುಟ್ಟಿಯಲ್ಲಿ ತಮ್ಮ ದೇವರನ್ನಿಟ್ಟು ಹೊತ್ತು ಊರಾಡುತ್ತಾರೆ.[೪೭]

ಆಚರಣೆ:-

ಮೊದಲು ಊರಿನ ಒಂದು ಬೀದಿಯ ವಿಶಾಲ ಸ್ಥಳದಲ್ಲಿ ಪೆಟ್ಟಿಗೆಯನ್ನು ಪ್ರತಿಷ್ಠಾಪಿಸಿ, ಗಂಟೆ ಸದ್ದು ಮಾಡಲಾಗುತ್ತದೆ. ಹೆಂಗಸು ಉರುಮೆ ಸದ್ದು ಮಾಡುತ್ತಾ ಮರಗಮ್ಮನ ಸ್ತುತಿ ಮಾಡುತ್ತಾಳೆ. ಗಂಡಸು ಒಂದೆರಡು ಬಾರಿ ಚಾವಟಿಯಿಂದ ತನ್ನ ಬರಿಮೈಗೆ ಹೊಡೆದುಕೊಂಡು ದೇವರನ್ನು ಹೊಗಳುತ್ತಾನೆ. ಹೀಗೆ ಸ್ತುತಿ ಮಾಡುತ್ತಾ ಚಾವಟಿ ಏಟು ಹೊಡೆದುಕೊಳ್ಳುವ ಈ 'ಪೋತರಾಜ' ತನ್ನ ಪೆಟ್ಟಿಗೆ ಇಟ್ಟಲ್ಲಿಂದ ಆ ಬೀದಿಯ ಅಂತ್ಯದವರೆಗೆ ತನ್ನ ವೇಷವನ್ನು ಮೆರೆಯುತ್ತಾನೆ. ಅಂದರೆ ಉರುಮೆ ವಾದ್ಯದ ಗತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ, ಕೈಲಿ ಹಿಡಿದ ಚಾವಟಿಯನ್ನು ಎತ್ತಿ ತಿರುಗಿಸುತ್ತಾ, ಕೆಲವೊಮ್ಮೆ ಆ ಚಾವಟಿಯನ್ನು ಎರಡೂ ಕೈಯಿಂದ ಹಿಡಿದು ಹಿಂಡುತ್ತಾ ಲಘುವಾಗಿ ನರ್ತಿಸುತ್ತಾನೆ. ಮಧ್ಯೆ ಮಧ್ಯೆ ಆವೇಷ ಬಂದವನಂತೆ ಚಾವುಟಿಯಿಂದ ಪಟಪಟನೆ ಮೈಯ್ಯಿಗೆ ಹೊಡೆದುಕೊಳ್ಳುತ್ತಾನೆ. ಕೆಲವೊಮ್ಮೆ ರಕ್ತ ಕೂಡ ಒಸರುತ್ತದೆ.[೪೮] ಈ ರೀತಿಯ ಒಂದು ವೇಷ ಆದಮೇಲೆ ಮುಖಕ್ಕೆ ಮುಖವಾಡ ಹಾಕಿಕೊಂಡು ಉರುಮೆ ಗತಿಗೆ ತಕ್ಕಂತೆ ನರ್ತಿಸುತ್ತಾನೆ. ಉತ್ತರಕರ್ನಾಟಕ ಭಾಗಗಳಲ್ಲಿ ಚೌಡಿಯ ಮುಖವಾಡವನ್ನು, ದಕ್ಷಿಣದ ಭಾಗಗಳಲ್ಲಿ ಸೋಮನ ಮುಖವಾಡವನ್ನು ಹಾಕಿಕೊಂಡು 'ದೈಯ್ಯದಪ್ಪ.. ದೈಯ್ಯದಪ್ಪಾ' ಎನ್ನುತ್ತಾ ಅಭಿನಯಿಸುತ್ತಾನೆ. ಊರ ಜನ ಈ ವೇಷ ನೋಡಲು ಸೇರುತ್ತಾರೆ. ಹೆಣ್ಣುಮಕ್ಕಳು ಮೊರದಲ್ಲಿ ರಾಗಿ, ಜೋಳ, ಕಾಳು ಮುಂತಾದ ದವಸಧಾನ್ಯಗಳನ್ನು ತುಂಬಿತಂದು ದೇವತೆಗೆ ಅರ್ಪಿಸುತ್ತಾರೆ. ಪೂಜಾರಿ ಅರ್ಥಾತ್ ಪೋತರಾಜ ಅವರ ಮೊರಕ್ಕೆ ಭಂಡಾರ ಹಚ್ಚಿ ಹಿಂದೆ ಕೊಡುತ್ತಾನೆ. ಆ ಭಂಡಾರವನ್ನು ಆನಂತರ ಮನೆಮಕ್ಕಳಿಗೆಲ್ಲಾ ಹಚ್ಚಲಾಗುತ್ತದೆ.

ಹೀಗೆ ಆಗಾಗ ಬರುವ ದೇವತೆಗೆ ಕೆಲವರು ಹರಕೆ ಹೊರವುದೂ ಉಂಟು ಅಂಥವರು ಆ ಮಾರಮ್ಮನಿಗೆ ಕಾಲು ಕಡಗ, ಗೆಜ್ಜೆ ಚೈನು, ಅಟಿಗೆ ಸರ, ಬೆಳ್ಳಿಯ ಕಾಸಿನ ಸರ, ಡಾಬು, ತೋಳಬಂದಿ ಮುಂತಾದ ಒಡವೆಗಳನ್ನು ಅರ್ಪಿಸುವುದೂ ಉಂಟು. ಸಾಮಾನ್ಯವಾಗಿ ಆ ಪೂಜಾರಿ ಅವುಗಳನ್ನು ತನ್ನ ಪೆಟ್ಟಿಗೆಯ ಮುಂಭಾಗದಲ್ಲಿ ಜೋತುಬಿಟ್ಟು ಅಲಂಕರಿಸಿರುತ್ತಾನೆ. ಪ್ರತಿ ಊರಿಗೆ ಹೋದಾಗಲೂ ಇಂತಿಂಥ ಒಡವೆಗಳನ್ನು ಇಂತಿಂಥಾ ಊರವರು ಕೊಟ್ಟರು ಎಂದು ಹೇಳಿ, ಅವರವರಿಗೆ ಒದಗಿದ್ದ ಕಷ್ಟ ಪರಿಹಾರವಾದ ಬಗೆಯನ್ನು ಹೊಗಳುತ್ತಾನೆ.[೪೯] ಹೀಗೆ ಅವನ ಹೊಗಳಿಕೆ ನಡೆಯುತ್ತದೆ. ಅವನಿಗೆ ಬರುವ ಭಿಕ್ಷೆ ಹರಕೆ

ಬಂದಮೇಲೆ ಮತ್ತೆ ಪೆಟ್ಟಿಗೆಯನ್ನು ಹೊತ್ತು ಮುಂದಿನ ಬೀದಿಗೆ ಹೋಗುತ್ತಾನೆ. ಈ ದೇವತೆ ಆಗಾಗ ಊರಿಗೆ ಬಂದು ಹೋಗುವುದರಿಂದ ರೋಗರುಜಿನ ದೂರವಾಗುತ್ತವೆ ಎಂದೇ ಜನ ನಂಬುತ್ತಾರೆ. ಇದಲ್ಲದೆ ಇತರೆ ಗ್ರಾಮದೇವತೆಯರ ಹಬ್ಬ, ಜಾತ್ರೆಗಳಲ್ಲೂ ಉರಿಮಾರಮ್ಮ ಅಥವಾ ಮರಗಮ್ಮನನ್ನು ಒಂದು ಗೊತ್ತಾದ ಸ್ಥಳದಲ್ಲಿಟ್ಟು ಪ್ರದರ್ಶಿಸುವ ಪದ್ಧತಿಯೂ ಇದೆ.

ಗುಲ್ಬರ್ಗ ಜಿಲ್ಲೆಯ ಗ್ರಾಮದೇವತೆಗಳು:-

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಲ್ಲೂರ ದುರಗಮ್ಮ, ಅದೇ ತಾಲ್ಲೂಕಿನ ಕೊಡದೂರ ಮರಗಮ್ಮ, ನಾಲವಾರ ಮರಗಮ್ಮ, ಸಂಕರಡಗಿ ಪಾಲಕಮ್ಮ, ಗೋಳ್ಯಾದ ದ್ಯಾವಮ್ಮ, ಬಳ್ಳವಡಗಿ ಎಲ್ಲಮ್ಮ, ಸೂಗೂರು ದ್ಯಾವಮ್ಮ, ಕುನ್ನೂರ ಕಾಳಮ್ಮ, ಗುಲ್ಬರ್ಗಾ ತಾಲ್ಲೂಕಿನ ಕೀರಣಗಿ ಮರಗಮ್ಮ, ಆಲಳ್ಳಿ ಮರಗಮ್ಮ, ಹಡಗಲಿ ಎಲ್ಲಮ್ಮ, ಗುಲ್ಬರ್ಗಾ ನಗರದ ಜಗತಿ ಎಲ್ಲಮ್ಮ, ಅಫಜಲಪೂರ ತಾಲ್ಲೂಕಿನ ಹಡಲಗಿ ಎಲ್ಲಮ್ಮ, ಮಾಸ್ಯಾಳ ಚೌಡಮ್ಮ, ಘತ್ತರಗಿ ಭಾಗಮ್ಮ (ಭಾಗ್ಯವಂತಿ), ಗೊಬ್ಬೂರ ಎಲ್ಲಮ್ಮ, ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ, ಗೋಳ್ಯಾ ಲಕ್ಕಮ್ಮ, ಸುರಪುರದ ದುರಗಮ್ಮ, ಕೆಂಭಾವಿ ದ್ಯಾವಮ್ಮ, ಸೇಡಂ ತಾಲ್ಲೂಕಿನ ಯಾನಾಗುಂದಿ ಮಾಣಿಕಮ್ಮ, ಕೊಳ್ಳಿ ಮರಗಮ್ಮ, ಚಿಂಚೋಳಿ ತಾಲ್ಲೂಕಿನ ನಿಡಗುಂದಿ ಚೌಡಮ್ಮ, ದ್ಯಾವಮ್ಮ, ಹೊನಗುಂಟ ಪಾಲಕಮ್ಮ.[೫೦]

ಈ ಹೆಣ್ಣು ಗ್ರಾಮದೇವತೆಗಳ ನಡುವೆ ಒಬ್ಬನೇ ಪುರುಷ ಗ್ರಾಮದೇವತೆ ಹನುಮಂತ. ಮಧ್ವಾಚಾರ್ಯ ಮತ್ತು ಸಮರ್ಥ ರಾಮದಾಸರ ಪ್ರಭಾವದಿಂದ ಹಿಂದೂಧರ್ಮ ಸಂರಕ್ಷಣೆಗಾಗಿ, ಯುವಶಕ್ತಿಯನ್ನು ಬೆಳೆಸಲು ಪ್ರತಿ ಊರಿನಲ್ಲಿ ಹನುಮಂತ ದೇವರ ಸ್ಥಾಪನೆಯಾಯಿತು. ಗ್ರಾಮದೇವತೆಗಿರುವ ಎಲ್ಲ ಹಕ್ಕುಗಳು, ಬ್ಯಾಜ ಎಂದರೆ ಅಧಿಕಾರಗಳು ಹನುಮಂತನಿಗೆ ಇರುವುದರಿಂದ ಹನುಮಂತನನ್ನೂ ಗ್ರಾಮದೇವತೆಯೆಂದು ಸ್ವೀಕರಿಸಲಾಗಿದೆ.

ದ್ಯಾವಮ್ಮ:-

ಪದನಿಷ್ಪತ್ತಿ: ದೆವ್ವ < ದೈವ < ದೇವತೆ. ದೆವ್ವ + ಅಮ್ಮ = ದೆವ್ವಮ್ಮ, ದಿಯಾಮ್ಮ, ದ್ಯಾವಮ್ಮ, ದ್ಯಾಮವ್ವ ಎಂದಾಗುತ್ತದೆ. ಪ್ರೇತಾತ್ಮದ ಸಂಕೇತವಾದ ದೇವತೆ. ಊರಿನ ಎಲ್ಲ ಜನರಿಂದಲೂ ಪೂಜಿಸಲ್ಪಡುವ ಹಿರಿಯ ದೇವತೆ. ಪ್ರತಿ ಊರಿನಲ್ಲಿ ಒಂದಲ್ಲ ಒಂದು ಸ್ವರೂಪದಲ್ಲಿ ಇರುವಳು. ವಾಸ್ತವವಾಗಿ ದ್ಯಾವಮ್ಮ ಮಾತ್ರ ಊರದೇವತೆ. ಬೇರೆಲ್ಲ ದೇವತೆಗಳು ಅವಳ ಸಹಾಯಕರು. ಗುಲ್ಬರ್ಗಾ ಜಿಲ್ಲೆಯ ಶೇಕಡ ಮೂವತ್ತೊಂದರಷ್ಟು ಜನ ದ್ಯಾವಮ್ಮನನ್ನು ಪೂಜಿಸುತ್ತಾರೆ. ಚಿತ್ತಾಪೂರ ತಾಲ್ಲೂಕಿನ ಶಂಕರವಾಡಿ ಗ್ರಾಮದಲ್ಲಿ ಸಂತಾನದ ಸಲುವಾಗಿ ದ್ಯಾಮವ್ವನನ್ನು ಏಳು ಮಕ್ಕಳ ತಾಯಿಯೆಂಬ ಭೂತದ ರೂಪದಲ್ಲಿ ಪೂಜಿಸಲಾಗುತ್ತಿದೆ. ಸಂತಾನ, ಸಕಾಲಕ್ಕೆ ಮಳೆ, ಬೆಳೆಯ ರಕ್ಷಣೆ, ಒಡ್ಡುಗಳ ಸಂರಕ್ಷಣೆ, ಹೈನು ಹೆಚ್ಚಳ, ಸಾಂಕ್ರಾಮಿಕ ರೋಗಗಳು ಊರೊಳಗೆ ಬಾರದಂತೆ ತಡೆಯುವಿಕೆ. ಶಿಶುಮರಣ ನಿಲ್ಲಿಸುವಿಕೆ, ಹೊಲಗಳ ಗಡಿ ನಿರ್ಧರಿಸುವಿಕೆ, ಜಗಳ ಬಿಡಿಸುವಿಕೆ, ಭೂತಪ್ರೇತೋಚ್ಚಾಟನೆ, ಹುಚ್ಚು ಬಿಡಿಸುವಿಕೆ. ಬಂಜೆತನ ನಿವಾರಣೆ ಇವೇ ಮುಂತಾದವು ದ್ಯಾವಮ್ಮನ ಕಾರ್ಯಗಳೆಂದು ಪರಿಗಣಿಸಲಾಗಿವೆ.[೫೧]

ದ್ಯಾವಮ್ಮ ಸಾತ್ವಿಕ ದೇವತೆ:-

ಸಮೃದ್ಧಿಯದೇವತೆ, ಮಾಲೀ ಗೌಡನ ಮನೆತದನದವಳು. ಊರ ಮಧ್ಯೆ, ದೊಡ್ಡ ಗುಡಿಯಲ್ಲಿ ದೇವತೆಯ ವಾಸ್ತವ್ಯವಿರುತ್ತದೆ. ತಳವಾರನು ಈ ದೇವತೆಯ ಅನುವಂಶಿಕ ಪೂಜಾರಿಯಾಗಿರುತ್ತಾನೆ.ದ್ಯಾವಮ್ಮನ ಮೂರ್ತಿಯನ್ನು

ಶ್ರೀಗಂಧದ ಅಥವಾ ಮಳಗಿಯ ಮರದಿಂದ ತಯಾರಿಸುವವರು ಈ ದೇವತೆಯ ಅನುವಂಶಿಕ ಪೂಜಾರಿಯಾಗಿರುತ್ತಾರೆ. ಆಸೀನಮೂರ್ತಿ ಇವಳು. ಚಂದ್ರಾಯುಧ, ತ್ರಿಶೂಲ, ಭರ್ಚಿ ಇವಳ ಆಯುಧಗಳು ಸಿಂಹ ವಾಹನ, ಈ ದೇವಿಗೆ ಪಾದುಕೆಗಳಿಲ್ಲ. ಬಿಳಿ ಸೀರೆ, ಬಿಳಿ ಕುಪ್ಪಸ ಅಥವಾ ಕೆಂಪು ಸೀರೆ, ಕೆಂಪು ಕುಪ್ಪಸ, ಕೆಂಪು ಅಥವಾ ಹಸಿರು ಬಳೆ, ತಾಳಿ, ಮೂಗುತಿ, ಡಾಬುಗಳನ್ನು ಧರಿಸಿರುತ್ತಾಳೆ. ದೇವಿಯ ಮುಂದುಗಡೆ ಪೂಜೆ. ಈ ದೇವಿಯ ವಾರ ಶುಕ್ರವಾರ. ಕುರಿ, ಕೋಣಗಳನ್ನು ಬಲಿ ಕೊಡಲಾಗುತ್ತದೆ. ಕುರಿ, ಕೋಣಗಳ ಬಲಿಯನ್ನು ಕುರಿತಂತೆ ಇರುವ ಕಥೆಯು ಮಾರಮ್ಮನ ಕಥೆಯನ್ನು ಹೋಲುವಂತಿದ್ದು ಆ ಪ್ರಕಾರವಾಗಿ ಮೇಲ್ಜಾತಿಯಲ್ಲಿ ಹುಟ್ಟಿದ ದ್ಯಾವಮ್ಮನನ್ನು ಪಂಚಮನೊಬ್ಬನು ಮೋಸದಿಂದ ಮದುವೆ ಆದ.

ಅವನಿಂದ ಅವಳಿಗೆ ಎರಡು ಮಕ್ಕಳಾದ ಮೇಲೆ ಗಂಡ ತನಗೆ ಮಾಡಿದ ಮೋಸವನ್ನು ತಿಳಿದು ಅವನನ್ನು ಕೊಂದುಹಾಕಿ ಎಂದು ತನ್ನ ಅಧೀನ ದೇವತೆಗಳಿಗೆ ಆಜ್ಞೆ ನೀಡಿದಳು. ಅದರಂತೆ ಅವನ ಬೆನ್ನಟ್ಟಿ ಹೋಗಿ ಕೊಂದು ಅವನ ರುಂಡವನ್ನು ತಂದು ದ್ಯಾವಮ್ಮನ ಮುಂದಿಟ್ಟರು. ಈ ಘಟನೆಯ ನೆನಪಿಗಾಗಿ ಪ್ರತಿವರುಷ ಉತ್ಸವ ನಡೆಸಿ ಕುರಿ, ಕೋಣಗಳನ್ನು ದ್ಯಾವಮ್ಮನ ಮುಂದೆ ಬಲಿ ಕೊಡುವುದು ಪದ್ಧತಿ. ಭಕ್ತರಿಗೆ ಹಣಚಿ ಬಟ್ಟು ಮುದ್ರೆ ಹಾಕಲಾಗುತ್ತದೆ. ದೀವಟಿಗೆ ಇರುತ್ತದೆ. ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಡನೆ ಕುಣಿತ ಉತ್ಸವ ಈ ಸಂದರ್ಭದಲ್ಲಿ ನಡೆಯುತ್ತದೆ. ಈ ದೇವಿಗೆ ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಉತ್ಸವ ನಡೆಯುತ್ತದೆ. ದ್ಯಾವಮ್ಮನ ತವರೂರು ಗುಲ್ಬರ್ಗಾ ಜಿಲ್ಲೆಯ ಖಾಜಾಪುರ, ಸುರಪುರ ತಾಲ್ಲೂಕಿನ ಯಾಳಗಿ, ಸೇಡಂ ತಾಲ್ಲೂಕಿನ ಹಾಬಳ, ಚಿತ್ತಾಪುರ ತಾಲ್ಲೂಕಿನ ಗೋಳ್ಯ, ಜೇವರ್ಗಿ ತಾಲ್ಲೂಕಿನ ಕುಕನೂರು, ಕೆಂಭಾವಿ, ಸೂಗೂರು, ನಿಡಗುಂದಿ ಈ ಏಳೂ ಊರುಗಳಲ್ಲಿ ದ್ಯಾವಮ್ಮನ ಗಂಡನ ಮನೆಗಳಿವೆ. ಗಂಡನ ಮನೆಯಾದ ಮಾಗಣಗೇರಿಯಿಂದ ತವರೂರಾದ ಖಾಜಾಪುರಕ್ಕೆ ದ್ಯಾವಮ್ಮನನ್ನು ಉತ್ಸವದ ವೇಳೆಗೆ (ಬಾದಮಿ ಅಮಾವಾಸ್ಯೆ) ತರುವರು. ಇಲ್ಲಿ ಹದಿನೈದು ದಿನವಿರಿಸಿಕೊಂಡು ಮತ್ತೆ ಗಂಡನ ಮನೆಗೆ ಕಳುಹಿಸುವರು.[೫೨] ಅಲ್ಲಿಂದ ಬರುವ ವರ್ಷದವರೆಗೆ ಪ್ರತಿ ತಿಂಗಳು ಹದಿನೈದು ದಿನಕ್ಕೊಮ್ಮೆ ಒಂದೊಂದು ಊರಿಗೆ ಹೋಗಿ ಗಂಡನ ಮನೆಯಲ್ಲಿದ್ದು ಮುಂದೆ ಹೊರಡುವಳು. ದ್ಯಾಮವ್ವನ ತವರಿನವರು ತಳವಾರರು, ಗಂಡನ ಮನೆಯವರು ಬಡಿಗೇರರು. ತಳವಾರ ಮತ್ತು ಬಡಿಗೇರ ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸುವುದೇ ದ್ಯಾಮವ್ವನ ಈ ಉತ್ಸವದ ಉದ್ದೇಶವಾಗಿರುತ್ತದೆ.

ಊರ ದ್ಯಾವಮ್ಮ ದೇವಿಯ ಪೂಜೆ, ಉತ್ಸವ ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದು ಮುಂಜಾನೆಯಲ್ಲಿ ಗುಡಿಯ ಸಿಂಗಾರ, ಊರ ಜನರ ಮನೆಗಳ ಸಿಂಗಾರ, ದೇವಿಯ ಸ್ನಾನ, ಊರ ಜನರ ಗಂಗಾಸ್ಥಾನ, ಶುಭ್ರವಸ್ತ್ರ, ಅಲಂಕಾರ, ಹಲಗೆ, ಡೊಳ್ಳುಗಳೊಂದಿಗೆ ಊರಲ್ಲಿ ಮೆರವಣಿಗೆ, ಎರಡನೆಯದು ಮಧ್ಯಾಹ್ನದಲ್ಲಿ ದೇವಿಗೆ ಹರಕೆ ಸಲ್ಲಿಸುವುದು, ದೀಡ ನಮಸ್ಕಾರ, ಗಂಟೆ ಬಾರಿಸುವುದು, ಜಾವಳ (ಕೂದಲು ತೆಗೆಸುವುದು), ದೇವಿಗೆ ಪ್ರದಕ್ಷಿಣೆ ಹಾಕುವುದು, ಕೋಣ, ಕುರಿ, ಕೋಳಿ, ಬಲಿಕೊಡುವುದು, ಕಾಯಿ ಒಡೆದು ಕರ್ಪೂರದಾರತಿ ಬೆಳಗುವುದು, ಮೂರನೆದಿನ ಸಂಜೆಯಲ್ಲಿ ದೇವರ ಹೇಳಿಕೆ, ಹೇಳುವುದು, ಮತ್ತಿತರ ಮನರಂಜನೆಯ ಕಾರ್ಯಕ್ರಮಗಳು ನಡೆಯುತ್ತವೆ.

ದ್ಯಾವಮ್ಮನ ಪೂಜಾರಿ ತಳವಾರರಾಗಿದ್ದಾಗ ಮಾತ್ರ ತಳವಾರನ ಮನೆಯ ಜಗುಲಿಯ ಮೇಲೆ ಮನೆ ದ್ಯಾವಮ್ಮ ನಿರುತ್ತಾಳೆ. ಬೆಳ್ಳಿ, ತಾಮ್ರ, ಕಂಚಿನಿಂದ ಊರ ದ್ಯಾವಮ್ಮನಿಗೆ ಮಾಡಿದ ಮುಖ, ಕಳಸಗಳನ್ನು ಗುಡಿಯಲ್ಲಿಡುವುದು ವಿಹಿತವಲ್ಲವೆಂದು ಪೂಜಾರಿ ಅವುಗಳನ್ನು ತನ್ನ ಮನೆಯಲ್ಲಿ ತಂದಿಡುವನು, ಜಾತ್ರೆ ಉತ್ಸವದಂಥ ವಿಶೇಷ ದಿನಗಳಲ್ಲಿ ಗುಡಿಗೊಯ್ದು ಪೂಜಾದಿ ಕಾರ್ಯಗಳ ನಂತರ ಪುನಃ ತನ್ನ ಮನೆಯ ಜಗುಲಿಯ ಮೇಲೆ ತಂದಿಟ್ಟು ಪ್ರತಿ ಶುಕ್ರವಾರ ವಿಶೇಷ

ಪೂಜೆ ಮಾಡುವನು. ಪೂಜಾರಿಯ ಮನೆತನ ಹೆಚ್ಚಿದಂತೆಲ್ಲ ದ್ಯಾವಮ್ಮ ಈ ಎಲ್ಲರ ಮನೆಗಳ ಜಗುಲಿ ಮೇಲೆ ಇಡಲ್ಪಟ್ಟು ಮನೆ ದ್ಯಾವಮ್ಮ ನೆನಿಸುವಳು.[೫೩] ಊರ ದ್ಯಾವಮ್ಮನಿಗೆ ಸಲ್ಲಿಸುವಂತೆ ಇವಳಿಗೂ ಕೆಂಪು ಸೀರೆ, ರವಿಕೆ ತೊಡಿಸಿ, ಹೂ ಮುಡಿಸಿ, ಚಂದ್ರ ಕುಂಕುಮ ಹಚ್ಚಿ, ಮಡಿಲಕ್ಕಿ ಇಟ್ಟು, ಹೋಳಿಗೆ, ಹುಗ್ಗಿ, ಉಂಡೆ ನೈವೇದ್ಯಕ್ಕಿಟ್ಟು ಏಳು ಮಂದಿ ಸುವಾಸಿನಿಯರಿಗೆ ಉಣಬಡಿಸುವರು.

ಚಿಂಚೋಳಿ ತಾಲ್ಲೂಕಿನ ನಿಡಗುಂದಿ ದ್ಯಾವಮ್ಮನ ಗುಡಿಯು ಊರ ಮಧ್ಯದಲ್ಲಿದ್ದು ದೇವಿಯ ಮೂರ್ತಿಯು ಮರದಿಂದ ಮಾಡಿದ್ದು ಆರಡಿ ಎತ್ತರವಿದೆ. ಇಲ್ಲಿ ಪೂಜಾರಿಗಳು ಕಬ್ಬಲಿಗರು. ಇಲ್ಲಿನ ಸ್ಥಳಪುರಾಣದ ಪ್ರಕಾರ ಪಕ್ಕದ ಊರಾದ ಮೀರಾಣದಲ್ಲಿ ಜಾತ್ರೆ ನಡೆದಾಗ ಅಗಸನೊಬ್ಬ ಅನ್ನದ ಥಲಿ ತರಲು ಹೋದನಂತೆ. ಹಿಂದಿರುಗುವಗ ಅಗಸಿ ಬಾಗಿಲು ಹಾಕಿದ್ದರಿಂದ ಸಿಕ್ಕಿಬಿದ್ದಾಗ ಬಾಗಿಲ ಕಿಟಕಿಯಲ್ಲಿ ತಲೆಯಿಟ್ಟು ತನ್ನ ಜತೆಯಲ್ಲಿ ಬಂದಿದ್ದ ಜನರಿಗೆ ತನ್ನ ತಲೆಯನ್ನು ಕಡಿದು ಊರಿಗೆ ಕೊಂಡೊಯ್ಯಲು ಹೇಳಿದನಂತೆ. ಅದರಂತೆ ಅಗಸನ ತಲೆ ಅಗಸಿಯಲ್ಲಿದೆ. ಸೀಮೆಯ ಮೇಲೆ ಅವನ ನೆನಪಿನಲ್ಲಿ ದಂಡ ನಿಲ್ಲಿಸಿದ್ದಾರೆ. ಮೊದಲು ದಂಡವಿದ್ದಲ್ಲಿಗೆ ಹೋಗಿ ದೀಪಹಚ್ಚಿ ಪೂಜೆ ಸಲ್ಲಿಸಿ ಅನಂತರ ರುಂಡಕ್ಕೆ ಕಾಯಿ, ಕರ್ಪೂರ ಸಲ್ಲಿಸಿದ ಬಳಿಕವೇ ದ್ಯಾವಮ್ಮನ ಪೂಜೆ ನಡೆಯುವುದು.[೫೪]

ಎಲ್ಲಮ್ಮ:-

ಮೂಲದಲ್ಲಿ ಈ ದೇವತೆ ಎಲ್ಲೆ ಅಥವಾ ಸೀಮೆಯ ದೇವತೆ. ಇವಳು ಲೋಕ ದೇವತೆಯೂ ಹೌದು. ಸ್ಥಳೀಯ ದೇವತೆಯೂ ಹೌದು. ಇವಳನ್ನು ಬ್ರಾಹ್ಮಣರು ರೇಣುಕಾ, ವೀರಶೈವರು ಸತ್ಯಕ್ಕ, ಜೈನರು ಪದ್ಮಾವತಿ, ಕೆಳವರ್ಗದವರು ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಪದನಿಷ್ಪತ್ತಿ ರೀತ್ಯಾ ಎಲ್ಲೆ + ಅಮ್ಮ=ಎಲ್ಲಮ್ಮ ಅಥವಾ ಎಲ್ಲಮ್ಮ=ಎಲ್ಲ. ಎಲ್ಲಮ್ಮ ಪದದ ಅರ್ಥವನ್ನು ಯಕ್ಷಿಣಿ+ಅಮ್ಮ=ಎಕ್ಕಲ್ಲಮ್ಮ< ಎಲ್ಲಮ್ಮ ಎಂದೂ ಹೇಳುವರು.

ಗುಲ್ಬರ್ಗಾ ಜಿಲ್ಲೆಯ ಎಲ್ಲಮ್ಮ ದೇವತೆಗಳು ತುಂಬಾ ವಿಶಿಷ್ಟರಾಗಿದ್ದಾರೆ. ಚಿತ್ತಾಪುರ ತಾಲ್ಲೂಕಿನ ನಾಗಾಯಿ ಎಲ್ಲಮ್ಮ ಮತ್ತು ಬಳ್ಳಡಗಿ ಎಲ್ಲಮ್ಮ ಮಹತ್ವದ ದೇವತೆಗಳೆನಿಸಿದ್ದಾರೆ. ಎಲ್ಲಮ್ಮನ ಗುಡಿಯ ಪೂಜಾರಿಗಳು ಕೆಳವರ್ಗದವರಾಗಿದ್ದಾರೆ. ಆದರೆ ಈ ಎಲ್ಲಮ್ಮ ಗುಡಿಯಲ್ಲಿ ಪೂಜಾರಿ ಬ್ರಾಹ್ಮಣ, ನಾಗಾಯಿ ಎಲ್ಲಮ್ಮ ಗುಡಿಯ ತಳಭಾಗದಲ್ಲಿ ಬರುವ ಝರಿಯ ನೀರಿನಿಂದ ದೇವಿ ಪೂಜೆಯು ನಡೆಯುತ್ತದೆ. ನಾಗಾಯಿ ಎಲ್ಲಮ್ಮನ ಪಕ್ಕದಲ್ಲಿರುವ ನಂದಿ ಬಾವಿ ಬತ್ತಬೇಕು. ಕಲ್ಲಕೋಳಿ ಕೂಗಬೇಕು, ಮುಲ್ಲಾ ಜವಾಬು ಕೊಡಬೇಕು ಆಗ ಜಗತ್ತು ಪ್ರಳಯವಾಗುತ್ತದೆ ಎಂಬುದು ಜನಪದರ ನಂಬಿಕೆ. ದ್ಯಾವಮ್ಮ, ಮರಗಮ್ಮ, ದುರಗಮ್ಮರನ್ನು ಒಬ್ಬರೊಳಗೊಬ್ಬರನ್ನು ಸೇರಿಸಿದಂತೆ ಎಲ್ಲಮ್ಮನನ್ನು ಪ್ರತ್ಯೇಕ ದೇವತೆಯಾಗಿರಿಸಿ ಗುಲ್ಬರ್ಗಾ ಜಿಲ್ಲೆಯ ಚುಂಚುರ ಮಾಪುರತಾಯಿ, ಬೀದರ ಜಿಲ್ಲೆಯ ಬಗದುರಿ ಎಲ್ಲಮ್ಮ, ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ, ಮುನಿರಾಬಾದಿನ ಹುಲಿಗೆಮ್ಮರನ್ನು ಎಲ್ಲಮ್ಮನ ಗುಂಪಿನ ದೇವತೆಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಕಾರಣ, ಎಲ್ಲಮ್ಮನ ಪೂಜೆಯ ರೀತಿಯಲ್ಲಿಯೇ ಈ ದೇವತೆಗಳಿಗೂ ಪೂಜೆ ನಡೆಯುತ್ತದೆ. ಎಲ್ಲಮ್ಮ ಹುಲಿಸವಾರಿ ಮಾಡಿದ್ದರಿಂದ ಆಕೆಗೆ ಹುಲಿಗೆಮ್ಮನೆಂಬ ಹೆಸರೂ, ಸವಾರೆಮ್ಮ ಎಂಬ ಹೆಸರೂ, ಮಹಾರಾಷ್ಟದ ಮಾಪುರದಿಂದ ಬಂದವಳೆಂದು ಎಲ್ಲಮ್ಮನಿಗೆ ಚುಂಚುರ ಮಾಪುರತಾಯಿ ಎಂಬ ಹೆಸರೂ ಬಂದವು. ಅಲ್ಲದೆ, ಜಮದಗ್ನಿ ಋಷಿಯ ಪತ್ನಿ ರೇಣುಕಾಳ ಪಾತಿವ್ರತ್ಯ ಭಂಗವಾದಾಗ ಪತಿಯ ಶಾಪದಿಂದ ಮೈಯೆಲ್ಲ ಹುತ್ತಿನಂತೆ ಹುಣ್ಣಾಗಿಹೋದ ಕಾರಣ ರೇಣುಕಾಳ ಅವತಾರಿಯಾದ ಎಲ್ಲಮ್ಮನನ್ನು ಹುತ್ತಿನೆಲ್ಲಮ್ಮ ಎಂದು

ಕರೆಯುತ್ತಾರೆ.[೫೫] ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಸಗರದ ಎಲ್ಲಮ್ಮ, ಶಹಾಪುರ ತಾಲ್ಲೂಕಿನ ಹಾಲ್ಗೇರಿ ಎಲ್ಲಮ್ಮರು ಉಟ್ಟಿಗೆ ಉಡುವುದರಿಂದ ಪ್ರಸಿದ್ಧರಾಗಿದ್ದಾರೆ.

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ ಇಂದು ಭಾರತದಲ್ಲೇ ಪ್ರಸಿದ್ಧಿಯನ್ನು ಪಡೆದಿರುವ ದೇವತೆ. ಈ ಚುಂಚುರ ಪ್ರದೇಶದಲ್ಲಿ ಚುಂದು ಎಂಬ ಕಾಡುಜನಾಂಗ ಇದ್ದುದರಿಂದ ಊರಿಗೆ ಈ ಹೆಸರು ಬಂದಿದೆ. ಚಂಚು ಜನರ ದೇವತೆ ಮಾಪುರತಾಯಿಯೇ ಎಲ್ಲಮ್ಮ ಆದಳು. ಜನಪದರ ಕಥೆಯ ಪ್ರಕಾರ ಮಾಪುರತಾಯಿ ಮಹಾರಾಷ್ಟ್ರದ ಮೋಹಿತ ಆಂಬ್ರಾ ಪ್ರದೇಶಕ್ಕೆ ಸೇರಿದ್ದು ಸಂಚಾರ ಹೊರಟು ಏಳುಗುತ್ತಿ ಗುಡ್ಡಕ್ಕೆ ಬಂದಾಗ ಚುಂಚುರದಲ್ಲಿದ್ದ ಮಹಾಸುರ, ಬಾಣಾಸುರ, ಗೌಳಾಸುರ, ಸಂಕಾಸುರ, ಸಿದ್ಧಾಸುರ, ಶಿವಲಿಂಗಾಸುರ, ಸೋಮಾಸುರರನ್ನು ಕೊಂದು ಊರ ಜನರನ್ನು ಪರೀಕ್ಷಿಸಲು ಮೈಯೆಲ್ಲ ಹುಣ್ಣುಳ್ಳ ಮುಪ್ಪಿನ ಮುದುಕಿಯಾಗಿ ಊರೊಳಗೆ ಬಂದಳು. ಯಾರೂ ಲಕ್ಷಿಸದಿದ್ದ ಇವಳನ್ನು ಪಾಡೇವಾರ ಮಲ್ಲಪ್ಪ ರಾಶಿಗಳು ಹೆಗಲ ಮೇಲೆ ಕೂರಿಸಿಕೊಂಡು ತಮ್ಮ ಮನೆಗೆ ಕರೆತಂದರು.

ಅಂದು ಅವರ ಮನೆಯಲ್ಲೇ ತಂಗಿದ್ದ ಮಾಪುರತಾಯಿಯು ಮಾರನೇ ದಿನ ಮಧ್ಯಾಹ್ನ ಕುಳ್ಳು ಹಿಡಿಯುವ ನೆಪದಿಂದ ಹೆಂಡಿ ಬುಟ್ಟಿ ತೆಗೆದುಕೊಂಡು ಅವನ ಇಬ್ಬರು ಹೆಣ್ಣುಮಕ್ಕಳಾದ ಗಂಗಮ್ಮ, ನೀಲಮ್ಮರನ್ನು ಕರೆದುಕೊಂಡು ಏಳುಗುತ್ತಿ ಅಣಿ ಕೆಳಗಡೆ ಹುಣಸೀಮರದ ನಡುವೆ ಐಕ್ಯಳಾಗಿ ಮಲ್ಲಪ್ಪ ಮತ್ತು ಊರಗೌಡನ ಕನಸಿನಲ್ಲಿ ಬಂದು ಅವರಿಬ್ಬರಿಗೂ ತಾನಿರುವ ಎಡೆಯನ್ನು ತಿಳಿಸಿ ಅಲ್ಲಿ ಗುಡಿಯನ್ನು ತನಗೆ ಕಟ್ಟಿಸಬೇಕೆಂದೂ ತನ್ನ ಸೇವೆಗೆ ನಿಂತ ಹೆಣ್ಣು ಮಕ್ಕಳ ಭಾರವನ್ನು ಗೌಡ ಕುಲಕರ್ಣಿ ಹೊರಬೇಕೆಂದೂ, ವೈಶಾಖ ಮಾಸದಿಂದ ಕಾರುಹುಣ್ಣಿಮೆಯ ತನಕ ತನ್ನನ್ನು ಪೂಜೆ ಮಾಡಬೇಕೆಂದೂ, ಹಾಗೆ ಪೂಜೆ ಮಾಡಿದರೆ ಮನಸ್ಸಿನ ಮಾತು ಸತ್ಯವಾಗುವುದೆಂದೂ ತಿಳಿಸಿದಳು.[೫೬] ಅದರಂತೆ ಮಾಪುರತಾಯಿಯ ಗುಡಿಯು ಚುಂಚುರದಲ್ಲಿ ಕಟ್ಟಿಸಲಾದೆ.[೫೭] ಅಂದಿನಿಂದ ಮಲ್ಲಪ್ಪ ಪಡೇವಾರ ಮನತನದವರೇ ಇಂದಿನವರೆಗೆ ಈ ದೇವತೆಯ ಪೂಜೆಯನ್ನು ನಡೆಸಿಕೊಂಡು ಬರುತ್ತಿದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಈ ದೇವಿಗೆ ರಥೋತ್ಸವ ನಡೆಯುವುದಿಲ್ಲ.

ಎಲ್ಲಮ್ಮ ಜಮದಗ್ನಿ ಋಷಿಯ ಪತ್ನಿ ರೇಣುಕೆಯೆಂದೂ ಬ್ರಾಹ್ಮಣ ದೇವತೆಯೆಂದೂ ಪರಿಗಣಿಸಲ್ಪಟ್ಟಿರುವ ಕಾರಣ ಚಿತ್ತಾಪುರ ತಾಲ್ಲೂಕಿನ ಬಳ್ಳಡಗಿ ಎಲ್ಲಮ್ಮನ ಪೂಜಾರಿಗಳು ಬ್ರಾಹ್ಮಣರು. ಜಮದಗ್ನಿ ಋಷಿಯು ಶೀಲಗೆಟ್ಟ ರೇಣುಕೆಯನ್ನು ಕೊಲ್ಲಲು ಮಗ ಪರಶುರಾಮನಿಗೆ ಹೇಳಲು ಅದರಂತೆ ತಾಯಿಯ ಶಿರ ಕಡಿದು ತಂದೆಯನ್ನು ಪ್ರಸನ್ನಗೊಳಿಸಿ ವರ ಪಡೆದು ತಾಯಿಯನ್ನು ಬದುಕಿಸಿದ. ಒಮ್ಮೆ ಅವಳು ಉರಿಬಿಸಿಲಲ್ಲಿ ನಡೆಯಲಸಾಧ್ಯವಾದಾಗ ಭೃಗು ಮಹರ್ಷಿಗಳು ಕರುಣೆ ತೋರಿ ಅವಳಿಗೆ ಪಾದುಕೆ, ಛತ್ರಿಗಳನ್ನು ನೀಡಿದರಂತೆ. ಆ ಪಾದುಕೆಗಳನ್ನು ಇಂದಿಗೂ ಸಂಕೇತವಾಗಿಟ್ಟು ಕೊರಳಲ್ಲಿ ಕಟ್ಟಿಕೊಳ್ಳುವರು. ಎಲ್ಲಮ್ಮನ ಮುಂದೆ ಪೂಜೆಗಾಗಿ ಇಡುವದು ಆಕೆಯ ದರ್ಶನಕ್ಕಿಂತಲೂ ಅವಳ ಪಾದುಕೆಗಳ ದರ್ಶನ ಅತ್ಯಂತ ಮಹತ್ವದ್ದೆಂದು ಜನ ತಿಳಿಯುತ್ತಾರೆ. ಎಲ್ಲಮ್ಮನಿಗೆ ಪತಿಯ ಶಾಪದಿಂದ ತೊನ್ನು ರೋಗ ಹತ್ತಿತ್ತು. ಮುಂದೆ ಜೋಗುಳಬಾವಿಯಲ್ಲಿ ಮಿಂದಾಗ ತೊನ್ನು ರೋಗ ನಿವಾರಣೆಯಾಯಿತು. ತನ್ನ ಪತ್ನಿಗೆ ಶಾಪ ವಿಮೋಚನೆ ನೀಡದ ಜಮದಗ್ನಿಯು ಶಾಪವ ನೀಡಿದರು. ಆದುದರಿಂದ ಎಲ್ಲಮ್ಮನ ಹತ್ತಿರ ಗಂಡು ಜೋಗಯ್ಯರನ್ನು ಕಾಣುತ್ತೇವೆ ಎಲ್ಲಮ್ಮನ ಪೂಜೆಯಾಗುವಾಗ ಜೋಗಯ್ಯರ ಸ್ತುತಿಯೂ ಆಗುವುದು. ಎಲ್ಲಮ್ಮನಿಗೆ ಮಾತಂಗಿ ಎಂಬ ರೈತ ಪತ್ನಿಯ ಆಶ್ರಯ ನೀಡಿದಕ್ಕಾಗಿ ಎಲ್ಲಮ್ಮ ಪ್ರಸನ್ನಳಾಗಿ ನನ್ನ ಪೂಜೆಗೆ ಮೊದಲು ನಿನಗೆ ಪೂಜೆ ಸಲ್ಲಲಿ ಎಂದು ವರವನ್ನು ನೀಡಿದಳು. ಅದರಂತೆ ಎಲ್ಲಮ್ಮನ ಪೂಜೆಯಲ್ಲಿ ಮೊದಲ ಎಡೆ ಮಾತಂಗಿಗೆ ನೀಡಲಾಗುತ್ತದೆ. ಇನ್ನೊಂದು ಕಥೆಯ ಪ್ರಕಾರ ಎಲ್ಲಮ್ಮ ಮಕ್ಕಳನ್ನು ಹಡೆಯಲು ಹೋದಾಗ ಜಮದಗ್ನಿ ಋಷಿಯು

ತನ್ನ ಸೇವೆಗಾಗಿ ಮಾತಂಗಿಯನ್ನಿಟ್ಟುಕೊಂಡಿದ್ದನೆಂದೂ ಮಾತಂಗಿಯು ಎಲ್ಲಮ್ಮನ ತಂಗಿ ಎಂದೂ ಹೇಳಲಾಗುತ್ತದೆ. ಅದಕ್ಕಾಗಿ ಹಳ್ಳಿಗಳಲ್ಲಿ ಬ್ರಾಹ್ಮಣರು, ಗೌಡರು, ಸಾಹುಕಾರರು ಮಾತಂಗಿಯ ಸಂಬಂಧವನ್ನು ಇಟ್ಟುಕೊಳ್ಳುವುದು ಸಾಮಾನ್ಯವಾಗಿತು. ಎಲ್ಲಮ್ಮನೂ ಶಕ್ತಿ ದೇವತೆಯಾದ ಕಾರಣ ಮಾರಮ್ಮನ ಆಚಾರ ವಿಚಾರಗಳನ್ನು ಎಲ್ಲಮ್ಮನಿಗೂ ಆರೋಪಿಸಲಾಯಿತು. ಇದರಿಂದ ಕುರಿಬಲಿಯು ಉತ್ಸವದಾಚರಣೆಯಲ್ಲಿ ಸೇರಿತು. ದ್ಯಾವಮ್ಮನಂತೆ ಎಲ್ಲಮ್ಮನೂ ಫಲೋತ್ಪತ್ತಿ ದೇವತೆಯೆಂದು ಕೊಡ ಪೂಜೆಯನ್ನೂ ಸೇರಿಸಲಾಯಿತು.

ಮರಗಮ್ಮ:-

ಮರಗಮ್ಮ, ಮರೆಮ್ಮ್ ಮೂಲದಲ್ಲಿ ಮೃತ್ಯುವಿನಿಂದ ಕಾಪಾಡುವ ದೇವತೆ. ಆದರೆ ಇಂದು ಇವಳು ಮರಣ ತರುವ ದೇವತೆಯೆಂದು ಪರಿಗಣಿಸಲಾಗುತ್ತದೆ. ಇವಳನ್ನು ಪ್ಲೇಗು, ಕಾಲರ ಸಿಡುಬುಗಳ ದೇವತೆಯೆಂದೂ ಹೇಳಲಾಗುತ್ತದೆ. ಹಳ್ಳಿಗಳಲ್ಲಿ ಮರಗಮ್ಮನ ಸ್ಥಾಪನೆಯಾದದ್ದು, ಮರಣದ ಭಯದಿಂದ. ಆದಿಮಾನವನು ಪೂಜಿಸುತ್ತಿದ್ದ ಮರ ಅಮ್ಮನಾಗಿ ಗ್ರಾಮಗಳಾದಾಗ ರೋಗರುಜಿನ, ಬಂಜೆತನ ನಿವಾರಕಳಾಗಿ, ಆಯುರ್ವೇದ ವೃತ್ತಿಯಾಧಾರವಾಗಿ ವೃಕ್ಷ ದೇವತೆಯಾಗಿ ಪೂಜೆಗೊಳ್ಳತೊಡಗಿದಳು. ಈಡಿಗರು ಈಚಲ, ಮ್ಯಾದರು ಬಿದಿರು, ಪಾಂಚಾಲರು ಬನ್ನಿ, ಶೈವರು ಬಿಲ್ವ, ಬ್ರಾಹ್ಮಣರು ತುಳಸಿ, ಬ್ಯಾಡರು ಮತ್ತು ತಳವಾರರು ಬೇವು, ಕುರುಬರು ಕುಸಬಿ, ಮಾದರು ಮಾವು, ಕುಂಬಾರರು ಕುಂಬಳ, ಜಾಡರು ಜಾಲಿ ಮರಗಳನ್ನು ತಂತಮ್ಮ ಕೇರಿಗಳ ದೇವತೆಗಳೆಂದು ಪೂಜಿಸುತ್ತಾರೆ.

ಊರು ಮರಗಮ್ಮ, ಗಾಳಿ ಮರಗಮ್ಮ, ಸೀಮೆ ಮರಗಮ್ಮ, ಕೌಟಾ ಮರಗಮ್ಮ, ಗಡವಂತಿ ಮರಗಮ್ಮ, ಕೀರಣಗಿ ಮರಗಮ್ಮ ಎಂಬ ಪ್ರಭೇದಗಳು ಈ ದೇವತೆಯಲ್ಲಿ ಕಂಡುಬರುತ್ತವೆ. ಊರು ಮರಗಮ್ಮ ಎಂದರೆ ಊರಿನ ರಕ್ಷಣೆಗಾಗಿ ಇರುವವಳು ಎಂದರ್ಥ. ಈಕೆ ಊರಿನ ಮಧ್ಯೆ ಇದ್ದು ಊರನ್ನು ಕಾಯುವ ದ್ಯಾವಮ್ಮನನ್ನು ನಡೂರ ದೇವಮ್ಮನೆಂದೂ ಕರೆದರೆ ಊರ ಮುಂದಿದ್ದು ಸಾವಿನಿಂದ ಕಾಯುವ ಮರಗಮ್ಮನನ್ನು ಊರ ಮುಂದಿನ ಮರಗಮ್ಮನೆನ್ನುವರು. ದ್ಯಾವಮ್ಮನಿಗೆ ಸಲ್ಲುವ ಪೂಜೆಗಳು ಮರಗಮ್ಮನಿಗೂ ಸಲ್ಲಿಸಲಾಗುವುದು. ಊರಲ್ಲಿ ಸಾವುನೋವುಗಳಾದಾಗ, ಭೀಕರ ರೋಗರುಜಿನಗಳುಂಟಾದಾಗ ಮರಗಮ್ಮನಿಗೆ ವಿಶೇಷ ಪೂಜೆಗಳನ್ನು ಮಾಡಲಾಗುವುದು. ಮರಗಮ್ಮನ ಗುಡಿಯ ಮುಂದೆ ಹಲಗೆ ಡೊಳ್ಳುಗಳನ್ನು ಬಡಿಯುತ್ತ. ಜೊತೆಗೆ ಪೂಜಾರಿಯನ್ನು ಕರೆದುಕೊಂಡು ದೇವಿಯ ಗುಡಿಗೆ ಬರುತ್ತಿದ್ದರು. ಆಗ ಪೂಜಾರಿಯ ಮೈಮೇಲೆ ದೇವಿಯು ಮೂಡಿ ಬಂದು ಜನರು ಕೇಳಿದ ಪ್ರಶ್ನೆಗಳಿಗೆ ಹೇಳಿಕೆ ನೀಡುವನು. ಮರಗಮ್ಮನ ಉತ್ಸವ ಮಾಡಲು ಹೇಳುವನು. ಈ ಉತ್ಸವ ನಡೆಸುವ ಸಂಪೂರ್ಣ ಜವಾಬ್ದಾರಿಯನ್ನು ಮರಗಮ್ಮನ ಮನೆತನದ ಕುಲಕರ್ಣಿ ಹೊರುವನು. ಊರಲ್ಲಿ ಏಳು ದಿವಸ ದೀಪ ಇಡುತ್ತಾರೆ. ಆ ಏಳೂ ದಿವಸಗಳಲ್ಲಿ ಹೊರಗಿನ ಜನ ಊರೊಳಗಾಗಲೀ, ಊರಿನ ಜನ ಊರ ಹೊರಗೆ ಹೋಗುವುದಾಗಲೀ ನಿಷಿದ್ಧ, ಏಳೂ ದಿನಗಳ ಉತ್ಸವದ ಕೊನೆಯಲ್ಲಿ ಸಿಂಗಾರಗೊಂಡ ಗಾಳಿಮರಗಮ್ಮನನ್ನು ಬಂಡಿಯ ಮೇಲೆ ಕೂರಿಸಿಕೊಂಡು ಹಲಗೆ, ಡೊಳ್ಳುವಾದ್ಯಗಳೊಂದಿಗೆ ಮೆರೆಸುತ್ತ ಏಳೂರು ಸೀಮೆ ಕೂಡುವಲ್ಲಿಗೆ ತಂದು ಇಡುತ್ತಿದ್ದರು.

ಗಾಳಿ ಮರಗಮ್ಮನನ್ನು ಊರು ಸೀಮೆ ದಾಟಿಸಿ ಬಂದದ್ದರಿಂದ ರೋಗದ ಹಾವಳಿ ಊರು ಬಿಟ್ಟು ಹೋಯಿತು ಎಂದು ಜನ ಸಂತೋಷದಿಂದ ಹಿಂತಿರುಗುವರು. ಊರುಮರಗಮ್ಮನ ಸಮೀಪದಲ್ಲಿ ಗಾಳಿಮರಗಮ್ಮ ಏಳು ದಿನಗಳು ಕುಳಿತಿದ್ದ ಸ್ಥಳದಲ್ಲಿ ಗುಡಿಕಟ್ಟಿಸಿ ಗಾಳಿಮರಗಮ್ಮನ ಸಮೀಪದಲ್ಲಿ ಸ್ಥಾಪಿಸುವರು. ಪ್ರತಿ ಬೇಸಿಗೆಯಲ್ಲೊಮ್ಮೆ ಮರಗಮ್ಮನಿಗೆ ಕುರಿಬಲಿಯನ್ನು ಕೊಟ್ಟು

ಉತ್ಸವವನ್ನು ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿಯಲ್ಲಿ ಈಗಲೂ ಆಚರಿಸುತ್ತಾರೆ.[೩೮] ಆಳಂದ ತಾಲ್ಲೂಕಿನ ಇವತ್ತಿನ ಕಮಲನಗರ ಹಿಂದೆ ಕೌಂಟಗಿ ಆಗಿತ್ತು. ಈ ಕೌಂಟಗಿ ಊರಿನ ಮರಗಮ್ಮ ಜೇವರ್ಗಿ ತಾಲ್ಲೂಕಿನ ಅಡವಿ ಸೇರಿ ವೈಭವದಿಂದ ಪೂಜೆಗೊಳ್ಳುತ್ತಿದ್ದಾಳೆ. ಇವಳಿಗೆ ಒಂದೇ ದಿನದ ಉತ್ಸವ. ರಾತ್ರಿ ಇಲ್ಲಿ ಯಾರು ಇರುವಂತಿಲ್ಲ. ಪ್ರತಿ ಶುಕ್ರವಾರ ಈ ದೇವಿಯ ಉತ್ಸವ ಚೈತ್ರದಿಂದ ಜ್ಯೇಷ್ಠದವರೆಗೆ ನಡೆಯುತ್ತದೆ. ಗುಲ್ಬರ್ಗಾ ತಾಲ್ಲೂಕಿನ ಆಲಳ್ಳಿ ಮರಗಮ್ಮನ ಪೂಜಾರಿ ಬಲವಾದ ಹೇಳಿಕೆ ಆಗುವುದರಿಂದ ಈ ದೇವಿಯ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಇಡೀ ಗುಲ್ಬರ್ಗಾ ಜಿಲ್ಲೆಗೆ ಕೀರಣಗಿಯಲ್ಲಿರುವ ದೇವಿಯ ಜೋಡು ಮರಗಮ್ಮರಿಂದ ಪ್ರಸಿದ್ಧವಾಗಿದೆ. ಇಲ್ಲಿ ಹೇಳಿಕೆ ಮಾಡುವವಳು ಹರಿಜನರ ಹೆಣ್ಣುಮಗಳು. ಉತ್ಸವದ ದಿನ ಮಾತ್ರ ಎಲ್ಲರೂ ಅವಳ ಕಾಲುಮುಟ್ಟಿ ನಮಸ್ಕರಿಸುವರು. ಇಲ್ಲಿ ಊರ ಮುಂದೆ ಊರ ಮರಗಮ್ಮ ಮತ್ತು ಸೀಮೆಯ ಮೇಲೆ ದಂಡಿನ ಮರಗಮ್ಮ ಇದ್ದಾಳೆ. ಐದು ದಿನಗಳ ಉತ್ಸವವಿದ್ದದ್ದು. ಈಗ ಮೂರು ದಿನಕ್ಕಿಳಿದಿದೆ. ಸಂಜೆ ರಥೋತ್ಸವವಿರುತ್ತದೆ. ಇಲ್ಲಿ ರಥಕ್ಕೂ ಸೀರೆ ಉಡಿಸುವುದು ವಿಶೇಷ. ಕುರಿ, ಕೋಣಗಳನ್ನು ಬಲಿಕೊಡುವರು. ಕೈಗೆ ಮೈಗೆ ಹಣೆಗೆ ಹಣಚಿ ಬಟ್ಟಿನ ಮುದ್ರೆ ಇದೆ. ಉರುಳುಸೇವೆ ನಡೆಯುತ್ತದೆ. ರಾತ್ರಿಯಲ್ಲಿ ದೀವಟಿಗೆಯಿದೆ. ಹೊಳೆ, ಕೆರೆ, ಬಾವಿ ಇಲ್ಲ. ಉಟ್ಟ ಬಟ್ಟೆಯ ಮೇಲೆ ನ್ಯಾಯಸ್ಥಾನವಿದೆ.[೩೯] ಮಂಗಳವಾರ ದೇವಿಯ ವಾರ. ಹಸಿರು ಸೀರೆ, ಹಸಿರು ರವಿಕೆ, ಹಸಿರು ಬಳೆ, ಡಾಬು, ಮೂಗುತಿ ಇವಳ ಉಡುಗೆ ಆಭರಣಗಳು, ಚಂದ್ರಾಯುಧ, ತ್ರಿಶೂಲ, ಭರ್ಜಿಗಳು ಆಯುಧಗಳು, ವಾಹನ ಸಿಂಹ ಬಯಲಾಟ, ಕುಣಿತ ಮನರಂಜನೆಗಳು.

ಪಾಲಕಮ್ಮ, ಪೋಚಮ್ಮ:-

ಗುಲ್ಬರ್ಗಾ ಜಿಲ್ಲೆಯಲ್ಲಿ ಮಕ್ಕಳ ದೇವತೆಗೆ ಪಾಲಕಮ್ಮನೆನ್ನುವರು. ಪಾಲಕಮ್ಮನ ತಂಗಿಗೆ ಪೂಚಮ್ಮ, ಪೋಷಮ್ಮ ಎನ್ನುವರು. ದ್ಯಾವಮ್ಮ ಊರಿಗೆ ಮಳೆ ಬೆಳೆಯಿಂದ ಸಮೃದ್ಧಿ, ಸುಖ ಉಂಟುಮಾಡುವ, ಮರಗಮ್ಮ ಕುಂಡಿಬಾಯಿ ಹಾವಳಿಯಿಂದ ಉಳಿಸುವ ದೇವತೆಗಳಾದರೆ ಪಾಲಕಮ್ಮ, ಪೋಚಮ್ಮರು ಮಕ್ಕಳನ್ನು ಥಟ್ಟು, ಹೊಟ್ಟು, ಗೊಬ್ಬರ, ದೇವಿ, ಗಣಜಲು, ಉರಿಚಳಿಗಳಿಂದ ಉಳಿಸುವ ದೇವತೆಗಳು. ಜೋಡು ದ್ಯಾವಮ್ಮ, ಜೋಡು ಮರಗಮ್ಮ ಇರುವಂತೆ ಪಾಲಕಮ್ಮನ ಜೊತೆಗಾರ್ತಿಯಾಗಿ ತಂಗಿಯಾಗಿ ಹಾಲು ಕುಡಿದ ಮಕ್ಕಳನ್ನು ಪೋಷಿಸಲು ಪೋಚಮ್ಮನಿರುವಳು. ಪೋಚಮ್ಮ ಸಹಾಯಕ ದೇವತೆಯಾದ್ದರಿಂದ ಅವರಿಬ್ಬರೂ ಒಂದೇ ಗುಡಿಯಲ್ಲಿದ್ದರೂ ಆ ಗುಡಿಯನ್ನು ಪಾಲಕಮ್ಮನ ಗುಡಿ ಎನ್ನುವರು.

ಪಾಲಕಮ್ಮ ಪ್ರಮುಖ ಗ್ರಾಮದೇವತೆಯಲ್ಲ. ಆದರೆ ಮಾರಮ್ಮನ ಉಪದೇವತೆ. ಮಾರಮ್ಮ ಊರಿನ ಸ್ತ್ರೀ ಪುರುಷರ ರೋಗಗಳನ್ನು ನಿವಾರಿಸಿದರೆ ಪಾಲಕಮ್ಮ ಅವರ ಮಕ್ಕಳ ಪೀಡೆಗಳನ್ನು ಪರಿಹರಿಸುವಳು. ಇವಳು ಸೌಮ್ಯದೇವತೆ. ಇವಳ ಅನುವಂಶಿಕ ಪೂಜಾರಿ ತಳವಾರ, ಆಭರಣಗಳು ಹಸಿರುಬಳೆ, ಹಸಿರು ಮಣಿಸರ, ಅರಿಷಿಣ, ಉಡಿಗೆ ಬಿಳಿ ಪತ್ತಲ, ಬಿಳಿ ರವಿಕೆ. ಆಯುಧಗಳು, ವಾಹನ, ವಾದ್ಯ, ದೀವಟಿಗೆ, ತೇರು, ಪಲ್ಲಕ್ಕಿ ಈ ದೇವತೆಗಿಲ್ಲ. ಸ್ವರೂಪ ಆಲದ ಮರ ಮತ್ತು ಹುತ್ತ, ಸಸ್ಯಾಹಾರ ಮಾಂಸಾಹಾರ ಎರಡನ್ನು ನೈವೇದ್ಯಕ್ಕಿಡುವರು. ಇವಳು ಅಲೆಮಾರಿ ದೇವತೆಯಲ್ಲ. ಪರಿಶಿಷ್ಟರ ದೇವತೆ, ಕಟ್ಟೆಗೆಯಲ್ಲಿ ಮೂರ್ತಿ ಮಾಡಿ ಜಾಜಿ ಬಣ್ಣ ಹಚ್ಚುವರು ಮಂಗಳವಾರ ದೇವಿಯ ವಾರ.

ದುರಗಮ್ಮ:-

ಸಪ್ತಮಾತೃಕೆಯರಲ್ಲಿ ಮೂರನೆಯವಳು. ದುರ್ಗಮ್ಮ ಮೂಲತಃ ಶಬರರ ದೇವತೆ, ಸ್ಥಳೀಯ ದೇವತೆ. ದುರಗಮ್ಮ ಯಾವುದೇ ವರ್ಗದ ಅಥವಾ ಉದ್ಯೋಗದ ದೇವತೆಯಾಗಿರದೆ ಯುದ್ಧದ ಮತ್ತು ದುರ್ಗದ ದೇವತೆ ಆಗಿದ್ದಾಳೆ.[೬೦] ಆದ್ದರಿಂದ ಕೋಟೆಯಿರುವ ಊರುಗಳಲ್ಲಿ ಮಾತ್ರ ಇವಳು ಗ್ರಾಮದೇವತೆ, ಕಷ್ಟದ ದೇವತೆ. ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಆಲ್ಲೂರಿನಲ್ಲಿ ಕೋಟೆಯ ಮುಂದುಗಡೆ ದುರಗಮ್ಮನನ್ನು ಸ್ಥಾಪಿಸಿರುವುದು ಕಂಡುಬರುತ್ತದೆ.[೬೧] ಇವಳಿಗೆ ಕಾಳಿ, ಕರಾಳಿ, ಕಾಂಪಾಲಿ, ಕಾತ್ಯಾಯಿನಿ, ಕುಮಾರಿ, ಚಂಡಿ ಮುಂತಾದ ಬಿರುದುಗಳು ಅವಳು ಎಸಗುವ ಕಾರ್ಯಕ್ಕಾಗಿ ಬಂದಿವೆ. ಗುಡ್ಡಗಾಡು, ಗುಹೆಗಳು, ಕಾಡುಗಳಲ್ಲಿ ವಾಸವಾಗಿದ್ದ ಶಬರ, ಪುಳಿಂದ, ಬರ್ಬರ ಮೊದಲಾದ ಕಾಡು ಜನಾಂಗಗಳ ಕುಲದೇವತೆಯಾಗಿದ್ದಳು. ಗ್ರಾಮದೇವತೆಗಳಾದ ದ್ಯಾವಮ್ಮ, ಮಾರಮ್ಮರ ಎಲ್ಲ ಆಚಾರ ವಿಚಾರಗಳನ್ನು ಈಕೆಗೂ ಆರೋಪಿಸಿ ಗ್ರಾಮದೇವತೆಯಾಗಿ ಮಾಡಲಾಗಿದೆ. ಈಕೆ ಸಂಪತ್ತನ್ನು ಹೆಚ್ಚಿಸುವ ದೇವತೆಯೆಂದು ಶುಕ್ರವಾರದ ದಿನ ಇವಳಿಗೆ ವಿಶೇಷ ಪೂಜೆ ನಡೆಸುವರು.

ಲೋಕ ಸಂಚಾರಕ್ಕಾಗಿ ಹೊರಟ ದೇವಿ ಮೊದಲು ಬಂದು ಅಲ್ಲೂರಿನ ಒಂದು ಕಟ್ಟೆಯ ಮೇಲೆ ವಿಶ್ರಾಂತಿಗಾಗಿ ಕುಳಿತಿದ್ದರಿಂದ ಇವಳನ್ನು ಕಟ್ಟೆಮ್ಮೆನ್ನುವರು. ಮುಂದೆ ಅಲ್ಲಿಂದ ನಡೆದು ಬಂದು ಈಗಿರುವ ದಿಬ್ಬದ ಸ್ಥಳದಲ್ಲಿ ನೆಲೆಸಿ ದುರಗಮ್ಮನಾಗಿದ್ದಾಳೆ. ದುರ್ಗಮ್ಮನದು ಅರಸು ಮನೆತನ. ಈ ದೇವಿಯ ಪೂಜಾರರು ತಳವಾರರು. ಮೂರ್ತಿ ಕಟ್ಟಿಗೆಯದು. ವಾಹನ ಸಿಂಹ, ಕೆಂಪು ಬಳೆ, ಮೂಗುತಿ, ಕೆಂಪು ಮಣಿಸರ, ಅರಿಷಿಣ, ಇವಳ ಆಭರಣ, ಅಲಂಕಾರ, ಚಂದ್ರಾಯುಧ, ತ್ರಿಶೂಲ ಭರ್ಜಿ, ಖಡ್ಗ ಈ ದೇವತೆಯ ಆಯುಧಗಳು ಉಗ್ರ ಮುಖಭಾವದ ದೇವತೆಯಿವಳು.

ಶಹಾಪುರ ತಾಲ್ಲೂಕಿನ ಸೀಪುರ ಗೋನಾಳದ ದುರಗಮ್ಮನ ಮೂರ್ತಿ ಕಂಚಿನದು, ನಾಲ್ಕು ಅಡಿ ಎತ್ತರವಿದೆ. ದೇವಿಯ ವಾಹನ ಸಿಂಹ ಹಿತ್ತಾಳೆಯದು. ಇಲ್ಲಿ ದೇವಿಯ ಪೂಜಾರಿ ಹರಿಜನರು. ಆಲ್ಲೂರ ದುರ್ಗಮ್ಮನ ಗುಡಿ ಗುಡ್ಡದ ಮೇಲಿದೆ. ದೇವಿಯ ಮೂರ್ತಿಯನ್ನು ದೊಡ್ಡ ಬಂಡೆಯ ಮೇಲೆ ಕೊರೆಯಲಾಗಿದೆ. ಇವಳಿಲ್ಲಿ ಬಡಿಗೇರರ ದೇವತೆ. ಜಾತ್ರೆ ಫೆಬ್ರವರಿಯಲ್ಲಿ. ಪ್ರತಿ ಮೂರು ವರುಷಕ್ಕೆ ಒಮ್ಮೆ ತಪ್ಪದೇ ಜಾತ್ರೆ ನಡೆಸುವರು. ಬೇಸಿಗೆಯಲ್ಲಿ ಬಾದಾಮಿ ಅಮಾವಾಸ್ಯೆಯಲ್ಲಿ ಮತ್ತು ಚಳಿಗಾಲದಲ್ಲಿ ಉತ್ಸವ ನಡೆಸುವರು. ಆಗ ಅಗ್ನಿ ತುಳಿಯುವರು, ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಂದಿಗೆ ದ್ವಿಪದಿ, ತ್ರಿಪದಿ, ಚೌಪದಿಗಳನ್ನು ಹಾಡುತ್ತ ದುರಗಿ ಮುರಗಿ ಕುಣಿತ ನಡೆಸುವರು. ಕುರಿಯನ್ನು ಬೇರೆಡೆ ಕಡಿದು ಕುರಿಯ ಮಾಂಸವನ್ನು ತಂದು ದೇವಿಗೆ ನೈವೇದ್ಯಕ್ಕಿಡುವರು. ದೇವಿಯು ತಪ್ಪಿತಸ್ಥರನ್ನು ಉಗ್ರವಾಗಿ ಶಿಕ್ಷಿಸುವಳೆಂಬ ಭಯದಿಂದ ಯಾರೂ ಕಳ್ಳತನ ಮಾಡುವುದಿಲ್ಲ. ಉತ್ಸವದ ಕೊನೆಯಲ್ಲಿ ಭಕ್ತರಿಗೆಲ್ಲ ಚಜ್ಜುಕ(ಸಜ್ಜಿಗೆ)ದ ಊಟವನ್ನು ಮಾಡಿಸುವರು.

ಕಾಳಮ್ಮ:-

ಯುದ್ಧ ದೇವತೆ ಪಾಂಚಾಳರ (ಬಡಿಗೇರ, ಅಕ್ಕಸಾಲಿಗ, ಕಂಬಾರ, ಪತ್ತಾರ, ಕಂಚುಗಾರ) ಉದ್ಯೋಗ ದೇವತೆ, ಬುಡಕಟ್ಟಿನ ದೇವತೆ. ಎಲ್ಮೋರರ ಅಭಿಪ್ರಾಯದಲ್ಲಿ ಕಾಳಿ, ದುರ್ಗೆ ಒಂದೇ. ಆದರೆ ಹೈದ್ರಾಬಾದ ಕರ್ನಾಟಕದಲ್ಲಿ ಆಚಾರ-ವಿಚಾರ ಸ್ವರೂಪದಲ್ಲಿ ಇವರಿಬ್ಬರೂ ಬೇರೆ ಬೇರೆ ದೇವತೆಗಳು. ಕಾಳಮ್ಮ ಲೋಕದೇವತೆಯೂ ಹೌದು, ಸ್ಥಳಿಯ ದೇವತೆಯೂ ಹೌದು. ಅಂತೆಯೇ ಇವಳು ಶಿಷ್ಟರ ಮತ್ತು ಪರಿಶಿಷ್ಟರ ದೇವತೆಯೂ ಹೌದು ಕಾಳಮ್ಮನ ಗುಡಿಯು ಯಾವಾಗಲೂ ಪಾಂಚಾಳರ ಕೇರಿಯಲ್ಲಿರುತ್ತದೆ. ಆದರೆ ಕುನ್ನೂರ ಕಾಳಮ್ಮನ ಗುಡಿಯು ಮಾತ್ರ ಊರ ಹೊರಗೆ ಭೀಮಾ ಮತ್ತು ಕಾಗಿಣಾ ನದಿಗಳು

ಯನಗುಂಟಿ ಸಮೀಪ ಸಂಗಮವಾಗಿರುವ ಕೆಳಭಾಗದಲ್ಲಿ ಹೊಳೆದಂಡೆಯ ಮೇಲಿದೆ. ಕುನ್ನೂರ ಕಾಳಮ್ಮನಿಗೆ ನಡೆದುಕೊಂಡರೆ ಸಾಕು, ಧಾರವಾಡದ ಸಿರಸಿಂಗಿಗೆ ಹೋಗಬೇಕಾದ ಅಗತ್ಯವಿರುವುದಿಲ್ಲವೆಂಬ ಜನರ ಹೇಳಿಕೆ ಇದೆ. ಪೌರಾಣಿಕ ಹಿನ್ನೆಲೆಯಲ್ಲಿ ಇವಳು ದಕ್ಷಬ್ರಹ್ಮನ ಯಾಗದಲ್ಲಿ ಸುಟ್ಟಹೋದ ಕಾರಣ ಕಪ್ಪು ಮೈಯವಳಾದಳು. ಇವಳ ಗುಡಿಯಲ್ಲಿ ಅನುವಂಶಿಕ ಪೂಜಾರಿ ಪಾಂಚಾಳನು. ಮೂರ್ತಿ ಮರದ್ದು. ಪಾದುಕೆ ಇಲ್ಲ. ವಾಹನ ಸಿಂಹ, ಕರಿ ಸೀರೆ, ಕರಿ ಕುಬುಸ, ಕರಿ ಬಳೆ, ಮೂಗುತಿ, ಇವಳ ಉಡುಗೆ ತೊಡುಗೆಗಳು. ಕೊಡಲಿ, ಖಡ್ಗ, ಭರ್ಜಿ, ತ್ರಿಶೂಲಗಳು ಇವಳ ಆಯುಧಗಳು. ಉಗ್ರ ದೇವತೆಯಿವಳು. ದೇವಿಯ ವಾರ ಶುಕ್ರವಾರ. ಗುಡಿಯ ಸ್ಥಳ ಊರೊಳಗೆ. ಈ ದೇವಿಗೆ ಚಳಿಗಾಲ ಹಾಗೂ ಬೇಸಿಗೆ ಕಾಲಗಳಲ್ಲಿ ಜಾತ್ರೆ ನಡೆಯುವುದು. ದೀವಟಿಗೆ ಇಲ್ಲ ದೀಪದ ಕಂಬ ಇದೆ. ತೇರು ಪಲ್ಲಕ್ಕಿ ಇವೆ. ಡೋಲು, ಮದ್ದಳೆ, ಕೊಂಬು, ಕಹಳೆ, ತಾಳ, ಜಾಗಟೆ ವಾದ್ಯಗಳನ್ನು ದೇವಿಯ ಪೂಜೆ, ಉತ್ಸವಗಳಲ್ಲಿ ನುಡಿಸಲಾಗುವುದು. ಹಲಗೆ, ಡೊಳ್ಳುಗಳನ್ನು ಅಪವಿತ್ರವಾದ ವಾದ್ಯಗಳೆಂದು ನಿಷೇಧಿಸಿರುವರು. ದೇವಿಯ ಉತ್ಸವವನ್ನು ಕೆಲವರು ಶಿವರಾತ್ರಿಗೆ, ಇನ್ನೂ ಕೆಲವರು ಯುಗಾದಿಗೆ ಆಚರಿಸುವರು. ಈಕೆಯ ಉತ್ಸವವನ್ನು ಕೆಲವೆಡೆ ಐದು ದಿವಸ, ಕೆಲವೆಡೆ ಒಂಬತ್ತು ದಿವಸಗಳ ಕಾಲ ಆಚರಿಸುವರು.[೬೨]

ಚೌಡಮ್ಮ:-

ದೇವಾಂಗದವರ, ಹಟಗಾರರ ದೇವತೆ. ನೇಕಾರರ ಉದ್ಯೋಗದೇವತೆ. ಇವಳು ಲೋಕದೇವತೆ ಮತ್ತು ಸ್ಥಳೀಯ ದೇವತೆ ಎರಡೂ ಆಗಿದ್ದಾಳೆ. ಜಾನಪದರ ಹೇಳಿಕೆಯಲ್ಲಿರುವ ಕಥೆಗಳೆಂದರೆ ಏಳುಕೊಳ್ಳದಲ್ಲಿ ಮುಳುಗಿದ ಎಲ್ಲಮ್ಮ ಮೇಲೇಳದಿದ್ದಾಗ ಚೌಡಿಕೆ ವಾದ್ಯದ ಶಬ್ದಕ್ಕೆ ಸಂಪ್ರೀತಳಾಗಿ ಮೇಲೆದ್ದು ಬಂದಳಂತೆ. ಹೀಗೆ ಚೌಡಿಕೆಯಿಂದ ಸಂಪ್ರೀತಳಾದ ಅಮ್ಮನನ್ನು ಚೌಡಮ್ಮ ಎಂದೇ ಕರೆಯಲಾಯಿತು. ಇನ್ನೊಂದು ಕಥೆಯ ಪ್ರಕಾರ ಚಾವಡಿಯಲ್ಲಿ ಪೂಜೆಗೊಳ್ಳುತ್ತಿದ್ದ ಅಮ್ಮ ಚೌಡಮ್ಮ. ಇವಳು ಚೇಳಿನ ಅಮ್ಮನೆಂದೂ, ಚೇಳಮ್ಮ < ಚೌಳಮ್ಮ < ಚೌಡಮ್ಮ ಎಂದಾಯಿತೆಂದೂ ಹೇಳುವರು. ರಾಘವಾಂಕ ಕವಿಯ ವೀರೇಶಚರಿತ್ರೆಯಲ್ಲಿ ಹೇಳಿರುವಂತೆ ವೀರಭದ್ರನು ದಕ್ಷಯಜ್ಞನಾಶದ ಸಂದರ್ಭದಲ್ಲಿ ಜನರನ್ನು ಕೊಲ್ಲುತ್ತಾ ಬಂದಾಗ ರಕ್ತವು ಮಡುಗಟ್ಟಿ ನಿಂತು ಮುಂದೆ ನಡೆದು ಹೋಗಲು ಅಡ್ಡಿಯಾಗಲು ವೀರಭದ್ರನು ಶಿವನನ್ನು ಪ್ರಾರ್ಥಿಸಲು ಚೌಡಮ್ಮನನ್ನು ಸೃಷ್ಟಿಸಿದನು.[೬೩] ಚೌಡಮ್ಮ ವೀರಭದ್ರ ಕಡಿದ ರುಂಡಗಳಿಂದ ಕಾರುತ್ತಿದ್ದ ರಕ್ತವನ್ನು ತನ್ನ ನಾಲಗೆ ಚಾಚಿ ನೆಕ್ಕುತ್ತ ನಡೆದಳು. ಚೌಡಮ್ಮನಿಗೆ ರಕ್ತದಾಹ ಹೆಚ್ಚಾಗಿ ರಕ್ತ ಮೆತ್ತಿದ ವೀರಭದ್ರನ ಹಿಂಬಡಗಳನ್ನು ನೆಕ್ಕತೊಡಗಿದಾಗ ವೀರಭದ್ರನು ಕೋಪಗೊಂಡು ಅವಳನ್ನು ಮೂರು ತುಂಡಾಗಿ ಕತ್ತರಿಸಿದನು. ಆದಕ್ಕಾಗಿ ರುಂಡವನ್ನು ಹಟಗಾರರೂ, ಮುಂಡವನ್ನು ಬ್ರಾಹ್ಮಣರೂ, ಪಾದವನ್ನು ಮಾದರು ಹಂಚಿಕೊಂಡು ಪೂಜಿಸುತ್ತಾರೆ.

ಮೂಲದಲ್ಲಿ ಚೌಡಮ್ಮ ಕಾಳಮ್ಮನಂತೆ ಉಗ್ರದೇವತೆ. ಆದರೆ ಸಸ್ಯಾಹಾರಿಗಳಾದ ನೇಕಾರರ ದೇವತೆಯಾದ್ದರಿಂದ ಮಾಂಸಾಹಾರ ನೈವೇದ್ಯವಿಲ್ಲ. ಹೋಳಿಗೆ, ಹುಗ್ಗಿ, ಕಡುಬು, ಅನ್ನ, ತುಪ್ಪಗಳನ್ನು ನೈವೇದ್ಯಕ್ಕಿಡುವರು. ಗುಲ್ಬರ್ಗಾ ಜಿಲ್ಲೆಯಲ್ಲಿ ನೇಕಾರರು ಹೆಚ್ಚಾಗಿರುವುದು ಜೇವರ್ಗಿ ತಾಲ್ಲೂಕಿನ ಮಳ್ಳಿಯಲ್ಲಿ, ಅಫಜಲಪುರ ತಾಲ್ಲೂಕಿನ ಮಾಸ್ಯಾಳದಲ್ಲಿ. ಚೌಡಮ್ಮ ಗುಡಿಯಲ್ಲಿ ಕೇವಲ ರುಂಡದ ರೂಪದಲ್ಲಿರುವಳು. ಒಂದೇ ರುಂಡ ಇಡುವುದು ಸರಿಯಲ್ಲವೆಂದು ಗುಡಿಯ ಗದ್ದುಗೆಯ ಮೇಲೆ ಚೌಡಮ್ಮನ ಜೋಡಿ ರುಂಡವಿಡುವರು.[೬೪] ಆಕೆಯ ಮುಖವನ್ನು ಕಟ್ಟಿಗೆಯಿಂದ ಮಾಡಿ ಕೆಂಪು ಬಣ್ಣವನ್ನು ಹಚ್ಚುವರು. ಖಡ್ಗ, ತ್ರಿಶೂಲ, ಚಕ್ರಕೊಡಲಿ ಈ ಆಯುಧಗಳನ್ನು ಇವಳ ರುಂಡದ ಪಕ್ಕದಲ್ಲಿಡುವರು. ಕೊಂಬು, ಕಹಳೆ, ಹಲಗೆ, ಡೊಳ್ಳುಗಳನ್ನು

ಈಕೆಯ ಉತ್ಸವದಲ್ಲಿ ಬಾರಿಸುವರು. ಸಂಪತ್ತಿನ ದೇವತೆಯೆಂದು ಈಕೆಯನ್ನು ಶುಕ್ರವಾರದ ದಿನ ವಿಶೇಷವಾಗಿ ಪೂಜಿಸುವರು. ಗುಲ್ಬರ್ಗಾ ಜಿಲ್ಲೆಯಲ್ಲಿ ಚೌಡಮ್ಮನ ಸ್ಥಳಗಳೆಂದರೆ ನಾಲವಾರ, ಕನ್ನೇಕೋಳೂರ, ಮಳ್ಳಿ ಮತ್ತು ಮಾಸ್ಯಾಳ, ಮೊದಲು ಇವಳ ಉತ್ಸವ ಐದು ದಿನಗಳು ನಡೆಯುತ್ತಿದ್ದು ಈಗ ಮೂರು ದಿನ ಮಾತ್ರ ನಡೆಯುತ್ತದೆ. ಕುದುರೆ ಕುಣಿತ, ಕೋಳಿ ಬಲಿ, ಕುಸ್ತಿ, ಬಯಲಾಟ, ನಾಟಕ, ಹಾಡಕ್ಕಿ, ಉತ್ಸವದ ದಿನಗಳಲ್ಲಿ ನಡೆಯುವುವು.[೬೫]

ಮರ್ಕಿ ದುರ್ಗಿ:-

ಸುಮಾರು ಮುನ್ನೂರು ವರ್ಷಗಳ ಹಿಂದೆ ಶ್ರೀ ಮಾರಿಕಾಂಬೆ ಶಿರಸಿಗೆ ಆಗಮಿಸಿದ ಪೂರ್ವದಲ್ಲಿ ಮರ್ಕಿ ದುರ್ಗಿಯರೆಂಬ ಜೋಡು ದೇವತೆಗಳನ್ನು ಶಿರಸಿಯ ಜನ ಆರಾಧಸುತ್ತಿದ್ದರು. ಇಂದೂ ಈ ಮರ್ಕಿ ದುರ್ಗಿಯರ ದೇವಾಲಯ ಶಿರಸಿಯಲ್ಲಿದೆ. ಶ್ರೀ ಮಾರಿಕಾಂಬೆಯ ಜಾತ್ರೆಯ ಸಮಯಕ್ಕೆ ಬೇವಿನುಡಿಗೆಯ ಸೇವೆ ನಡೆಯುವುದು ಇವುಗಳ ಸನ್ನಿಧಿಯಲ್ಲಿಯೇ. ಶಿರಸಿಯ ರೈತಾಪಿ ಜನ ಈ ದೇವತೆಗಳಿದ್ದರೂ, ಚಂದ್ರಗುತ್ತಿಯ ರೇಣುಕೆಯನ್ನೇ ತಮ್ಮ ಗ್ರಾಮದೇವತೆಯೆಂದು ಪರಿಗಣಿಸುತ್ತಿದ್ದರು. ಅಸಾದಿಗಳು ಸುಗ್ಗಿಯ ಕಾಲದಲ್ಲಿ ಮರ್ಕಿ ದುರ್ಗಿಯರ ಪಡಲಿಕೆಯನ್ನು ಹೊತ್ತು ಊರ ಮೇಲೆ ಸುತ್ತಾಡಿ, ಭಕ್ತರ ಹರಕೆಗಳನ್ನು ಸ್ವೀಕರಿಸಿ, ಅವರಿಗೆ ಶ್ರೀದೇವಿಯ ಭಂಡಾರವನ್ನು ನೀಡುತ್ತಿದ್ದರು. ಇಂದಿನ ಪ್ರಖ್ಯಾತ ಮಾರಿಕಾಂಬೆಯ ವಿಗ್ರಹವಾಗಲಿ, ದೇವಾಲಯವಾಗಲಿ ಇರಲಿಲ್ಲ. ಮರ್ಕಿ ಅಕ್ಕನಾದರೆ ದುರ್ಗಿ ತಂಗಿ. ಮರ್ಕಿ ಹೊಲ, ಬೆಳೆ, ಬೇಸಾಯಗಳ ರಕ್ಷಕಿ. ದುರ್ಗಿ ಕೋಟೆ ಕೊತ್ತಗಳಗಳ ರಕ್ಷಕಿ. ಈ ದೇವತೆಗಳಿಗೂ ಹಣ್ಣು ಕಾಯಿ, ಉಡಿ ತುಂಬಿಸುವುದು, ಬೇವಿನುಡಿಗೆಯ ಸೇವೆಯನ್ನು ಸಲ್ಲಿಸುವುದು ಮುಂತಾದ ಹರಕೆಗಳನ್ನು ಸಲ್ಲಿಸುತ್ತಾರೆ.

ಅಫಜಲಪೂರ ತಾಲೂಕಿನ ಬಂದರವಾಡದ ಗ್ರಾಮದೇವತೆ ಲಲಿತಾದೇವಿ:-

ಸೂರಗಿ ಮಠದ ಮೂಲ ಕತೃ ಶಾಂತಲಿಂಗೇಶ್ವರರು ಇವರು ಗದಗ ಜಿಲ್ಲೆ ಲಕ್ಷ್ಮೀಪುರದಲ್ಲಿ ಅನುಷ್ಠಾನಕ್ಕೆ ಕುಳಿತಿರುತ್ತಾರೆ. ಆದರೆ ಆ ಪ್ರದೇಶ ಜೈನರ ರಾಜನಾದ ಲಕ್ಷ್ಮಣ ಮಹಾರಾಜರು ಆಳ್ವಿಕೆ ಮಾಡುತ್ತಿದ್ದರು. ಇಲ್ಲಿ ಬರಗಾಲ ವಿರುತ್ತದೆ ನೀರಿನ ಅಭಾವ ಉಂಟಾಗುತ್ತದೆ. ಆತಂಹ ಸಂದರ್ಭದಲ್ಲಿ ಎಲ್ಲ ಜೈನ ಯತಿಗಳು, ಶರಣರು, ಭಕ್ತರು, ಎಲ್ಲರು ಕೂಡಿಕೊಂಡು ಶಾಂತಲಿಂಗೇಶ್ವರರ ಬಳಿಗೆ ಬಂದು ಪರಸ್ಥಿತಿಯ ಬಗ್ಗೆ ತಿಳಿಸಿ ಬರಗಾಲ ಹೊಗಲಾಡಿಸಲು ತಾವು ಮಳೆ ತರೆಸಬೇಕು ಎಂದು ಕೇಳಿಕೊಂಡರು ಆಗ ಅವರು ಒಂದು ಷರತ್ತಿನ ಮೇಲೆ ಒಪ್ಪಿಕೊಂಡರು. ಆ ಷರತ್ತು ಕಾದ ಉಕ್ಕಿನ(ಕಬ್ಬಿಣದ) ಬಟ್ಟೆ ಧರಿಸುತ್ತೇನೆ ಅದಕ್ಕೆ ನೀವು ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಂಡರು. ಆಗ ಜೈನರು ಅವರ ಧರ್ಮದ ವಿರುದ್ಧವಾಗಿ ಹೋಗಿದಂತಾಗುತ್ತದೆ ಎಂದು ನಿರಾಕರಿಸಿದರು. ಕೊನೆಗೆ ಉಕ್ಕಿನ ಬಟ್ಟೆ ವ್ಯವಸ್ಥೆ ಮಾಡಿದರು ಅದನ್ನು ಧರಿಸಿ ಅನುಷ್ಠಾನ ಕುಳಿತರು ಮಳೆ ಧಾರಕಾರವಾಗಿ ಸುರಿಯಿತು ಇದರಿಂದ ಬಂದ ಕ್ಷಾಮವೆಲ್ಲ ನೀಗಿಹೋಯಿತು. ಇದರಿಂದ ಸಂತೋಷಗೊಂಡ ಅರಸ ಲಕ್ಷ್ಮಣ ಮಹಾರಾಜ ಈ ಯತಿಗೆ(ಶಾಂತಲಿಂಗೇಶ್ವರರಿಗೆ) ಧನ, ಕನಕಗಳನ್ನು ಕೊಡಲು ನಿರ್ಧರಿಸಿದರು ಆದರೆ ಅವರು ನಿರಾಕರಿಸಿದರು. ಬದಲಿಗೆ ಅವರು ಇರುವ ಸ್ಥಳದಲ್ಲಿ ಮಠ ಕಟ್ಟಲು ಅವಕಾಶ ಕೇಳಿದರು ಅವರ ಇಚ್ಚೆಯಂತೆ ರಾಜ ಮಠವನ್ನು ಕಟ್ಟಿಸಿಕೊಟ್ಟನು.

ಈ ಮಹತ್ ಕಾರ್ಯವನ್ನು ಕಂಡು ರಾಜನ ಮಗಳು ಭೋಂಥಲಾದೇವಿಯು ಶಾಂತಲಿಂಗೇಶ್ವರರಿಗೆ ಮಾರು ಹೋಗಿ ಮದುವೆ ಯಾಗುವುದಾಗಿ ತಿಳಿಸಿದಳು ಆದರೆ ಶಾಂತಲಿಂಗೇಶ್ವರರು ಅದಕ್ಕೂ ಅವರು ನಿರಾಕರಿಸದೇ ಒಪ್ಪಿದರು. ಆದರೆ ಅವರು ಮೊದಲೆ ಹೇಳಿದರು ನಿನಗೆ ಮುತ್ತೈದೆ ಮರಣ ಇಟ್ಟನಿ ಎಂದು ಹೇಳಿದರು. ನಂತರ ಮದುವೆ ಸಿದ್ದತೆ ನಡೆಯುತ್ತದೆ. ಸುರಗಿ ಸುತ್ತು

ಕಾರ್ಯಕ್ರಮ ನಡೆಯುತ್ತದೆ. ನಂತರ ಅದೆ ಸುರಗಿಯಲ್ಲಿ ತಾಳಿಧಾರಣೆ ನಡೆಯುತ್ತೆ ಅಕ್ಷತಾ ಕಾರ್ಯ ಮುಗಿದ ನಂತರ ನೀನು ನಿನ್ನ ಗಂಡನ ಮನೆಯನ್ನು ಹುಡುಕಿಕೊಂಡು ಬರಬೇಕು ಎಂದು ಹೇಳಿ ಶಾಂತಲಿಂಗೇಶ್ವರರು ಅದೃಶ್ಯರಾಗುತ್ತಾರೆ. ಅಲ್ಲಿಂದ ಬಂದು ಅವರು ಮುಳಗುಂದ, ಮುದನೂರು, ಸಂಡೂರ, ಜಾಲಿಹಾಳ, ಸಾಗರ, ಶಿವಣಗಿ, ಮಲಘಾಣ, ಇಟಗಿಯಲ್ಲಿ ಸುರಗಿ ಮಠಗಳನ್ನು ನಿರ್ಮಿಸುತ್ತಾರೆ. ಕೊನೆಗೆ ದಕ್ಷಣವಾಹಿನಿಯಾದ ಬಂದರವಾಡಕ್ಕೆ ಬಂದರು ಇಲ್ಲಿದ್ದಂತಹ ಪ್ರಾದೇಶಿಕ ಅರಸರು ಅವರಿಗೆ ಸಹಕಾರ ನೀಡಿದರು ಅವರು ಯೋಗ ಸಮಾಧಿಗೆ ಹೋಗುವಾಗ ಅವಳ ಪತ್ನಿ ಉಡಿ ತುಂಬಿಕೊಂಡು ರಾಜ ಮರ್ಯಾದೆಯೊಂದೆಗೆ ಧನ, ಕನಕಾದ್ರಿಗಳು, ಉಂಬಳಿಗಳು ಎಲ್ಲವು ತಂದು ಅವಳು ತನ್ನ ಪತಿ ಯೋಗ ಸಮಾಧಿಗೆ ಹೋಗುವುದಕ್ಕಿಂಥ ಮುಂಚೆ ಸ್ವಾಮಿ ಎಂದು ಕೂಗಿದಳು ಅಲ್ಲಿಂದ ಇಲ್ಲಿವರೆಗೆ ಬಂದೆಯಲ್ಲ ಎಲೆ ಬಳ್ಳಿ(ಲಲಿತೆ) ನಾನು ಯೋಗ ಸಮಾಧಿಗೆ ಹೋಗತಾಯಿದಿನಿ ನೀನು ಅಲ್ಲೆ ಯೋಗ ಹೋಗು ಎಂದು ಹೇಳಿದರು. ಅವಳ ಯೋಗದ ನಂತರ ಶಾಂತಲಿಂಗೇಶ್ವರರು ಯೋಗ ಸಮಾಧಿಗೆ ಹೋಗುತ್ತಾರೆ. ಲಲಿತಾದೇವಿ ಯೋಗ ಸಮಾಧಿ ಹೋದ ನಂತರ ಗ್ರಾಮದೇವತೆಯ ರೂಪ ಪಡೆದು ಪ್ರತೀ ವರ್ಷ ಅವಳ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಜನರು ಉಡಿತುಂಬುವ ಹರಕೆಯನ್ನು ತೀರಿಸುತ್ತಾರೆ. ಇದರ ಜೊತೆಗೆ ಕನ್ಯ ಮುತ್ಯೆದೆಯರನ್ನು ಊಟಮಾಡಿಸುತ್ತಾರೆ. ದೊಡ್ಡ ಹೆಣ್ಣುಮಗಳನ್ನು ಮುತ್ಯೆದೆಯಾಗಿ ಕರೆಯುವುದಿಲ್ಲ. ಈ ರೀತಿ ಲಲಿತಾದೇವಿ ಬಂದರವಾಡದಲ್ಲಿ ಗ್ರಾಮ ದೇವತೆಯಾಗಿ ನೆಲೆಸಿದಳು.[೬೬]

ಅಫಜಲಪೂರ ತಾಲೂಕಿನ ಆನೂರಿನ ಗ್ರಾಮದೇವತೆ ಚಂದ್ರಮ್ಮತಾಯಿ:-

ಚಂದ್ರಮ್ಮ ತಾಯಿ ಇವರು ಬಿಜಾಪುರ ಜಿಲ್ಲೆಯ ಬಿಳಗಿ ತಾಲೂಕಿನ ಗಲಗಲಿಯ ಊರಿನವರು ತಂದೆ ಮಲ್ಲಪ್ಪ ತಾಯಿ ಭಾಗೀರಥಿ, ಚಂದ್ರಮ್ಮ ತಾಯಿಯ ಜನನದ ನಂತರ ಪಂಚಾಗ ತೆಗೆಸಿ ನೋಡಿದಾಗ ಇವಳು ಬುಧುವಾರ ಹುಟ್ಟಿದ್ದಾಳೆ ನಿಮಗೆ ದಕ್ಕುವುದಿಲ್ಲ ಇವಳನ್ನು ಯಾವುದಾದರು ಮಠಕ್ಕೆ ದಾನ ಕೊಡಬೇಕು ಎಂದು ಹೇಳಿದಾಗ ಅವಳನ್ನು ಬಿಜಾಪುರ ಜಿಲ್ಲೆಯ ಸಿತಿಮನಿ ಎಂಬ ಊರಿನ ಮಠಕ್ಕೆ ಈ ಸ್ವಾಮಿ ಮನೆತನದ ಕೂಸನ್ನು ದಾನವಾಗಿ ನೀಡಿದರು. ಸಿತಿಮನಿಯಲ್ಲಿ ಅವಳು ಬೆಳೆದು ದೊಡ್ಡವಳಾಗಿದಳು ಮುಂದೆ ಮದುವೆ ಮಾಡಲೆಂದು ಗಂಡನ್ನು ಹುಡುಕಲಾರಂಬಿಸಿದರು. ಬಬಲಾದ ಸದಾಶಿವಪ್ಪನವರು ಕನ್ಯೆ ನೋಡಲು ಬಂದು ಅವಳನ್ನು ನೋಡಿ ಪಂಸದ ಮಾಡಿದ ನಂತರ ಮದುವೆ ಕಾರ್ಯವು ನಡೆದು ಹೋಯಿತು. ಚಂದ್ರಮ್ಮ ಗಂಡನ ಮನೆಯಾದ ಬಬಲಾದಕ್ಕೆ ಬಂದಿದ್ದಳು ಲೋಕರೂಢಿಯಂತೆ ಗಂಡಹೆಂಡತಿಯರ ಮೊದಲನೆ ರಾತ್ರಿ ದಿವಸ ಗಂಡ ಸದಾಶಿವಪ್ಪ ಅವಳನ್ನು ಅನುಭವಿಸಬೇಕು ಎಂದು ಕೋಣೆಗೆ ಹೋದಾಗ ಅವನ ಹೆಂಡತಿ ಬೆಂಕಿಯ ಮೇಲೆ ಮಲಗಿದ ಹಾಗೆ ಶಾಖದಿಂದ ಪ್ರಜ್ವಲಿಸುತ್ತಿದ್ದಳು. ಸದಾಶಿವಪ್ಪ ಸಮೀಪಕ್ಕೆ ಹೋಗಲಾರದಷ್ಟು ಬೆಂಕಿಯ ಕೆಂಡವಾಗಿದ್ದಳು. ಆಗ ಚಂದ್ರಮ್ಮ ತನ್ನ ಗಂಡನಿಗೆ ಹೀಗೆ ಹೇಳಿದಳು ಲೋಕರೂಡಿಯಂತೆ ನೀನು ನನ್ನನು ಅನುಭವಿಸಲು ಸಾಧ್ಯವಿಲ್ಲ ನಿನ್ನ ಏನಾದರೂ ಆಸೆಗಳಿದರೆ ಹೇಳು ತಿರಿಸುವೆ ಆದರೆ ರತಿ ಸಂಭೋಗಕ್ಕೆ ಅವಕಾಶ ಕೊಡುವುದಿಲ್ಲ ಎಂದಳು. ಆಗ ಸದಾಶಿವಪ್ಪ ನನಗೆ ಮಕ್ಕಳು ಬೇಕು ಎಂದು ಕೇಳಿದಾಗ ಅವಳ ದೈವಿ ಶಕ್ತಿಯಿಂದ ಮೂರು ಜನ ಮಕ್ಕಳ(ಕೂಸುಗಳನ್ನು) ಕೊಟ್ಟಳು. ಮೊದಲಿನ ಮಗನ ಹೆಸರು ಬಸವಂತರಾಯ, ಎರಡನೆ ಮಗನ ಹೆಸರು ಷಣ್ಮುಖ ಮೂರನೆ ಮಗನ ಹೆಸರು ಚಿಕ್ಕಯ್ಯ.

ಆನೂರಿಗೆ ಚಂದ್ರಮ್ಮತಾಯಿ ಬಂದ ಹಿನ್ನೇಲೆ ಮಾನವನ ಸ್ವರೂಪ ಪಡೇದುಕೊಂಡು ಬಂದಳು ಅವಳ ಮೂಲ ರೂಪ ಸರ್ಪ ಚಂದ್ರಮ್ಮ ತಾಯಿ ಆನೂರಿಗೆ ಬಂದಾಗ ಯಾರು ಅವಳಿಗೆ ಮಾತಾಡಿಸಲಿಲ್ಲ. ಅವಳು ದೇಸಾಯಿ ಕಲ್ಲೂರಿಗೆ ಹೋಗಬೇಕು ಎಂದು ನಡೆದಾಗ ಮಾದರ ಹೆಣ್ಣು ಮಗಳು ಕರೆದುಕೊಂಡು ಹೋಗಿ ಅವಳನ್ನು ಆರಾಧಿಸುವದಾಗಿ ಹೇಳಿದಳು. ಮಾದರ ಹೆಣ್ಣು ಮಗಳ ವಂಶಸ್ಥರೆ ಮಲ್ಲಪ್ಪ ಮಾಂಗ್ ಅವರು. ಚಂದ್ರಮ್ಮ ದೇಸಾಯಿ ಕಲ್ಲೂರಿಗೆ ಹೋಗುವಾಗ ಆನೂರಿನ ಸೀಮಿಯಾ ಹಿಪ್ಪರಗಿ ಈರಪ್ಪ ಸಾಹುಕಾರನ ಹೊಲದಾಗ ಆಳ ಮನುಷ್ಯ ನೇಗಿಲು ಹೊಡಿತಾಯಿದ್ದ ಅವನ ಹೆಸರು ಹಣಮಂತ ಚಂದ್ರಮ್ಮ ಬಾಯಾರಿಕೆಯಾಗಿ ನೀರು ಕೇಳಲು ಹೋಗಿದ್ದಳು.

ಹಣಮಂತನಿಗೆ ಒಲಿದಿದ್ದ ಅವಳಿಗೆ ಮೊದಲ ಪೂಜೆ ಇವರ ಮನೆತನದಿಂದಲೆ ಪ್ರಾರಂಭವಾಯಿತು. ನೀರು ಕುಡಿದು ಅವನ ಭಕ್ತಿಗೆ ಒಲಿದು ಅವನ ಜೊತೆಗೆ ಮನಃ ಆನೂರಿಗೆ ಬಂದು ನೆಲೆಸಿದಳು. ಇದೇ ಊರಿನ ಆರ್ಯಪ್ಪ ಮಗ ಕಲ್ಲಪ್ಪ ಮಾದರ ಚಂದ್ರಮ್ಮ ಮನೆಮಗಳು ಎಂದು ಅವಳಿಗೆ ೬ಮಳ ಸೀರಿ ಕೊಟ್ಟರು. ಆದರೆ ಚಂದ್ರಮ್ಮ ತಾಯಿ ಮೂಲತಃ ಅವಳು ಸ್ವಾಮಿ ಮನೆತನದಿಂದರಿಂದ ಮಾದರ ಆಚಾರ ವಿಚಾರ ಅವಳಿಗೆ ಹಿಡಿಸಲಿಲ್ಲ. ಅಫಜಲಪೂರದ ಮಲ್ಲಪ್ಪ ಪೂಜಾರಿಯವರು ಕರಿದೇವರ ಗುಡಿಯಲ್ಲಿ ಬಂದು ಅಲ್ಲೆ ಒಂದೆರಡು ದಿವಸ ಇದ್ದು ಹೋಗುತ್ತಿದ್ದರು. ಹೀಗೆ ಒಂದು ದಿವಸ ಮಲ್ಲಪ್ಪ ಪೂಜಾರಿ ಅಲ್ಲಿ ಕುಳಿತಿರುವಾಗ, ಚಂದ್ರಮ್ಮ ತಾಯಿಯು ಊರಲ್ಲಿ ಓಡಾಡುತ್ತಿರುವಾಗ ಅವನ ಕಣ್ಣಿಗೆ ಕಂಡಳು. ಮಲ್ಲಪ್ಪ ಪೂಜಾರಿ ಅವಳ ಸೌಂದರ್ಯ ನೋಡಿ ಇವಳು ಸಾಕ್ಷಾತ ಪಾರ್ವತಿದೇವಿಯಾಗಿರಬೇಕು ಎಂದು ತಿಳಿದು ಮಾತಾಡಿಸಿದನು. ನಾನೊಂದು ಕೆಲಸ ಹೇಳತಿನಿ ಮಾಡಬೇಕು ಎಂದು ಈ ಊರಿನ ನನ್ನ ಜಾತ್ರೆ ನಡೆದಾಗ ಹೀರೆಕುರುಬ ವಡ್ಡವಾಲಗ ಬೇಕು ಮಾಲಿಗೌಡರಿಂದ ಕುಂಬಕೋಣ ಬರಬೇಕು ದಂಡಿ ಪೋಲಿಸಗೌಡರಿಂದ ನನ್ನ ಸಂಬ್ರಕ್ಕೆ ಬರಬೇಕು ಇಷ್ಟೇ ಅಲ್ಲ ಮಾದರ ಓಣಿಯಲ್ಲಿ ಜಾಗ ಹಿಡಿಸಲ್ಲ ಬಯಲಿಗೆ ಜಾಗ ಬೇಕು ಎಂದು ಊರಿನ ಗೌಡ, ಕುಲರ್ಣಿಯವರಿಗೆ ಹೇಳು ಎಂದು ಮಲ್ಲಪ್ಪ ಪೂಜಾರಿಗೆ ಹೇಳಿದಳು.

ಮಲ್ಲಪ್ಪ ಪೂಜಾರಿ ಊರಿನ ಎಲ್ಲ ಗೌಡ, ಕುಲಕರ್ಣಿಯವರಿಗೆ ಕೂಡಿಸಿ ಹೇಳಿದನು. ಅದರಂತೆ ಊರಿನ ಮುಖಂಡರು ಅವಳ ವ್ಯವಸ್ಥೆ ಮಾಡಿದರು. ಒಟ್ಟು ೨ದಿನ ಜಾತ್ರೆ ನಡೆಯುತ್ತದೆ. ಮೊದಲಿನ ದಿನ ಗುರುವಾರದಂದು ಹೊಳಿಗೆ ಹೋಗುತ್ತಾಳೆ. ಅವಳು ಮರಳಿ ಅಂದರೆ ರಾತ್ರಿ ೧೨ಗಂಟೆ ನಂತರ ಅಗ್ಗಿಗೆ ಸುರಗಿಸುತ್ತಿದ ನಂತರ ಹಾಲು ತುಪ್ಪ ಹಾಕಿ ಅಗ್ಗಿ ಮಟು ಮಾಡಿ ಊರ ಒಳಗೆ ಬರುತ್ತಾಳೆ. ಊರಿನ ಪ್ರತಿಯೊಂದು ಮನೆಗೆ ಹೋಗಿ ಕರಿದೇವರ ಗುಡಿಗೆ ಬರುತ್ತಾಳೆ ಇಲ್ಲಿ ಮಲ್ಲಪ್ಪ ಪೂಜಾರಿ ಯವರ ಮನೆತನದವರು ತಂದ ನೌವಾರಿ ಸಿರಿ ಉಡಿಸುತ್ತಾರೆ. ಚಂದ್ರಮ್ಮ ತಾಯಿ ಮಲ್ಲಪ್ಪನಿಗೆ ನೌವಾರಿ ಸೀರಿ ಕೇಳಿದಳು ಆ ಒಂದು ಕಾರಣಕ್ಕೆ ಅವರ ಸೀರಿ ಬದಲಾಯಿಸುವದಿಲ್ಲ ಅಲ್ಲಿ ಪೋಲಿಸಗೌಡರ ಮನೆಗೆ ಹೋಗಿ ದಂಡಿ ಮುಡಿಕೊಂಡು, ಮಾಲಿಗೌಡರ ಮನೆಗೆ ಹೋಗುವಳು ಅಲ್ಲಿ ಕುಂಬ ಕೋಣ ತೆಗೆದುಕೊಂಡು ಗುಡಿ ಹೋಗುತ್ತಾಳೆ. ಅಲ್ಲಿ ರಂಗ ಹಾಕಿರುತ್ತಾರೆ ಚಂದ್ರಮ್ಮ ಬೆಳಿಗೆ ೬ಗಂಟೆಗೆ ಅಗ್ಗಿ ಪ್ರವೇಶ ನಡೆಯುತ್ತದೆ ಅಗ್ಗಿ ಹಾಯ್ದು ನಂತರ ಜಾತ್ರೆ ಸಮಾಪ್ತಿಯಾಗುತ್ತದೆ. ಅಗ್ಗಿಯಲ್ಲಿ ಎರಡು ಪ್ರಕಾರಗಳಿವೆ ೧)ಮೀಸಲು ಅಗ್ಗಿ ೨)ಎಂಜಲು ಅಗ್ಗಿ. ೧)ಮೀಸಲು ಅಗ್ಗಿ ಎಂದರೆ ಪೂಜಾರಿ ಮತ್ತು ದೇವರು ಹೊತ್ತವರು ಅಗ್ಗಿ ಪ್ರವೇಶ ಮಾಡುತ್ತಾರೆ ಆದರೆ ಉಳಿದ ಜನರು ಅಗ್ಗಿ ಪ್ರವೇಶ ಮಾಡುವುದಿಲ್ಲ ಇದನ್ನು ಮೀಸಲು ಅಗ್ಗಿ ಎನ್ನುವರು. ೨) ಎಂಜಲು ಅಗ್ಗಿ ಪಟ್ಟದ ಮುರವಂತ ಮತ್ತು ದೇವರು ಹೊತ್ತವರು ಹಾಯ್ದು ನಂತರ ಜನರು ಅಗ್ಗಿ ಹಾಯುತ್ತಾರೆ ಇದನ್ನು ಎಂಜಲು ಅಗ್ಗಿ ಎನ್ನುವರು.[೬೨]

ಚಿಂಚೋಳಿ ತಾಲೂಕಿನ ಹಲಚರಾ:-

ಹಲಚರಾ ಊರಿನ ಒಬ್ಬಾತ ಶರತಿಕಟ್ಟಿ ಕೇಶ್ವಾರದಿಂದ 'ಫಲಿ' ತರುವುದಾಗಿ ಹೇಳಿ ಕೇಶ್ವಾರಕ್ಕೆ ಹೋಗಿ ಅಲ್ಲಿಂದ ಪಟ್ಟದ ಕೋಣದ ತಲೆ ಮೇಲೆ ಇರುವ ನಂದಾದೀಪವನ್ನು ಎತ್ತಿಕೊಂಡು ಈ ಊರಿಗೆ ಓಡಿಬಂದ ಊರಿನ ಸೀಮಿಗೆ ಬಂದನಂತರ ಕೇಶ್ವಾರದ ಜನರು ಬೆನ್ನುಹತ್ತಿದರು ಹಲಚರಾ ಸೀಮೆಯಲ್ಲಿ ಆತನನ್ನು ಹಿಡಿದು ಕೊಂದು ತಲೆಯನ್ನು ಕಡೆದು ಕೊಂಡು ಹೋಗಿದ್ದಾರೆ. ದೇಹ ಅಲ್ಲೆ ಬಿದಿದ್ದರಿಂದ ಆತನನ್ನು ಅದೇ ಹೊಲದಲ್ಲಿ ಹೊಳಿದ್ದಾರೆ. ಇಂದಿಗೂ ಆತನ ಸಮಾಧಿಗೆ ಪೂಜೆ ನಡೆಯುತ್ತದೆ. ಮತ್ತೊಂದು ಘಟನೆ ಎಂದರೆ ಪೊತ್ಯಾ ಗಾಂವ ಹರಿದು ನಂತರ ಅದನ್ನು ಊರೆಲ್ಲಾ ಅಂದರೆ ಸೀಮಿಗೆಲ್ಲಾ ಎಸೆಯುವಾಗ ದೆವ್ವಬಂದು ಆತನ ಕುತ್ತಿಗೆ ಹಿಡಿದು ಆತನನ್ನು ಕೊಂದಿದೆಯಂತೆ ಆತ ಸತ್ತ ಹೊಲದಲ್ಲೆ ಆತನನ್ನು ಮಣ್ಣುಮಾಡಲಾಗಿದೆ. ಇಂದಿಗೂ ಈ ಸಮಾಧಿಗೆ ಪೂಜೆ ಮಾಡುತ್ತಾರೆ.

೫.೨ ವ್ಯಕ್ತಿ ಪ್ರಧಾನ ಐತಿಹ್ಯಗಳು:-

ವ್ಯಕ್ತಿಯನ್ನು ಮೂಲವಾಗಿಟ್ಟುಕೊಂಡು ಹುಟ್ಟಿದ ಐತಿಹ್ಯಗಳಿಗೆ ವ್ಯಕ್ತಿ ಐತಿಹ್ಯಗಳೆಂದು ಕರೆಯಲಾಗುತ್ತದೆ. ಐತಿಹ್ಯಗಳ ಹುಟ್ಟಿಗೆ ಹಲವು ಅಂಶಗಳು ಕಾರಣವಾದರೂ ಈ ಬಗೆಯ ಐತಿಹ್ಯಗಳಲ್ಲಿಯ ಘಟನೆ ವ್ಯಕ್ತಿ ಕೇಂದ್ರಿತವಾಗಿರುತ್ತದೆ. ಇಲ್ಲಿಯ ವ್ಯಕ್ತಿಗಳೆಲ್ಲಾ ಜನಸಾಮಾನ್ಯರಲ್ಲಿ ಸಾಮಾನ್ಯರಾಗಿಯೇ ಇದ್ದುಕೊಂಡು ಅಸಾಮಾನ್ಯ ವ್ಯಕ್ತಿತ್ವ. ಶಕ್ತಿ ಸಾಮರ್ಥ್ಯ, ಪವಾಡಸದೃಶ್ಯವಾದ ಜೀವನ ಮುಂತಾದ ವಿಶಿಷ್ಟ ಶಕ್ತಿ ಸಾಮರ್ಥ್ಯಗಳಿಂದ ಉಳಿದೆಲ್ಲರಿಗಿಂತಲೂ ಭಿನ್ನವಾಗಿ ನಿಲ್ಲುವ ಮೂಲಕ ಒಂದು ಐತಿಹ್ಯ ರುಪುಗೊಳ್ಳುವಲ್ಲಿ ಮುಖ್ಯಪಾತ್ರ ವಹಿಸುವರು. ಇಂಥ ಐತಿಹ್ಯಗಳಲ್ಲಿ ಅಸಾಮಾನ್ಯವಾದ, ಅಘಟಿತವಾದ ಘಟನೆಗಳು ಘಟಿಸುವಲ್ಲಿ ಪವಾಡಗಳು ದಟ್ಟವಾಗಿ ಹರಡಿರುತ್ತವೆ. ಇಂಥ ಪವಾಡಗಳ ಮೂಲಕ ವ್ಯಕ್ತಿಗಳ ಚರಿತ್ರೆಗಿಂತ ಚಾರಿತ್ರ್ಯವನ್ನು ಕಟ್ಟಿಕೊಡುವುದರಿಂದ ಸಮಾಜದ ಅಸಾಮಾನ್ಯ ವ್ಯಕ್ತಿಗಳಾಗಿ ಕಂಗೊಳಿಸುತ್ತಾರೆ. "ವೀರನ ಸಾಹಸಗಳು ಕೇವಲ ಸ್ವ ವಿಷಯಕ್ಕೆ ಅಥವಾ ತೀರಾ ಪರಿಮಿತವಾದ ಕುಲ, ಬಣಗಳ ವಿಷಯಕ್ಕೆ ಕಟ್ಟು ಬಿದ್ದುದ್ದಾದರೆ ಅದು ಜನಪದ ಕಥೆಯಾಗಿ ಮಾತ್ರ ಪ್ರಚಲಿತವಾಗುತ್ತದೆ. ಸಂದರ್ಭಶದಿಂದ ಪೌರಾಣಿಕ ಕಲ್ಪನೆಗಳು ಆತನ ಮೇಲೆ ಕೇಂದ್ರಕೃತವಾದದ್ದಾದರೆ ಅವನೊಬ್ಬ ವಿಶ್ವ ಪುರುಷ ಪ್ರಮಾಣದ 'ಸಂಸ್ಕೃತಿವೀರ'ನಾಗುತ್ತಾನೆ. ಅವನ ಚರಿತ್ರೆಯು ಐತಿಹ್ಯವಾಗುತ್ತದೆ".[೭೮]

ಖಾಜಾ ಬಂದೇನವಾಜರು ಚಿಲುಮೆ ಸೇದಿದ ಐತಿಹ್ಯ:-

ಖಾಜಾ ಬಂದೇನವಾಜರು ಗುಲಬರ್ಗಾಕ್ಕೆ ಬರುವಾಗ ರಾಯಚೂರು ತಾಲೂಕಿನ ಅರಿಷಿಣಗಿಯಲ್ಲಿ ಕೆಲವು ದಿನ ವಾಸ್ತವ್ಯ ಮಾಡಿದ್ದಾರಂತೆ. ಅರಿಷಿಣಗಿಯ ಕೃಷ್ಣಾ ನದಿ ದಂಡೆಯ ಮೇಲೆ ಕುಳಿತುಕೊಂಡು ಚಿಲುಮೆಯಿಂದ ಗಾಂಜಾ ಸೇದುತ್ತಿದ್ದರು. ಮುಂದೆ ಕೆಲವು ದಿನಗಳ ನಂತರ ಗುಲಬರ್ಗಾ ಕಡೆಗೆ ಪ್ರಯಾಣ ಬೆಳೆಸಿದರು. ತಾವು ಗಾಂಜಾ ಸೇದುತ್ತಿದ್ದ ಚಿಲುಮೆಯನ್ನು ಅರಿಷಿಣಗಿಯಲ್ಲಿ ಬಿಟ್ಟು ಹೋದರಂತೆ. ಅವರು ಕುಳಿತು ಚಿಲುಮೆ ಸೇದಿದ ಸ್ಥಳದಲ್ಲಿಯೇ ಅವರ ನೆನಪಿಗಾಗಿ ಭಕ್ತರು ಅವರ ದರ್ಗಾ ಕಟ್ಟಿದರು. ಕ್ರಿ.ಶ. ೧೩೪೭ರಲ್ಲಿ ಗುಲಬರ್ಗಾದಲ್ಲಿ ಬಹುಮನಿ ರಾಜ್ಯ ಈ ಭಾಗದಲ್ಲಿ ಸ್ಥಾಪಿತವಾದಾಗ ಉತ್ತರದಿಂದ ಅನೇಕ ಬಗೆಯ ಜನ ಬರತೊಡಗಿದರು. ಅವರಲ್ಲಿ ಇಸ್ಲಾಂ ಧರ್ಮ ಪ್ರಚಾರ ನಿಮಿತ್ಯವಾಗಿ ಬಂದವರೂ ಇದ್ದರು. ಕರ್ನಾಟಕ ಚರಿತ್ರೆ ಸಂಪುಟ ೪ ರಲ್ಲಿ ಬಿ ಷೇಕ್ ಅಲಿ ಅವರು "೧೩೦೦ರಲ್ಲಿ ದೆಹಲಿಯ ಖ್ವಾಜಾ ನಿಜಾಮುದ್ದೀನ್ ಔಲಿಯ

ಆದೇಶದಂತೆ ೭೦೦ ಜನ ಸೂಫಿಗಳು ದಕ್ಷಿಣಕ್ಕೆ ಬಂದು ಬೇರೆ ಬೇರೆ ಸ್ಥಳದಲ್ಲಿ ನೆಲೆಸಿದ್ದರು ಎಂಬ ಪ್ರತೀತಿಯಿದೆ. ಬುರ್ಹಾನುದ್ದೀನ್ ಉಘ್‌ರಿಬ್‌ನ ಮಟ್ಟದ ಹಿರಿಯ ಸೂಫಿ ಸಂತರು ದಕ್ಷಿಣದಲ್ಲಿ ಇಸ್ಲಾಮನ್ನು ಹರಡುವ ಕಾರ್ಯಕೈಗೊಂಡರು''[೧೯] ಎಂದು ಹೇಳುತ್ತಾರೆ. ಹೀಗೆ ಉತ್ತರದಿಂದ ಧರ್ಮ ಪ್ರಚಾರಾರ್ಥವಾಗಿ ಬಂದ ಸೂಫಿ ಸಂತರಲ್ಲಿ ಖ್ವಾಜಾ ಬಂದೇನವಾಜರು ಒಬ್ಬರಾಗಿರುವ ಸಾಧ್ಯತೆಯು ಜಿಲ್ಲೆಯ ಈ ಐತಿಹ್ಯದಿಂದ ತಿಳಿದುಬರುತ್ತದೆ. ''ಚಿಸ್ತಿ ಪಂಥಕ್ಕೆ ಸೇರಿದ್ದ ಖ್ವಾಜಾ ಬಂದೇನವಾಜ ಸೂಫಿಸಂತ ಗುಲಬರ್ಗಾಕ್ಕೆ ಬಂದು ನೆಲೆಸಿದ್ದು ಬಹುಮನಿ ಕಾಲದಲ್ಲಿ ಪ್ರಭುತ್ವವು ಈತನಿಗೆ ವಿಶೇಷ ಮನ್ನಣೆ ನೀಡಿತು''[೨೦] ಎನ್ನುವ ಅಂಶ ಲಿಖಿತ ಚರಿತ್ರೆಯಲ್ಲಿ ದಾಖಲಾಗಿರುವುದರಿಂದ ಖ್ವಾಜಾ ಬಂದೇನವಾಜರು ಅಥವಾ ಆತನ ಅನುಯಾಯಿಗಳು ಗುಲಬರ್ಗಾ ಜಿಲ್ಲೆಗೆ ಹೊಂದಿಕೊಂಡಿರುವ ರಾಯಚೂರು ಜಿಲ್ಲೆಯ ಅರಷಿಣಗಿಗೆ ಬಂದು ಹೋಗಿರಬಹುದಾದ ಸಾಧ್ಯತೆ ಇದೆ. ಧರ್ಮ ಪ್ರಚಾರ ನಿಮಿತ್ತವಾಗಿ ಅಲ್ಲಲ್ಲಿ ತಂಗುತ್ತಿದ್ದ ಇವರು ಭಕ್ತರ ಅಪೇಕ್ಷೆಯ ಮೇರೆಗೆ ತಾವು ಬಂದು ಹೋದುದರ ಕುರುಹಾಗಿ ತಾವು ಉಪಯೋಗಿಸುವ ಕೆಲವು ವಸ್ತುಗಳನ್ನು ಆ ಸ್ಥಳದಲ್ಲಿ ಬಿಟ್ಟು ಹೋಗಿರುವ ಸಾಧ್ಯತೆಯೂ ಇದೆ. ಇದರ ನೆನಪಿಗಾಗಿಯೇ ದೇವದುರ್ಗ ತಾಲೂಕಿನ ಅರಿಷಿಣಗಿಯ ಖಾಜಾ ಬಂದೇನವಾಜ ದರ್ಗಾ ಸ್ಥಾಪನೆಯಾಗಿದೆ ಮತ್ತು ದಾರ್ಗದಲ್ಲಿ ಇಂದಿಗೂ ಇರುವ ಅವರ ಚಿಲುಮೆಯನ್ನು ಕುರಿತ ಐತಿಹ್ಯ ಪ್ರಚಲಿತದಲ್ಲಿದೆ.

ಜೇಡರ ದಾಸಿಮ್ಯಯನ ಕುರಿತ ಐತಿಹ್ಯ:-

ಒಮ್ಮೆ ದೇವರದಾಸಿಮಯ್ಯ ನೇಯ್ದ ವಸ್ತ್ರಗಳನ್ನು ನೋಡಿ ಜಂಗಮ ರೂಪದಲ್ಲಿ ಬಂದ ಶಿವನು ಕಾಣಿಕೆಯಾಗಿ ಪಡೆದು ದಾಸಿಮಯ್ಯನ ಭಕ್ತಿಗೆ ಮೆಚ್ಚಿ ಅನುಗ್ರಹಿಸಿದನೆಂಬ ಪ್ರತೀತಿ ಇದೆ. ದಾಸಿಮಯ್ಯ ಸಮಾಜಸೇವೆಯನ್ನು ಮಾಡಿ ಜನತೆಯ ಹಿತಚಿಂತಕನಾಗಿ ಸಾಮಾಜಿಕ ಕ್ರಾಂತಿಯನ್ನೇ ಮಾಡುತ್ತಾನೆ, ವಿಸ್ಮಯಕರವಾದ ಕೆಲವು ಪವಾಡಗಳನ್ನು ಮೆರೆದಿದ್ದಾನೆ. ಪೊಟ್ಟಲಕೆರೆಯಲ್ಲಿ ಘಟ ಸರ್ಪವನ್ನು ಹಿಡಿದು ಶಿವಲಿಂಗ ಮಾಡಿ ಪ್ರತಿಷ್ಠಾಪಿಸಿದ್ದು. ಚಾಲುಕ್ಯ ಜಯಸಿಂಹನ ರಾಣಿ ಸುಗ್ಗಲದೇವಿಗೆ ಶಿವದೀಕ್ಷೆಕೊಟ್ಟಿದ್ದು, ಜೈನರನ್ನು ವಾದದಲ್ಲಿ ಸೋಲಿಸಿದ್ದು ಮುಂತಾದ ಅದ್ಭುತ ಪವಾಡಗಳು ದೇವರದಾಸಿಮಯ್ಯನವರ ಕುರಿತು ಜನಪದರ ಮಧ್ಯೆ ಜನಪ್ರೀಯತೆ ಪಡೆದಿದೆ.[೨೧]

ಜೈನರನ್ನು ವಾದದಲ್ಲಿ ಸೋಲಿಸಿದ ಕುರಿತು ಒಂದು ಪವಾಡ ಕಥೆ ದಾಸಿಮಯ್ಯನ ಚರಿತ್ರೆಯಲ್ಲಿ ಚಿತ್ರಿತವಾಗಿದೆ. ಜೈನ ಮತದವರಿಗೂ ಮತ್ತು ವೀರಶೈವ ಅನುಯಾಯಿ ಹಾಗೂ ದಾಸಿಮಯ್ಯನ ನಡುವೆ ವಾದ ನಡೆಯಿತು. ಜೈನರು ಅದರಲ್ಲಿ ಅಪಜಯರಾಗುತ್ತಾರೆ. ಆಗ ಹೇಗಾದರೂ ಮಾಡಿ ಸೇಡು ತೀರಿಸಿಕೊಳ್ಳಬೇಕೆಂದು ಒಂದು ಉಪಾಯವನ್ನು ಹೂಡುತ್ತಾರೆ. ಕಾಳಸರ್ಪವೊಂದನ್ನು ಹರವಿಯಲ್ಲಿ ಮುಚ್ಚಿಟ್ಟು ಶಿವನು ಸರ್ವವ್ಯಾಪಿ ಎನ್ನುವನು ಇದರಲ್ಲಿ ಆತನಿರುವನೇ, ಎಂದು ಪ್ರಶ್ನೆ ಮಾಡುವರು ಉಂಟು ಹೇಳಿ ದಾಸಿಮಯ್ಯನು ಸಹಜವಾಗಿ ಹರವಿಯಲ್ಲಿ ಕೈ ಹಾಕಿ ಹಾವನ್ನು ಹೊರಗಿ ತೆಗೆಯುವನು ಅದು ಆತನ ಕೈಯಲ್ಲಿ ಅಡಗುವುದು.[೨೨] ಆಗ ಜೈನ ಮತಸ್ಥರು ಸೋಲನೋಪ್ಪಿಕೊಂಡು ಜೈನ ಮತವನ್ನು ತ್ಯಜಿಸಿ ವೀರಶೈವ ಮತವನ್ನು ಸ್ವೀಕರಿಸಿದರು.

ಶ್ರೀ ಮದಪ್ಪ ಪೂಜಾರಿ:-

ಮದಪ್ಪ ಪೂಜಾರಿ ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾಡ್ಯಾಳ ಗ್ರಾಮದವರು. ಇಲ್ಲಿ ಅಮೋಘಸಿದ್ದನ ದೇವಾಲಯವಿದೆ. ಈ ಭಾಗದಲ್ಲಿ ಪ್ರಸಿದ್ಧಿ ಪಡೆದ ಭಕ್ತರಿಗೆ ಪ್ರೀಯವಾದ ಸ್ಥಳವಾಗಿದೆ. ಈ ದೇವಾಲಯದ ಸಿದ್ಧನನ್ನು ಪಟ್ಟಕ್ಕೆ ಹಾಕಿದರು. ಅಂದಿನಿಂದ ಭಕ್ತರ ಕುರಿತು ಚಿಂತೆಗೈಯುವ ವ್ಯಕ್ತಿತ್ವ ಪಡೆದುಕೊಂಡು ಬಂದಿದ್ದರು. ಬಡ ಬಗ್ಗರಿಗೆ ಅವರ ಕಷ್ಟದಲ್ಲಿ ಭಾಗಿಯಾಗುವ ಗುಣಹೊಂದಿದ್ದರು. ಹನ್ನೆರಡು ವರ್ಷಗಳವರೆಗೆ ನಿರಂತರ ಹೇಳಿಕೆ ಹೇಳುವುದು, ಜಾತ್ರೆ, ಮತ್ತೆ ಯಥಾಸ್ಥಿತಿಯಾಗಿ ಇವರು ಪಟ್ಟಕ್ಕೆ ಬಂದ ನಂರ ಪುನಃ ಪ್ರಾರಂಭಗೊಳಿಸಿದರು. ಸಿದ್ಧನ ಹೇಳಿಕೆ ಹೇಳುವ ಮುಖಗಳು ಪ್ರತಿ ಮೂರು ವರ್ಷಕೊಮ್ಮೆ ಮೂರ್ತಿಗೆ ಬಣ್ಣ ಮಾಡಿಸಿಕೊಂಡು ಬರುವ ನೇಮವಿದೆ. ವಿಜಾಪೂರರ ಜಿಲ್ಲೆಯ ತೊನಸಳ್ಳಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿ ಹೇಳಿಕೆ ಹೇಳುವ ಮುಖವನ್ನು ತೆಗೆದುಕೊಂಡು ಹೋಗುವರು. ಈ ಅಮೋಘಸಿದ್ಧ ದೇವಾಯಲಯದ ಪೂಜಾರಿ ಮತ್ತು ಅವರ ಜೊತೆ ಒಬ್ಬ ಭಕ್ತ ತೊನಸಳ್ಳಿ ಗ್ರಾಮದವರೆಗೆ ಕಾಲ ನಡಿಗೆಯಿಂದ ಪ್ರಯಾಣಿಸುವುದು ಇವತ್ತಿಗೂ ರೂಢಿಯಲ್ಲಿರುವುದು ಕಾಣೂತ್ತೇವೆ.

ಅದೇ ರೀತಿ ಶ್ರೀ ಮದಪ್ಪ ಪೂಜಾರಿಯವರು ಪಟ್ಟಕ್ಕೆ ಬಂದ ಕೂಡಲೇ ಅದೇ ವರ್ಷ ಜಾತ್ರೆ ಮತ್ತು ಹೇಳಿಕೆ ಹೇಳುವ ವ್ಯವಸ್ಥೆ ಮಾಡಿದರು. ಮದಪ್ಪಾ ಪೂಜಾರಿ ಮತ್ತು ಶರಣಪ್ಪ ನಿಂಬಾಳ(ಭಕ್ತ) ಇಬ್ಬರು ತೊನಸಳ್ಳಿ ಗ್ರಾಮಕ್ಕೆ ಮೂರ್ತಿ ತೆಗೆದುಕೊಂಡು ಕಾಲನಡಿಗೆಯಿಂದ ಪ್ರಯಾಣ ಬೆಳೆಸಿದರು. ಆ ಸಂದರ್ಭದಲ್ಲಿ ಬೇಸಿಗೆಯ ಊರಿ ಬಿಸಿಲು, ಗುಡ್ಡ-ಗಾಡಿನಲ್ಲಿ ಹಾದಿಮಾಡಿಕೊಂಡು ನಡೆದರು. ಭಕ್ತನಾದ ಶರಣಪ್ಪನಿಗೆ ತುಂಬಾ ಬಾಯರಿಕೆಯಾಯಿತು. ಬಿಸಿಲಿನಿಂದ ಹಾದಿ ಚಾಚದೆ ದಣಿದುಕೊಂಡು ಅಲ್ಲಲ್ಲಿ ಕುಳಿತುಕೊಳ್ಳುತ್ತ ನಡೆದಾಗ, ಆತನ ಸ್ಥಿತಿ ಅರಿತುಕೊಂಡು ಶ್ರೀಮದಪ್ಪಾ ಪೂಜಾರಿ ಹೀಗೇಕೆ ಎಂದೂ ಕೇಳೀದರು. ಬಾಯಾರಿಕೆಯಿಂದ ಶರಣಪ್ಪನಿಗೆ ದಾರಿ ಸಾಗುವುದು ತುಂಬಾ ಕಷ್ಟವಾಯಿತು. ಬಾಯಿ ಅಂಟಿಸಿತು. ಅದಕ್ಕೆ ನನಗೆ ಬಾಯಾರಿಕೆಯಾಗಿದೆ. ಮುಂದೆ ದಾರಿ ನಡೆಯುವುದು ಕಷ್ಟವಾಗಿದೆ ಎಂದು ಪೂಜಾರಿಗೆ ಹೇಳಿದರು. ಮೊದಲೇ ಗುಡ್ಡ ಒಂದು ಹಳ್ಳವಿಲ್ಲ ಬೇಸಿಗೆಯ ಬೀಸಿಲು, ಆಗ ಪೂಜಾರಿಯವರು ಭಕ್ತನಿಗೆ, ಹಾದಿಯಲ್ಲಿ ಹೋಗುವಾಗ ಬಂಡೆಯ ಕಲ್ಲು ತೆಗೆಯಲು ಭಕ್ತನಿಗೆ ಹೇಳಿದರು. ಬಂಡೆಯ ಕಲ್ಲು ತೆಗೆದು ನೋಡಲು ಅದರ ಬುಡದಲ್ಲಿ ನೀರು ಇದ್ದವು. ನೀರಿರುವುದನ್ನು ಕಂಡು ಶರಣಪ್ಪನು ಆಶ್ಚರ್ಯಚಕಿತನಾಗಿ, ನೀರು ಕುಡಿದು ಸಂತೃಪ್ತನಾದನು. ಪೂಜಾರಿಯವರ ಆಗಾಧ ದೈವಶಕ್ತಿಯನ್ನು ಕಂಡು ಬೆರಗಾದನು. ಹೀಗೆ ಅವರ ಅನೇಕ ಪವಾಡಗಳು ಜನಮನದಲ್ಲಿ ಜನಪ್ರಿಯಗೊಂಡಿರುವ ಅವರ ಬದುಕಿನಲ್ಲಿ ನೈಜವಾಗಿ ನಡೆದ ಅನೇಕ ಐತಿಹ್ಯಗಳ ಮೂಲಕ ಅವರ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.[೨೩]

ಕರ್ಜಗಿಯ ಖಾಜಾ ಸೈಫುಲ ಮುಲ್ಕ ಸಂತರು:-

ಬಂಗಾಲದಿಂದ ಬಂದು ಇಲ್ಲಿ ಖಾಜ ಸೈಫುಲ ಮುಲ್ಕರವರು ಕರ್ಜಗಿಯಲ್ಲಿ ನೆಲೆಸಿದರು. ಇಲ್ಲಿಂದ ಹೈದರಗೆ ಹೋಗಿದ್ದರು ಅಲ್ಲಿ ಸಾಯಂಕಾಲ ವಜು ಮಾಡಿ ನಮಾಜ ಮಾಡುವ ಸಂದರ್ಭದಲ್ಲಿ ಪೂಜಾರಿ ಒಬ್ಬ ಕುರಿ ಮೈಸುತ ಬಂದನು ಖಾಜಾ ಸೈಫುಲ ಮುಲ್ಕರು ಅವನಿಗೆ ಮನೆಗೆ ಹೋಗಿ ಊಟ ಮಾಡಿಕೊಂಡು ಬಾ ಎಂದರು ಪೂಜಾರಿ ನನ್ನ ಕುರಿಗಳು ಹೇಗೆ ಎಂದಾಗ ನಾನು ನೊಡಿಕೊಳ್ಳುವೆನೆಂದು ಹೆಳಿದರು. ಪೂಜಾರಿ ಬರುವವರೆಗೆ ಆತ ನಮಾಜ ಮಾಡಿ ಅಲ್ಲಿಯೇ ಐಕ್ಯ ಆಗಿದ್ದರು. ಆದರೆ ಕುರಿಗಳು ನಮಾಜ ಮಾಡುವ ಸಂದರ್ಭದಲ್ಲಿ ಅಲ್ಲಿಯೇ ಕುಳಿತಿದ್ದವು ಲಿಂಗಕ್ಯನಾದ ಸಂತನ ಸಮಾದಿಯ ಮೇಲೆ ಹೂವುಗಳಿದ್ದವು.

ಯಲ್ಲಾಲಿಂಗ ಮಹಾರಾಜರು ಇವರ ಸಮಕಾಲಿನವರು ಹಿಂದು ಮುಸ್ಲಿಂಮರ ಭಾವ್ಯಕತೆಯನ್ನು ಇಲ್ಲಿ ಕಾಣುತ್ತೆವೆ. ಕರ್ಜಿಗಿಯ ಯಲ್ಲಾಲಿಂಗ ಮಠವಿದೆ ಇದರ ಜಾತ್ರೆಯಾಗಬೇಕಾದರೆ ಮುಗಳಖೋಡದಿಂದ ೨ ಮರಿ ಬ್ಯಾಟಿ ಖಾಜಾ ಸೈಫುಲ ಮುಲ್ಕರ ದರ್ಗಾಕ್ಕೆ ಅರ್ಪಿಸಿದ ನಂತರವೆ ಯಲ್ಲಾಲಿಂಗರ ಜಾತ್ರೆ ಪ್ರಾರಂಭವಾಗುತ್ತದೆ. ಜಾತ್ರೆ ಸಂದರ್ಭದಲ್ಲಿ ಯಲ್ಲಾಲಿಂಗ ಗುಡಿಯ ಧ್ವಜ ಖಾಜಾ ಸೈಫುಲ ಮುಲ್ಕರ ದರ್ಗಾಕ್ಕೆ ಬರುತ್ತದೆ. ದರ್ಗಾಗದ ಜಾತ್ರೆ ಸಂದರ್ಭದಲ್ಲಿ ಇಲ್ಲಿನ ಧ್ವಜ ಮಠಕ್ಕೆ ಹೊಗುತ್ತದೆ. ಇದು ಹಿಂದು ಮುಸ್ಲಿಂಮರ ಭಾವ್ಯಕ್ಯತೆಯನ್ನು ತೋರಿಸುತ್ತದೆ.

ಯಲ್ಲಾಲಿಂಗ ಮಹಾರಾಜರ ಮಠ ಕರ್ಜಗಿ:-

೧೯೩೩ರಲ್ಲಿ ಮಿರಗಿ ಇಂಡಿ ತಾಲೂಕಿನಿಂದ ಕರ್ಜಗಿಗೆ ಬಂದರು. ಇಲ್ಲಿ ೪೦ ವರ್ಷವಿದ್ದರು ಇಲ್ಲಿಂದ ಅವರು ಲಚ್ಚಾಣಕ್ಕೆ ಹೋದರು. ಇಲ್ಲಿ ಇವರಿಗೆ ಶ್ರೀ ಸಿದ್ದಲಿಂಗ ಮಹಾರಾಜರಿಂದ ಪರೀಕ್ಷೆನಡೆಯಿತು. ಅದೇನೆಂದರೆ ಯಲ್ಲಾಲಿಂಗ ಮಹಾರಾಜರನ್ನು ೩ ದಿವಸ ನೆಲದಲ್ಲಿ ಹೊತ್ತಿಟ್ಟರು ಆ ಮೇಲೆ ಅಗೆದು ನೋಡಿದರೆ ಅವರು ದೇವರ ನಾಮಸ್ಮರಣೆಯಲ್ಲಿದ್ದರು. ಅವಾಗ ಸಿದ್ದಲಿಂಗ ಮಹಾರಾಜರು ಯಲ್ಲಾಲಿಂಗರನ್ನು ಶಿಷ್ಯರಾಗಿ ಸ್ವಿಕರಿಸಿದರು.

ಶ್ರೀ ಸಿದ್ಧಲಿಂಗ ಮಹಾರಾಜರು ಕೆಲವು ದಿನಗಳ ನಂತರ ಯಲ್ಲಾಲಿಂಗ ಮಹಾರಾಜರನ್ನು ಒಂದು ರಾತ್ರಿ ಒಂದು ಹಗಲು ನಡೆದುಕೊಂಡು ಹೊಗಲು ಹೆಳಿದರು ನಂತರ ಎಲ್ಲಿ ನಿನು ನಿಂತಿರುವೆ ಅದುವೆ ನಿನ್ನ ಸ್ಥಾನ ಎಂದು ಹೆಳಿದರು. ಆ ಸ್ಥಾನ ಸ್ಮಶಾನ ಅದು ಮುಂದೆ ಮುಗಳ ಖೊಡವಾಯಿತು. ಸ್ಮಶಾನ ಅವರ ವಾಸಸ್ಥಾನವಾದರಿಂದ ಜನರು ಅವರನ್ನು ಒಪ್ಪಿಕೊಂಡಿರುವುದಿಲ್ಲ. ಮೊದಲು ಬ್ರಾಹ್ಮಣರು ಸಹಕಾರ ನಿಡಿದರು ಒಂದು ಎಕರೆ ಹೋಲ ಖರಿದಿಸಿನಿಡಿದರು ಯಲ್ಲಾಲಿಂಗ ಮಹಾರಾಜರು ಮುಗಳಖೊಡ ಊರಿನ ಜನರಿಗೆ ಮತ್ತು ಕೊಳಿಗುಡ್ಡದವರಿಗೆ(ಇದು ಒಂದು ಅಲ್ಲೆ ಬರುವ ಊರು) ಗಂಗಮ್ಮ ತಾಯಿ ಬರುತ್ತಾಳೆ ಎಂದು ಹೆಳಿದರು ಅವರು ಹೆಳಿದಂತೆ ನಿರು ಬಂದು ಹಿಡಕಲ್ಲ ಡ್ಯಾಮ ಕಟ್ಟಿಸಿದರು. ಕಟ್ಟಿಸಿದ್ದು ಸರ್ಕಾರ ಗಂಗಮ್ಮ ತಾಯಿ ಬರುತ್ತಾಳೆ ಎಂದು ಭಿವಿಷ್ಯ ನುಡಿದಿದ್ದರು ಅದರಂತೆ ಆಗಿ ಮುಂದೆ ಕೊಳಿ ಗುಡ್ಡ ಜನರು ಸಂತೋಷದಿಂದ ಜೀವನ ನಡೆಸಿದರು.[೭೪]

೫.೩ ಘಟನಾ ಪ್ರಧಾನ ಐತಿಹ್ಯಗಳು:-

ಐತಿಹ್ಯಗಳು ಜನ್ಮ ತಾಳುವುದಕ್ಕೆ ಮುಖ್ಯವಾಗಿ ಘಟನೆಯ ಪಾತ್ರ ತುಂಬಾ ಅನಿವಾರ್ಯವಾಗಿ ಬೇಕಾಗುವುದು. ಯಾವುದೋ ಒಂದು ಘಟನೆಯ ಮೂಲಕ ಅದಕ್ಕೆ ಒಂದು ಕಳೆ ಬರುತ್ತದೆ. ಹಾಗೂ ಐತಿಹ್ಯಗಳು ಆಗ ರೂಪಗೊಳ್ಳಲು ಸಾಧ್ಯವಾಗುತ್ತದೆ. ಘಟನೆ ಪ್ರಧಾನವಾಗಿಟ್ಟುಕೊಂಡಾಗ ಮಾತ್ರ ಅದರ ಪ್ರಾರಂಭದ ವಸ್ತು ಸ್ಥಿತಿಯನ್ನು ನೈಜವಾಗಿ ಪ್ರಚುರ ಪಡಿಸುತ್ತದೆ. ಸಮಾಜದ ದೃಷ್ಟಿಯಲ್ಲಿ ಘಟನಾ ಐತಿಹ್ಯವು ತುಂಬಾ ವ್ಯಾಪಕವಾಗಿ ಬಳಕೆಗೊಂಡು ಪ್ರಸಾರಗೊಳ್ಳುತ್ತಾ ನಡೆಯುತ್ತದೆ. ಪ್ರತ್ಯೇಕವಾಗಿ ಅವುಗಳ ಕುರಿತು ಸ್ಥೂಲವಾಗಿ ಐತಿಹ್ಯಗಳನ್ನು ಸಮೀಕ್ಷಿಸುವಂಥದ್ದು ತುಂಬಾ ಉಪಯುಕ್ತವಾದುದ್ದು. ಘಟನೆ ಎಂದಾಗ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆದಿರಬಹುದು, ಅಥವಾ ಒಂದು ಗುಂಪಿನ ನಡುವೆ ಸಂಘರ್ಷ ನಡೆದಿರಬಹುದು. ಒಟ್ಟಾರೆ ಅದು ಜನರ ಮಧ್ಯೆ ನಡೆದಿರುವ ಘಟನೆಯೊಂದು ಘಟನಾ ಐತಿಹ್ಯಗಳಿಗೆ ಹೊರ ಹೊಮ್ಮುತ್ತವೆ. ಈ ಮಾದರಿಯಲ್ಲಿ ಐತಿಹ್ಯಗಳು ಹೆಚ್ಚಾಗಿ ಲಭಿಸುತ್ತವೆ. ಚರಿತ್ರೆಯನ್ನು ನೋಡಿದಾಗ ಹರಿಹರ ಮತ್ತು ರಾಘವಾಂಕರ ನಡುವೆ ಸಂಘರ್ಷದಲ್ಲಿ ರಾಘವಾಂಕನ ದಂತಭಗ್ನಗೊಂಡಿದ್ದು, ಘಟನಾ ಐತಿಹ್ಯವಾಗಿ ಪರಿಣಮಿಸುತ್ತದೆ. ಒಟ್ಟಾರೆ ಘಟನಾ ಸಂಬಂಧಿ ಐತಿಹ್ಯಗಳು ಜನರ ಮೌಲ್ಯಗಳಾಗಿ

ಬಳಕೆಗೊಂಡಿವೆ. ಸದಾ ಅವರ ಅಭಿರುಚಿ ಅಪೇಕ್ಷೆಗಳ ಮೇರೆಗೆ ಹೊರ ಹೊಮ್ಮುತ್ತವೆ. ಜನರ ಬದುಕಿನ ಸಮಗ್ರ ಚರಿತ್ರೆಯನ್ನು ಇವು ಸ್ಪಷ್ಟವಾಗಿ ಕಲ್ಪಿಸಿಕೊಡುವ ಪ್ರಯತ್ನ ಮಾಡುತ್ತವೆ.

ಸುಲೇಪೇಟದ ವೀರಭದ್ರನ ಸ್ಥಾಪನೆ ಬಗ್ಗೆ ಇರುವ ಐತಿಹ್ಯ:-

ಸುಲೇಪೇಟ ಇರುವುದು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಕಲಬುರಗಿಯಿಂದ ಸುಮಾರು ೭೪ ಕಿ.ಮೀ. ಹಾಗೂ ಚಿಂಚೋಳಿಯಿಂದ ೧೨ ಕಿ.ಮೀ ದೂರದಲ್ಲಿ ನೈಋತ್ಯ ದಿಕ್ಕಿಗಿರುವ ಪ್ರಮುಖ ಐತಿಹಾಸಿಕ ವಾಣಿಜ್ಯ ಕೇಂದ್ರ ಇಂತಹ ಪ್ರಸಿದ್ಧ ಹಾಗೂ ಐತಿಹಾಸಿಕ ಊರಿನ ಆರಾಧ್ಯ ದೇವರು ಶ್ರೀ ವೀರಭದ್ರೇಶ್ವರರು. ಶ್ರೀ ವೀರಭದ್ರೇಶ್ವರರು ಕೇವಲ ಪುರಾಧೀಶ್ವರ ಅಷ್ಟೇ ಅಲ್ಲ. ಈ ಭಾಗದ ಅಪಾರ ಭಕ್ತರನ್ನು ಹೊಂದಿರುವ ಅಧಿದೈವ. ಪೌರಾಣಿಕ ಹಾಗೂ ವೀರಶೈವ ಧಾರ್ಮಿಕ ಕಾವ್ಯಗಳಲ್ಲಿ ಹೊರ ಹೊಮ್ಮಿದ, ದಕ್ಷ ಯಜ್ಞದ ಪ್ರಮುಖ ಘಟದಲ್ಲಿ ಶಿವ ಪಾರ್ವತಿಯರ ಅಣತಿಯನ್ನು ಶಿರಸಾವಹಿಸಿದ ಮಹಾನಾಯಕ. ಶ್ರೀವೀರಭದ್ರೇಶ್ವರರ ಮಹಿಮೆಯನ್ನು ಹರಿಹರನ ಗಿರಿಜಾಕಲ್ಯಾಣ, ಶಿವಪುರಾಣ, ಮುಂತಾದ ವೀಶೈವ ಕೃತಿಗಳಲ್ಲಿ ಕಾಣಬಹುದಾಗಿದೆ. ಹಿರಿಯರು ಹೇಳುವಂತೆ ಈಗ ಗರ್ಬಗೃಹದಲ್ಲಿರುವ ಮೂಲ ಮೂರ್ತಿಯ ಇತಿಹಾಸ ಹಾಗೂ ಸ್ಥಾಪನೆಯ ಬಗೆಗೆ ಇರುವಂತಹ ಒಂದು ಐತಿಹ್ಯ ಈ ರೀತಿಯಾಗಿದೆ. ಈ ದೇವಾಲಯದಲ್ಲಿರುವ ಮುರ್ತಿಯು ಯಾವುದೋ ಘಳಿಗೆಯಲ್ಲಿ ಮಂತ್ರ ತಂತ್ರಾದಿ ದುಷ್ಟ ವಿದ್ಯೆಗಳ ಪ್ರಭಾವದಿಂದಾಗಿ ಬಾವಿಗೆ ಬಂದದ್ದು, ಮಂತ್ರವಾದಿಗಳ ಕಾರ್ಯಗಳಿಗೆ ಅಡ್ಡಿಯಾಗಬಾರದೆಂದು ಭಾವಿಸಿದ ಅವರು ಶ್ರೀ ವೀರಭದ್ರೇಶ್ವರ ಮೂರ್ತಿಯನ್ನು ಚಿಂಚೋಳಿ ತಾಲೂಕಿನ ಸುಲೇಪೇಟ ಮತ್ತು ರಾಮತೀರ್ಥದ ನಡುವೆ ಹರಿಯುವ ಹಳ್ಳದ ದಡದಲ್ಲಿರುವ ಬಾವಿ (ಗುಂಡದಲ್ಲಿ)ಯಲ್ಲಿ ಹಾಕಿ ಹೋಗಿದ್ದರು.

ಪ್ರಾಯಶಃ ನೂರಾರು ವರ್ಷಗಳ ಹಿಂದೆಯೇ ಈ ಘಟನೆ ನಡೆದಿರಬಹುದು, ತದನಂತರದ ದಿನಗಳಲ್ಲಿ ಈ ಸುಲೇಪೇಟ ಊರಿನ ಹರದೂರ ಎಂಬ ಮನೆತನದ ವ್ಯಕ್ತಿ ವ್ಯಾಪಾರಕ್ಕಾಗಿ ಅಂದು ಆ ಮಾರ್ಗದಲ್ಲಿ ವಿಹರಿಸುತ್ತಿದ್ದ, ಪ್ರತಿದಿನ ಆ ಬಾವಿಯಲ್ಲಿಯೇ ಸ್ನಾನ ಮಾಡುತ್ತಿದ್ದನು. ಕೆಳಮುಖವಾಗಿ ಬಿದ್ದಂತಹ ಮೂರ್ತಿಯ ಮೇಲೆಯೇ ಕುಳಿತು ಆ ಹರದೂರ ಮನೆತನದ ವ್ಯಕ್ತಿ ಪ್ರತಿ ನಿತ್ಯ ಸ್ನಾನ ಹಾಗೂ ಬಟ್ಟೆ ಶುಭ್ರಗೊಳಿಸಿಕೊಳ್ಳಲು ಹೋಗುತ್ತಿದ್ದ. ವಿಪರ್ಯಾಸವೆಂದರೆ ತನಗರಿವಿರದೇ ಕೆಳಮುಖವಾಗಿ ಬಿದ್ದ ಮೂರ್ತಿಯ ಇನ್ನೊಂದು ಮಗ್ಗಲು ಮೇಲೆಯೇ ಬಟ್ಟೆಯನ್ನು ಸ್ವಚ್ಛ ಗೊಳಿಸಿಕೊಂಡು. ವ್ಯಾಪಾರ ಮುಗಿಸಿಕೊಂಡು ಸುಲೇಪೇಟಕ್ಕೆ ಬರುವ ನಿತ್ಯದ ನಿಯಮವನ್ನು ರೂಢಿಸಿಕೊಂಡಿದ್ದನು. ಆದರೆ ಒಂದು ದಿನ ಆ ವ್ಯಕ್ತಿಗೆ ಆಶ್ಚರ್ಯ ಕಾದಿತ್ತು. ಎಂದಿನಂತೆ ತಾನು ಬಟ್ಟೆಯನ್ನು ಶುಚಿಗೊಳಿಸುವ ಸಂದರ್ಭದಲ್ಲಿ ಹಾಗಾಗಲಿಲ್ಲ. ಒಂದು ಆಶಿರ್ವಾಣಿ ಆ ಬಾವಿಯಿಂದ ಹೊರ ಹೊಮ್ಮುತ್ತದೆ. ಅದೇನೆಂದರೆ "ನಾನು ಬರುತ್ತೇನೆ, ನನ್ನನ್ನು ಕರೆದುಕೊಂಡು ಹೋಗು" ಎಂದು. ಆಗ ಆ ವ್ಯಕ್ತಿ "ನೀನು ಯಾರು?" ಎಂದು ಕೇಳಿದಾಗ "ನಾನು ಶ್ರೀ ವೀರಭದ್ರೇಶ್ವರನಿದ್ದೇನೆ" ಎಂದಾಗ ಚಕಿತಗೊಂಡ ವ್ಯಕ್ತಿ "ಈಗ ಎಲ್ಲಿರುವೇ?" ಎಂದು ಮರುನುಡಿದಾಗ "ನೀನು ಬಟ್ಟೆ ಶುಚಿಗೊಳಿಸುತ್ತಿರುವ ಶಿಲೆ ಇನ್ನೊಂದು ಮಗ್ಗುಲಲ್ಲಿರುವೆ" ಎಂದಾಗ ವ್ಯಕ್ತಿಗೆ ಆಶ್ಚರ್ಯವಾಗಿ ಊರಿಗೆ ಬಂದು ಮುಖಂಡರಿಗೆ ಈ ವಿಷಯವನ್ನು ಅರುಹುತ್ತಾನೆ.

ಆಗ ಊರ ಪ್ರಮುಖರು ದೇವರನ್ನು ಊರಿಗೆ ಹೇಗೆ ಕರೆದುಕೊಂಡು ಬರಬೇಕೆಂಬ ವಿಚಾರವನ್ನು ಚರ್ಚಿಸಿ ಆ ವ್ಯಕ್ತಿಗೆ ಮುರುದಿನ ಮತ್ತೆ ಆ ಮೂರ್ತಿಯಿಂದ ಬಂದ ಆಶಿರ್ವಾಣಿ ಆಧಾರದಿಂದ ಮೂರ್ತಿಯನ್ನು ಸುಲೇಪೇಟಕ್ಕೆ ತರುವ ಕ್ರಿಯೆಗೆ ಚಾಲನೆ ನೀಡುತ್ತಾರೆ. ಎರಡು ವಡ್ಡರ ಬಂಡಿಗಳನ್ನು ಸಿದ್ಧಪಡಿಸಿಕೊಂಡು ಹೋಗಿ ಆ ಮೂರ್ತಿಯನ್ನು ಬಂಡಿಯಲ್ಲಿ ಸಾಗಿಸುವ

ಸಂದರ್ಭದಲ್ಲಿ ಆ ಬಾವಿ ರಾಮತೀರ್ಥ ಊರಿನ ಸರಹದ್ದಿನಲ್ಲಿ ಬರುವದರಿಂದ ಆ ಊರಿನ ಜನರು ನಾವು ಶ್ರೀ ವೀರಭದ್ರೇಶರ ಮೂರ್ತಿಯನ್ನು ಇಲ್ಲಿಂದ ಬೇರೆಡೆಗೆ ಹೋಗಲು ಬಿಡುವುದಿಲ್ಲವೆಂದು ಪ್ರತಿಭಟಿಸಿ, ಹದಿನಾರು ಎತ್ತುಗಳನ್ನು ಬಂಡಿಗೆ ಕಟ್ಟಿ ಮೂರ್ತಿಯನ್ನು ರಾಮತೀರ್ಥಕ್ಕೆ ಕೊಂಡೊಯ್ಯಲು ಪ್ರಯತ್ನಿಸಿದರು. ಆಗ ಆ ಹದಿನಾರು ಎತ್ತುಗಳ ಬಂಡಿಯನ್ನು ಸಿದ್ಧಪಡಿಸಿ ದೇವರನ್ನು ಒಯ್ಯಲು ಪ್ರಯತ್ನಿಸಿದಾಗ ಆ ಬಂಡಿಯು ಒಂದು ಹೆಜ್ಜೆಯೂ ಸಹ ಅಲುಗಾಡದೆ ಮುಂದೆ ಸಾಗುವುದಿಲ್ಲ. ಆಗ ರಾಮತೀರ್ಥದ ಜನರು ತಾವು ಹಿಡಿದ ಪಟ್ಟನ್ನು ಸಡಿಲಿಸಿ "ದೇವರಿಗೆ ನಮ್ಮೂರಿಗೆ ಬರುವ ಮನಸ್ಸಿಲ್ಲವೆಂದು ತೋರುತ್ತದೆ. ಆದ್ದರಿಂದ ಸುಲೇಪೇಟದವರು ದೇವರನ್ನು ತಮ್ಮ ಊರಿಗೆ ಕೊಂಡೊಯ್ಯಲು ಆಗಮಿಸಿದ್ದಾರೆ ಅವರಾದರೂ ಕೊಂಡೊಯ್ಯಲಿ" ಎಂಬ ತೀರ್ಮಾನಕ್ಕೆ ಬರುತ್ತಾರೆ. ಇಂದಿಗೂ ಸಹ ರಾಮತೀರ್ಥ ಊರಿನ ಜನರು ಭಕ್ತಿಯಿಂದ ಶ್ರೀ ವೀರಭದ್ರೇಶ್ವರ ಜಾತ್ರೆಗೆ ಆಗಮಿಸಿ ಪಾಲ್ಗೊಳ್ಳುದನ್ನು ಕಾಣಬಹುದು.

ಕೋಣಗಳಿಂದ ಕೂಡಿದ ವಡ್ಡರ ಬಂಡಿಗೆ ಮೂರ್ತಿ ಏರಿದ ತಕ್ಷಣವೇ ಬಂಡಿಯು ಸರಾಗವಾಗಿ, ಯಾವ ಅಡೆತಡೆಯಿಲ್ಲದೆ, ವೇಗದಿಂದ ಸುಲೇಪೇಟ ಸೇರಿ ಊರಿನ ದೇಗುಲದ ಹತ್ತಿರ ಸಮೀಪಿಸಿದಂತೆ ಆ ಬಂಡಿಯ ಅಚ್ಚು ಮುರಿಯುತ್ತದೆ. ಆಗ ಅಲ್ಲಿಯೇ ಬಂಡಿ ನಿಂತಾಗ ಸಮೀಪದ ದೇಗುಲದಲ್ಲಯೇ ಶ್ರೀ ವೀರಭದ್ರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ಆಗ ಶ್ರೀವೀರಭದ್ರೇಶ್ವರರು ಶಾಶ್ವತವಾಗಿ ಇಲ್ಲಿಯೇ ನಿಲೆನಿಂತರು ಎಂಬ ಪುರಾತನ ಕಾಲದ ಮಾಹಿತಿ ಇಂದಿಗೂ ಇಲ್ಲಿನ ಹಿರಿಯರಲ್ಲಿ ಜನಜನಿತವಾಗಿದೆ. ಅಂದಿನಿಂದ ಇಂದಿನವರೆಗೂ ಜರುಗುವ ಉತ್ಸವ ಮೂರ್ತಿಯ ಮೆರವಣಿಗೆಯ ಸಂದರ್ಭದಲ್ಲಿ ಆ ಹರದೂರ ವ್ಯಕ್ತಿಯ ಮನೆತನದವರು ಪಾಲ್ಗೊಳ್ಳುವದನ್ನು ಕಾಣಬಹುದಾಗಿದೆ.[೨೪]

ಸುಗೂರಿನ ಭತ್ತದ ಐತಿಹ್ಯ:-

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕಾಳಗಿಯಿಂದ ಐದು ಕಿ. ಮೀ. ದೂರದಲ್ಲಿ ಬೆಟ್ಟಗಳಿಂದ ಸುತ್ತುವರೆದು ನಿಂತಿರುವ ಸೂಗೂರ ಎಂಬ ಒಂದು ಸುಂದರ ಗ್ರಾಮವಿದೆ. ಅಲ್ಲೊಂದು ವೆಂಕಟೇಶ್ವರ ಸ್ವಾಮಿಯ ಪುರಾತನ ದೇವಸ್ಥಾನವಿದೆ. ಭಾರತದ ವಿವಿಧೆಡೆಗಳಲ್ಲಿರುವ ಹಲವಾರು ವೆಂಕಟೇಶ್ವರ ದೇವಸ್ಥಾನಗಳಲ್ಲಿ ಸುಗೂರ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನ ಹೆಚ್ಚಿನ ಮಹತ್ವ ಹೊಂದಿದೆ. ಈ ದೇವಸ್ಥಾನದ ಧಾರ್ಮಿಕ ಮಹತ್ವವನ್ನು ಗುರುತಿಸಿರುವ ತಿರುಮಲ ತಿರುಪತಿಯ ಹಾಥಿರಾಮಜಿ ಮಠದ ಪದಾಧಿಕಾರಿಗಳು ಇದನ್ನು ಕಳೆದ ಆರು ವರ್ಷಗಳ ಹಿಂದೆ ತಮ್ಮ ಮಠದ ಆಡಳಿತ ವ್ಯಾಪ್ತಿಗೆ ತೆಗೆದುಕೊಂಡು ದೇವಸ್ಥಾನದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ.

ಇಲ್ಲಿನ ವೆಂಕಟೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ ಬೆಟ್ಟವೊಂದರಲ್ಲಿ ಸುಮಾರು ಒಂದು ಕಿ.ಮೀ. ದೂರದಲ್ಲಿ ಬಿತ್ತದೇ ಬೆಳೆಯುವ ವಿಸ್ಮಯ ಭತ್ತದ ಗದ್ದೆ ಇದೆ. ಆಶ್ಚರ್ಯವೆಂದರೆ 'ಸುವರ್ಣಗಿರಿ' ಎಂದು ಕರೆಯಲ್ಪಡುವ ಈ ಬೆಟ್ಟದಲ್ಲಿ ಸುಮಾರು ಆರು ಎಕರೆಯಷ್ಟು ಜಾಗದಲ್ಲಿ ಪ್ರತಿ ವರ್ಷವೂ ಹುಲುಸಾದ ಭತ್ತ ಬೆಳೆಯುತ್ತದೆ. ಅದನ್ನು ಯಾರೂ ಬಿತ್ತುವುದಿಲ್ಲ ಮತ್ತು ಯಾವುದೇ ರೀತಿಯ ಔಷದೋಪಚಾರವನ್ನೂ ಮಾಡುವುದಿಲ್ಲ. ಆದರೂ ಸಮೃದ್ಧವಾಗಿ ಬೆಳೆದು ಪ್ರತಿವರ್ಷ ಒಂದರಿಂದ ಒಂದೂವರೆ ಚೀಲದಷ್ಟು ಫಸಲು ಬರುತ್ತದೆ. ಇಲ್ಲಿನ ಭತ್ತವನ್ನು ಬೇರೆಯವರ ಗದ್ದೆ ಅಥವಾ ತೋಟದಲ್ಲಿ ಬಿತ್ತಿದರೆ ನಾಟುವುದಿಲ್ಲ. ಒಂದು ವೇಳೆ ಯಾರಾದರೂ ಈ ಭತ್ತವನ್ನು ತಮ್ಮ ಹೊಲ ಗದ್ದೆಗಳಲ್ಲಿ ಬಿತ್ತಿ ಬೆಳೆಯಲು ಪ್ರಯತ್ನಿಸಿದರೆ ಅವರಿಗೆ ಕೇಡಾಗುತ್ತದೆ ಎಂಬುದು ಇಲ್ಲಿನ ಜನರ ನಂಬಿಕೆ.

ಈ ಭತ್ತದಿಂದ ಬರುವ ಅಕ್ಕಿ ಕಾಳುಗಳು ಕೆಂಪು, ಬಿಳಿ ಮತ್ತು ಹಸಿರು ಬಣ್ಣಗಳಿಂದ ಕೂಡಿರುತ್ತವೆ. ಮತ್ತು ಅವುಗಳ ಮೇಲೆ ಮೂರು ಗೆರೆಗಳಿರುತ್ತವೆ ಎಂಬುದು ಮತ್ತೊಂದು ವಿಶೇಷ. ಈ ಭತ್ತದ ರಾಶಿಯನ್ನು ಪ್ರತಿವರ್ಷ ಇಲ್ಲಿ ನಡೆಯುವ ಏಕಾದಶಿ ಮತ್ತು ದ್ವಾದಶಿ ಸಂದರ್ಭದಲ್ಲಿ ವೆಂಕಟೇಶ್ವರ ಸ್ವಾಮಿಗೆ ನೈವೇದ್ಯ ಅರ್ಪಿಸಿದ ನಂತರ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಿಸಲಾಗುತ್ತದೆ.

ಭತ್ತದ ಹಿನ್ನೆಲೆ:-

ಸುವರ್ಣಗಿರಿ ಎಂದು ಕರೆಯಲಾಗುವ ಈ ಬೆಟ್ಟದಲ್ಲಿ ಸಾವಿರಾರು ವರ್ಷಗಳ ಹಿಂದೆ ಋಷಿ ಮುನಿಗಳು ತಪಸ್ಸು ಮಾಡುತ್ತಿದ್ದರು. ತಮ್ಮ ಪ್ರಸಾದಕ್ಕಾಗಿ ಮೊದಲು ಅವರೇ ಈ ಭತ್ತವನ್ನು ಬೆಳೆದಿದ್ದರು. ಅವರು ಅಂದು ಬೆಳೆದಿದ್ದ ಜಾಗದಲ್ಲಿ ಅದೇ ಭತ್ತ ಇಂದಿಗೂ ಪ್ರತಿವರ್ಷ ನಾಟುತ್ತಿದೆ ಎನ್ನುತ್ತಾರೆ ಗ್ರಾಮದ ಹಿರಿಯರು. ಋಷಿಮುನಿಗಳ ಕಾಲದಲ್ಲಿ ಇಲ್ಲಿ ಬೆಳೆದ ಭತ್ತದಿಂದ ಮೊದಲು ವೆಂಕಟೇಶ್ವರ ಸ್ವಾಮಿಗೆ ನೈವೇದ್ಯ ಅರ್ಪಿಸಿದ ನಂತರ ಋಷಿಗಳು ಮತ್ತು ಭಕ್ತರು ಪ್ರಸಾದ ಸ್ವೀಕರಿಸುತ್ತಿದ್ದರು. ಈಗಲೂ ಪ್ರತಿವರ್ಷ ಇದೇ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ.[೭೫]

ಕೂಡ್ಲಿಯ ಹನುಮಂತ ನೆಲೆನಿಂತ ಐತಿಹ್ಯ:-

ಗುಡ್ಡದ ಕೆಳಗೆ ಬೇಡರ ಹೋಲವಿತ್ತು ಅದರ ಊಳಿಮೆ ಮಾಡುತ್ತಿದರು ಊಳಿಮೆ ಮಾಡುವ ಸಂದರ್ಭದಲ್ಲಿ ಗಳ್ಯಾ ಹೊಡೆಯುವ ಸಂದರ್ಭದಲ್ಲಿ ಒಂದು ಕಲ್ಲ ಗುಂಡನ್ನು ನೆಗಿಲ ಮೇಲೆ ಇಟ್ಟು ನೆಗಿಲ ಹೊಡೆಯುತ್ತಿದ್ದರು. ನಂತರ ಆ ಕಲ್ಲನ್ನು ಅಲ್ಲೆ ಬಿಟ್ಟು ಹೋಗುತ್ತಿದ್ದನು. ಮುಂಜಾನೆ ಬಂದು ನೋಡಿದಾಗ ಆ ಕಲ್ಲು ತನ್ನ ಮೂಲ ಸ್ಥಾನಕ್ಕೆ ಹೋಗುತ್ತಿತ್ತು. ಹೀಗೆ ೨, ೩ ತಿಂಗಳು ಮುಂದುವರಿಯಿತು ಒಂದು ದಿವಸ ಊರಿನ ದೆಸಾಯಿ ಹಾಗು ಹಿರಿಯರನ್ನು ಹೇಳಿದನು. ಅವರು ಕೂಡ ಪರೀಕ್ಷಿಸಲೆಂದು ಬಂದು ಕಲ್ಲನ್ನು ನೆಗಿಲ ಮೇಲೆ ಇಟ್ಟು ಹಗ್ಗದಿಂದ ಕಟ್ಟಿದರು ಜೊತೆಗೆ ತಂತಿಯಿಂದಲು ಬಿಗಿದರು. ಆ ಬೇಡರವನನು ತಮ್ಮ ಜೊತೆಗೆ ಕರೆದುಕೊಂಡು ಹೋದರು. ಆ ರಾತ್ರಿ ಬೇಡನು ಕೂಡ ಅವರ ಜೊತೆಗೆ ಕಳೆದನು. ಮರುದಿನ ಹೋಗಿ ನೋಡಿದರೆ ಆ ಕಲ್ಲು ಮತ್ತೆ ಪುನಃಹ ತನ್ನ ಮೂಲ ಸ್ಥಾನಕ್ಕೆ ಹೋಗಿ ಕೂಳಿತಿತ್ತು. ಆಗ ಮತ್ತೆ ಪರೀಕ್ಷಸಲು ಮುಂದಾದರೆ ರಾತ್ರಿ ಆ ಕಲ್ಲನು ನೆಗಿಲ ಮೇಲೆ ಇಟ್ಟರು ಅವರುಗಳು ಗಿಡದ ಮರಿಯಲ್ಲಿ ನಿಂತು ಕೊಂಡುರು ಅವರಿಗೆ ಕಾಣದ ಹಾಗೆ ಬಂದು ಅದು ತನ್ನ ಮೂಲ ಸ್ಥಾನದಲ್ಲಿ ನೆಲೆಸಿತು.

ಇದರಿಂದ ಆಶ್ಚರ್ಯಚಕಿತರಾದ ಅವರು ಆ ಕಲ್ಲನು ಕೆಳಿಕೊಂಡರು ನೀಯಾರಪ್ಪಾ ನೀಯಾರು ದಿಯಾ ಎಂದು ಕೇಳಿದಾಗ ನಾನು ಹನುಮಂತನಿದೆನೆ ಎಂದು ಆ ಊರಿನ ದೆಸಾಯಿಗೆ ಕನಸಿನಲ್ಲಿ ಬಂದು ಹೇಳಿದನು ಆ ಕಲ್ಲನ್ನು ಹೊತ್ತು ಕೊಂಡು ಹೋಗು ನಾನು ಎಲ್ಲಿ ನಿಲ್ಲಿಸುತ್ತನೆ ಅಲ್ಲಿ ನನನ್ನು ಪ್ರತಿಷ್ಟಾಪಿಸು ಎಂದು ಹೇಳಿತು ಅದರಂತೆ. ದೇಸಾಯಿ ಮರುದಿನ ಮಡಿಯಿಂದ ಬಂದು ಜೊತೆಗೆ ಊರಿನ ಜನರು ಕೂಡ ಇದ್ದರು. ಆ ಕಲ್ಲನ್ನು ತಲೆಯ ಮೇಲೆ ಹೊತ್ತು ಕೊಂಡು ನಡೆಯತೊಡಗಿದ ಅಣ್ ಮೇಲೆ ನಿಂತನು ಮುಂದೆ ಹೊಗಲಾರದೆ ಅಲ್ಲೆ ನಿಂತಾಗ ಕನಸಿನಲ್ಲಿ ಹೇಳಿದ ಮಾತು ನೆನಪಾಗಿ ಅಲ್ಲೆ ಅದನ್ನು ಪ್ರತಿಷ್ಟಾಪಿಸಿದರು. ಹೀಗೆ ಹನುಮಂತನ ದೇವಾಲಯ ಸ್ಥಾಪನೆಯಾಯಿತು.[೭೬]

ಜೋಳದ ಬಣವು ಶಾಪದಿಂದ ಕಲ್ಲಾಗಿದ್ದು:-

ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಒಂದು ಸ್ಥಳದಲ್ಲಿ ಜೋಳದ ರಾಶಿಯಾಕಾರದಲ್ಲಿರುವ ಒಂದು ಬಂಡೆಯಿದೆ. ಇದಕ್ಕೆ ಸಂಬಂಧಿಸಿದ ಒಂದು ಐತಿಹ್ಯ ಹೀಗಿದೆ. ಹಿಂದೆ ಒಬ್ಬ ಒಕ್ಕಲಿಗ ಜೋಳದ ರಾಶಿ ಹಾಕಿದ್ದನು. ಒಬ್ಬ ಸಾಧು, ರೈತನಿಗೆ ಭೀಕ್ಷೆ ಕೇಳಿದಾಗ ಆತ ನಿರಾಕರಿಸಿದನಂತೆ ಕೋಪಗೊಂಡ ಸಾಧು ಈ ಜೋಳದ ರಾಶಿಯೆಲ್ಲ ಕಲ್ಲಾಗಿ ಹೋಗಲಿ ಎಂದು ಶಾಪವಿತ್ತನು. ಆದ್ದರಿಂದ ಜೋಳದ ರಾಶಿ ಒಂದು ಬೃಹತ್ ಬಂಡೆಯಾಗಿ ನಿಂತಿದೆ. ಜನಪದರ ಬದುಕಿನಲ್ಲಿ ಪ್ರಕೃತಿಗೆ ಸಂಬಂಧಿಸಿದಂತೆ. ಅನುಭವದ ನೆಲೆಯಲ್ಲಿ ಘಟನೆಯ ಮೂಲಕ ಜನರ ಮಧ್ಯೆ ಬೆರೆತುಕೊಳ್ಳುತ್ತ ಸಾಗುತ್ತದೆ. ಪ್ರತಿಯೊಂದು ಘಟನೆಗೆ ಅದರದೇ ಆದ ಒಂದು ಹಿನ್ನೆಲೆ ಅಡಗಿಕೊಂಡಿರುವುದಂತೂ ಸತ್ಯ.[೭೭]

೫.೪ ದೈವ ಸಂಬಂಧಿ ಐತಿಹ್ಯಗಳು:-

ಐತಿಹ್ಯಗಳು ಜನರ ಅಂತರಾಳದ ಮೌಲಿಕ ಚರಿತ್ರೆಯಾಗಿರುತ್ತವೆ. ಹಾಗೆ ಅವರಲ್ಲಿರುವ ಇಚ್ಚಾನುಸಾರವಾಗಿದ ಬಯಕೆಗಳನ್ನು ಸಹಜವಾಗಿ ವ್ಯಕ್ತಪಡಿಸಡುವ ನಿರೂಪಣೆ ತುಂಬಾ ಮೌಲಿಕವಾದುದ್ದು. ದೈವ ಸಂಬಂಧದ ಐತಿಹ್ಯಗಳು ಗ್ರಾಮದೇವತೆಗಳಾಗಿ ತಮ್ಮ ಸುತ್ತ ಮುತ್ತಲೂ ಹಬ್ಬಿಕೊಂಡು ಸಾಮನ್ಯತ್ವದ ಹಂತಕ್ಕೆ ಬಂದು ತಲುಪಿದಾಗ ಅಂಥವರ ಕುರಿತು ವಿಶಿಷ್ಠ ರೀತಿಯಲ್ಲಿ ಐತಿಹ್ಯಗಳು ಹುಟ್ಟು ಪಡೆದು ಜನಪ್ರಿಯ ಪಡೆದಿರುತ್ತವೆ. ಅಂಥಹ ವ್ಯಕ್ತಿಯ ಮಹಿಮೆಯನ್ನು ಕೊಂಡಾಡುತ್ತಾರೆ. ಹೆಚ್ಚಾಗಿ ತಮ್ಮ ದೇಹತ್ಯಾಗವಾದ ಮೇಲೆ ಪ್ರಚಾರ ಪಡೆಯುತ್ತ ಸಾಗುತ್ತಾರೆ.

ಗ್ರಾಮದೇವತೆಗಳು ಕೂಡಾ ದೈವತ್ವದ ಮಟ್ಟಕ್ಕೆ ಮುಟ್ಟಿ, ಅಲ್ಲಿನ ಗ್ರಾಮದ ರಕ್ಷಣೆಕಾರ್ಯ ಹೊತ್ತುಕೊಂಡು ದನ ಕರು ಮನುಷ್ಯನನ್ನು ಭಯದಿಂದ ಮುಕ್ತಗೊಳಿಸುವ ಹಾಗೂ ರೋಗ ರುಜಿನಗಳು ತಗಲುದ ಹಾಗೆ ನೋಡಿಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿರುತ್ತಾರೆ. ಅದು ಎಷ್ಟರ ಮಟ್ಟಿಗೆ ಸತ್ಯ ಹಾಗೂ ಸುಳ್ಳು ಎಂಬುದು ಮುಖ್ಯವಲ್ಲ. ಜನಪದರ ಗ್ರಹಿಕೆಗೆ ಸಂಬಂಧಿಸಿದ ಚರಿತ್ರೆಯನ್ನು ಅರಿತುಕೊಳ್ಳುವುದು ಅವಶ್ಯಕ. ಒಟ್ಟಾರೆ ಈ ಬಗೆಯ ಐತಿಹ್ಯಗಳು ಗ್ರಾಮ್ಯ ಜೀವನದಲ್ಲಿ ಸಾಕಷ್ಟು ಹುದುಗಿಕೊಂಡಿವೆ. ಬೇರೆ ಬೇರೆ ದೇವತೆಗಳಿಗೆ ನೋಡಿದಾಗ ಭಿನ್ನ ಭಿನ್ನ ರೂಪವನ್ನು ತಾಳುತ್ತದೆ.

ಡೊಳ್ಳಿನ ಕುರಿತು ಐತಿಹ್ಯ:-

ಗುರುವೇ ನಮ್ಮಯ ದೇವರು ಬಂದಾರು ಬನ್ನಿರೇ
ಸ್ವಾಮಿ ನಮ್ಮಯ ದೇವರು ಬಂದಾರು ಬನ್ನಿರೇ

ಎಂಬ ಸ್ತುತಿಯ ಮೂಲಕ ಡೊಳ್ಳಿನ ಹಾಡುಗಳು ಪ್ರಾರಂಭಗೊಳ್ಳುತ್ತವೆ. ಹೀಗಾಗಿ ಡೊಳ್ಳು ತುಂಬಾ ಪಾವಿತ್ರ್ಯತೆಯಿಂದ ಕೂಡಿದ್ದು ಅದನ್ನ ಭಕ್ತಿಯಿಂದ ನಮಸ್ಕರಿಸಿ ಬಾರಿಸುತ್ತಾರೆ. ಡೊಳ್ಳಿಗೆ ಸಂಬಂಧಿಸಿದಂತೆ ಐತಿಹ್ಯವೊಂದು ಈ ರೀತಿಯಾಗಿದೆ. ಡೋಳೇಶ್ವರನೆಂಬ ರಾಕ್ಷಸನಿಗೆ ಇದರ ಮೂಲವನ್ನು ರೋಪಿಸಲಾಗುತ್ತದೆ. ಡೋಳೇಶ್ವರ ಈಶ್ವರನನ್ನು ಕುರಿತು ಭಕ್ತಿಯಿಂದ ತಪಸ್ಸು ಮಾಡಿದನು. ತನ್ನ ಮೂಲ ಈ ತಪ್ಪಸ್ಸಿನ ಉದ್ದೇಶವೆಂದರೆ ತನ್ನ ಹೊಟ್ಟೆಯಲ್ಲೇ ಶಿವ ನೆಲಸುವಂತೆ ವರವನ್ನು ಬೇಡಿದನು. ಶಿವನು ಆತನ ಭಕ್ತಿಯನ್ನು ಮೆಚ್ಚಿ ಡೋಳೇಶ್ವರನ ಹೊಟ್ಟೆಯಲ್ಲಿ ಬಂದು ನೆಲೆಸಿದನಂತೆ. ಆಗ ಶಿವನಿಲ್ಲದೆ ಲೋಕವೆಲ್ಲಾ

ತಲ್ಲಣಗೊಂಡಿತಂತೆ. ಎಲ್ಲಾ ಕಡೆ ಹುಡುಕಿದರೂ ಸಿಗಲಿಲ್ಲ. ಕೊನೆಗೆ ದೇವತೆಗಳು ಗಣಪತಿಯನ್ನು ಮೊರೆ ಹೊಕ್ಕರು. ಅವನು ಡೋಳೇಶ್ವರನ ಎದುರುಗಡೆ ಪ್ರಜ್ಞೆಮೀರಿ ಅಪೂರ್ವ ರೀತಿಯಲ್ಲಿ ಕುಣಿಯತೊಡಗಿದ.

ವಾದ್ಯಗಳ ಹೊಡೆತ ಗಣೇಶನ ಕುಣಿತಗಳು ಡೋಳೇಶ್ವರನ ಹೊಟ್ಟೆಯಲ್ಲಿ ಅವಿತುಕೊಂಡಿರುವ ಶಿವ ಉಬ್ಬ ಹೋಗುವಂತೆ ಮಾಡಿದವು. ಡೊಳೇಶ್ವರನ ಹೊಟ್ಟೆಯಲ್ಲಿ ಶಿವ ಅರ್ಬಟವಾಗಿ ನರ್ತಸಿ ನಟಿಸಿ ಉಬ್ಬುತ್ತಾ, ಹೊಟ್ಟೆಯಲ್ಲಿ ಬೆಳೆದ, ಆಗ ಡೋಳೇಶ್ವರನ ಹೊಟ್ಟೆ ಸೀಳಿ ಹೋಯಿತು. ಕೊನೆಗೆ ದೇವತೆಗಳು, ಮರಳಿ ಶಿವನನ್ನು ಪಡೆದ ಸಂಕೇತವಾಗಿ, ಡೋಳೇಶ್ವರ ಹೊಟ್ಟೆಯ ಚರ್ಮದಿಂದಲೇ ಡೊಳ್ಳನ್ನು ತಯಾರಿಸಿ ಬಾರಿಸುತ್ತಾ ಕುಣಿದರು. ಮುಂದೆ ಕುರುಬ ಜನಾಂಗದವರು ಶಿವನನ್ನು ಸಂತುಷ್ಟಗೊಳಿಸಿದರು ಎಂದು ಹೇಳುತ್ತಾರೆ. ಆ ಕಾರಣದಿಮದ ಡೊಳ್ಳುಗಳಿಗೆ ತುಂಬಾ ಭಕ್ತಿ ಗೌರವದಿಂದ ಕಾಣುತ್ತಾರೆ.[೭೮]

ಕಂಬಳಿ ಕುರಿತು ಐತಿಹ್ಯ:-

ಕಂಬಳಿ ಎಲ್ಲರಿಗೂ ಉಪಯುಕ್ತವಾದ ಉಡುಪಾಗಿದೆ. ಚಳಿ, ಮಳೆ, ಬೀಸಿಲಿನಿಂದ ರಕ್ಷಿಸಿಕೊಳ್ಳಲು ತುಂಬಾ ಅನುಕೂಲವಾಗುತ್ತದೆ. ಇದು ಕರಿ ಉಣ್ಣೆಯಿಂದ ತಯಾರಿಸಲಾಗುತ್ತದೆ. ಕಂಬಳಿ ಹತ್ತಿರವಿದ್ದರೆ. ಭೂತ-ಪಿಶಾಚಿಗಳ ಕಾಟವಿರುವುದಿಲ್ಲ ಎಂಬ ನಂಬಿಕೆಯಿದೆ. ಆ ಕಾರಣದಿಂದ ಹಳ್ಳಿಗಳಲ್ಲಿ ಎಲ್ಲರ ಮನೆಗಳಲ್ಲಿಯೂ ದೊರೆಯುತ್ತವೆ. ಅದೊಂದು ವಸ್ತ್ರವಾಗಿದ್ದರೂ ಅದರಲ್ಲಿ ದೈವಿಶಕ್ತಿಯನ್ನ ಜನಪದರು ಕಾಣುತ್ತಾರೆ. ಅದರ ಕುರಿತು ಒಂದು ಐತಿಹ್ಯ ಹೀಗಿದೆ. ಅಗ್ನಿಮುನಿಯು, ಉದಕಮುನಿಯು ಮತ್ತು ಮಲ್ಲಗಂಬಳಿಗಳೆಂಬ ಮೂರು ಪ್ರಾವರಣಗಳನ್ನು ಕೊಟ್ಟರು. ಬ್ರಹ್ಮನು ಆ ರೋಮಗಳಿಗೆ ಬೀಜವನ್ನು ಹಾಕಲು, ನಾರಾಯಣನು ಲಾಳಿಯನ್ನು ಒಗೆದನು ಮತ್ತು ವಿಷ್ಣು ಕಂಬಳಿಯನ್ನು ನೇಯ್ದು ತೆಗೆದನು. ಹೀಗೆ ಕಂಬಳಿಯು ಹುಟ್ಟಿಕೊಂಡಿತು ಎಂದು ಹೇಳುವರು. ಒಟ್ಟಾರೆ ಕಂಬಳಿಯ ಕುರಿತು ಜನಪದರಲ್ಲಿ ತುಂಬಾ ಭಕ್ತಿ ಗೌರವವಿರುವುದರ ಜೊತೆಗೆ ದೆವ್ವ ಪಿಶಾಚಿಗಳ ಕಾಟ ತಪ್ಪುತ್ತದೆ ಎಂಬ ನಂಬಿಕೆಯಿದೆ ಚಳಿಗಾಲದಲ್ಲಿ ಕಂಬಳಿ ತುಂಬಾ ಉಪಯುಕ್ತವಾದುದ್ದಾಗಿದೆ.

ಗಣೇಶನ ಜನನದ ಕುರಿತ ಐತಿಹ್ಯ:-

ಪಾರ್ವತಿಯು ಮೈಮೇಲಿನ ಬೆವರನ್ನು ತೆಗೆದು ಮಣ್ಣಿನಲ್ಲಿ ಮನುಷ್ಯಾಕಾರ ಮೂರ್ತಿ ಮಾಡಿದಳು. ಮನುಷ್ಯಾಕಾರವನ್ನು ನೋಡಿ ಪಾರ್ವತಿಗೆ ತನ್ನ ಮನ ಸಂತೋಷಗೊಂಡು, ಪ್ರೇಮ, ವಾತ್ಸಲ್ಯ, ಉಕ್ಕಿ ಬಂತು ತಕ್ಷಣ ಆ ಮನುಷ್ಯಾಕಾರದ ಮೂರ್ತಿಗೆ ಜೀವ ಕಳೆಯನ್ನು ತುಂಬಿದಳು. ಆ ಮಗು ತಾಯಿ ಎದುರಿಗೆ ಕುಣಿದಾಡುತ್ತಾ ನಿಂತಿತ್ತು. ಮಾತಾಡಲು ಪ್ರಾರಂಭಿಸಿತು. ಆ ಮಗನಿಗೆ ಪಾರ್ವತಿದೇವಿಯು ಈ ರೀತಿ ಹೇಳಿದಳು, ನಾನು ಸ್ನಾನದ ಮಂದಿರಕ್ಕೆ ಹೋಗುವೇನು, ಒಳಗೆ ಯಾರಿಗೂ ಪ್ರವೇಶ ಕೊಡಬೇಡ ಎಂದು ಹೇಳಿ ಒಳಗೆ ಹೋದಳು. ಅಷ್ಟರಲ್ಲಿ ಪರಮಾತ್ಮನು ದೈತ್ಯರನ್ನು ವಧೆ ಮಾಡಿ ಬೇಸತ್ತು ತನ್ನ ತಾಣಕ್ಕೆ ಬಂದನು, ಒಳಗೆ ಹೋಗಲು ಧಾವಿಸಿದನು. ದ್ವಾರದಲ್ಲಿ ನಿಂತ ಬಾಲಕನು ಒಳಗೆ ಹೋಗಲು ಪ್ರವೇಶ ಕೊಡಲಿಲ್ಲ.

ಪರಮಾತ್ಮನು ಆ ಬಾಲಕನಿಗೆ ಕೇಳಿದನು ನೀನು ಯಾರು, ಅದಕ್ಕೆ ನಾನು ಯಾರೇ ಇರಲಿ ನನ್ನ ತಾಯಿಯವರು ಹೇಳಿದ ಪ್ರಕಾರ ಒಳಗೆ ಯಾರಿಗೂ ಪ್ರವೇಶ ಇಲ್ಲ ಎಂದು ಹೇಳಿದನು. ಇಬ್ಬರ ನಡುವೆ ತುಂಬಾ ಸಮಯದವರೆಗೆ ವಾಗ್ವಾದ ನಡೆಯಿತು. ಕೊನೆಗೆ ಪರಮಾತ್ಮನು ಕೋಪಗೊಂಡು ಬಾಲಕನ ಶೀರಭೇದನ ಮಾಡಿದನು. ದೇಹ ಅದೇ ಸ್ಥಳವಲ್ಲಿ ಉರುಳಿತು, ಶೀರ ಮಾತ್ರ ಭೊಲೋಕದಲ್ಲಿ ಬಂದು ಬಿದ್ದಿತು.

ಪಾರ್ವತಿಯು ಸ್ನಾನ ಮುಗಿಸಿಕೊಂಡು ಹೊರಗೆ ಬಂದಳು. ದ್ವಾರಪಾಲಕನಾಗಿರುವ ತನ್ನ ಬಾಲಕ ನನ್ನ ನೋಡಿ ಹೌಹಾರಿದಳು, ಅಲ್ಲದೇ ತನ್ನ ಒಡೆಯ ಮರಮಾತ್ಮನನ್ನು ತನ್ನ ಬಾಲಕನು ಎಲ್ಲಿ ಎಂದು ಕೇಳಿದಳು. ಆದಕ್ಕೆ ಶಿವನು ಹೇಳಿದನು, ನನಗೆ ಮನೆಯೊಳಗೆ ಪ್ರವೇಶ ಕೊಡಲಿಲ್ಲ. ತಿಳಿಯದೆ ನಾನು ಕೋಪಗೊಂಡು ಶೀರಛೇದನೆ ಮಾಡಿದ್ದೇನೆ. ಆಗೋ ಅಲ್ಲಿ ದಂಡ ಬಿದ್ದಿದೆ, ಶೀರವೂ ಭೊಲೋಕದಲ್ಲಿ ಹೋಗಿ ಬಿದ್ದಿದೆ ಎಂದರು. ತನ್ನ ಬಾಲಕನ ದೇಹವನ್ನು ನೋಡಿ ಪಾರ್ವತಿ ದುಃಖದಿಂದ ಮೂರ್ಚೆಹೋಗಿ ಬಿದ್ದು ಬಿಟ್ಟಳು.

ಪರಮಾತ್ಮನು ಪಾರ್ವತಿಯನ್ನು ಸಮಾಧಾನ ಮಾಡತೊಡಗಿದನು. ಆದರೆ ಪಾರ್ವತಿ ಆ ಬಾಲಕ ನನ್ನ ಪ್ರೇಮದ ಮತ್ರ, ಅವನನ್ನು ಕೊಂದಿದ್ದಕ್ಕೆ ನಾನು ಈ ಕಷ್ಟವನ್ನ ಸಹಿಸಿ ಕೊಳ್ಳಲಾರೆ. ನನ್ನ ಪುತ್ರನನ್ನು ಬದುಕಿಸಿಕೊಡು ಎಂದು ಕೇಳಿದಳು. ಆದಕ್ಕೆ ಪರಮಾತ್ಮನು ಒಪ್ಪಿಕೊಂಡು, ಶಿವಗಣಾದಿಗಳನ್ನು ಕರೆದು ದಕ್ಷಿಣ ದಿಕ್ಕಿಗೆ ಯಾರು ತಲೆ ಮಾಡಿ ಮಲಗಿರುತ್ತಾರೇ. ಅವರ ಶೀರವನ್ನು ಕತ್ತಿರಿಸಿಕೊಂಡು ಬರಲು ಅಪ್ಪಣೆ ಮಾಡಿದನು.

ಶಿವಗಣಾದಿಗಳು ಶಿವನ ಅಪ್ಪಣೆಯ ಮೇರೆಗೆ ನಾಲ್ಕು ದಿಕ್ಕುಗಳ ಕಡೆಗೆ ತಿರುಗಾಡಿದರು. ಒಬ್ಬರೂ ಸಹ ದಕ್ಷಿಣ ದಿಕ್ಕಿಗೆ ತಲೆಮಾಡಿ ಮಲಗಿದವರು ಸಿಗಲಿಲ್ಲ. ಕೊನೆಗೆ ಆನೆಯೊಂದು ಕಾಡಿನಲ್ಲಿ ದಕ್ಷಿಣ ದಿಕ್ಕಿಗೆ ಮುಖ ಮಾಡಿಕೊಂಡು ಮಲಗಿತ್ತು, ಶಿವಗಣಾದಿಗಳು ಅದನ್ನು ನೋಡಿ ಅದರ ಶೀರವನ್ನು ಕತ್ತರಿಸಿ ತೆಗೆದುಕೊಂಡು ಪರಮಾತ್ಮನ ಹತ್ತಿರ ತಂದರು. ಶಿವನ ಅಪ್ಪಣೆಯ ಮೇರೆಗೆ ಆನೆಯ ತಲೆಯ ಶೀರವನ್ನು ಒಪ್ಪಿಸಿದರು. ಆನೆಯ ಮುಖವನ್ನು ಸತ್ತು ಬಿದ್ದ ಬಾಲಕನ ದಂಡಕ್ಕೆ ಹಚ್ಚಿ ಮಂತ್ರೋಪದೇಶ ಮಾಡಿ ಆ ಬಾಲಕನ ದೇಹವನ್ನು ಸಜೀವವನ್ನಾಗಿ ಮಾಡಿದರು.

ಬಾಲಕನು ಎದ್ದು ಪಾರ್ವತಿ ಪರಮೇಶ್ವರರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡನು. ಆತನಿಗೆ ದೇವಿ ಮತ್ರನೆಂದು ಅರವತ್ನಾಲ್ಕು ವಿದ್ಯೆಗಳಿಗೆ ಅಧಿಪತಿಯಾಗಿರು ಮತ್ತು ಸಕಲ ಕಾರ್ಯಗಳಲ್ಲಿ ನಿನಗೆ ಮೊದಲು ಪೂಜೆಯಾಗಲಿ ಎಂದು ವರ ಕೊಟ್ಟು ಆಶೀರ್ವಾದ ಮಾಡಿದರು. ಆತನೇ ಗಜಾನನನಾಗಿ ಭಕ್ತರ ಪ್ರೀತಿಗೆ ಪಾತ್ರನಾದನು.[೨೯]

ದತ್ತಾತ್ರೆಯನಾಗಿ ರೂಪಗೊಂಡಿರುವ ಐತಿಹ್ಯ:-

ಅತ್ರಿ ಋಷಿಯ ಪತ್ನಿಯಾದ ಅನುಸೂಯಾ ತುಂಬಾ ಸೌಂದರ್ಯವುಳ್ಳವಳಾಗಿದ್ದಳು. ತನ್ನ ತಪಃ ಪ್ರಭಾವದಿಂದ ಸ್ವರ್ಗವನ್ನು ಎಲ್ಲ ತನ್ನ ವಶಕ್ಕೆ ಮಾಡಿಕೊಳವಳೆಂಬ ಭಯ ದೇವತೆಗಳಿಗೆ ಉಂಟಾಯಿತು. ಆದುದರಿಂದ ದೇವತೆಗಳೆಲ್ಲರೂ ಕೂಡಿ ಬ್ರಹ್ಮ, ವಿಷ್ಣು, ಮಹೇಶ್ವರರ ಹತ್ತಿರ ತೆರಳಿದರು. ಮತ್ತು ಅನುಸೂಯಾ ಅತ್ರಿಯ ಕುರಿತು ಅವಳ ಪಾತಿವ್ರತ್ಯವನ್ನೂ, ಅತಿದಿ ಸತ್ಕಾರವನ್ನು, ಕೀರ್ತಿಯನ್ನೂ ವರ್ಣಿಸಿ ಹೇಳಿದರು.

ಸೂರ್ಯ, ಅಗ್ನಿ, ವರುಣ, ಇಂದ್ರ ಮೊದಲಾದ ದೇವತೆಗಳು ಅನುಸೂಯಾಳ ದಾಸರಾಗಿ ಅಂಜಿ ಬದುಕುತ್ತಿದ್ದರು. ನಮಗೂ ಶಾಪವನ್ನು ಕೊಡಬಹುದು ಎಂದು ತ್ರಿಮೂರ್ತಿಗಳು ಎದುರು ಇದ್ದ ಸಂಗತಿ ತಿಳಿಸಿದರು. ಆಗ ಬ್ರಹ್ಮ, ವಿಷ್ಣು, ಮಹೇಶ್ವರರು ಅವಳ ಸತ್ವಪರೀಕ್ಷೆ ಮಾಡಲು ಭಿಕ್ಷುಕ ವೇಷದಿಂದ ಅನುಸೂಯೆಯ ಬಾಗಿಲೆಗೆ ಆಹ್ವಾನಿಸಿದರು. ಅತ್ರಿ ಋಷಿಯು ನದಿ ತೀರಕ್ಕೆ ಅನುಷ್ಠಾನಕ್ಕೆ ಹೋಗಿದ್ದರು. ಅನುಸೂಯೆಯು ಅತಿದಿಗಳನ್ನು ಪ್ರೀತ್ಯಾಧಾರದಿಂದ ಮನೆಯೊಳಗಡೆ ಬರಮಾಡಿಕೊಂಡಳು.

ಅತಿಥಿಗಳಿಗೆ ಆಸನದ ಮೇಲೆ ಕುಳ್ಳಿರಿಸಿದಳು. ಅವರು ಅನುಸೂಯೆಗೆ "ದೇವಿ, ನೀವು ಅತಿಥಿ ಸೇವೆಯಲ್ಲಿ ಸದಾ ದಕ್ಷಳೆಂದು ಕೇಳಿರುವೆವು. ನಾವು ಈಗ ಹಸಿದು ಬಂದಿರುವೆವು. ನಮಗೆ ಇಚ್ಛಾಭೋಜನ ನೀಡುವುದಾದರೆ ಕುಳಿತುಕೊಳ್ಳುತ್ತೇವೆ, ಇಲ್ಲವಾದರೆ ತೆರಳುತ್ತೇವೆ." ಎಂದು ನುಡಿದರು, ಆಗ ಅನುಸೂಯೆಯು "ಅಡಿಗೆಯು ಸಿದ್ದವಾಗಿದೆ. ಋಷಿಗಳು ಬಂದಕೂಡಲೇ ಊಟಕ್ಕೆ ಬಡಿಸುವೆನು" ಎಂದು ನುಡಿದಳು. ಆ ಮಾತಿಗೆ ಅತಿಥಿಗಳು "ನಾವು ಬಹಳ ಹಸಿದಿರುವೆವು", ಋಷಿಗಳು ಬರುವವರೆಗೆ ನಾವು ಕಾಯುತ್ತ ಕೂಡುವುದು ಆಗುವುದಿಲ್ಲವೆಂದರಂತೆ.

ಈಗಲೇ ಇಚ್ಛಾಭೋಜನ ನೀಡು ಎಂದರು. ಆಗ ಅನುಸೂಯೆ ಹಾಗೆಯೇ ಆಗಲೆಂದು ಎಲೆಗಳನ್ನು ಹಾಕಿದಳು, ಕೈಕಾಲು ತೊಳೆದುಕೊಂಡು ಬರಲು ತಿಳಿಸಿದಳು. ಅತಿಥಿಗಳು ಕೈಕಾಲು ತೊಳಿದುಕೊಂಡು ಎಲೆಯ ಮುಂದೆ ಕುಳಿತುಕೊಂಡರು. ಅತಿಥಿಗಳು ಅನುಸೂಯೆಗೆ "ಮಾತೆಯೇ, ನಿನ್ನ ಸೌಂದರ್ಯವನ್ನು ಕಂಡು ನಾವು ಮೋಹಿತರಾದೆವು ಕಾರಣ ನೀನು ನಮಗೆ ನಗ್ನಳಾಗಿ ಉಣಬಡಿಸು. ಇದೇ ನಮ್ಮ ಇಚ್ಛೇ" ಎಂದು ನುಡಿದರು.

ಅನುಸೂಯೆಯು ಕ್ಷಣ ಕಾಲ ಚಕಿತಳಾಗಿ ನಿಂತುಬಿಟ್ಟಳು. ಯಾವುದು ತೋಚದಾಯಿತು. ನಂತರ ವಿಚಾರಿಸಿ, "ಮಾತೆ" ಎಂದು ಸಂಬೋಧಸಿರುವರು. ಇದು ನನ್ನ ಸತ್ವಪರೀಕ್ಷೆಯ ಕಾಲವು ಪತಿಯ ತಪದ ಬಲವಿರುವಾಗ ನನಗೆ ಕಾಮನು ಏನೂ ಮಾಡಲಾರನು, ಎಂದು ಗಟ್ಟಿಯಾಗಿ ನಿರ್ಧಾರ ಮಾಡಿಕೊಂಡಳು. ಆಗಲಿ, ಎಂದು ನುಡಿದು ಪತಿಯ ಪಾದಕಮಲಗಳನ್ನು ಸ್ಮರಿಸಿದಳು. ಪತಿಯ ಪಾದೋದಕವನ್ನು ತಂದು ಅತಿಥಿಗಳ ಮೇಲೆ ಸಿಂಪಡಿಸಿ "ಇವರು ನನ್ನ ಬಾಲಕರೆಂದು" ನುಡಿದಳು. ವಸ್ತ್ರವಿಹೀನಳಾಗಿ ಅನ್ನೋದಕಗಳನ್ನು ತೆಗೆದುಕೊಂಡು ಬಂದಳು. ಅವಳ ಮನದ ಸಾಮರ್ಥ್ಯದಿಂದ ಅತಿಥಿಗಳು ಬಾಲಕರಾಗಿ ಎಲೆಯ ಮುಂದೆ ಹೊರಳಾಡುತ್ತ ಬಿದ್ದಿದ್ದರು.

ಅನುಸೂಯೆಯು ಪುನಃ ವಸ್ತ್ರಧಾರಣ ಮಾಡಿಕೊಂಡು ಕೂಸುಗಳ ಬಳಿ ಬಂದಳು. ಪುತ್ರ ವಾತ್ಸಲ್ಯದಿಂದ ಅವಳ ಸ್ತನಗಳಲ್ಲಿ ಹಾಲು ತುಂಬಿದವು. ಅವಳು ಮೂವರಿಗೂ ಹಾಲೂಣಿಸಿದಳು. ತನ್ನುದರದಲ್ಲಿ ಹದಿನಾಲ್ಕು ಲೋಕಗಳೂ ಸಪ್ತಸಮುದ್ರಗಳೂ, ವಡವಾಗ್ನಿಯೂ ಇರುವಂತೆ ವಿಷ್ಣುವು. ಸೃಷ್ಟಿ ರಚನೆಯಲ್ಲಿ ತೊಡಗಿರುವ ಬ್ರಹ್ಮನೂ, ಹಣೆಗಣ್ಣಿನ ಶಿವನೂ ಆ ಸಾಧ್ವಿಯ ಮೊಲೆ ಹಾಲುಂಡು ತೃಪ್ತಿಹೊಂದಿದರು.

ಅನುಸೂಯೆಯೂ ಶಿಶುಸ್ನೇಹದಿಂದ ಆ ಕೂಸುಗಳನ್ನು ಆಡಿಸಿದಳು. ಅವಳ ತಪಃ ಪ್ರಭಾವದಿಂದ ತ್ರಿಮೂರ್ತಿಗಳು ಕೂಸುಗಳಾದರು. ಅವರನ್ನು ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡಿದಳು. ಅಷ್ಟರಲ್ಲಿ ಆಶ್ರಮಕ್ಕೆ ಬಂದ ಅತ್ರಿಋಷಿಗಳು ಅರಿತು ಭಕ್ತಿಪೂರ್ವಕವಾಗಿ ನಮಸ್ಕರಿಸಲು ಶಿಶುಗಳು ನಿಜರೂಪದಿಂದ ದರ್ಶನ ಮಾಡಿದರು. ಅತ್ರಿ ಮಹರ್ಷಿಗಳನ್ನು ಕಂಡು "ನಿಮ್ಮ ಪತ್ನಿ ಅನುಸುಯೆಯು ಅಲೌಕಿಕ ಸಾಧ್ವಿಯಮಣಿಯು ಇರುವಳು.[೮೦] ನಾವು ಅವಳ ಭಕ್ತಿಗೆ ಸಂತುಷ್ಟರಾಗಿರುವೆನು. ನಿಮಗೆ ಬೇಕಾದ ವರವನ್ನು ಬೇಡಿರಿ" ಎಂದು ನುಡಿದರು. ಆಗ ಅನುಸೂಯೆಯು ಪತಿಗೆ "ಪ್ರಾಣೇಶ್ವರಾ ! ಈ ಮೂವರು ನಮ್ಮ ಮಕ್ಕಳಾಗಿಯೇ ಇರಬೇಕೆಂದು ಬೇಡಿಕೊಂಡಳು."

ಮೂರ್ತಿಗಳು ಅವಳ ಮಾತಿಗೆ ಒಪ್ಪಿದರು ತಮ್ಮ ಅಂಶಿಭೂತವಾದ ಸ್ವರೂಪವನ್ನು ಬಿಟ್ಟು ಕಣ್ಮರೆಯಾದರು. ಬ್ರಹ್ಮನಿಗೆ ಚಂದ್ರನೆಂದೂ, ವಿಷ್ಣುವಿಗೆ ದತ್ತನೆಂದೂ ಈಶ್ವರನಿಗೆ ದುರ್ವಾಸನೆಂದೂ ಹೆಸರಿಟ್ಟರು. ಕೆಲವು ದಿವಸಗಳಾದ ಬಳಿಕ ಚಂದ್ರ ಹಾಗೂ

ದುರ್ವಾಸರು ತಾಯಿಯ ಹತ್ತಿರ ಬಂದರು. ''ತಾಯಿ ! ಚಂದ್ರಮಂಡಲದಲ್ಲಿ ವಾಸಿಸಿ ನಿಮಗೆ ದರುಶನ ಕೊಡುವೆನೆಂದು'' ಚಂದ್ರನು ಹೇಳಿ ಹೋದನು. ''ತೀರ್ಥ ಯಾತ್ರೆ ಮಾಡಿ, ತಪಸ್ಸು ಮಾಡುವೆನು'' ಎಂದು ದುರ್ವಾಸನು ಹೇಳಿ ಅಪ್ಪಣೆ ಪಡೆದು ಹೋದನು. ತ್ರೈಮೂರ್ತಿಗಳು ಐಕ್ಯರಾಗಿ ದತ್ತಾತ್ರೆಯ ರೂಪದಿಂದ ಅನುಸೂಯೆಯ ಬಳಿ ನೆಲೆಸಿದರು. ಒಟ್ಟಾರೆ ಈ ಕಥೆ ದೈವಿ ಮರುಷರ ಮಹಿಮೆಯನ್ನು ಪರಿಚಯಿಸುವುದರ ಜೊತೆಗೆ ಅತ್ರಿ ಋಷಿಯ ಹೆಂಡತಿಯಾದ ಅನುಸೂಯಾಳ ಮನಸ್ಸನ್ನು ಪರೀಕ್ಷಿಸಲು ಬಂದು, ಅವರು ಮತ್ರರಾಗಿ ಜನಪ್ರಿಯತೆ ಪಡೆದುಕೊಂಡರು.

೫.೫ ಕುಲಮೂಲ ಸಂಬಂಧಿ ಐತಿಹ್ಯಗಳು:-

ಮಾನವ ಕುಲಕೋಟಿಯಲ್ಲಿ ಕವಲೊಡೆದ ಪ್ರತಿಯೊಂದು ಜಾತಿ ಜನಾಂಗಗಳು ತನ್ನದೆಯಾದ ಅನ್ಯೋನತೆಯೊಂದಿಗೆ ತನ್ನ ಮೂಲ ಇಲ್ಲವೆ ವಂಶೋತ್ಪತ್ತಿಯ ಕುರಿತು ಪೌರಾಣಿಕ ಎಳೆಯ ಹಿನ್ನೆಲೆಯೊಂದು ತನ್ನ ಅಂತರಾಳದಲ್ಲಿ ಹುದುಗಿಟ್ಟುಕೊಂಡಿರುತ್ತದೆ. ಇಂಥ ಪೌರಾಣಿಕ ಎಳೆಗಳನ್ನು ಬಿಡಿಸುತ್ತ ಹೋದಾಗ ಆ ಸಮುದಾಯದ ಜೀನವಕ್ರಮ, ಸಮಾಜದೊಂದಿಗೆ ಆ ಸಮುದಾಯದ ಸಂಬಂಧ, ಸಮುದಾಯದ ಸಾಂಸ್ಕೃತಿಕ ನಾಯಕರ ಮೂಲ ಶೋಧಿಸಲು ಸಾಧ್ಯವಾಗುತ್ತದೆ. ಈ ತೆರನಾದ ಆಯಾಮ ಹೊಂದಿರುವ ಕುಲಮೂಲವು ದೊರೆಯುವುದಾದರೂ ಎಲ್ಲಿ ? ಎಂಬ ಪ್ರಶ್ನೆಗೆ ಉತ್ತರ ದೊರಕುವುದು ಮತ್ತೆ ಆಯಾ ಜಾತಿ ಜನಾಂಗದ ಕೃಷಿಕರಲ್ಲಿ, ಅನಕ್ಷರಸ್ಥರಲ್ಲಿ. ಕುಲದ ಬಗ್ಗೆ ಗೌರವ ಅಭಿಮಾನ ಉಂಟಾದಾಗ ಅವುಗಳ ಮೂಲಕ್ಕೆ ಕೈಹಾಕುವ ಕಾರ್ಯ ನಡೆಯುತ್ತದೆ. ಸಮುದಾಯಗಳು ತಮ್ಮ ಮೂಲವನ್ನು ಕುರಿತು ಹೇಳುವ ಹಲವಾರು ಸೊಗಸಾದ ಐತಿಹ್ಯಗಳು ದೊರಕುತ್ತವೆ. ಅವರುಗಳು ತಮ್ಮ ದಿನನಿತ್ಯದ ಕೆಲಸಗಳಲ್ಲಿ ತೊಡಗಿ ಸಂದರ್ಭದಲ್ಲಿ ಹೊರಚೆಲ್ಲುವ ಹಾಡು, ಕಥೆ, ಮರಾಣ, ಐತಿಹ್ಯ, ದಂತ ಕಥೆಗಳ ರೂಪದಲ್ಲಿ ಕುಲಮೂಲವನ್ನು ಹಿಡಿದಿಟ್ಟಿದ್ದಾರೆ. ಅವುಗಳೆಲ್ಲವನ್ನು ಅವಲೋಕಿಸುತ್ತಾ ಹೊದಾಗ ಆಯಾ ಜನಾಂಗದ ಮೂಲ ಗೋಚರವಾಗುತ್ತದೆ. ಇಂಥ ಅಮೂಲ್ಯವಾದ ಕುಲಮೂಲವನ್ನು ಜನಪದರಿಂದ ತಿಳಿಯಲು ಸಾಧ್ಯವಾವುತ್ತದೆ. ಹೀಗಾಗಿ ಜನಪದರ ಮೌಖಿಕ ಸಂಪ್ರದಾಯವೇ ಇತಿಹಾಸಕ್ಕೆ ಬಹುಮುಖ್ಯ ಆಕರವಾಗಿ ಪರಿಣಮಿಸುತ್ತದೆ. ಈ ತೆರನಾಗಿ ಹುಟ್ಟು ಪಡೆದಿರುವ ಕುಲಮೂಲ ಐತಿಹ್ಯಗಳನ್ನು ಇಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ಪ್ರತಿಯೊಂದು ಜಾತಿ ಜನಾಂಗವು ತನ್ನದೇ ಆದ ಮೂಲ ಇಲ್ಲವೆ ವಂಶೋತ್ಪತ್ತಿಯ ಬಗೆಗೆ ಪೌರಾಣಿಕ ಹಿನ್ನೆಲೆಯನ್ನ ತನ್ನ ಅಂತರಾಳದಲ್ಲಿ ಹುದುಗಿಸಿಟ್ಟುಕೊಂಡಿರುತ್ತವೆ. ಅವುಗಳು ಸೂಕ್ತ ರೀತಿಯಲ್ಲಿ ಪಡೆದಾಗ ಮಾತ್ರ ತಮ್ಮ ಮೂಲದ ಕುರಿತು ಸ್ಪಷ್ಟ ಆಂಶವನ್ನ ಗ್ರಹಿಸಿಕೊಳ್ಳಲು ಸಾಧ್ಯವಾಗುವುದು.

ಹೆಚ್ಚಾಗಿ ಬುಡಕಟ್ಟಿನ ಜನರ ಕುರಿತು ಎಲ್ಲಿಯು ಲಿಖಿತವಾಗಿ ದೊರೆಯುವುದಿಲ್ಲ. ಅಂಥ ಸಂದರ್ಭದಲ್ಲಿ ಮತ್ತೆ ನಾವು ಜನಪದರನ್ನ ಅವರ ಹಾಡು, ಕಥೆ, ಮರಾಣ, ಐತಿಹ್ಯ, ದಂತ ಕಥೆಗಳ ಮೊರೆ ಹೋದಾಗ ಮಾತ್ರ ಪರಿಮೂರ್ಣ ಹಾಗೂ ಹೆಚ್ಚಿನ ನೆರವನ್ನು ಒದಗಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಜನಾಂಗದ ವಂಶೋತ್ಪತ್ತಿ ಕುರಿತು ವಿಶಿಷ್ಟ ರೀತಿಯ ಅವರದೆ ಆದ ಒಂದು ನೆಲೆಯಲ್ಲಿ ಐತಿಹ್ಯಗಳ ಮೂಲಕ ಕಟ್ಟಿಕೊಡುವ ಮೌಲ್ಯಿಕ ಕೆಲಸ ಮಾಡುತ್ತಾರೆ.

ಅವರ ಮೌಖಿಕ ಕಂಠಸ್ಥ ಪರಂಪರೆಯ ಮೂಲಕ ಬಳಕೆಗೊಳ್ಳುವುದರಿಂದ ಅದನ್ನ ತುಂಬಾ ಸೂಕ್ಷ್ಮವಾಗಿ ಪಡೆದುಕೊಳ್ಳಬೇಕಾಗುತ್ತದೆ. ಒಟ್ಟಾರೆ ಜನಪದರನ್ನ ಆಶ್ರಯಿಸಿಕೊಂಡು ನಡೆಯುತ್ತದೆ. ಇಲ್ಲಿ ಕೆಲವು ಲಭ್ಯವಾದ ಜನಾಂಗ

ಸಂಬಂಧಿ ಐತಿಹ್ಯಗಳನ್ನು ಕಲೆ ಹಾಕಿ ತಿಳಿಸಲಾಗಿದೆ. ಪ್ರಚಲಿತವಿರುವ ಹಾಗೂ ಜನಪ್ರಿಯ ಪಡೆದಿರುವ ಕೆಲವು ಪರೀಶಿಲಿಸುವ ಪ್ರಯತ್ನ ಮಾಡಲಾಗಿದೆ.

ಬೀರದೇವರು, ಹಾಲಮತ ಪುರಾಣದಂತೆ ವೀರಭದ್ರನ ಅವತಾರ. ಶಿವನ ಬೆವರಿನಿಂದ ಹುಟ್ಟಿದವ. ಸೂರಮ್ಮದೇವಿ ತಾಯಿ, ಬಾಲ ಭರಮಣ್ಣದೇವರು ತಂದೆ, ಸೋದರಮಾವ ನಾರಾಯಣ ದೇವರು. ತಂಗಿಯಲ್ಲಿ ಜನಿಸಿದ ಈ ಕೂಸಿನಿಂದ ತನಗೆ ಅನಿಷ್ಟವೆಂಬ ಭವಿಷ್ಯವನ್ನು ಕಂಡು ಕೊಲೆಗಡುಕರ ಮುಖಾಂತರ ಕೊಲ್ಲಿಸಲು ಏರ್ಪಾಡು ಮಾಡುತ್ತಾನೆ. ಆದರೆ ದೈವೀ ಸಂಕಲ್ಪದಿಂದ ಕೊಲೆಗಡುಕರಿಗೆ ಕರುಣೆ ಹುಟ್ಟಿ ಕೂಸನ್ನು ಕೊಲ್ಲದೆ ಉಳಿಸುತ್ತಾರೆ. ಕೊದಲಿ ಬನದಲ್ಲಿ ಬಾರಂಭಾವಿಯ ಮೇಲೆ ಬೆಳೆದ ಆಲದ ಮರದ ಟೊಂಗೆಗೆ ಕೂಸಿನ ತೊಟ್ಟಿಲನ್ನು ಕಟ್ಟಿ ಮರಳಿ ಹೋಗುತ್ತಾರೆ. ಶಿವಪಾರ್ವತಿಯರು ಕೂಸಿನ ರಕ್ಷಣೆಯ ವ್ಯವಸ್ಥೆ ಮಾಡುತ್ತಾರೆ. ಏಳು ಹೆಡೆಯ ಸರ್ಪ, ಪಾರ್ವತಿಯಿಂದ ನಿರ್ಮಿತವಾದ ಜೇನು, ಅಡವಿಯ ಪಕ್ಷಿಗಳು, ಕೂಸನ್ನು ಜೋಕೆ ಮಾಡುತ್ತವೆ. ಮುಂದು ಮಾಯವ್ವ ಈ ಕೂಸನ್ನು ಪಡೆದು ಸಾಕು ತಾಯಿಯಾಗಿ ಬೆಳೆಸುತ್ತಾಳೆ.

ಹಾಲುಮತದ ಮೂಲ ಕುರಿತು ಐತಿಹ್ಯ:-

ವೀರಭದ್ರನು ಶಿವನ ಅಪ್ಪಣೆಯ ಮೇರೆಗೆ ಬೀರ ದೇವರಾಗಿ ಭೂಮಿಯಲ್ಲಿ ಅವತರಿಸುವಾಗ ತಾನು ಉದ್ಧರಿಸಬೇಕಾದ ಹಾಲುಮತದ ಬಗೆಗೆ ಕೇಳುವನು. ಸ್ವತಃ ಶಿವನೇ ಆ ವಿವರ ನೀಡುವರನು. ಸೃಷ್ಟಿಯ ಆದಿಯಲ್ಲಿ ನಿರಾಳವಾಗಿ ಇರುವಂತಹ ಕಾಲದಲ್ಲಿ ಶಿವ ಪಾರ್ವತಿ ವಿಹಾರಾರ್ಥ ಹೊರಟು ಒಂದು ಜಗುಲಿಯನ್ನು ಕಾಣುತ್ತಾರೆ. ಶಿವನು ಅದರ ಮೇಲೆ ಮೂರ್ತಗೊಳ್ಳುವ. ಆಗ ಜಾಂಬಋುಷಿ ಬಂದು ಶಿವನಿಗೆ ವಂದಿಸುವನು. ಆತನ ಭಕ್ತಿಗೆ ಮೆಚ್ಚಿ ಪಾರ್ವತಿಯ ಮೊಲೆಗಳು ತೊರೆದು ಹಾಲು ಸುರಿಯುವುದು ಆ ಹಾಲು ವ್ಯರ್ಥವಾಗಿ ಭೂಮಿಗೆ ಬಿದ್ದು ಹೋಗದಂತೆ ತನ್ನ ಬೊಗಸೆಯಲ್ಲಿ ಸಂಗ್ರಹಿಸುವಳು. ಅನಂತರ, ಬಲ ಮೊಲೆ ಹಾಲನ್ನು ಕಲಸಿ ಮುದ್ದಿ ಮಾಡಿ ಒಂದು ಗಂಡು ರೂಪವನ್ನೂ ಎಡ ಮೊಲೆ ಹಾಲನ್ನು ಕಲಿಸಿ ಒಂದು ಹೆಣ್ಣು ರೂಪವನ್ನೂ ಮಾಡುವಳು. ಶಿವನು ಅವುಗಳಲ್ಲಿ ಪ್ರಾಣ ಪ್ರತಿಷ್ಠೆ ಮಾಡುವನು. ಅವರೇ ಮುದ್ದುಗೊಂಡ ಹಾಗೂ ಮುದ್ದವ್ವನೆಂಬ ಆದಿ ದಂಪತಿಗಳಾಗುವರು. ಈ ಸತಿ ಪತಿಗಳಿಂದ ಜನಿಸಿದ ಸಂತತಿಯೇ ಹಾಲುಮತದವರು. ಇವರೆಲ್ಲ ಕುರಿ ಕಾಯುತ್ತಾ ಬಂದುದರಿಂದ ಕುರುಬರಾದರು.

ಮತದ ಉತ್ಪತ್ತಿಯಂತೆ ಮತದ ಆರಾಧ್ಯದೈವ, ಬೀರಲಿಂಗನ ಜನನಕ್ಕೂ ಪೋಷಣೆಗೂ ಪರಮೇಶ್ವರ ಪಾರ್ವತಿಯರ ಸಂಬಂಧವನ್ನು ಪುರಾಣ ಹೇಳುತ್ತದೆ. ಬೀರದೇವನ ಬಾಲ್ಯದ ಕಥೆ ಚಂದ್ರಹಾಸನ ಕಥೆಯಂತೆದೈವೀ ಕೃಪೆ, ಆಶ್ಚರ್ಯಕರ ಘಟನೆಗಳಿಂದ ರಮ್ಯವಾಗಿದೆ. ಶ್ರೀಕೃಷ್ಣನ್ನು ಸೋದರ ಮಾವ ಕಂಸ ಕೊಲ್ಲಲು ಹೊಂಚಿಸಿದಂತೆ ಇಲ್ಲಯೂ ಸೋದರಮಾವ ಕಾಳಿನಾರಾಯಣಯತ್ನಿಸುತ್ತಾನೆ.

ಲಂಬಾಣಿ ಜನಾಂಗದ ಕುಲಮೂಲ ಐತಿಹ್ಯ :-

ಮೊಟ್ಟ ಮೊದಲು ಪ್ರಪಂಚ ಸೃಷ್ಟಿಕರ್ತನಾದ 'ಧಜ್'ನಿಂದ 'ಕವರದಜ್' ಈತನಿಂದ ಕವರ್ ಥಾಳ, ಇವನಿಂದ ತೀಡಾ ಹಾಗೂ ಛೇಡಾ ಎನ್ನುವವರು ಉತ್ಪತ್ತಿಯಾದರಂತೆ. ಮುಂದೆ ತೀಡಾದನಿಂದ 'ಗೋರ್' ಹಾಗೂ 'ಛೇಡಾ' ನಿಂದ 'ಕೋರ್' ಇವರಿಬ್ಬರ ಉತ್ಪತ್ತಿಯಾಯಿತು. 'ಕೋರ್' ಎಂದರೆ ಲಂಬಾಣೇತರ ಜನ. 'ಗೋರ್' ಎಂದರೆ ಲಂಬಾಣಿ ಜನ. ಈ 'ಗೋರ್'

ಎಂಬುವವನಿಗೆ ನಾತಡ್, ಜೋಗಡ್, ಖೇಡಮ್, ಮೋಲಾ ಹಾಗೂ ಮೋಟಾ ಎಂದು ಐದು ಜನ ಮಕ್ಕಳು ಹುಟ್ಟುತ್ತಾರೆ. ಇವರುಗಳಿಂದಲೇ ಮುಂದೆ ವಿಭಿನ್ನ ಪಂಗಡಗಳಾಗಿ ಜನ್ಮ ತಳೆಯುತ್ತವೆ. 'ನಾತಡ' ನಿಂದ ಚಿಗರಿಕಾರರಾದರು, ಜೋಗಡನಿಂದ 'ಜೋಗಿ', ಖೇಡಮ್‌ನಿಂದ ಲಾಭೋಣೋ, ಮೊಟಾನಿಂದ ಮಾರವಾಡಿ ಎಂಬುವವರ ಉತ್ಪತ್ತಿಯಾಗುತ್ತದೆ. ಆದರೆ 'ಮೋಲಾ' ಎನ್ನುವವನು ಮಾತ್ರ ಆಜ್ಮ ಬ್ರಹ್ಮಚಾರಿಯಾಗಿ ಉಳಿದ. ಆದರೂ ಮೋಲಾ ಲಂಬಾಣಿಗರ ಮೂಲ ಪುರಷನೆಂದು ಕರೆಯಲಾಗುತ್ತದೆ. ಇದಕ್ಕೆ ಬಹುಜನ ವಿದ್ವಾಂಸರ ಅಭಿಪ್ರಾಯವೋ ವ್ಯಕ್ತವಾಗಿದೆ.

ಮೋಲಾ ಶ್ರೀಕೃಷ್ಣನ ಪರಮಭಕ್ತ ಮೇಲಾಗಿ ಈತ ಬ್ರಹಚಾರಿ ಇರುವುದರಿಂದ ಶ್ರೀಕೃಷ್ಣನಲ್ಲಿ ಪಶುಪಾಲನೆ ವೃತ್ತಿ ಕೈಗೊಂಡಿದ್ದ. ಹೀಗಾಗಿ ಸಹಜವಾಗಿಯೇ ಕೃಷ್ಣನ ಹೆಂಡತಿ ರಾಧಿಕಾ ಮೋಲಾನನ್ನು ಪ್ರೀತ್ಯಾದರಗಳಿಂದ ಕಾಣುತ್ತಿದ್ದಳು. ಮೋಲಾನ ಇನ್ನುಳಿದ ಸಹೋದರರೆಲ್ಲಾ ಮದುವೆಯಾಗಿ ತಮ್ಮ ಸಂತಾನ ವಂಶಾಭಿವೃದ್ಧಿಯಾಗಿರುವುದನ್ನು ರಾಧಿಕಾಳ ಮುಂದೆ ತನ್ನ ಇಂಗಿತ ವ್ಯಕ್ತಪಡಿಸಿದ. ಇದನ್ನು ಅರಿತ ರಾಧಿಕಾ ಮೋಲಾನ ಬ್ರಹ್ಮಚರ್ಯಕ್ಕೆ ಭಂಗಬರದಂತೆ ಅವನ ವಂಶದ ಕುಡಿ ಬೆಳೆಯುವಂತೆ ಮಾಡಲು ಯೋಚಿಸಿದಳು. ರಾಧಿಕಾರಾಣಿ ಸಾರ್ವಭೌಮ ಅಧಿಕಾರಿಣಿಯಾಗಿದ್ದಳು. ಇವಳ ಅಧೀನದಲ್ಲಿ ಹಲವು ಜನ ಮಾಂಡಲಿಕ ರಾಜರಿದ್ದರು. ಹೀಗಾಗಿ ಅವಳು ಚೌಗಡದಿಂದ (ಇಂದಿನ ಚಿತ್ತೂರಗಡ) ಒಬ್ಬ ಬಾಲಕನನ್ನು, ಪಾವಗಡದಿಂದ ಇನ್ನೊಬ್ಬನನ್ನು ಹಾಗೂ ರಾವುಗಡ (ರಾಜಸ್ಥಾನದ ರಾಹುರಿ ಮನೆತನ)ದಿಂದ ಮತ್ತೊಬ್ಬ ಬಾಲಕನನ್ನು ಹೀಗೆ ಬೇರೆ ಬೇರೆ ಪ್ರದೇಶಗಳಿಂದ ಒಟ್ಟು ಮೂರು ಜನ ಬಾಲಕರನ್ನು ಕರೆಸಿ ಅವರನ್ನು ಮೋಲಾನಿಗೆ ದತ್ತಕ ಪುತ್ರರನ್ನಾಗಿ ಕೊಟ್ಟು ಅವರಿಗೆ ಕ್ರಮವಾಗಿ ಚವ್ಹಾಣ, ಪವಾರ ಹಾಗೂ ರಾಠೋಡ ಎಂದು ರಾಧಿಕಾ ನಾಮಕರಣ ಮಾಡಿದರು. ಈ ರೀತಿ ದತ್ತುಕ ತೆಗೆದುಕೊಮಡ ಮೋಲಾನ ಮಕ್ಕಳು ಬೆಳೆದು ಪ್ರಾಪ್ತ ವಯಸ್ಸಿಗೆ ಬರಲು, ಸಮಾಜದಿಂದ ಬಹಿಷ್ಕರಿಸಲ್ಪಟ್ಟ ಒಬ್ಬ ಬಡಬ್ರಾಹ್ಮಣನ ಮೂರು ಜನ ಕನ್ಯೆಯರೊಂದಿಗೆ ಇವರ ಮದುವೆ ಜರುಗುತ್ತದೆ. ಚವ್ಹಾಣ, ಪವಾರ ಹಾಗೂ ರಾಠೋಡರಿಗೆ ಕ್ರಮವಾಗಿ ನಾಗರಸಿ, ಅನಾವರಿ ಹಾಗೂ ಖೋಗರಸಿ ಎಂಬ ಬ್ರಾಹ್ಮಣ ಕನ್ಯೆಯರನ್ನು ಮದುವೆ ಮಾಡಿ ಮೋಲಾ ತನ್ನ ವಂಶವೃಕ್ಷವನ್ನು ಬೆಳೆಸಿಕೊಂಡನೆಂದು ಹೇಳಲಾಗುತ್ತದೆ.[೮೧]

ಐತಿಹ್ಯ ೧:-

ಒಂದು ಸಲ ಶ್ರೀ ಕೃಷ್ಣ ದನಕಾಯಲು ಅಡವಿಯಲ್ಲಿ ಸಂಚರಿಸುತ್ತಿದ್ದ ಅನಾಥ ಬಾಲಕ 'ಮೋಲಾ' ಎಲ್ಲಿಂದಲೋ ಬಂದು, ತಾನು ನಿರ್ಗತಿಕನೆಂದೂ, ತನಗೆ ಆಶ್ರಯ ನೀಡಬೇಕೆಂದೂ ಅತ್ಯಂತ ದೈನ್ಯತೆಯಿಂದ ಬೇಡಿಕೊಂಡನು. ಆಗ ಶ್ರೀಕೃಷ್ಣ ಅವನನ್ನು ತನ್ನೊಂದಿಗೆ ದನಗಾಯಲು ಇಟ್ಟುಕೊಂಡನು. ಕಾಲಾಂತರದಲ್ಲಿ ಶ್ರೀ ಕೃಷ್ಣನು ತನ್ನ ಪ್ರೀತಿಯ ರಾಣಿ ರಾಧಾಳನ್ನು ಬಿಟ್ಟು ಉಳಿದ ಗೋಪಿಕಾ ಸ್ತ್ರೀಯರನ್ನೂ ಗೋವುಗಳನ್ನು ತನ್ನ ಸ್ನೇಹಿತರಿಗೆ ದಾನವಾಗಿ ಕೊಟ್ಟನು. ಈ ವಿಷಯ ಮೋಲಾನಿಗೆ ತಿಳಿದು ತುಂಬಾ ಕೆಡುಕೆನಿಸಿತು. ಮೋಲಾನನ್ನು ರಾಧಾಳಿಗೆ ನಿಡಿದಾಗ ಸೇವಾ ಭಾವನೆಯಿಂದ ಮೋಲಾ ರಾಧಾಳ ಮನಸ್ಸನ್ನು ಆಕರ್ಷಿಸಿದ.

ರಾಧಾಳೊಂದಿಗೆ ಕಾಡಿನಲ್ಲಿ ಸಂಚರಿಸತೊಡಗಿದ. ಇಬ್ಬರೂ ಸಂಚಾರದ ಸಮಯದಲ್ಲಿ ಕ್ರಮೇಣ ಗೀತ, ನೃತ್ಯ ಕಲೆಯನ್ನು ಕರಗತ ಮಾಡಿಕೊಂಡರು. ಸಂಚಾರದ ಈ ಸಮಯದಲ್ಲಿ 'ಭವಯ್ಯಾ' ಎನ್ನುವ ಕಲಾಕಾರ ಮಂತ್ರವಾದಿಯು ತನ್ನ

ಅಣ್ಣ ತಮ್ಮಂದಿರೊಂದಿಗೆ ಜಗಳವಾಡಿ ಮನೆ ಬಿಟ್ಟು ಬರುತ್ತಿರುವಾಗ ಇವರ ಬೆಟ್ಟಿಯಾಯಿತು. ಆ ಮೇಲೆ ಅವನನ್ನು ಇವನೊಂದಿಗೆ ಸೇರಿಸಿಕೊಂಡು ಸಂಚರಿಸುತ್ತ ಹೀಗೆಯೇ ಮುಂದಕ್ಕೆ ಸಾಗಿದರು.

ಈ ಮೂವರು ತಮ್ಮಲ್ಲಿರುವ ವಿಶೇಷ ಕಲೆಯನ್ನು ಉಪಯೋಗಿಸಿಕೊಂಡು ಪೌರಂಗಡ ಹಾಗೂ ಚೌಗಡ ಎಂಬಲ್ಲಿಗೆ ಬಂದು ನೃತ್ಯ ಪ್ರದರ್ಶನ ಮಾಡಿ ಎರಡೂ ರಾಜ್ಯಗಳ ರಾಜರನ್ನು ಸಂತೋಷಗೊಳಿಸಿ, ಅವರಿಂದ ಒಬ್ಬೊಬ್ಬ ಬಾಲಕರನ್ನು ಕಾಣಿಕೆಯಾಗಿ ಪಡೆದು ಮುಂದೆ 'ಮಚ್ಚೀರಡ್' ಎಂಬಲ್ಲಿಗೆ ಬಂದು ಅಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿ ಒಬ್ಬ ಬಾಲಕನನ್ನು ಪಡೆದರು.

ಹೀಗೆ ಮೂರು ರಾಜ್ಯಗಳಿಂದ ಮೂರು ಜನ ಬಾಲಕರನ್ನು ಪಡೆದು, ಅವುಗಳು, ಮೋಲಾನಿಗೆ ಇರಲೆಂದು ನಿರ್ಧರಿಸಿ, ಭವಯ್ಯಾನಿಗಾಗಿ ಮತ್ತೆ ಮುಂದಿನ ರಾಜ್ಯಗಳಲ್ಲಿ ನೃತ್ಯಕಲೆಯನ್ನು ಪ್ರದರ್ಶಿಸಿ, ಮಕ್ಕಳನ್ನು ಪಡೆಯಲೇಬೇಕೆಂದು ಆಶಿಸಿ 'ಭುರ್‌ಗಡ್' ಎಂಬಲ್ಲಿಗೆ ಬಂದರು. ಆ ಪ್ರದೇಶದಲ್ಲಿ 'ಕೋರಿ ಹುಳ'ಗಳ ಕಾಟ ಹೆಚ್ಚಾಗಿತ್ತು. ರಾಜನ ಅಪ್ಪಣೆಯನ್ನು ಪಡೆದು ಇಡೀ ದಿನ ರಾತ್ರಿ ಗೀತೆ ನೃತ್ಯಕಲೆಯನ್ನು ಪ್ರದರ್ಶಿಸಿ ಕೋರಿಹುಳಗಳನ್ನು ಕಟ್ಟಿಹಾಕಿದರು.

ಭವಯ್ಯ ತನ್ನ ಮಂತ್ರ ವಿದ್ಯಾಬಲದಿಂದ ಆ ಕೆಲಸವನ್ನು ಮಾಡಿದನು. ರಾಜನು ಇದನ್ನು ಕಂಡು ಬೆರಗಾಗಿ, ಭವಯ್ಯ ಮಹಾಮಂತ್ರವಾದಿ ಎಂಬುದನ್ನು ತಿಳಿದಿ ಅವನನ್ನು ಅರಮನೆಗೆ ಕರೆದೊಯ್ದು ಕೊಲೆಗೈದನು. ಆಗ ತಮ್ಮ ಸಂಗಿಡಿಗರನ್ನು ಕಳೆದುಕೊಂಡು ರಾಧಾ, ಮೋಲಾ ಅವನ ಮೂರು ಜನ ಮಕ್ಕಳು ತುಂಬಾ ದುಃಖಿಸಿದರು. ರಾಜ ಅವರ ದುಃಖವನ್ನು ಕಂಡು ಒಬ್ಬ ಭವಯ್ಯ ಸತ್ತ ರೇ ನಾಯ್ತು. ನಿಮಗೆ ಇಬ್ಬರು ಗವಯ್ಯಗಳನ್ನು ಕೊಡುತ್ತೇನೆಂದು ಹೇಳಿದನು. ರಾಜೀನ ಗಜರಾ (ಢಾಡಿ-ಢಾಲಿಯಾ) ಎಂಬ ಹೆಸರಿನ ಇಬ್ಬರು ಗವಯ್ಯಾಗಳನ್ನು ಜೊತೆ ಮಾಡಿಕೊಂಡು ಮುಂದೆ ಸಾಗಿದರು. ಕಾಲಕ್ರಮೇಣ ಮೋಲಾನ ಮೂರೂ ಜನ ಮಕ್ಕಳು ಪ್ರಾಪ್ತವಯಸ್ಕರಾದ ಮೇಲೆ ಮದುವೆ ಮಾಡಲು ಯೋಚಿಸಿದನು.

ಪೂರ್ವದಲ್ಲಿ ಬ್ರಾಹ್ಮಣರಲ್ಲಿ ಹೆಣ್ಣು ಋತುಮತಿಯಾಗುವುದರೊಳಗಾಗಿ ಮದುವೆ ಮಾಡಿ ಕೊಡುವ ಪದ್ಧತಿ ಜಾರಿಯಲ್ಲಿತು. ಮದುವೆಯ ಮುಂಚೆ ಮೈನೆರೆದರೆ ಅವರ ಕಣ್ಣುಕಟ್ಟಿ ಕಾಡಿಗೆ ಬಿಟ್ಟು ಬರುವ ಸಂಪ್ರದಾಯ ಅವರಲ್ಲಿತ್ತು. ಹೀಗಿರುವಾಗ ಒಬ್ಬ ಬ್ರಾಹ್ಮಣನಿಗೆ ಮೂರು ಜನ ಹೆಣ್ಣುಮಕ್ಕಳಿದ್ದರು. ಈತ ಎಲ್ಲೋ ತೀರ್ಥಯಾತ್ರೆಗೆಂದು ಹೋಗಿ ಬರುವಷ್ಟರಲ್ಲಿ ಮೂರು ಜನ ಹೆಣ್ಣು ಮಕ್ಕಳು ಮೈನೆರೆದಿದ್ದರು.

ಬ್ರಾಹ್ಮಣ ಇಂಥ ಅವಮಾನದಿಂದ ಸಮಾಜದಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸೆಂದು ಭಾವಿಸಿ, ತನ್ನ ಮೂರು ಜನಮಕ್ಕಳನ್ನು ಕರೆದುಕೊಂಡು ಸಮುದ್ರದಲ್ಲಿ ಬಿದ್ದು ಸಾಯಲು ನಿರ್ಧರಿಸಿಕೊಂಡು ಕಾಡಿನ ಮೂಲಕ ಬರುತ್ತಿದ್ದನು. ಅದೇ ಸಮಯಕ್ಕೆ ಮೋಲಾನ ಮೂರು ಜನ ಮಕ್ಕಳು ಬೇಟೆಗಾಗಿ ಅಲ್ಲಿಗೆ ಬರುತ್ತಿರುವಾಗ ಆ ಮೂರು ಜನ ಬ್ರಾಹ್ಮಣ ಕನ್ನೆಯರನ್ನು ಕಂಡು ಪರಸ್ಪರ ಆಕರ್ಷಿತರಾಗಿ ಮದುವೆಯಾಗಲು ನಿಶ್ಚಯಿಸಿದರು. 'ಮೋಲಾ' ಅವರ ಇಚ್ಛಾನುಸಾರ ಮದುವೆ ಮಾಡಿದರು. ಮುಂದೆ ಅವರಿಂದ ಮೋಲಾನ ವಂಶವೃಕ್ಷ ಬೆಳೆಯಿತು.

ಐತಿಹ್ಯ೨:-

ಸುಗ್ರೀವನ ವಂಶದಲ್ಲಿ 'ಮೋಲಾ''ಮೋತಾ' ಎಂಬ ಸಹೋದರರಿದ್ದರು. ಮೋಲಾನಿಗೆ ಸಂತಾನವಿರಲಿಲ್ಲವಾದ್ದರಿಂದ ಆತನು ಒಂದು ಸಲ ನೃತ್ಯಕಲಾ ಪ್ರದರ್ಶನ, ಹಾಗೂ ಸಾಹಸಕಾರ್ಯವನ್ನು ಮಾಡಲು ತನ್ನ ಹೆಂಡತಿ ರಾಧಾಳೊಂದಿಗೆ ಹೊಗಿ ಮೂರು ಜನ ರಾಜರೆದುರಿಗೆ 'ರಾತ್ ನಾಚ್' (ರಾತ್ರಿನೃತ್ಯ) ಮಾಡಿ ತಮ್ಮ ಚಾತುರ್ಯ ಪ್ರದರ್ಶಿಸಿದರು. ಮೋಲಾನ ಚಾತುರ್ಯದ ಜೊತೆಗೆ ರಾಧಾಳ ಸೌಂದರ್ಯವನ್ನು ಕಂಡು ಮೂವರೂ ರಾಜರುಗಳಿಗೆ ಸಂತೋಷವಾಯಿತು.

ಮೋಲಾನ ಕೋರಿಕೆಯ ಮೇರೆಗೆ ಮೂವರೂ ಮೂರು ಜನ ಮಕ್ಕಳನ್ನು ಕೊಟ್ಟರು. ಆ ಮಕ್ಕಳಿಗೆ ಮೋಲಾ ಛವಿಯಾ, ಲೋಹಿಯಾ ಪಂಚಾರ, ರಾತಡೆ ಎಂದು ಹೆಸರಿಟ್ಟನು. ಮುಂದೆ ಈ ಮೂವರೂ ದೊಡ್ಡವರಾದ ಮೇಲೆ ಮಾಡಿದನು. ಇದರಿಂದ ರಾತಡೆನಿಂದ ರಾಠೋಡ ವಂಶ, ಛವಿಯಾನಿಂದ ಚವ್ಹಾಣ ವಂಶ ಹಾಗೂ ಲೋಹಿಯಾ ಪಂಚರನಿಒಂದ 'ಪವಾರ' ವಂಶ ಬೆಳೆಯಿತೆನ್ನಲಾಗಿದೆ. ಹೀಗೆ ಲಂಬಾಣಿಗಳಲ್ಲಿ ತಮ್ಮ ವಂಶೋತ್ಪತ್ತಿಯ ಬಗೆಗೆ ಅನೇಕ ಐತಿಹ್ಯ ಹಾಗೂ ಜನಪದ ಕತೆಗಳು ಪ್ರಚಲಿತವಾಗಿವೆ. ಅವುಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವುದು ಕಷ್ಟಸಾಧ್ಯವಾದರೂ ಆ ಹಿನ್ನೆಲೆಯಲ್ಲಿ ಕೆಲವು ಪೌರಾಣಿಕಾಂಶಗಳು ಅಡಗಿರುವುದು ಸ್ಪಷ್ಟ.[೮೨] ಇವುಗಳಿಂದ ಅವರ ವಂಶದ ಉತ್ಪತ್ತಿ ಹೀಗೆಯೇ ಎಂದು ಹೇಳಲು ಬರುವುದಿಲ್ಲ. ಮೌಖಿಕ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಜನಪದ ಐತಿಹ್ಯಗಳು ಅನೇಕ ರೂಪಾಂತರವನ್ನು ಪಡೆದುಕೊಂಡು ಬರುತ್ತವೆ. ಬಹುತೇಕ ಐತಿಹ್ಯಗಳಲ್ಲಿ 'ಮೋಲಾ'ನ ಹೆಸರು ಪ್ರಸ್ತಾಪವಾಗುವುದರಿಂದ 'ಮೋಲಾ' ಲಂಬಾಣಿಗಳ ಮೂಲ ಪುರುಷನಾಗಿರುವಲ್ಲಿ ಸಂದೇಹವಿಲ್ಲ. ಅವನಿಂದಲೇ ಲಂಬಾಣಿಗಳ ವಂಶವೃಕ್ಷ ಬೆಳೆಯಿತೆನ್ನುವುದು ಹಿರಿಯ ಲಂಬಾಣಿಗರೆಲ್ಲರ ಅಭಿಮತವಾಗಿದೆ.

ದೊಂಬರ ಮೂಲ ಕುರಿತು ಐತಿಹ್ಯ:-

ಬುಡ್ಡಕಟ್ಟು ಜನಾಂಗದ ಬಗ್ಗೆ ಅಧ್ಯಯನ ಮಾಡಬೇಕಾದರೆ ಮೊದಲು ಅವರಲ್ಲಿ ಪ್ರಚಲಿತವಿರುವ ದಂತಕಥೆ ಐತಿಹ್ಯ ಪುರಾಣಗಳಿಗೆ ಮೊರೆ ಹೋಗುವುದು ಅನಿವಾರ್ಯ, ಈ ಬುಡಕಟ್ಟು ಜನರ ಬಗ್ಗೆ ಮೂಲ ಮಾಹಿತಿಯು ದೊರಕುವುದು ಇವುಗಳ ಮುಖಾಂತರದಿಂದಲೆ ಆದರಿಂದ ಇವುಗಳ ಅಧ್ಯಯನ ಅವಶ್ಯಕವಾಗಿದೆ.

ಐತಿಹ್ಯ ೧:-

ಒಬ್ಬ ರೆಡ್ಡಿಗೆ ಇಬ್ಬರು ಹೆಂಡತಿಯರಿದ್ದರು. ಹೀಗಿರುವಾಗ ಒಮ್ಮೆ ಕಿರಿಯ ಹೆಂಡತಿಯಾದವಳು ಗಂಡನಿಗಾಗಿ ಹೊಲಕ್ಕೆ ಬುತ್ತಿಕಟ್ಟಿಕೊಂಡು ಹೋದಾಗ ಅಲ್ಲಿಯೇ ಒಂದು ಹೆಣ್ಣು ಮಗುವಿಗೆ ಜನ್ಮ ಕೊಡುತ್ತಾಳೆ. ಆ ಹೊಲದಲ್ಲಿಯೇ ಗುಡಿಸಲು ಹಾಕಿ ತಾಯಿ ಮಗುವಿನ ಆರೈಕೆ ಮಾಡಲಾಗುತ್ತದೆ. ನಂತರದ ದಿನಗಳಲ್ಲಿ ಮನೆಗೆ ಹೋದರೆ ಮನೆಯಲ್ಲಿರುವ ರೆಡ್ಡಿಯ ಹಿರಿಯ ಹೆಂಡತಿ ಇವಳನ್ನು (ಸವತಿ) ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಹಿರಿಯ ಹೆಂಡತಿಯ ಹಟಕ್ಕೆ ಮಣಿದ ರೆಡ್ಡಿ ತನ್ನ ಕಿರಿಯ ಹೆಂಡತಿ ಮತ್ತು ಆ ಮಗುವನ್ನು ಮನೆಯಿಂದ ಹೊರಗಡೆಯೇ ಇಟ್ಟು ಅವರಿಗೆ ಒಂದಿಷ್ಟು ಭೂಮಿ, ಪಾತ್ರೆ, ಹಗ್ಗ, ಡಂಬು, ಕೊಟ್ಟು ಕಳುಹಿಸಿದನು. ಇಷ್ಟರಿಂದಲೇ ಹೊಟ್ಟೆ ಹೊರೆಯಬೇಕಾಗಿ ಮಾಡಿಕೊಂಡರು. ಕಸರತ್ತು, ಹಾಡು ಕುಣಿತಗಳನ್ನು ಮೈಗೂಡಿಸಿಕೊಂಡು ಬದುಕು ಸಾಗಿಸಹತ್ತಿದರು. ಇವರೇ ದೊಂಬರರೆಂದು ಕರೆಯಿಸಿಕೊಂಡರು.

ಐತಿಹ್ಯ೨:-

ಒಬ್ಬ ರೆಡ್ಡಿಗೆ ಇಬ್ಬರು ಹೆಂಡರಿದ್ದರು. ಕಿರಿಯ ಹೆಂಡತಿಗೆ ಹುಟ್ಟಿದ ಮಗ ಹುಟ್ಟಿನಿಂದಲೇ ಅಂಗಹೀನ. ಇದು ಅನಿಷ್ಟಕಾರಕವಾದುದೆಂದು ಜ್ಯೋತಿಷ್ಯಗಾರರು ಹೇಳಿದ್ದಕ್ಕೆ ರೆಡ್ಡಿ ಈ ಮಗುವನ್ನು ತೊರೆದು ಬಿಡುವಂತೆ ತನ್ನ ಕಿರಿಯ ಹೆಂಡತಿಗೆ ಆಜ್ಞೆಮಾಡಿದನು. ಹೆತ್ತಕರಳು ಚುರ್ ಗುಟ್ಟುತ್ತಿತ್ತು. ಆ ತಾಯಿ ಮಗುವನ್ನು ದನದ ಕೊಟ್ಟಿಗೆಯಲ್ಲಿ ಬಿಟ್ಟು ಬಿಟ್ಟಳು. ಅದರಿಂದಾಗಿ ಅಗಣಿತ ದನಕರುಗಳ ಸಾವಿಗೀಡಾದವು. ಬೇಸತ್ತ ತಾಯಿ ಆ ಮಗುವನ್ನು ಗುಪ್ತವಾಗಿ ಒಬ್ಬ ಭಿಕ್ಷುಕನಿಗೆ ಒಪ್ಪಿಸಿದಳು. ಆ ಭಿಕ್ಷುಕ ಮಗುವನ್ನು ಒಂದು ಬಾವಿಗೆ ಹಾಕಿದ, ಮಗು ಸಾಯಲಿಲ್ಲ, ಜೋರಾಗಿ ಅಳತೊಡಗಿತು.

ಆ ಆಳುವಿಕೆಯನ್ನು ಕೇಳಿ ಪಾರ್ವತಿ ಪರಮೇಶ್ವರರು ಬಂದು ಮಗುವಿಗೆ ಅಂಗಾಂಗ ಬರುವಂತೆ ಆಶೀರ್ವದಿಸಿದರು. ಬಾವಿಯೊಳಗಿಂದಲೇ ಮಿಂಚಿನಂತೆ ಜಿಗಿದು ಬಂದು ಅವರ ಪಾದಕ್ಕೆ ನಮಸ್ಕರಿಸಿದನು. ಪಾರ್ವತಿ ಪರಮೇಶ್ವರರು ತಕ್ಷಣ ಮಾಯವಾದರು. ಅನಂತರ ಆ ಹುಡುಗ ಬೀದಿಯಲ್ಲಿ ಹೋಗುತ್ತಿದ್ದ ಕಸರತ್ತುಗಾರರ ಗುಂಪನ್ನು ಸೇರಿಕೊಂಡು ಈ ಅಲೆದಾಟದಲ್ಲಿಯೇ ಒಬ್ಬಳನ್ನು ಮೆಚ್ಚಿಕೊಂಡನು. ಅವನ ಸಂತತಿಯವರೇ ತಾವು ಎನ್ನುತ್ತಾರೆ ಡೊಂಬರು. ಮಗಳು ಬೆಳೆದು ದೊಡ್ಡವಳಾದಳು. ಈ ರೀತಿ ಬೀದಿ ಬೀದಿ ಅಲೆಯುತ ಹರೆಯ ಪೋರಿಯನ್ನು ಯಾರೂ ಮದುವೆಯಾಗಲಿಲ್ಲ. ಇದರಿಂದಾಗಿ ಅವಳು ಡೊಂಬರ ಚನ್ನಸಾನಿ ಎಂದು ಕರೆಯಿಸಿಕೊಂಡಳು. ಬೀದಿ ಕಾಮಣ್ಣರ ಕಾಮತೃಷ್ಣೆಯನ್ನು ತೀರಿಸುವ ವೇಶ್ಯೆಯಾದಳು, ಚೆನ್ನ ಸಾನಿಯ ಮಕ್ಕಳೇ ಡೊಂಬರಾದರೆಂದು ಹೇಳಲಾಗುತ್ತದೆ.

ಐತಿಹ್ಯ೩:-

ಈ ಒಂದು ಪ್ರಕಾರ, ರಾಜಸ್ಥಾನದ ಮನೆತನದಲ್ಲಿ 'ಬೆಂಗನ' ಎಂಬುವವನು ದುಡಿಯುತ್ತಿದ್ದನು. ಮುಂದೆ ಕೆಲವು ದಿನಗಳ ತರುವಾಯ ಅವನು ಅದೇ ಮನೆತನದ ರಾಜಕುಮಾರಿ 'ಭೀಕರಿ' ಎಂಬುವವಳನ್ನು ಅಪಹರಿಸಿಕೊಂಡು ಮದುವೆಯಾದನು. ಅವರ ಸಂತತಿಯಿಂದ, ಫೀಸ (ಫೀಸಾಡಿ) ಮಾರ (ಮಾರವಾಡಿ), ಸಾಳ (ಡೊಂಬರ), ಮೇಲಾ (ಲಂಬಾಣಿ), ಬಿಮಡ (ಮೇಲುಶಿಕಾರಿ).

ಹೀಗೆ ಐದು ಜನ ಗಂಡುಮಕ್ಕಳಾದರು. ಮುಂದೆ ಅವರು ಮದುವೆಯಾಗಿ ಬೇರೆ ಬೇರೆಯಾದರು. ಫೀಸನಿಗೆ ಕಬ್ಬಿಣಬುಟ್ಟಿ, ಕುಡಗೋಲು, ಮಾರನಿಗೆ ಒಂದು ಗುಂಜಿ ಬಂಗಾರ, ಸಾಳನಿಗೆ ಒಂದು ಕತ್ತೆ ಡುಮರ, ಮೇಲಾನಿಗೆ ಒಂದು ಆಕಳು ಗೋಣಿಚೀಲ, ಬಿಮಡನಿಗೆ ಒಂದು ನಾಯಿ ಬಿಲ್ಲುಬಾಣ ಹೀಗೆ ಸಮನಾಗಿ ಹಂಚಿಕೊಟ್ಟರು. ಅವರವರು ತಮ್ಮ ಪಾಲಿಗೆ ಬಂದ ವಸ್ತು ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ಸ್ವತಂತ್ರ ವೃತ್ತಿಕೈಗೊಂಡರು. ಇವರಲ್ಲಿಯ ಸಾಳನ ವಂಶದವರೇ ಡಮರು ಬಾರಿಸುತ್ತ ಆಟವಾಡುತ್ತ ಡೊಂಬರಾಟದವರೆಂದು ಪ್ರತೀತಿ ಇದೆ.[೮೩]

ಬುಡಕಟ್ಟು ಗುಮಪಿನವರನ್ನು ಕುರಿತು ಅಧ್ಯಯನ ಮಾಡುವಾಗ ಮೊದಲು ಅವರಲ್ಲಿ ಪ್ರಚಲಿತವಿರುವ ದಂತಕಥೆ ಐತಿಹ್ಯ ಮರಾಣಗಳಿಗೆ ಮೊರೆ ಹೋಗುವುದು ಅನಿವಾರ್ಯ. ಏಕೆಂದರೆ ಈ ಕಥೆಗಳ ಹಿನ್ನೆಲೆಯಲ್ಲಿ ಅನೇಕ ವಾಸ್ತವ ಸಂಗತಿಗಳು ಅಡಕವಾಗಿರುತ್ತವೆ.

ಒಡ್ಡರ ಮೂಲ ಕುರಿತ ಐತಿಹ್ಯ:-

'ಒಡ್ಡ' ಎಂಬುದು ವೃತ್ತಿ ಸೂಚಕ ಪದ, 'ಒಡ್ಡ' ಎಂದರೆ ಸಾಮಾನ್ಯವಾಗಿ ಹರಿಯುವ ಹಳ್ಳ ಕೊಳ್ಳಗಳಿಗೆ ಅಡ್ಡಲಾಗಿ ಉದ್ದನೆಯ ಮಣ್ಣನ್ನು ಗುಂಪು ಗುಂಡಾಗಿ ಹಾಕುವುದಕ್ಕೆ 'ಒಡ್ಡ', 'ಒಡ್ಡು' ಎಂದು ಕರೆಯುವುದು ರೂಢಿ. ಇದನ್ನು ನಿರ್ಮಿಸುವವರನ್ನು 'ಒಡ್ಡರು' ಎಂದು ಕರೆದಿರಬೇಕು. ಏಕೆಂದರೆ ಒಡ್ಡರ ಗಂಡಸರು ಮತ್ತು ಹೆಂಗಸರ ದೇಹ ಅತ್ಯಂತ ಗಟ್ಟಿಮುಟ್ಟಿಯಾದದ್ದು. ವಿಜಯನಗರ ಅರಸರ ಕಾಲದಲ್ಲಿ ಆಂಧ್ರದಿಂದ ಕರ್ನಾಟಕಕ್ಕೆ ಬಂದಿರುವುದಾಗಿ ಹೇಳುವ ಒಡ್ಡರ ಮೂಲವನ್ನು ಕುರಿತು ಅನೇಕ ಐತಿಹ್ಯಗಳು ದೊರೆಯುತ್ತವೆ.

ಒಮ್ಮೆ ಶಿವ-ಪಾರ್ವತಿಯರು ಭೂಲೋಕ ಸಂಚಾರ ಮಾಡುತ್ತಿರುವಾಗ ತುಂಬಾ ಬಾಯಾರಿಕೆಯಿಂದ ನರಳುತ್ತ ಅನೇಕ ಕಡೆ ಸುತ್ತಾಡಿದರೂ ಕುಡಿಯಲು ನೀರು ದೊರೆಯಲಿಲ್ಲ. ಅಲೆದಾಡುವಾಗ ಬೆವತು ಬಿಟ್ಟಿದ್ದರು. ಶಿವನ ಬೆವರ ಹನಿಯಿಂದ ಪುರುಷ, ಪಾರ್ವತಿಯ ಬೆವರಿನಿಂದ ಸ್ತ್ರೀಯೊಬ್ಬಳು ಜನಿಸಲು ಅವರಿಗೆ ಗುದ್ದಲಿ, ಸಲಿಕೆ, ಬುಟ್ಟಿಯನ್ನು ಕೊಟ್ಟು ಬಾವಿಯೊಂದನ್ನು ತೆಗೆಯಲು ಹಚ್ಚಿದರಂತೆ. ಅವರು ಬಾವಿ ತೋಡಲು ಶಿವ-ಪಾರ್ವತಿಯರು ನೀರು ಕುಡಿದು, ನೀವಿಬ್ಬರು ಸುಖದಿಂದ ಬಾಳಿರೆಂದು ಉಡುಗೊರೆ ಕೊಟ್ಟು ಹರಸಲು, ಅತೃಪ್ತಿಗೊಂಡ ಆ ಸ್ತ್ರೀಪುರುಷರು ಶಿವನನ್ನು ಶಪಿಸಹತ್ತಿದರು.

ಇದರಿಂದ ಕೋಪಿತನಾದ ಶಿವನು ಬೆವರಿನಿಂದ ಜನಿಸಿದ ನಿಮಗಿಷ್ಟು ಅಹಂಭಾವ ಇರುವುದಾದರೆ ಬೆವರು ಸುರಿಸಿ ಹಾಗೆಯೇ ಬಾವಿ ತೋಡುತ್ತ ಒಡ್ಡು ಕೆರೆಗಳನ್ನು ನಿರ್ಮಿಸುತ್ತ ಜೀವಿಸಿರಿ ಎಂದು ಶಾಪವಿತ್ತನಂತೆ.[೮೪] ಅಂದಿನಿಂದ ದಂಪತಿಗಳಿಬ್ಬರೂ. ಅದೇ ವೃತ್ತಿಯಲ್ಲಿ ಮುಂದುವರೆದರು. ಅವರವಂಶಜರೇ ನಾವು ಎನ್ನುತ್ತಾರೆ ಒಡ್ಡರು. ಈ ಐತಿಹ್ಯ ಬಹುಶಃ ಒಡ್ಡರು ತಮ್ಮ ವೃತ್ತಿಗನುಗುಣವಾಗಿ ಸೃಷ್ಟಿಸಿಕೊಂಡಿರಬೇಕು. ಅದೇನೇ ಇದ್ದರೂ ಅವರು ಇಂದು ಶ್ರಮದಿಂದ ಬದುಕು ಸಾಗಿಸುತ್ತಿರುವುದು ಮಾತ್ರ ಸುಸ್ಪಷ್ಟ.

ಡಕ್ಕಲಿಗರ ಮೂಲವನ್ನು ಕುರಿತ ಐತಿಹ್ಯ:-

ದೇವಾದಿದೇವತೆಗಳು ಕೂಡಿ ಕೈಲಾಸದಲ್ಲಿ ಶಿವ ಪಾರ್ವತಿಯರ ಮದುವೆಯನ್ನು ನಿಶ್ಚಯಿಸಿ, ಜಾಂಬವ ಋಷಿಯ ಹತ್ತಿರದಿಂದ ಮಂಗಲಸೂತ್ರ ಮತ್ತು ಕಾಲುಂಗರ ತರಲು ಬ್ರಹ್ಮನ್ನು ಕಳುಹಿಸಿಕೊಟ್ಟಿದ್ದರು. ಬ್ರಹ್ಮನು ಜಾಂಬವ ಋಷಿಯ ಬಳಿ ಹೋಗಿ ಕೇಳಿದಾಗ, ಶುಭಕಾರ್ಯಕ್ಕೆ ಅಡತಡೆಯುಂಟು ಮಾಡಬಾರದೆಂದು, ಹೆಪ್ಪಮುನಿ, ಬಿಗಮುನಿ, ನೀಲಮುನಿ, ನಿಚ್ಚಮುನಿ, ಪಾಲಮುನಿ, ಪಚ್ಚಮುನಿ ಮತ್ತು ರಗತಮುನಿ ಎಂದು ಏಳು ಮಕ್ಕಳಿದ್ದಾರೆ. ಅವರಲ್ಲಿ ಯಾರಾದರೊಬ್ಬರನ್ನು ಕರೆ ತರುವಂತೆ ಜಾಂಬವ ಋಷಿ ಬ್ರಹ್ಮನಿಗೆ ಹೇಳಿದನು.

ಆಗ ಬ್ರಹ್ಮ ರಕ್ತಮುನಿಯನ್ನು ಕರೆತಂದು ಜಾಂಬವ ಋಷಿಯ ಎದುರಿಗೆ ನಿಲ್ಲಿಸಿದನು. ಜಾಂಬವ ಋಷಿ ರಕ್ತಮುನಿಯ ಕಣ್ಣು ತೆಗೆದು ಕಾಡಾಗಿ, ಮೂಗ ತೆಗೆದು ಮುಸಿ, ಕಿವಿ ತೆಗೆದು ತಕ್ಕಡಿ, ಹಲ್ಲುತೆಗೆದು ಕರಗಳ, ಎದೆ ತೆಗೆದು ಅಡಿಗಲ್ಲ, ಕೈ ತೆಗೆದು ಚಮಚಾ, ಕಳ್ಳ ತೆಗೆದು ಜನಿವಾರ, ವೃಷಣ ತೆಗೆದು ತೂಕದ ಕಲ್ಲು, ಶಿಶ್ನ ತೆಗೆದು ಸುತಿಗಿ, ತಲೆಬುರುಡಿ ಬೋರಿ ಮಾಡಿದ, ಮೈಮ್ಯಾಗಿನ ಚರ್ಮದಿಂದ ಲೆದಿಮಾಡಿದ, ಮೆದುಳಿನಿಂದ ಅರಗ ತೆಗೆದು, ತಿದಿ ಊದಿ ಸುತಿಗೆಯಿಂದ ಬಡಿದು, ತಾಳಿ ಮತ್ತು ಕಾಲುಂಗರಗಳನ್ನು ಮಾಡಿಕೊಟ್ಟ ಆದ 'ದೊಕ್ಕಿ' ಎಲುಬು ಮಾತ್ರ ಹೆಚ್ಚಾಯಿತು. ಅದನ್ನು ತಿಪ್ಪೆಯಲ್ಲಿ ಒಗೆದನು. ಬ್ರಹ್ಮನು

ಶಿವನಿಗೆ ತಾಳಿ ಮತ್ತು ಕಾಲುಂಗರವನ್ನು ಒಯ್ದುಕೊಟ್ಟು ಮೆಚ್ಚುಗೆ ಪಡೆದು. ''ಇವನ್ನೆಲ್ಲ ಹೇಗೆ ತಯಾರಿಸಿದಿ'' ಎಂದು ಶಿವ ಬ್ರಹ್ಮನಿಗೆ ಕೇಳಲು, ಬ್ರಹ್ಮನು ನಡೆದ ವೃತ್ತಾಂತವನ್ನೆಲ್ಲ ವಿವರವಾಗಿ ಹೇಳಿದನು.

ಜಾಂಬವ ಋಷಿಯ ಭಕ್ತಿಗೆ ಮೆಚ್ಚಿ ಶಿವನು ಬೇಕಾದ ವರ ಕೇಳಲು ಹೇಳಿದನು. ಆಗ ಜಾಂಬವ ಋಷಿಯು ತಾನು ಪ್ರತಿದಿನ ತಿರುಗಾಡುವಾಗ ತಿಪ್ಪೆಯಲ್ಲಿ ಮಗನ ಡೊಕ್ಕಿ ಎಲುಬನ್ನು ನೋಡಿ ಮಗನ ನೆನಪು ಅಲೆಯಾಗುತ್ತಿತ್ತು. ಅದಕ್ಕಾಗಿ ನನ್ನ ಮಗನಾದ ರಕ್ತಮುನಿಗೆ ಮರಳಿ ಜೀವ ಕೊಡಬೇಕೆಂದು ಕೇಳಿಕೊಂಡನು. ಆಗ ಶಿವನ ತಿಪ್ಪೆಯಲ್ಲಿ ಬಿದ್ದಿದ್ದ ಡೊಕ್ಕೆ ಎಲುಬಿಗೆ ' ಬತ್ತೀಸ ಮಂತ್ರ' ಹಾಕಲು 'ರಕ್ತಮುನಿ' ಅದೇ ತಾನೆ ಮಲಗಿರುವವನು ಎಚ್ಚೆತ್ತಂತೆ ಏಳಲು, ''ಕರೆ ನಿನ್ನ ಮಗನ್ನು'' ಎಂದನ್ನು ನಾನು ಮರಳಿ ಕರೆದುಕೊಳ್ಳುವುದಿಲ್ಲ. ಎಲ್ಲಿ ಹುಟ್ಯಾನ ಅಲ್ಲಿಯೇ ಬೆಳೆಯಲಿ, ಅವನ್ನು ಸಾಕಿ ಸಲುಹುವ ಜವಾಬ್ದಾರಿ ನನ್ನದು, ಎಂದನು.

'ಡೊಕ್ಕಾಗ' ಹುಟ್ಟಿದ್ದರಿಂದ 'ಡೊಕ್ಕಲಿಗ್ಯಾ' ಎಂದು ಕರೆದು, ನನ್ನ ವಂಶ ಇರುವವರೆಗೂ ಬದುಕು. ನಿನಗೆ ಉಪ್ಪುಗೂಡಿ ಒಂಬತ್ತು ಪದಾರ್ಥ ಕೊಟ್ಟ ಸಾರ್ತೇನಿ. ಹೊಳಿ ಕೆರಿಬಾವಿಗೆ ಹೋಗಿ ನೀರ ತರಗುಡುದಿಲ್ಲ. ಕಲ್ಲು ಹಿಡಿದು ಬೀಸಿಗೊಂಡುವುದಿಲ್ಲ. ಒಣಕಿ ಹಿಡಿದು ಕುಟ್ಟಿಸಿಕೊಡುದಿಲ್ಲ. ಇನ್ನೊಬ್ಬರ ಮನಿಗೆ ಭಿಕ್ಷಕ್ಕೆ ಬಿಡುವುದಿಲ್ಲ. ಅರಸಾಕ್ಷಿ ಪರಸಾಕ್ಷಿ, ಭೂದೇವಿ ಸಾಕ್ಷಿಯಾಗಿ ನಿನ್ನ ಸಲುಹತೀನೆಂದು ವಚನಕೊಡುವನು. ''ನಿನ್ನ ಮನ್ಯಾಗ ಹಂಚಿಟ್ಟು ರೊಟ್ಟಿ ಮಾಡದಿ ಅಂದ್ರ ಹೆಣ ಸುಟ್ಟಾಂಗ'' ಎಂದೆಲ್ಲಾ ಜಾಂಬವ ಋಷಿ ರಕ್ತಮುನಿಗೆ ಹೇಳಿದನು. ಈ ರಕ್ತಮುನಿಯ ವಂಶಜರೇ ಡೆಕ್ಕಲಿಗರು. ಡಕ್ಕಲಿಗನು ''ನಾನು ಇಂದಿನಿಂದ ಯಾವುದೇ ಕೆಲಸವನ್ನು ಮಾಡುವುದಿಲ್ಲ. ನನಗೆ ಕುಳಿತಲ್ಲಿಯೇ ಅನ್ನ ನೀರು ತಂದು ಕೊಡಬೇಕು'' ಎಂದು ಜಾಂಬವ ಋಷಿಗೆ ಹೇಳಿದನು. ಆಗ ಜಾಂಬವ ಋಷಿಯು ''ನನಗೆ ಸಲಾಮು ಹಾಕೂದ ಬಿಟ್ಟು, ಬೇರೆಯವರ ಮನೆಗೆ ಭಿಕ್ಷೆಗೆ ಹೋದ್ರೆ, ಎರಡು ಕಣ್ಣ ತಗೆಯುವುದಾಗಿ'' ಕರಾರುಗಳನ್ನು ಹಾಕಿದನು. ಇದಕ್ಕೆ ಡಕ್ಕಲಿಗನು ಒಪ್ಪಿಕೊಂಡು, ಶಿವನಿಗೆ ಕೆಲವು ಮಾತುಗಳನ್ನು ನಡೆಯಿಸಿಕೊಡಬೇಕೆಂದು ಕೇಳಿಕೊಂಡನು. ''ಕುಂತ್ರ ಕುದರಿ ಕೊಡಬೇಕು, ನಿಂತ್ರ ಒಂಟಿ ಕೊಡಬೇಕು, ನಾ ಸತ್ರ ಐಗೋಳು ಹುಗಿಬೇಕು, ನನ್ನ ನಾಯಿ ಸತ್ರ ನಾ ಮಲಿಗ ಹುಗಿಬೇಕು.[ಅಜಿ] ನನ್ನ ಕತ್ತೆ, ಸತ್ರಗಾಣಿಗ ಹುಗಿಬೇಕು'' ಆಗ ಶಿವನು ಡಕ್ಕಲಿಗನ ಮಾತನ್ನು ನಡೆಸಿ ಕೊಡಲು ಒಪ್ಪಿಕೊಂಡನು. ಅಂದಿನಿಂದ ಜಾಂಬವ ಋಷಿಯ ಅನುಯಾಯಿಗಳಾದವರು ಮಾದಿಗರಾದರು. ಶಿವನ ಅನುಯಾಯಿಗಳಾದವರು ರಕ್ತಮುನಿಯ ವಂಶಜರು 'ಡಕ್ಕಲಿಗ'ರಾದರೆಂದು ಈ ಐತಿಹ್ಯದಿಂದ ತಿಳಿದು ಬರುತ್ತದೆ.

ಹೊಲೆಯವರ ಮೂಲ ಕುರಿತ ಐತಿಹ್ಯ:

ಐತಿಹ್ಯ ಒಂದು:

ಶಿವ-ಪಾರ್ವತಿಯರು ಪ್ರತಿದಿನ ನದಿಗೆ ಸ್ನಾನಕ್ಕೆ ಹೋಗುತ್ತಿದ್ದರು. ಒಮ್ಮೆ ಪಾರ್ವತಿಗೆ ಮುಟ್ಟು ಅಲಿಯಾಗಲು ಅದನ್ನು ಜೋಪಾನವಾಗಿ ಅರಿವೆಯಲ್ಲಿ ಕಟ್ಟಿ ತೊಡೆಯಲ್ಲಿಯೇ ಇಟ್ಟುಕೊಂಡು ನದಿಗೆ ಹೋಗುವಾಗ ಬಿರುಕಿನಲ್ಲಿ ಆ ಮುಟ್ಟಿನ ಗಂಟು ಬಿದ್ದುಬಿಟ್ಟಿತು. ಪಾರ್ವತಿ ಇದರ ಕಡೆಗೆ ಲಕ್ಷ್ಯ ವಹಿಸಿಲಿಲ್ಲ. ಸ್ನಾನಮಾಡಿ ತಿರುಗಿ ಬರುವಷ್ಟರಲ್ಲಿ ಗಂಡು ಮಗುವಾಗಿ ಆಡುತ್ತಲಿತ್ತು, ಚೆಲುವಾದ ಈ ಮಗುವನ್ನು ಬೆಳೆಸಬೇಕೆಂದು ಪಾರ್ವತಿಗೆ ಆಶೆಯಾಗಲು, ಅದನ್ನು ತೆಗೆದುಕೊಂಡು ಹೋಗಿ 'ಚೆನ್ನ' ಎಂದು

ನಾಮಕರಣ ಮಾಡಿ, ತನ್ನ ಮನೆಯ ಬಾಗಿಲು ಮತ್ತು ಕಾಮಧೇನುವನ್ನು ಕಾಯಲು ಹೇಳಿದಳು. ಚೆನ್ನನಿಗೆ ಯಾವ ಕಾರಣಕ್ಕೂ ಹಾಲಿನ ಕೆನೆ ಮತ್ತು ಬೆಣ್ಣೆ ಕೊಡಬೇಡವೆಂದು ಶಿವ-ಪಾರ್ವತಿಗೆ ಆಜ್ಞೆ ಮಾಡಿದ್ದನು.

ಒಂದು ದಿನ ಮುಸುರಿ ತೊಳೆದು ಬಾಗಿಲಲ್ಲಿ ಬಿದ್ದ ಹಾಲಿನ ಕೆನಯನ್ನು ಆ ಮಗು ತಿಂದಿತು. ಹಾಲಿನ ಕೆನೆಯೇ ಇಷ್ಟು ರುಚಿಕಟ್ಟಾಗಿರುವಾಗ ಇದನ್ನು ಕೊಡುವ ಕಾಮಧೇನು ಅದೆಷ್ಟು ರುಚಿಯಾಗಿರಬೇಕೆಂದೆನಿಸಿ, ದನಕಾಯಲು ಹೋದಾಗ 'ಚೆನ್ನ'ಒಂದು ದಿನ ಕಾಮಧೇನುವನ್ನು ಕೊಂದು ತಿಂದುಬಿಟ್ಟ. ಈ ವಿಷಯ ಶಿವನಿಗೆ ತಿಳಿಯಲು 'ಚೆನ್ನ'ನಿಗೆ ಚಂಡಾಲನಾಗಿ ಸ್ಮಶಾನದಲ್ಲಿ ಬಿದ್ದಿರು ಎಂದು ಶಾಪ ಕೊಟ್ಟನಂತೆ. ಈ ಕಾರಣವಾಗಿ 'ಚೆನ್ನ' ಸುಡುಗಾಡನ್ನು ಕಾಯುತ್ತ ಅದರ ಬಡತನ ಪಡೆದು ಬದುಕಹತ್ತಿದನು. ಅವನ ಸಂತತಿಯವರೇ 'ಹೊಲೆಯರು' ಎಂದು ಹೇಳಿಕೊಳ್ಳುತ್ತಾರೆ.

ಐತಿಹ್ಯ ಎರಡು:

ಈ ಐತಿಹ್ಯ ಹೊಲೆಯರು 'ಬೇಡ' ಜನಾಂಗದ ಮೂಲಕ್ಕೆ ತಮ್ಮ ಮೂಲವನ್ನು ಸಮರ್ಥಿಸಿಕೊಳ್ಳುವುದನ್ನು ಸೂಚಿಸುತ್ತದೆ. ಹೇಗೆಂದರೆ, ಕಾಮಧೇನುವನ್ನು ಕೊಂದು ತಿಂದ ಮಗು ಶಿವನಿಂದ ಶಾಪ ತಡೆದು ಶಿವಾಲಯದಿಂದ ಹೊರಹಾಕಲ್ಪಟ್ಟಿರುತ್ತಾನೆ. ಆಸರೆಯಿಲ್ಲದ ಆ ಮಗು ತನ್ನ ಗೆಳೆಯ ಬೇಡನೊಬ್ಬನ್ನು ಕರೆದುಕೊಂಡು ಕ್ಷಮೆಯಾಚನೆಗೆ ಶಿವನಲ್ಲಿಗೆ ಬರುತ್ತಾನೆ. ಇವರನ್ನು ಲೆಕ್ಕಿಸದ ಶಿವನ ಒಳಗೆ ಮಂದಿರದಲ್ಲಿ ಹೋಗಲು, 'ಬೇಡ' ಬಲಗಡೆ, ಆ 'ಹುಡುಗ' ಎಡಗಡೆ ಬಾಗಿಲ್ಲಿಯೇ ನಿಲುವರು. ಆಗ ಬಲಬಾಗಿಲ ಅಧಿಕಾರ ದನಗಾಯಿ ಹುಡುಗನದೆಂದು ಹಂಚಿಕೊಂಡು ಕಾಯುತ್ತ ಕುಳಿತರಂತೆ. ಅವರ ಸಂತತಿಯೇ ಕ್ರಮೇಣ 'ಬಲಗೈಯವರು', 'ಎಡಗೈ'ಯವರು ಆದರೆಂದು ಹೇಳುತ್ತಾರೆ.

ಐತಿಹ್ಯ ಮೂರು:

ಮೂರು ಲೋಕವೂ ನೀರಿನಿಂದ ತುಂಬಿಕೊಂಡಿತ್ತು. ಸೂರ್ಯ, ಚಂದ್ರ, ನಕ್ಷತ್ರಗಳಾವವೂ ಇರಲಿಲ್ಲ. ಕೇವಲ ಜಾಂಬವಮುನಿ ಒಬ್ಬ ನಿದ್ದ. ಈತ ಪಾತಾಳದಲ್ಲಿ ಪಾದವಿಟ್ಟು, ಮೃತ್ಯುಲೋಕದಲ್ಲಿ ಹೊಂಕುಳನ್ನು ಸ್ವರ್ಗಲೋಕದಲ್ಲಿ ತಲೆಯನ್ನಿಟ್ಟಿದ್ದನು. ಕಾಲಾನಂತರ ನೀರು ಹೆಪ್ಪುಗಟ್ಟಿ ಒಂದು ವಸ್ತುವಾಯಿತು. ಅದರಲ್ಲಿ ಶಂಖವೊಂದು ಉತ್ಪತ್ತಿಯಾಯಿತು. ಈ ಶಂಖದಲ್ಲಿ ತತ್ತಿಗಳು ಉತ್ಪತ್ತಿಯಾಯಿತು. ಈ ಶಂಖದಲ್ಲಿ ತತ್ತಿಗಳು ಉತ್ಪತ್ತಿಯಾಗಹತ್ತಿದವು. ಇವೇ ಕ್ರಮೇಣ ಶಂಕರ, ಮೇಘ, ಬ್ರಹ್ಮ ನಂದಿಯಾಗಿ ಜನಿಸಿದರು.

ನಂದೀಶ್ವರ ಶಿವ-ಪಾರ್ವತಿಯನ್ನು ಹೊತ್ತು, ಹೇಳಿದಲ್ಲಿ ಇಳಿಸುತ್ತಿದ್ದ, ಪ್ರತಿದಿನ ಇದೇ ರೀತಿ ನಡೆಯುತ್ತಿರುವಾಗ, ನಂದೀಶ್ವರನಿಗೆ ಕನಸೊಂದು ಬಿದ್ದಿತು. ಅದೇನೆಂದರೆ ಜಾಂಬವಮಿನಿಗೆ ಇಟ್ಟ ಏಳುಜನ ಮಕ್ಕಳನ್ನು ಸಂಹರಿಸಿದರೆ ಆ ಸೃಷ್ಟಿಯನ್ನು ನಿರ್ಮಿಸಲು ಸಾಧ್ಯ ಎಂಬುದಾಗಿತ್ತು. ಇದೇ ಸಮಯದಲ್ಲಿ ಶಿವನು ನೀರನ್ನೆಲ್ಲ ಮಣ್ಣಾಗಿಸಿ, ಭೂಮಿಯನ್ನು ನಿರ್ಮಿಸುವುದರಲ್ಲಿ ಪ್ರಯತ್ನಿಸಿ ವಿಫಲನಾಗಿದ್ದನು. ಏಕೆಂದರೆ ಜಾಂಬವಮುನಿ ತನ್ನ ಜಡೆಗಳೆನ್ನೆಲ್ಲ ಹಗಲಿನಲ್ಲಿ ನೀರಲ್ಲಿ ಬಿಟ್ಟಾಗ ಭೂಮಿಯಾಗುತ್ತಿತ್ತು. ರಾತ್ರಿ ಜಡ ಎಳೆದುಕೊಳ್ಳಲು ಮತ್ತೆ ನೀರಾಗುತ್ತಿತ್ತು. ಇದೊಂದು ಶಿವನಿಗೆ ಬಗೆಹರಿಯದ ಸಮಸ್ಯೆಯಾಗಿತ್ತು.

ಆಗ ನಂದಿ ತನ್ನ ಕನಸಿನ ವೃತ್ತಾಂತವನ್ನು ಪ್ರಸ್ತಾಪಿಸಲು, ಶಿವನು ಸಭೆಯೊಂದಕ್ಕೆ ಜಾಂಬವಮುನಿಯ ಮಕ್ಕಳನ್ನು ಕರೆಯಲು ತೀರ್ಮಾನಿಸಿ, ಈ ಸಭೆಯ ಸಂಗತಿಯನ್ನು ಜಾಂಬವಮಿನಿಗೆ ತಿಳಿಸಲು ಶಿವ-ಪಾರ್ವತಿಯರು ನಂದಿಯ ನೇರಿ

ಜಾಲಮಾರ್ಗದ ಪಯಣ ಬೆಳೆಸಿದರುಲ. ಜಲಮಾರ್ಗದಲ್ಲಿ ಹೋಗುತ್ತಿರುವಾಗ ಪಾರ್ವತಿಗೆ ಮುಟ್ಟಾಗಿ, ರಕ್ತದ ಹನಿಯೊಂದು ನಂದಿಯ ಬದಿಯಿಂದ ಜಾರಿ ಪಾದಕ್ಕಿಳಿದು ಕುರದ ಕೆಳಗೆ ಸೇರಿ ಅಲ್ಲಿಯೇ ನೆಲೆಸಿ, ಮುಂದೆ ಗರ್ಭಧರಿಸಿ ಗಂಡುಮಗು ಜನಿಸಿತು. ಆ ಕೂಸು ನಂದಿಯ ಕಾಲಿಗೆ ತೊಡಕಾಲು ಹೊಡೆಯುತ್ತಿರುವಾಗಲೇ ಶಿವ-ಪಾರ್ವತಿ ಜಾಂಬವ ಮುನಿಯನ್ನು ತಲುಪಿದ್ದರು.

ಗಾಢವಾದ ನಿದ್ರಾವಸ್ಥೆಯಲ್ಲಿರುವ ಜಾಂಬವ ಮುನಿಯನ್ನು ಎಚ್ಚರಿಸಲು ನಂದಿಯ ತನ್ನ ಹಣೆಯಲ್ಲಿರುವ ಮೂರನೆಯ ಕೊಂಬಿನಿಂದ ತಿವಿಯಲು, ಮುನಿ ಎದ್ದು ಕೋಪದಿಂದ ನಂದಿಯ ಕೊಂಬನ್ನು ಮುರಿದನು.[೮೬] ಅದು ನೀರಲ್ಲಿ ತೇಲುತ್ತ ಬಂದು ನಂದಿಯ ಕಾಲಿಗೆ ಜೋತು ಬಿದ್ದಿರುವ ಮಗುವಿಗೆ ತಲುಪಿತು. ತಂದೆ ನಂದೀಶ್ವರನು ತನಗೆ ತಿನ್ನಲು ಏನೋ ಕೊಟ್ಟನೆಂದು ತಿಳಿದು, ಆ ಕೊಂಬನ್ನು ಮಗು ಬಾಯಲ್ಲಿ ಹಿಡಿಯಲು, ಒಂದು ಬಗೆಯಾದ ಶಬ್ದ ಹೊರಟಿತು. ಆ ಮಗು ಮುಂದೆ ಅದನ್ನೇ ಊದುತ್ತ ತಿರುಗಹತ್ತಿದನು. ಅವನ ಸಂತತಿಯವರೇ ಹೊಲೆಯ ಜನಾಂಗದವರು.

ಮಾದಿಗರ ಮೂಲ ಕುರಿತ ಐತಿಹ್ಯ:

ಐತಿಹ್ಯ ಒಂದು:

ಮಾದಿಗರ ತಾವು ಆದಿ ಜಾಂಬವರು, ಜಾಂಬವಂತ ಕುಲದವರು, ಜಾಂಬವ ಪಟ್ಟಣದವರೆಂದು ಹೇಳುತ್ತಾರೆ. ಈ ಜಾಂಬವ, ರಾಮಾಯಣದ ಜಾಂಬವಂತ ಒಂದು ಶಾಪದಿಂದಾಗಿ ತಾವು ಈ ಸ್ಥಿತಿಗೆ ಬಂದಿರುವುದಾಗಿ ಕಥೆಯೊಂದನ್ನು ಹೇಳುತ್ತಾರೆ. ಆ ಕಥೆ ಹೀಗಿದೆ. ಜಾಂಬವ ಕುಲದ ಹುಡುಗನೊಬ್ಬನಿಗೆ ಕಾಮಧೇನುವಿನ ಹಾಲು ಕುಡಿಯಬೇಕೆಂಬ ಆಸೆಯಾಯಿತು. ದೇವತೆಗಳು "ಕುಡಿ" ಎನ್ನುವಾಗ, ಜಾಂಬವ ಅವನನ್ನೂ ತಡೆದನು. ಆದರೂ ಆ ಹುಡುಗ ಹಾಲನ್ನು ಕುಡಿದೇಬಿಟ್ಟನು. ಆನಂತರ ಹಾಲೇ ಇಷ್ಟು ರುಚಿಯಾಗಿರುವಾಗ ಕಾಮಧೇನುವಿನ ಮಾಂಸವೆಷ್ಟು ರುಚಿಯಾಗಿರಬೇಕೆಂದು ತಿಳಿದು ಅದನ್ನು ಕೊಂದು ಮಾಂಸವನ್ನು ನಾಲ್ಕು ಭಾಗಮಾಡಿದನು. ದೇವತೆಗಳು ತಾವು ಮೂರುಭಾಗ ತೆಗೆದುಕೊಂಡು, ಜಾಂಬವ ಹುಡುಗನಿಗೆ ಒಂದು ಭಾಗ ಕೊಟ್ಟರು.

ಈ ಸಂಗತಿ ಶಿವನಿಗೆ ತಿಳಿಯಲು, ಕಾಮಧೇನುವನ್ನು ಮತ್ತೆ ಪಡೆಯಲು ನಿಶ್ಚಯಿಸಿ, ದೇವತೆಗಳು ತಮ್ಮ ಭಾಗವನ್ನೆಲ್ಲ ಮರಳಿಕೊಟ್ಟರು. ಈ ಹುಡುಗ ಅಷ್ಟರಲ್ಲಿ ಅದನ್ನು ಬೆಂಕಿಯಲ್ಲಿ ಸುಟ್ಟು ಬಿಟ್ಟಿದ್ದ. ಅದನ್ನಾದರೂ ಕೊಡು ಎಂದರೂ ಕೊಡಲೊಪ್ಪಲಿಲ್ಲ. ಆ ಭಾಗವನ್ನು ಬಿಟ್ಟು ಕಾಮಧೇನುವಿಗೆ ಜೀವದಾನ ಮಾಡಿದರು. ಅದರ ಗಲ್ಲದ ಭಾಗ ಮಾತ್ರ ಕಪ್ಪಾಗಿ ಗಾಯವಾಯಿತು. ದೇವತೆಗಳದುರಿಗೆ "ಮಾಂಡುತನ" ಮಾಡಿದ್ದರಿಂದ ಶಾಪಗ್ರಸ್ಥನಾಗಿ ಕೀಳು ಕುಲದವನಾದನು. ಆವಾಗಿನಿಂದಲೇ ಅವನು ಮಾದಿಗನಾದನು ಅವನ ವಂಶದವರು ನಾವೆಂದು ಹೇಳುತ್ತಾರೆ.

ಐತಿಹ್ಯ ಎರಡು:

ಇನ್ನೊಂದು ಕಥೆಯಲ್ಲಿ ಜಾಂಬವ ಋಷಿ ಈಶ್ವರನ ಸಭೆಗೆ ಪ್ರತಿದಿನವೂ ತಡವಾಗಿ ಬರುತ್ತಿದ್ದನು. "ಏಕೆ?" ಎಂದು ಶಿವನು ಕೇಳಿದಾಗ, ತನ್ನ ಮಕ್ಕಳ ಬೇಡಿಕೆಗಳನ್ನು ಪೂರೈಸಿ ಬರುವುದರಿಂದ ತಡವಾಗುತ್ತದೆಂದನು. ಶಿವನು ಜಾಂಬವನ ಮಕ್ಕಳ ಮೇಲೆ ಕರುಣೆತೋರಿ ಬೇಡಿದ್ದನು ಕೊಡುವ ಕಾಮಧೇನುವನ್ನು ಅವನಿಗೆ ಕೊಟ್ಟನು. ಒಂದು ದಿನ ಜಾಂಬವ ಮುನಿ ಮನೆಯಲ್ಲಿ ಇಲ್ಲದಿರುವಾಗ, ಸಾಂಖ್ಯಮುನಿ ಅವನ ಮನೆಗೆ ಬಂದನು. ಜಾಂಬವನ ಮಗ ಯುಗಮುನಿ ಅವನನ್ನು ಅತ್ಯಂತ ಆದರಿಂದ

ಸ್ವಾಗತಿಸಿಕೊಂಡು, ಸತ್ಕರಿಸಿ ಊಟ ಮಾಡಿಸಿದನು. ಊಟ ಮಾಡುವಾಗ ಹಾಲಿನ ಕೆನೆ ರುಚಿಯನಿಸಿ, ಸಾಂಖ್ಯನು ಕಾಮಧೇನುವನ್ನು ಕೊಂದು, ಮಾಂಸವನ್ನು ತಿನ್ನುವುದಾಗಿ ಯುಗಮುನಿಗೆ ಕೇಳಿದನು.

ಆದರೆ ಆತ ಇದಕ್ಕೊಪ್ಪಲಿಲ್ಲ, ಬೇಡವೆಂದರೂ ಕೇಳದೆ ಸಾಂಖ್ಯ ಹಸುವನ್ನು ಕೊಂದು, ಎಲ್ಲರಿಗೂ ತಿನ್ನುವಂತೆ ಹೇಳಿದನು. ಈಶ್ವರನ ಸಭೆಯಿಂದ ಜಾಂಬವಮುನಿ ಬಂದಾಗ, ಎಲ್ಲರೂ ಮಾಂಸವನ್ನು ತಿನ್ನುತ್ತಿರುವುದನ್ನು ನೋಡಿದನು. ಸಾಂಖ್ಯ ಮತ್ತು ಯುಗಮುನಿಗಳನ್ನು ನ್ಯಾಯ ನಿರ್ಣಯಕ್ಕಾಗಿ ಶಿವನ ಸಭೆಗೆ ಕರೆದೊಯ್ದನು, ಸಭೆಯ ಒಳಗೆ ಪ್ರವೇಶಿಸದೇ ಇಬ್ಬರೂ ಬಾಗಿಲ್ಲಲ್ಲಿಯೇ ನಿಂತರು. ಶಿವನು ಕೋಪದಿಂದ ನೀವೀರ್ವರೂ ಚಂಡಾಲರಾಗಿರೆಂದು ಶಾಪವಿತ್ತನು. ಸಾಂಖ್ಯನು ಬಾಗಿಲದ ಬಲಗಡೆ ನಿಂತಿದ್ದರಿಂದ ಅವನ ವಂಶಜರು ಬಲಗೈವರು, ಅಂದರೆ ಹೊಲೆಯರಾದರು. ಯುಗಮುನಿ ಬಾಗಿಲದ ಎಡಗಡೆ ನಿಂತಿದ್ದರಿಂದ ಅವನ ಕುಲದವರು ಎಡಗೈಯವರು, ಅಂದರೆ ಮಾದಿಗರಾದರು. ಆ ಶಾಪ ವಿಮೋಚನೆಗಾಗಿ ಜನರಿಗೆ ಚಪ್ಪಲಿ ಹೊಲೆಯುತ್ತೇವೆ ಎಂದು ಹೇಳುತ್ತಾರೆ.[೮೭]

ಹೆಳವರ ಕುರಿತ ಐತಿಹ್ಯಗಳು:

ಹೆಳವರು ತಮ್ಮ ಮೂಲವನ್ನು ಕುರಿತು ಹೇಳುವ ದಂತಕಥೆಯೊಂದು ಹೀಗಿದೆ. ಒಂದಾನೊಂದು ಕಾಲದಲ್ಲಿ ಮೂವತ್ತುಮೂರು ಕೋಟಿ ದೇವಾದಿದೇವತೆಗಳು ಶಿವನೊಡ್ಡೋಲಗದಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ 'ಶೃಂಗಿ' ಹಾಗೂ 'ಭೃಂಗಿ' ಅಷ್ಟೇ ಪ್ರಮುಖಕರು. ಶೃಂಗೆ ಶಿವಪಾರ್ವತಿಯರನ್ನು ಸರಿಸಮವಾಗಿ ಭಕ್ತಿಗೌರವದಿಂದ ಕೈಮುಗಿಯುತ್ತಿದ್ದನು. ಆದರೆ ಭೃಂಗಿಯ ಭಕ್ತಿ ಶಿವನೊಬ್ಬನಿಗೆ ಮೀಸಲು. ಈ ಸೂಜಿಗದ ಸಂಗತಿಯನ್ನರಿತ ಪಾರ್ವತಿಯು ಭೃಂಗಿಯನ್ನುದ್ದೇಶಿಸಿ. ಶಿವನೊಬ್ಬನಿಗೆ ನಮಸ್ಕಾರ ಮಾಡುವಿ, ನನಗೇಕೆ ನಮಸ್ಕರಿಸುವುದಿಲ್ಲ? ಎಂದು ಕೇಳಿದಳು. ಆಗ ತಾಯಿ ತನ್ನ ಪರಮದೈವ ಶಿವನೊಬ್ಬನೇ, ನನ್ನ ಭಕ್ತಿ ಗೌರವ ಶಿವನೊಬ್ಬನಿಗೆ ಮೀಸಲಿಟ್ಟಿರುವೆ ಎಂದನು.

ಈ ಮಾತುಗಳನ್ನು ಸಹಿಸದೇ ಕುಪಿತಳಾದ ಪಾರ್ವತಿ ಕ್ಷಣಾರ್ಧದಲ್ಲಿಯೇ ಭೃಂಗಿಗೆ ಕೈಕಾಲು ಊನವಾಗುವಂತೆ ಶಾಪ ವಿಧಿಸಿದಳು. ಮಾತ್ರವಲ್ಲ ಅವನ ದೇಹದಲ್ಲಿರುವ ರಕ್ತ ಮಾಂಸಗಳನ್ನು ದೃಷ್ಟಿಮಾತ್ರದಿಂದಲೇ ಹೀರಿಕೊಂಡಳು. ಕೊನೆಗೆ ಅಲ್ಲಿ ಉಳಿದಿದ್ದು ಭೃಂಗಿಯ ಎಲುಬಿನ ಹಂದರ ಅದು ಕೂಡ ಕಣ್ಣ ಮುಂದೆ ಇರಬಾರದೆಂದು ಆಕಾಶ, ಭೂಮಿಯ, ಮಧ್ಯೆ ಹಾರಾಡುವಂತೆ ಮಾಡಿದಳು. ಶಿವನಿಗೆ ಈ ವಿಷಯ ನಾರದನಿಂದ ಗೊತ್ತಾದಗ, ಪಾರ್ವತಿಯನ್ನು ಕರೆದು ಕೋಪದಿಂದ ಗದರಿಸಿದನು. ಅವರಿಬ್ಬರ ನಡುವೆ ವಾಗ್ವಾದ ನಡೆಯಿತು. ಭೃಂಗೇಶ್ವರ ನನ್ನ ಮಗ, ಅವನ ಭಕ್ತಿ ಗೌರವಕ್ಕೆ ಮೆಚ್ಚಿರುವೆನು. ಅವನಿಗೆ ಈ ಶಿಕ್ಷೆ ಆಗಬಾರದೆಂದು ಹೇಳಿ ತನ್ನ ಕೈಯಲ್ಲಿಯ ತ್ರಿಶೂಲ ಆಧಾರವಾಗಿಟ್ಟನು. ಕ್ಷಣಾರ್ಧದಲ್ಲಿಯೇ ಭೃಂಗಿಯ ಎಲುಬಿನ ಹಂದರ ತ್ರಿಶೂಲದ ಮೇಲೆ ಬಂದು ನಿಂತಿತು. ಕೊನೆಗೆ ಪಾರ್ವತಿ ಸೋತೆನೆಂದು ಶಿವನಿಗೆ ಶರಣಾದಳು. ಶಿವನ ಅಪ್ಪಣೆ ಮೇರೆಗೆ ಭೃಂಗೇಶ್ವರನಿಗೆ ವಿಧಿಸಿದ ಶಾಪ ಹಿಂತೆಗೆದುಕೊಂಡು, ಮತ್ತೆ ರಕ್ತ ಮಾಂಸವನ್ನು ಧಾರೆ ಎರೆದನು. ಭೃಂಗೇಶ್ವರನಿಗೆ ಶಿವನಂದಿ ಮತ್ತು ಲಿಂಗ ಮುದ್ರೆ ಕೊಟ್ಟು ಈ ಭೂಮಂಡಲ ಇರುವವರೆಗೆ ನಿನ್ನ ಕೀರ್ತಿ ಚಿರಾಯವಾಗಲಿ, ಜಾತಿಮತ ಭೇದವನ್ನು ಅರಿತು ಕುಲಗೋತ್ರ ಆಗುಹೋಗುಗಳನ್ನು ಹೊಗಳುತ್ತ ಅವರಿಂದ ಸಂಭಾವನೆಯಾಗಿ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸು ಎಂದು ಆಶೀರ್ವದಿಸಿ ಮಾಯಾವಾದರು.

ಮುಂದೆ ಭೃಂಗೇಶ್ವರನಿಂದ ಹೆಳವ ಪರಂಪರೆ ಬೆಳೆಯಿತು. ಕಾರಣ ಭೃಂಗೇಶ್ವರ ಹೆಳವರ ಮೂಲ ಪುರುಷರೆಂದು ಐತಿಹ್ಯ, ಹೇಳವರ ಮೂಲವನ್ನು ಕುರಿತು ಮತ್ತೊಂದು ಕತೆ ಹೀಗಿದೆ;

ಬಸವಣ್ಣನವರ ಕಾಲದಲ್ಲಿ ಒಕ್ಕಲು ಗೌಡನಿಗೆ ಏಳುಜನ ಗಂಡು ಮಕ್ಕಳಿದ್ದರು. ಅವರಲ್ಲಿ ಕಿರಿಯವ ಹುಟ್ಟಾ ಅಂಗಹೀನ ಇದ್ದ, ಆದ್ದರಿಂದ ಜನರು ಅವನನ್ನು 'ಹೆಳವ' ಎಂದೇ ಕರೆಯುತ್ತಿದ್ದರು. ಮಕ್ಕಳು ದೊಡ್ಡವರಾದ ಬಳಿಕ ಯೋಗ್ಯ ಕನ್ನೆನೋಡಿ ಮದುವೆ ಮಾಡಿದರು. ಆದರೆ ಅವನಿಗೆ ಯಾರು ಹೆಣ್ಣು ಕೊಡಲಿಲ್ಲ. ಮುಂದೆ ಅಣ್ಣಂದಿರು ಬೇರೆಯಾದರು. ಎಲ್ಲರಿಗೂ ಆಸ್ತಿಯನ್ನು ಸಮನಾಗಿ ಹಂಚಿಕೊಟ್ಟರು. ಹೆಳವನಿಗೆ ಏನೂ ಕೊಡಲಿಲ್ಲ. ಅವರೆಲ್ಲರೂ ದಿನನಿತ್ಯ ಪ್ರತಿಯೊಬ್ಬರ ಮನೆಗೆ ಬಂದು ಊಟ ಮಾಡಿ ಹೋಗು, ಆಸ್ತಿಯಲ್ಲಿ ಪಾಲು ತೆಗೆದುಕೊಂಡು ನೀನೇನ್ ಮಾಡ್ತಿ ಎಂದು ಹೇಳಿದರು. ಹೆಳವನ ತಾಯಿ ಸದಾ ಅವನಿಗೆ ಬೆಂಗಾವಲಾಗಿ ಇದ್ದಳು. ಕುಂಟ ಮಗ ಹೇಗೆ ಜೀವನ ಸಾಗಿಸುವನು ಎಂದು ಚಿಂತೆ ಮಾಡುತ್ತಿದ್ದಳು. ಹೆಳವನು ಯಾರ ಹಂಗಿನಲ್ಲಿಯೂ ಇರಬಾರದೆಂದು ಯೋಚಿಸಿ ಬಡಬಗ್ಗರಿಗೆ ಅನ್ನದಾತವಾಗಿದ್ದ ಬಸವಣ್ಣನವರ ಬಳಿ ಕಲ್ಯಾಣಕ್ಕೆ ಬಂದನು. ಅಲ್ಲಿ ಸಾವಿರಾರು ಜನ ದೀನದಲಿತರಿಗೆ ಮತ್ತು ಶರಣರಿಗೆ ಸ್ಥಳಾವಕಾಶವಿತ್ತು. ಅವರ ಮಧ್ಯೆದಲ್ಲಿಯೇ ಹೆಳವ ಇರತೊಡಗಿದ.

ಬಸವಣ್ಣನವರು ಕಲ್ಯಾಣದಲ್ಲಿ ಅರವತ್ತಮೂರು ಜನ ಶಿವಶರಣರಿಗೆ ಒಂದೊಂದು ಕಾಯಕ ಒದಗಿಸಿಕೊಟ್ಟಿದ್ದರು. ಆಗ ಹೆಳವನು ಬಸವಣ್ಣನವರ ಬಳಿ ಬಂದು ನನಗೂ ಯಾವುದಾದರೊಂದು ಕಾಯಕ ಕೊಡಬೇಕೆಂದು ಕೇಳಿಕೊಂಡನು. ಆಗ ಬಸವಣ್ಣನವರು ಹೆಳವನಿಗೆ ಯಾವ ಕೆಲಸ ಹಚ್ಚಬೇಕು ? ಇವನು ಕುಂಟ ಇವನಿಗೆ ಕೆಲಸ ಹಚ್ಚಿದರೆ ಹೇಗೆ ಮಾಡುವನು ಎಂದು ಯೋಚಿಸಿದರು. ಕೊನೆಗೆ ಒಂದು ಉಪಾಯ ಮಾಡಿ ಹೆಳವನಿಗೆ ಕುಳಿತುಕೊಳ್ಳಲಿಕ್ಕೆ 'ನಂದಿ' ಕೊಟ್ಟು ಪ್ರತಿದಿನ ಬೆಳಗಾಗುವ ಪೂರ್ವದಲ್ಲಿಯೇ ಅರವತ್ತಮೂರು ಜನ ಪುರೋಹಿತರ ಮನೆಗಳಿಗೆ ಹೋಗಿ ಅವರ ಆಗುಹೋಗುಗಳ ಬಗ್ಗೆ ವಿಚಾರಿಸಿಕೊಂಡು ಬರಬೇಕೆಂದು ಹೇಳಿದರಂತೆ, ಹೆಳವನು ದಿನಾಲು ಅದೇ ವೃತ್ತಿ ಮಾಡತೊಡಗಿದ. ಇದು ಒಂದು ವೃತ್ತಿಯಾಗಿಯೇ ಬೆಳೆಯಿತು. ಮುಂದು ಪುರೋಹಿತರು ಯಾವ ಊರುಗಳಿಗೆ ಹೋಗಿ ನೆಲೆಸಿದರೋ ಅಲ್ಲಿಯೂ ಹೋಗತೊಡಗಿದ. ಇದನ್ನು ಕಂಡು ಕಾಳು ಕಡ್ಡಿಗಳನ್ನು ಕೊಡತೊಡಗಿದರು. ಇದು ಒಂದು ವೃತ್ತಿಯಾಗಿಯೇ ಮುಂದುವರಿಯಿತು.[೮೮] ಕೆಲವು ದಿನಗಳಾದ ಬಳಿಕ ಹೆಳವನಿಗೆ ಮದುವೆಯಾಯಿತು. ಅವನ ಹೊಟ್ಟೆಯಿಂದ ಮಕ್ಕಳು, ಮರಿಮಕ್ಕಳು ಹುಟ್ಟಿಕೊಂಡರು. ಅವರು ಕೂಡ ಇದೇ ವೃತ್ತಿಯನ್ನು ಅವಲಂಬಿಸಿಕೊಂಡರು. ಹೆಳವನ ಹೊಟ್ಟೆಯಿಂದ ಹುಟ್ಟಿದ್ದಕ್ಕೆ ಜನ ಹೆಳವನ ಮಕ್ಕಳು ಎಂದು ಕರೆಯತೊಡಗಿದರು.

ಕೊರವರ ಸಂಸ್ಕೃತಿ-ಕೊರವಂಜಿ:

ಈ ಐತಿಹ್ಯಗಳು ಪ್ರತಿಯೊಂದು ಜನಾಂಗದ ಮೂಲದ ಬಗ್ಗೆ ಇದ್ದೇ ಇರುತ್ತವೆ. ಇವುಗಳಲ್ಲಿ ಪೌರಾಣಿಕ ಐತಿಹ್ಯಗಳದು, ಸಾಮಾಜಿಕ ಐತಿಹ್ಯಗಳು, ಐತಿಹಾಸಿಕ ಐತಿಹ್ಯಗಳು ಹೀಗೆ ಹಲವಾರು ವಿಧ. ಅದೇ ಪ್ರಕಾರ ಈ ಕೊರವ ಜನಾಂಗದ ಬಗ್ಗೆ ಹುಟ್ಟಿಕೊಂಡಿರುವ ಕೆಲವು ಪ್ರಚಲಿತ ಐತಿಹ್ಯಗಳನ್ನಿಲ್ಲಿ ಚರ್ಚಿಸಲಾಗಿದೆ.

ಐತಿಹ್ಯ-೧

ಈ ಕೊರವರ ಅಸ್ತಿತ್ವವನ್ನು ಪೌರಾಣಿಕ ಯುಗದಲ್ಲೇ ಕಾಣಬಹುದು. ಈ ಕಪೌರಾಣಿಕ ಹಿನ್ನೆಲೆಯನ್ನು ಸೃಷ್ಟಿಕರಿಸುವ ಸಲುವಾಗಿ ಹಲವಾರು ಕಥೆಗಳು, ಉಪಕಥೆಗಳೇ ಹುಟ್ಟಿಕೊಂಡಿವೆ. ಭಾಗವತದಲ್ಲೂ ಈ ಕುರಿತ ಮಾಹಿತಿ ಲಭ್ಯವಾಗುತ್ತದೆ.

ಹಾಗೆಯೇ ಈ ಕೊರವರು ಪೌರಾಣಿಕ ಯುಗದಲ್ಲಿ ಉಗಮಗೊಂಡರೆಂಬ ನಿಟ್ಟಿನಲ್ಲಿ ಪ್ರಚಲಿತವಾಗಿರುವ ಕೆಲವು ಕಥೆಗಳೂ ಕೂಡ ಈ ಭಾಗವತದ ಕಥೆಯನ್ನು ಹೋಲುತ್ತವೆ.

ಬ್ರಹ್ಮದೇವನಿಂದ ನೇರವಾಗಿ ಭೂಮಿಗೆ ಇಳಿದು ಬಂದವನು ಅಗ್ನೇಶ್ವರವಿನ ಮಗ. ಅವನ ಹೆಸರು 'ವೇಣುಡು' ಎಂಬುದಾಗಿತ್ತು. ಅವನು ಸಿಂಹಾಸನವನ್ನೇರಿ ಭೂಮಂಡಲವನ್ನು ಆಳ್ವಿಕೆ ಮಾಡುತ್ತಿದ್ದ. ಬಹಳ ವರ್ಷಗಳ ಕಾಲ ವೈಭವೋಪೇತವಾಗಿ ಆಡಳಿತ ನಡೆಸಿದ ವೇಣುಡು ಒಂದು ದಿನ ಸತ್ತು ಹೋದ. ಅವನಿಗೆ ಮಕ್ಕಳ ಭಾಗ್ಯವಿಲ್ಲದೇ ಸತ್ತು ಹೋದ್ದರಿಂದ ಈ ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾರು ? ಎಂಬ ಸಂದಿಗ್ಧರ ಪ್ರಶ್ನೆ ಉದ್ಭವವಾಯಿತು. ಈ ಜಟಿಲ ಸಮಸ್ಯೆಯನ್ನು ಬಗೆಹರಿಸುವಲ್ಲಿ ಯಾರೂ ಸಮರ್ಥರಾಗದೆ ಹೋದಾಗ ದಿಕ್ಕುತೋಚದಂತಾದ ಪ್ರಜೆಗಳು ವೇಣುಡುವಿನ ದೇವನ್ನು ಮಣ್ಣಿಗೆ ಹೊಳಲೂ ಎಲ್ಲ, ಬೆಂಕಿಯಿಂದ ಸೂಡಲು ಇಲ್ಲ. ಸ್ವಲ್ಪಕಾಲ ಅವನ ದೇಹವನ್ನು ಹಾಗೆಯೇ ರಕ್ಷಿಸಿ ಇಟ್ಟರು. ಕೆಲಕಾಲನಂತರ ಈ ರೀತಿ ಭೂಲೋಕದಲ್ಲಿ ಉದ್ಭವಿಸಿರುವ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಏಳು ಗ್ರಹಗಳು ಏಕಾಂತವಾಗಿ ಸಭೆ ಸೇರಿದವು. ಈ ಸಭೆಯಲ್ಲಿ ಮುಂದೇನು ಮಾಡಬಹುದು ಎಂಬ ವಿಷಯದ ಬಗ್ಗೆ ಸುದೀರ್ಘವಾದ ಚರ್ಚೆ ಹಾಗೂ ಆಲೋಚನೆಗಳು ನಡೆದವು. ನಂತರ ಕಡೆಯದಾಗಿ ಆ ಏಳು ಗ್ರಹಗಳು ಒಟ್ಟಾಗಿ ಸೇರಿಕೊಂಡು ಸತ್ತ 'ವೇಣುಡು' ವಿನ ಬಲತೊಡೆಯಿಂದ ಒಂದು ಜೀವಿಯನ್ನು ಸೃಷ್ಟಿಸಿದರು. ಆದರೆ ಅವರೆಷ್ಟೇ ಕೂಲಂಕುಷವಾಗಿ ಚರ್ಚಿಸಿ ಜಾಗರೂಕತೆಯಿಂದ ಮಾಡಿದರೂ ಅವರ ಈ ಕೆಲಸ ಯಶಸ್ವಿಯಾಗಲಿಲ್ಲ. ಏಕೆಂದರೆ ವೇಣುಡುವಿನ ಬಲತೊಡೆಯಿಂದ ಸೃಷ್ಟಿಯಾದ ಜೀವಿಯ ದೇಹ ನಿರೂಪವಾಗಿದ್ದುದಲ್ಲದೆ, ಅವನ ಮುಖವು ಸಹ ಅತ್ಯಂತ ವಿಕಾರವಾಗಿತ್ತು. ಆದರಿಂದಾಗಿ ಅವನು ಸಿಂಹಾಸನದಲ್ಲಿ ಕೂರಲು ಭೂಮಂಡಲದ ಅಧಿಪತಿಯಾಗಲು ಯೋಗ್ಯನಲ್ಲ ಎಂದು ತೀರ್ಮಾನಿಸಿದರು.

ಆಗ ಆ ಏಳು ಗ್ರಹಗಳೂ ಮತ್ತೆ ಸಭೆ ಸೇರಿ ಅದೋ ವಿಷಯದ ಬಗ್ಗೆ ಚರ್ಚೆ ನಡೆಸಿದವು. ಕೊನೆಯದಾಗಿ ಆ ಏಳು ಗ್ರಹಗಳಲ್ಲಿ ಒಂದು ಮುಖ್ಯ ಗ್ರಹದ ಸಲಹೆಯ ಪ್ರಕಾರ ಮತ್ತೆ ವೇಣುಡುವಿನ ಬಲ ತೋಳಿನಿಂದ ಮತ್ತೊಬ್ಬನ್ನು ಅದೇ ಪ್ರಕಾರ ಸೃಷ್ಟಿಸಿದರು. ಈ ಬಾರಿ ಜನಿಸಿದನು. ಮೊದಲಿನಂತಿರದೆ ತುಂಬಾ ಯೋಗ್ಯನೂ, ತೇಜಸ್ವಿಯೂ, ಸ್ಫುರದ್ರೂಪಿಯೂ ಆದವಾಗಿದ್ದನು. ಇವನ್ನು ನೋಡಿದ ಗ್ರಹಗಳು ಬಹಳ ಸಂತೋಷಗೊಂಡು "ಪೃಥು ಚಕ್ರವರ್ತಿ" ಎಂದು ನಾಮಕರಣ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಆದರೆ ಮೊದಲನೇ ಸಂತತಿಯಾದ 'ನಿಶಡು' ಎಂಬುವವನು ಈ ರೀತಿ ದಿಢೀರ್ ಬದಲಾದ ನಾಟಕೀಯ ಸನ್ನಿವೇಶದಿಂದಾಗಿ ಬಹಳಷ್ಟು ನಿರಾಶೆಗೊಂಡನು. ಈ ರೀತಿ ನಿರಾಶೆಗೊಳಗಾದ 'ನಿಶಡು' ಸುಮ್ಮನೆ ಕೂರದೆ ತಾನು ರಾಜನಾಗದೆ ಹೋದರೆ ತನ್ನ ಸೃಷ್ಟಿಯಾದರೂ ಏತಕ್ಕಾಯಿತು ? ಎಂದು ದೇವರನ್ನು ಕಾಡಿ ಬೇಡಿ ಕೇಳಿಕೊಂಡನು. ಆಗ ನ್ಯಾಯಬದ್ಧವಾಗಿದ್ದ ಆ ನಿಶಡುವಿನ ಮನವಿಗೆ ಓಗೊಟ್ಟು ದೇವರು "ಪೃಥು ಚಕ್ರವರ್ತಿ" ಯು ಈ ಭೂಮಿಯ ರಾಜನಾಗಿರುವುದರಿಂದ ಈಗ ನಿನ್ನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಸಾಧ್ಯವಿಲ್ಲ. ಕಾರಣ ಊರನ್ನು ಆಳುವ ಬದಲು ನೀನು ಕಾಡನ್ನು ಆಳಬಹುದು, ಎಂಬುದಾಗಿ ಆಜ್ಞಾಪಿಸಿದನು.

ಅಂದಿನಿಂದ 'ನಿಶಡು'ವು ಕಾಡಿಗೆ ರಾಜಾದ ಅವನಿಗೆ ಬೋಯಾ, ಚೆಂಚು, ಯಾನಾದಿ ಮತ್ತು ಕೊರವ ಎಂಬ ಮಕ್ಕಳು ಹುಟ್ಟಿದರು. ಇವರುಗಳಲ್ಲಿ ಬೋಯರು ಮಾತ್ರವೇ ಆ ನಿಶಡುವಿನ ನ್ಯಾಯಬದ್ಧವಾದ ಮಕ್ಕಳು. ಉಳಿದ ಚೆಂಚು, ಯಾನಾದಿ ಮತ್ತು ಕೊರವರು ಧರ್ಮಬಾಹಿರವಾಗಿ ಹುಟ್ಟಿದವರು. ಈ ಕಾರಣದಿಂದಾಗಿ ಇವರುಗಳಿಗೆ ತಮ್ಮ ನಿಜವಾದ ಸೃಷ್ಟಕರ್ತರು

ಯಾರು ಎಂಬ ಚಿಂತೆ ಹತ್ತಿತ್ತು. ಈ ರೀತಿಯಾಗಿ ತಮ್ಮ ಸೃಷ್ಟಿಕರ್ತರನ್ನು ತಿಳಿಯುವ ಸಲುವಾಗಿ ಶಾಂತಚಿತ್ತರಾಗಿ ಕಾಯುತ್ತಿದ್ದುದರ ಪರಿಣಾಮವಾಗಿ ಅವರು ತಮ್ಮನ್ನು ತಾವೇ ಯರುಕಳ ಎಂದು ಕರೆದುಕೊಂಡರು. ಈ ಕಾರಣದಿಂದಾಗಿ ಇವರು 'ಯರಕಳ'ರೆಂದೇ ಬೆಳಕಿಗೆ ಬಂದರು.

ಐತಿಹ್ಯ-೨

ಮೇಲಿನ ಐತಿಹ್ಯ 'ಯರಕಳ' ಎಂಬ ಹೆಸರಿನ ಮೂಲ ಹಾಗೂ ಕಾರಣವನ್ನು ತಿಳಿಸಿದರೆ ಈ ಎರಡನೇ ಐತಿಹ್ಯವು "ಕೊರವ" ಎಂಬ ಹೆಸರು ಬರಲು ಹಾಗೂ ಮೂಲವನ್ನು ವಿಷದಪಡಿಸುತ್ತವೆ. ಮಹಾಭಾರತದಲ್ಲಿ ಪ್ರಮುಖವಾಗಿ ಎರಡು ಬಣಗಳು, ಹೀಗೆಯೇ ಈ ಕೌರವರ ಪಾಂಡವರ ನಡುವೆ ವೈಮನಸು, ದ್ವೇಷ ಹಾಗೂ ಅವರಿಬ್ಬರ ನಡುವೆ ನಡೆದ ಯುದ್ಧವೇ ಮಹಾಭಾರತ ಕಥೆಯ ತಿರುಳು. ಬಾಲ್ಯದಿಂದಲೂ ಬದ್ಧದ್ವೇಷಿಗಳಾದ ಈ ಕೌರವ-ಪಾಂಡವರು ವಯಸ್ಕರಾದಂತೆಲ್ಲಾ ಅವರಿಬ್ಬರ ನಡುವಣ ದ್ವೇಷವೂ ವೃದ್ಧಿಸತೊಡಗಿತು. ದಿನೇದಿನೇ ಮಿತಿಮೀರತೊಡಗಿದ ದುರ್ಯೋಧನನ ಅತಿಯಾದ ದುರ್ಬುದ್ಧಿಯಿಂದ ಬೇಸತ್ತು ಹೋದ ರಾಜಕುಮಾರ ಧರ್ಮರಾಜನು ದುರ್ಯೋಧನನ ಮುಖವನ್ನು ಸಹ ನೋಡಬಾರದೆಂಬ ಉದ್ದೇಶದಿಂದ ರಾಜ್ಯವನ್ನು ತೊರೆದು ಒಮ್ಮೆ ದೇಶಾಂತರ ಹೊರಟು ಹೋಗುತ್ತಾನೆ. ಆದರೆ ಧರ್ಮರಾಜನು ಒಬ್ಬ ಹುಡುಗಿ ಬಹಳ ಗಾಢವಾಗಿ ಪ್ರೀತಿಸಿರುತ್ತಾಳೆ. ಧರ್ಮರಾಜ ಮಾತ್ರ ಅವನ್ನು ಮರೆತಿರುವುದಿಲ್ಲ. ಧರ್ಮರಾಜ ಬಿಟ್ಟು ಹೊರಟು ಹೋದ ಎಂಬ ಸುದ್ಧಿ ಕಿವಿಗೆ ಬಿಳುತ್ತಿದ್ದಂತೆಯೇ ದಿಗ್ಭ್ರಾಂತಲಾಗುತ್ತಾಳೆ.

ರಾಜಕುಮಾರನು ಸಂಪೂರ್ಣವಾಗಿ ಮರೆಯಲೂ ಆಗದೇ ಸೇರಿಕೊಳ್ಳಲೂ ಆಗದೆ ತೊಳಲಾಟಕ್ಕೆ ಸಿಲುಕಿಕೊಳ್ಳುತ್ತಾಳೆ. ಕೊನೆಗೆ ಒಂದುದಿನ ಅವಳು ಮನೆ ಬಿಟ್ಟು ಹೊರಟು ಹೋಗುತ್ತಾಳೆ. ಗೊತ್ತು ಗುರಿಯಿಲ್ಲದ ವ್ಯವಹರಿಸಲು ಭಯಗ್ರಸ್ಥಲಾಗುತ್ತಾಳೆ. ಆಗ ಅವಳೀಗೊಂದು ಉಪಾಯ ಹೊಳೆಯುತ್ತದೆ. ಆ ಪ್ರಕಾರ ಭವಿಷ್ಯ ನುಡಿಯುವವಳಂತೆ ವೇಷ ಹಾಕಿಕೊಂಡು ಊರೂರು, ಬೀದಿ ಬೀದಿ ಅಲೆಯುತ್ತಾ ರಾಜಕುಮಾರ ಧರ್ಮರಾಜನು ಹುಡುಕುತ್ತಾಳೆ. ಕೊನೆಗೊಂದು ದಿನ ತನ್ನ ಪ್ರಯತ್ನದಲ್ಲಿ ಯಶಸ್ವಿಯೂ ಆಗುತ್ತಾಳೆ. ಅಂದರೆ ಧರ್ಮರಾಜನು ಪತ್ತೆ ಹಚ್ಚಿ ಅವಳು ಅವನ ಜೊತೆಗೆ ಸೇರಿಕೊಳ್ಳುತ್ತಾಳೆ. ಆಗ ಗರ್ಭಿಣಿಯಾಗುತ್ತಾಳೆ. ಹೀಗೆ ಈ ಸಂದರ್ಭದಲ್ಲಿ ಇವರಿಬ್ಬರಿಗೆ ಹುಟ್ಟಿದ ಸಂತಾನವೇ 'ಕೊರವ' ಎಂಬ ಹೆಸರನ್ನು ಪಡೆಯಿತು. ಧರ್ಮರಾಯ ಮತ್ತು ಕೊರವ ಹೆಂಗಸಿನಿಂದ ಜನಿಸಿದ ಮಕ್ಕಳೇ ಕೊರವಂಜಿ ಎನ್ನವರು.

ಐತಿಹ್ಯ-೩

ಮೇಲಿನ ಎರಡೂ ಐತಿಹ್ಯಗಳು ಯರಕುಲ ಹಾಗೂ ಕೊರವ ಹೆಸರುಗಳ ಬಗ್ಗೆ ತಿಳಿಸಿದ್ದರೆ, ಈ ಐತಿಹ್ಯವು ಕೊರವರಲ್ಲಿ ಹೆಂಗಸರು ಮಾತ್ರವೇ ಭವಿಷ್ಯ ಹೇಳಲು ಏನು ಕಾರಣ ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಕೊರವರ ಹಲವಾರು ಕಸುಬುಗಳಲ್ಲಿ ಭವಿಷ್ಯ ಹೇಳುವುದೂ ಸಹ ಒಂದು ಪ್ರಮುಖವಾದುದು. ಈ ಕೊರವಂಜಿಯ ಕಲ್ಪನೆ ಹಾಸ್ಯಕ್ಕೆ ಹೆಸರಾದುದು. ಈ ಪಾತ್ರವು ಜನಪದರಿಂದ ಹಿಡಿದು ಮಹಾಕಾವ್ಯಗಳವರೆಗೂ ಮಿಂಚಿದೆ. ಆದರಲ್ಲಿಯೇ ಈ ಕೊರವಂಜಿಯ ವೃತ್ತಿ ಹೆಂಗಸರಿಗಷ್ಟೇ ಸೀಮಿತವಾಗಿರುವುದು ಇಲ್ಲಿ ಗಮನಿಸತಕ್ಕ ಸಂಗತಿ. ಯಾವುದೋ ಒಂದು ಸಂರ್ಭದಲ್ಲಿ ಒಮ್ಮೆ ಪಾರ್ವತಿ ದೇವಿಯು

ಕೊರವಂಜಿಯ ವೇಷಧರಿಸಿ ಶಿವನಿಗೆ ಭವಿಷ್ಯ ಹೇಳಿದಳಂತೆ. ಇವರು ಆಕೆಯ ಮಕ್ಕಳಾದ್ದರಿಂದ ಅಂದಿನಿಂದ ಇತರರಿಗೆ ಕೊರವರು, ಕೊರವಂಜಿಗಳು ಎಂಬ ಹೆಸರು ಬಂದಿದೆಯಂತೆ.

ಐತಿಹ್ಯ-೪

ಈ ಐತಿಹ್ಯವು ಕೂಡಾ ಮೇಲಿನ ಅಂಶವನ್ನೇ ಅಂದರೆ ಕೊರವಂಜಿಯ ವಿಷಯವನ್ನೇ ತಿಳಿಸುತ್ತದೆ ಮತ್ತು ಇವರಿಗೆ ಭವಿಷ್ಯ ಹೇಳುವ ಕಲೆ ಹೇಗೆ ದೈವದತ್ತವಾಗಿ ಬಂದಿತು ಎಂಬುದನ್ನು ವಿವರಿಸುತ್ತದೆ. ಒಮ್ಮೆ ಪಾರ್ವತಿದೇವಿಯ ಸರ್ಪವನ್ನು ಹಿಡಿದುಕೊಂಡು ಸೀಳುತ್ತಾಳೆ. ಅದರ ಹೊಟ್ಟೆಯಲ್ಲಿ ವಜ್ರವೈಢೂರ್ಯಗಳನ್ನು ತುಂಬುತ್ತಾಳೆ. ಅದನ್ನೇ ತನ್ನ ಮಗುವೆಂದು ಭಾವಿಸಿಕೊಂಡು ಅದಕ್ಕೊಂದು ತೊಟ್ಟಿಲನ್ನು ಮಾಡಿ ಕೊಡುವಂತೆ ಮೇದರವನೊಬ್ಬನಿಗೆ(ಬುಟ್ಟಿ ಹೆಣೆಯುವಾತ) ಹೇಳುತ್ತಾಳೆ. ಸರ್ಪವನ್ನು ಕಂಡು ಭಯಗ್ರಸ್ಥನಾದ ಮೇದರವನು ತೊಟ್ಟಿಲು ಮಾಡಿಕೊಡಲು ಒಪ್ಪುವುದಿಲ್ಲ. ಆದರೆ ಅದೇ ಮಾತನ್ನು ಪಾರ್ವತಿದೇವಿಯ ಕೊರಚನೊಬ್ಬನಿಗೆ ಹೇಳುತ್ತಾಳೆ. ಆಗ ಆ ಕೊರಚನು ಅವಳು ಕೇಳಿದಾಕ್ಷಣ ಎರಡೆಣಿಸದೆ ಒಂದು ಸುಂದರವಾದ ತೊಟ್ಟಿಲನ್ನು ಮಾಡಿಕೊಡುತ್ತಾನೆ.ಮೇದರವನು ನಿರಾಕಿಸಿದ್ದನ್ನು, ಕೊರಚನು ಶಿರಸಾವಹಿಸಿ ಮಾಡಿಕೊಟ್ಟದ್ದರಿಂದ ಪಾರ್ವತಿದೇವಿಯು ಬಹಳ ಸಂತುಷ್ಟಳಾಗುತ್ತಾಳೆ. ಆಗ ಕೊರಚರನಿಗೆ ತನ್ನಲ್ಲಿದ್ದ ಮಂತ್ರದಂಡವನ್ನು, ಕೊರವಂಜಿ ಕುಕ್ಕೆ ಮತ್ತು ಕೇರುವ ಮೊರವನ್ನು ಬಹುಮಾನವಾಗಿ ಕೊಟ್ಟು ಭವಿಷ್ಯ ಹೇಳುವ ಅಧಿಕಾರವನ್ನು ಅನುಗ್ರಹಿಸುತ್ತಾಳೆ. ಅಂಟನಿಂದ ಈ ಕೊರವರಲ್ಲಿ ಕೊರವಂಜಿ ಸಂತತಿ ಬೆಳೆಯಿತು ಹಾಗೂ ಭವಿಷ್ಯ ನುಡಿಯುವ ಕಲೆ ದೈವದತ್ತವಾಗಿ ಒಲಿಯಿತಂತೆ.

ಐತಿಹ್ಯ-೫

ಇದು ಮೊಟ್ಟಮೊದಲಿಗೆ ಮೂಲದಲ್ಲಿ ಈ ಕೊರವರಿಗೆ ವಿಷ್ಣು ಕೊರವಂಜಿಗಳೆಂದು ಹೆಸರು ಬಂದಿರುವುದಕ್ಕೆ ಸಂಬಂಧಿಸಿದ ಕಥೆ. ವಿಶ್ವದ ನಿರ್ಮಾಣವಾದಾಗ ಮೊಟ್ಟಮೊದಲು ಎಲ್ಲಾ ಪಂಗಡಗಳಿಗೂ ಎಲ್ಲಾ ಜನಾಂಗಕ್ಕೂ ಒಂದೊಂದು ಜಾತಿಯ ನಾಮಕರಣ ಮಾಡಿದನು ಶಿವ, ಅದೇ ಪ್ರಕಾರ ಅದೇ ಶಿವನು ನಮ್ಮ ಪಂಗಡಕ್ಕೆ ವಿಷ್ಣು ಕೊರವಂಜಿಗಳೆಂದು ನಾಮಕರಣ ಮಾಡಿದನು. ಹಚ್ಚೆ ಹುಯ್ಯುವ ಕಸುಬನ್ನು ವಹಿಸಿದನು ಮತ್ತು ಕೃಷ್ಣ ಸತ್ಯಭಾಮೆಯರ ಮೇಲೆ ಲಾವಣಿಗಳನ್ನು ಭೂಲೋಕದಲ್ಲಿ ಭಕ್ತಿಪೂರ್ವಕವಾಗಿ ಹೇಳಿಕೊಂಡು ವಾಸಿಸಲು ಅನುಗ್ರಹಿಸಿದನು ಎಂದು ಕೊರವರೇ ತಮ್ಮ ಮೂಲ ಹಾಗೂ ಹೆಸರಿನ ಶ್ರೇಷ್ಠತೆಯ ಬಗ್ಗೆ ಈ ರೀತಿಯಾಗಿ ವ್ಯಾಖ್ಯಾನ ನೀಡುತ್ತಾರೆ.[೮೯] ತದನಂತರದಲ್ಲಿ ತಮ್ಮ ಪೂರ್ವಿಕರಲ್ಲಿ ಕೆಲವರು ಕಸುಬಿನಲ್ಲಿ ನಿಯತ್ತಿಡದೆ ದುರ್ಮಾಗಕ್ಕೆ ತಿರುಗಿದ್ದರಿಂದ ಜನರು ಬರುಬರುತ್ತಾ ನಮ್ಮನ್ನು ಕಳ್ಳರು, ಮೋಸಗಾರರು ಎಂಬ ಹೀನ ಅರ್ಥದಲ್ಲಿ ಕೊರವರು ಎಂದು ಕರೆಯತೊಡಗಿದರು ಎಂದೂ ಸಹ ಹೇಳಿಕೊಳ್ಳುತ್ತಾರೆ.

ಸುಡುಗಾಡು ಸಿದ್ಧರಮೂಲ ಕುರಿತ ಐತಿಹ್ಯ:

ಸುಡುಗಾಡು ಸಿದ್ಧರ ಮೂಲ ಪೌರಾಣಿಕ ಸಂಗತಿಯೊಂದು ಈ ರೀತಿ ಜನಪದರು ಹೆಣೆದು ತಿಳಿಸುವ ಪ್ರಯತ್ನಮಾಡಿದ್ದಾರೆ. ತಮ್ಮ ಜನಾಂಗದ ಮೂಲವನ್ನು ವಿವಿಧ ರೀತಿಯಲ್ಲಿ ಗುರುತಿಸುತ್ತಾರೆ. ಅವುಗಳು ಈಕೆಳಗಿನಂತೆ ತಿಳಿಸಿಕೊಡಲಾಗಿದೆ. ಈಶ್ವರ ತಪಸ್ಸು ಮಾಡುವಾಗ ಅವನ ಸೇವೆಗಾಗಿ ಪಾರ್ವತಿ ಈ ನವಕೋಟಿ ಸಿದ್ಧರನ್ನು ಸೃಷ್ಟಿಸಿದಳೆಂದೂ, ಆ ಕಾರ್ಯ ಮುಗಿದ ನಂತರ ವಿಭೂತಿ ಕಾವಿ, ಕಮಂಡಲ, ರುದ್ರಾಕ್ಷಿ, ಶಿವಗಂಟೆಯನ್ನು ಕೊಟ್ಟು ಭೂಲೋಕಕ್ಕೆ ಕಳುಹಿಸಿದಳೆಂದೂ ಹೇಳುತ್ತಾರೆ. ಒಂದು ಸಲ ತೀರ ಬಡತನಕ್ಕೆ ಒಳಗಾಗಿರುವ ದಂಪತಿಗಳಿಬ್ಬರೂ ಮಗನ ಮರಣ ಸಂಸ್ಕಾರವನ್ನು ಮಾಡಲು

ತುಂಬಾ ದುರವಸ್ಥೆಯನ್ನು ಕಂಡು ಮರಗಿ ಸತ್ತ ಮಗನನ್ನು ಮತ್ತೆ ಬದುಕಿಸಿಕೊಟ್ಟು ಅವನು ಮಸಣದ ಒಡೆಯನನ್ನಾಗಿ ನಿಯಮಿಸಿದರು. ಅಂದಿನಿಂದ ಶವಸಂಸ್ಕಾರಕ್ಕೆ ಬರುವ ಮೃತದೇಹದ ಮೇಲಿನ ಬಟ್ಟೆಬರೆ ಹಾಗೂ ತೆರಿಗೆಯನ್ನು ಪಡೆಯುವ ಹಕ್ಕನ್ನು ಅವನಿಗೆ ನೀಡಲಾಯಿತು. ಶಿವಪಾರ್ವತಿಯಿಂದ ನಿಯಮಿತವಾದ ಸಂತತಿಯೇ ಸುಡುಗಾಡು ಸಿದ್ಧರೆಂದು ಹೇಳಲಾಗುತ್ತಿದೆ.

ಇನ್ನೂ ಒಂದು ಕಥೆಯ ಪ್ರಕಾರ, ಘೋರಕ್ಷ ಎಂಬ ರಾಕ್ಷಸ ದೇವಾನು ದೇವತೆಗಳಿಗೆ ತುಂಬಾ ಕಷ್ಟಕೊಡುತ್ತಿದ್ದನಂತೆ. ಯಂತ್ರ-ಮಂತ್ರ-ಮಾಟಗಳಲ್ಲಿ ತುಂಬಾ ನಿಪುಣನಾಗಿದ್ದನಂತೆ. ಘೋರಕ್ಷನ ಉಪಟಳ ತಾಳಲಾರದೆ ಅವರು ಪರಶಿವನ ಮೊರೆಹೊಕ್ಕರು. ಆತ ರೇವಣಸಿದ್ದನ್ನು ಕಳುಹಿದ, ಈಶ್ವರನ ಮಾಯಾ ಜಾಲದಿಂದ ಹಾವು-ಚೇಳುಗಳನ್ನು ಸೃಷ್ಟಿಸಿದ ಘೋರಕ್ಷನ ಸಂಹಾರಕ್ಕಾಗಿ ಬರುತ್ತಿದ್ದ ರೇವಣಸಿದ್ದನಿಗೆ ಕಾವಲು ಕಾಯುತ್ತಿದ್ದ ಸಿದ್ಧರು ತುಂಬಾ ತೊಂದರೆ ಕೊಟ್ಟರು, ಕೊನೆಗೆ ಸಿಟ್ಟಿನಿಂದ ಉರಿನೇತ್ರ ಬಿಟ್ಟು ಎಲ್ಲರನ್ನು ಭಸ್ಮ ಮಾಡಿದ, ನಂತರ ಘೋರಕ್ಷ ರಾಕ್ಷಸನು ಸಂಹರಿಸಿ ಹಿಂದಿರುಗಿ ಬರುವಾಗ ಸ್ಮಶಾನದಲ್ಲಿ ಬೂದಿಯಾಗಿ ಬಿದ್ದಿದ್ದ ಸಿದ್ಧರನ್ನು ನೋಡಿ, ಕರುಣೆ ಬಂದು ಬದುಕಿಸಿನಂತೆ, ಸತ್ಯ ನ್ಯಾಯ ನೀತಿಯಿಂದ ನಡೆಯಿರಿ ಜನರಿಗೆ ಧರ್ಮಬೋಧನೆ ಮಾಡಿ ಅಂತ ಜೋಳಿಗೆ, ವಿಭೂತಿ, ರುದ್ರಾಕ್ಷಿಯನ್ನು ಕೊಟ್ಟು ಪೂಜೆಗಾಗಿ ಭೂತಲಿಂಗವನ್ನು ಕೊಟ್ಟು ಹರಸಿ ಹೋದರಂತೆ. ಇವರು ಸುಡುಗಾಡಿನಲ್ಲಿ ಜನಿಸಿದ್ದರಿಂದ ಸುಡುಗಾಡು ಸಿದ್ಧರೆಂದು ನಾಮ ಕರಣವಾಯಿತೆಂದೂ, ತಾವು ಶಿವನ ವಂಶಸ್ಥರೆಂದೂ ಹೇಳಿಕೊಳ್ಳುತ್ತಾರೆ.

ಸಿದ್ಧರ ಪೂರ್ವಿಕರು ಭೂತ, ಭವಿಷ್ಯಗಳನ್ನು ತಿಳಿದಿದ್ದಂತಹವರು. ಕಾಲಜ್ಞಾವನ್ನು ಬಲ್ಲವರು. ಸತ್ತವರನ್ನೂ ಕೂಡ ತಮ್ಮ ಮಂತ್ರಶಕ್ತಿಯಿಂದ ಬದುಕಿಸಬಲ್ಲಂತಹವರಾಗಿದ್ದರು. ನೂರಾರು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ದೆವ್ವ, ಭೂತ, ಪೀಡೆ, ಪಿಶಾಚಿಗಳನ್ನು ಬಿಡಿಸಬಲ್ಲವರಾಗಿದ್ದು ಸದಾ ಊರ ಹೊರವಲಯದಲ್ಲಿದ್ದ ಕೆಲವರು ಅವರ ಕಾವಲುಗಾರರೂ ಆಗಿದ್ದು, ತಾವು ಹರಿಶ್ಚಂದ್ರನ ಪರಂಪರೆಯವರೆಗೂ ಹೇಳುತ್ತಾರೆ. ಕುರುಲ ಸಂತತಿಯ ಇನ್ನೊಂದು ರೂಪವೇ ಸುಡುಗಾಡು ಸಿದ್ಧರೆಂಬುದಕ್ಕೆ ಅವರಲ್ಲಿ ಪ್ರಚಲಿತವಿರುವ ಒಂದು ಜನಪದ ಪುರಾಣ ಕತೆಯ ನಿರೂಪಣೆಯಾಗಿದೆ. ಒಂದು ದಿನ ಸಿದ್ಧನೆಂಬ ಕುರುಬನು ವಿಧಿವತ್ತಾಗಿ ಮರಣ ಹೊಂದಲು, ಅವನ ಶವವನ್ನು ಸಂಸ್ಕಾರ ಮಾಡಲು ಸ್ಮಶಾನಕ್ಕೆ ವಯ್ಯುತ್ತಾರೆ. ಅಲ್ಲಿ ಮೃತನ ಹೆಂಡತಿ ಮಾಳಮ್ಮನು ಗಂಡನಿಗಾಗಿ ಗೋಳಿಡುತ್ತಿರುವುದನ್ನು ಕಂಡ ಶಿವಭಕ್ತನೊಬ್ಬನು ಅವಳನ್ನು ಸಮಾಧಾನ ಹೇಳುತ್ತಾನೆ.

ನೋಡು ತಾಯಿ, ನೀನು ಈಗಲೇ ಹೋಗೆ ಭಕ್ತಿಭಂಡಾರಿ ಬಸವಣ್ಣನು ಕಂಡು ನಿನ್ನ ದುಃಖವನ್ನು ಹೇಳಿಕೊ ಕರುಣಾಮಯಿ ಅಣ್ಣನವರು ಖಂಡಿತವಾಗಿಯೂ ನಿನ್ನ ದುಃಖನಿವಾರಣೆ ಮಾಡುವರು. ಶಿವಭಕ್ತನ ಹೇಳಿಕೆಯ ಮೇರೆಗೆ ಮಾಳಮ್ಮ ನೇರವಾಗಿ ಬಸವಣ್ಣನವರಲ್ಲಿಗೆ ಬಂದು ತನ್ನ ದುಃಖವನ್ನು ನಿವೇಸಿಕೊಳ್ಳುತ್ತಾಳೆ. ಬಸವಣ್ಣ ಅವಳ ಗೋಳನ್ನು ಕೇಳಿ, ನೆರೆದವರೊಂದಿಗೆ ಸುಡುಗಾಡಿಗೆ ಬಂದು ತನ್ನ ಆತ್ಮಜ್ಯೋತಿಯಿಂದ ಮತ್ತು ಮಂತ್ರವಾಣಿಯ ಮಹಿಮೆಯಿಂದ ಸತ್ತು ಸ್ಮಶಾನದಲ್ಲಿ ಸಂಸ್ಕಾರಕ್ಕಾಗಿ ಬಿದ್ದಿದ್ದ ಸಿದ್ಧನು ಬದುಕಿಸುತ್ತಾನೆ. ದಂಪತಿಗಳೀರ್ವರೂ ಅಣ್ಣನ ಚರಣ ಕಮಲಗಳಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ ಆ ಮಹಾಮಹಿಮನ ಲೀಲೆಗಳನ್ನು ಗುಣಗಾನ ಮಾಡುತ್ತಾರೆ. ಹೀಗೆ ಮತ್ತೆ ಜೀವದಾನವನ್ನು ಪಡೆದ ಸಿದ್ಧನು ಬಸವಣ್ಣನವರ ಉಪದೇಶದಂತೆ ಶಿವದೀಕ್ಷೆಯನ್ನು ಪಡೆದು, ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಶಿವನಾಮಗಳನ್ನು ಜಪಿಸುತ್ತ, ಬಸವಣ್ಣನನ್ನು ಗುಣಗಾನ ಮಾಡುತ್ತ ಸ್ಮಶಾಸನದ ಹೆಣಗಳ ಮೇಲಿನ ಬಟ್ಟೆ ಬರೆಗಳನ್ನು ತೊಡುತ್ತ, ಶವಗಳಿಗೆ ತರುವ

ನೈವೇದ್ಯ ಇತ್ಯಾದಿಗಳನ್ನೆಲ್ಲಸೇವಿಸುತ್ತ, ಸುಡುಗಾಡಿನಲ್ಲೇ ವಾಸಮಾಡತೊಡಗುತ್ತಾನೆ. ಸುಡುಗಾಡಿನ ಸಿದ್ಧನ ಸಂತತಿಯಿಂದ ಬೆಳೆದವರ ಮುಂದೆ ಸುಡುಗಾಡು ಸಿದ್ಧರಾದರೆಂದು ಹೇಳುತ್ತಾರೆ.

ನವಕೋಟಿ ಸಿದ್ಧರ ಉಗಮವನ್ನು ಕುರಿತು ಒಂದು ಸ್ವಾರಸ್ಯಕರವಾದ ಐತಿಹ್ಯ ಹೀಗಿದೆ. ದೇವಾದಿದೇವತೆಗಳನ್ನು ಕಾಡಿದ ಶನಿಯು ಶಿವನ ಗಣಪತಿಯನ್ನು ಮತ್ತು ಮಾರುತಿಯನ್ನು ಇನ್ನೂ ಕಾಡಿರಲಿಲ್ಲವಂತೆ. ಕೊನೆಗೊಮ್ಮೆ ಶನಿಯು ಪರಶಿವನ ಮುಂದೆ ಪ್ರತ್ಯಕ್ಷನಾಗಿ ''ದೇವಾ ! ನಾಳೆ ನಿಮ್ಮಲಿಗೆ ಪ್ರವೇಶ ಮಾಡಬೇಕೆಂದು ಇಚ್ಛಿಸಿದ್ದೇನೆ, ದಯವಿಟ್ಟು ಮನ್ನಿಸಬೇಕೆಂದು ಕೇಳುತ್ತಾನೆ. ಮಾರನೆದಿನ ಶನಿಯು ಬರುವ ಪೂರ್ವದಲ್ಲಿ ಪರಶಿವನು ಉಪಾಯದಿಂದ ಸುಡುಗಾಡಿಗೆ ಹೋಗಿ ಆಗತಾನೆ ಹೂಳಿದ ಶವಗಳನ್ನು ಹೊರತೆಗೆದು ಆ ಜಾಗದಲ್ಲಿ ಅವಿತುಕೊಳ್ಳುತ್ತಾನೆ. ಶನಿ ಕಾಡುವ ಮಳೆ ಮುಗಿದ ಮೇಲೆ ಪರಶಿವನು ಹೊರಬೀಳುತ್ತಾನೆ. ಗಾಳಿ, ಬೆಳಕಿಲ್ಲದ ಆ ಜಾಗದಲ್ಲಿ ಅವಿತುಕೊಂಡಿದ್ದರಿಂದ ಶಿವನು ಸಂಪೂರ್ಣ ಬೆವೆತು ಹೋಗಿರುತ್ತಾನೆ.

ಪರಶಿವನು ಹಣೆಯಲ್ಲಿರುವ ಹನಿ-ಹನಿ ಬೆವರನ್ನು ತೆಗೆದು ಭೂಮಿಗೆ ಎಸೆದನು. ಹೀಗೆ ಎಸೆದ ಬೆವರಿನಲ್ಲಿ ನವಕೋಟಿ ಜನರು ಜನ್ಮ ತಾಳಿದರು. ಸುಡುಗಾಡಿನಲ್ಲಿ ಅವರು ಹುಟ್ಟಿದ್ದರಿಂದ ಅವರನ್ನು ಸುಡುಗಾಡು ಸಿದ್ಧರು ಎಂದು ನಾಮಕರಣ ಮಾಡಿ, ಅವರ ಜೀವನೋಪಾಯಕ್ಕಾಗಿ ಶಿವನು, ''ಉಪದೇಶವನ್ನು, ವಿಭೂತಿ, ಕಾವಿ, ರುದ್ರಾಕ್ಷಿ, ಕಮಂಡಲಗಳನ್ನು ದಯಪಾಲಿಸಿ ಆಜ್ಞಾನದಲ್ಲಿರುವ ಲೋಕಕ್ಕೆ ಕಲ್ಯಾಣವನ್ನುಂಟು ಮಾಡುತ್ತಾ, ಶುಭ ಅಶುಭಗಳನ್ನು ಮುಂಜಾಗ್ರತೆಯಾಗಿ ತಿಳಿಯದ ಜನಕ್ಕೆ ತಿಳಿಸುತ್ತ ದೇಶ ಸಂಚಾರ ಮಾಡಿದರೆಂದು'' ಉಪದೇಶಿಸಿ ಕಳಿಸಿಕೊಡುತ್ತಾನೆ.

ಇನ್ನೊಂದು ಕತೆಯ ಪ್ರಕಾರ, ''ಪದ್ಮಣ್ಣನೆಂಬ ತುಂಟನೊಬ್ಬ ಬಸವಣ್ಣನ ಸತ್ವ ಪರೀಕ್ಷಿಸಲು ನಿಶ್ಚಯಿಸಿದ'' ಬಸವಣ್ಣ ಮನೆಗೆ ಬಂದಾಗ ''ನಾನು ಸತ್ತು ಹೋಗಿದ್ದೇನೆಂದು ಬಸವಣ್ಣನಿಗೆ ಹೇಳು'' ಎಂದು ತನ್ನ ಹೆಂಡತಿಗೆ ಹೇಳಿ ಮಲಗಿಬಿಟ್ಟ. ಜ್ಞಾನಿಯಾದ ಬಸವ ಎಲ್ಲಾ ಅರಿತಿದ್ದು ಪದ್ಮಣ್ಣ ಹೊದ ಮುಸುಕು ತೆಗೆಯುವಂತೆ ಆಕೆಗೆ ಸೂಚಿಸಿದ. ನಿಜಕ್ಕೂ ಪದ್ಮಣ್ಣ ಸತ್ತೇ ಹೋಗಿದ್ದ ! ಗಾಬರಿಗೊಂಡ ಮಡದಿ ಬಸವಣ್ಣನ ಕಾಲಿಗೆ ಬಿದ್ದು ಬೇಡಿದಾಗ ಸ್ಮಶಾನದಲ್ಲಿ ಪದ್ಮಣನನ್ನು ಬದುಕಿಸಿದ ಬಸವೇಶ್ವರನು 'ಇನ್ನು ಮೇಲೆ ಸ್ಮಶಾನದಲ್ಲೇ ಇದ್ದು ಕಾವಲು ಮಾಡು' ಎಂದು ಆದೇಶಿಸಿದ.[೬೦] ಹೀಗೆ ಸ್ಮಶಾನದ ಕಾವಲುಗಾರನಾದ ಪದ್ಮಣ್ಣ ಕಾಲಾಂತರದಲ್ಲಿ ಸಿದ್ಧಣ್ಣನಾಗಿ ಅವನ ಸಂತತಿ ಸುಡುಗಾಡುಸಿದ್ಧರಾಗಿ ಮುಂದುವರಿಯಿತು.[೬೧]

ಅಡಿಟಿಪ್ಪಣಿಗಳು:-

೧. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೬

೨. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೩

೩. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೩

೪. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೬

೫. ಕರ್ನಾಟಕದ ಜಾನಪದ-ಸಂ ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೫

೬. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೬

೭. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೬

೮. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೭

೯. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೨

೧೦. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೩

೧೧. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೩

೧೨. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೪

೧೩. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೪

೧೪. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೫

೧೫. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೬

೧೬. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೬

೧೭. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೭

೧೮. ಕರ್ನಾಟಕದ ಜಾನಪದ-(ಸಂ) ಪರಮಶಿವಯ್ಯ ಜೀ.ಶಂ - ಪುಟ ಸಂ-೪೩೮

೧೯. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೨

೨೦. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೩

೨೧. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೫೮

೨೨. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೫೯

೨೩. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೬೦

೨೪. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೩

೨೫. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೪

೨೬. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ-ವಾಲೀಕಾರ ಚೆನ್ನಣ್ಣ-ಪುಟ ಸಂ-೨೯೫

೨೭. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೩

೨೮. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೪

೨೯. ದಕ್ಷಿಣ ಭಾರತೀಯ ಜಾನಪದ ಕೋಶ (ಪ್ರ.ಸಂ.) ಮುರಿಗೆಪ್ಪ.ಎ-ಪುಟ ಸಂ-೩೩೪

೩೦. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೪೩

೩೧. ಬೆಂಗಳೂರು ನಗರದ ಗ್ರಾಮ ದೇವತೆಗಳು-ಕೃಷ್ಣನಾಯಕ- ಪುಟ ಸಂ-೪೯

೩೨. ಬೆಂಗಳೂರು ನಗರದ ಗ್ರಾಮ ದೇವತೆಗಳು-ಕೃಷ್ಣನಾಯಕ-ಪುಟ ಸಂ-೫೨

೩೩. ಬೆಂಗಳೂರು ನಗರದ ಗ್ರಾಮ ದೇವತೆಗಳು-ಕೃಷ್ಣನಾಯಕ-ಪುಟ ಸಂ-೫೨

೩೪. ಬೆಂಗಳೂರು ನಗರದ ಗ್ರಾಮ ದೇವತೆಗಳು-ಕೃಷ್ಣನಾಯಕ-ಪುಟ ಸಂ-೫೩

೩೫. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೪೮

೩೬. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೪೯

೩೭. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೫೦

೩೮. ಬೆಂಗಳೂರು ನಗರದ ಗ್ರಾಮ ದೇವತೆಗಳು-ಕೃಷ್ಣನಾಯಕ-ಪುಟ ಸಂ-೫೭

೩೯. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೫೦

೪೦. ಕನ್ನಡ ಜಾನಪದ ಪ್ರಜ್ಞೆ-ವೀರಣ್ಣ ದಂಡೆ - ಪುಟ ಸಂ-೩೦೯

೪೧. ಕನ್ನಡ ಜಾನಪದ ಪ್ರಜ್ಞೆ-ವೀರಣ್ಣ ದಂಡೆ - ಪುಟ ಸಂ-೩೦೯

೪೨. ಕನ್ನಡ ಜಾನಪದ ಪ್ರಜ್ಞೆ-ವೀರಣ್ಣ ದಂಡೆ - ಪುಟ ಸಂ-೩೧೦

೪೩. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ – ವಿಶ್ವನಾಥ-ಪುಟ ಸಂ-೧

೪೪. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ – ವಿಶ್ವನಾಥ-ಪುಟ ಸಂ-೧

೪೫. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ – ವಿಶ್ವನಾಥ-ಪುಟ ಸಂ-೨

೪೬. ಗ್ರಾಮ ದೇವತೆಗಳು-ಸಿದ್ಧಲಿಂಗಯ್ಯ-ಪುಟ ಸಂ-೬೧

೪೭. ಕರ್ನಾಟಕ ಜನಪದ ಕಲೆಗಳ ಕೋಶ-(ಸಂ) ಬೋರಲಿಂಗಯ್ಯ.ಹಿ.ಚಿ.- ಪುಟ ಸಂ-೨೭

೪೮. ಕರ್ನಾಟಕ ಜನಪದ ಕಲೆಗಳ ಕೋಶ-(ಸಂ) ಬೋರಲಿಂಗಯ್ಯ.ಹಿ.ಚಿ.- ಪುಟ ಸಂ-೨೭

೪೯. ಕರ್ನಾಟಕ ಜನಪದ ಕಲೆಗಳ ಕೋಶ-(ಸಂ) ಬೋರಲಿಂಗಯ್ಯ.ಹಿ.ಚಿ.- ಪುಟ ಸಂ-೨೮

೫೦. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೧೮

೫೧. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೧೮

೫೨. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೭

೫೩. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೮

೫೪. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೦೯

೫೫. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೨೦

೫೬. ವಿಶ್ವನಾಥ, ಉದ್ಯೋಗ-ಸಹಕಾರ್ಯದರ್ಶಿ ನಾಗಾವಿ ಎಲಮ್ಮ ದೇವಸ್ಥಾನ ಕಮಿಟಿ, ವಯಸ್ಸು-೬೫, ಊರು-ನಾಗಾವಿ

೫೭. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೨೦

೫೮. ಶಂಕರ, ಉದ್ಯೋಗ-ವ್ಯವಸಾಯ, ವಯಸ್ಸು-೬೦, ಊರು-ಹೊನ್ನ ಕಿರಣಗಿ

೫೯. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೨೧

೬೦. ಹೊನಪ್ಪಾ ಪೂಜಾರಿ, ಉದ್ಯೋಗ-ಪ್ರಧಾನ ಅರ್ಚಕರು, ವಯಸ್ಸು-೪೮, ಊರು-ಆಲ್ಲೂರು

೬೧. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೧೨

೬೨. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಗೋಪಾಲ್.ಆರ್. ಪುಟ ಸಂ-೨೧೩

೬೩. ಚಂದ್ರಪ್ಪ ಕುಂಬಾರ, ಉದ್ಯೋಗ-ವ್ಯವಸಾಯ, ವಯಸ್ಸು-೪೮, ಊರು-ಮಾಶ್ಯಾಳ

೬೪. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಜಾನಪದ ಸಂಪುಟ-ಖಂಡೋಬಾ.ಪಿ.ಕೆ-ಪುಟ.ಸಂ-೧೨೩

೬೫. ಶ.ಬ್ರ. ಶಾಂತವೀರ ಶಿವಾಚಾರ್ಯರು, ಉದ್ಯೋಗ-ಸೂರಗಿ ಮಠದ ಪೀಠಾಧಿಪತಿಗಳು, ವಯಸ್ಸು-೬೫, ಊರು-ಬಂದರವಾಡ

೬೬. ದತ್ತಪ್ಪಾ ತಂದೆ ಅಡಿವೆಪ್ಪ ಗವಂಡಿ, ಉದ್ಯೋಗ-ವ್ಯವಸಾಯ, ವಯಸ್ಸು-೫೮, ಊರು-ಆನೂರ

೬೭. ನೀಲಕಂಠಪ್ಪ, ಉದ್ಯೋಗ-ವ್ಯವಸಾಯ, ವಯಸ್ಸು-೬೦, ಊರು-ಹಲಚರಾ

೬೮. ಕನ್ನದಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ-ಗೋಪಾಲಸ್ವಾಮಿ.ಕೆ.ಎಲ್.-ಪುಟ ಸಂ-೩೧೦

೬೯. ಹೈದರಾಬಾದು ಕರ್ನಾಟಕ ಹಾಡುಪಾಡು-ಅಮರೇಶ ನುಗಡೋಣಿ, ಪುಟ ಸಂ-೨೩

೭೦. ಹೈದರಾಬಾದು ಕರ್ನಾಟಕ ಹಾಡುಪಾಡು-ಅಮರೇಶ ನುಗಡೋಣಿ, ಪುಟ ಸಂ-೨೩

೭೧. ಅಪ್ರಕಟಿತ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದೀಯ ಅಧ್ಯಯನ ಪುಟ ಸಂ-೧೧೧

೭೨. ಅಪ್ರಕಟಿತ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದೀಯ ಅಧ್ಯಯನ ಪುಟ ಸಂ-೧೧೧

೭೩. ಪ್ರಭುರಾಯ ತಂದೆ ರೆವಪ್ಪ ಪೂಜಾರಿ, ಉದ್ಯೋಗ-ಪ್ರಧಾನ ಅರ್ಚಕರು ಅಮೋಘಸಿದ್ದ ದೇವಾಸ್ಥಾನ, ವಯಸ್ಸು-೫೫, ಊರು-ಮಾಡಿಯ್ಯಾಳ

೭೪. ಅಬ್ದುಲ್ ಸಾಬ್ ಊಮರ ಅಲಿ ಮುಲ್ಲಾ, ಉದ್ಯೋಗ-ಪ್ರಧಾನ ಮಲ್ವಿ, ವಯಸ್ಸು-೫೦, ಊರು-ಕರ್ಜಗಿ

೭೫. ಧರೆಪ್ಪಾ ತಂದೆ ಮಲಕಪ್ಪಾ ಸಲಗರ, ಉದ್ಯೋಗ-ವ್ಯವಸಾಯ ಯಲ್ಲಾಲಿಂಗ ಮಠ ಕರ್ಜಗಿ, ವಯಸ್ಸು-೫೫, ಊರು-ಕರ್ಜಗಿ

೭೬. ಸಂಯುಕ್ತ ಕರ್ನಾಟಕ ವಶೇಷ ಪುರವಣಿ ದಿನಾಂಕ ೫-೫-೨೦೧- ಪುಟ ಸಂ-೧

೭೭. ಸಂಯುಕ್ತ ಕರ್ನಾಟಕ ವಶೇಷ ಪುರವಣಿ ಕಲ್ಯಾಣ ಕರ್ನಾಟಕ ದಿನಾಂಕ ೨೬-೯-೨೦೧೭ ಮಂಗಳವಾರ ಪುಟ ಸಂ-೧

೭೮. ಶಿವಶಂಕರಯ್ಯ ಯಲಮಡಗಿ, ಉದ್ಯೋಗ-ಅಚರ್ಕ ಹನುಮಾನ ಮಂದಿರ ಕೊಡ್ಲಿ, ವಯಸ್ಸು-೬೦, ಊರು-ಕೋಡ್ಲಿ

೭೯. ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ-ಪುಟ ಸಂ-೧೧೪

೮೦. ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ-ಪುಟ ಸಂ-೧೨೩

೮೧. ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ-ಪುಟ ಸಂ-೧೨೪-೨೭

೮೨. ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂದ ಗುಲಬರ್ಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ-ಪುಟ ಸಂ-೧೨೯-೩೧

೮೩. ಕರ್ನಾಟಕ ಬುಕಟ್ಟುಗಳು-ಖಂಡೋಬಾ.ಪಿ.ಕೆ. ಪುಟ ಸಂ-೩೧

೮೪. ಕರ್ನಾಟಕ ಬುಕಟ್ಟುಗಳು-ಖಂಡೋಬಾ.ಪಿ.ಕೆ. ಪುಟ ಸಂ-೩೧

೮೫. ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ-ಗೊಳಸಂಗಿ ಅರ್ಜುನ-ಪುಟ ಸಂ-೧೭೭,೭೮

೮೬. ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂದ "ಗುರ್ಲ್ಬಗಾ ಜಿಲ್ಲೆಯ ಐತಿಹ್ಯಗಳ ಜಾನಪದಿಯ ಅಧ್ಯಯನ" ಪುಟ ಸಂ-೧೭೫,೭೬

೮೭. ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ-ಗೊಳಸಂಗಿ ಅರ್ಜುನ-ಪುಟ ಸಂ-೧೭-೧೮-೧೯

೮೮. ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ-ಗೊಳಸಂಗಿ ಅರ್ಜುನ-ಪುಟ ಸಂ-೧೧೮

೮೯. ಪವಾರ್ ಹರಿಲಾಲ್ ೧೯೯೩: ಹೆಳವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಆಕಾಡೆಮೆ, ಬೆಂಗಳೂರು.

೯೦. ಮಾನಸ ೧೯೯೩: ಕೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೧. ಖಂಡೋಬಾ.ಪಿ.ಕೆ.೧೯೯೩:ಸುಡುಗಾಡು ಸಿದ್ಧರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಅಧ್ಯಾಯ- ೬ ಸಮಾರೋಪ

ಸಮಾರೋಪ ಮತ್ತು ಫಲಿತಗಳು

ಅನುಬಂಧಗಳು

೧. ವಕ್ತೃತಗಳ ವಿವರ
೨. ಪರಾಮರ್ಶನ ಗ್ರಂಥಗಳು
೩. ಗ್ರಂಥ ಸೂಚಿ
೪. ಐತಿಹ್ಯಗಳ ವಿಷಯವಾರು ಪಟ್ಟಿ
೫. ಛಾಯಾಚಿತ್ರಗಳು

ಅಧ್ಯಾಯ-೬

ಸಮಾರೋಪ ಮತ್ತು ಫಲಿತಗಳು

ಹಿಂದಣರಿಯದದು ಮುಂದಣೇನ ಬಲ್ಲುದು? ಎಂಬ ಅಲ್ಲಮ ಪ್ರಭುಗಳ ನುಡಿಮುತ್ತಿನಂತೆ ವರ್ತಮಾನದ ತೀರ್ಮಾನಗಳನ್ನು ಕೈಗೊಳ್ಳಲು ಭೂತದ ಮೊರೆ ಹೋಗುವ ಅನಿವಾರ್ಯತೆಯನ್ನು ಕಾಣುತ್ತೇವೆ. ಈ ಭೂತಕಾಲದಲ್ಲಿ ಜರುಗಿರುವ ಘಟನೆಗಳನ್ನು ಚರಿತ್ರೆ ಅಥವಾ ಇತಿಹಾಸ ಎಂದು ಕರೆಯಲಾಗುತ್ತದೆ. ಚರಿತ್ರೆಯ ವ್ಯಾಪ್ತಿ ತುಂಬಾ ವಿಶಾಲವಾದುದು. ಈ ಭೂಮಿಯ ಮೇಲಿರುವ ಪ್ರತಿಯೊಂದು ವಸ್ತು ವಿಷಯಕ್ಕೂ ಕೂಡ ತನ್ನದೇಯಾದ ಚರಿತ್ರೆ ಇದೆ. ಇಂಥ ಸಾಂಸ್ಕೃತಿಕ ಚರಿತ್ರೆಯನ್ನು ಗುರುತಿಸುವ ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಜನಪದ ಸಾಹಿತ್ಯದಲ್ಲಿಯೇ ಭೌತಿಕ ಆಕರದಿಂದ ಹುಟ್ಟುಪಡೆದ ಐತಿಹ್ಯ ವಿಶಿಷ್ಟಪೂರ್ಣವಾದದ್ದು. ಸಂಸ್ಕೃತಿಯ ಸಂವಹನ ಮಾಧ್ಯಮವಾಗಿರುವ ಐತಿಹ್ಯ ಚಲನಶೀಲವಾಗಿರುವಂಥದ್ದು. ಯಾವುದೋ ಒಂದು ಕಾಲದ ಸಂಸ್ಕೃತಿಯನ್ನು ತನ್ನ ಒಡಲಲ್ಲಿ ಹೊತ್ತುಕೊಂಡು ಬರುವ ಇವು ಸಮಕಾಲೀನ ಸಾಂಸ್ಕೃತಿಕ ಆಯಾಮಗಳೊಂದಿಗೆ ಪುನರ್ ಸೃಷ್ಟಿಗೊಳ್ಳುತ್ತಲೇ ಇರುತ್ತವೆ. ಇದರಿಂದಾಗಿ ಸಮಾಜದ ಮನೋಧರ್ಮವನ್ನು ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗ್ರಹಿಸಲು ಐತಿಹ್ಯಗಳು ನೆರವಾಗಿವೆ. ಜನಪದರ ದೃಷ್ಟಿಕೋನದಲ್ಲಿ ಐತಿಹ್ಯಗಳು ವಾಸ್ತವವಾಗಿ ನಡೆದ ಘಟನೆಗಳೇ ಆಗಿವೆ. ಹೀಗಾಗಿ ಇವುಗಳನ್ನು ಜನಪದರು ಇತಿಹಾಸದ ದಾಖಲೆಗಳೆಂದೇ ಪರಿಗಣಿಸಿದ್ದಾರೆ. ಜನಪದರು ತಮ್ಮ ಚರಿತ್ರೆಯೊಂದಿಗೆ ಅರಸರ ಚರಿತ್ರೆಯನ್ನು ಕೂಡ ಜನಪದ ಇತಿಹಾಸವಾದ ಐತಿಹ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಐತಿಹ್ಯಗಳು ಸಾಂಪ್ರದಾಯಿಕ ಚರಿತ್ರೆಗೆ ಪೂರಕ ಆಕರಗಳಾಗುತ್ತವೆ ಎನ್ನುವುದನ್ನು ಗಮನಿಸಲಾಗಿದೆ. ಜನಪದರು ಕಟ್ಟಿಕೊಡುವ ಚರಿತ್ರೆಯು ಲಿಖಿತ ಚರಿತ್ರೆಗಿಂತಲೂ ತುಂಬಾ ವಿಶಿಷ್ಟವೂ ವೈವಿಧ್ಯವೂ ಹಾಗೂ ನೈಜತೆಯಿಂದಲೂ ಕೂಡಿರುವುದು ಕಂಡು ಬರುತ್ತದೆ. ಅರಸರ ಕೌಟುಂಬಿಕ ಕಲಹದಿಂದ ಹಿಡಿದು ಅವರ ದಾನ, ದತ್ತಿ, ಆಡಳಿತಾತ್ಮಕ ವಿವರ, ಮತ್ತು ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳೆರಡನ್ನು ಕಟ್ಟಿಕೊಡುವುದರ ಮೂಲಕ ಲಿಖಿತ ಇತಿಹಾಸದೊಂದಿಗೆ ಸಾಮ್ಯತೆ ಮತ್ತು ಭಿನ್ನತೆಗಳೆರಡನ್ನು ಹೊಂದಿದೆ ಎನ್ನುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಜನಪದ ಚರಿತ್ರೆ ಮೌಖಿಕವಾಗಿಯೇ ಉಳಿದುಕೊಂಡು ಬರುವುದರಿಂದ ಇಲ್ಲಿ ಕಲಾತ್ಮಕತೆ ಒಂದು ಮುಖವಾದರೆ ಇನ್ನುಳಿದರ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಮಾನವನ ಬದುಕನ್ನು ಅನಾವರಣಗೊಳಿಸುವಲ್ಲಿ, ಅರ್ಥೈಸಿಕೊಳ್ಳುವಲ್ಲಿ ನೇರವಾಗಿವೆ ಎನ್ನುವುದು ವಿದಿತವಾಗುತ್ತದೆ. ನಮ್ಮ ನಾಡಿನ ಸಂಸ್ಕೃತಿ, ಪರಂಪರೆಯ ಸಂಕೇತವಾಗಿರುವ ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ-ನಿಷೇಧ ಈ ಮುಂತಾದವುಗಳ ಚಲನಶೀಲತೆಗೆ ಐತಿಹ್ಯಗಳು ಕಾರಣವಾಗಿರುತ್ತವೆ. ಇವುಗಳಲ್ಲಿ ಸಾಮಾಜಿಕ ಸ್ಥಿತ್ಯಂತರ, ಧಾರ್ಮಿಕ ಬದ್ಧತೆ, ಆರ್ಥಿಕ ಸ್ಥಿತಿಗತಿ, ವೈಚಾರಿಕ ಚಿಂತನೆಗಳು ಅಡಕವಾಗಿರುವುದರಿಂದ ಐತಿಹ್ಯಗಳ ಅಧ್ಯಯನವೆಂದರೆ ಸತ್ಯತೆಯನ್ನು ಶೋಧಿಸುವುದೇ ಆಗಿದೆ ಎನ್ನುವುದನ್ನು ಕಂಡುಕೊಳ್ಳಲಾಗಿದೆ.

ಐತಿಹ್ಯವನ್ನು ಜನಪದರ ಇತಿಹಾಸವೆಂದು ತಿಳಿಯಲಾಗುತ್ತದೆ. ಚರಿತ್ರೆ ರಚನೆಗೆ ಈಗಾಗಲೇ ಮಾನ್ಯವಾದ ಶಿಷ್ಟ ಆಕರಗಳೆನಿಸಿದ ಉತ್ಖನನದ ಮೂಲಕ ಕೊರೆತ ಅವಶೇಷಗಳು, ಶಾಸನ, ಶಿಷ್ಟ ಸಾಹಿತ್ಯ ಹಾಗೂ ವಿದೇಶೀ ಸಂದರ್ಶಕರ ಬರಹಗಳಿಂದ ಹಿಂದಿನ ಕಾಲದ ರಾಜಕೀಯ ಚರಿತ್ರೆಯ ಕೇವಲ ಒಂದು ಮುಖವಷ್ಟೇ ವ್ಯಕ್ತವಾದರೆ ಐತಿಹ್ಯದಂತಹ ಜನಪದ ಸಾಹಿತ್ಯದಿಂದ ಅದರ ಇನ್ನೊಂದು ಮುಖವು ಗೋಚರವಾಗುತ್ತದೆ. ಶಿಷ್ಟರೆನಿಸಿದ ಕವಿ, ಸಾಹಿತ್ಯದಿಂದ ಅದರ ಇನ್ನೊಂದು

ಮುಖವೂ ಗೋಚರವಾಗುತ್ತದೆ. ಶಿಷ್ಟರೆನಿಸಿದ ಕವಿ, ಸಾಹಿತಿ, ಶಾಸನಕಾರರು ಅರಸು - ಬಲ್ಲಾಳರ ನೇರ ಆಶ್ರಯದಲ್ಲಿದ್ದು, ಅವರನ್ನು ಹೊಗಳಿ ಬರೆಯ ಬೇಕಾದ ಅನಿವಾರ್ಯತೆಯಿದ್ದುದರಿಂದ ತಮ್ಮ ಕೃತಿಗಳಲ್ಲಿ ಕೆಲವೊಮ್ಮೆ ವಾಸ್ತವ ಸಂಗತಿಯನ್ನು ಮರೆಮಾಚುವ ಇಲ್ಲವೆ ತಿರುಚುವ ಕಾರ್ಯವನ್ನು ಮಾಡಬೇಕಾಗಿತ್ತು ಆದರೆ ಐತಿಹ್ಯ ಹೆಣೆದ ಜನಪದರಿಗೆ ರಾಜರ ನೇರವಾದ ಹಂಗೇನೂ ಇರಲಿಲ್ಲ, ಅವರು ತಾವು ಕಂಡದ್ದನ್ನು, ಕೇಳಿದ್ದನ್ನು, ಅನುಭವಿಸಿದ್ದನ್ನು, ಇದ್ದುದನ್ನು ಇದ್ದ ಹಾಗೆಯೇ ಹೇಳಿಬಿಡುತ್ತಿದ್ದ ಸಂಭವವೇ ಹೆಚ್ಚಿತ್ತು.

ಐತಿಹ್ಯಗಳನ್ನು ಇತಿಹಾಸ ರಚನೆಗೆ ಎರಡು ರೀತಿಗಳಿಂದ ಆಕರಗಳಾಗಿ ಬಳಸಿ ಕೊಳ್ಳಬಹುದು. (೧) ಅವುಗಳು ಹಿಂದೆ ನಡೆದ (ನಡೆದಿರಬಹುದಾದ) ನೈಜ ಘಟನೆಗಳ ಮೌಖಿಕ ದಾಖಲೆಗಳಾಗಿರುವ ಸಾಧ್ಯತೆಯಿದೆ ಎಂಬ ದೃಷ್ಟಿಯಿಂದ. (೨) ಅವು ಜನಪದ ಸಾಹಿತ್ಯದ ಒಂದು ಪ್ರಕಾರ ಎಂಬ ದೃಷ್ಟಿಯಿಂದ, ಒಂದು ಕಡೆ ಕಂಠಸ್ಥ ಇತಿಹಾಸವಾಗಿಯೂ ಇನ್ನೊಂದು ಕಡೆ ಕಂಠಸ್ಥ ಸಾಹಿತ್ಯ ವಾಗಿಯೂ ಕಂಡುಬುರುವುದು ಐತಿಹ್ಯದ ಒಂದು ವೈಶಿಷ್ಟ್ಯವೆನ್ನಬೇಕಾಗುತ್ತದೆ. ಐತಿಹ್ಯಗಳು ರಚನೆಯಾಗಿರಬಹುದಾದ ಮೂಲ ಹಿನ್ನೆಲೆಯನ್ನು ಗಮನಿಸಿದರೆ ಅವು ವ್ಯಕ್ತಿ, ಸ್ಥಳ, ವಸ್ತು, ಪ್ರಾಣಿ, ವೃಕ್ಷಗಳಿಗೆ ಸಂಬಂಧಿಸಿದಂತೆ ಘಟಿಸಿರಬಹುದಾದ ಘಟನೆಗಳ ಸಹಜ ವರಿದಿಗಳಾಗಿ ಹುಟ್ಟಿಕೊಂಡವು ಎನ್ನ ಬಹುದಾಗಿದೆ. ವರದಿ - ಹೇಳಿಕೆ - ವದಂತಿ – ಐತಿಹ್ಯ ಹೀಗೆ ಅನುಕ್ರಮವಾಗಿ ಬೆಳವಣಿಗೆ ಹೊಂದುವ ಘಟನೆಯ ನಿರೂಪಣೆಯೊಂದು ಕ್ರಮೇಣ ಪುರಾಣ ವೆನಿಸುವಷ್ಟರ ಮಟ್ಟಿಗೆ ಬೆಳೆದುನಿಲ್ಲುತ್ತದೆ.

ಗ್ರಾಮದೇವತೆಗಳಿಗೆ ಸಾಮಾನ್ಯವಾಗಿ ಗುಡಿ ಕಟ್ಟುವುದಿಲ್ಲ ಗುಡಿಗಳಿದ್ದರೂ ಅವು ಈಚೀಚಿನವೇ ಇರಬೇಕು. ಊರ ಹೊರಗೊಂದು ತೋಪು, ತೋಪಿನ ನಡುವೆ ಎತ್ತರವಾದೊಂದು ಜಗಲಿ, ಜಗಲಿಯ ಮೇಲೆ ಕಲ್ಲಿನಿಂದಲೋ ಮಣ್ಣಿನಿಂದಲೋ ಮಾಡಿದ ಅಸ್ಪಷ್ಟಾಕಾರದ ವಿಗ್ರಹ; ಅದೂ ಇಲ್ಲ, ಒಂದು ಸಣ್ಣ ಮೊರಡುಗಲ್ಲೇ ಪ್ರತಿಮೆಯಾಗುತ್ತದೆ. ಆ ಪ್ರತಿಮೆಯಲ್ಲಿ ಗ್ರಾಮೀಣರು ತಮ್ಮ ಪರದೈವವನ್ನು, ಅನಂತ ಶಕ್ತಿಯನ್ನು, ಸೃಷ್ಟಿ ಸ್ಥಿತಿ ಲಯಕಾರಿ ಶಕ್ತಿಯನ್ನು ಕಾಣುತ್ತಾರೆ. ಅದನ್ನು ನೋಡುತ್ತ ನೋಡುತ್ತ, ಪೂಜಿಸುತ್ತ ಪುಜಿಸುತ್ತ ಎಲ್ಲ ವ್ಯಥೆಗಳನ್ನು ಮರೆಯುತ್ತಾರೆ, ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ತಂದು ಕೊಳ್ಳುತ್ತಾರೆ. ಈ ಹೊತ್ತಿಗೂ ಗ್ರಾಮದೇವತೆಗಳ ಪೂಜೆ ಪ್ರಾಕ್ತನ ರೀತಿಯಲ್ಲಿಯೇ ನಡೆಯುತ್ತದೆ. ಊರ ಹೊರಗಿದ್ದು ಕೊಂಡೇ ಊರಿನ ಕ್ಷೇಮವನ್ನು ನೋಡಿಕೊಳ್ಳುತ್ತಿರುವ ಆ ದೇವತೆಗಳಿಗೆ ಆಕಾಶವೇ ಕಿರೀಟ, ದಶದಿಕ್ಕುಗಳೇ ಉಡುಪು. ವೇದ ಪೂರ್ವಕಾಲದಿಂದಲೂ ಅವುಗಳ ಪೂಜೆಯೂ, ಜತೆಜತೆಗೆ ಅವುಗಳಿಗೆ ಸಂಬಂಧಿಸಿದ ಜಾತ್ರೆಗಳೂ ಅವಿರತವಾಗಿ ನಡೆಯುತ್ತಿದ್ದಿರಬೇಕು. ಆದ್ದರಿಂದ ಐತಿಹ್ಯಗಳು ಮೊದಲ ಮೊದಲು ಗ್ರಾಮದೇವತೆಗಳ ಸುತ್ತ, ಹೆಣೆದುಕೊಂಡಿದ್ದು, ಕೊನೆಕೊನೆಗೆ ನಗರ ದೇವತೆಗಳ ಕಕ್ಷೆಯೊಳಗೂ ವ್ಯಾಪಿಸಿಕೊಂಡಿರಬೇಕೆಂದು ತೋರುತ್ತದೆ.

ಮಾನವ ಮತ್ತು ಪ್ರಕೃತಿ ಪರಸ್ಪರ ಅವಲಂಬಿತವಾಗುವುದರ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತವೆ. ಮಾನವ ಪ್ರಕೃತಿಯನ್ನು ಆರಾಧಿಸುವುದರ ಹಿಂದೆ ಅದನ್ನು ರಕ್ಷಿಸಬೇಕೆನ್ನುವ ಮನೋಧರ್ಮ ಅಡಕವಾಗಿರುವುದು ವಿದಿತವಾಗುತ್ತದೆ. ಕಾರಣ ಪರಿಸರ ಸಮೃದ್ಧವಾಗಿದ್ದರೆ ತನ್ನ ಜೀವನವು ಕೂಡ ಸಮೃದ್ಧವಾಗಿರುತ್ತದೆ; ಅದು ನಾಶವಾದರೆ ತನ್ನ ಜೀವನವು ಕೂಡ ನಾಶವಾಗುತ್ತದೆನ್ನುವ ತಿಳುವಳಿಕೆ ಮಾವನಲ್ಲಿತ್ತು. ಹೀಗಾಗಿ ಪ್ರಕೃತಿಯ ರಹಸ್ಯವನ್ನು ಅರಿತುಕೊಳ್ಳುವ ಪ್ರಯತ್ನ ನಡೆಸಿದನು. ಇದರ ಫಲವಾಗಿ ಹಲವು ಐತಿಹ್ಯಗಳು ಹುಟ್ಟು ಪಡೆದುಕೊಂಡವು ಎನ್ನುವುದು ಗಮನಾರ್ಹ. ಅಲ್ಲದೆ ಪ್ರಕೃತಿಯಲ್ಲಿನ ನೆಲ-ಜಲ, ಪ್ರಾಣಿ-ಪಕ್ಷಿ, ಗುಡ್ಡ-ಬೆಟ್ಟಗಳೊಂದಿಗೆ ಹೊಂದಿರುವ ಆತನ ಸಂಬಂಧವು ದೈವೀ ಆರಾಧನೆಯಲ್ಲಿ ವ್ಯಕ್ತವಾದಂತೆ, ಇನ್ನೂ ಕೆಲವು

ಸಂದರ್ಭದಲ್ಲಿ ಘಟಿತ ಘಟನೆಯನ್ನು ಇವುಗಳೊಂದಿಗೆ ಆರೋಪಿಸಿಕೊಂಡಿರುವುದು ಐತಿಹ್ಯಗಳಲ್ಲಿ ವ್ಯಕ್ತವಾಗಿದೆ. ಒಟ್ಟಾರೆ ಪರಿಸರದ ಮಹತ್ವವನ್ನು ಪ್ರಾಚೀನ ಮಾನವ ಅರಿತುಕೊಂಡಿದ್ದನೆನ್ನುವುದು ಇಲ್ಲ ಕಂಡುಬರುತ್ತದೆ.

ಸಾಮಾನ್ಯಕ್ಕಿಂತ ಅಸಾಮಾನ್ಯವಾದುದು ಬಹುಬೇಗನೆ ಜನಮನವನ್ನು ಆಕರ್ಷಿಸುವುದಲ್ಲದೆ, ಬಹುದಿನಗಳವರೆಗೆ ಉಳಿದುಕೊಂಡು ಬರುತ್ತದೆ. ಹೀಗಾಗಿ ವ್ಯಕ್ತಿಯೋರ್ವನನ್ನು ವೈಭವೀಕರಿಸಲು ಮತ್ತು ಸ್ಥಳವೊಂದರ ವಿಶಿಷ್ಟತೆಯನ್ನು ಹಾಗೂ ಕುಲವೊಂದರ ಮೂಲವನ್ನು ಹೇಳುವಲ್ಲಿ ಅಸಾಮಾನ್ಯತ್ವವನ್ನು ವ್ಯಕ್ತಿ, ಸ್ಥಳ, ಕುಲಕ್ಕೆ ಆರೋಪಿಸಲಾಗುತ್ತದೆ. ಇದು ಅವುಗಳಿಗೆ ಶ್ರೇಷ್ಠತ್ವವನ್ನು ತಂದುಕೊಡುವುದರ ಜೊತೆಗೆ ಚಾರಿತ್ರಿಕ ಹಿನ್ನೆಲೆಯು ಪರಂಪರಾಗತವಾಗಿ ಉಳಿದುಕೊಂಡು ಬರಲು ಸಹಕಾರಿಯಾಗಿವೆ ಎನ್ನುವ ಅಂಶವನ್ನು ಕಂಡುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಬಹುಮುಖ್ಯ ಸಂಗತಿಗಳು ಈ ಕೆಳಗಿನಂತಿವೆ.

ಫಲಿತಗಳು

- ಐತಿಹಾಸಿಕ ನೆಲೆಯನ್ನು ಹೊಂದಿರುವ ಐತಿಹ್ಯಗಳಲ್ಲಿ ಅರಸರ ಜಯ ಅಪಜಯದಂಥ ಆಡಳಿತಾತ್ಮಕ ಕಾರ್ಯಗಳಿಗಿಂತಲೂ ಅವರ ಕೌಟುಂಬಿಕ ಜೀವನಕ್ಕೆ ಹೆಚ್ಚು ಒತ್ತುಕೊಟ್ಟಿರುವುದು ಕಂಡುಬರುತ್ತದೆ. ಜನರ ಬದುಕಿನ ಮೌಲ್ಯಗಳು ಮುಖ್ಯವಾಗಿದ್ದವೆ ಹೊರತು ಅಧಿಕಾರ ಅಂತಸ್ತು ಅಲ್ಲ ಎನ್ನುವುದನ್ನು ಧ್ವನಿಸುತ್ತದೆ.
- ಲಿಖಿತ ಇತಿಹಾಸ ಕೇವಲ ಪ್ರಭುತ್ವಕ್ಕೆ ಪ್ರಾಧಾನ್ಯತೆ ನೀಡಿ, ಬಹುಸಂಖ್ಯಾತ ಸಮುದಾಯದ ಚರಿತ್ರೆಯನ್ನು ನಿರ್ಲಕ್ಷಿಸಿದೆ. ಈ ಇತಿಹಾಸವನ್ನು ಪುನರ್ ರಚಿಸುವಲ್ಲಿ ಐತಿಹ್ಯಗಳು ಪ್ರಾಥಮಿಕ ಆಕರಗಳಾಗುತ್ತವೆ ಎನ್ನುವುದನ್ನು ಗುರುತಿಸಲಾಗಿದೆ.
- ಮಾನವನು ಸಂಚಾರಿ ಬದುಕನ್ನು ಕೊನೆಗೊಳಿಸಿ ಒಂದೆಡೆ ವಾಸ್ತವ್ಯ ಮಾಡಿದ ನೆಲೆಗಳೇ ಗ್ರಾಮಗಳಾದವು. ಹೀಗೆ ನೆಲೆನಿಲ್ಲುವ ಸ್ಥಳ ಜೀವನ ನಿರ್ವಹಣೆಗೆ ಯೋಗ್ಯವಾದ ಕೃಷಿ ಭೂಮಿ, ನೀರಿನ ಸವಲತ್ತುಗಳನ್ನು ಅವಲಂಬಿಸಿರುತ್ತಿತ್ತು ಎನ್ನುವ ಅಂಶವನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಇಂಥ ಸ್ಥಳನಾಮಗಳಿಗೆ ಅಲ್ಲಿನ ಭೌಗೋಳಿಕ ಪರಿಸರ ಅಥವಾ ಜನರ ಸಾಂಸ್ಕೃತಿಕ ಬದುಕಿನ ಮೌಲ್ಯಗಳು ವಸ್ತುವಾಗಿರುವ ಅಂಶ ವಿದಿತವಾಗುತ್ತದೆ.
- ಪ್ರಾಚೀನ ಮಾನವನು ನೆಲ-ಜಲ-ಸಸ್ಯದ ವಿಶಿಷ್ಟ ಗುಣಧರ್ಮವನ್ನೂ ರಹಸ್ಯವನ್ನು ಆರಾಧಿಸುವ ಮೂಲಕ ಅರ್ಥೈಸಿಕೊಂಡ ಪರಿಯನ್ನು ಐತಿಹ್ಯಗಳು ಸೂಚಿಸುತ್ತವೆ. ನೆಲ, ಜಲ ಮತ್ತು ಸಸ್ಯದ ಕುರಿತು ಅರ್ಥೈಸಿಕೊಂಡ ಪರಿಯನ್ನು ಐತಿಹ್ಯಗಳು ಸೂಚಿಸುತ್ತವೆ. ನೆಲ, ಜಲ ಮತ್ತು ಸಸ್ಯದ ಕುರಿತಿರುವ ಐತಿಹ್ಯಗಳಲ್ಲಿ ವೈಜ್ಞಾನಿಕ ಚಿಂತನೆ ಇರುವುದನ್ನು ಗುರುತಿಸಲಾಗಿದೆ. ಈ ಸಂಪತ್ತನ್ನು ಪರಂಪರಾಗತವಾಗಿ ಸಂರಕ್ಷಿಸಿಕೊಂಡು ಬರಲು ಅವುಗಳಿಗೆ ದೈವತ್ವದ ಸ್ಥಾನವನ್ನು ಕೊಟ್ಟು ಆರಾಧಿಸುತ್ತಾ ಬಂದಿರುವುದನ್ನು ಗುರುತಿಸಲಾಗಿದೆ. ಅದೇ ರೀತಿ ನಿಸರ್ಗದತ್ತ ಗುಡ್ಡ-ಬೆಟ್ಟಗಳನ್ನು ಉಳಿಸಿಕೊಳ್ಳಲು ಪೌರಾಣಿಕ ಪಾತ್ರಗಳನ್ನು ಆರೋಪಿಸಿಕೊಂಡಿರುವುದನ್ನು ಕಾಣುತ್ತೇವೆ. ಇದು ಕೇವಲ ಅವುಗಳ ಸಂರಕ್ಷಣೆಗೆ ಮಾತ್ರ ಸೀಮಿತವಾಗಿಲ್ಲ. ಆ ಮೂಲಕ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗದಂತೆ ತಡೆಯುವ ಚಿಂತನೆ ಇದೆ ಎನ್ನುವುದನ್ನು ಕಂಡುಕೊಳ್ಳಲಾಗಿದೆ.
- ಭೌತಿಕ ಆಕರದಿಂದಾಗಿ ಐತಿಹ್ಯಗಳು ಪುರಾಣ, ಕಥೆ, ವದಂತಿ, ದಂತಕಥೆಗಳಿಂದ ಬೇರ್ಪಡುತ್ತವೆ. ಇದರಿಂದಾಗಿ ಐತಿಹ್ಯಗಳು ಅಲ್ಪಮಟ್ಟಿಗಾದರೂ ವಾಸ್ತವ ಬದುಕನ್ನು, ಮೌಲ್ಯಗಳನ್ನು ಪ್ರತಿಪಾದಿಸುತ್ತವೆನ್ನುವುದು ಸತ್ಯ ಸಂಗತಿಯಾಗಿದೆ.

* ಅತಿಮಾನುಷ ಶಕ್ತಿಯನ್ನು ಮತ್ತು ಪ್ರಕೃತಿಯಲ್ಲಿನ ರಹಸ್ಯವನ್ನು ಅರ್ಥ ಮಾಡಿಕೊಳ್ಳುವ ಮಾನವನ ಪ್ರಯತ್ನದ ಫಲವಾಗಿ ಐತಿಹ್ಯಗಳು ಹುಟ್ಟು ಪಡೆಯುತ್ತವೆ. ಹೀಗೆ ಹುಟ್ಟು ಪಡೆಯುವ ಐತಿಹ್ಯಗಳಲ್ಲಿನ ಆತನ ಚಿಂತನೆಗಳು ಪ್ರಾಕೃತಿಕ ಪರಿಸರದ ನೈಜ ಘಟನೆಯೊಂದಿಗೆ ಸಂಬಂಧವನ್ನು ಹೊಂದಿರುತ್ತದೆ.

* ಜನರ ಜನರ ನಡುವಿನ ಅಥವಾ ಎರಡು ಗ್ರಾಮಗಳ ನಡುವಿನ ವ್ಯಾಜ್ಯಗಳು ಸಾಮಾನ್ಯವಾಗಿ ಶರಣರ, ಸಾಧು ಸಂತರ ಮಧ್ಯಸ್ಥಿಕೆಯಿಂದ ಸಂಧಾನ ಏರ್ಪಡುತ್ತಿತ್ತು. ಅದೇ ರೀತಿ ಎರಡು ರಾಜ್ಯಗಳ ಅರಸರ ನಡುವಿನ ವ್ಯಾಜ್ಯಗಳು ಏರ್ಪಟ್ಟಾಗ ಅದರ ನಿವಾರಣೆಗೆ ಮೊದಲು ಸಂಧಾನ ಏರ್ಪಡುತ್ತಿತ್ತು. ಅದು ಸಾಧ್ಯವಾಗದಿದ್ದಾಗ ಆಕ್ರಮಣ, ಯುದ್ಧದಂಥ ಕಾರ್ಯದೆಡೆಗೆ ಕಾರ್ಯ ಪ್ರವೃತ್ತರಾಗುತ್ತಿದ್ದರೆನ್ನುವ ಅಂಶ ಕಂಡುಕೊಳ್ಳಲಾಗಿದೆ.

* ಪ್ರಕೃತಿಯೊಂದಿಗಿನ ಮಾನವನ ಅನ್ಯೋನ್ಯ ಸಂಬಂಧ ತಿಳಿಸುವ ಐತಿಹ್ಯಗಳು ಪ್ರಕೃತಿಯಲ್ಲಿನ ವೈಜ್ಞಾನಿಕ ಮತ್ತು ವಾಸ್ತವ ಪ್ರಜ್ಞೆಯನ್ನು ಹೊರಹಾಕುತ್ತವೆ.

* ಪೌರಾಣಿಕ ಪಾತ್ರಗಳನ್ನು ಆರೋಪಿಸಿಕೊಳ್ಳುವುದು ನೆಲ,ಜಲ,ಸಸ್ಯಕ್ಕೆ ಸೀಮಿತವಾಗಿಲ್ಲ ವ್ಯಕ್ತಿಯ ಅಸಾಮಾನ್ಯ ಕಾರ್ಯಸಾಧನೆಯನ್ನು, ಒಂದು ಸಮುದಾಯದ ಕುಲಮೂಲದ ಶ್ರೇಷ್ಠತೆಯನ್ನು ಹಾಗೂ ಸ್ಥಳದ ಪಾವಿತ್ರ್ಯತೆಯನ್ನು ಹೇಳುವಲ್ಲಿಯೂ ಅವು ಕಂಡುಬರುವುದನ್ನು ಗುರುತಿಸಲಾಗಿದೆ.

* ಸಾಂಪ್ರದಾಯಿಕ ಇತಿಹಾಸಕ್ಕೆ ಎಲ್ಲಾ ಐತಿಹ್ಯಗಳು ಪೂರಕ ಆಕರಗಳಾಗಲಾರವು. ಆದರೆ ಐತಿಹಾಸಿಕ ಎಳೆಯನ್ನು ಹೊಂದಿರುವ ಕೆಲವು ಐತಿಹ್ಯಗಳು ಪೂರಕ ಆಕರಗಳಾಗಬಲ್ಲವು ಎಂಬುದನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಈ ವಿಷಯವಾಗಿ ಲಿಖಿತ ಮತ್ತು ಮೌಖಿಕ ಎರಡರಲ್ಲಿಯೂ ಸಾಮ್ಯತೆ ಇರುವುದನ್ನು ಕಾಣುತ್ತೇವೆ.

* ನಾಡಿನ ಸಂಸ್ಕೃತಿ, ಪರಂಪರೆಯ ದ್ಯೋತಕವಾದ ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ ನಿಷೇಧಗಳು ಸ್ವಾಸ್ಥ್ಯಸಮಾಜ ನಿರ್ಮಾಣಕ್ಕೆ ಕಾರಣವಾಗಿವೆ. ಇವೇ ಜನಪದರ ದೃಷ್ಟಿಯಲ್ಲಿ ಕಾನೂನುಗಳೆಂಬಂತೆ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಅನಾದಿಕಾಲದಿಂದಲೂ ರಕ್ತಗತವಾಗಿ ಬಂದಿರುವ ಈ ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ ನಿಷೇಧಗಳ ಹಿಂದೆ ಅನೇಕ ವಾಸ್ತವಾಂಶಗಳು ಅಡಕವಾಗಿರುವುದನ್ನು ಐತಿಹ್ಯಗಳು ವ್ಯಕ್ತಪಡಿಸಿವೆ. ಇಲ್ಲಿ ಮಾನವನ ಆಲೋಚನಾ ಲಹರಿ, ಭೌಗೋಳಿಕ ಪರಿಸರ, ಶ್ರೇಣೀಕೃತ ವ್ಯವಸ್ಥೆ, ಉಳ್ಳವರ ಶೋಷಣೆ, ಅಸಮಾನತೆ, ಸಾಮಾಜಿಕ ನ್ಯಾಯ ಪದ್ಧತಿ, ವೈದ್ಯಕೀಯ ವ್ಯವಸ್ಥೆ, ಆಸೆ, ಆಕಾಂಕ್ಷೆ ಮುಂತಾದವುಗಳ ಪ್ರತೀಕವಾಗಿಯೇ ರೂಪುತಾಳಿರುವುದು ಗ್ರಹಿತವಾಗುತ್ತದೆ.

* ಪ್ರಾಣಿಗಳೊಂದಿಗೆ ಒಡನಾಡಿಯಾಗಿದ್ದ ಮಾನವ ಆ ಪ್ರಾಣಿಗಳ ಬಗ್ಗೆ ಕೆಲವು ನಂಬಿಕೆಗಳನ್ನು ಹುಟ್ಟು ಹಾಕಿದನು. ಈ ನಂಬಿಕೆಗಳು ಆಯಾ ಪ್ರಾಣಿಯ ಗ್ರಹಿಕೆಯ ಸಾಮರ್ಥ್ಯ ಮತ್ತು ಗುಣ ಸ್ವಭಾವವನ್ನು ಅವಲಂಬಿಸಿರುವಂಥವುಗಳು ಎನ್ನುವ ಅಂಶವನ್ನು ಕಂಡುಕೊಳ್ಳಲಾಗಿದೆ.

* ಹಲವು ಪ್ರಾಣಿ, ಸಸ್ತನಿಗಳು ನಿಧಿ ಇರುವ ಸ್ಥಳವನ್ನು ಗ್ರಹಿಸುತ್ತವೆ ಎನ್ನುವ ಪರಿಕಲ್ಪನೆಯು ಕೂಡ ಇಂಥ ನಂಬಿಕೆ ಹಿನ್ನೆಲೆಯಲ್ಲಿಯೇ ಹುಟ್ಟು ಪಡೆದಿರುವುದನ್ನು ಗುರುತಿಸಲಾಗಿದೆ.

- ಸಾಂಪ್ರದಾಯಿಕ ಇತಿಹಾಸದಲ್ಲಿ ವ್ಯಕ್ತವಾಗಿರದ ಕೆಲವು ಅಂಶಗಳು ಐತಿಹ್ಯದಲ್ಲಿ ವ್ಯಕ್ತಗೊಂಡಿರುವುದನ್ನು ಗುರುತಿಸಲಾಗಿದೆ. ಇಲ್ಲಿ ಜನಸಾಮಾನ್ಯರಂತೆ ಅರಸರು ಕೂಡ ಶಕುನ, ಮಾಟ ಮಂತ್ರ, ಅನೈತಿಕ ಸಂಬಂಧ, ಅತಿಮಾನುಷ ಶಕ್ತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ಕಂಡುಕೊಳ್ಳಲಾಗಿದೆ.
- ಅವರ ನಂಬಿಕೆಗಳೆ ಐತಿಹ್ಯಗಳಿಗೆ ಆಧಾರವಾಗಿವೆ. ನಂಬಿಕೆಗಳಿಲ್ಲದೆ ಐತಿಹ್ಯಗಳು ಹುಟ್ಟಲಾರವು. ಹೀಗೆ ಹುಟ್ಟಿದ ಐತಿಹ್ಯಗಳಲ್ಲಿ ವಾಸ್ತವ, ಅವಾಸ್ತವ, ವೈಜ್ಞಾನಿಕ, ಅವೈಜ್ಞಾನಿಕ ತರ್ಕಗಳಿರುವುದನ್ನು ಕಂಡುಕೊಳ್ಳಲಾಗಿದೆ.
- ಪ್ರಭುತ್ವ ವ್ಯವಸ್ಥೆಯನ್ನು ಕುರಿತ ಐತಿಹ್ಯಗಳು ಹೆಚ್ಚಾಗಿ ಸ್ಥಳೀಯವಾಗಿರುವ, ತಮಗೆ ಹತ್ತಿರವಾಗಿರುವ ಹಾಗೂ ತಮ್ಮ ಸಮಸ್ಯೆಗಳಿಗೆ ಸ್ಪಂದಿಸಿದ ಸಣ್ಣ ಸಂಸ್ಥಾನಿಕರ, ಪಾಳೆಗಾರರ, ಧಣಿಗಳ ಬಗೆಗೆ ಜನಪದರಿಂದ ಐತಿಹ್ಯಗಳು ಹುಟ್ಟಿಕೊಂಡಿವೆಯೇ ಹೊರತು, ತಮ್ಮಿಂದ ದೂರವಿರುವ ದೊಡ್ಡ ಸಂಸ್ಥಾನಗಳ ರಾಜ, ಮಹಾರಾಜರ ಬಗೆಗೆ ಐತಿಹ್ಯಗಳು ಹುಟ್ಟು ಪಡೆಯದಿರುವುದು ವಿದಿತವಾಗುತ್ತದೆ.
- ಐತಿಹ್ಯಗಳು ಸಮಷ್ಠಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಹುಟ್ಟು ಪಡೆದಿರುವುದರಿಂದ ವ್ಯಕ್ತಿಗತ ಸುಖಕ್ಕಿಂತ, ಸಮಾಜದ ಹಿತವನ್ನು ಬಯಸುತ್ತವೆ. ತನ್ನಿಂದಾಗಿ ಸಮಾಜಕ್ಕೆ ಒಳಿತಾಗುವುದಾದರೆ ತ್ಯಾಗ, ಬಲಿದಾನಕ್ಕೂ ಸಿದ್ಧವಾಗುವ ವ್ಯಕ್ತಿಯ ಮನೋಭಾವನೆಯ ಹಿಂದೆ ಈ ಅಂಶವು ವ್ಯಕ್ತಗೊಂಡಿವೆ.
- ಐತಿಹ್ಯಗಳಲ್ಲಿ ವ್ಯಕ್ತವಾಗುವ 'ಪುಷ್ಪಕ ವಿಮಾನ'ದ ಪರಿಕಲ್ಪನೆಯು ಇಂದಿನ ವಿಮಾನಯಾನಕ್ಕೆ ಪೂರಕ, ಪ್ರೇರಕವಾಗಿರುವ ಸಾಧ್ಯತೆಯನ್ನು ಗುರುತಿಸಲಾಗಿದೆ.

ಅನುಬಂಧ

೧. ವಕ್ತೃಗಳ ವಿವರ

- ಶ್ರೀ ಬಸವಾರಾಜ ಸೊಲಬಾಣ್ಣನೂರು ತಂದೆ ಶಿವಶರಣ,೪೯ ಪೂಜಾರಿಕೆ,ಬಿಜನಳ್ಳಿ, ತಾ., ಸೇಡಂ, ಜಿ., ಗುಲಬರ್ಗಾ
- ಶ್ರೀ ಹಿರಣ್ಯಪ್ಪ ದೇಶಮುಖ,೭೦ ವ್ಯವಸಾಯ, ಮಳಖೇಡ, ತಾ., ಸೇಡಂ., ಜಿ., ಗುಲಬರ್ಗಾ
- ಶ್ರೀ ಬಸವಣಪ್ಪ, ೫೦ ವ್ಯವಸಾಯ, ಬಿರನಳ್ಳಿ, ತಾ., ಸೇಡಂ, ಜಿ., ಗುಲಬರ್ಗಾ
- ಶ್ರೀ ತ್ರಿಮೂರ್ತಿ ಶಿವಾಚಾರ್ಯರು, ೪೨ ದುರ್ಗಾ ದೇವಸ್ಥಾನದ ಅಧ್ಯಕ್ಷರು, ತೊಟನ್ನಳ್ಳಿ, ತಾ., ಸೇಡಂ, ಜಿ., ಗುಲಬರ್ಗಾ
- ಶ್ರೀ ಸಿದಪ್ಪ.ಪಾಟೀಲ,೪೫ ಊರಿನ ಗೌಡರು, ಕುಕ್ಕಿಂದಿ, ತಾ., ಸೇಡಂ ಜಿ., ಗುಲಬರ್ಗಾ
- ಶ್ರೀ ಸಿದ್ದಣ್ಣಗೌಡ.ಪಾಟೀಲ, ೫೦ ಊರಿನ ಗೌಡರು, ಏಡಗಾ, ತಾ., ಸೇಡಂ, ಜಿ., ಗುಲಬರ್ಗಾ
- ಶ್ರೀ ಶಿವಮೂರ್ತಿ.ಹೂಗಾರ,೪೩ ಹೂಗಾರ ಸಮುದಾಯದ ವ್ಯಕ್ತಿ, ಕಾಚೂರು, ತಾ., ಸೇಡಂ, ಜಿ., ಗುಲಬರ್ಗಾ
- ಹುಸೇನ ಸಾಬ, ೪೪ ವ್ಯವಸಾಯ, ದೊಡ್ಡ ಹೂಡಾ, ತಾ., ಸೇಡಂ, ಜಿ., ಗುಲಬರ್ಗಾ
- ಶ್ರೀ ಬಸವರಾಜ, ೫೫ ಲೊಕೇಶ್ವರ ದೇವಸ್ಥಾನದ ಅರ್ಚಕ, ಊಡಗಿ, ತಾ., ಸೇಡಂ ಜಿ., ಗುಲಬರ್ಗಾ
- ಶ್ರೀ ನಂದಪ್ಪಾ, ೫೨ ವ್ಯವಸಾಯ, ಕಲಕಂಬ, ತಾ., ಸೇಡಂ ಜಿ., ಗುಲಬರ್ಗಾ
- ಆನಂದ ರಾಜು, ೪೦ ವ್ಯವಸಾಯ, ಸಿಂದನ ಮಡು, ತಾ., ಸೇಡಂ ಜಿ., ಗುಲಬರ್ಗಾ
- ಶ್ರೀ ಶಿವಲಿಂಗ ರೆಡ್ಡಿ, ೩೮ ವ್ಯವಸಾಯ, ಬೆನಕನಹಳ್ಳಿ, ತಾ., ಸೇಡಂ ಜಿ., ಗುಲಬರ್ಗಾ
- ಶ್ರೀ ಭೀಮರೆಡ್ಡಿ, ೪೦ ವ್ಯವಸಾಯ, ಹಂದರಕಿ, ತಾ., ಸೇಡಂ ಜಿ., ಗುಲಬರ್ಗಾ
- ಶ್ರೀ ಸೂರ್ಯಕಾಂತರಾವ್ ದೇಶಮುಖ, ೬೨ ನಿವೃತ್ತ ತಲಾಟಿ, ಗಡಿಕೆಶ್ವಾರ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ನೀಲಕಂಠಪ್ಪ, ೪೧ ವ್ಯವಸಾಯ, ಹಲಚರಾ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ಶಿವಶಂಕರಯ್ಯ. ಯಲಮಡಗಿ, ೫೦ ಹನುಮಂತನ ದೇವಸ್ಥಾನದ ಅರ್ಚಕ, ಕೂಡ್ಲಿ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ಭೀಮಸೇನರಾವ ಕುಲಕರ್ಣಿ, ೫೨ ಊರಿನ ಕುಲಕರ್ಣಿಯವರು, ಮೊಘಾ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ವಿರಣ್ಣ ಕಾಬಾ, ೫೨ ವ್ಯವಸಾಯ, ಚೆಂಗಟಾ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ಮಹಾರುದ್ರಪ್ಪ ತಂದೆ ತಿಪ್ಪಣ್ಣ ದೇಸಾಯಿ, ೪೮ ವ್ಯವಸಾಯ, ಸುಲೇಪೇಟ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ಪಂಡಿತರಾವ್ ಪಾಟೀಲ್, ೫೦ ವ್ಯವಸಾಯ, ಕೊರವಿ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಶ್ರೀ ಭಗವಂತರಾವ ದೇಸಾಯಿ, ೫೩ ವ್ಯವಸಾಯ, ದೇಗಲಮಡಿ, ತಾ., ಚಿಂಚೋಳಿ ಜಿ., ಗುಲಬರ್ಗಾ
- ಅಬ್ದುಲ್ ಸಾಬ್ ಊಮರ ಅಲಿ ಮುಲ್ಲಾ, ೪೬ ವ್ಯವಸಾಯ, ಕರ್ಜಗಿ, ತಾ., ಅಫಜಲಪೂರ ಜಿ., ಗುಲಬರ್ಗಾ
- ಶ್ರೀ ಧರೆಪ್ಪ ತಂದೆ ಕಲಪ್ಪ ಸಲಗರ, ೪೦ ವ್ಯವಸಾಯ, ಕರ್ಜಗಿ, ತಾ., ಅಫಜಲಪೂರ ಜಿ., ಗುಲಬರ್ಗಾ

- ಶ್ರೀ ಚಂದ್ರಪ್ಪ ತಂದೆ ನರಸಿಂಗಪ್ಪ ಕುಂಬಾರ, ೪೪ ಚೌಡಮ್ಮ ದೇವಸ್ಥಾನದ ಅರ್ಚಕ, ಮಾಶ್ಯಾಳ, ತಾ., ಅಫಜಲಪೂರ ಜಿ., ಗುಲಬರ್ಗಾ
- ಶ್ರೀ ಬಸವಣಪ್ಪಾ, ೫೨ ವ್ಯವಸಾಯ, ಮಣ್ಣೂರ, ತಾ., ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಕಂಟೆಪ್ಪ ಪೂಜಾರಿ, ೪೯ವ್ಯವಸಾಯ, ಬಿಂಗೂಳಿ, ತಾ., ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಹಣಮಂತರಾವ ಜಾಗೀರದಾರ, ೮೨ ನಿವೃತ್ತ ಡಿ.ಸಿ.ಸಿ ಬ್ಯಾಂಕ್ ಗುಮಾಸ್ತ, ಚಿನ್ನಮಳ್ಳಿ, ತಾ., ಅಫಜಲಪೂರ ಜಿ., ಗುಲಬರ್ಗಾ
- ಶ್ರೀ ಶ.ಬ್ರ. ಶಾಂತವೀರ ಶಿವಾಚಾರ್ಯರು, ೬೨ ಮಠಾಧೀಶರು ಸುರಗಿಮಠ, ಬಂದರವಾಡ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ವಿರುಪಾಕ್ಷಪ್ಪ, ೭೦ ವ್ಯವಸಾಯ, ಚಿಣಮಗೇರಿ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಮೌಲಾಲಿ ಮುತ್ಯ, ೫೭ ವೆಟರನರಿ ಆಸ್ಪತ್ರೆಯಲ್ಲಿ ಜವಾನ, ಹಾಸರಗುಂಡಗಿ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಸರತಾಜ ಹುಸೇನ, ೪೫ ವ್ಯವಸಾಯ, ಮೈನಾಳ, ತಾ., ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಕೈಲಾಸಯ್ಯ.ಹಿರೇಮಠ, ೬೭ ವ್ಯವಸಾಯ, ಗೌರ.ಕೆ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ರಹೀಮ, ೩೮ ಸರಕಾರಿ ಶಾಲಾ ಶಿಕ್ಷಕರು, ಅತನೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಗುರುಲಿಂಗಪ್ಪ ಬಿರಾದಾರ, ೮೫ ವ್ಯವಸಾಯ, ಅತನೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಕೃಷ್ಣಂ ಭಟ್ಟ ತಂದೆ ಬಾಲಚಂದ್ರ ಭಟ್ಟ ಪೂಜಾರಿ, ೬೨ ಪ್ರಧಾನ ಅರ್ಚಕರು ದತ್ತ ದೇವಸ್ಥಾನ, ಘಣಗಾಪೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಅತ್ರಿಕುಮಾರ ಕಾಶಿನಾಥ ಭಟ್ಟ ಪೂಜಾರಿ, ೫೩ ಪೌರೋಹಿತ್ಯ ದತ್ತ ದೇವಸ್ಥಾನದ ಔದಂಬರ ಮರದ ಹಿನ್ನೆಲೆ ಮಾಹಿತಿದಾರರು, ಫಣಗಾಪೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಮಲ್ಲಿಕಾರ್ಜೂನ ತಂದೆ ಭೀಮರಾಯ, ೪೫ ಅರ್ಚಕರು ಭಾಗ್ಯವಂತಿ ದೇವಸ್ಥಾನ, ಘತರಗಿ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಗುರಣ್ಣ ಹೂಗಾರ, ೬೫ ಅರ್ಚಕರು ಸಿದ್ದಲಿಂಗೇಶ್ವರ ದೇವಸ್ಥಾನ, ದೇಸಾಯಿಕಲ್ಲೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ದತ್ತಪ್ಪಾ ತಂದೆ ಅಡಿವೆಪ್ಪ ಗವಂಡಿ, ೭೮ ವ್ಯವಸಾಯ, ದೇವಸ್ಥಾನ ಚಂದ್ರಮ್ಮ ತಾಯಿ ಗ್ರಾಮದೇವತೆ, ಆನೂರ, ತಾ., ಅಫಜಲಪೂರ ಜಿ., ಗುಲಬರ್ಗಾ
- ಶ್ರೀ ಮಲ್ಲಿಕಾರ್ಜುನ ಪಾಟೀಲ, ೬೧ ವ್ಯವಸಾಯ, ಬಿದನೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ

- ಶ್ರೀ ಈರಯ್ಯ ತಂದೆ ಅಮರಯ್ಯ ಗುತ್ತೆದಾರ, ೬೮ ಕಲಾವಿದರು, ಬಿದನೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಕರಣಸಿಂಗ ರಾಜಪೂತ, ೨೫ ವ್ಯವಸಾಯ, ಹೂವಿನಹಳ್ಳಿ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಸಾಯಿಬಣ್ಣ ತಂದೆ ಮಲ್ಲಪ್ಪಾ ಮ್ಯಾಕೇರಿ, ೪೦ ವ್ಯವಸಾಯ, ಅಫಜಲಪೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಲಿಂಗಣಗೌಡ ತಂದೆ ಸಿದ್ದನಗೌಡ ಪಾಟೀಲ್, ೪೨ ವ್ಯವಸಾಯ, ಅಫಜಲಪೂರ, ತಾ.,ಅಫಜ್ಜಲಪೂರ' ಜಿ., ಗುಲಬರ್ಗಾ
- ಶ್ರೀ ಶ್ರೀ ಶರಸ್ಥಲ ಬ್ರಹ್ಮ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು, ೩೮ ಮಳೇಂದ್ರ ಮಠ ಅಫಜ್ಜಲಪೂರ, ತಾ., ಅಫಜಲಪೂರ ಜಿ., ಗುಲಬರ್ಗಾ
- ಶ್ರೀ ಶಂಕರ ತಂದೆ ಪಾಂಡು ರಾಠೋಡ, ೬೫ ವ್ಯವಸಾಯ, ಮಾದಾಬಾಳ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಆನಂದಪ್ಪ ಬಡದಾಳ, ೬೦ ವ್ಯವಸಾಯ, ಮಲ್ಲಬಾದ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಗುರುಶಾಂತಪ್ಪ ತಂದೆ ಧರ್ಮರಾವ ಪಾಟೀಲ, ೬೭ ವ್ಯವಸಾಯ, ಮಲ್ಲಬಾದ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ವಿಠಲರಾವ್ ತಂದೆ ಹಣಮಂತರಾವ್ ಹೊಸಗೌಡರು, ೨೩ ವ್ಯವಸಾಯ, ಕೊಗನೂರ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ರೇವಣಸಿದಪ್ಪ ಬುಕ್ಕಾ, ೨೦ ವ್ಯವಸಾಯ, ನರೋಣಾ, ತಾ.,ಅಫಜ್ಜಲಪೂರ ಜಿ., ಗುಲಬರ್ಗಾ
- ಶ್ರೀ ಮಹಾಂತಯ್ಯ, ೩೮ ಪ್ರಧಾನ ಅಚರ್ಕರು ಕ್ಷೇಮಲಿಂಗೇಶ್ವರ ದೇವಸ್ಥಾನ , ನರೋಣಾ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಶಿವಶರಣಪ್ಪ.ಸಿ. ಕಡೊಳಿ, ೫೩ ಸಮಾಜ ಸೇವಕರು, ಚಿಂಚನಸೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಶ್ರೀಶೈಲ ತಂದೆ ಜಟೆಪ್ಪ ಮಾವಿನ, ೩೨ ಗ್ರಾಮ ಪಂಚಾಯತ ಮೆಂಬರ, ಚಿಂಚನಸೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ದೂಳಪ್ಪ, ೫೭ ವ್ಯಸಾಯ, ಚಿಂಚನಸೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ರಾಮಣ್ಣ, ೫೫ ವ್ಯವಸಾಯ, ತೆಲ್ಲೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಮಲ್ಲಿಕಾರ್ಜುನ ಮೂಡಬಿ, ೨೦ ವ್ಯವಸಾಯ, ಹೊಲ್ಡ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಭೀಮಣ್ಣಾ ಜಮಾದಾರ, ೩೨ ವ್ಯವಸಾಯ, ಹೊಲ್ಡ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಸಿದ್ರಾಮಪ್ಪಾ ಜಮಾದಾರ, ೬೮ ನಿವೃತ್ತ ಪಿ.ಎಸ್,ಐ, ಹೊಲ್ಡ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ವೀರಭದ್ರ ಹೂಗಾರ, ೮೦ ಸಿದ್ದೇಶ್ವರ ದೇವಸ್ಥಾನದ ಅರ್ಚಕರು, ಲಾಡಚಿಂಚೋಳಿ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಮೃತುಂಜಯ ಹಿರೇಮಠ, ೬೧ ಜ್ಯೋತಿಷಿ, ಧುತ್ತರಗಾಂವ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಶರಣಗೌಡ ಬಿ ಮಾಲಿಪಾಟೀಲ, ೬೭ ವ್ಯವಸಾಯ, ಧುತ್ತರಗಾಂವ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಬಾಬುರಾವ ಪಾಟೀಲ, ೬೭ ವ್ಯವಸಾಯ, ಭೂಸನೂರ, ತಾ., ಆಳಂದ ಜಿ., ಗುಲಬರ್ಗಾ

- ಶ್ರೀ ಮತಿ ನೀಲಾವತಿ ಬಿ ಪಾಟೀಲ್, ೫೮ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಭೂಸನೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ದೇವಿದಾಸ ತಂದೆ ಮಾಣೀಕರಾವ ಕುಲಕರ್ಣಿ, ೬೫ ವ್ಯವಸಾಯ, ಝುಳಕಿ.ಬಿ. ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಅಭಿನವ ಶಿವಲಿಂಗ ಮಹಾಸ್ವಾಮಿಗಳು, ೨೮ ಶಿವಲಿಂಗೇಶ್ವರ ಮಠದ ಮಾಠಾಧೀಶರು, ಮಾದನ ಹಿಪ್ಪರಗಾ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಚನ್ನಬಸಪ್ಪ, ೭೦ ವ್ಯವಸಾಯ, ಖಾಸ್ಕರ ಬೊಮ್ಮನಳ್ಳಿ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಗುರುಸಿದ್ದ ದುರ್ಗದ, ೬೫ ವ್ಯವಸಾಯ, ನಿವೃತ್ತ ತೋಟಗಾರಿಕೆ ಇಲಾಖೆಯ ವರ್ಕ ಇನ್ಸಪೇಕ್ಟರ, ನಿಂಬರ್ಗಾ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಸಿದ್ಧಯ್ಯ ಸ್ವಾಮಿ, ೬೧ ವ್ಯವಸಾಯ, ಹಿತ್ತಲ ಶಿರೂರ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ನಿಂಗಣ್ಣ ದುದಗಿ, ೬೪ ವ್ಯವಸಾಯ, ಮಾಡಿಯ್ಯಾಳ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಪ್ರಭುರಾಯ ತಂದೆ ರೆವಪ್ಪ ಪೂಜಾರಿ, ೫೪ ಪ್ರಧಾನ ಅಚರ್ಕರು ಅಮೋಘಸಿದ್ಧ ದೇವಸ್ಥಾನ, ಮಾಡಿಯ್ಯಾಳ, ತಾ., ಆಳಂದ ಜಿ., ಗುಲಬರ್ಗಾ
- ಎಮ್.ಡಿ. ಇದವಿಸ್ ಅನಸಾರಿ, ೫೫ ಇಮಾಮ್(ಮೌಲ್ವಿ), ಆಳಂದ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಪ್ರದೀಪ ಶಹಾ, ೭೨ ವಕೀಲರು, ಆಳಂದ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಕರಬಸಯ್ಯ ಸ್ವಾಮಿ, ೬೫ ವ್ಯವಸಾಯ, ರುದ್ರವಾಡಿ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಶಾಂತಿನಾಥ ಪಂಡಿತ, ೬೦ ಅರ್ಚಕರು ಜೈನಬಸದಿ, ತಡಕಲ್ಲ, ತಾ., ಆಳಂದ ಜಿ., ಗುಲಬರ್ಗಾ
- ಶ್ರೀ ಹಣಮಂತರಾಯ ಪೂಜಾರಿ, ೮೦ ವ್ಯವಸಾಯ, ನರಬೋಳಿ, ತಾ., ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಮಾಹಾದೇವಪ್ಪ ಸೂಲಹಳ್ಳಿ, ೫೬ ವ್ಯವಸಾಯ, ನರಬೋಳಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಈರಪ್ಪ, ೫೦ ವ್ಯವಸಾಯ, ರಾಮಪುರ, ತಾ., ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಬಸವರಾಜ, ೩೮ ವ್ಯವಸಾಯ, ಹೊತಿನ ಮಡು, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ರುದ್ರಮುನಿಸ್ವಾಮಿ, ೭೦ ವ್ಯವಸಾಯ, ಗವ್ಹಾರ, ತಾ., ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಅಮೃತಗೌಡ ಬಿರಾದಾರ ಪಾಟೀಲ್, ೭೦ ವ್ಯವಸಾಯ, ಗವ್ಹಾರ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಸೈಯದ್ ಇಸ್ಮಾಯಿಲ್ ಹುಸೇನಿ, ೬೫ ಮುತಾವಲಿ(ದರ್ಗಾ ಮುತ್ಯ), ಇಜೇರಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಬಸವರಾಜ ತಂದೆ ಮಹಾಂತಪ್ಪ ತಾಳಿಕೋ[illegible]. ೫೦ ವ್ಯವಸಾಯ, ಯಡ್ರಾಮಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಬಂಡೆಪ್ಪ ಗೌಡರು, ೫೦ ವ್ಯವಸಾಯ, ಯಡ್ರಾಮಿ, ತಾ.,ಜೇವರ್ಗಿ ಜಿ., ಗುಲಬರ್ಗಾ

- ಶ್ರೀ ರುದ್ರಮುನಿ ಶಿವಾಚಾರ್ಯರು, ೪೮ ಮಠಾಧೀಶರು, ಕಡಕೋಳ, ತಾ., ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶರಣಬಸಪ್ಪ ಸಜ್ಜನ್, ೫೪ ಪ್ರಸಾದಸೇವಕ, ಕಡಕೋಳ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶರಣಯ್ಯ ಸ್ವಾಮಿ, ೭೦ ಸ್ವಾಮಿಗಳು, ಅರಳಗುಂಡಗಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶಿವಾನಂದ, ೫೦ ಮಠದ ಪೀಠಾಧಿಪತಿ ವಿರಕ್ತಮಠ, ಸೊನ್ನ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಕರಬಸಯ್ಯ, ೭೦ ವ್ಯವಸಾಯ, ಹಿಪ್ಪರಗಾ.ಎಸ್.ಎನ್. ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶಂಕರ ಹೂಗಾರ, ೬೦ ಪ್ರಧಾನ ಅರ್ಚಕರು ಶಂಕರಲಿಂಗೇಶ್ವರ ದೇವಸ್ಥಾನ, ಮಂದೇವಾಲ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಜಲಾಲಸಾಹೇಬ, ೬೫ ಮುತಾವಲಿ(ಪ್ರಧಾನ ಅರ್ಚಕ), ಚನ್ನೂರ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಮಡಿವಾಳಪ್ಪ, ೪೦ ಪ್ರಧಾನ ಅರ್ಚಕ ಮರಗಮ್ಮ ದೇವಸ್ಥಾನ, ಚನ್ನೂರ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶಿವಯ್ಯ ಸ್ವಾಮಿ, ೬೧ ವ್ಯವಸಾಯ, ಅವರಾದ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಸೋಮರಾಯ ದೊಡ್ಡಮನಿ, ೮೨ ವ್ಯವಸಾಯ, ಕೆಲ್ಲೂರ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ನಿಂಗಣ್ಣ ಹೂಗಾರ, ೬೦ ವ್ಯವಸಾಯ, ಕೊಣಸಿರಸಗಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಸೋಮನಗೌಡ ತಂದೆ ಶರಣಪ್ಪ ಗೌಡ ಪಾಟೀಲ, ೪೦ ವ್ಯವಸಾಯ, ಕೇಶಿರಾಜ ಕೊಂಡಗುಳಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಬಸವರಾಜ ತಂದೆ ಈರಣ್ಣಾ ಬಿಳವಾರ, ೫೨ ಧರ್ಜಿ(ಟೇಲರ), ನೆಲೋಗಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶಿವಶರಣಪ್ಪ ತಂದೆ ಶಿವಪುತ್ರಪ್ಪ ಒಡೆಯರ, ೫೫ ವ್ಯವಸಾಯ, ದೇವರ ಕೆಲ್ಲೂರ ಬಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಪರಮಾನಂದ ಕಾನಗೌಡ, ೭೫ ವ್ಯವಸಾಯ, ಸುಂಬಡ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಶರಣಯ್ಯ ಸ್ವಾಮಿ, ೫೦ ವರಹಳ್ಳಿರಾಯ ಗುಡಿಯ ಪ್ರಧಾನ ಅರ್ಚಕರು, ಧುಮದ್ರಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ನಿಂಗನಗೌಡ ತಂದೆ ಸಿದ್ರಾಮಯ್ಯಗೌಡ ಇನಾಮದಾರ, ೯೬ ವ್ಯವಸಾಯ, ಧುಮದ್ರಿ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ಬಸಯ್ಯ ಸ್ವಾಮಿ, ೫೨ ಅರ್ಚಕರು ಅಖಂಡೇಶ್ವರ ದೇವಸ್ಥಾನ ಮತ್ತು ವ್ಯವಸಾಯ, ತಾ.,ಜೇವರ್ಗಿ ಜಿ., ಗುಲಬರ್ಗಾ
- ಶ್ರೀ ರೇವಣಸಿದಪ್ಪ, ೫೭ ಪ್ರೌಢ ಶಾಲೆ ಶಿಕ್ಷಕರು ಗುರುನಂಜೇಶ್ವರ ಸಂಸ್ಥೆ, ಭರತನೂರು, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ವಿಶ್ವನಾಥ ಭಟ್ಟಜಿ, ೫೨ ಪ್ರಧಾನ ಅರ್ಚಕರು ನೀಲಕಂಠ ಕಾಳೇಶ್ವರ, ಕಾಳಗಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಶಿವಲಿಂಗಯ್ಯ ಸ್ವಾಮಿ, ೭೫ ವ್ಯವಸಾಯ, ಕಾಳಗಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಬಸಣಯ್ಯ ಸ್ವಾಮಿ, ೭೨ ವ್ಯವಸಾಯ, ಸೂಗೂರ ಕೆ, ತಾ., ಚಿತ್ತಾಪುರ ಜಿ., ಗುಲಬರ್ಗಾ

- ಸೈಯದ ಬಾಹುದಿನ್, ೫೪ ವ್ಯವಸಾಯ, ಬೆಣ್ಣೂರ ಬಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಸೈಯದ ಇಕಬಾಲ ಅಲಿ, ೪೫ ಇಮಾಮ್(ಪೀಠಾದಿಪತಿ), ಬೆಣ್ಣೂರ ಬಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಸಿದ್ದು ಶೆಟ್ಟಿ, ೪೦ ವ್ಯವಸಾಯ, ಪೇಠಶಿರೂರ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಖಾಜಾ ಮಿಯಾ ತಂದೆ ಮಿರಸಾಬ, ೮೦ ವ್ಯವಸಾಯ, ಪೇಠಶಿರೂರ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಮಲ್ಲಿಕಾರ್ಜುನ ಕೊಡ್ಲಿ, ೭೦ ವ್ಯವಸಾಯ, ಕೊಟಂದೇವರ ಹಳ್ಳಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಶಿವಲಿಂಗಪ್ಪ ತಂದೆ ಮೈಲಾರಿ ಹೊನ್ನಬಾ, ೬೨ ವ್ಯವಸಾಯ, ಮುಗಳನಾಗವ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಮನೋಹರ ಜೋಷಿ, ೫೦ ಅರ್ಚಕರು ಹೊನಗುಂಟಾ ಚಂದ್ರಲಾಂಬಾ ದೇವಿ ದೇವಸ್ಥಾನ, ಹೊನಗುಂಟಾ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಮಾರ್ತಂಡ ಭಟ್ಟ ಜೋಷಿ, ೫೧ ಅರ್ಚಕರು ಹೊನಗುಂಟಾ ಚಂದ್ರಲಾಂಬಾ ದೇವಿ ದೇವಸ್ಥಾನ, ಹೊನಗುಂಟಾ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಪಂಪಾಪತಿ ಪೋಲಿಸ ಪಾಟೀಲ, ೬೦ ವ್ಯವಸಾಯ, ದಿಗ್ಗಾವಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಮಹಾದೇವಪ್ಪ ತಂದೆ ಶಂಭುಲಿಂಗಪ್ಪ ಶಿಲ್ಪಿ, ೮೦ ಶಿಲ್ಪಕಲಾಕಾರರು, ದಿಗ್ಗಾವಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಹೊನಪ್ಪ ಪೂಜಾರಿ, ೪೬ ಪ್ರಧಾನ ಅಚರ್ಕರು ದುರ್ಗಾದೇವಿ ದೇವಸ್ಥಾನ, ಅಲ್ಲೂರ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಶ್ರೀನಾಥ ತಂದೆ ಶಾಮಾಚಾರ,೪೦ ಪ್ರಧಾನ ಅಚರ್ಕರು ಚಂದ್ರಲಾ ಪರಮೇಶ್ವರಿ, ಸನ್ನತಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಶರಣಪ್ಪ ತಂದೆ ಸಿದ್ದಯ್ಯ ವಗ್ಗರ, ೫೪ ವ್ಯವಸಾಯ, ಹಲಕರಟಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಶ್ರೀ ಶ್ರೀ ಅವಧೂತ ನಾಗಲಿಂಗ, ೫೬ ಕರಿಕಾಲದೇವಿ ದೇವಸ್ಥಾನದ ಪಿಠಾಧಿಪತಿಗಳು, ಕರಿಕಲದೆವತೆ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಪ್ರಭಾಕರ ತಂದೆ ಗಣಪತರಾವ ವಿಶ್ವಕರ್ಮ, ೫೬ ಬಡಿಗತನ, ಟೆಂಗಳಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಮುನೊವರ ಮಿಯಾ, ೭೪ ವ್ಯವಸಾಯ, ದಂಡೋತ್ತಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ಬಾಲಯೊಗಿನಿ ಜಯಶ್ರೀ ಅಮ್ಮ, ೫೨ ಬಲಭಿಮೇಶ್ವರ ದೇವಸ್ಥಾನದ ಅರ್ಚಕರು, ದಂಡೋತ್ತಿ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಸೈಯದ್ ಅಬ್ದುಲ್, ೭೫ ಚಿತಾವಲಿ ದಾರ್ಗದ ಖಾದಿಮ(ಮೌಲ್ವಿ), ಚಿತ್ತಾಪುರ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಅನ್ಸರ ಶಾಹಾ, ೪೮ ಫಕೀರ, ಚಿತ್ತಾಪೂರ, ತಾ., ಚಿತ್ತಾಪುರ ಜಿ., ಗುಲಬರ್ಗಾ
- ಶ್ರೀ ವಿಶ್ವನಾಥ, ೬೫ ಸಹಕಾರ್ಯದರ್ಶಿ ಯಲಮ್ಮ ದೇವಸ್ಥಾನ ನಾಗಾವಿ, ಚಿತ್ತಾಪುರ, ತಾ., ಚಿತ್ತಾಪುರ ಜಿ., ಗುಲಬರ್ಗಾ

೨. ಪರಮಾರ್ಶನ ಗ್ರಂಥಗಳು

ಅಂಬಳಿಕೆ ಹಿರಿಯಣ್ಣ, ೧೯೮೪: **ಜಾನಪದ ಕೆಲವು ವಿಚಾರಗಳು,** ಪ್ರಜ್ವಲ ಪ್ರಕಾಶನ, ಮೈಸೂರು

ಅರವಿಂದ ಮಾಲಗತ್ತಿ, ೧೯೯೯: **ಪುರಾಣ ಜಾನಪದ ಮತ್ತು ದೇಶಿವಾದ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಮರೇಶ ನುಗಡೋಣಿ,೨೦೦೩: **ಹೈದರಾಬಾದು ಕರ್ನಾಟಕ ಹಾಡು ಪಾಡು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಕ್ಕಿ ಡಿ.ಎನ್., ೧೯೮೬: **ಶಹಾಪೂರ ತಾಲೂಕ,** ಆಯ್.ಬಿ.ಹೆಚ್. ಪ್ರಕಾಶನ, ಬೆಂಗಳೂರು

ಅಣ್ಣಿಗೇರಿ, ಎಂ. ಎಂ., ೧೯೭೮: **ಸನ್ನತಿ,** ಆಯ್.ಬಿ.ಹೆಚ್, ಪ್ರಕಾಶನ, ಬೆಂಗಳೂರು

ಅನಂತರಂಗಚಾರ್ ಎನ್. ೧೯೫೪: **ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ,** ಶ್ರೀ ವಿ.ರಂಗಣನವರ ಸ್ಮರಣ ಸಂಚಿಕೆ ಮಹಾರಾಜ ಕಾಲೇಜು, ಮೈಸೂರು

ಅನಂತರಾಮು.ಟಿ.ಆರ್., ೧೯೯೫: **ನಮ್ಮ ಜನಲಸಂಪನ್ಮೂಲಗಳು,** ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಅಪರ್ಣ ಕೊ.ಸ. ೧೯೯೯: **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅವಲಮೂರ್ತಿ.ಎ.ಓ.,೧೯೮೮: **ಅದ್ಭುತ ದ್ರವ ನೀರು,** ಕನ್ನಡ ಪುಸ್ತಕ ಪ್ರಾಧಿಕಾರ ಕರ್ನಾಟಕ ಸರ್ಕಾರ

ಇಮ್ರಾಪೂರ ಎಸ್.ಜಿ. (ಸಂ.) ೧೯೯೨: **ಜಾನಪದ ಸಾಹಿತ್ಯ ದರ್ಶನ, ತೊಗಲುಗೊಂಬೆಯಾಟ,** ಕನ್ನಡ ಅಧ್ಯಯ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಇಮ್ರಾಪೂರ ಎಸ್.ಜಿ., ೧೯೯೩: **ಜಾನಪದ ಸಾಹಿತ್ಯ ದರ್ಶನ, ಭಾಗ-೧೮, ಸಸ್ಯ-ಪ್ರಾಣಿ-ಖನಿಜ ಜಾನಪದ,** ಪ್ರಸಾರಾಂಗ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲಬುರ್ಗಿ.ಎಂಎಂ. ೧೯೮೦: **ಸಮಾಧಿ, ಬಲಿದಾನ ವೀರಮರಣ ಸ್ಮಾರಕಗಳು,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಕಲಬುರ್ಗಿ ಎಂ. ಎಂ. ೧೯೮೭: **ಜಾನಪದ ಸಾಹಿತ್ಯ ದರ್ಶನ ಭಾಗ-೧೧,** ಪ್ರ. ಕರ್ನಾಟಕ ಅಕಾಡೆಮಿ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕುಲಕರ್ಣಿ. ಸಿ. ಎಸ್., ೧೯೮೪: **ಗಾಣಗಾಪುರ ಮಹಾತ್ಮೆ,** ಸರಸ್ವತಿ ಪ್ರಕಾಶನ, ಬೆಳಗಾಂವಿ

ಕುಪ್ಪಗಿ ವಸಂತ, ೧೯೮೮: " **ಮಾನ್ಯಖೇಟ** " ಐಬಿಚ್ ಪ್ರಕಾಶನ ಬೆಂಗಳೂರು

ಕ್ಯಾತನಹಳ್ಳಿ ರಾಮಣ್ಣ.,೧೯೮೪: **ಜನಪದ ವಿಹಾರ,** ದಿನಕರ ಪ್ರಕಾಶನ, ಬೆಂಗಳೂರು

ಖಂಡೋಬಾ ಪಿ.ಕೆ., ೧೯೯೧: **ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ,** ಪ್ರ. ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ

ಖಂಡೋಬಾ ಪಿ.ಕೆ., ೧೯೯೩: **ಸುಡುಗಾಡುಸಿದ್ಧರ ಸಂಸ್ಕೃತಿ;** ಪ್ರ. ಕರ್ನಾದಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಖಂಡೋಬಾ ಪಿ.ಕೆ.,೨೦೦೦: **ಕರ್ನಾಟಕ ಬುಡಕಟ್ಟು ಪ್ರ.** ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ, ಮೈನ್ ರೋಡ, ಗುಲಬರ್ಗಾ

ಗೊಳಸಂಗಿ ಅರ್ಜುನ ೨೦೦೦: **ದಲಿತರು ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ (ಸಂಶೋಧನಾ ಮಹಾಪ್ರಬಂಧ) ವಿಮೋಚನಾ ಪ್ರಕಾಶನ,** ಅಥಣಿ, ಜಿ. ಬೆಳಗಾವಿ

ಗೋಪಾಲ್ ಆರ್.(ಸಂ). ೨೦೦೬: **ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ,** ಮೈಸೂರು

ಗೋಪಾಲರಾವ ಎಚ್.ಎಸ್. ೧೯೯೩: **ಕಲ್ಯಾಣ ಚಾಲುಕ್ಯರ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ,** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಗಾಯಿತ್ರಿ ಮೂರ್ತಿ, ೧೯೯೪: **ನೀರು,** ನವಕರ್ನಾಟಕ ಪ್ರಕಾಶನ, ಬೆಂಗಳೂರು

ಗೋಪಾಲ.ಟಿ.ಆರ್., ೧೯೮೮: **ಬನವಾಸಿ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಗೋವಿಂದರಾಜು, ಟಿ., ೧೯೯೩: **ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ,** ಪುಸ್ತಕ ಜೇನು, ಚೆನ್ನಾದೇವಿ ಅಗ್ರಹಾರ

ಚಂದ್ರಶೇಖರ ಕಂಬಾರ, ೧೯೮೫: **ಕನ್ನಡ ಜಾನಪದ ವಿಶ್ವಕೋಶ ಕನ್ನಡ ಸಾಹಿತ್ಯ ಪರಿಷತ್ತು,** ಬೆಂಗಳೂರು

ಚಂದ್ರಶೇಖರ ಕಂಬಾರ, ೧೯೮೦: **ನಮ್ಮ ಜಾನಪದ,** ಪ್ರ. ಅಭಿಜಾತ ಗಂಥಮಾಲೆ, ಬೆಂಗಳೂರು

ಚಂದ್ರಶೇಖರ ಕಂಬಾರ, (ಸಂ)೧೯೮೫: **ಕನ್ನಡ ಜಾನಪದ ವಿಶ್ವಕೋಶ (ಸಂಪುಟ ೧-೨),** ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಚಿದಾನಂದಮೂರ್ತಿ.ಎಂ., ೧೯೭೭: **ಗ್ರಾಮೀಣ,** ಬಾಪ್ಕೊ ಪ್ರಕಾಶನ, ಬೆಂಗಳೂರು

ಚಿದಾನಂದ ಮೂರ್ತಿ ಎಂ. ೧೯೭೦: **ಸಂಶೋಧನಾ ತರಂಗ,** ಭಾಗ-೨, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಚಿದಾನಂದ ಮೂರ್ತಿ ಎಂ. ೧೯೭೯: **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಚಿದಾನಂದ ಮೂರ್ತಿ ಎಂ. ೧೯೮೪: **ಪಗರಣ ಇತರ ಸಂಪ್ರಬಂಧಗಳು,** ಚಿಲುಮೆ ಪುಸ್ತಕ, ಮೈಸೂರು

ಚಿನ್ನಪ್ಪಗೌಡ ಕೆ. ೧೯೯೦: **ಭೂತರಾಧನೆ ಜಾನಪದೀಯ ಅಧ್ಯಯನ: ಮಂಗಳ ಗಂಗೋತ್ರಿ,** ಮದಿಪು ಪ್ರಕಾಶನ

ಚೆನ್ನಣ್ಣ ವಾಲೀಕಾರ. ೧೯೯೮: **ಹೈದ್ರಾಬಾದ ಕನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ,** ವಾಲೀಕಾರ ವಿರಸಂ ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ ಗುಲಬರ್ಗಾ

ಚನ್ನಬಸಪ್ಪ ಗೋರೂರು. ಚಕ್ಕೇರೆ ಶಿವಶಂಕರ್.ಭೈರಮಂಗಲ ರಾಮೇಗೌಡ. ೧೯೯೪: **ಜಾನಪದ ದರ್ಶನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಚಿನ್ನಪ್ಪಗೌಡ ಕೆ. ೧೯೯೦: **ಭೂತಾರಾಧನೆ ಜಾನಪದೀಯ ಅಧ್ಯಯನ,** ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು

ಚೆನ್ನಕ್ಕ ಎಲಿಗಾರ, ೧೯೯೦: **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಚಂದ್ರ ಪೂಜಾರಿ, ೨೦೦೪: **ಜನಾಯೋಜನೆ ಹೈದರಾಬಾದ್ ಕರ್ನಾಟಕದ ಅನುಭವಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಲುವರಾಜು., **೨೦೦೦ ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಲುವರಾಜು., **೨೦೦೦ ಹಂಪಿ ಸ್ಮಾರಕಗಳಲ್ಲಿ ಜಾನಪದ ಅಂಶಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಎಚ್., ೨೦೦೩: **ಸಿರಿದುರ್ಗ,** ದೇವದುರ್ಗ ಕನ್ನಡ ತಾಲ್ಲೂಕ ಸಾಹಿತ್ಯ ಪರಿಷತ್ತು ಜಿಲ್ಲಾ ರಾಯಚೂರು

ಚಿನ್ನಪ್ಪಗೌಡ.ಕೆ., ೧೯೮೩: **ಭೂತಾರಾಧನೆ, ಕೆಲವು ಅಧ್ಯಯನಗಳು,** ತುಳುವ ಪ್ರಕಾಶನ, ಮಂಗಳೂರು

ಚೆನ್ನಕ್ಕ ಪಾವಟೆ (ಎಲಿಗಾರ)., ೧೯೯೫: **ಸಂಸ್ಕೃತಿ ಸಂಶೋಧನೆ,** ಚೆನ್ನಗಂಗಾ ಪ್ರಕಾಶನ, ಧಾರವಾಡ-೮

ಜವರೇಗೌಡ ದೇ. ೧೯೭೬: **ಜಾನಪದ ಸೌಂದರ್ಯ,** ಡಿ.ವಿ.ಕೆ. ಮೂರ್ತಿ, ಮೈಸೂರು

ಜವರೇಗೌಡ ದೇ., ೧೯೯೦: **ಸ್ಥಳನಾಮ ವ್ಯಾಸಂಗ,** ಸಹ್ಯಾದ್ರಿ ಪ್ರಕಾಶನ, ಮೈಸೂರು

ತಾಳ್ತಜೆ ವಸಂತ ಕುಮಾರ. ೧೯೮೫: **ಸಾರಸ,**ಚಿಸಾಹಿತ್ಯ ಪ್ರಕಾಶನ ಬೆಂಗಳೂರು

ತಿಪ್ಪೇಸ್ವಾಮಿ. ಪಿ.ಆರ್.(ಸಂ). ೧೯೯೭: **ಶಿಲ್ಪಕಲಾ ಪ್ರಪಂಚ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ತಪಸ್ವಿಕುಮಾರ., ೧೯೮೧: **ಜನಪದ ಅಧ್ಯಯನ ಸಂಕ್ಷಿಪ್ತ ಇತಿಹಾಸ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ದಂಡೆ ವೀರಣ್ಣ. ೧೯೮೭: **ಕಲಬುರಗಿ ಜಿಲ್ಲೆಯ ಜನಪದ ಕಥೆಗಳ ಮಾದರಿ ಸೂಚಿ,** ಮೂಡಲ ಪ್ರಕಾಶನ ಕಲಬುರ್ಗಿ

ದಂಡೆ ವೀರಣ್ಣ, ೧೯೯೩: **ಕನ್ನಡ ಜಾನಪದ ಪ್ರಜ್ಞೆ,** ಕವಿಮಾರ್ಗ ಪ್ರಕಾಶನ ಕಲಬುರ್ಗಿ

ದಂಡೆ ವೀರಣ್ಣ, ೨೦೦೦: (ಸಂ). **ಜನಪದ ಹಾಲುಮತ ಮಹಾಕಾವ್ಯ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

ದಾಸೇಗೌಡ ಜೆ.ವಿ. ೧೯೭೮: **ಕನ್ನಡ ಐತಿಹ್ಯಗಳು,** ಮಂಡ್ಯ, ತೇಜಸ್ವಿನಿ ಪ್ರಕಾಶನ

ದೇವರ ಕೊಂಡಾರೆಡ್ಡಿ, **೨೦೦೩ (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ (ರಾಯಚೂರು ಜಿಲ್ಲೆ)** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೇವರಕೊಂಡಾರೆಡ್ಡಿ. ೧೯೮೨: **ಸಪ್ತಮಾತೃಕೆಯರು, ಹರತಿಸಿರಿ (ಹೆಚ್.ವಿ.ವೀರನಾಯಕ ನೆನಪಿನ ಸಂಪುಟ)** ಚಿತ್ರದುರ್ಗ

ದೇಸಾಯಿ ಬಿ.ಪಿ. ೧೯೮೨: **ಕನ್ನಡ ನಾಡಿನ ಶಾಸನಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಾಯಕ ಹಾ. ಮಾ., ೧೯೭೪: **ಕನ್ನಡ ಜಾನಪದ ಗ್ರಂಥಸೂಚಿ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ನಿಂಗಣ್ಣ ಸಣ್ಣಕ್ಕಿ, ೧೯೮೧: **ಎಲ್ಲಮ್ಮನ ಜೋಗುಳಗಳು,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ನಾಯಕ ಡಿ.ಬಿ.೨೦೦೦: **ಲಂಬಾಣಿ ಜನಪದ ಸಾಹಿತ್ಯ,** ಬಂಜಾರ್ ಪ್ರಕಾಶನ, ಗುಲಬರ್ಗಾ

ನಾವಡ ಎ.ವಿ. ೧೯೯೩: **ಜಾನಪದ ಸಾಹಿತ್ಯ ಸಂಪಾದನೆ (ಜಾನಪದ ವೈಜ್ಞಾನಿಕ ಅಧ್ಯಯನ ನೆಲೆಗಳು)** ಬೆಂಗಳೂರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ನಾಗರಾಜಯ್ಯ ಹಂ.ಪ. ೧೯೮೫: **ಕರ್ನಾಟಕ ಜಾತ್ರೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ನರಸಿಂಹಮೂರ್ತಿ ಎ.ವಿ. ೨೦೦೭: **ಕರ್ನಾಟಕ ನಾಣ್ಯಪರಂಪರೆ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ನಿರುಪಮಾ, ೨೦೦೨: **ಸಂಶೋಧನಾ ವಿಧಾನಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ನಾರಾಯಣ.ಕೆ.ವಿ., ೧೯೯೯: **ಸ್ಥಳ ನಾಮಗಳು, ಪರಿವರ್ತನೆ ಮತ್ತು ಪ್ರಭಾವ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಪೂಜಾರ ವ್ಹಿ.ಜಿ. ೧೯೯೧: ನೃಪತುಂಗ ರಸ್ತೆ, ಬೆಂಗಳೂರು, **ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು,** ಕಲಬುರ್ಗಿ

ಪೂಜಾರಹಳ್ಳಿ ವಿರೂಪಾಕ್ಷಿ. ೧೯೯೯: **ಗಾದರಿ ಪಾಲನಾಯಕ,** ಕನ್ನಡ ವಿಶ್ವವಿದ್ಯಾಲಯ ಹಂಪಿ

ಪಾಟೀಲ ಎಂ.ಬಿ., ೧೯೯೭: **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ,** ಗೀತಾಂಜಲಿ ಪ್ರಿಂಟರ್ಸ್, ಬೆಂಗಳೂರು

ಸೋತೆ ಎಚ್.ಟಿ. (ಸಂ)., ೨೦೦೦: **ಕೋಮು ಸೌಹಾರ್ದತೆ,** ಅಂಬು ಪ್ರಕಾಶನ ಸ್ನಾತಕೋತ್ತರ ಕೇಂದ್ರ, ರಾಯಚೂರು

ಪ್ರಭಾಕರ ಎ.ಎಸ್., ೨೦೦೦: **ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜು., ೧೯೯೬: **ಹಂಪಿ ಜಾನಪದ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೇಕಲ್ ರಾಮ ನಾಯಕ, ೧೯೬೯: **ತೆಂಕಣ ನಾಡು ಐತಿಹ್ಯಗಳು,** ಗೀತಾ ಪ್ರಕಾಶನ, ಕಾಸರಗೋಡು

ಬೇಕಲ್ ರಾಮ ನಾಯಕ, ೧೯೬೯: **ನಾಡ ಕಥೆಗಳು,** ಗೀತಾ ಪ್ರಕಾಶನ, ಕಾಸರಗೋಡು

ಭೂಸರೆಡ್ಡಿ. ಎಸ್. ಎಸ್., ೧೯೭೫: **ಅಂಬಿಗರ ಚೌಡಯ್ಯ,** ನವಪ್ರಕಾಶನ, ಧಾರವಾಡ

ಬರಗೂರ ರಾಮಚಂದ್ರಪ್ಪ. ೧೯೯೩: ಪ್ರ.ಸಂ. **ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ,** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

ಬಿರಾದಾರ ಚಂದ್ರಕಾಂತ ಪ್ರಭೂರಾವ ೧೯೮೨: **ಮಾಡಿಯಾಳ ಅಮೋಘಸಿದ್ದೇಶ್ವರ ಚರಿತ್ರೆ,** ಪ್ರಕಾಶನ ಹಾಲುಮತ ಸಂಘ, ಮಾಡಿಯಾಳ,

ಬಿಳಿಮಲೆ ಪುರುಷೋತ್ತಮ ೧೯೮೫: **ಮೆಕೆಂಜಿ ಕೈಫಿಯತ್ತುಗಳು,** ಮಂಗಳ ಗಂಗೋತ್ರಿ

ಬಿಳಿಮಲೆ ಪುರುಷೋತ್ತಮ ೧೯೯೦: **ಕರಾವಳಿ ಜಾನಪದ,** ಮಂಗಳ ಗಂಗೋತ್ರಿ

ಬಿಳಿಮಲೆ ಪುರುಷೋತ್ತಮ ೧೯೯೩: **ಕೊರಗರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ

ಭದ್ರಾಪೂರ ಎಸ್.ಎಸ್. ೧೯೯೧: **ಉತ್ತರ ಕರ್ನಾಟಕ ಜನಪದ ಐತಿಹ್ಯಗಳು** ಪಿ.ಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಭೈರಪ್ಪ. ಎಸ್.ಎಲ್. ೧೯೭೯: **ಪರ್ವ (ಕಾದಂಬರಿ),** ಸಾಹಿತ್ಯ ಭಂಡಾರ ಬೆಂಗಳೂರು

ಬೋರಲಿಂಗಯ್ಯ ಹಿ.ಚಿ. (ಸಂ) ೧೯೯೬: **ಕರ್ನಾಟಕ ಜನಪದ ಕಲೆಗಳು**: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಸ್ಕರ್ ಟಿ.ಎಂ.ಸಂ., ೨೦೦೫: **ಕಲಬುರ್ಗಿ ಜಿಲ್ಲಾ ದರ್ಶನ,** ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಮಹಮೂದ್.ಟಿ.ಕೆ (ಸಂ) ೧೯೮೬: **ಉತ್ತರ ಕನ್ನಡ ದರ್ಶನ,** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ಮಲ್ಲೇಪುರಂ.ಜಿ.ವೆಂಕಟೇಶ. ೧೯೯೩: **ಸಾಹಿತ್ಯ ಮತ್ತು ಪುರಾಣ,** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

ಮಹಾಬಲೇಶ್ವರಪ್ಪ ಬಿ.ಸಿ., ೧೯೯೪: **ಹೈದರಬಾದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ,** ಪ್ರಸಾರಾಂಗ, ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ

ಮೋಹನ ಕೃಷ್ಣ ರೈ., ೧೯೯೯: **ತುಳು ಸಂಸ್ಕೃತಿ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಯಾಸೀನ ಖುದ್ದೂಸಿ ಮತ್ತು ಎಂ.ಸೀತಾರಾಮ ಜಾಗಿರದಾರ್ (ಸಂ). ೨೦೦೧: **ಕರ್ನಾಟಕದ ಪರ್ಶಿಯನ್ ಅರೇಬಿಕ್ ಉರ್ದು ಶಾಸನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಹಮತ್ ತರೀಕೆರೆ, ೧೯೯೯: **(ಸಂ) ಕನ್ನಡ ಅಧ್ಯಯನ, (ಗಾಳಿ ಸಂಚಿಕೆ)** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

ರಮೇಶ ನಾಯಕ. ೨೦೦೭: **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಂಗಾರೆಡ್ಡಿ ಕೋಡಿರಾಂಪೂರ., ೧೯೯೫: **(ಸಂ) ಜಾನಪದ ೧೯೯೩,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ರಾ ಗೌ., ೧೯೮೬: **ಜನಪದ ಸಾಹಿತ್ಯ ರೂಪಗಳು,** ವಾಗ್ದೇವಿ ಪುಸ್ತಕಗಳು, ಮೈಸೂರು

ರಘುಪತಿಭಟ್ಟ್ ಕೇಮ್ತೂರು., ೧೯೭೯: **ತುಳುನಾಡಿನ ಸ್ಥಳನಾಮಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಲಠ್ಠೆ. ಎಂ. ಎಸ್, ೧೯೭೮: **ಜಾನಪದ ಸಾಹಿತ್ಯದಲ್ಲಿ ಶ್ರೀ ಶರಣ ಬಸವೇಶ್ವರ,** ಶ್ರೀ ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ

ಲಠ್ಠೆ ಮಲ್ಲಿಕಾರ್ಜುನ ಶಿ. ೧೯೮೨: (ಡಾ. ಎಂ. ಎಸ್. ಸುಂಕಾಪುರ ಅಭಿನಂದನಾ ಗ್ರಂಥ) **ಜಾನಪದ ಸಂಪದ,** ಸುಂಕಾಪುರ ಎಂ.ಎಸ್. ಅಭಿನಂದನಾ ಸಮಿತಿ, ಕಲಬುರ್ಗಿ

ಲಕ್ಕಪ್ಪಗೌಡ ಎಚ್.ಜೆ., ೧೯೯೮: **(ಸಂ) ಸುವರ್ಣ ಜಾನಪದ ಸಂಪುಟ-೧,೨,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ವೀರಣ್ಣ ೧೯೯೪: **ಕೆಲವು ಕನ್ನಡ ಕವಿಗಳ ಕುರಿತ ಐತಿಹ್ಯಗಳು (ಸಾಹಿತ್ಯ ಚರಿತ್ರಾತ್ಮಕ ಅಧ್ಯಯನ)** ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಂಗಳೂರು

ವೆಂಕಟರಮಣ ಐತಾಳ. ೧೯೯೮: **(ಅನು) ಐತಿಹ್ಯ ಮಾಲೆಯ ಕಥೆಗಳು,** ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

ವಿಶ್ವನಾಥ. ೨೦೦೦: **ಗ್ರಾಮ ನಾಮಗಳ ಸಾಂಸ್ಕೃತಿಕ ಪರಿವೇಶ,** ದೇವಿ ಪ್ರಕಾಶನ, ಮೈಸೂರು

ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೬: **ವಾಲ್ಮೀಕಿ ಸಿರಿ,** ಚಿನ್ನಹಗರಿ ಪ್ರಕಾಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೭: **ಬೇಟೆ ಮತ್ತು ಬೇಡರು,** ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

ಶೇಷಶಾಸ್ತ್ರಿ. ಆರ್., ೧೯೮೨: **ಕರ್ನಾಟಕದ ವೀರಗಲ್ಲುಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಶಿವಾನಂದ. ವ್ಹಿ. ೧೯೨೮: **ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು.** ಕ.ವಿ.ಧಾ

ಶಿವರುದ್ರಪ್ಪ.ಜಿ.ಎಸ್. **೧೯೭೪ ಭಾರತೀಯ ಜಾನಪದ ಸಮೀಕ್ಷೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಶರಣೇಗೌಡ ಎಸ್. ೨೦೦೫: **(ಸಂ) ಚಿನ್ನೂರ ಸಿರಿ,** ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಸಿಂಧನೂರು

ಶಶಿಕಾಂತ ಕೆ. ೨೦೦೦: **(ಸಂ) ಚಿಜ್ಯೋತಿ, ಸ್ಮರಣ ಸಂಚಿಕೆ,** ವಿಜಯ ಮಹಾಂತೇಶ, ವಿದ್ಯಾವರ್ಧಕ ಸಂಘ, ಮುದಗಲ್

ಶಾಲಿನಿ ರಘುನಾಥ. ೨೦೦೧: (ಸಂ) **ಜಾನಪದ ಸಾಹಿತ್ಯ ದರ್ಶನ, ಭಾಗ -೧೪,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀನಿವಾಸ ರಿತ್ತಿ(ಸಂ). ೨೦೦೦: **ಪ್ರಾಚೀನ ಕರ್ನಾಟಕ ಆಡಳಿತ ಪರಿಭಾಷಾ ಕೋಶ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಶಿವರಾಮ ಕಾರಂತ, ೧೯೭೫: **ಭಾರತೀಯ ಶಿಲ್ಪ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಶೇಷಶಾಸ್ತ್ರಿ, ೨೦೦೫: **ಶಾಸನ ಪರಿಚಯ, ಪ್ರಸಾರಾಂಗ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಸೂರ್ಯನಾಥ ಕಾಮತ್, **(ಸಂ) ಇತಿಹಾಸ ದರ್ಶನ-ಸಂಪುಟ-೧೧,** ಇತಿಹಾಸ ಅಕಾಡೆಮೆ ಬೆಂಗಳೂರು

ಸುರೇಂದ್ರರಾವ್, ೨೦೦೫: **ಇತಿಹಾಸ ಮತ್ತು ಸಮಾಜ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಿ.ಪಿ.ಕೆ. ೧೯೮೯: **ಜನಪದ ಸಾಹಿತ್ಯ ಪ್ರವೇಶಿಕೆ,** ಭಾರತಿ ಪ್ರಕಾಶನ, ಮೈಸೂರು

ಸಿಂಪಿ ಲಿಂಗಣ್ಣ, ೧೯೯೬: **(ಸಂ) ಉತ್ತರ ಕರ್ನಾಟಕದ ಜನಪದ ಕಥೆಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

ಸಂಪದ್ಗಿರಿರಾವ್ ಕೆ. ೧೯೯೨: **(ಸಂ) ಕರ್ನಾಟಕದ ಪರಂಪರೆ,** ಸಂಪುಟ-೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಸಂಧ್ಯಾರೆಡ್ಡಿ ಕೆ.ಆರ್. **೨೦೦೩ (ಸಂ) ಮಹಿಳಾ ಜಾನಪದ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

ಹೆಗಡೆ. ಎಲ್. ಆರ್., ೧೯೮೦: **ಭಾರತದ ಜನಪದ ಕಥೆಗಳು,** ಜ್ಞಾನಸಾಧನ ಗ್ರಂಥಮಾಲೆ, ಕುಮಟಾ(ಉ.ಕ)

ಹಿರೇಮಠ, ಎಸ್. ಎಸ್, ೨೦೦೫: **ಜನಪದ ಸಮಾಜ ಸಂಸ್ಕೃತಿ,** ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ, ಜಿಲ್ಲಾ ಚಿತ್ರದುರ್ಗ

ಹನುಮಾಕ್ಷಿ ಗೋಗಿ. ೧೦೦೫: **ಸಂಶೋಧನ ಲೇಖನಗಳು,** ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಹರೀಶ.ಜೆ.ಬಿ., ೨೦೦೨: **ದೇವಚಂದ್ರನ ರಾಜಾವಳಿ ಕಥಾಸಾರ- ಜೈನ ಸಾಹಿತ್ಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಅಧ್ಯಯನ** (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ)

ಆಂಗ್ಲಭಾಷೆ ಗ್ರಂಥಗಳು:-

ALEX H.KRAPPE **1965. The Science of Folklore, Methuvens Co., Ltd.. 11, New Fetter Lance, London**

ALLAN DUNDES(Ed) **1965. The Study of Folklore, Pub : Englewood Cliffs, Rentice Hall**

BEANE WENDELL C **1976. Myths, Riter, symbols**

BHASKAR ANAND SALETORE **1936. Ancient Karanataka Vol. 1 : History of Tuluva, Oriental Book Agency, Poona**

BOSCOM R WILLIAM **1981, Contributions to Folkloristics, Folklore Institute, Meerut**

BOTKIN B.A (Ed) **1944. ATresury of American Folklore, Pub : Crown Publishers. New York**

CHUMMAR CHOONDAL **1978. Studies in Folklore of Kerala, College Book House, Trivandrum**

DEGH LINDA **1972. "Folk Narrative" Folklore and Folk life (Ed. Dorson M. Richard), The university of Chicago Press, London**

DORSON M. RICHARD **1972. Folklore selected Essays, Indiana University Press, London**

DUNDES ALAN **1979. Folklore Selected Essays, Indiana University Press, London**

DONBEN-AMOS **1976. Folklore Generes, University of Taxes Press, Austin**

1982. Folklore in Context : Essays, New Delhi : South Asian Publishers

DUBOISA.J. **1828. HINDU MANNERS AND CUSTOMS AND CEREMONIS, Madras**

ENTHOVEN (A.M.T. JACKSON AT 1900) **1989. Folklore Notes Vol.1-2 (Gujrat-Konkan) Pub : Asian Educational services, c-2/5, S.D.A New Delhi**

FRAZER J.G **1964. The Golden Bough, Pub : Mac Milan & co., Ltd., London**

FELIX J. OINAS STEPHEN SOUNDAKOFF **1975. The Study of Russial Folklore, Pub : Mouton, The Hague, Paris**

GHOSH A.K **1985. Legends from Indian History, Pub : Children`s Book Trust, New Delhi**

GRIM JACOB, GRIM WILHELM **1884. Houehold Tales (Tr. Ed. Hand Margaret), London**

GURUAJA BHATTA P **1969. Studies in Tuluva History and Culture, P. Guruaja Bhatta, Kallyanapura**

Fr. GERBIER Fr.J.JAUNET(Tr.) **1997. The History of Mysore Mission. St. Mary`s Home, Bannimantap, Mysore**

HEDAJASON DIMIRISEGAL(Ed) **1977. Patterns in Oral Literature, Pub : Mouton Publishers. The Hague, Paris**

JAN HARALD BRUNVAND **1976. Folklore Study and Research Guide. Pub : St.Martin Press, Neryork**

JAWAHARLAL HANDOO **1978. Curmet Trends in Folkore, Pub : The Institute of Kannada Studies, University of Mysore 1998, Folklore in Modren India, CILL, Mysore 2000, Theaoretical Essays in Indian Folklore, Zooni Publications, Kuvempu Nagar, Mysore**

KENNTH & MARY CLARKE **1963, Introducing Folklore, Pub : rinerhart and Winston, Ind.,**

LINDA DEGH **2000. Legend and Belief, Indiana University press, 601, North Morton Street, Bloomington**

MAKHANJHA **1979. Folklore Magic and Legends of Mithila. Jyothi, B.M Das Road, Patna**

FRANSIS J. KORAM

PETER J. CLAUS **1991. The Study of Folklore, Englewood Cliffs, Prentice Hall, New Jersery 1972. Folkore and Folklife, University of Chicago Press, Chicago 1983. Handbook of American Foklore, Indiana University Press Bloomington**

RICHARD CANEDISH (Ed) **1982, Legends of World, Pub : Orbis Publishing : London**

RICHARD CARNAC, TEMPLE **1977. Legends of the Punjab – 3 Vols, Bombay Education Society`s Press, Newyork**

TRISTRAM COFFIN – III **1969. American Folklore, Pub : Higgin Bothams (P) Ltd., 165, Mount Road, Madras**

VED VATUK **1979. Studies in Indian Folk Traditions, Manohar, Delhi**

VILLIAM CROOKE **1968. The Popular Religion and Folklore of Northern India (Vol. 1-2) Pub. : Munshiram Manoharal. Post Box 1165, Nai sarak**

೩. ಗ್ರಂಥ ಸೂಚಿ:-

ದಿನಪತ್ರಿಕೆಗಳು:-

೧. ಸುದ್ದಿ ಮೂಲ

೨. ಶರಣರ ವಿಚಾರ ಮಂಥನ

೩. ವಿಜಯ ಕರ್ನಾಟಕ

೪. ಪ್ರಜಾವಾಣಿ

೫. ಸಂಯುಕ್ತ ಕರ್ನಾಟಕ

೧.	ಸಂಯುಕ್ತ ಕರ್ನಾಟಕ ಕಲಬುರಗಿ	:	ಶಿರ್ಷಿಕೆಯ ಹೆಸರು-ಭಕ್ತರ ಇಷ್ಟಾರ್ಥ ಪೂರೈಸುವ ನಾಗಾವಿ ಎಲ್ಲಮ್ಮ ೨೭-೧೦-೨೦೧೫
೨.	ಸಂಯುಕ್ತ ಕರ್ನಾಟಕ	:	ಶಿರ್ಷಿಕೆಯ ಹೆಸರು-ಶ್ರೀ ವೀರಭದ್ರ ವೈಭವ ವಿಶೇಷ ಪುರವಣಿ ೫-೫-೨೦೧೬
೩.	ಸಂಯುಕ್ತ ಕರ್ನಾಟಕ	:	ಶಿರ್ಷಿಕೆಯ ಹೆಸರು-ಸುಗೂರಿನಲ್ಲಿ ತಿರುಮಲ ತಿರುಪತಿ ನೆನಪಿಸುವ ಸಡಗರದ ಬ್ರಹ್ಮೋತ್ಸವ ೨೦-೯-೨೦೧೭ (ಕಲ್ಯಾಣ ಕರ್ನಾಟಕ ವಿಶೇಷ ಪುರವಣಿ)
೪.	ವಿಜಯ ಕರ್ನಾಟಕ	:	ಶಿರ್ಷಿಕೆಯ ಹೆಸರು-ಸುಲೇಪೇಟೆಯ ಶ್ರೀ ವೀರಭದ್ರೇಶ್ವರರ ಮಹಾತ್ಮೆ ೫-೫-೨೦೧೬ (ನಮ್ಮ ವಿಜಯ ಕರ್ನಾಟಕ ಕಲಬುರಗಿ)
೫.	ಪ್ರಜಾ ವಾಣಿ	:	ಶಿರ್ಷಿಸಿಕೆಯ ಹೆಸರು-ವೀರಶೈವ, ಮೈಲಾರ ಪರಂಪರೆಯ ಹಲಕರ್ಟಿ ೯-೧೧-೨೦೧೭

ನಿಘಂಟುಗಳು:-

೧.	ಸಂಕ್ಷಿಪ್ತ ಕನ್ನಡ ನಿಘಂಟು	:	ಪ್ರ. ಸಂ. ಎನ್. ಬಸವರಾಧ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮೂರನೇ ಮುದ್ರಣ : ೨೦೦೧
೨.	ಕನ್ನಡ ಇಂಗ್ಲೀಷ ಡಿಕ್ಷನರಿ	:	ರೆವರೆಂಡ್ ಎಫ್. ಕಿಟೆಲ್ ಏಷಿಯನ್ ಎಜ್ಯುಕೇಷನ್ ಸರ್ವಿಸ್ ನವದೆಹಲಿ, ಒನೇ ಮುದ್ರಣ : ೧೯೯೬
೩.	ಇಂಗ್ಲೀಷ ಕನ್ನಡ ನಿಘಂಟು	:	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು : ೧೯೮೫

೪. ಕನ್ನಡ ರತ್ನಕೋಶ : ಹಾ. ಮಾ. ನಾಯಕ(ಪ್ರ.ಸಂ) ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು : ೧೯೭೭

೫. ಕನ್ನಡ ನಿಘಂಟು ಸಂಪುಟ : ೧ ಮತ್ತು ೪, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು : ೧೯೭೦,೧೯೭೯

ವಿಶ್ವಕೋಶಗಳು:-

೧. ಕನ್ನಡ ಜಾನಪದ ವಿಶ್ವಕೋಶ : ಚಂದ್ರಶೇಖರ ಕಂಬಾರ (ಸಂ-೧,೨) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೧೯೮೫

೨. ಕನ್ನಡ ವಿಶ್ವಕೋಶ : ಪ್ರಧಾನ ಸಂಪಾದಕರು ಹಾ.ಮಾ. ನಾಯಕ ಭಾಗ-೬ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು : ೧೯೯೩

೩. ಕಿರಿಯರ ವಿಶ್ವಕೋಶ : ಸಂಪುಟ ೩ ಮತ್ತು ೫ ಜ್ಞಾನ ಗಂಗೋತ್ರಿ

೪. ಕನ್ನಡ ವಿಶ್ವಕೋಶ : ಮೂರನೇ ಸಂಪುಟ ಹಾ.ಮಾ ನಾಯಕ(ಪ್ರ.ಸಂ) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು : ೧೯೭೧

೪. ಐತಿಹ್ಯಗಳ ವಿಷಯವಾರು ಪಟ್ಟಿ:-

ಪವಾಡ ಸಂಬಂಧಿ ಐತಿಹ್ಯಗಳು

೧. ಹಲಕರ್ಟಿಯ ಲಿಂ.ಶ್ರೀ ವೀರತಪಸ್ವಿ ಮುನೀಂದ್ರ ಶಿವಾಚಾರ್ಯರ ಪವಾಡಗಳು

೨. ಹಲಕರ್ಟಿಯ ಗ್ರಾಮದ ವೀರಭದ್ರೇಶ್ವರ ಪವಾಡ

೩. ಮೂಲ ಕರ್ತೃ ಭರತನೂರ ಶ್ರೀ ಗುರುನಂಜೇಶ್ವರರ ಪವಾಡ

೪. ನಾಲವಾರದ ಪೂಜ್ಯ ಶ್ರೀ. ಲಿಂ. ತೋಟೇಂದ್ರ ಶಿವಯೋಗಿಯವರ ಪವಾಡಗಳು

೫. ಜೇವರ್ಗಿ ತಾಲೂಕಿನ ಇಜೇರಿಯ ಶರಣ ಖ್ವಾಜಾ ಅಮೀನುದ್ದೀನರ ಪವಾಡಗಳು

೬. ಜೇವರ್ಗಿ ತಾಲೂಕಿನ ಮಾಗಣಗೇರಿಯ ಚೆನ್ನವೃಷಬೇಂದ್ರರ ಮತ್ತು ವಿಶ್ವಚೇತನ ವಿಶ್ವಾರಾಧ್ಯರ ಪವಾಡಗಳ

೭. ಜೇವರ್ಗಿ ತಾಲೂಕಿನ ಕಡಕೋಳ ಮಡಿವಾಳಪ್ಪನವರ ಜೀವನ ಮತ್ತು ಪವಾಡಗಳು

೮. ಚೇನ್ನೂರಿನ ಜಲಾಲ ಸಾಹೇಬರ ಜೀವನ ಮತ್ತು ಪವಾಡಗಳು

೯. ಶ್ರೀ.ಷ.ಬ್ರ. ಮಳೇಂದ್ರ ಶಿವಾಚಾರ್ಯರ ಪವಾಡಗಳು

೧೦. ಫತರಗಿ ಭಾಗ್ಯವಂತಿದೇವಿಯ ಪವಾಡಗಳು

೧೧. ಮಾದನ ಹೀಪ್ಪರಗಿಯ ಶೀವಲಿಂಗೇಶ್ವರರ ಪವಾಡಗಳು

೧೨. ಸಿಂದನ ಮಡು ಸಿದ್ಧಿಪುರಷ ಸದಾನಂದರ ಪವಾಡಗಳು

ಸ್ಥಳ ಸಂಬಂಧಿ ಐತಿಹ್ಯಗಳು

೧. ಫರೋಜಾಬಾದ

೨. ಸುಲ್ತಾನಪೂರ

೩. ಹೀರಾಪೂರ

೪. ಗುಲಬರ್ಗಾ

೫. ಮಹಾಗಂವ್

೬. ನರೋಣಾ

೭. ಚಿಂಚನಸೂರು

೮. ಧುತರಗಾಂವ

೯. ಕಾತ್ರಾಬಾದ

೧೦. ಹಿತ್ತಲಶೀರೂರ್

೧೧. ನಾಗರಹಳ್ಳಿ

೧೨. ಭೂಸನೂರು

೧೩. ದಂಡಗುಂಡ

೧೪. ಕಲಕಂಬ

೧೫. ಬೆನಕನಹಳ್ಳಿ

ಶಾಸನೋಕ್ತ ಸ್ಥಳನಾಮಗಳ ಐತಿಹ್ಯಗಳು

೧. ನಾಗಾಯಿ ಶಾಸನ

೨. ಆಲಂದೆ ಶಾಸನ

೩. ಕೆಲ್ಲೂರು ಶಾಸನ

೪. ಕಾಳಗಿ ಶಾಸನ

೫. ಸೇಡಂ ಶಾಸನ

೬. ಎನಗುಂಟಿ ಶಾಸನ

೭. ಹಲಕರಟಿ ಶಾಸನ

೮. ಹರಸೂರು ಶಾಸನ

೯. ಗುಲಬರ್ಗಾ ಜಿಲ್ಲಯ ಒಂದು ಬಡಯ ಹೆಸರು-ಷೇಖ ರೋಜಾ

೧೦. ಮಡಿಯಾಳ ಶಾಸನ

೧೧. ಪಡಸಾವಳಿ ಶಾಸನ

೧೨. ತಡಕಲ್ ಶಾಸನ

೧೩. ರುದ್ರವಾಡಿ ಶಾಸನ

೧೪. ಬೋಧನ ಶಾಸನ

೧೫. ಕಡಗಂಚಿ ಶಾಸನ

೧೬. ಅಂಕಲಗಿ ಶಾಸನ

೧೭. ಅಡಕಿ ಶಾಸನ

೧೮. ಅತನೂರು ಶಾಸನ

೧೯. ಅಫಜಲಪುರ ಶಾಸನ

೨೦. ಆಲ್ಲೂರ ಶಾಸನ

೨೧. ಆಂದೋಲ ಶಾಸನ

೨೨. ಇಂಗಳಗಿ ಶಾಸನ

೨೩. ಇಜೇರಿ ಶಾಸನ

೨೪. ಎತ್ತಿಮೋತ ಜಲಪಾತ

೨೫. ಕರ್ಜಗಿ ಶಾಸನ

೨೬. ಕಮ್ಮರವಾಡಿ ಶಾಸನ

೨೭. ಕುಳಗೇರಿ ಶಾಸನ

೨೮. ಕೊಂಡಗುಳಿ ಶಾಸನ

೨೯. ಕೋಗನೂರು ಶಾಸನ

೩೦. ಕೋಳಕೂರು ಶಾಸನ

೩೧. ಗಂವ್ಹಾರ ಶಾಸನ

೩೨. ದುತ್ತರಗಾಂವ ಶಾಸನ

೩೩. ಗುಲಬರ್ಗಾ ಶಾಸನ

೩೪. ಗೊಬ್ಬೂರು(ಬಿ)ಶಾಸನ

೩೫. ಚಿಣಮಗೇರಿ ಶಾಸನ

೩೬. ಚಿತ್ತಾಪುರ ಶಾಸನ

೩೭. ಚಿನ್ಮಳ್ಳಿ ಶಾಸನ

೩೮. ಜೀವಣಗೆ ಶಾಸನ

೩೯. ಹೊಡಲ್ ಶಾಸನ

೪೦. ತೆಂಗಳಿ ಶಾಸನ

೪೧. ದಂಡೋತಿ ಶಾಸನ

೪೨. ದಿಗ್ಗಾಂವಿ ಶಾಸನ

೪೩. ನರಬೋಳಿ ಶಾಸನ

೪೪. ನಿಪ್ಪಾಣಿ ಶಾಸನ

೪೬. ಬಣಬಿ ಶಾಸನ

೪೭. ಬಂದರವಾಡ ಶಾಸನ

೪೮. ಬಿಜ್ಜನಹಳ್ಳಿ ಶಾಸನ

೪೯. ಭಂಕೂರು ಶಾಸನ

೫೦. ಮಣ್ಣೂರು ಶಾಸನ

೫೧. ಮಾಗಣಗೇರಿ ಶಾಸನ

೫೨. ಮಾಶ್ಯಾಳ ಶಾಸನ

೫೩. ಮುಧೋಳ ಶಾಸನ

೫೪. ಯಡ್ರಾಮಿ ಶಾಸನ

೫೫. ಹೊನಗುಂಟೆ ಶಾಸನ

೫೬. ಹಿರೇ ಝುಳಕಿ ಶಾಸನ

೫೭. ಶ್ರೀನಿವಾಸ ಸರಡಗಿ ಶಾಸನ

೫೮. ಸುಲೇಪೇಟೆ ಶಾಸನ

೫೯. ಹಂದರಕಿ ಶಾಸನ

೬೦. ಜೇವರ್ಗಿ ಶಾಸನ

ನಂಬಿಕೆ ಸಂಬಂಧಿ ಐತಿಹ್ಯಗಳು

೧. ಸಾಂಸ್ಕೃತಿಕ ನಂಬಿಕೆಗಳು

೨. ಶಕುನಗಳು

೩. ವೈಯಕ್ತಿಕ ನಂಬಿಕೆಗಳು

೪. ಮಾಟ ಮಂತ್ರಗಳ ನಂಬಿಕೆಗಳು

೫. ಸಾಮನ್ಯ ನಂಬಿಕೆಗಳು

೬. ವಾಸ್ತವ(ವೈಜ್ಞಾನಿಕ ನಂಬಿಕೆಗಳು)

೭. ಮೂಢ ನಂಬಿಕೆಗಳು

೮. ಧಾರ್ಮಿಕ ನಂಬಿಕೆಗಳು

೯. ಪೌರಾಣಿಕ ನಂಬಿಕೆಗಳು

೧೦. ಚಾರಿತ್ರಿಕ ನಂಬಿಕೆಗಳು

೧೧. ಸಾಮಾಜಿಕ ನಂಬಿಕೆಗಳು

೧೨. ಅತಿಮಾನುಷ ನಂಬಿಕೆಗಳು

೧೩. ಮಾನುಷ ನಂಬಿಕೆಗಳು

೧೪. ಅಂಗಾಂಗಗಳಿಗೆ ಸಂಬಂಧಿಸಿದ ನಂಬಿಕೆಗಳು

೧೫. ಜನಪದ ವೈದ್ಯ ಮತ್ತು ನಂಬಿಕೆ

೧೬. ಆಭರಣ ಮತ್ತು ನಂಬಿಕೆ

೧೭. ಪ್ರಕೃತಿ ಮತ್ತು ನಂಬಿಕೆ

೧೮. ಪ್ರಾಣಿ ಪಕ್ಷಿ ಸಂಬಂಧ ನಂಬಿಕೆಗಳು

೧೯. ಕೌಟುಂಬಿಕ ಮತ್ತು ನೀತಿಪ್ರಧಾನ ನಂಬಿಕೆಗಳು

೨೦. ಕೃಷಿ ನಂಬಿಕೆಗಳು.

ಕೆರೆ-ಕುಂಟೆ, ಬಾವಿಗಳಿಗೆ ಸಂಬಂದಿಸಿದ ಐತಿಹ್ಯಗಳು
ಕೆರೆಗೆ ಹಾರ.

೧. ಹೆಣ್ಣೊಬ್ಬಳ ತ್ಯಾಗ-ಬಲಿದಾನ

೨. ಹಿರಿಯರ ಸಮಾಜ ಕಲ್ಯಾಣ ಕೆಲಸಕ್ಕೆ ಒತ್ತಾಸೆಯಾದ ಸೊಸೆ

೩. ಊರ ಹಿತಕ್ಕಾಗಿ ಅರ್ಪಿತಗೊಂಡ ಪತ್ನಿಗಾಗಿ, ಪ್ರಾಣಾರ್ಪಣೆಗೈದ ಪತ್ನಿಯ ತ್ಯಾಗದ ಹಿರಿಮೆ

ಗ್ರಾಮ ದೇವತೆಗಳಿಗೆ ಸಂಬಂಧಿಸಿದ ಐತಿಹ್ಯಗಳು

೧. ಗ್ರಾಮ ದೇವತೆಯ ಆಚರಣೆ ಮತ್ತು ಆರಾಧನೆಗಳು

೨. ಸಾಮಾಜಿಕ ಆಚರಣೆಗಳು-ಆರತಿ, ಕೊಂಡ-ಬಂಡಿ, ಮಡೆ ತೇರು, ಜಾತ್ರೆ, ಉತ್ಸವ ಇತ್ಯಾದಿ

೩. ವೈಯಕ್ತಿಕ ಆಚರಣೆಗಳು

೪. ಹಾಡುಕತೆಗಳು

೫. ಬೆಂಗಳೂರಿನ ಅಣ್ಣಮ್ಮದೇವಿಯು ನೆಲೆಗೊಂಡ ಐತಿಹ್ಯ

೬. ಕೆಂಪೇಗೌಡ ನಗರದ ಕೆಂಪಮ್ಮದೇವಿ ನೆಲೆಗೊಂಡ ಐತಿಹ್ಯ

೭. ಮಾಸ್ತಿ ಸಂಬಂಧದ ಐತಿಹ್ಯ

೮. ದುರಗಾ ಮುರಗಿ

೯. ಶಂಕರವಾಡಿ ಗ್ರಾಮದ ದ್ಯಾವಮ್ಮನ ಐತಿಹ್ಯ

೧೦. ನಾಗಾಯಿ ಮತ್ತು ಬಳ್ಳಡಗಿ ಎಲ್ಲಮ್ಮನ ನೆಲೆಗೊಂಡಿರುವ ಐತಿಹ್ಯ

೧೧. ಚುಂಚುರ ಮಾಮುರತಾಯಿಯ ಐತಿಹ್ಯ

೧೨. ಆಲೂರಿನ ಕೋಟೆ ದುರಗಮ್ಮ

೧೩. ಹಟಗಾರರ ದೇವತೆ ಚೌಡಮ್ಮ

೧೪. ಶಿರಸಿಯ ಮಾರಿಕಾಂಬ (ಮರ್ಕಿ ದುರ್ಗಿ)

೧೫. ಬಂದರವಾಡದ ಗ್ರಾಮದೇವತೆ ಲಲಿತಾದೇವಿ

೧೬. ಆನೂರಿನ ಗ್ರಾಮದೇವತೆ ಚಂದ್ರಮ್ಮತಾಯಿ

೧೭. ಹಲಚರಾ ಊರಿನ ಒಬ್ಬ ವ್ಯಕ್ತಿ ಕೆಶ್ವಾರದಿಂದ ಫಲಿ ತಂದಿರುವದರ ಐತಿಹ್ಯ

ವ್ಯಕ್ತಿ ಪ್ರಧಾನ ಐತಿಹ್ಯಗಳು

೧. ಖಾಜಾ ಬಂದೇನವಾಜರು ಚಿಲುಮೆ ಸೇದಿದ ಐತಿಹ್ಯ

೨. ಜೇಡರ ದಾಸಿಮ್ಮಯ್ಯನ ಕುರಿತ ಐತಿಹ್ಯ

೩. ಶ್ರೀ ಮದಪ್ಪ ಪೂಜಾರಿ

೪. ಕರ್ಜಗಿಯ ಖಾಜಾ ಸೈಫುಲ ಮುಲ್ಕ ಸಂತರು

೫. ಯಲ್ಲಾಲಿಂಗ ಮಹಾರಾಜರ ಮಠ ಕರ್ಜಗಿ

ಘಟನಾ ಸಂಬಂಧಿ ಐತಿಹ್ಯಗಳು

೧. ಸುಲೇಪೇಟದ ವೀರಭದ್ರನ ಸ್ಥಾಪನೆ ಬಗ್ಗೆ ಇರುವ ಐತಿಹ್ಯ

೨. ಸುಗೂರಿನ ಭತ್ತದ ಐತಿಹ್ಯ

೩. ಕೂಡ್ಲಿಯ ಹನುಮಂತ ನೆಲೆನಿಂತ ಐತಿಹ್ಯ

೪. ಜೋಳದ ಖಣವು ಶಾಪದಿಂದ ಕಲ್ಲಾಗಿದ್ದು

ದೈವ ಸಂಬಂಧಿ ಐತಿಹ್ಯಗಳು

೧. ಡೋಳ್ಳಿನ ಕುರಿತು ಐತಿಹ್ಯ

೨. ಕಂಬಳಿ ಕುರಿತು ಐತಿಹ್ಯ

೩. ಗಣೇಶನ ಜನನದ ಕುರಿತ ಐತಿಹ್ಯ

೪. ದತ್ತಾತ್ರೇಯನಾಗಿ ರೂಪಗೊಂಡಿರುವ ಐತಿಹ್ಯ

ಕುಲಮೂಲ ಸಂಬಂಧಿ ಐತಿಹ್ಯಗಳು

೧. ಹಾಲುಮತದ ಮೂಲ ಕುರಿತು ಐತಿಹ್ಯ

೨. ಲಂಬಾಣಿ ಜನಾಂಗದ ಕುಲಮೂಲ ಐತಿಹ್ಯ

೩. ಡೊಂಬರ ಮೂಲ ಕುರಿತು ಐತಿಹ್ಯ

೪. ಒಡ್ಡರ ಮೂಲ ಕುರಿತು ಐತಿಹ್ಯ

೫. ಡಕ್ಕಲಿಗರ ಮೂಲವನ್ನು ಕುರಿತ ಐತಿಹ್ಯ

೬. ಹೊಲೆಯವರ ಮೂಲ ಕುರಿತ ಐತಿಹ್ಯ

೭. ಮಾದಿಗರ ಮೂಲ ಕುರಿತ ಐತಿಹ್ಯ

೮. ಹೆಳವರ ಕುರಿತ ಐತಿಹ್ಯ

೯. ಕೊರವರ ಸಂಸ್ಕೃತಿಯ-ಕೊರವಂಜಿ

೧೦. ಸುಡುಗಾಡು ಸಿದ್ಧರ ಮೂಲ ಕುರಿತ ಐತಿಹ್ಯ

ಪ್ರಾಕೃತಿಕ ನೆಲೆಗಟ್ಟಿನ ಐತಿಹ್ಯ

ನೆಲ-ಜಲ ಸಂಬಂಧಿ ಐತಿಹ್ಯ

೧. ಹೊನಗುಂಟ ಜಲಪಾತದ ಗವಿಸಿದ್ಧಲಿಂಗೇಶ್ವರರ ಐತಿಹ್ಯ

೨. ಕಾಗಿಣಾ ನದಿಯ ಉಗಮದ ಕುರಿತ ಐತಿಹ್ಯ

೩. ಭೀಮಾನದಿಗೆ ಸಂಬಂಧಿಸಿದ ಐತಿಹ್ಯ

೪. ಕೃಷ್ಣಾ ನದಿ

೫. ಅಮರ್ಜಾ ನದಿ

೬. ಮುಲ್ಲಾಮಾರಿ ನದಿ

೭. ಬೆಣ್ಣೆತೊರೆ ನದಿ

೮. ಗುಲಬರ್ಗಾ ಕೊಟೆಗೆ ಸಂಬಂದಿಸಿದ ಐತಿಹ್ಯ

೯. ಒಮ್ಮನತಾಯಿ ದೇವಸ್ಥಾನ

ಸಸ್ಯ ಸಂಬಂಧಿ ಐತಿಹ್ಯಗಳು

೧. ತುಳಸಿ ಸಸ್ಯ

೨. ತುಳಸೀ ನೃತ್ಯ

೩. ಈಚಲು ಮರದ ಐತಿಹ್ಯ

೪. ಔದಂಬರ ವೃಕ್ಷರದ ಕುರಿತು ಐತಿಹ್ಯ

ಪ್ರಾಣಿ ಸಂಬಂಧಿ ಐತಿಹ್ಯ

೧. ನಂದಿಗೆ(ಬಸವ) ಸಂಬಂಧಿಸಿದ ಐತಿಹ್ಯ

೨. ಜಿಂಕೆಗೆ ಸಂಬಂಧಿಸಿದ ಐತಿಹ್ಯ

೩. ಕುರಿಗಳ ಜನನದ ಕುರಿತು ಐತಿಹ್ಯ

೪. ವರಹಾ(ಹಂದಿ) ಕುರಿತ ಐತಿಹ್ಯ

ಗುಡ್ಡ-ಬೆಟ್ಟ ಸಂಬಂಧಿ ಐತಿಹ್ಯ

೧. ಬಸ್ಮದ ಗುಡ್ಡ


೨. ಬಂಕುರಿನ ಕಲ್ಲಿನಲ್ಲಿ ಉದ್ಭವಿಸಿದ ಗಣೇಶನ ಮೂರ್ತಿ

೩. ಸೂಗುರಿನ ಬೆಟ್ಟದಲ್ಲಿ ಬೆಳೆಯುವ ಭತ್ತ.

ಛಾಯಾಚಿತ್ರಗಳು



ಚಿತ್ತಾಪುರದ ನಾಗಾವಿ ದೇವಾಲಯ



ಕೊಡ್ಲಿಯ ಹನುಮಂತನ ಮೂರ್ತಿ



ಕೊರವಂಜಿ ಮೂರ್ತಿ



ಕೊರವಂಜಿ ಬಾವಿಯಲ್ಲಿ ತೆಲುತ್ತಿರುವ ಮಣ್ಣಿನ ಗಡಿಗಿ



ಚಿತ್ತಾಪುರದ ಚಿತ್ತಾವಲಿ ಶಾಹ ದರ್ಗಾ



ಚಿತ್ತಾಪುರದ ಚಿತ್ತಾವಲಿ ಶಾಹ ಅವರ ಮಜರ



ಹಲಕರ್ಟಿ ವೀರಭದ್ರೇಶ್ವರ ದೇವಸ್ಥಾನ



ಹಲಕರ್ಟಿ ವೀರಭದ್ರೇಶ್ವರ ದೇವಸ್ಥಾನದ
ಎದುರುಗಡೆಯ ನಂದಾಸ್ಥಂಬ



ಹಲಕರ್ಟಿ ವೀರಭದ್ರ ದೇವಾಲಯದ ಗೋಡೆಯ
ಮೇಲೆ ಇರುವ ಉಬ್ಬುಶಿಲೆಗಳು



ಚಂದ್ರಲಾಂಬ ದೇವಿಯ ದೇವಾಲಯದ ಎದುರುಗಡೆಯ
ವೀರಗಲ್ಲು



ಸನ್ನತಿಯ ಚಂದ್ರಲಾಂಬ ದೇವಿಯ ಪಾದುಕೆಗಳು




ಸನ್ನತಿಯ ಚಂದ್ರಲಾಂಬ ದೇವಿ



ಮಣ್ಣೂರಿನಲ್ಲಿರುವ ವಿಶೀಷ್ಟವಾದ ದೀಪಸ್ಥಂಬ



ಚಿಂಚೋಳಿಯಲ್ಲಿರುವ ಪಂಚಲಿಂಗ ನೀರಿನ ಬೂಗ್ಗೆ



ನಾಗಾವಿ ಎಲ್ಲಮ್ಮನ ಬಗ್ಗೆ ಸಂಯುಕ್ತ ಕರ್ನಾಟಕದಲ್ಲಿ ವರದಿಯಾಗಿರುವ ಮಾಹಿತಿ



ಸೂಲೆಪೆಟ ವೀರಭದ್ರೇಶ್ವರನ ಬಗ್ಗೆ ದಿನಪತ್ರಿಕೆಯಲ್ಲಿ ವರದಿಯಾಗಿರುವ ಮಾಹಿತಿ



ಸುಗೂರಿನಲ್ಲಿರುವ ತಿರುಮಲನ ಬಗ್ಗೆ ದಿನಪತ್ರಿಕೆಯಲ್ಲಿ
ಬಂದಿರುವ ಮಾಹಿತಿ



ಹಲಕರ್ಟಿಯ ಮೈಲಾರ ಪರಂಪರೆಯ ಬಗ್ಗೆ ದಿನಪತ್ರಿಕೆಯಲ್ಲಿ
ವರದಿಯಾಗಿರುವ ಮಾಹಿತಿ